ನೂತನ NEP / ರಾಷ್ಟ್ರೀಯ ಶಿಕ್ಷಣ ನೀತಿ ಪಠ್ಯಕ್ರಮದಂತೆ


ಅಂತರರಾಷ್ಟ್ರೀಯ ಅರ್ಥಶಾಸ್ತ್ರ

(International Economics)

DSC - ECO - C13

ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ 6ನೇ ಸೆಮಿಸ್ಟರ್ ಬಿ.ಎ. ತರಗತಿಗಳಿಗಾಗಿ

ಡಾ. ಎಚ್.ಆರ್. ಕೃಷ್ಣಯ್ಯಗೌಡ



Syllabus
Semester VI

Module I : International Trade Theories **15**

Meaning and Importance of International trade; Differences between Internal and International Trade; Trade Theories: Mercantilist view; Absolute cost and comparative cost advantage theories; Haberler's Opportunity cost theory; Hecksher-Ohlin theory; Leontief's paradox

Practicum : Assignment on Ricardo's Comparative cost advantage and Leontief's paradox

Module II : Terms of Trade and Commercial Policy **17**

Terms of trade- Concept and Types, Factors determining Terms of Trade; Commercial Policy: Free trade v/s Protection; Tariffs: Types and effects; Quotas; Anti-dumping; Economic Integration: Meaning and stages.

Practicum : Debate: Free trade v/s Protection.

Mini project: Trace the evolution of India towards Economic Integration

Module III : Balance of Payment and Capital Flow **13**

Balance of Payment: Concept, Components; Disequilibrium in Balance of Payment: Causes and Measures to correct disequilibrium; Foreign Exchange rate: Meaning and types; determination of Foreign exchange rate: Demand for and Supply of Forex; Purchasing Power Parity (PPP) theory; Capital Flow: Meaning and concept of Foreign Investment; Forms of FDI; Advantages and disadvantages of FDI.

Practicum : Prepare India's Balance of Payment statement using recent Economic Survey. Assignment on Forms of FDI

Module IV : International Finance and Trade Institutions **15**

Bretton Woods Institutions: IMF and IBRD -IDA and IFC: Organization, Objectives, Functions and their role in developing countries; Evolution of WTO: GATT – principles and objectives; WTO: Organization, Objectives, Functions, Agreements and current issues; WTO and developing countries.

Practicum: Group Discussion: Effectiveness of IMF and IBRD in developing countries

Seminar: Agreements of WTO or current issues of WTO

ಪರಿವಿಡಿ

ಅಧ್ಯಾಯ - 1 ಅಂತರರಾಷ್ಟ್ರೀಯ ವ್ಯಾಪಾರ ಸಿದ್ಧಾಂತಗಳು 1-61
(International Trade Theories)

A. ಅಂತರರಾಷ್ಟ್ರೀಯ ವ್ಯಾಪಾರದ ಅರ್ಥ ಮತ್ತು ವ್ಯಾಪ್ತಿಯ
B. ಆಂತರಿಕ ವ್ಯಾಪಾರ ಮತ್ತು ಅಂತರರಾಷ್ಟ್ರೀಯ ವ್ಯಾಪಾರದ ನಡುವಿನ ವ್ಯತ್ಯಾಸಗಳು
ಅಥವಾ
ಅಂತರರಾಷ್ಟ್ರೀಯ ವ್ಯಾಪಾರವನ್ನು ಆಂತರಿಕ ವ್ಯಾಪಾರದಿಂದ ಪ್ರತ್ಯೇಕಿಸುವ ಅಂಶಗಳು
C. ವ್ಯಾಪಾರ ಸಿದ್ಧಾಂತಗಳು : ಮಾರ್ಕ್ಸ್ ಪೂರ್ವದವರ ಭಾವನೆಗಳು
D. ನಿರಪೇಕ್ಷ (ಸಂಪೂರ್ಣ) ವೆಚ್ಚ ಅನುಕೂಲತೆಯ ಸಿದ್ಧಾಂತ
E. ಸಾಪೇಕ್ಷ ವೆಚ್ಚ ಅನುಕೂಲತೆ ಸಿದ್ಧಾಂತ
F. ಹ್ಯಾಬೆರ್ಲರ ಅವಕಾಶ ವೆಚ್ಚ ಸಿದ್ಧಾಂತ
G. ಹೆಕ್ಷರ್-ಓಹ್ಲಿನ್‌ರವರ ಉತ್ಪಾದನಾಂಗ ಸಮೃದ್ಧಿ (ಸಂಪನ್ಮತೆ) ಸಿದ್ಧಾಂತ
H. ಲಿಯಾಂಟೀಫ್‌ನ ವಿರೋಧಾಭಾಸ

ಅಧ್ಯಾಯ - 2 ವ್ಯಾಪಾರದ ಪರತ್ವುಗಳು (ಕರಾರುಗಳು) 62-121
ಮತ್ತು ವಾಣಿಜ್ಯ ನೀತಿ
(Terms of Trade and Commercial Policy)

A. ವ್ಯಾಪಾರದ ಪರತ್ವುಗಳು : ಪರಿಕಲ್ಪನೆ ಮತ್ತು ವಿಧಗಳು
B. ವ್ಯಾಪಾರದ ಕರಾರುಗಳನ್ನು ನಿರ್ಧರಿಸುವ ಸಂಗತಿಗಳು
C. ವಾಣಿಜ್ಯ ನೀತಿ : ಮುಕ್ತ ವ್ಯಾಪಾರ ಮತ್ತು ರಕ್ಷಣಾ ನೀತಿ
D. ಸುಂಕಗಳು : ವಿಧಗಳು ಮತ್ತು ಪರಿಣಾಮಗಳು
E. ವೇಯುಮಂಜಗಳು
F. ಸುರಿ ಮಾರಾಟ
G. ಆರ್ಥಿಕ ಸಂಯೋಜನೆ : ಅರ್ಥ ಮತ್ತು ಹಂತಗಳು

ಅಧ್ಯಾಯ - 3 ಪಾವತಿ ಶೇಷ (ಸಂದಾಯ ಶೇಷ)
ಮತ್ತು ಬಂಡವಾಳ ಪ್ರವಹನ 122-186
(Balance of Payments and Capital Flow)

A. ಪಾವತಿ ಶೇಷ : ಪರಿಕಲ್ಪನೆ ಮತ್ತು ಸಂಯೋಜನಾಂಶಗಳು
B. ಪಾವತಿ ಶೇಷದಲ್ಲಿ ಅಸಮತೋಲನ

C. ವಿದೇಶಿ ವಿನಿಮಯ ದರ : ಅರ್ಥ ಮತ್ತು ವಿಧಗಳು
D. ವಿನಿಮಯ ದರದ ನಿರ್ಧಾರ
E. ಕೊಳ್ಳುವ ಶಕ್ತಿಯ ಸಂಸಮಾನತೆಯ ಸಿದ್ಧಾಂತ
F. ಬಂಡವಾಳ ಪ್ರವಹನ : ವಿದೇಶಿ ಹೂಡಿಕೆಯ ಅರ್ಥ ಮತ್ತು ಪರಿಕಲ್ಪನೆ
G. ವಿದೇಶಿ ಹೂಡಿಕೆಯ ರೂಪಗಳು
H. ವಿದೇಶಿ ನೇರ ಹೂಡಿಕೆಯ ಅನುಕೂಲತೆಗಳು ಮತ್ತು ಅನಾನುಕೂಲತೆಗಳು

ಅಧ್ಯಾಯ - 4 ಅಂತರರಾಷ್ಟ್ರೀಯ ಹಣಕಾಸು ಮತ್ತು ವ್ಯಾಪಾರ ಸಂಸ್ಥೆಗಳು 187-252
(International Finance and Trade Institutions)

A. ಅಂತರರಾಷ್ಟ್ರೀಯ ಹಣ ನಿಧಿ
B. ವಿಶ್ವ ಬ್ಯಾಂಕ್ ಅಥವಾ ಪುನರ್‌ನಿರ್ಮಾಣ ಮತ್ತು ಅಭಿವೃದ್ಧಿಯ ಅಂತರರಾಷ್ಟ್ರೀಯ ಬ್ಯಾಂಕ್
C. ಅಂತರರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ (ಕೂಟ)
D. ಅಂತರರಾಷ್ಟ್ರೀಯ ಹಣಕಾಸು ನಿಗಮ
E. ಸುಂಕಗಳ ಮತ್ತು ವ್ಯಾಪಾರದ ಮೇಲಿನ ಸಾಮಾನ್ಯ ಒಪ್ಪಂದ
F. ವಿಶ್ವ ವ್ಯಾಪಾರ ಸಂಸ್ಥೆಯ
G. ವಿಶ್ವವ್ಯಾಪಾರ ಸಂಸ್ಥೆಯ ಮತ್ತು ಅಭಿವೃದ್ಧಿಶೀಲ ದೇಶಗಳು

ಅಧ್ಯಾಯ - I

ಅಂತರರಾಷ್ಟ್ರೀಯ ವ್ಯಾಪಾರ ಸಿದ್ಧಾಂತಗಳು
(International Trade Theories)

ಚರ್ಚಿಸಲಾಗಿರುವ ವಿಷಯಗಳು

A. ಅಂತರರಾಷ್ಟ್ರೀಯ ವ್ಯಾಪಾರದ ಅರ್ಥ ಮತ್ತು ಪ್ರಾಮುಖ್ಯ
B. ಅಂತರಿಕ ವ್ಯಾಪಾರ ಮತ್ತು ಅಂತರರಾಷ್ಟ್ರೀಯ ವ್ಯಾಪಾರದ ನಡುವಿನ ವ್ಯತ್ಯಾಸಗಳು
C. ವ್ಯಾಪಾರ ಸಿದ್ಧಾಂತಗಳು : ಪೂರ್ವ ಪಂಥದವರ ಭಾವನೆಗಳು
D. ನಿರಪೇಕ್ಷ (ಸಂಪೂರ್ಣ) ವೆಚ್ಚ ಅನುಕೂಲತೆಯ ಸಿದ್ಧಾಂತ
E. ಸಾಪೇಕ್ಷ ವೆಚ್ಚ ಅನುಕೂಲತೆ ಸಿದ್ಧಾಂತ
F. ಹ್ಯಾಬೆರ್ಲರನ ಅವಕಾಶ ವೆಚ್ಚ ಸಿದ್ಧಾಂತ
G. ಹೆಕ್ಷರ್-ಒಹ್ಲಿನ್‌ರವರ ಉತ್ಪಾದನಾಂಗ ಸಮೃದ್ಧಿ (ಸಂಪನ್ನತೆ) ಸಿದ್ಧಾಂತ
H. ಲಿಯಾಂಟೀಫ್‌ನ ವಿರೋಧಾಭಾಸ

A. ಅಂತರರಾಷ್ಟ್ರೀಯ ವ್ಯಾಪಾರದ ಅರ್ಥ ಮತ್ತು ಪ್ರಾಮುಖ್ಯ
(Meaning and Importance of International Trade)

ಅರ್ಥ

ಎರಡು ಅಥವಾ ಎರಡಕ್ಕಿಂತ ಹೆಚ್ಚಿನ ದೇಶಗಳ ನಡುವೆ ನಡೆಯುವ ವ್ಯಾಪಾರಕ್ಕೆ ಅಂತರರಾಷ್ಟ್ರೀಯ ವ್ಯಾಪಾರ ಎಂದು ಹೆಸರು. ಅದ್ದರಿಂದ ದೇಶ-ವಿದೇಶಗಳ ನಡುವೆ ನಡೆಯುವ ಸರಕುಗಳ ಮತ್ತು ಸೇವೆಗಳ ವಿನಿಮಯವೇ ಅಂತರರಾಷ್ಟ್ರೀಯ ವ್ಯಾಪಾರ ವಾಗಿರುತ್ತದೆ. ಪ್ರತಿಯೊಂದು ದೇಶವೂ ತಾನು ಕಡಿಮೆ ಬೆಲೆಯಲ್ಲಿ ಹೆಚ್ಚುವರಿಯಾಗಿ ಉತ್ಪಾದಿಸಿದ ಸರಕುಗಳನ್ನು ಮತ್ತು ಸೇವೆಗಳನ್ನು ಇತರ ದೇಶಗಳಲ್ಲಿ ಕಡಿಮೆ ಬೆಲೆಯಲ್ಲಿ ಮತ್ತು ಹೆಚ್ಚುವರಿಯಾಗಿ ಉತ್ಪಾದಿಸಿದ ಸರಕುಗಳು ಮತ್ತು ಸೇವೆಗಳೊಡನೆ ವಿನಿಮಯ ಮಾಡಿಕೊಳ್ಳುವ ಪ್ರಕ್ರಿಯೆಯೇ ಅಂತರರಾಷ್ಟ್ರೀಯ ವ್ಯಾಪಾರ ಎಂದು ಸ್ಥೂಲವಾಗಿ ಹೇಳಬಹುದು.

ಅಂತರರಾಷ್ಟ್ರೀಯ ವ್ಯಾಪಾರವು ಅಂತರರಾಷ್ಟ್ರೀಯ ಸಹಬಾಳ್ವೆಯ ಪ್ರತೀಕ ಮತ್ತು ಉಜ್ವಲ ನಿದರ್ಶನವಾಗಿದೆ. ಯಾವುದೇ ದೇಶವು ತನಗೆ ಬೇಕಾಗುವಂತಹ ಎಲ್ಲಾ ವಸ್ತು ಗಳನ್ನು ಉತ್ಪಾದಿಸುವ ಕಾರ್ಯ ಕಷ್ಟದಾಯಕವಾಗಿರುತ್ತದೆ. ಅಂತೆಯೇ ಉತ್ಪಾದಿಸ ಬಲ್ಲಂತಹ ಕೆಲವು ಸರಕುಗಳನ್ನು ತನ್ನ ಕೋರಿಕೆಗೆ ತಕ್ಕಂತೆ ಪೂರ್ಣಪ್ರಮಾಣದಲ್ಲಿ

ಉತ್ಪಾದಿಸುವುದು ಅಷ್ಟೇ ಅಸಾಧ್ಯವಾದುದು. ಸೂಕ್ತ ಸಂಪನ್ಮೂಲಗಳ ಕೊರತೆ, ತಂತ್ರಜ್ಞಾನದ ಅಭಾವ ಮೊದಲಾದವು ಇದಕ್ಕೆ ಮೂಲ ಕಾರಣಗಳಾಗಿರುತ್ತವೆ. ಆದ್ದರಿಂದ ಕೊರತೆಯ ಸರಕುಗಳನ್ನು ಹಾಗೂ ಉತ್ಪಾದಿಸಲು ಸಾಧ್ಯವೇ ಇರದ ಸರಕುಗಳನ್ನು ಬೇರೆ ದೇಶಗಳಿಂದ ಪಡೆದುಕೊಳ್ಳಬೇಕಾಗಿರುತ್ತದೆ. ಅಂತೆಯೇ ಹೆಚ್ಚುವರಿಯಾಗಿ ಉತ್ಪಾದಿಸಿದ ವಸ್ತುಗಳನ್ನು ಇತರ ದೇಶಗಳಿಗೆ ಕಳುಹಿಸುವ ಮೂಲಕ ಅಂತರರಾಷ್ಟ್ರೀಯ ಮಾರುಕಟ್ಟೆಯನ್ನು ಕಂಡುಕೊಳ್ಳುವ ಆವಶ್ಯಕತೆ ಇರುತ್ತದೆ.

ಆಮದು (ಆಯಾತ) ಮತ್ತು ರಫ್ತು (ನಿರ್ಯಾತ) ಇವೆರಡು ಅಂತರರಾಷ್ಟ್ರೀಯ ವ್ಯಾಪಾರದ ಸಂಯೋಜನಾಂಶಗಳಾಗಿವೆ. ಸಾಮಾನ್ಯ ಅರ್ಥದಲ್ಲಿ ವ್ಯಾಪಾರದಲ್ಲಿ ಹೇಗೆ ವಸ್ತುಗಳನ್ನು ಮಾರುವುದು ಮತ್ತು ವಿರೀದಿಸುವುದು ಇರುತ್ತದೆಯೋ ಹಾಗೆಯೇ ಅಂತರರಾಷ್ಟ್ರೀಯ ವ್ಯಾಪಾರದಲ್ಲಿಯೂ ಸಹ ಒಂದು ದೇಶವು ಇನ್ನೊಂದು ದೇಶದಿಂದ ವಸ್ತುಗಳನ್ನು ವಿರೀದಿಸುವುದನ್ನು ಆಮದು ಅಥವಾ ಆಯಾತ (Import) ಎಂದು ಕರೆಯಲಾಗುತ್ತದೆ. ಅಂದರೆ ಆಮದು ಮಾಡಿಕೊಂಡಾಗ ವಸ್ತುಗಳು ಬೇರೆ ದೇಶಗಳಿಂದ ಸ್ವದೇಶಕ್ಕೆ ಬರುತ್ತವೆ. ಬದಲಾಗಿ, ಒಂದು ದೇಶವು ಇತರ ದೇಶಗಳಿಗೆ ವಸ್ತುಗಳನ್ನು ಮಾರುವುದಕ್ಕೆ ರಫ್ತು ಅಥವಾ ನಿರ್ಯಾತ (Export) ಎಂದು ಹೆಸರು. ರಫ್ತು ಮಾಡಿದಾಗ ಸರಕುಗಳು ಸ್ವದೇಶದಿಂದ ಬೇರೆ ದೇಶಗಳಿಗೆ ಚಲಿಸುತ್ತವೆ.

ಆರ್. ಎಫ್. ಹ್ಯಾರಾಡ್‌ನ ಅಭಿಪ್ರಾಯದಲ್ಲಿ ಅಂತರರಾಷ್ಟ್ರೀಯ ವ್ಯಾಪಾರವು ಸಾಮ್ಯವಿಲ್ಲದ ಉತ್ಪಾದನ ಸೌಲಭ್ಯಗಳನ್ನು ಅನುಭವಿಸುತ್ತಿರುವ ಜನರ ನಡುವೆ ಏರ್ಪಡುವ ವ್ಯಾಪಾರವಾಗಿರುತ್ತದೆ. ವಿವಿಧ ದೇಶಗಳು ವಿಭಿನ್ನ ಸರ್ಕಾರಗಳ ಆಡಳಿತಕ್ಕೆ ಒಳಪಟ್ಟಿರುತ್ತವೆ. ಈ ಸರ್ಕಾರಗಳ ಲಕ್ಷಣಗಳಲ್ಲಿ ಮತ್ತು ದಕ್ಷತೆಯಲ್ಲಿ ಅಗಾಧ ವ್ಯತ್ಯಾಸವಿರುತ್ತದೆ. ಒಂದೇ ದೇಶದಲ್ಲಿಯಾದರೆ ನಾಗರಿಕರು ಒಂದೇ ತೆರನಾದ ಕಾನೂನು ಮತ್ತು ನಿಯಮಗಳಿಗೆ ಒಳಪಟ್ಟಿರುತ್ತಾರೆ. ಆ ದೇಶದ ಜನರು ಒಂದೇ ದರದ ರಾಷ್ಟ್ರೀಯ ಮತ್ತು ಸ್ಥಳೀಯ ತೆರಿಗೆ, ಆರೋಗ್ಯ, ಶಿಕ್ಷಣ, ಸಾಮಾಜಿಕ ವಿಮೆ, ಕಾರ್ಖಾನೆ ವ್ಯವಸ್ಥೆ ಮುಂತಾದವುಗಳಲ್ಲಿ ಒಂದೇ ರೀತಿಯ ನಿಬಂಧನೆಗಳಿಗೆ ಅಧೀನರಾಗಿರುತ್ತಾರೆ. ಆದರೆ ಈ ನಿಬಂಧನೆಗಳು ದೇಶದಿಂದ ದೇಶಕ್ಕೆ ಭಿನ್ನವಾಗಿರುವುದರಿಂದ ಉತ್ಪಾದನೆಯ ಅನುಕೂಲತೆಗಳು ವಿಭಿನ್ನ ದೇಶಗಳಲ್ಲಿ ಬೇರೆಬೇರೆಯಾಗಿರುವುದು ಸ್ವಾಭಾವಿಕ. ಆ ಪ್ರಕಾರ, ಅಂತರರಾಷ್ಟ್ರೀಯ ವ್ಯಾಪಾರವು ವಿಭಿನ್ನವಾದ ಸೌಲಭ್ಯಗಳನ್ನು ಅನುಭವಿಸುತ್ತಿರುವ ಉತ್ಪಾದಕರ ನಡುವೆ ನೆರವೇರುವ ಸರಕುಗಳ ವಿನಿಮಯ ಎಂದು ಪರಿಗಣಿಸಬಹುದು.

ಆಧುನಿಕ ಆರ್ಥಿಕ ಯುಗದಲ್ಲಿ ಅಂತರರಾಷ್ಟ್ರೀಯ ವ್ಯಾಪಾರವು ವಿಶಿಷ್ಟವಾದ ಸ್ಥಾನವನ್ನು ಪಡೆದಿದೆ. ಯಾವುದೊಂದು ದೇಶವು ತನಗೆ ಅಗತ್ಯವಿರುವ ಎಲ್ಲಾ ವಸ್ತುಗಳನ್ನು ಪೂರ್ಣಪ್ರಮಾಣದಲ್ಲಿ ಉತ್ಪಾದಿಸಲು ಸಾಧ್ಯವಾಗಲಾರದು. ಸೂಕ್ತ ಸಂಪನ್ಮೂಲಗಳ ಅಭಾವ, ಬಂಡವಾಳದ ಕೊರತೆ, ಪರಿಣತ ಶ್ರಮಬಲ ಇಲ್ಲದಿರುವಿಕೆ ಮೊದಲಾದವು

ಇದಕ್ಕೆ ಕಾರಣವಿರಬಹುದು. ಆದ್ದರಿಂದ ಅಂತರರಾಷ್ಟ್ರೀಯ ವ್ಯಾಪಾರದ ಆವಶ್ಯಕತೆಯನ್ನು ಬಹಳ ಹಿಂದೆಯೇ ಮನಗಾಣಲಾಯಿತು.

ಅಂತರರಾಷ್ಟ್ರೀಯ ವ್ಯಾಪಾರವು ಮಾನವ ಇತಿಹಾಸದಷ್ಟೇ ಪುರಾತನವಾದುದು ಎಂದರೆ ಉತ್ಪ್ರೇಕ್ಷೆಯಾಗಲಾರದು. ಅದು ಮಾನವ ಜೀವನದಲ್ಲಿ ವರ್ಣಿಸಲಸಾಧ್ಯವಾದ ಪ್ರಾಮುಖ್ಯವನ್ನು ಪಡೆದಿದೆ. ಅಲ್ಲದೇ ಅದರ ಮಹತ್ವವು ದಿನೇದಿನೇ ಹೆಚ್ಚುತ್ತಿದೆ. ಭೌಗೋಳಿಕ ಶ್ರಮವಿಭಜನೆಯ ಫಲವಾಗಿ ಸಮಗ್ರ ಜಾಗತಿಕ ಉತ್ಪಾದನೆಯು ಅಧಿಕಗೊಳ್ಳುವಂತಹ ಆರ್ಥಿಕ ಅನುಕೂಲತೆಯೇ ಅಂತರರಾಷ್ಟ್ರೀಯ ವ್ಯಾಪಾರದ ಉಗಮ ಮತ್ತು ಮುಂದುವರಿಕೆಗೆ ಪ್ರಧಾನ ಕಾರಣವೆನಿಸಿದೆ. ಯಾವುದೊಂದು ದೇಶವು ತನ್ನಲ್ಲಿ ಕೊರತೆಯಿಂದಿರುವ ಅಥವಾ ಲಭ್ಯವಿಲ್ಲದಿರುವ ಸರಕುಗಳನ್ನು ಇತರ ದೇಶಗಳಿಂದ ಆಮದು ಮಾಡಿಕೊಳ್ಳುವ ವಿಧಾನ ಸಹಸ್ರಾರು ವರ್ಷಗಳಿಂದ ನಡೆದುಬಂದಿದೆ. "ವಿವಿಧ ಪ್ರದೇಶಗಳ ನಡುವೆ ಹವಾಗುಣ ಮತ್ತು ಮಣ್ಣಿನಲ್ಲಿರುವ ವ್ಯತ್ಯಾಸಗಳು, ಕೆಲವೇ ಪ್ರದೇಶಗಳಲ್ಲಿ ಖನಿಜ ನಿಕ್ಷೇಪಗಳು ಕೇಂದ್ರೀಕರಣಗೊಂಡಿರುವಿಕೆ, ವಿವಿಧ ಭೂ ಪ್ರದೇಶಗಳ ನಡುವೆ ಭಿನ್ನವಾಗಿರುವ ಜನಸಾಂದ್ರತೆ, ಅಭಿವೃದ್ಧಿಯ ವಿಧಾನ ಮತ್ತು ಸುಧಾರಿಸಿದ ಉತ್ಪಾದನಾ ತಂತ್ರಗಳಲ್ಲಿ ಭೌಗೋಳಿಕ ಸಾಮ್ಯ ಇಲ್ಲದಿರುವಿಕೆ ಮೊದಲಾದ ಸಂಗತಿಗಳು ಅಂತರ ರಾಷ್ಟ್ರೀಯ ವ್ಯಾಪಾರದ ಗಣನೀಯ ಹೆಚ್ಚಳಕ್ಕೆ ಕೊಡುಗೆ ನೀಡಿವೆ."

ಅಂತರರಾಷ್ಟ್ರೀಯ ವ್ಯಾಪಾರದ ಪ್ರಾಮುಖ್ಯ (ಪ್ರಯೋಜನಗಳು)
[Importance (Advantages) of International Trade]

ಅಂತರರಾಷ್ಟ್ರೀಯ ವ್ಯಾಪಾರವು ವ್ಯಾಪಾರನಿರತ ದೇಶಗಳಿಗೆ ಸಹಸ್ರಾರು ಅನುಕೂಲತೆಗಳನ್ನು ದೊರಕಿಸಿಕೊಡುತ್ತದೆ. ಶ್ರಮವಿಭಜನೆಯ ಪ್ರಯೋಗದ ಮೂಲಕ ಪ್ರತಿಯೊಂದು ದೇಶವೂ ತನ್ನ ಸಂಪತ್ತು ಮತ್ತು ರಾಷ್ಟ್ರೀಯ ಕ್ಷೇಮಾಭ್ಯುದಯವನ್ನು ಉನ್ನತೀಕರಿಸಿಕೊಳ್ಳಲು ಅಂತರರಾಷ್ಟ್ರೀಯ ವ್ಯಾಪಾರವು ಸಹಾಯ ಮಾಡುತ್ತದೆ. ಆಡ್ಯಂಸ್ಮಿತ್, ದೇವಿಡ್ ರಿಕಾರ್ಡೊ ಮೊದಲಾದ ಸಂಪ್ರದಾಯ ಪಂಥದ ಲೇಖಕರು ಸೇರಿದಂತೆ ಹಲವಾರು ಅರ್ಥಶಾಸ್ತ್ರಜ್ಞರು ಈ ಅಂಶವನ್ನು ಪ್ರಧಾನವಾಗಿ ನಿರೂಪಿಸಿದ್ದಾರೆ.

ಅಂತರರಾಷ್ಟ್ರೀಯ ವ್ಯಾಪಾರದಿಂದ ದೊರಕುವ ಪ್ರಯೋಜನಗಳನ್ನು ಕೆಳಗಿನಂತೆ ವಿವರಿಸಬಹುದು.

1. ಸರಕುಗಳ ಆಮದು (Import of Goods): ಯಾವುದೊಂದು ರಾಷ್ಟ್ರವು ತನ್ನಲ್ಲಿ ಲಭ್ಯವಿಲ್ಲದಿರುವ ಅಥವಾ ಕೊರತೆಯಿಂದಿರುವ ಸರಕುಗಳನ್ನು ಇತರ ದೇಶಗಳಿಂದ ತರಿಸಿಕೊಳ್ಳಲು ಅಂತರರಾಷ್ಟ್ರೀಯ ವ್ಯಾಪಾರವು ಆವಶ್ಯಕವಾಗಿರುತ್ತದೆ.

ಇಪ್ಪತ್ತನೆಯ ಶತಮಾನದ ಉತ್ತರಾರ್ಧದ ನಂತರವಂತೂ ಅಂತರರಾಷ್ಟ್ರೀಯ ವ್ಯಾಪಾರದ ಅಗತ್ಯ ತೀವ್ರವಾಗಿ ಬೆಳೆಯಿತು. ಜಗತ್ತಿನಲ್ಲಿ ಬಹುಸಂಖ್ಯೆಯ ಬಡದೇಶಗಳು

ಮತ್ತು ಅಭಿವೃದ್ಧಿಶೀಲ ದೇಶಗಳಿವೆ. ವಿಪರೀತವಾಗಿ ಬೆಳೆಯುತ್ತಿರುವ ಜನಸಂಖ್ಯೆಗೆ ಜೀವನಾವಶ್ಯಕ ಗಳನ್ನು ಒದಗಿಸಲು ಹಾಗೂ ಆರ್ಥಿಕಾಭಿವೃದ್ಧಿಯ ಕಾರ್ಯಕ್ರಮಗಳನ್ನು ಕೈಗೊಳ್ಳಲು ಅವು ಅಭಿವೃದ್ಧಿ ಹೊಂದಿದ ದೇಶಗಳಿಂದ ಹಲವು ರೀತಿಗಳ ಸರಕುಗಳನ್ನು ಆಮದು ಮಾಡಿ ಕೊಳ್ಳಬೇಕಾಗಿದೆ.

2. ವಿದೇಶಿ ಬಂಡವಾಳ ಪಡೆಯಲು ಅವಕಾಶ (Opportunity to Obtain Foreign Capital): ಅಂತರರಾಷ್ಟ್ರೀಯ ವ್ಯಾಪಾರವು ವಿದೇಶೀ ಬಂಡವಾಳ ಚಲನೆಗೆ ಸೂಕ್ತ ಅವಕಾಶವನ್ನು ಒದಗಿಸುತ್ತದೆ. ವಿಭಿನ್ನ ರಾಷ್ಟ್ರಗಳ ನಡುವೆ ವ್ಯಾಪಾರ ಸಂಬಂಧಗಳು ಏರ್ಪಟ್ಟಾಗ ಅವುಗಳ ನಡುವೆ ಇತರ ಸಂಬಂಧಗಳಿಗೂ ಮುಕ್ತ ಅವಕಾಶ ದೊರೆಯುತ್ತದೆ. ಬಂಡವಾಳ ಚಲನೆಯು ವ್ಯಾಪಾರ ಸಂಬಂಧಗಳ ಅವಿಭಾಜ್ಯ ಅಂಗವಾಗಿರುತ್ತದೆ. ಬಂಡವಾಳದ ಕೊರತೆಯನ್ನು ಅನುಭವಿಸುತ್ತಿರುವ ಅಲ್ಪಾಭಿವೃದ್ಧಿ ದೇಶಗಳು ಅಭಿವೃದ್ಧಿ ಹೊಂದಿದ ದೇಶಗಳಿಂದ ವಿದೇಶೀ ಬಂಡವಾಳವನ್ನು ಪಡೆದುಕೊಳ್ಳಲು ಅಂತರರಾಷ್ಟ್ರೀಯ ವ್ಯಾಪಾರ ಸಂಬಂಧವು ಸದವಕಾಶವನ್ನು ಒದಗಿಸುತ್ತದೆ. ವಿದೇಶೀ ವ್ಯಾಪಾರವೇ ಇಲ್ಲದಿರುವಾಗ ವಿದೇಶೀ ಬಂಡವಾಳವನ್ನು ಪಡೆದುಕೊಳ್ಳಲು ಸೂಕ್ತ ಮಾರ್ಗವೇ ಇರುವುದಿಲ್ಲ. ವಿದೇಶೀ ಬಂಡವಾಳ ಮತ್ತು ವಿದೇಶೀ ಹೂಡಿಕೆ ಆರ್ಥಿಕಾಭಿವೃದ್ಧಿಯಲ್ಲಿ ಮಹತ್ವಪೂರ್ಣವಾದ ಪಾತ್ರವನ್ನು ನಿರ್ವಹಿಸುತ್ತವೆ. ಇಂದು ಅಭಿವೃದ್ಧಿಯ ಉತ್ತುಂಗ ಶಿಖರದಲ್ಲಿರುವ ರಾಷ್ಟ್ರಗಳೆಲ್ಲವೂ ವಿದೇಶೀ ಬಂಡವಾಳದ ಬಳಕೆಯ ಮೂಲಕ ತಮ್ಮ ಆರ್ಥಿಕ ಪ್ರಗತಿಯನ್ನು ಸಾಧಿಸಿವೆ ಎಂಬುದು ಗಮನಾರ್ಹವಾದ ವಿಷಯ. ಆ ಪ್ರಕಾರ ಅಂತರರಾಷ್ಟ್ರೀಯ ವ್ಯಾಪಾರವು ರಾಷ್ಟ್ರಗಳ ನಡುವೆ ಬಂಡವಾಳದ ಚಲನೆಗೆ ಸೂಕ್ತ ವೇದಿಕೆಯನ್ನು ನಿರ್ಮಿಸುತ್ತದೆ. ಈ ಕಾರಣದಿಂದ ಅಲ್ಪಾಭಿವೃದ್ಧ ದೇಶಗಳು ಯಥೇಚ್ಛ ಬಂಡವಾಳವಿರುವ ಹಾಗೂ ಸಿರಿವಂತ ದೇಶಗಳಿಂದ ಬಂಡವಾಳವನ್ನು ಆಮದು ಮಾಡಿಕೊಳ್ಳಲು ಮತ್ತು ವಿದೇಶಿ ಹೂಡಿಕೆಯನ್ನು ಆಕರ್ಷಿಸಲು ಅವಕಾಶ ಲಭಿಸುತ್ತದೆ.

3. ಸಂಪನ್ಮೂಲಗಳ ಪರಿಣಾಮಕಾರಿ ಬಳಕೆ (Effective Utilisation of Resources): ಪ್ರತಿಯೊಂದು ದೇಶವೂ ತನ್ನಲ್ಲಿರುವ ಸಂಪನ್ಮೂಲಗಳನ್ನು ಅತ್ಯಂತ ಹಿತಕರವಾಗಿ ಮತ್ತು ಪರಿಣಾಮಕಾರಿಯಾಗಿ ಉತ್ಪಾದನೆಯಲ್ಲಿ ಬಳಸಿಕೊಳ್ಳಲು ಅಂತರರಾಷ್ಟ್ರೀಯ ವ್ಯಾಪಾರವು ಕೊಡುಗೆ ನೀಡುತ್ತದೆ. ಪ್ರತಿಯೊಂದು ರಾಷ್ಟ್ರವೂ ತಾನು ಕಡಿಮೆ ಬೆಲೆಯಲ್ಲಿ ಮತ್ತು ಉತ್ತಮ ರೀತಿಯಲ್ಲಿ ಉತ್ಪಾದಿಸಬಹುದಾದ ಸರಕುಗಳ ಉತ್ಪಾದನೆಯಲ್ಲಿ ಮಾತ್ರ ತನ್ನ ಪ್ರಯತ್ನಗಳನ್ನು ಕೇಂದ್ರೀಕರಿಸಿ ಅದಕ್ಕನುಗುಣವಾಗಿ ಸಂಪನ್ಮೂಲಗಳನ್ನು ಹಂಚಿಕೆ ಮಾಡುತ್ತದೆ. ತಾನು ಉತ್ಪಾದಿಸಲಾರದ ಸರಕುಗಳನ್ನು ಅಥವಾ ತನ್ನಲ್ಲಿ ಕೊರತೆಯಿಂದಿರುವ ಕಚ್ಚಾ ವಸ್ತುಗಳನ್ನು ಮತ್ತು ಸಂಪತ್ಸಾಧನಗಳನ್ನು ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳುತ್ತದೆ. ತಾನು ಉತ್ಪಾದಿಸಲು ಸಾಧ್ಯವಿರದ ಅಥವಾ ಕೊರತೆಯಿಂದಿರುವ ಸರಕುಗಳನ್ನು ಆಮದು ಮಾಡಿಕೊಳ್ಳಲು ಯಾವುದೊಂದು ದೇಶಕ್ಕೆ ವಿದೇಶೀ ವಿನಿಮಯವು

ಅಗತ್ಯವಾಗಿರುತ್ತದೆ. ಇತರ ದೇಶಗಳಿಗೆ ಸರಕುಗಳ ಮತ್ತು ಸೇವೆಗಳ ರಫ್ತಿನಿಂದ ಮಾತ್ರ ಈ ವಿದೇಶೀವಿನಿಮಯಗಳನ್ನು ಗಳಿಸಲು ಸಾಧ್ಯ. ಅಂದರೆ ವಿದೇಶೀ ವಿನಿಮಯವನ್ನು ದೊರಕಿಸಿಕೊಳ್ಳುವ ಸಲುವಾಗಿ ಯಾವುದೊಂದು ದೇಶವು ತನ್ನಲ್ಲಿರುವ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಂಡು ರಫ್ತು ಸರಕುಗಳನ್ನು ಉತ್ಪಾದಿಸುತ್ತದೆ. ಆ ಪ್ರಕಾರ, ಕೊರತೆಯಿಂದಿರುವ ಚಾಗತಿಕ ಸಂಪನ್ಮೂಲಗಳ ಪರಿಣಾಮ ಕಾರಿಯಾದ ಹಂಚಿಕೆ ಮತ್ತು ಬಳಕೆಗೆ ಅಂತರರಾಷ್ಟ್ರೀಯ ವ್ಯಾಪಾರವು ಸುವರ್ಣಾವಕಾಶ ವನ್ನು ಒದಗಿಸುತ್ತದೆ.

4. ಅನುಭೋಗಿಗಳ ಹಿತರಕ್ಷಣೆ (Protection of Consumers' Interest): ಅಂತರರಾಷ್ಟ್ರೀಯ ವ್ಯಾಪಾರದ ಪರಿಣಾಮವಾಗಿ ಯಾವುದೊಂದು ದೇಶಕ್ಕೆ ತನ್ನಲ್ಲಿ ಕೊರತೆಯಿರುವ ಮತ್ತು ಸ್ವದೇಶೀ ಮಾರುಕಟ್ಟೆಯಲ್ಲಿ ಬೆಲೆ ಹೆಚ್ಚಾಗಿರುವ ಸರಕುಗಳನ್ನು ಆಮದು ಮಾಡಿಕೊಳ್ಳಲು ಅವಕಾಶ ಸಿಗುತ್ತದೆ. ಇದರಿಂದಾಗಿ ಸ್ವದೇಶೀ ಮಾರುಕಟ್ಟೆಯಲ್ಲಿ ಅಧಿಕ ಬೆಲೆಯಲ್ಲಿ ಕಳಪೆ ಗುಣ ದರ್ಜೆಯ ಸರಕುಗಳನ್ನು ಅನುಭೋಗಿಗಳ ಮೇಲೆ ಹೇರುವ ಪ್ರವೃತ್ತಿಗೆ ತಡೆ ಬೀಳುತ್ತದೆ. ಆಮದು ಮಾಡಿಕೊಂಡ ವಿದೇಶೀ ಸರಕುಗಳ ಮತ್ತು ಸ್ವದೇಶೀ ಸರಕುಗಳ ನಡುವೆ ಮುಕ್ತ ಸ್ಪರ್ಧೆ ಏರ್ಪಡುವುದರಿಂದ ಮಾರುಕಟ್ಟೆಯಲ್ಲಿ ಏಕಸ್ವಾಮ್ಯವು ನಶಿಸುತ್ತದೆ. ಈ ಫಲವಾಗಿ ಅನುಭೋಗಿಗಳು ಕಡಿಮೆ ಬೆಲೆಯ, ಉತ್ತಮ ಗುಣಮಟ್ಟದ ಸರಕುಗಳನ್ನು ಖರೀದಿಸಲು ಸಾಧ್ಯವಾಗುತ್ತದೆ. ಆ ಪ್ರಕಾರ, ಅಂತರರಾಷ್ಟ್ರೀಯ ವ್ಯಾಪಾರವು ಅನುಭೋಗಿಗಳ ಹಿತರಕ್ಷಣೆಗೆ ಮತ್ತು ಅನುಭೋಗಿಯ ಪರಮಾಧಿಕಾರವನ್ನು ಸಾಬೀತು ಪಡಿಸಲು ನೆರವಾಗುತ್ತದೆ. ಪಾಲ್ ಕ್ರುಗ್‌ಮನ್ ಹೇಳಿರುವಂತೆ **"ತನಗೆ ಬೇಕಾಗಿರುವ ವಸ್ತುಗಳನ್ನು ಆಮದು ಮಾಡಿಕೊಳ್ಳಲು ದೇಶವೊಂದಕ್ಕೆ ಸಾಮರ್ಥ್ಯ ಲಭಿಸುವಿಕೆಯು ಅಂತರರಾಷ್ಟ್ರೀಯ ವ್ಯಾಪಾರದ ನಿಜವಾದ ಪ್ರಯೋಜನವಾಗಿರುತ್ತದೆ".**

5. ದಕ್ಷ ಉತ್ಪಾದನಾ ವ್ಯವಸ್ಥೆಯ ವಿಕಾಸ (Evolution of Efficient System of Production): ಅಂತರರಾಷ್ಟ್ರೀಯ ವ್ಯಾಪಾರವು ದಕ್ಷ ಉತ್ಪಾದನಾ ವ್ಯವಸ್ಥೆಯ ವಿಕಾಸಕ್ಕೆ ವೇದಿಕೆಯಾಗಿ ಕೆಲಸ ನಿರ್ವಹಿಸುತ್ತದೆ. ವಿದೇಶಗಳಿಂದ ಆಮದು ಮಾಡಿಕೊಂಡ ಸರಕುಗಳು ಸ್ವದೇಶೀ ಸರಕುಗಳೊಡನೆ ಮಾರುಕಟ್ಟೆಯಲ್ಲಿ ಪೈಪೋಟಿ ನಡೆಸುವುದರಿಂದ ಉತ್ತಮ ಗುಣ ದರ್ಜೆಯ ಸರಕುಗಳಿಗೆ ಮಾತ್ರ ಬೇಡಿಕೆ ಬರುತ್ತದೆ. ಅಂದರೆ ವಿದೇಶೀ ಸರಕುಗಳು ಉತ್ತಮ ಗುಣಮಟ್ಟದವುಗಳಾಗಿದ್ದರೆ ಸ್ವದೇಶೀ ಸರಕುಗಳಿಗೆ ಬೇಡಿಕೆ ಕುಸಿಯುತ್ತದೆ. ಆದ್ದರಿಂದ ವಿದೇಶೀ ಸರಕುಗಳೊಡನೆ ಸಮರ್ಥವಾಗಿ ಸ್ಪರ್ಧಿಸಲು ಸ್ವದೇಶೀ ಸರಕುಗಳ ಬೇಡಿಕೆ ಕುಸಿಯುತ್ತದೆ. ಆದ್ದರಿಂದ ವಿದೇಶೀ ಸರಕುಗಳೊಡನೆ ಸಮರ್ಥವಾಗಿ ಸ್ಪರ್ಧಿಸಲು ಸ್ವದೇಶೀ ಸರಕುಗಳ ಗುಣಮಟ್ಟವನ್ನು ಹೆಚ್ಚಿಸುವುದು ಅನಿವಾರ್ಯವಾಗುತ್ತದೆ. ಸರಕುಗಳ ಗುಣಮಟ್ಟವನ್ನು ಹೆಚ್ಚಿಸಲು ಉತ್ಪಾದನ ವ್ಯವಸ್ಥೆಯನ್ನು ಅತ್ಯಂತ ದಕ್ಷವಾಗಿರುವಂತೆ ಸಜ್ಜುಗೊಳಿಸುವುದು, ಸುಧಾರಿಸಿದ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದು ಮತ್ತು ಸಂಪನ್ಮೂಲಗಳನ್ನು ವ್ಯರ್ಥವಾಗದಂತೆ ಬಳಸಿಕೊಳ್ಳುವುದು ಪೂರ್ವಭಾವಿ ಸಂಗತಿಗಳಾಗಿರುತ್ತವೆ.

6. ಜಾಗತಿಕ ಮಾರುಕಟ್ಟೆಗೆ ಪ್ರವೇಶಾಧಿಕಾರ (Access to World Market): ಅಂತರರಾಷ್ಟ್ರೀಯ ವ್ಯಾಪಾರವು ಪ್ರಪಂಚದಾದ್ಯಂತ ವಿವಿಧ ದೇಶಗಳ ನಡುವೆ ಆರ್ಥಿಕ ಸಂಬಂಧಗಳನ್ನು ಬಲಪಡಿಸುತ್ತದೆ. ಇದರಿಂದಾಗಿ ಎಲ್ಲಾ ದೇಶಗಳೂ ಜಗತ್ತಿನ ಯಾವುದೇ ದೇಶದಿಂದ ಕಚ್ಚಾವಸ್ತುಗಳನ್ನು ಮತ್ತು ಸಿದ್ಧಪಡಿಸಿದ ಸರಕುಗಳನ್ನು ಆಮದು ಮಾಡಿಕೊಳ್ಳಲು ಹಾಗೂ ಯಾವುದೇ ದೇಶಕ್ಕೆ ಇವುಗಳನ್ನು ರಫ್ತು ಮಾಡಲು ಅವಕಾಶವನ್ನು ಕಲ್ಪಿಸುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಅಂತರರಾಷ್ಟ್ರೀಯ ವ್ಯಾಪಾರವು ಪ್ರತಿಯೊಂದು ದೇಶಕ್ಕೂ ಜಾಗತಿಕ ಮಾರುಕಟ್ಟೆಗೆ ಪ್ರವೇಶಾಧಿಕಾರವನ್ನು ದೊರಕಿಸಿಕೊಡುತ್ತದೆ.

7. ಬೆಲೆಗಳ ಇಳಿಕೆ (Decrease in Prices): ವಿದೇಶಗಳಿಂದ ಸರಕುಗಳ ಆಮದಿನಿಂದಾಗಿ ಮಾರುಕಟ್ಟೆಯಲ್ಲಿ ಯಥೇಚ್ಛ ಪ್ರಮಾಣದಲ್ಲಿ ಸರಕುಗಳು ಲಭ್ಯವಾಗುತ್ತವೆ. ಸರಕುಗಳ ಮಿತಿಮೀರಿದ ಲಭ್ಯತೆಯಿಂದಾಗಿ ಬೆಲೆಗಳು ಕುಸಿಯುತ್ತವೆ. ಅಲ್ಲದೆ ವಿದೇಶೀ ಸರಕುಗಳೊಡನೆ ಪರಿಣಾಮಕಾರಿಯಾಗಿ ಸ್ಪರ್ಧಿಸಲು ಸಾಧ್ಯವಾಗುವಂತೆ ಸ್ವದೇಶೀ ಮಾರುಕಟ್ಟೆಯಲ್ಲಿ ಮಾರುವವರು ಸರಕುಗಳ ಬೆಲೆಗಳನ್ನು ಇಳಿಸುವುದು ಅನಿವಾರ್ಯವಾಗುತ್ತದೆ. ಬೆಲೆಗಳ ಇಳಿತವು ಉಪಭೋಗ ಮಟ್ಟದ ಏರಿಕೆಗೆ ನೆರವಾಗುತ್ತದೆ.

8. ರಾಷ್ಟ್ರಗಳ ಆರ್ಥಿಕ ಹಿತಾಸಕ್ತಿಗಳ ರಕ್ಷಣೆ (Protection of Economic Interests of Nations): ಅಂತರರಾಷ್ಟ್ರೀಯ ವ್ಯಾಪಾರವು ರಾಷ್ಟ್ರಗಳ ಆರ್ಥಿಕ ಹಿತಾಸಕ್ತಿಗಳ ರಕ್ಷಣೆಗೆ ಕೊಡುಗೆ ಸಲ್ಲಿಸುತ್ತದೆ. ದೇಶವು ಬಾಹ್ಯ ಆಕ್ರಮಣಗಳಿಗೆ ಒಳಗಾದ ಸಂದರ್ಭಗಳಲ್ಲಿ ಯುದ್ಧ ಸಾಮಗ್ರಿಗಳು, ತಂತ್ರಕೌಶಲ್ಯದ ಸರಕುಗಳು ಮತ್ತು ಅಣ್ವಸ್ತ್ರಗಳನ್ನು ವಿದೇಶಗಳಿಂದ ಪಡೆದುಕೊಳ್ಳಲು ಅಂತರರಾಷ್ಟ್ರೀಯ ವ್ಯಾಪಾರದಿಂದ ಸಾಧ್ಯತೆ ದೊರೆಯುತ್ತದೆ. ಅಲ್ಲದೇ ಯಾವುದೊಂದು ದೇಶವು ತನ್ನಲ್ಲಿ ಹೆಚ್ಚುವರಿಯಾಗಿರುವ ಸರಕುಗಳನ್ನು ಬೇರೆ ದೇಶಗಳಿಗೆ ರಫ್ತು ಮಾಡಬಹುದಾಗಿರುತ್ತದೆ. ಉತ್ಪಾದನ ಬಾಹುಳ್ಯದಿಂದಾಗಿ ಬೆಲೆಗಳ ಕುಸಿತ, ಬೇಡಿಕೆಯ ಏಂಜರಿತ, ದೀರ್ಘಕಾಲೀನ ಆರ್ಥಿಕ ಮುಗ್ಗಟ್ಟು, ಮೊದಲಾದ ಆರ್ಥಿಕ ಸಮಸ್ಯೆಗಳನ್ನು ಈ ಮೂಲಕ ಬಗೆಹರಿಸಬಹುದು. ಆ ಪ್ರಕಾರ, ಪ್ರತಿಯೊಂದು ದೇಶವೂ ತನ್ನ ಆರ್ಥಿಕ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಅಂತರರಾಷ್ಟ್ರೀಯ ವ್ಯಾಪಾರವು ಸಹಾಯ ಮಾಡುತ್ತದೆ.

9. ಅಂತರರಾಷ್ಟ್ರೀಯ ಹಣಕಾಸು ಪದ್ಧತಿಯ ಬೆಳವಣಿಗೆ (Growth of International Financial System): ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ನಿರತವಾದ ದೇಶಗಳು ಆಮದುಗಳಿಗೆ ಹಣವನ್ನು ಪಾವತಿಸಬೇಕಾಗುತ್ತದೆ ಮತ್ತು ತಮ್ಮ ರಫ್ತುಗಳಿಗೆ ವಿದೇಶಗಳಿಂದ ಹಣವನ್ನು ಸ್ವೀಕರಿಸುತ್ತವೆ. ಒಂದು ದೇಶದ ಹಣವನ್ನು ಇನ್ನೊಂದು ದೇಶದ ಹಣಕ್ಕೆ ಪರಿವರ್ತಿಸುವ ಆವಶ್ಯಕತೆ ಇಲ್ಲಿ ಉದ್ಭವಿಸುತ್ತದೆ. ಉದಾಹರಣೆಗೆ, ಭಾರತವು ಅಮೆರಿಕ ರಿ.ದ ಸರಕುಗಳನ್ನು ಆಮದು ಮಾಡಿಕೊಂಡರೆ ಭಾರತದ ರೂಪಾಯಿಯನ್ನು ಅಮೆರಿಕದ ಡಾಲರಿಗೆ ಪರಿವರ್ತಿಸಿ ಆಮದು ಸರಕುಗಳ ಬೆಲೆಯನ್ನು ಸಂದಾಯ ಮಾಡಬೇಕಾಗಿರುತ್ತದೆ.

ವ್ಯಾಪಾರದಲ್ಲಿ ತೊಡಗಿರುವ ದೇಶಗಳ ನಡುವೆ ನಾಣ್ಯಗಳ ಪರಿವರ್ತನೆ ಅಗತ್ಯವಾದ ಅಂಶವಾಗಿರುತ್ತದೆ. ಏಕೆಂದರೆ ಎಲ್ಲಾ ದೇಶಗಳಲ್ಲಿಯೂ ಒಂದೇ ನಾಣ್ಯ ಪದ್ಧತಿ ಅಸ್ತಿತ್ವದಲ್ಲಿರಲಾರದು. ಒಂದು ದೇಶದ ನಾಣ್ಯವನ್ನು ಬೇರೊಂದು ದೇಶದ ನಾಣ್ಯಕ್ಕೆ ಪರಿವರ್ತಿಸುವುದರಿಂದ ಅಂತರರಾಷ್ಟ್ರೀಯ ವ್ಯಾಪಾರದ ಪರಿಣಾಮವಾಗಿ ನಾಣ್ಯಗಳ ಬಹುಪಕ್ಷೀಯ ಪರಿವರ್ತನೆ (Multilateral Convertibility) ಮುಕ್ತವಾಗಿ ನೆರವೇರುತ್ತದೆ. ಇದರಿಂದಾಗಿ ಪ್ರತಿಯೊಂದು ದೇಶವೂ ತನ್ನ ನಾಣ್ಯ ಪದ್ಧತಿಗೆ ಸೀಮಿತವಾಗುವ ಬದಲು ಅಂತರರಾಷ್ಟ್ರೀಯ ನಾಣ್ಯ ಪದ್ಧತಿಯೊಂದು ರೂಪುಗೊಳ್ಳುತ್ತದೆ.

10. ದೀರ್ಘಕಾಲೀನ ಆರ್ಥಿಕ ಜಡತ್ವದ ನಿವಾರಣೆ (Overcoming of Secular Economic Stagnation): ಅಂತರರಾಷ್ಟ್ರೀಯ ವ್ಯಾಪಾರವು ದೀರ್ಘ ಕಾಲೀನ ಆರ್ಥಿಕ ಜಡತ್ವವನ್ನು ಹೋಗಲಾಡಿಸಲು ನೆರವಾಗುತ್ತದೆ. ಈ ಜಡತ್ವವು ಬಹುತೇಕವಾಗಿ ಶ್ರೀಮಂತ ದೇಶಗಳಿಗೆ ಮೀಸಲಾದ ಸಮಸ್ಯೆಯಾಗಿರುತ್ತದೆ. ಶ್ರೀಮಂತ ದೇಶಗಳಲ್ಲಿ ಅಧಿಕವಾದ ಉತ್ಪಾದನೆಯಿಂದ ಸರಕುಗಳ ಬಾಹುಳ್ಯ ತಲೆದೋರುವುದು ಸ್ವಾಭಾವಿಕ. ಬಂಡವಾಳ, ಮುಂದುವರಿದ ತಂತ್ರಜ್ಞಾನ ಮತ್ತಿತರ ಸಂಪನ್ಮೂಲಗಳನ್ನು ಹೇರಳವಾಗಿ ಹೊಂದಿರುವ ಶ್ರೀಮಂತ ದೇಶಗಳು ಯಥೇಚ್ಛ ಪ್ರಮಾಣದಲ್ಲಿ ಸರಕುಗಳನ್ನು ಉತ್ಪಾದಿಸುತ್ತವೆ. ಈ ಸರಕುಗಳಿಗೆ ವಿದೇಶಗಳಲ್ಲಿ ಮಾರುಕಟ್ಟೆ ಲಭ್ಯವಾಗಬೇಕು. ಸರಕುಗಳಿಗೆ ಬೇಡಿಕೆಯು ಲಭಿಸದಿದ್ದರೆ ಉತ್ಪಾದನೆಯು ವ್ಯರ್ಥವಾಗುತ್ತದೆ. ಅಂತರರಾಷ್ಟ್ರೀಯ ವ್ಯಾಪಾರದ ಹೊರತು ಸಂಕುಚಿತ ಬೇಡಿಕೆಯಿಂದ ಉತ್ಪಾದನೆಯು ಇಳಿಯುತ್ತದೆ ಮತ್ತು ನಿರುದ್ಯೋಗ ಹಾಗೂ ಆದಾಯದ ಕುಸಿತ ಪರಿಣಮಿಸುತ್ತದೆ. ಇದರಿಂದಾಗಿ ದೀರ್ಘಕಾಲೀನ ಆರ್ಥಿಕ ಜಡತ್ವ ವ್ಯಾಪಿಸುತ್ತದೆ ಮತ್ತು ಆರ್ಥಿಕ ಸ್ಥಿಮಿತತೆ ಕದಡುತ್ತದೆ. ಅಂತರ ರಾಷ್ಟ್ರೀಯ ವ್ಯಾಪಾರದಿಂದ ಮಾತ್ರ ವಸ್ತುಗಳಿಗೆ ಬೇಡಿಕೆ ಚಾಸ್ತಿಯಾಗಿ ಆರ್ಥಿಕಾಭಿವೃದ್ಧಿ ಸುಗಮವಾಗಿ ಸಾಗುತ್ತಿರುತ್ತದೆ ಮತ್ತು ನಿರಂತರ ಆರ್ಥಿಕ ಸ್ಥಿಮಿತತೆ ನೆಲೆಸಿರುತ್ತದೆ.

11. ಬೆಲೆಯ ಸಮಾನತೆಯ ಸಾಧನೆ (Achievement of Equalisation in Price): ಅಂತರರಾಷ್ಟ್ರೀಯ ವ್ಯಾಪಾರದಿಂದ ವಿವಿಧ ದೇಶಗಳ ನಡುವೆ ಬೆಲೆಗಳ ಸಮಾನತೆ ಮತ್ತು ಬೆಲೆಗಳ ಮಟ್ಟದ ಸ್ಥಿರತೆಯನ್ನು ಏರ್ಪಡಿಸಲು ಸಾಧ್ಯವಾಗುತ್ತದೆ. ಸರಕುಗಳ ಮಿತಿಮೀರಿದ ಲಭ್ಯತೆಯಿಂದ ಬೆಲೆಗಳು ಕೆಳಮಟ್ಟದಲ್ಲಿರುವ ದೇಶಗಳಿಂದ ಸರಕುಗಳ ಕೊರತೆಯ ಕಾರಣವಾಗಿ ಬೆಲೆಗಳು ಅಧಿಕವಾಗಿರುವ ದೇಶಗಳಿಗೆ ಸರಕುಗಳ ಚಲನೆಯಿಂದ ಇದು ನೆರವೇರುತ್ತದೆ.

12. ಅಂತರರಾಷ್ಟ್ರೀಯ ಅರಿವಿನ ವೃದ್ಧಿ (Growth of International Understanding): ಅಂತರರಾಷ್ಟ್ರೀಯ ವ್ಯಾಪಾರದ ಮೂಲಕ ವಿಭಿನ್ನ ದೇಶಗಳ ನಡುವೆ ಸಂಬಂಧಗಳು ಹೆಚ್ಚುವುದರಿಂದ ಅಂತರರಾಷ್ಟ್ರೀಯ ಅರಿವು, ಸಂಸ್ಕೃತಿಗಳ ಮತ್ತು ಭಾವನೆಗಳ ವಿನಿಮಯ ವೃದ್ಧಿಗೊಳ್ಳುತ್ತವೆ. ಇದು ಜಾಗತಿಕ ಶಾಂತಿ ಮತ್ತು ಸೌಹಾರ್ದತೆಯ ಬೆಳವಣಿಗೆಗೆ

ದಾರಿಮಾಡಿಕೊಡುತ್ತದೆ. ಇದು ಅಂತರರಾಷ್ಟ್ರೀಯ ವ್ಯಾಪಾರದ ಪರೋಕ್ಷ ಪ್ರಯೋಜನವಾಗಿದೆ.

B. ಆಂತರಿಕ ವ್ಯಾಪಾರ ಮತ್ತು ಅಂತರರಾಷ್ಟ್ರೀಯ ವ್ಯಾಪಾರದ ನಡುವಿನ ವ್ಯತ್ಯಾಸಗಳು (Differences between Internal Trade and International Trade)

ಅಥವಾ

ಅಂತರರಾಷ್ಟ್ರೀಯ ವ್ಯಾಪಾರವನ್ನು ಆಂತರಿಕ ವ್ಯಾಪಾರದಿಂದ ಪ್ರತ್ಯೇಕಿಸುವ ಅಂಶಗಳು (Factors Separating International Trade from Internal Trade)

ಅಂತರರಾಷ್ಟ್ರೀಯ ವ್ಯಾಪಾರವು ಆಂತರಿಕ ವ್ಯಾಪಾರದಿಂದ ಭಿನ್ನವಾಗಿರುತ್ತದೆ. ಆಂತರಿಕ ವ್ಯಾಪಾರವು ಒಂದೇ ದೇಶದ ಒಳಗಡೆಯೇ ನಡೆಯುವ ಸರಕುಗಳ ಮತ್ತು ಸೇವೆಗಳ ವಿನಿಮಯ ಕಾರ್ಯವಾಗಿರುತ್ತದೆ. ಈ ವ್ಯಾಪಾರವು ಯಾವುದೊಂದು ದೇಶದ ಸರಹದ್ದಿನೊಳಗೆಯೇ ನಡೆಯುತ್ತದೆ. ಆದ್ದರಿಂದ ಇದನ್ನು 'ಸ್ವದೇಶೀ ವ್ಯಾಪಾರ' (Domestic Trade) ಎಂಬ ಹೆಸರಿನಿಂದಲೂ ಕರೆಯಲಾಗುತ್ತದೆ. ಒಂದು ದೇಶವು ಹಲವಾರು ಪ್ರಾಂತಗಳಾಗಿ ಅಥವಾ ಪ್ರದೇಶಗಳಾಗಿ ವಿಭಾಗವಾಗಿದ್ದು, ಅವುಗಳ ನಡುವೆ ವ್ಯಾಪಾರವು ನೆರವೇರುವುದರಿಂದ ಸ್ವದೇಶೀ ವ್ಯಾಪಾರವನ್ನು 'ಪ್ರಾದೇಶಿಕ ವ್ಯಾಪಾರ' (Regional Trade) ಎಂಬ ಹೆಸರಿನಿಂದಲೂ ಕರೆಯಲಾಗುತ್ತದೆ.

ಒಟ್ಟಿನಲ್ಲಿ, ಆಂತರಿಕ ವ್ಯಾಪಾರದಲ್ಲಿ ದೇಶದ ಒಳಗಡೆಯೇ ಒಂದು ಪ್ರದೇಶವು ಇನ್ನೊಂದು ಪ್ರದೇಶಕ್ಕೆ ಸರಕುಗಳನ್ನು ಕಳುಹಿಸುತ್ತದೆ ಮತ್ತು ಒಂದು ಪ್ರದೇಶವು ಇನ್ನೊಂದು ಪ್ರದೇಶದಿಂದ ಸರಕುಗಳನ್ನು ಪಡೆದುಕೊಳ್ಳುತ್ತದೆ. 'ಪ್ರದೇಶ' ಎಂಬುದು ದೂರದ ಒಂದು ರಾಜ್ಯವಾಗಿರಬಹುದು, ಪಕ್ಕದ ಜಿಲ್ಲೆಯಾಗಿರಬಹುದು ಅಥವಾ ಸ್ವದೇಶದ ಯಾವುದೇ ಒಂದು ಸ್ಥಳವಾಗಿರಬಹುದು.

ಆಂತರಿಕ ವ್ಯಾಪಾರವಾಗಲಿ ಅಥವಾ ಅಂತರರಾಷ್ಟ್ರೀಯ ವ್ಯಾಪಾರವಾಗಿರಲಿ ಅದು ಉದ್ಭವಿಸಲು ಒಂದು ಪ್ರಮುಖ ಕಾರಣವಿದೆ. ಒಂದು ಪ್ರದೇಶವಾಗಲಿ ಅಥವಾ ದೇಶವಾಗಲಿ ತನಗೆ ಆವಶ್ಯಕವಾಗಿರುವ ಎಲ್ಲಾ ವಸ್ತುಗಳನ್ನು ಉತ್ಪಾದಿಸಲು ಸಾಧ್ಯವಿಲ್ಲದಿರುವುದೇ ಈ ಕಾರಣ. ಪ್ರಕೃತಿಯ ಕೊಡುಗೆಯು ಎಲ್ಲಾ ಪ್ರದೇಶಗಳಲ್ಲಿ ಅಥವಾ ದೇಶಗಳಲ್ಲಿ ಏಕರೂಪವಾಗಿಲ್ಲ. ಎಲ್ಲಾ ಪ್ರದೇಶಗಳಲ್ಲಿ ಅಥವಾ ದೇಶಗಳಲ್ಲಿ ಉತ್ಪಾದನೆಗೆ ಅಗತ್ಯವಿರುವ ಎಲ್ಲಾ ರೀತಿಯ ಸಂಪನ್ಮೂಲಗಳು ಲಭ್ಯವಿರುವುದಿಲ್ಲ. ಒಂದು ವೇಳೆ ಲಭ್ಯವಿರುವುದಾದರೂ ಅವು ಒಂದೇ ಪ್ರಮಾಣದಲ್ಲಿಲ್ಲ. ಒಟ್ಟಿನಲ್ಲಿ ಸಂಪನ್ಮೂಲಗಳ ಲಭ್ಯತೆಯಲ್ಲಿ ವಿಭಿನ್ನತೆಯು ಎಂದು ವಿಶಿಷ್ಟ ಲಕ್ಷಣವಾಗಿದೆ. ಆದ್ದರಿಂದ ಎಲ್ಲಾ ದೇಶಗಳು ಅಥವಾ ಪ್ರದೇಶಗಳು ತಮಗೆ ಬೇಕಾಗಿರುವ ಎಲ್ಲಾ ಸರಕುಗಳನ್ನು ಉತ್ಪಾದಿಸಲು ಸಾಧ್ಯವಾಗುವುದಿಲ್ಲ. ಅಥವಾ ಉತ್ಪಾದಿಸುವುದಾದರೂ ಅವುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಉತ್ಪಾದಿಸಲು ಸಾಧ್ಯವಾಗುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಕೆಲವು ಸರಕುಗಳನ್ನು ಸ್ವಲ್ಪವೂ ಉತ್ಪಾದಿಸಲು ಸಾಧ್ಯವಾಗುವುದಿಲ್ಲ, ಕೆಲವು ಸರಕುಗಳ ಉತ್ಪಾದನೆಯು ಕೊರತೆಯಾಗುತ್ತದೆ, ಮತ್ತು ಕೆಲವು ಸರಕುಗಳ ಉತ್ಪಾದನೆಯು ಆವಶ್ಯಕತೆಗೆ ಮೀರಿರುತ್ತದೆ. ಆದ್ದರಿಂದ ಸ್ವಲ್ಪವೂ ಉತ್ಪಾದಿಸಲು ಸಾಧ್ಯವಿರದ ಅಥವಾ ಕೊರತೆಯಿಂದಿರುವ ಸರಕುಗಳನ್ನು ಬೇರೆ ಪ್ರದೇಶಗಳಿಂದ ಅಥವಾ ದೇಶಗಳಿಂದ ತರಿಸಿಕೊಳ್ಳಬೇಕಾಗುತ್ತದೆ ಮತ್ತು ಆವಶ್ಯಕತೆಗೆ ಮೀರಿರುವ ಸರಕುಗಳನ್ನು ಬೇರೆ ಪ್ರದೇಶಗಳಿಗೆ ಅಥವಾ ದೇಶಗಳಿಗೆ ರಫ್ತು ಮಾಡಬೇಕಾಗುತ್ತದೆ. ಈ ಕಾರಣದಿಂದಲೇ ಸರಕುಗಳ ವಿನಿಮಯ ಆವಶ್ಯಕವಾಗುತ್ತದೆ.

ಆದ್ದರಿಂದ ವಿವಿಧ ಪ್ರದೇಶಗಳು ಅಥವಾ ದೇಶಗಳು ಯಾವ ಸಂಪನ್ಮೂಲಗಳನ್ನು ಅಧಿಕವಾಗಿ ಹೊಂದಿವೆಯೋ ಅವುಗಳಿಂದ ಉತ್ಪಾದಿಸಲು ಸಾಧ್ಯವಿರುವ ಮತ್ತು ಕಡಿಮೆ ವೆಚ್ಚದಲ್ಲಿ ಉತ್ಪಾದಿಸಬಹುದಾದ ಸರಕುಗಳ ಉತ್ಪಾದನೆಯಲ್ಲಿ ಮಾತ್ರ ತಮ್ಮ ಪ್ರಯತ್ನಗಳನ್ನು ಕೇಂದ್ರೀಕರಿಸುತ್ತವೆ. ಆ ಮೇರೆಗೆ, ವ್ಯಾಪಾರವು ಪ್ರಾದೇಶಿಕದ್ದಾಗಿರಲಿ ಅಥವಾ ಅಂತರರಾಷ್ಟ್ರೀಯದ್ದಾಗಿರಲಿ ಶ್ರಮವಿಭಜನೆಯೇ (Division of Labour) ಅದರ ತಳಪದಿಯಾಗಿದೆ.

ಈ ನಿಟ್ಟಿನಲ್ಲಿ ನೋಡಿದಾಗ ಪ್ರಾದೇಶಿಕ ಮತ್ತು ಅಂತರರಾಷ್ಟ್ರೀಯ ವ್ಯಾಪಾರಗಳ ನಡುವೆ ಭಿನ್ನತೆ ಇಲ್ಲವೆಂದು ತೋರುತ್ತದೆ. ಆದರೆ ಕೂಡಲೇ ಅಂತಹ ನಿರ್ಣಯಕ್ಕೆ ಬರುವುದು ಸಮಂಜಸವಾಗುವುದಿಲ್ಲ. ಶ್ರಮವಿಭಜನೆಯೇ ವ್ಯಾಪಾರದ ಉದ್ಭವದ ಮೂಲಭೂತ ಸಂಗತಿಯಾದರೂ ಪ್ರಾದೇಶಿಕ ಮತ್ತು ಅಂತರರಾಷ್ಟ್ರೀಯ ವ್ಯಾಪಾರಗಳ ನಡುವೆ ಕೆಲವು ಭಿನ್ನತೆಗಳನ್ನು ಗಮನಿಸಬಹುದು. ಈ ಭಿನ್ನತೆಗಳಿರುವುದರಿಂದಲೇ ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಪ್ರತ್ಯೇಕವಾದ ಸಿದ್ಧಾಂತವಿದೆ.

ಆಂತರಿಕ ವ್ಯಾಪಾರವು ಒಂದು ದೇಶದ ಒಳಗಡೆಯೇ ನಡೆಯುವ ವ್ಯಾಪಾರವಾಗಿರುತ್ತದೆ. ಅಂದರೆ ಇದು ಯಾವುದೇ ಒಂದು ದೇಶದ ವಿಭಿನ್ನ ಪ್ರಾಂತ್ಯಗಳ ಅಥವಾ ದೇಶಗಳ ನಡುವೆ ನಡೆಯುವ ವ್ಯಾಪಾರವಾಗಿರಬಹುದು. ಆದ್ದರಿಂದ ಇದನ್ನು ಸ್ವದೇಶೀ ವ್ಯಾಪಾರ ಎಂತಲೂ ಕರೆಯಲಾಗುತ್ತದೆ. ಏಕೆಂದರೆ ಇದು ಒಂದು ದೇಶಕ್ಕೆ ಮಾತ್ರ ಸೀಮಿತವಾದ ಮತ್ತು ಅದರ ಹೊರಗೆ ತನ್ನ ವ್ಯಾಪ್ತಿಯನ್ನು ಚಾಚದ ವ್ಯಾಪಾರದ ವಿಧವಾಗಿರುತ್ತದೆ. ಇದಕ್ಕೆ ವಿರುದ್ಧವಾಗಿ ಅಂತರ ರಾಷ್ಟ್ರೀಯ ವ್ಯಾಪಾರವು ಎರಡು ಅಥವಾ ಅದಕ್ಕಿಂತ ಹೆಚ್ಚಿನ ಸಂಖ್ಯೆಯ ದೇಶಗಳ ನಡುವೆ ಜರುಗುವ ವ್ಯಾಪಾರವಾಗಿರುತ್ತದೆ. ಇಲ್ಲಿ ವ್ಯಾಪಾರವು ವಿಭಿನ್ನ ದೇಶಗಳ ನಡುವೆ ನಡೆಯುತ್ತದೆ.

ಹಲವು ಅಂಶಗಳಿಂದಾಗಿ ಅಂತರರಾಷ್ಟ್ರೀಯ ವ್ಯಾಪಾರವು ಆಂತರಿಕ ವ್ಯಾಪಾರದಿಂದ ಭಿನ್ನವಾಗಿದೆ. ಆಂತರಿಕ ವ್ಯಾಪಾರದ ಸಿದ್ಧಾಂತವನ್ನು ವಿವರಿಸುವ ಸಂಗತಿಗಳು ಅಂತರರಾಷ್ಟ್ರೀಯ ವ್ಯಾಪಾರದ ಸಿದ್ಧಾಂತವನ್ನು ವಿವರಿಸಲು ಸಾಕಾಗುವುದಿಲ್ಲ. ಈ ಕಾರಣದಿಂದಾಗಿ ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಪ್ರತ್ಯೇಕ ಸಿದ್ಧಾಂತವೊಂದರ ಆವಶ್ಯಕತೆಯನ್ನು ಮನಗಾಣ

)

ಗಿದೆ. ಅಂತರರಾಷ್ಟ್ರೀಯ ವ್ಯಾಪಾರದ ಉದ್ಭವಕ್ಕೆ ಕಾರಣಗಳು, ಅಥವಾ ಅಂತರರಾಷ್ಟ್ರೀಯ
್ಯಾಪಾರವನ್ನು ಆಂತರಿಕ ವ್ಯಾಪಾರದಿಂದ ಪ್ರತ್ಯೇಕಿಸುವ ಲಂಶಗಳು, ಅಥವಾ ಅಂತರ
ಷ್ಟ್ರೀಯ ವ್ಯಾಪಾರಕ್ಕೆ ಪ್ರತ್ಯೇಕ ಸಿದ್ಧಾಂತದ ಆವಶ್ಯಕತೆಯನ್ನು ಪ್ರತಿಪಾದಿಸುವ
ಂಗತಿಗಳನ್ನು ಈ ಕೆಳಗಿನಂತೆ ವಿವರಿಸಬಹುದು.

1. ಉತ್ಪಾದನಾಂಗಗಳ ಚಲನೆ (Movement of Factors of Production): ಶ್ರಮ, ಬಂಡವಾಳ ಇತ್ಯಾದಿ ಉತ್ಪಾದನಾಂಗಗಳು ಪ್ರಾದೇಶಿಕವಾಗಿ ಚಲನೆಯ ಗುಣವನ್ನು ಹೊಂದಿರುತ್ತವೆ. ಆದರೆ ವಿಭಿನ್ನ ದೇಶಗಳ ನಡುವೆ ಅವು ಚಲನಶೀಲತೆಯನ್ನು ಹೊಂದಿರುವುದಿಲ್ಲ. ಈ ಚಲನರಹಿತತೆಯ ಕಾರಣದಿಂದಲೇ ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಸಿದ್ಧಾಂತವೊಂದರ ಆವಶ್ಯಕತೆ ಇದೆಯೆಂದು ದೇವಿಡ್ ರಿಕಾರ್ಡೊ ಹೇಳಿದಿದ್ದಾರೆ. ಶ್ರಮ ಮತ್ತು ಬಂಡವಾಳದ ಚಲನೆಯ ಮೇಲೆ ದೇಶಗಳು ವಿವಿಧ ರೀತಿಯ ನಿಯಂತ್ರಣಗಳನ್ನು ವಿಧಿಸಿವೆ. ಇದಕ್ಕಿಂತಲೂ ಮುಖ್ಯವಾಗಿ ಭಾಷೆ, ಧರ್ಮ, ಸಂಪ್ರದಾಯಗಳು, ಆಚಾರ ವಿಚಾರಗಳು, ಆಹಾರ ಪದ್ಧತಿ, ಸಾಮಾಜಿಕ ಮತ್ತು ರಾಜಕೀಯ ಸೀಮೆಗಳ ಮೊದಲಾದ ಸಂಗತಿಗಳಲ್ಲಿ ಒಂದು ದೇಶವು ಇನ್ನೊಂದು ದೇಶದಿಂದ ತೀವ್ರವಾಗಿ ಭಿನ್ನವಾಗಿರುವುದರಿಂದ ಜನರ ಚಲನೆಯು ನಿಯಂತ್ರಿತ ಸಲ್ಪಟ್ಟಿದೆ. ಟ್ಯಾಸಿಸ್ಕಿತ್‌ರ ಪ್ರಕಾರ "ಶ್ರಮವು ಸಾಗಾಣಿಕೆ ಮಾಡಲು ಅತ್ಯಂತ ಕಷ್ಟದಾಯಕವಾದ ಸರಕು."

ಬಂಡವಾಳವು ಶ್ರಮಕ್ಕಿಂತ ಹೆಚ್ಚಿನ ಚಲನೆಯ ಗುಣವನ್ನು ಪಡೆದಿದೆ. ಆದರೆ ಇಲ್ಲಿಯೂ ಸಹ ಬಂಡವಾಳದ ಸುರಕ್ಷತೆಯನ್ನು ಗಮನದಲ್ಲಿರಿಸಿಕೊಂಡು ಉದ್ಯಮಿಗಳು ಸ್ವದೇಶ ದಲ್ಲಿಯೇ ಬಂಡವಾಳವನ್ನು ಹೂಡಿಕೆ ಮಾಡುವ ಪ್ರವೃತ್ತಿ ಹೊಂದಿರುತ್ತಾರೆ. ಅಂದರೆ ಬಂಡವಾಳವೂ ಸಹ ವಿದೇಶಗಳಿಗೆ ಹೆಚ್ಚಾಗಿ ಚಲಿಸುವುದಿಲ್ಲ. ಆದರೆ ಆಂತರಿಕವಾಗಿ ಅದು ಹೆಚ್ಚಿನ ಚಲನಶೀಲತೆಯನ್ನು ಪಡೆದಿರುತ್ತದೆ.

2. ನೈಸರ್ಗಿಕ ಸಂಪನ್ಮೂಲಗಳ ಲಭ್ಯತೆಯಲ್ಲಿ ಭಿನ್ನತೆಗಳು (Differences in the Availability of Natural Resources): ಭೂಮಿಯ ವಿಸ್ತೀರ್ಣ ಮತ್ತು ಫಲವತ್ತತೆ, ಜಲಸಂಪತ್ತು, ಅರಣ್ಯಸಂಪತ್ತು, ಖನಿಜಸಂಪತ್ತು ಮತ್ತು ಹವಾಮಾನ ಮೊದಲಾದವುಗಳಲ್ಲಿ ವಿಭಿನ್ನ ದೇಶಗಳ ನಡುವೆ ಅತ್ಯಂತ ಹೆಚ್ಚು ವ್ಯತ್ಯಾಸಗಳಿವೆ. ಯಾವ ಸರಕುಗಳ ಉತ್ಪಾದನೆಗೆ ಹವಾಮಾನ ಮತ್ತು ನೈಸರ್ಗಿಕ ಸಂಪನ್ಮೂಲಗಳು ಸೂಕ್ತವಾಗಿವೆಯೋ ಆ ಸರಕುಗಳನ್ನು ಮಾತ್ರ ಉತ್ಪಾದಿಸಿ ಇತರ ಸರಕುಗಳನ್ನು ಆಮದು ಮಾಡಿಕೊಳ್ಳಲಾಗುತ್ತದೆ. ಉದಾಹರಣೆಗೆ, ಯಾವುದೇ ದೇಶದಲ್ಲಿ ಗೋಧಿಯನ್ನು ಬೆಳೆಯಲು ಅಲ್ಲಿನ ಮಣ್ಣು ಫಲವತ್ತಾಗಿದ್ದರೆ ಮತ್ತು ಹವಾಮಾನ ಸೂಕ್ತವಾಗಿದ್ದರೆ ಆ ದೇಶವು ಗೋಧಿಯನ್ನು ಹೆಚ್ಚಾಗಿ ಬೆಳೆಯುತ್ತದೆ. ಅದೇ ರೀತಿ ಇನ್ನೊಂದು ದೇಶದಲ್ಲಿ ಕಬ್ಬಿನ ಬೆಳೆಗೆ ಭೂಮಿಯು ಸೂಕ್ತವಾಗಿದ್ದರೆ ಆ ದೇಶವು ಕಬ್ಬಿನ ಬೆಳೆಯಲ್ಲಿ ಹೆಚ್ಚಿನ ಪ್ರಯತ್ನಗಳನ್ನು ಕೇಂದ್ರೀಕರಿಸುತ್ತದೆ. ಈ ಭಿನ್ನತೆಗಳೇ ಅಂತರರಾಷ್ಟ್ರೀಯ ವ್ಯಾಪಾರದ

ಉಗಮ ಮತ್ತು ಬೆಳವಣಿಗೆಗೆ ಪ್ರಮುಖ ಕಾರಣಗಳಾಗಿವೆ.

3. ಮಾನವ ಸಾಮರ್ಥ್ಯದಲ್ಲಿ ಭಿನ್ನತೆಗಳು (Differences in Human Capabilities): ವಿವಿಧ ದೇಶಗಳ ನಡುವೆ ಮಾನವ ಸಾಮರ್ಥ್ಯದಲ್ಲಿಯೂ ಭಿನ್ನತೆಗಳಿವೆ. ಕೆಲವು ದೇಶಗಳಲ್ಲಿ ಜನರು ದೃಢಕಾಯರೂ, ಚತುರರೂ ಆಗಿದ್ದರೆ, ಇನ್ನು ಕೆಲವು ದೇಶಗಳಲ್ಲಿ ಹೆಚ್ಚು ಉದ್ಯಮಶೀಲರಿರಬಹುದು. ಇನ್ನು ಕೆಲವು ದೇಶಗಳಲ್ಲಿ ಜನರು ತುಂಬಾ ಬುದ್ಧಿವಂತರಿರಬಹುದು, ಮತ್ತೆ ಕೆಲವು ದೇಶಗಳ ಜನರು ಬುದ್ಧಿಶಕ್ತಿಯಲ್ಲಿ ಕೆಳಮಟ್ಟದಲ್ಲಿರಬಹುದು. ಆದ್ದರಿಂದ ಉತ್ಪಾದನಾ ಕಾರ್ಯವಿಧಾನವನ್ನು ನಿರ್ಣಯಿಸುವ ವಿಷಯದಲ್ಲಿ ಆಯಾ ದೇಶದ ಜನರ ಕಾರ್ಯದಕ್ಷತೆಯ ಸ್ವರೂಪವು ಪ್ರಭಾವಶಾಲೀ ಪಾತ್ರವನ್ನು ನಿರ್ವಹಿಸುತ್ತದೆ.

4. ಬಂಡವಾಳದ ಲಭ್ಯತೆ (Availability of Capital): ಕೆಲವು ದೇಶಗಳು ಯಥೇಚ್ಛವಾದ ಬಂಡವಾಳ ಸಂಗ್ರಹವನ್ನು ಹೊಂದಿದ್ದರೆ ಮತ್ತೆ ಕೆಲವು ದೇಶಗಳು ಬಂಡವಾಳ ಕೊರತೆಯನ್ನು ಅನುಭವಿಸುತ್ತಿರುತ್ತವೆ. ಪರಿಣಾಮವಾಗಿ ಉತ್ಪಾದನಾ ಮಾಡುವ ಸರಕುಗಳ ಸ್ವರೂಪದಲ್ಲಿಯೂ ಭಿನ್ನತೆ ಇರುತ್ತದೆ. ಬಂಡವಾಳವನ್ನು ಯಥೇಚ್ಛವಾಗಿ ಹೊಂದಿರುವ ರಾಷ್ಟ್ರಗಳು ಬಂಡವಾಳ ಸಾಂದ್ರ ಸರಕುಗಳನ್ನು ಉತ್ಪಾದಿಸುತ್ತವೆ. ಬದಲಾಗಿ, ಬಂಡವಾಳ ಕೊರತೆಯನ್ನು ಅನುಭವಿಸುತ್ತಿರುವ ರಾಷ್ಟ್ರಗಳು ಶ್ರಮ ಸಾಂದ್ರ ಸರಕುಗಳ ಉತ್ಪಾದನೆಯಲ್ಲಿ ತಮ್ಮ ಪ್ರಯತ್ನಗಳನ್ನು ಕೇಂದ್ರೀಕರಿಸಬೇಕಾದ ಅನಿವಾರ್ಯತೆ ಬರುತ್ತದೆ. ಅಂದರೆ ಬಂಡವಾಳವನ್ನು ಅಧಿಕವಾಗಿ ಹೊಂದಿರುವ ರಾಷ್ಟ್ರಗಳು ಬಂಡವಾಳ ಸಾಂದ್ರ ಸರಕುಗಳನ್ನು ರಫ್ತು ಮಾಡಿ ಶ್ರಮಸಾಂದ್ರ ಸರಕುಗಳನ್ನು ಆಮದು ಮಾಡಿಕೊಳ್ಳುತ್ತವೆ. ಅಂತೆಯೇ ಶ್ರಮವನ್ನು ಅತಿಯಾಗಿ ಪಡೆದಿರುವ ರಾಷ್ಟ್ರಗಳು ಶ್ರಮ ಸಾಂದ್ರ ಸರಕುಗಳನ್ನು ರಫ್ತು ಮಾಡಿ ಬಂಡವಾಳ ಸಾಂದ್ರ ಸರಕುಗಳನ್ನು ಆಮದು ಮಾಡಿಕೊಳ್ಳುತ್ತವೆ.

5. ವಿಭಿನ್ನ ನಾಣ್ಯ ಪದ್ಧತಿಗಳ ಅಸ್ತಿತ್ವ (Existence of Different Systems of Currency): ಒಂದು ದೇಶದ ನಾಣ್ಯವು ಇನ್ನೊಂದು ದೇಶದ ನಾಣ್ಯದಿಂದ ವಿಭಿನ್ನವಾಗಿರುತ್ತದೆ. ಆದ್ದರಿಂದ ಸ್ವದೇಶಿ ನಾಣ್ಯವನ್ನು ವಿದೇಶಿ ನಾಣ್ಯಕ್ಕೆ ಪರಿವರ್ತಿಸಿ ಸರಕುಗಳಿಗೆ ಮತ್ತು ಸೇವೆಗಳಿಗೆ ಪಾವತಿ ಮಾಡಬೇಕಾಗುತ್ತದೆ. ಆದ್ದರಿಂದ ಆಂತರಿಕ ವ್ಯಾಪಾರದಲ್ಲಿ ಅಸ್ತಿತ್ವದಲ್ಲಿಲ್ಲದ ಅನೇಕ ವಿದೇಶೀ ವಿನಿಮಯ ಸಮಸ್ಯೆಗಳು ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಕಾಣಿಸಿಕೊಳ್ಳುತ್ತವೆ. ಈ ಪರಿಣಾಮವಾಗಿ ಅಂತರರಾಷ್ಟ್ರೀಯವಾಗಿ ಸರಕುಗಳ ಮತ್ತು ಸೇವೆಗಳ ವಿನಿಮಯವು ನಿರ್ಬಂಧಗೊಳ್ಳುತ್ತದೆ. ಪ್ರತಿಯೊಂದು ರಾಷ್ಟ್ರವೂ ಸ್ವತಂತ್ರ ನಾಣ್ಯ ಪದ್ಧತಿಯನ್ನು ಹೊಂದಿರುತ್ತದೆ. ವಿದೇಶೀ ವಿನಿಮಯ ಮಾರುಕಟ್ಟೆಯಲ್ಲಿ ಒಂದು ದೇಶದ ನಾಣ್ಯವನ್ನು ಇನ್ನೊಂದು ದೇಶದ ನಾಣ್ಯಕ್ಕೆ ಪರಿವರ್ತಿಸಬೇಕಾಗಿರುತ್ತದೆ. ವಿದೇಶಿ ವಿನಿಮಯದ ಕಾರ್ಯಾಚರಣೆಯು ಸಾಮಾನ್ಯ ಜನರಿಗೆ ರಹಸ್ಯವಾಗಿಯೇ ಇರುತ್ತದೆ. ಬದಲಾಗಿ ಆಂತರಿಕ ವ್ಯಾಪಾರದಲ್ಲಿ ಒಂದೇ ದೇಶದ ನಾಣ್ಯವು ಅಸ್ತಿತ್ವದಲ್ಲಿರುವುದರಿಂದ

ೂಂದಲಕ್ಕೆ ವ್ಯಾಪ್ತಿ ಇರುವುದಿಲ್ಲ ಹಾಗೂ ನಾಣ್ಯ ಪರಿವರ್ತನೆಯ ಪ್ರಮೇಯವಿಲ್ಲದಿರುವು
ರಿಂದ ವ್ಯಾಪಾರವು ನಿರ್ಬಂಧಿಸಲ್ಪಡುವುದಿಲ್ಲ.

6. ವಾಣಿಜ್ಯ ನೀತಿಯಲ್ಲಿ ವೈವಿಧ್ಯತೆ (Difference in Commercial Policy): ಂತರಿಕ ವ್ಯಾಪಾರವು ಒಂದು ದೇಶದ ಸರಹದ್ದಿನೊಳಗಡೆಯೇ ನಡೆಯುತ್ತದೆ. ಆದರೆ ಂತರರಾಷ್ಟ್ರೀಯ ವ್ಯಾಪಾರವು ವಿವಿಧ ದೇಶಗಳ ಸರಹದ್ದಿಗೆ ವ್ಯಾಪಿಸಿರುತ್ತದೆ. ಂತರರಾಷ್ಟ್ರೀಯ ವ್ಯಾಪಾರದಲ್ಲಿ ರಾಜಕೀಯ ಸರಹದ್ದುಗಳ ಅಸ್ತಿತ್ವದ ಪರಿಣಾಮವಾಗಿ ್ಯಾಪಾರ ಸುಂಕಗಳು, ದೇಯಾಂಶಗಳು (Quotas), ವಿನಿಮಯ ನಿಯಂತ್ರಣ, ವಿದೇಶೀ ್ಯಾಪಾರ ವಿಕಸ್ವಾಮ್ಯ ಮೊದಲಾದ ನಿಯಂತ್ರಣಗಳನ್ನು ಮತ್ತು ನಿರ್ಬಂಧಗಳನ್ನು ಧಿಸಬೇಕಾಗುತ್ತದೆ. ಈ ವಿಧದ ನಿಯಂತ್ರಣಗಳು ಮತ್ತು ನಿರ್ಬಂಧಗಳು ಯಾವುದೊಂದು ೀಶದ ವಾಣಿಜ್ಯ ನೀತಿಯ ಅಂಗಭಾಗಗಳಾಗಿರುತ್ತವೆ. ಇವುಗಳನ್ನು ವಿಧಿಸುವಿಕೆಯಿಂದಾಗಿ ಂತರರಾಷ್ಟ್ರೀಯ ವ್ಯಾಪಾರವು ನಿರ್ಬಂಧಗೊಳ್ಳುತ್ತದೆ. ಅಂದರೆ ಇಂತಹ ನಿಯಂತ್ರಣಗಳ ಮತ್ತು ನಿರ್ಬಂಧಗಳ ಕಾರಣದಿಂದ ಅಂತರರಾಷ್ಟ್ರೀಯ ವ್ಯಾಪಾರದ ಪರಿಮಾಣ ಮತ್ತು ಬೆಲ್ಲ ಕಡಿಮೆಯಾಗುತ್ತದೆ. ಆದರೆ ಆಂತರಿಕ ವ್ಯಾಪಾರದಲ್ಲಿ ಇಂತಹ ನಿರ್ಬಂಧಗಳಿರು ುದಿಲ್ಲ.

7. ಸಾಗಣೆ ವೆಚ್ಚಗಳ ಅಸ್ತಿತ್ವ (Existence of Transport Costs): ಆಂತರಿಕ ್ಯಾಪಾರಕ್ಕಿಂತ ಅಂತರರಾಷ್ಟ್ರೀಯ ವ್ಯಾಪಾರವು ಭೌಗೋಳಿಕವಾಗಿ ಹೆಚ್ಚಿನ ದೂರವನ್ನು ಳಗೊಂಡಿರುತ್ತದೆ. ಅಂತರರಾಷ್ಟ್ರೀಯವಾಗಿ ಭೂಮಿಯ ಮತ್ತು ಸಾಗರದ ಮೂಲಕ ಂಕೀರ್ಣ ವಿಧದಲ್ಲಿ, ಹೆಚ್ಚಿನ ದೂರವನ್ನು ಕ್ರಮಿಸಿ ವ್ಯಾಪಾರವನ್ನು ನೆರವೇರಿಸ ಂಕಾಗುತ್ತದೆ. ಇದರ ಪರಿಣಾಮವಾಗಿ ಸಾಗಣೆ ವೆಚ್ಚವು ಅಧಿಕವಾಗಿರುತ್ತದೆ. ಗಣನೀಯ ಾಗುತ್ತದ ಸಾಗಣೆ ವೆಚ್ಚ ಮತ್ತು ವಿಮಾಪರ್ಚಿನಿಂದಾಗಿ ಸರಕುಗಳ ಬೆಲೆಯಲ್ಲಿ ತೀವ್ರ ಚ್ಚಳ ವಾಗುವುದರಿಂದ ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಅಡಚಣೆಯಾಗುತ್ತದೆ. ಆದರೆ ಂತರಿಕ ವ್ಯಾಪಾರದಲ್ಲಿ ಈ ರೀತಿಯ ಸಂಕೀರ್ಣತೆ ಇರುವುದಿಲ್ಲ ಮತ್ತು ಸಾಗಣೆ ವೆಚ್ಚವು ುವುದಾದರೂ ಅದು ಅಧಿಕ ಮೊತ್ತದ್ದಾಗಿರುವುದಿಲ್ಲ. ಆದ್ದರಿಂದ ಸಾಗಣೆ ವೆಚ್ಚದ ತ್ವವು ಆಂತರಿಕ ವ್ಯಾಪಾರದ ಮೇಲೆ ಪ್ರತಿಬಂಧಕವಾಗುವುದಿಲ್ಲ.

8. ಮಾರುಕಟ್ಟೆಯ ಸ್ವರೂಪದಲ್ಲಿ ಭಿನ್ನತೆಗಳು (Differences in the Nature of Market): ಅಂತರರಾಷ್ಟ್ರೀಯ ವ್ಯಾಪಾರಕ್ಕೊಳಪಟ್ಟಿರುವ ಸರಕುಗಳ ಮಾರುಕಟ್ಟೆಯು ತರಿಕ ಮಾರುಕಟ್ಟೆಗಿಂತ ಭಿನ್ನವಾಗಿರುತ್ತದೆ. ಹವಾಗುಣ, ಅಭಿರುಚಿ, ಪದ್ಧತಿಗಳು, ನಾತ್ಮಕ ಸಂಸ್ಥೆಗಳು ಮೊದಲಾದವುಗಳಲ್ಲಿ ಒಂದು ದೇಶಕ್ಕೂ ಇನ್ನೊಂದು ದೇಶಕ್ಕೂ ನಾರ್ಹ ವ್ಯತ್ಯಾಸಗಳಿರುತ್ತವೆ. ಅಂದರೆ ಅಂತರರಾಷ್ಟ್ರೀಯ ಮಾರುಕಟ್ಟೆ ಯಲ್ಲಿ ಈ ್ಯಾಸಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಆದರೆ ಆಂತರಿಕ ವ್ಯಾಪಾರಕ್ಕೊಳ ಪಟ್ಟಿರುವ

ಸರಕುಗಳ ಮಾರುಕಟ್ಟೆಯಲ್ಲಿ ಈ ವ್ಯತ್ಯಾಸಗಳು ಗಮನಾರ್ಹವಾಗಿ ಕಂಡುಬರುವುದಿಲ್ಲ.

9. ವ್ಯಾಪಾರದ ಪ್ರಯೋಜನಗಳ ಪಾಲುದಾರಿಕೆಯಲ್ಲಿ ವ್ಯತ್ಯಾಸ (Difference in Sharing of Gains from Trade): ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ವಿವಿಧ ದೇಶಗಳ ಜನರ ನಡುವೆ ಸರಕುಗಳು ವಿನಿಮಯಗೊಳ್ಳುತ್ತವೆ. ಅಂದರೆ ಅದು 'ನಮ್ಮ' ಮತ್ತು 'ಅವರ' ನಡುವಣ ವ್ಯಾಪಾರವಾಗಿರುತ್ತದೆ. ಪರಿಣಾಮವಾಗಿ ವ್ಯಾಪಾರದ ಪ್ರಯೋಜನಗಳು 'ನಮ್ಮ' ಮತ್ತು 'ಅವರ' ನಡುವೆ ಅಂದರೆ ಸ್ವದೇಶದ ಮತ್ತು ವಿದೇಶದ ನಡುವೆ ಹಂಚಿಹೋಗುತ್ತವೆ. ಪ್ರಬಲ ದೇಶವು ದುರ್ಬಲ ದೇಶವನ್ನು ಶೋಷಣೆ ಮಾಡುವುದಕ್ಕೆ ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಗಣನೀಯ ವ್ಯಾಪ್ತಿ ಇರುತ್ತದೆ. ತದ್ವಿರುದ್ಧವಾಗಿ ಆಂತರಿಕ ವ್ಯಾಪಾರವು ಒಂದು ದೇಶದ ಜನರ ನಡುವೆಯೇ ನಡೆಯುವುದರಿಂದ ಅದು 'ನಮ್ಮ' ನಡುವಿನ ವ್ಯಾಪಾರವಾಗಿರುತ್ತದೆ. ಆದ್ದರಿಂದ ವ್ಯಾಪಾರದ ಪ್ರಯೋಜನಗಳು ಸ್ವದೇಶದ ಜನರೊಳಗೆಯೇ ಹಂಚಲ್ಪಡುತ್ತವೆ. ಯಾವುದೊಂದು ದೇಶವು ತನ್ನನ್ನೇ ಶೋಷಿಸಿಕೊಳ್ಳು ವುದಕ್ಕೂ ಸಾಧ್ಯವಿರುವುದಿಲ್ಲ.

10. ಯುದ್ಧಗಳಿಂದ ಬಾಧೆ (Affliction of War): ವಿವಿಧ ದೇಶಗಳ ಅಥವಾ ವಿವಿಧ ಬಣಗಳ ದೇಶಗಳ ನಡುವೆ ಯುದ್ಧವು ಸಂಭವಿಸಿದಾಗ ಅಂತರರಾಷ್ಟ್ರೀಯ ವ್ಯಾಪಾರವು ಬಾಧಿಸಲ್ಪಡುತ್ತದೆ. ಆದರೆ ಆಂತರಿಕ ವ್ಯಾಪಾರಕ್ಕೆ ಇಂತಹ ಬಾಧೆ ಇರುವುದಿಲ್ಲ.

ಯುದ್ಧದಲ್ಲಿ ತೊಡಗಿರುವ ದೇಶವು ರಕ್ಷಣೆಗೆ ವಿಶೇಷ ಪ್ರಾಶಸ್ತ್ಯ ನೀಡಬೇಕಾಗುತ್ತದೆ. ಯುದ್ಧ ಸಾಮಗ್ರಿಗಳ ಉತ್ಪಾದನೆ, ಸೈನಿಕರ ನೇಮಕ ಇತ್ಯಾದಿ ಸಂಗತಿಗಳಿಗೆ ಆದ್ಯತೆ ಕೊಡಬೇಕಾಗುವು ದರಿಂದ ಇತರ ರೀತಿಯ ವಸ್ತುಗಳ ಉತ್ಪಾದನೆಗೆ ಅಡಚಣೆಯಾಗುತ್ತದೆ. ನಾಗರೀಕ ಅನುಭೋಗದ ಸರಕುಗಳನ್ನು ಹೆಚ್ಚಾಗಿ ಉತ್ಪಾದಿಸಲು ಮತ್ತು ರಫ್ತು ಮಾಡಲು ಯುದ್ಧನಿರತ ದೇಶಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಆ ದೇಶದ ರಫ್ತುಗಳು ಕಡಿಮೆ ಯಾಗುತ್ತವೆ. ಅಲ್ಲದೆ ವ್ಯಾಪಾರದಲ್ಲಿ ತೊಡಗಿರುವ ಎರಡು ದೇಶಗಳ ಅಥವಾ ಬಣಗಳ ನಡುವೆ ಯುದ್ಧವು ಸಂಭವಿಸಿದಾಗ ಅವು ವ್ಯಾಪಾರವನ್ನೇ ತಮ್ಮ ನಡುವೆ ಬಹಿಷ್ಕರಿಸ ಬಹುದು. ಉದಾಹರಣೆಗೆ, A ಮತ್ತು B ದೇಶಗಳು ಯುದ್ಧದಲ್ಲಿ ತೊಡಗಿದ್ದರೆ, A ದೇಶವು B ದೇಶಕ್ಕೆ ಸರಕುಗಳನ್ನು ರಫ್ತು ಮಾಡಲು ಮತ್ತು ಅಲ್ಲಿಂದ ಆಮದು ಮಾಡಿಕೊಳ್ಳಲು ಇಚ್ಛಿಸಲಾರದು. ಅಂತೆಯೇ A ದೇಶವೂ ಸಹ B ದೇಶಕ್ಕೆ ಸಂಬಂಧಿಸಿದಂತೆ ಇದೇ ನೀತಿಯನ್ನು ಅನುಸರಿಸಬಹುದು.

ಹಲವಾರು ಸಂಗತಿಗಳಿಂದಾಗಿ ಆಂತರಿಕ ವ್ಯಾಪಾರ ಮತ್ತು ಅಂತರರಾಷ್ಟ್ರೀಯ ವ್ಯಾಪಾರ ಪ್ರತ್ಯೇಕವಾಗಿವೆ ಎಂಬ ಸಂಗತಿಯು ಮೇಲಿನ ಚರ್ಚೆಯಿಂದ ವೇದ್ಯವಾಗುತ್ತದೆ. ಆದರೆ ಇವು ಪರಿಪೂರ್ಣವಾಗಿ ಭಿನ್ನವೆಂದು ಹೇಳಲು ಬರುವುದಿಲ್ಲ. ಏಕೆಂದರೆ ಶ್ರಮ ಮತ್ತು ಬಂಡವಾಳದ ಚಲನರಹಿತತೆಯು ದೇಶದ ಒಳಗಡೆಯೂ ಕಂಡು ಬರುತ್ತದೆ. ಒಂದು ದೇಶದ

ವಿವಿಧ ಪ್ರದೇಶಗಳ ಜನರ ನಡುವೆಯೂ ಭಾಷೆ, ಧರ್ಮ, ಆಚಾರ-ವಿಚಾರಗಳು, ಆಹಾರ ಪದ್ಧತಿ ಮೊದಲಾದವುಗಳಲ್ಲಿ ಭಿನ್ನತೆ ಇರುತ್ತದೆ. ಅಂತೆಯೇ ವಿವಿಧ ಪ್ರಾಂತೀಯ ಸರ್ಕಾರಗಳು ವಿಭಿನ್ನ ತೆರಿಗೆ ನೀತಿ, ಬಡ್ಡಿ ದರದ ನೀತಿ ಮತ್ತು ವ್ಯಾಪಾರ ನೀತಿಯನ್ನು ಪಾಲಿಸಬಹುದು. ಜೊತೆಗೆ ನೈಸರ್ಗಿಕ ಸಂಪನ್ಮೂಲಗಳು ಹಾಗೂ ಹವಾಮಾನದಲ್ಲಿ ವೈವಿಧ್ಯತೆಗಳಿರುವುದು ನಿಶ್ಚಯ. ಆದ್ದರಿಂದ ಆಂತರಿಕ ಮತ್ತು ಅಂತರರಾಷ್ಟ್ರೀಯ ವ್ಯಾಪಾರದ ನಡುವೆ ಅಂತಹ ವ್ಯತ್ಯಾಸಗಳೇನೂ ಇಲ್ಲವೆಂದು ಕೆಲವು ಅರ್ಥಶಾಸ್ತ್ರಜ್ಞರು ವಾದಿಸಿದ್ದಾರೆ. ಮೇಲೆ ತಿಳಿಸಿದ ಭಿನ್ನತೆಗಳು ಅಂತರರಾಷ್ಟ್ರೀಯವಾಗಿ ಉಗ್ರವಾಗಿಯೂ, ಆಂತರಿಕವಾಗಿ ಸೌಮ್ಯವಾಗಿಯೂ ಇರುವುದರಿಂದ ಆಂತರಿಕ ವ್ಯಾಪಾರವು ಅಂತರರಾಷ್ಟ್ರೀಯ ವ್ಯಾಪಾರದ ಬೇರೊಂದು ರೂಪವೇ ಹೊರತು ಅವೆರಡು ಸಂಪೂರ್ಣವಾಗಿ ಪ್ರತ್ಯೇಕವಾದವುಗಳಲ್ಲ ಎಂದು ಹೇಳಲಾಗಿದೆ. ಎರಡೂ ವ್ಯಾಪಾರಗಳಲ್ಲಿಯೂ ಶ್ರಮವಿಭಜನೆಯೇ ಬುನಾದಿಯಾಗಿದೆ. ಭೌಗೋಳಿಕ, ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಭಿನ್ನತೆಗಳು ಹಾಗೂ ಶ್ರಮ ಮತ್ತು ಬಂಡವಾಳದ ಚಲನರಹಿತತೆಯು ಅಂತರರಾಷ್ಟ್ರೀಯವಾಗಿ ಬಹಳ ಅಧಿಕವಾಗಿದ್ದರೆ, ಆಂತರಿಕವಾಗಿ ಕಡಿಮೆ ಪ್ರಮಾಣದಲ್ಲಿರುತ್ತದೆ. ಆದ್ದರಿಂದ ಆಂತರಿಕ ಮತ್ತು ಆಂತರರಾಷ್ಟ್ರೀಯ ವ್ಯಾಪಾರದ ನಡುವಣ ಭಿನ್ನತೆಯು ಶ್ರೇಣಿಯಲ್ಲಿದೆಯೇ ಹೊರತು ವಿಧದಲ್ಲಲ್ಲ. (The difference between internal and international trade is one of degree and not of kind).

ಅಂದರೆ ಆಂತರಿಕ ವ್ಯಾಪಾರ ಮತ್ತು ಅಂತರರಾಷ್ಟ್ರೀಯ ವ್ಯಾಪಾರ ಹೆಚ್ಚು ಕಡಿಮೆ ಒಂದೇ ವಿಧ ಎಂದು ಹೇಳಬಹುದು. ಏಕೆಂದರೆ ಎರಡೂ ವಿಧಗಳ ವ್ಯಾಪಾರದಲ್ಲಿ ಶ್ರಮದ ಚಲನರಹಿತತೆ, ಸಾಗಣೆ ವೆಚ್ಚದ ಅಸ್ತಿತ್ವ, ಹಲವು ರೀತಿಯ ನಿಬಂಧನೆಗಳು ಇತ್ಯಾದಿ ಕಂಡು ಬರುತ್ತವೆ. ಆ ಪ್ರಕಾರ, ಇವುಗಳ ನಡುವಿನ ವ್ಯತ್ಯಾಸ ಕೇವಲ ಶ್ರೇಣಿಯದು ಎನ್ನಬಹುದು. ಉದಾಹರಣೆಗೆ, ಆಂತರಿಕ ಮತ್ತು ಅಂತರರಾಷ್ಟ್ರೀಯ ವ್ಯಾಪಾರ ಎರಡರಲ್ಲಿಯೂ ಶ್ರಮದ ಚಲನಶೀಲತೆಯು ಕೊರತೆ ಇರುತ್ತದೆ. ಆದರೆ ಈ ಚಲನೆಯ ಪ್ರಮಾಣವು ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಅಧಿಕವಾಗಿದ್ದರೆ, ಆಂತರಿಕ ವ್ಯಾಪಾರದಲ್ಲಿ ಕಡಿಮೆ ಇರುತ್ತದೆ. ವಿಶ್ಲೇಷಣೆಯ ದೃಷ್ಟಿಯಿಂದ ಕೇವಲ ಊಹನಾತ್ಮಕವಾಗಿ ನೋಡುವುದಾದರೆ, ಶ್ರಮದ ಚಲನರಹಿತತೆಯು ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಶೇಕಡ 80ರಷ್ಟಿದ್ದರೆ, ಆಂತರಿಕ ವ್ಯಾಪಾರದಲ್ಲಿಯೂ ಶೇಕಡ 30 ರಷ್ಟಿರಬಹುದು. ಅಂತೆಯೇ ಸಾಗಣೆ ವೆಚ್ಚವು ಎರಡು ರೀತಿಗಳ ವ್ಯಾಪಾರದಲ್ಲಿ ಅಸ್ತಿತ್ವದಲ್ಲಿರುತ್ತದೆ. ಆದರೆ ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಅದು ಹೆಚ್ಚಾಗಿದ್ದರೆ, ಆಂತರಿಕ ವ್ಯಾಪಾರದಲ್ಲಿ ಕಡಿಮೆ ಇರಬಹುದು. ವ್ಯಾಪಾರಕ್ಕೆ ಒಳಪಟ್ಟ ಸರಕಿನ ಒಟ್ಟು ಉತ್ಪಾದನಾ ವೆಚ್ಚದಲ್ಲಿ ಸಾಗಣೆ ವೆಚ್ಚದ ಪಾಲು ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಶೇಕಡ 20ರಷ್ಟಿದ್ದರೆ, ಆಂತರಿಕ ವ್ಯಾಪಾರದಲ್ಲಿ ಶೇಕಡ 10ರಷ್ಟಿರುತ್ತದೆ ಎಂದು ಊಹಿಸಬಹುದು. ಆ ಪ್ರಕಾರ, ಆಂತರಿಕ ವ್ಯಾಪಾರ ಮತ್ತು ಅಂತರ ರಾಷ್ಟ್ರೀಯ

ವ್ಯಾಪಾರ ಒಂದೇ ವಿಧದವುಗಳಾಗಿದ್ದು, ಅವುಗಳ ನಡುವಣ ಭಿನ್ನತೆಯು ಕೇವಲ ಶ್ರೇಣಿಯದಾಗಿವೆ ಎಂಬ ನಿರ್ಣಯವನ್ನು ತಲುಪುವುದು ಸಮಂಜಸವಾಗುತ್ತದೆ.

ವ್ಯಾಪಾರವು ಅಂತರರಾಷ್ಟ್ರೀಯದ್ದಾಗಿರಲಿ ಅಥವಾ ಆಂತರಿಕದ್ದಾಗಿರಲಿ ಅದು ಕೆಲವು ನಿರ್ದಿಷ್ಟ ಸರಕುಗಳನ್ನು ಮತ್ತು ಸೇವೆಗಳನ್ನು ಇತರ ಸರಕುಗಳು ಮತ್ತು ಸೇವೆಗಳೊಡನೆ ವಿನಿಮಯ ಮಾಡಿಕೊಳ್ಳುವ ಪ್ರಕ್ರಿಯೆಯಾಗಿರುತ್ತದೆ. ಈ ಮೂಲಭೂತ ದೃಷ್ಟಿಕೋನದಿಂದ ಗಮನಿಸಿದಾಗ ಅಂತರರಾಷ್ಟ್ರೀಯ ವ್ಯಾಪಾರ ಮತ್ತು ಆಂತರಿಕ ವ್ಯಾಪಾರ ಒಂದೇ ಆಗಿರುತ್ತವೆ. ಅನುಭೋಗಿಗಳಿಗೆ ಆರ್ಥಿಕ ತುಷ್ಟಿಗುಣ ಅಥವಾ ತೃಪ್ತಿಯನ್ನು ಒದಗಿಸುವುದೇ ಪ್ರತಿಯೊಂದು ವ್ಯಾಪಾರದ ಅಂತಿಮ ಧ್ಯೇಯವಾಗಿರುತ್ತದೆ. ತನ್ನ ಬಳಿ ಯಥೇಚ್ಛವಾಗಿರುವ ಸರಕುಗಳನ್ನು ಕೊಟ್ಟು ಕೊರತೆಯಿಂದಿರುವ ಸರಕುಗಳನ್ನು ಪಡೆಯುವುದೇ ವಿನಿಮಯದ ಮೂಲೋದ್ದೇಶವಾಗಿರುವುದರಿಂದ ವ್ಯಾಪಾರದ ಮೂಲಕ ಪ್ರತಿಯೊಬ್ಬ ವ್ಯಕ್ತಿಗೆ ಅಥವಾ ಪ್ರತಿಯೊಂದು ಸಮುದಾಯಕ್ಕೂ ನಿವ್ವಳ ಪ್ರಯೋಜನವು ಲಭಿಸುತ್ತದೆ. ಒಬ್ಬ ವ್ಯಕ್ತಿಯು ಗೋಧಿಯನ್ನೂ ಮತ್ತೊಬ್ಬ ವ್ಯಕ್ತಿಯು ಬಟ್ಟೆಯನ್ನೂ ಉತ್ಪಾದಿಸುತ್ತಿದ್ದು, ಇಬ್ಬರೂ ತಮ್ಮ ಬಳಿ ಇರುವ ಹೆಚ್ಚುವರಿ ಪರಿಮಾಣವನ್ನು ವಿನಿಮಯ ಮಾಡಿಕೊಂಡರೆ ಇಬ್ಬರಿಗೂ ಪ್ರಯೋಜನವಾಗುತ್ತದೆ.

C. ವ್ಯಾಪಾರ ಸಿದ್ಧಾಂತಗಳು : ವಾಣಿಜ್ಯ ಪಂಥದವರ ಭಾವನೆಗಳು (Trade Theories : Mercantilist View)

ಪೀಠಿಕೆ

ಹದಿನೆಂಟನೆಯ ಶತಮಾನದಲ್ಲಿ ಸಂಪ್ರದಾಯದ ಪಂಥದ ಅರ್ಥಶಾಸ್ತ್ರಜ್ಞರ ತತ್ವಗಳೊಡನೆ ಕ್ರಮಬದ್ಧವಾದ ಆರ್ಥಿಕ ಚಿಂತನೆಯು ಬೆಳೆಯಲು ಪ್ರಾರಂಭವಾಗುವ ಮೊದಲು ವಾಣಿಜ್ಯ ಪಂಥದ ಲೇಖಕರ ಕೊಡುಗೆಗಳಿಂದಾಗಿ ವ್ಯವಸ್ಥಿತವಾದ ಆರ್ಥಿಕ ಚಿಂತನೆಗೆ ಭೂಮಿಕೆಯು ಸಿದ್ಧಗೊಳಿಸಲ್ಪಟ್ಟಿತು.

15ನೆಯ ಶತಮಾನದ ಮಧ್ಯಭಾಗದಿಂದ 18ನೆಯ ಶತಮಾನದ ಮಧ್ಯಭಾಗದವರೆಗೆ ಯುರೋಪಿನಲ್ಲಿ ಪ್ರಚಲಿತವಿದ್ದ ಆರ್ಥಿಕ ಭಾವನೆಗಳನ್ನು ಮತ್ತು ನೀತಿಗಳನ್ನು ಒಟ್ಟಾರೆಯಾಗಿ "ವಾಣಿಜ್ಯ ಪಂಥ" ಅಥವಾ "ವಾಣಿಜ್ಯ ವಾದ" ಎಂದು ಕರೆಯಲಾಗುತ್ತದೆ. 15ನೇ ಶತಮಾನದ ಮಧ್ಯಭಾಗದವರೆಗೂ ಆರ್ಥಿಕ ಮತ್ತು ಸಾಮಾಜಿಕ ಜೀವನವು ಮಧ್ಯಯುಗದ ಸಂಸ್ಥೆಗಳ ಮತ್ತು ಚಿಂತನೆಯ ಪ್ರಭಾವದಲ್ಲಿಯೇ ಇತ್ತು. ಅಂದರೆ ಆ ಕಾಲದಲ್ಲಿ ಪಾದ್ರಿಗಳು ಪ್ರಬಲವಾದ ವರ್ಚಸ್ಸನ್ನು ಹೊಂದಿದ್ದರು. ಮಧ್ಯಯುಗದ ಪ್ರಾರಂಭದಲ್ಲಿದ್ದ ಸೈನಿಕ ವರ್ಗವು ಭೂಮಾಲಿಕರಾಗಿ ಆಯಕಟ್ಟಿನ ಜಾಗವನ್ನು ಆಕ್ರಮಿಸಿಕೊಂಡಿದ್ದರು. ಆದರೆ 15ನೇ ಶತಮಾನದ ಉತ್ತರಾರ್ಧದಲ್ಲಿ ಈ ಸ್ಥಿತಿಗತಿಗಳು ಬದಲಾಗತೊಡಗಿದವು. ರಾಜಕೀಯ ಕ್ಷೇತ್ರದಲ್ಲಿ ರಾಷ್ಟ್ರೀಯ ಸರ್ಕಾರದ ಕಲ್ಪನೆ ಮಾನ್ಯತೆ ಪಡೆದುಕೊಂಡಿತು. ಆರ್ಥಿಕ

ವಲಯದಲ್ಲಿ ವ್ಯಾಪಾರ, ವಾಣಿಜ್ಯ ಮತ್ತು ಸಂಪತ್ತಿನ ಶೇಖರಣೆಗೆ ಪ್ರಾಧಾನ್ಯ ದೊರೆಯಿತು. "ವ್ಯಾಪಾರಿ ವರ್ಗ" ಎಂಬ ಹೊಸ ವರ್ಗವು ಜನ್ಮ ತಳೆಯಿತು. ಸಂಪತ್ತಿನ ಶೇಖರಣೆ ಮತ್ತು ಸಿರಿವಂತಿಕೆಯನ್ನು ಪಡೆಯುವಿಕೆ ಪರಮ ಧ್ಯೇಯಗಳಾದವು. ವ್ಯಾಪಾರ ಮತ್ತು ವಾಣಿಜ್ಯ ಇದಕ್ಕೆ ಅತ್ಯಾವಶ್ಯಕ ಸಾಧನಗಳೆಂದು ಪರಿಗಣಿಸಲ್ಪಟ್ಟವು. ಈ ವಿಧದ ಚಿಂತನೆಯನ್ನು "ವಾಣಿಜ್ಯ ವಾದ" ಎಂದು ಕರೆಯಲಾಗಿದೆ. ಆ ಪ್ರಕಾರ ವ್ಯಾಪಾರ, ವಾಣಿಜ್ಯ ಮತ್ತು ರಫ್ತುಗಳ ಹೆಚ್ಚಳದ ಮೂಲಕ ರಾಷ್ಟ್ರಾಭಿವೃದ್ಧಿಯನ್ನು ಸಾಧಿಸಬಹುದೆಂದು ಅಚಲವಾಗಿ ನಂಬಿರುವ ಚಿಂತಕರ ಗುಂಪಿಗೆ "ವಾಣಿಜ್ಯ ಪಂಥ" ಎಂದು ಹೆಸರು.

ವಾಣಿಜ್ಯ ವಾದವನ್ನು ಮಧ್ಯಯುಗೀನ ತತ್ವಗಳ ಮತ್ತು ಜೀವನ ವಿಧಾನದ ವಿರುದ್ಧ ಪ್ರಬಲವಾದ ದಂಗೆ ಎಂದು ಅರ್ಥೈಸಬಹುದಾಗಿದೆ. ಏಕೆಂದರೆ ಈ ಚಿಂತನೆಯಿಂದಾಗಿ ವಾಣಿಜ್ಯಾತ್ಮಕ ಅಂತರರಾಷ್ಟ್ರೀಯ ವಾದವು ಪ್ರಾಬಲ್ಯ ಪಡೆಯಿತು. ಪರಿಣಾಮವಾಗಿ ಪಾದ್ರಿಗಳ ಮಹತ್ವ ನಶಿಸಿತು. ನಿಶ್ಚಲವಾಗಿದ್ದ ಸಾಮಾಜಿಕ ಮತ್ತು ಆರ್ಥಿಕ ರಚನೆಯು ಛಿದ್ರಗೊಂಡು ಪ್ರಗತಿಪರವಾದ ಸಮಾಜದ ಬೆಳವಣಿಗೆಗೆ ನಾಂದಿಯಾಯಿತು.

ವಾಣಿಜ್ಯ ಪಂಥದವರ ಪ್ರಕಾರ ವ್ಯಾಪಾರದಿಂದ ಮಾತ್ರ ರಾಷ್ಟ್ರದ ಸಂಪತ್ತನ್ನು ಹೆಚ್ಚಿಸಬಹುದಾಗಿದೆ. ಸುಮಾರು ಮೂರು ಶತಮಾನಗಳವರೆಗೆ ವಾಣಿಜ್ಯ ವಾದವು ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಸ್ಪೈನ್, ಇಟಲಿ ಮತ್ತಿತರ ಯೂರೋಪಿನ ದೇಶಗಳಲ್ಲಿ ಪ್ರಬಲವಾದ ಶಕ್ತಿಯಾಗಿತ್ತು. ವಾಣಿಜ್ಯ ಪಂಥದವರು ದೇಶದ ಸಂಪತ್ತನ್ನು ಅದು ಹೊಂದಿರುವ ಚಿನ್ನ ಮತ್ತು ಬೆಳ್ಳಿಯ ಮೂಲಕ ಅಳೆಯಬಹುದೆಂದು ಭಾವಿಸಿದ್ದರಿಂದ ವಾಣಿಜ್ಯ ವಾದವನ್ನು "ಬುಲಿಯನಿಸಮ್" (Bullionism) ಎಂಬ ಹೆಸರಿನಿಂದಲೂ ಕರೆಯಲಾಗುತ್ತದೆ. ವಾಣಿಜ್ಯ ವಾದವನ್ನು ಜರ್ಮನಿಯಲ್ಲಿ "ಕ್ಯಾಮೆರಲಿಸಮ್" (Kameralism) ಎಂತಲೂ, ಫ್ರಾನ್ಸಿನಲ್ಲಿ "ಕಾಲ್ಬರ್ಟಿಸಮ್" (Colbertism) ಎಂತಲೂ ಸಂಬೋಧಿಸಲಾಗುತ್ತಿತ್ತು.

ವಾಣಿಜ್ಯ ಪಂಥದ ಆರ್ಥಿಕ ತತ್ವಗಳು

(Economic Ideas of Mercantilism)

ವಾಣಿಜ್ಯ ಪಂಥದ ಚಿಂತಕರ ಪ್ರಮುಖ ಆರ್ಥಿಕ ತತ್ವಗಳನ್ನು ಈಗ ತಿಳಿದುಕೊಳ್ಳೋಣ.

1. ಸಂಪತ್ತು (Wealth): ವಾಣಿಜ್ಯ ಪಂಥದವರ ಪ್ರಕಾರ ದೇಶದ ಬಲವು ಅದರ ಸಂಪತ್ತಿನಲ್ಲಿ ಅಡಗಿದೆ. ಸಂಪತ್ತು ಎಂದರೆ ಅಮೂಲ್ಯ ಲೋಹಗಳಾದ ಚಿನ್ನ ಮತ್ತು ಬೆಳ್ಳಿಯ ಸಂಗ್ರಹ ಎಂದರ್ಥ. ಸಂಪತ್ತಿನ ಆರ್ಜನೆಯ ಅಂಗವಾಗಿ ಚಿನ್ನ ಮತ್ತು ಬೆಳ್ಳಿಯ ಗಟ್ಟಿಗಳ (Bullion) ಶೇಖರಣೆಗೆ ಅವರು ಮಹತ್ವ ನೀಡಿದರು. ಈ ಲೋಹಗಳ ಗಟ್ಟಿಗಳು ಬಹುಕಾಲ ಬಾಳುವಂತಹವೂ, ಹೆಚ್ಚು ಉಪಯುಕ್ತವಾದವುಗಳೂ ಮತ್ತು ಸಾರ್ವತ್ರಿಕವಾಗಿ ಸ್ವೀಕಾರವಾಗುವಂತಹವುಗಳಾಗಿರುತ್ತವೆ ಎಂಬುದು ಅವರ ಅನಿಸಿಕೆಯಾಗಿತ್ತು. ರಾಷ್ಟ್ರದಲ್ಲಿ ಗಣಿಗಳಿದ್ದರೆ ಅದು ಚಿನ್ನ ಮತ್ತು ಬೆಳ್ಳಿಯನ್ನು ಪಡೆಯಬಹುದು. ಆದರೆ ಗಣಿಗಳಿಲ್ಲದಿದ್ದರೆ

ಅಂತಹ ರಾಷ್ಟ್ರವು ವ್ಯಾಪಾರದ ಮೂಲಕ ಚಿನ್ನ ಮತ್ತು ಬೆಳ್ಳಿಯನ್ನು ಗಳಿಸಬಹುದೆಂದು ವಾಣಿಜ್ಯ ಪಂಥದವರು ಭಾವಿಸಿದ್ದರು. ಚಿನ್ನವು ಹೆಚ್ಚಾಗಿ ದೇಶಕ್ಕೆ ಲಭಿಸುವ ರೀತಿಯಲ್ಲಿ ವ್ಯಾಪಾರವನ್ನು ನಡೆಸಬೇಕೆಂದು ಅವರು ಸಲಹೆ ಮಾಡಿದ್ದರು. ಅಂದರೆ ಆಮದುಗಳಿಗಿಂತ ರಫ್ತುಗಳು ಹೆಚ್ಚಾಗಿರುವಂತಹ ವ್ಯಾಪಾರ ನೀತಿಯನ್ನು ಅನುಸರಿಸಬೇಕೆಂಬುದು ಅವರ ವಾದವಾಗಿತ್ತು. ಅಲೆಗ್ಸಾಂಡರ್ ಗ್ರೇ ಹೇಳುವ ಪ್ರಕಾರ ರಫ್ತುಗಳನ್ನು ಗರಿಷ್ಠಗೊಳಿಸಿ, ಆಮದುಗಳನ್ನು ಕನಿಷ್ಠಗೊಳಿಸುವುದು ವಾಣಿಜ್ಯ ಪಂಥದವರ ಪ್ರಾಥಮಿಕ ತತ್ವವಾಗಿತ್ತು.

2. ಹಣದ ಪಾತ್ರ (Role of Money): ಹಣವು ಅತಿ ಮುಖ್ಯವಾದ ಸಂಪತ್ತಿನ ರೂಪವೆಂದು ವಾಣಿಜ್ಯವಾದಿಗಳು ಭಾವಿಸಿದ್ದರು. ಅಮೂಲ್ಯ ಲೋಹಗಳ ರೂಪದಲ್ಲಿರುವ ಹಣವು ರಾಷ್ಟ್ರದ ಆರ್ಥಿಕಾಭಿವೃದ್ಧಿಯಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ ಎಂಬುದು ಅವರ ಅಚಲ ನಂಬಿಕೆಯಾಗಿತ್ತು. ದೇಶದ ಸುರಕ್ಷತೆ, ಯುದ್ಧ ಮಾಡುವಿಕೆ ಮತ್ತು ಯಾವುದೇ ವಸ್ತುವಿನ ಖರೀದಿಗೆ ಹಣವು ಆವಶ್ಯಕವಾಗಿರುವುದರಿಂದ ಹಣದ ಪ್ರಾಮುಖ್ಯವನ್ನು ಎಷ್ಟು ವರ್ಣಿಸಿದರೂ ಕಡಿಮೆಯೇ ಎಂದು ವಾಣಿಜ್ಯ ಪಂಥದ ಚಿಂತಕರು ಸಾರಿದರು. ಹಣವು ರಾಷ್ಟ್ರದ ಕಲ್ಯಾಣವನ್ನು ಹೆಚ್ಚಿಸುವ ಸಾಧನವೆಂದು ಆಗ ವ್ಯಾಪಕವಾಗಿ ನಂಬಲಾಗಿತ್ತು. ವಾಣಿಜ್ಯ ವಾದಿಗಳಲ್ಲಿ ಕೆಲವರು ಹಣದ ಸಂಪತ್ತಿನ ಸಂಗ್ರಹಣೆಯ ಕಾರ್ಯಕ್ಕೆ ಪ್ರಾಮುಖ್ಯ ನೀಡಿದರೆ ಇನ್ನುಳಿದ ಕೆಲವರು ಹಣದ ಚಲಾವಣೆಯ ಕಾರ್ಯಕ್ಕೆ ಪ್ರಾಮುಖ್ಯತೆ ನೀಡಿದ್ದಾರೆ. ಹಣದ ಮಹತ್ವವನ್ನು ಸರಿಯಾಗಿ ನಿರೂಪಿಸುವ ಮೂಲಕ ವಾಣಿಜ್ಯ ವಾದಿಗಳು ಇನ್ನು ಮುಂದೆ ಆಗಬಹುದಾಗಿದ್ದ ವಿದ್ಯಮಾನವನ್ನು ತಮ್ಮ ಕಾಲದಲ್ಲಿಯೇ ಗ್ರಹಿಸಿದ್ದರು ಎಂಬ ಕೇನ್ಸ್‌ನ ಮಾತು ಸುಸಂಬದ್ಧವಾಗಿದೆ.

ಯುದ್ಧದ ದೃಷ್ಟಿಯಿಂದಲೂ ರಾಜನಿಗೆ ಹೇರಳವಾದ ಹಣದ ಆವಶ್ಯಕತೆ ಇತ್ತು. ಸೈನಿಕರ ಪೋಷಣೆ ಹಾಗೂ ಉಡುಪಿಗೆ ಮತ್ತು ರಕ್ಷಣಾ ಸಾಮಗ್ರಿಗಳಿಗಾಗಿ ಅಪಾರ ಮೊತ್ತದ ವೆಚ್ಚ ತಗಲುತ್ತಿತ್ತು. ಯುದ್ಧವನ್ನು ಗೆಲ್ಲಲು ಧೈರ್ಯಕ್ಕೆ ಬದಲಾಗಿ ಹಣವೇ ಪ್ರಧಾನವಾದ ಅಂಶವೆಂದು ಹೇಳಲಾಗುತ್ತಿತ್ತು. ಇಂತಹ ಸನ್ನಿವೇಶದಲ್ಲಿ ವಾಣಿಜ್ಯ ವಾದಕ್ಕೆ ಸಹಜ ಮನ್ನಣೆ ದೊರೆತಿದ್ದುದರಲ್ಲಿ ಆಶ್ಚರ್ಯವಿಲ್ಲ.

3. ವ್ಯಾಪಾರದ ಮಹತ್ವ (Importance of Trade): ವ್ಯಾಪಾರವು ಮಹತ್ವದ ವೃತ್ತಿ ಎಂದು ವಾಣಿಜ್ಯವಾದಿಗಳು ಪರಿಗಣಿಸಿದ್ದರು. ಇದಕ್ಕೆ ಕಾರಣವೆಂದರೆ, ವಿದೇಶಿ ವ್ಯಾಪಾರವು ರಾಷ್ಟ್ರದ ಸಂಪತ್ತನ್ನು ಅಧಿಕಗೊಳಿಸುವ ಸಾಧನವೆಂದು ಅವರು ನಂಬಿದ್ದರು. ಕೈಗಾರಿಕೆ ಮತ್ತು ತಯಾರಿಕಾ ಕ್ಷೇತ್ರಗಳಿಗೆ ವಾಣಿಜ್ಯ ಪಂಥದ ಚಿಂತಕರು ಎರಡನೇ ಸ್ಥಾನವನ್ನು ನೀಡಿದ್ದರು. ಅವರ ಪ್ರಕಾರ ವ್ಯವಸಾಯವು ಕನಿಷ್ಠ ಪ್ರಾಶಸ್ತ್ಯದ ವೃತ್ತಿಯಾಗಿತ್ತು. ಕೃಷಿಯು ಜನಸಂಖ್ಯೆಗೆ ಆಹಾರವನ್ನು ಒದಗಿಸಿದರೂ ಸಹ ದೇಶಕ್ಕೆ ಚಿನ್ನ ಮತ್ತು ಬೆಳ್ಳಿಯ ರೂಪದಲ್ಲಿ ಹಣವನ್ನು ಗಳಿಸಿಕೊಡಲು ಅಸಮರ್ಥವಾಗಿರುವುದರಿಂದ ಅದಕ್ಕೆ ಪ್ರಾಮುಖ್ಯದ ಸ್ಥಾನ

ನೀಡುವುದು ಸರಿಯಲ್ಲವೆಂಬುದು ಅವರ ಅಭಿಮತವಾಗಿತ್ತು.

ವ್ಯಾಪಾರದ ಮೂಲಕ ಹಣವು ದೇಶದೊಳಕ್ಕೆ ಪ್ರವಹಿಸಬೇಕಾದರೆ ಅನುಕೂಲಕರವಾದ ವ್ಯಾಪಾರ ಶಿಲ್ಕು (Balance of Trade) ಇರಬೇಕೆಂಬುದು ವಾಣಿಜ್ಯ ಪಂಥದ ಲೇಖಕರ ನಂಬಿಕೆಯಾಗಿತ್ತು. ಅಂದರೆ ಆ ದೇಶದ ರಫ್ತುಗಳು ಅದರ ಆಮದುಗಳಿಗಿಂತ ಹೆಚ್ಚಾಗಿರಬೇಕು. ಅನುಕೂಲಕರವಾದ ವ್ಯಾಪಾರ ಶಿಲ್ಕನ್ನು ಸಾಧಿಸುವ ದೃಷ್ಟಿಯಿಂದ ಸರ್ಕಾರದ ಹಸ್ತಕ್ಷೇಪವು ಅಗತ್ಯವೆಂದು ಅವರು ವಾದಿಸಿದರು. ಈ ಸಂಬಂಧದಲ್ಲಿ ಆಮದುಗಳ ನಿಯಂತ್ರಣ, ಸ್ವದೇಶಿ ಕೈಗಾರಿಕೆಗಳಿಗೆ ರಕ್ಷಣೆ ಮುಂತಾದ ನೀತಿಗಳು ಗಮನಾರ್ಹವಾಗಿ ಕಾರ್ಯ ಸಾಧಿಸುತ್ತವೆ ಎಂಬುದು ವಾಣಿಜ್ಯವಾದಿಗಳ ನಿಲುವಾಗಿತ್ತು.

4. ಅಧಿಕಾರಯುತ ಆಡಳಿತ ನಿರ್ವಹಣೆ (Authoritative Administration): ಊಳಿಗಮಾನ್ಯ ಪದ್ಧತಿಯು ಅಳಿದು ರಾಷ್ಟ್ರೀಯವಾದವು ತಲೆ ಎತ್ತಿತು. ಕೇಂದ್ರೀಕೃತ ಸರ್ಕಾರದ ವ್ಯವಸ್ಥೆಯನ್ನು ಬೆಳೆಸಬೇಕೆಂಬುದು ಆಗಿನ ಕಾಲದ ವಿದ್ಯಮಾನವಾಗಿತ್ತು. ಆದರೆ ಸ್ಥಳೀಯ ಘಟಕಗಳ ಆರ್ಥಿಕತೆ ಮತ್ತು ಕೇಂದ್ರ ಸರಕಾರದ ನಡುವೆ ಘರ್ಷಣೆಗಳು ಪ್ರಾರಂಭವಾದುದರಿಂದ ನಿರಂಕುಶಪ್ರಭುತ್ವವು ಸ್ಥಾಪನೆಗೊಳ್ಳಬೇಕೆಂಬ ಹೆಬ್ಬಯಕೆ ಮೂಡಿತು. ಮ್ಯಾಕಿಯಾವೆಲ್ಲಿ ಮೊದಲಾದ ಬರಹಗಾರರು ನಿರಂಕುಶಾಧಿಕಾರವನ್ನು ಪ್ರಬಲವಾಗಿ ಪ್ರತಿಪಾದಿಸಿದರು. ಆಗ ಅಸ್ತಿತ್ವದಲ್ಲಿದ್ದ ವೃತ್ತಿ ಸಂಘಗಳು, ಶ್ರೀಮಂತ ವರ್ಗ ಮತ್ತು ಸ್ಥಳೀಯ ಸರ್ಕಾರಗಳ ನಡುವಿನ ಘರ್ಷಣೆಯಿಂದ ರಾಷ್ಟ್ರವನ್ನು ಪಾರು ಮಾಡಲು ನಿರಂಕುಶಪ್ರಭುತ್ವವೇ ಸಿದ್ಧೌಷಧವೆಂದು ವ್ಯಾಪಕವಾಗಿ ಪರಿಗಣಿಸಲಾಯಿತು. ಅಧಿಕಾರಯುತವಾಗಿ ಆಡಳಿತವನ್ನು ನಡೆಸಲು ಮತ್ತು ಜನರ ಯೋಗಕ್ಷೇಮಕ್ಕಾಗಿ ಹೆಚ್ಚು ಮಾಡಲು ರಾಜನಿಗೆ ಹೆಚ್ಚಿನ ಸಂಪತ್ತಿನ ಅವಶ್ಯಕತೆ ಇತ್ತು. ವ್ಯಾಪಾರ ಮತ್ತು ವಾಣಿಜ್ಯ ಸಂಪತ್ತಿನ ಕೇಂದ್ರೀಕರಣಕ್ಕೆ ಸಾಧನಗಳೆಂದು ತೋರಿಬಂದವು. ಅಧಿಕಾರವು ಸಂಪತ್ತಿನಲ್ಲಿ ಅಡಗಿದೆ ಎಂಬ ವಾಸ್ತವತೆಗೆ ರಾಜರುಗಳು ಮಾರುಹೋಗಬೇಕಾಯಿತು.

ಅಂತರರಾಷ್ಟ್ರೀಯ ವ್ಯಾಪಾರ ಮತ್ತು ಅಂತರರಾಷ್ಟ್ರೀಯ ಸಂಬಂಧಗಳನ್ನು ಅಭಿವೃದ್ಧಿಪಡಿಸಿಕೊಳ್ಳಬೇಕೆಂಬ ಇಂಗಿತ ಪ್ರಬಲಗೊಂಡಿತು. ಎಲ್ಲಾ ದೇಶಗಳೂ ನೌಕಾ ಸಾರಿಗೆಯಲ್ಲಿ ಸಾರ್ವಭೌಮತ್ವವನ್ನು ಸಾಧಿಸಬೇಕೆಂಬ ಧ್ಯೇಯದಿಂದ ಕಾರ್ಯ ಪ್ರವೃತ್ತವಾದವು.

ಸಂಪ್ರದಾಯ ಪಂಥದ ಅಂತರರಾಷ್ಟ್ರೀಯ ವ್ಯಾಪಾರ ಸಿದ್ಧಾಂತ
(Classical Theory of International Trade)

ಅಂತರರಾಷ್ಟ್ರೀಯ ವ್ಯಾಪಾರದ ಉಗಮದ ಕಾರಣಗಳು ಮತ್ತು ಅದು ನೆರವೇರುವ ಕ್ರಿಯೆಯನ್ನು ಕುರಿತು ಸಂಪದ್ರಾಯ ಪಂಥದವರಿಂದ ಪ್ರಾರಂಭಗೊಂಡು ಇಂದಿನವರೆಗೆ ನೇಕ ಅರ್ಥಶಾಸ್ತ್ರಜ್ಞರು ಅನೇಕ ಸಿದ್ಧಾಂತಗಳನ್ನು ರೂಪಿಸಿದ್ದಾರೆ. ಸಂಪ್ರದಾಯ ಪಂಥದ

ಅಂತರರಾಷ್ಟ್ರೀಯ ವ್ಯಾಪಾರ ಸಿದ್ಧಾಂತವು ಆ್ಯಡಂಸ್ಮಿತ್ ಮತ್ತು ದೇವಿಡ್ ರಿಕಾರ್ಡೋ ಅವರಿಂದ ಪ್ರತಿಪಾದಿಸಲ್ಪಟ್ಟಿದೆ. ಸಂಪ್ರದಾಯ ಪಂಥದ ಪ್ರಕಾರ ಹವಾಗುಣ, ಭೂಮಿಯ ಗುಣದರ್ಜೆ, ನೈಸರ್ಗಿಕ ಸಂಪನ್ಮೂಲಗಳ ಲಭ್ಯತೆ, ಜನತೆಯ ಸಾಮರ್ಥ್ಯ ಇತ್ಯಾದಿ ಸಂಗತಿಗಳಲ್ಲಿ ದೇಶಗಳ ನಡುವಣ ಭಿನ್ನತೆಯೇ ಅಂತರರಾಷ್ಟ್ರೀಯ ವ್ಯಾಪಾರದ ಉಗಮಕ್ಕೆ ಕಾರಣವಾಗಿದೆ. ಒಂದು ದೇಶದಲ್ಲಿ ಯಾವ ಸರಕಿನ ಉತ್ಪಾದನೆಗೆ ಸಂಪನ್ಮೂಲಗಳು ಅತ್ಯುತ್ತಮವಾಗಿ ಲಭ್ಯವಾಗಿವೆಯೋ ಮತ್ತು ಉತ್ಪಾದನ ವೆಚ್ಚ ಕಡಿಮೆ ಇರುತ್ತದೆಯೋ ಅಂತಹ ಸರಕನ್ನು ಮಾತ್ರ ಆ ದೇಶವು ಉತ್ಪಾದಿಸಿ ಇತರ ಸರಕುಗಳನ್ನು ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳುತ್ತದೆ. ತಾನು ಉತ್ಪಾದಿಸಿದ ಹೆಚ್ಚುವರಿ ಸರಕನ್ನು ಬೇರೆ ದೇಶಗಳಿಗೆ ರಫ್ತು ಮಾಡುತ್ತದೆ. ಆದ್ದರಿಂದ ಸಂಪ್ರದಾಯ ಪಂಥದ ಸಿದ್ಧಾಂತದ ಮೇರೆಗೆ ಯಾವ ವಸ್ತುವಿನ ಉತ್ಪಾದನೆಯಲ್ಲಿ ಒಂದು ದೇಶಕ್ಕೆ ಹೆಚ್ಚಿನ ಅನುಕೂಲತೆಗಳು ಇವೆಯೋ ಆ ವಸ್ತುವಿನ ಉತ್ಪಾದನೆಯಲ್ಲಿ ಅದು ವೈಶಿಷ್ಟ್ಯತೆಯನ್ನು (Specialisation) ಸಾಧಿಸುತ್ತದೆ.

ಸಂಪ್ರದಾಯ ಪಂಥದ ಸಿದ್ಧಾಂತದ ಪ್ರಕಾರ ವ್ಯಾಪಾರದಲ್ಲಿ ಎರಡು ದೇಶಗಳು ಮತ್ತು ಎರಡು ಸರಕುಗಳಿರುತ್ತವೆ ಹಾಗೂ ಒಂದು ಉತ್ಪಾದನಾಂಗವಿರುತ್ತದೆ. ಆ್ಯಡಂಸ್ಮಿತ್ ಮತ್ತು ರಿಕಾರ್ಡೋರ ಅಭಿಪ್ರಾಯದಲ್ಲಿ ಶ್ರಮ ಒಂದೇ ಉತ್ಪಾದನಾಂಗವಾಗಿರುತ್ತದೆ. ಅಂದರೆ ಶ್ರಮವು ಮಾತ್ರ ಉತ್ಪಾದನಾಂಗವೆಂದು ಸಂಪ್ರದಾಯ ಪಂಥದ ಸಿದ್ಧಾಂತದಲ್ಲಿ ಪರಿಗಣಿಸಲ್ಪಟ್ಟಿದೆ. ಪ್ರತಿಯೊಂದು ವಸ್ತುವಿನಲ್ಲಿಯೂ ಅಡಕವಾಗಿರುವ ಶ್ರಮಕ್ಕೆ ಅನುಗುಣವಾಗಿ ವಸ್ತುಗಳನ್ನು ವಿನಿಮಯ ಮಾಡಿಕೊಳ್ಳಲಾಗುತ್ತದೆ ಎಂದು ಅವರು ಹೇಳುತ್ತಾರೆ. ದೇಶದ ಒಳಗಡೆ ಶ್ರಮವು ಸಂಪೂರ್ಣವಾಗಿ ಚಲಿಸುತ್ತಿದ್ದು, ಅದರ ಸೀಮಾಂತ ಉತ್ಪಾದಕತೆಯು ಕೂಲಿಯ ಮಟ್ಟಕ್ಕೆ ಸಮನಾಗಿರುತ್ತದೆ. ಆದರೆ ಶ್ರಮವು ಅಂತರರಾಷ್ಟ್ರೀಯವಾಗಿ ಚಲನರಹಿತತೆ ಲಕ್ಷಣವನ್ನು ಹೊಂದಿದೆ ಎಂಬುದು ಅವರ ವಾದವಾಗಿದೆ.

ಸಂಪ್ರದಾಯ ಪಂಥಕ್ಕೆ ಮೊದಲಿದ್ದ ವಾಣಿಜ್ಯಪಂಥದ ಚಿಂತಕರ (Mercantilists) ಪ್ರಕಾರ, ಒಂದು ದೇಶವು ಹೆಚ್ಚು ಸಿರಿವಂತವಾಗಲು ಅತ್ಯಧಿಕ ಪ್ರಮಾಣದಲ್ಲಿ ಚಿನ್ನವನ್ನು ಸಂಗ್ರಹಿಸಬೇಕು. ಆದ್ದರಿಂದ ಅಂತರರಾಷ್ಟ್ರೀಯ ವ್ಯಾಪಾರವು ಚಿನ್ನದ ಸಂಗ್ರಹಣೆಗೆ ನೆರವಾಗಬೇಕೆಂಬುದು ಅವರ ವಿಚಾರಧಾರೆಯಾಗಿದ್ದಿತು. ರಫ್ತುಗಳಿಂದ ಚಿನ್ನವು ಒಳ ಪ್ರವಹಿಸುವುದರಿಂದ ದೇಶವು ಬಲಿಷ್ಠವಾಗುತ್ತದೆ ಮತ್ತು ಆಮದುಗಳಿಂದ ಚಿನ್ನವು ಹೊರ ಪ್ರವಹಿಸುವುದರಿಂದ ದೇಶವು ದುರ್ಬಲವಾಗುತ್ತದೆ ಎಂಬುದು ಅವ. ನಂಬಿಕೆಯಾಗಿತ್ತು. ಆದ್ದರಿಂದ ಅವರು ಆಮದುಗಳನ್ನು ಅನಿಷ್ಟವೆಂದು ಪರಿಗಣಿಸಿದ್ದರು. ಆ ಪ್ರಕಾರ, ಯಾವುದೇ ದೇಶವು ರಫ್ತುಗಳನ್ನು ಮಾತ್ರ ಪ್ರೋತ್ಸಾಹಿಸಬೇಕೆಂದು ಅವರು ವಾದಿಸಿದ್ದರು.

ವಾಣಿಜ್ಯ ಪಂಥದವರಿಂದ ಪ್ರಚಾರಗೊಂಡು ಬಹಳ ಪ್ರಬಲವಾಗಿ ಬೇರೂರಿದ್ದ ಈ ಭಾವನೆ ಯನ್ನು ಸಂಪ್ರದಾಯ ಪಂಥದವರು ಅಲ್ಲಗಳೆದರು. ಅಂತರರಾಷ್ಟ್ರೀಯ ವ್ಯಾಪಾರದ

ನೀಡುವುದು ಸರಿಯಲ್ಲವೆಂಬುದು ಅವರ ಅಭಿಮತವಾಗಿತ್ತು.

ವ್ಯಾಪಾರದ ಮೂಲಕ ಹಣವು ದೇಶದೊಳಕ್ಕೆ ಪ್ರವಹಿಸಬೇಕಾದರೆ ಅನುಕೂಲಕರವಾದ ವ್ಯಾಪಾರ ಶಿಲ್ಕು (Balance of Trade) ಇರಬೇಕೆಂಬುದು ವಾಣಿಜ್ಯ ಪಂಥದ ಲೇಖಕರ ನಂಬಿಕೆಯಾಗಿತ್ತು. ಅಂದರೆ ಆ ದೇಶದ ರಫ್ತುಗಳು ಅದರ ಆಮದುಗಳಿಗಿಂತ ಹೆಚ್ಚಾಗಿರಬೇಕು. ಅನುಕೂಲಕರವಾದ ವ್ಯಾಪಾರ ಶಿಲ್ಕನ್ನು ಸಾಧಿಸುವ ದೃಷ್ಟಿಯಿಂದ ಸರ್ಕಾರದ ಹಸ್ತಕ್ಷೇಪವು ಅಗತ್ಯವೆಂದು ಅವರು ವಾದಿಸಿದರು. ಈ ಸಂಬಂಧದಲ್ಲಿ ಆಮದುಗಳ ನಿಯಂತ್ರಣ, ಸ್ವದೇಶಿ ಕೈಗಾರಿಕೆಗಳಿಗೆ ರಕ್ಷಣೆ ಮುಂತಾದ ನೀತಿಗಳು ಗಮನಾರ್ಹವಾಗಿ ಕಾರ್ಯ ಸಾಧಿಸುತ್ತವೆ ಎಂಬುದು ವಾಣಿಜ್ಯವಾದಿಗಳ ನಿಲುವಾಗಿತ್ತು.

4. ಅಧಿಕಾರಯುತ ಆಡಳಿತ ನಿರ್ವಹಣೆ (Authoritative Administration): ಊಳಿಗಮಾನ್ಯ ಪದ್ಧತಿಯು ಅಳಿದು ರಾಷ್ಟ್ರೀಯವಾದವು ತಲೆ ಎತ್ತಿತು. ಕೇಂದ್ರೀಕೃತ ಸರ್ಕಾರದ ವ್ಯವಸ್ಥೆಯನ್ನು ಬೆಳೆಸಬೇಕೆಂಬುದು ಆಗಿನ ಕಾಲದ ವಿದ್ಯಮಾನವಾಗಿತ್ತು. ಆದರೆ ಸ್ಥಳೀಯ ಘಟಕಗಳ ಆರ್ಥಿಕತೆ ಮತ್ತು ಕೇಂದ್ರ ಸರಕಾರದ ನಡುವೆ ಘರ್ಷಣೆಗಳು ಪ್ರಾರಂಭವಾದುದರಿಂದ ನಿರಂಕುಶಪ್ರಭುತ್ವವನ್ನು ಸ್ಥಾಪನೆಗೊಳ್ಳಬೇಕೆಂಬ ಹೆಬ್ಬಯಕೆ ಮೂಡಿತು. ಮ್ಯಾಕಿಯಾವೆಲ್ಲಿ ಮೊದಲಾದ ಬರಹಗಾರರು ನಿರಂಕುಶಾಧಿಕಾರವನ್ನು ಪ್ರಬಲವಾಗಿ ಪ್ರತಿಪಾದಿಸಿದರು. ಆಗ ಅಸ್ತಿತ್ವದಲ್ಲಿದ್ದ ವೃತ್ತಿ ಸಂಘಗಳು, ಶ್ರೀಮಂತ ವರ್ಗ ಮತ್ತು ಸ್ಥಳೀಯ ಸರ್ಕಾರಗಳ ನಡುವಿನ ಘರ್ಷಣೆಯಿಂದ ರಾಷ್ಟ್ರವನ್ನು ಪಾರು ಮಾಡಲು ನಿರಂಕುಶಪ್ರಭುತ್ವವೇ ಸಿದ್ಧೌಷಧವೆಂದು ವ್ಯಾಪಕವಾಗಿ ಪರಿಗಣಿಸಲಾಯಿತು. ಅಧಿಕಾರಯುತವಾಗಿ ಆಡಳಿತವನ್ನು ನಡೆಸಲು ಮತ್ತು ಜನರ ಯೋಗಕ್ಷೇಮಕ್ಕಾಗಿ ಹೆಚ್ಚು ಮಾಡಲು ರಾಜನಿಗೆ ಹೆಚ್ಚಿನ ಸಂಪತ್ತಿನ ಆವಶ್ಯಕತೆ ಇತ್ತು. ವ್ಯಾಪಾರ ಮತ್ತು ವಾಣಿಜ್ಯ ಸಂಪತ್ತಿನ ಶೇಖರಣೆಗೆ ಸಾಧನಗಳೆಂದು ತೋರಿಬಂದವು. ಅಧಿಕಾರವು ಸಂಪತ್ತಿನಲ್ಲಿ ಅಡಗಿದೆ ಎಂಬ ವಾಸ್ತವತೆಗೆ ರಾಜರುಗಳು ಮಾರುಹೋಗಬೇಕಾಯಿತು.

ಅಂತರರಾಷ್ಟ್ರೀಯ ವ್ಯಾಪಾರ ಮತ್ತು ಅಂತರರಾಷ್ಟ್ರೀಯ ಸಂಬಂಧಗಳನ್ನು ಅಭಿವೃದ್ಧಿಪಡಿಸಿಕೊಳ್ಳಬೇಕೆಂಬ ಇಂಗಿತ ಪ್ರಬಲಗೊಂಡಿತು. ಎಲ್ಲಾ ದೇಶಗಳೂ ಸೌಕಾರಿಗೆಯಲ್ಲಿ ಸಾರ್ವಭೌಮತ್ವವನ್ನು ಸಾಧಿಸಬೇಕೆಂಬ ಧ್ಯೇಯದಿಂದ ಕಾರ್ಯ ಪ್ರವೃತ್ತವಾದವು.

ಸಂಪ್ರದಾಯ ಪಂಥದ ಅಂತರರಾಷ್ಟ್ರೀಯ ವ್ಯಾಪಾರ ಸಿದ್ಧಾಂತ
(Classical Theory of International Trade)

ಅಂತರರಾಷ್ಟ್ರೀಯ ವ್ಯಾಪಾರದ ಉಗಮದ ಕಾರಣಗಳು ಮತ್ತು ಅದು ನೆರವೇರುವ ಕ್ರಿಯೆಯನ್ನು ಕುರಿತು ಸಂಪದ್ರಾಯ ಪಂಥದವರಿಂದ ಪ್ರಾರಂಭಗೊಂಡು ಇಂದಿನವರೆಗೆ ಹಲವು ಅರ್ಥಶಾಸ್ತ್ರಜ್ಞರು ಅನೇಕ ಸಿದ್ಧಾಂತಗಳನ್ನು ರೂಪಿಸಿದ್ದಾರೆ. ಸಂಪ್ರದಾಯ ಪಂಥದ

ಅಂತರರಾಷ್ಟ್ರೀಯ ವ್ಯಾಪಾರ ಸಿದ್ಧಾಂತವು ಆ್ಯಡಂಸ್ಮಿತ್ ಮತ್ತು ದೇವಿಡ್ ರಿಕಾರ್ಡೋ ಅವರಿಂದ ಪ್ರತಿಪಾದಿಸಲ್ಪಟ್ಟಿದೆ. ಸಂಪ್ರದಾಯ ಪಂಥದ ಪ್ರಕಾರ ಹವಾಗುಣ, ಭೂಮಿಯ ಗುಣದರ್ಜೆ, ನೈಸರ್ಗಿಕ ಸಂಪನ್ಮೂಲಗಳ ಲಭ್ಯತೆ, ಜನತೆಯ ಸಾಮರ್ಥ್ಯ ಇತ್ಯಾದಿ ಸಂಗತಿಗಳಲ್ಲಿ ದೇಶಗಳ ನಡುವಣ ಭಿನ್ನತೆಯೇ ಅಂತರರಾಷ್ಟ್ರೀಯ ವ್ಯಾಪಾರವು ಉಗಮಕ್ಕೆ ಕಾರಣವಾಗಿದೆ. ಒಂದು ದೇಶದಲ್ಲಿ ಯಾವ ಸರಕಿನ ಉತ್ಪಾದನೆಗೆ ಸಂಪನ್ಮೂಲಗಳು ಅತ್ಯುತ್ತಮವಾಗಿ ಲಭ್ಯವಾಗಿವೆಯೋ ಮತ್ತು ಉತ್ಪಾದನ ವೆಚ್ಚ ಕಡಿಮೆ ಇರುತ್ತದೆಯೋ ಅಂತಹ ಸರಕನ್ನು ಮಾತ್ರ ಆ ದೇಶವು ಉತ್ಪಾದಿಸಿ ಇತರ ಸರಕುಗಳನ್ನು ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳುತ್ತದೆ. ತಾನು ಉತ್ಪಾದಿಸಿದ ಹೆಚ್ಚುವರಿ ಸರಕನ್ನು ಬೇರೆ ದೇಶಗಳಿಗೆ ರಫ್ತು ಮಾಡುತ್ತದೆ. ಆದ್ದರಿಂದ ಸಂಪ್ರದಾಯ ಪಂಥದ ಸಿದ್ಧಾಂತದ ಮೇರೆಗೆ ಯಾವ ವಸ್ತುವಿನ ಉತ್ಪಾದನೆಯಲ್ಲಿ ಒಂದು ದೇಶಕ್ಕೆ ಹೆಚ್ಚಿನ ಅನುಕೂಲತೆಗಳು ಇವೆಯೋ ಆ ವಸ್ತುವಿನ ಉತ್ಪಾದನೆಯಲ್ಲಿ ಅದು ವೈಶಿಷ್ಟ್ಯತೆಯನ್ನು (Specialisation) ಸಾಧಿಸುತ್ತದೆ.

ಸಂಪ್ರದಾಯ ಪಂಥದ ಸಿದ್ಧಾಂತದ ಪ್ರಕಾರ ವ್ಯಾಪಾರದಲ್ಲಿ ಎರಡು ದೇಶಗಳು ಮತ್ತು ಎರಡು ಸರಕುಗಳಿರುತ್ತವೆ ಹಾಗೂ ಒಂದು ಉತ್ಪಾದನಾಂಗವಿರುತ್ತದೆ. ಆ್ಯಡಂಸ್ಮಿತ್ ಮತ್ತು ರಿಕಾರ್ಡೋರ ಅಭಿಪ್ರಾಯದಲ್ಲಿ ಶ್ರಮ ಒಂದೇ ಉತ್ಪಾದನಾಂಗವಾಗಿರುತ್ತದೆ. ಅಂದರೆ ಶ್ರಮವು ಮಾತ್ರ ಉತ್ಪಾದನಾಂಗವೆಂದು ಸಂಪ್ರದಾಯ ಪಂಥದ ಸಿದ್ಧಾಂತದಲ್ಲಿ ಪರಿಗಣಿಸಲ್ಪಟ್ಟಿದೆ. ಪ್ರತಿಯೊಂದು ವಸ್ತುವಿನಲ್ಲಿಯೂ ಅಡಕವಾಗಿರುವ ಶ್ರಮಕ್ಕೆ ಅನುಗುಣವಾಗಿ ವಸ್ತುಗಳನ್ನು ವಿನಿಮಯ ಮಾಡಿಕೊಳ್ಳಲಾಗುತ್ತದೆ ಎಂದು ಅವರು ಹೇಳುತ್ತಾರೆ. ದೇಶದ ಒಳಗಡೆ ಶ್ರಮವು ಸಂಪೂರ್ಣವಾಗಿ ಚಲಿಸುತ್ತಿದ್ದು, ಅದರ ಸೀಮಾಂತ ಉತ್ಪಾದಕತೆಯು ಕೂಲಿಯ ಮಟ್ಟಕ್ಕೆ ಸಮನಾಗಿರುತ್ತದೆ. ಆದರೆ ಶ್ರಮವು ಅಂತರರಾಷ್ಟ್ರೀಯವಾಗಿ ಚಲನರಹಿತತೆ ಲಕ್ಷಣವನ್ನು ಹೊಂದಿದೆ ಎಂಬುದು ಅವರ ವಾದವಾಗಿದೆ.

ಸಂಪ್ರದಾಯ ಪಂಥಕ್ಕೆ ಮೊದಲಿದ್ದ ವಾಣಿಜ್ಯಪಂಥದ ಚಿಂತಕರ (Mercantilists) ಪ್ರಕಾರ, ಒಂದು ದೇಶವು ಹೆಚ್ಚು ಸಿರಿವಂತವಾಗಲು ಅತ್ಯಧಿಕ ಪ್ರಮಾಣದಲ್ಲಿ ಚಿನ್ನವನ್ನು ಸಂಗ್ರಹಿಸಬೇಕು. ಆದ್ದರಿಂದ ಅಂತರರಾಷ್ಟ್ರೀಯ ವ್ಯಾಪಾರವು ಚಿನ್ನದ ಸಂಗ್ರಹಣೆಗೆ ನೆರವಾಗಬೇಕೆಂಬುದು ಅವರ ವಿಚಾರಧಾರೆಯಾಗಿದ್ದಿತು. ರಫ್ತುಗಳಿಂದ ಚಿನ್ನವು ಒಳ ಪ್ರವಹಿಸುವುದರಿಂದ ದೇಶವು ಬಲಿಷ್ಠವಾಗುತ್ತದೆ ಮತ್ತು ಆಮದುಗಳಿಂದ ಚಿನ್ನವು ಹೊರ ಪ್ರವಹಿಸುವುದರಿಂದ ದೇಶವು ದುರ್ಬಲವಾಗುತ್ತದೆ ಎಂಬುದು ಅವ. ನಂಬಿಕೆಯಾಗಿತ್ತು. ಆದ್ದರಿಂದ ಅವರು ಆಮದುಗಳನ್ನು ಅನಿಷ್ಟವೆಂದು ಪರಿಗಣಿಸಿದ್ದರು. ಆ ಪ್ರಕಾರ, ಯಾವುದೇ ದೇಶವು ರಫ್ತುಗಳನ್ನು ಮಾತ್ರ ಪ್ರೋತ್ಸಾಹಿಸಬೇಕೆಂದು ಅವರು ವಾದಿಸಿದ್ದರು.

ವಾಣಿಜ್ಯ ಪಂಥದವರಿಂದ ಪ್ರಚಾರಗೊಂಡು ಬಹಳ ಪ್ರಬಲವಾಗಿ ಬೇರೂರಿದ್ದ ಈ ಭಾವನೆ ಯನ್ನು ಸಂಪ್ರದಾಯ ಪಂಥದವರು ಅಲ್ಲಗಳೆದರು. ಅಂತರರಾಷ್ಟ್ರೀಯ ವ್ಯಾಪಾರವ

ಅಂಗಗಳಾದ ರಫ್ತು ಮತ್ತು ಆಮದುಗಳೆರಡೂ ದೇಶದ ಅಭಿವೃದ್ಧಿಗೆ ಅಗತ್ಯವಾಗಿ ಸಹಾಯ ಕಾರಿಯಾಗುತ್ತವೆಂದು ತೋರಿಸಲು ಆ್ಯಡಂಸ್ಮಿತ್ ಮತ್ತು ರಿಕಾರ್ಡೊ ಅವರು ಪ್ರಯತ್ನಿಸಿ ದರು. ಯಾವುದೇ ದೇಶವು ಅಭಿವೃದ್ಧಿಯನ್ನು ಸಾಧಿಸಲು ಆಮದು ವ್ಯಾಪಾರ ಮತ್ತು ರಫ್ತು ವ್ಯಾಪಾರ ಎರಡೂ ಆವಶ್ಯಕ ಎಂದು ಅವರು ನಿರೂಪಿಸಿದರು.

D. ನಿರಪೇಕ್ಷ (ಸಂಪೂರ್ಣ) ವೆಚ್ಚ ಅನುಕೂಲತೆಯ ಸಿದ್ಧಾಂತ
(Absolute Cost Advantage Theory)

ನಿರಪೇಕ್ಷ ಅನುಕೂಲತೆಯ ಸಿದ್ಧಾಂತವು ಆ್ಯಡಂಸ್ಮಿತ್‌ನಿಂದ ಪ್ರತಿಪಾದಿಸಲ್ಪಟ್ಟಿದೆ. ರಫ್ತು ಮತ್ತು ಆಮದುಗಳಿರಡರಿಂದಲೂ ಒಂದು ದೇಶಕ್ಕೆ ಅನುಕೂಲವಾಗುತ್ತದೆ ಎಂದು ಸ್ಮಿತ್ ವಾದಿಸಿದ್ದಾನೆ. ಸಾಮಾನ್ಯ ಜೀವನದಲ್ಲಿ ವಿನಿಮಯದಿಂದ ಯಾವ ಪ್ರಯೋಜನಗಳು ದೊರಕುತ್ತವೆಯೋ ಅಂತಹುದೇ ಪ್ರಯೋಜನಗಳು ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಲಭಿಸುತ್ತವೆ ಎಂಬುದು ಅವನ ಅಭಿಮತವಾಗಿದೆ. ಉದಾಹರಣೆಗೆ, ಒಬ್ಬ ದರ್ಜಿಯು ತನಗೆ ಅಗತ್ಯವಾದ ಬೂಟುಗಳನ್ನು ತಯಾರಿಸಿಕೊಳ್ಳಲು ಸಾಧ್ಯವಿಲ್ಲ ಅಥವಾ ಬೂಟು ತಯಾರು ಮಾಡುವವನು ಬಟ್ಟೆಯನ್ನು ಹೊಲೆಯಲು ಸಾಧ್ಯವಿಲ್ಲ. ಬೂಟು ಮತ್ತು ಬಟ್ಟೆಯನ್ನು ಇಬ್ಬರೂ ಪರಸ್ಪರ ವಿನಿಮಯ ಮಾಡಿಕೊಳ್ಳುವುದರಿಂದ ಇಬ್ಬರಿಗೂ ಪ್ರಯೋಜನ ಉಂಟಾಗುತ್ತದೆ. ಅದೇ ರೀತಿಯಲ್ಲಿ ದೇಶಗಳು ಪರಸ್ಪರ ವ್ಯಾಪಾರ ಸಂಬಂಧ ಹೊಂದುವುದರಿಂದ ಇಡೀ ಪ್ರಪಂಚಕ್ಕೆ ಅನುಕೂಲತೆಗಳುಂಟಾಗುತ್ತವೆ.

ಶ್ರಮ ವಿಭಜನೆಯ ಆಧಾರದ ಮೇಲೆಯೇ ವಸ್ತುಗಳ ಉತ್ಪಾದನೆ ಮತ್ತು ವ್ಯಾಪಾರ ಏರ್ಪಡಬೇಕೆಂದು ಸ್ಮಿತ್ ಹೇಳಿದ್ದಾನೆ. ಅವನ ಪ್ರಕಾರ ಒಂದು ದೇಶವು ಇನ್ನೊಂದು ದೇಶಕ್ಕಿಂತ ಒಂದು ವಸ್ತುವಿನ ಉತ್ಪಾದನೆಯಲ್ಲಿ ಸಂಪೂರ್ಣವಾದ ಅಥವಾ ನಿರಪೇಕ್ಷವಾದ ಅನುಕೂಲತೆಯನ್ನು ಹೊಂದಿದ್ದರೆ ಮತ್ತು ಇನ್ನೊಂದು ದೇಶವು ಬೇರೊಂದು ವಸ್ತುವಿನ ಉತ್ಪಾದನೆಯಲ್ಲಿ ಸಂಪೂರ್ಣವಾದ ಅಥವಾ ನಿರಪೇಕ್ಷವಾದ ಅನುಕೂಲತೆಯನ್ನು ಹೊಂದಿದ್ದರೆ ಆಗ ಎರಡೂ ದೇಶಗಳೂ ವ್ಯಾಪಾರದಿಂದ ಪ್ರಯೋಜನ ಪಡೆಯುತ್ತವೆ.

ಉದಾಹರಣೆಗೆ, ಒಂದು ಘಟಕ X ಸರಕನ್ನು ಉತ್ಪಾದಿಸಲು A ದೇಶದಲ್ಲಿ ಐದು ಘಟಕ ಶ್ರಮ ಮತ್ತು B ದೇಶದಲ್ಲಿ ಹತ್ತು ಘಟಕ ಶ್ರಮ ಬೇಕಾಗುತ್ತದೆ ಮತ್ತು ಒಂದು ಘಟಕ Y ಸರಕನ್ನು ಉತ್ಪಾದಿಸಲು A ದೇಶದಲ್ಲಿ ಹತ್ತು ಘಟಕ ಶ್ರಮ ಮತ್ತು B ದೇಶದಲ್ಲಿ ಐದು ಘಟಕ ಶ್ರಮ ಬೇಕಾಗುತ್ತದೆ ಎಂದು ಭಾವಿಸೋಣ. ವೆಚ್ಚದ ವಿಧದಲ್ಲಿ ನೋಡಿದಾಗ A ದೇಶಕ್ಕೆ X ಸರಕಿನ ಉತ್ಪಾದನೆಯಲ್ಲಿ ಮತ್ತು B ದೇಶಕ್ಕೆ Y ಸರಕಿನ ಉತ್ಪಾದನೆಯಲ್ಲಿ ನಿರಪೇಕ್ಷವಾದ (ಸಂಪೂರ್ಣ) ಅನುಕೂಲತೆಯಿದೆ. ವ್ಯಾಪಾರವು ಪ್ರಾರಂಭವಾದ ನಂತರ A ದೇಶವು X ಸರಕಿನ ಉತ್ಪಾದನೆಯಲ್ಲಿ ಮತ್ತು B ದೇಶವು Y ಸರಕಿನ ಉತ್ಪಾದನೆಯಲ್ಲಿ ವೈಶಿಷ್ಟ್ಯತೆ ಸಾಧಿಸುತ್ತವೆ. ನಂತರ ಎರಡೂ ದೇಶಗಳು ತಾವು

ಉತ್ಪಾದಿಸಿದ ಹೆಚ್ಚುವರಿ ಸರಕನ್ನು ವಿನಿಮಯ ಮಾಡುಕೊಳ್ಳುತ್ತವೆ.

ಉತ್ಪಾದನಾ ವೆಚ್ಚಗಳ ನಿರಪೇಕ್ಷ ಭಿನ್ನತೆಯ ಆಧಾರದ ಮೇಲೆಯೇ ಆ್ಯಡಂಸ್ಮಿತ್ ಅಂತರರಾಷ್ಟ್ರೀಯ ವ್ಯಾಪಾರ ಸಿದ್ಧಾಂತವನ್ನು ಅಭಿವೃದ್ಧಿಪಡಿಸಿದ್ದಾನೆ. ಯಾವುದೊಂದು ದೇಶವು ಒಂದು ಸರಕಿನ ಉತ್ಪಾದನೆಯಲ್ಲಿ ನಿರಪೇಕ್ಷ (ಸಂಪೂರ್ಣ) ಅನುಕೂಲತೆಯನ್ನು ಮತ್ತು ಇನ್ನೊಂದು ಸರಕಿನ ಉತ್ಪಾದನೆಯಲ್ಲಿ ಸಂಪೂರ್ಣ ಅನಾನುಕೂಲತೆಯನ್ನು ಹೊಂದಿರುವಾಗ ವ್ಯಾಪಾರವು ಏರ್ಪಡುತ್ತದೆ. ಪ್ರತಿಯೊಂದು ದೇಶವೂ ಯಾವ ಸರಕಿನ ಉತ್ಪಾದನೆಯಲ್ಲಿ ತನಗೆ ಸಂಪೂರ್ಣ (ನಿರಪೇಕ್ಷ) ವೆಚ್ಚ ಅನುಕೂಲತೆ ಇದೆಯೋ ಅಂತಹ ಸರಕನ್ನು ಉತ್ಪಾದಿಸಿ ರಫ್ತು ಮಾಡುತ್ತದೆ ಮತ್ತು ಯಾವ ಸರಕಿನ ಉತ್ಪಾದನೆಯಲ್ಲಿ ಸಂಪೂರ್ಣ ವೆಚ್ಚ ಅನಾನುಕೂಲತೆ ಇದೆಯೋ ಆ ಸರಕನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳುತ್ತದೆ. ಅಂದರೆ, ಯಾವುದೊಂದು ಸರಕನ್ನು ಉತ್ಪಾದಿಸಿ ರಫ್ತು ಮಾಡಬೇಕೆಂದರೆ ಅದರ ಬೆಲೆಯು ಬೇರೆ ದೇಶದಲ್ಲಿರುವುದಕ್ಕಿಂತ ಕಡಿಮೆ ಇರಬೇಕು.

ಸಂಪೂರ್ಣ ವೆಚ್ಚದ ಅನುಕೂಲತೆ ಎಂದರೆ ಕಡಿಮೆ ವೆಚ್ಚದಲ್ಲಿ ಸರಕನ್ನು ಉತ್ಪಾದಿಸುವ ಸಾಮರ್ಥ್ಯ ಎಂದರ್ಥ. ಇಲ್ಲಿ ಉತ್ಪಾದನಾ ವೆಚ್ಚವೇ ನಿರ್ಣಾಯಕ ಅಂಶವಾಗಿರುತ್ತದೆ. ಒಂದು ದೇಶವು ಯಾವುದೇ ಒಂದು ಸರಕನ್ನು ಕಡಿಮೆ ವೆಚ್ಚದಲ್ಲಿ ಉತ್ಪಾದನೆ ಮಾಡುವ ಸಾಮರ್ಥ್ಯವನ್ನು ಪಡೆದಿದೆ ಎಂದರೆ ಆ ದೇಶವು ಆ ಸರಕನ್ನು ಅಧಿಕ ಪ್ರಮಾಣದಲ್ಲಿ ಉತ್ಪಾದಿಸಬಲ್ಲದು ಹಾಗೂ ಆ ಸರಕಿನ ಮೂಲಕ ಅದು ಹೇರಳ ಲಾಭಗಳನ್ನು ಗಳಿಸ ಬಲ್ಲದು ಎಂಬ ಸೂಚ್ಯಾರ್ಥ ಸಿಗುತ್ತದೆ.

ನಿರಪೇಕ್ಷ ವೆಚ್ಚ ಅನುಕೂಲತೆಯನ್ನು ವಿಶದಪಡಿಸಲು ಭಾರತ ಮತ್ತು ಬಾಂಗ್ಲಾದೇಶ ಎಂಬ ಎರಡು ದೇಶಗಳನ್ನು ಮತ್ತು ಹತ್ತಿ ಮತ್ತು ಸೆಣಬು ಎಂಬ ಎರಡು ವಸ್ತುಗಳನ್ನು ಉದಾಹರಣೆಯಾಗಿ ತೆಗೆದುಕೊಳ್ಳೋಣ. ಎರಡು ದೇಶಗಳಲ್ಲಿಯೂ ಎರಡು ಸರಕುಗಳ ಉತ್ಪಾದನ ವೆಚ್ಚವನ್ನು ಶ್ರಮ ಘಟಕಗಳಲ್ಲಿ ಅಳೆಯಲಾಗುತ್ತದೆಂದು ಭಾವಿಸೋಣ. ಇಂತಹ ಸನ್ನಿವೇಶದಲ್ಲಿ ನಿರಪೇಕ್ಷ ವೆಚ್ಚ ಅನುಕೂಲತೆಯನ್ನು 1.1ನೇ ಪಟ್ಟಿಯು ತೋರಿಸುತ್ತದೆ.

ಪಟ್ಟಿ 1.1

ದೇಶ	ಉತ್ಪಾದನ ವೆಚ್ಚ ಹತ್ತಿ	ಸೆಣಬು (ಶ್ರಮ ಗಂಟೆಗಳಲ್ಲಿ)
ಭಾರತ	5	10
ಬಾಂಗ್ಲಾದೇಶ	10	5

ಪಟ್ಟಿ 1.1ರಲ್ಲಿ ತೋರಿಸಿದಂತೆ ಭಾರತದಲ್ಲಿ ಒಂದು ಘಟಕ ಹತ್ತಿಯನ್ನು ಉತ್ಪಾದಿಸಲು 5 ಶ್ರಮ ಗಂಟೆಗಳು ಮತ್ತು ಒಂದು ಘಟಕ ಸೆಣಬನ್ನು ಉತ್ಪಾದಿಸಲು 10 ಶ್ರಮ ಗಂಟೆಗಳು ಅಗತ್ಯವಾಗಿರುತ್ತವೆ. ಬಾಂಗ್ಲಾದೇಶದಲ್ಲಿ ಒಂದು ಘಟಕ ಹತ್ತಿಯನ್ನು

ಉತ್ಪಾದಿಸಲು 10 ಶ್ರಮ ಗಂಟೆಗಳು ಮತ್ತು ಒಂದು ಘಟಕ ಸೆಣಬನ್ನು ಉತ್ಪಾದಿಸಲು 5 ಶ್ರಮ ಗಂಟೆಗಳು ಬೇಕಾಗಿರುತ್ತದೆ. ಅಂದರೆ ಶ್ರಮವು ಭಾರತದಲ್ಲಿ ಹತ್ತಿಯ ಉತ್ಪಾದನೆಯಲ್ಲಿ ಹೆಚ್ಚು ದಕ್ಷವಾಗಿದ್ದರೆ ಬಾಂಗ್ಲಾದೇಶದಲ್ಲಿ ಸೆಣಬಿನ ಉತ್ಪಾದನೆಯಲ್ಲಿ ಹೆಚ್ಚು ದಕ್ಷವಾಗಿದೆ ಎಂಬುದು ಸ್ಪುಟವಾಗಿ ವ್ಯಕ್ತವಾಗುತ್ತದೆ. ಭಾರತವು ಹತ್ತಿಯ ಉತ್ಪಾದನೆಯಲ್ಲಿ ಬಾಂಗ್ಲಾ ದೇಶದ ವಿರುದ್ಧ ಸಂಪೂರ್ಣ ವೆಚ್ಚ ಅನುಕೂಲತೆಯನ್ನೂ, ಬಾಂಗ್ಲಾದೇಶವು ಸೆಣಬಿನ ಉತ್ಪಾದನೆಯಲ್ಲಿ ಭಾರತದ ವಿರುದ್ಧ ಸಂಪೂರ್ಣ ವೆಚ್ಚ ಅನುಕೂಲತೆಯನ್ನೂ ಹೊಂದಿವೆ.

ಹತ್ತಿಯ ಉತ್ಪಾದನೆಯಲ್ಲಿ ಬಾಂಗ್ಲಾದೇಶದ ವಿರುದ್ಧ ಭಾರತದ ಹೆಚ್ಚುಗಾರಿಕೆ ಮತ್ತು ಸೆಣಬಿನ ಉತ್ಪಾದನೆಯಲ್ಲಿ ಭಾರತದ ವಿರುದ್ಧ ಬಾಂಗ್ಲಾದೇಶದ ಹೆಚ್ಚುಗಾರಿಕೆಯು ಎರಡೂ ಸರಕುಗಳಲ್ಲಿ ಎರಡೂ ದೇಶಗಳ ಸಾಪೇಕ್ಷ ಉತ್ಪಾದನಾಂಗ ಉತ್ಪಾದಕತೆಯ ಅನುಪಾತಗಳಿಂದ ವ್ಯಕ್ತವಾಗುತ್ತದೆ.

$$\frac{\text{ಭಾರತದಲ್ಲಿ 0.2 ಘಟಕ ಹತ್ತಿ}}{\text{ಬಾಂಗ್ಲಾದೇಶದಲ್ಲಿ 0.1 ಘಟಕ ಹತ್ತಿ}} \qquad \frac{\text{ಭಾರತದಲ್ಲಿ 0.1 ಘಟಕ ಸೆಣಬು}}{\text{ಬಾಂಗ್ಲಾದೇಶದಲ್ಲಿ 0.2 ಘಟಕ ಸೆಣಬು}}$$

ಭಾರತವು ಹತ್ತಿಯನ್ನು ಉತ್ಪಾದಿಸಿ ರಫ್ತು ಮಾಡಿದರೆ ಮತ್ತು ಬಾಂಗ್ಲಾದೇಶವು ಸೆಣಬನ್ನು ಉತ್ಪಾದಿಸಿ ರಫ್ತು ಮಾಡಿದರೆ ವ್ಯಾಪಾರದಿಂದ ಎರಡೂ ದೇಶಗಳು ಪ್ರಯೋಜನ ಪಡೆದುಕೊಳ್ಳುತ್ತವೆ. ಭಾರತವು ಹತ್ತಿಯ ಉತ್ಪಾದನೆಯಲ್ಲಿ ಮತ್ತು ಬಾಂಗ್ಲಾದೇಶವು ಸೆಣಬಿನ ಉತ್ಪಾದನೆಯಲ್ಲಿ ವಿಶೇಷತೆಯನ್ನು ಸಾಧಿಸಿದರೆ, ಎರಡೂ ಸರಕುಗಳ ಒಟ್ಟು ಸಂಯೋಜಿತ ಉತ್ಪನ್ನವು ಎರಡೂ ದೇಶಗಳು ಎರಡು ಸರಕುಗಳನ್ನೂ ಉತ್ಪಾದಿಸಿದರೆ ಎಷ್ಟಿರುತ್ತದೋ ಅದಕ್ಕಿಂತ ಅಧಿಕವಾಗಿರುತ್ತದೆ. ಈ ಮೇಲಿನ ಉದಾಹರಣೆಯಲ್ಲಿಯೇ ಗಮನಿಸಿದಂತೆ ಭಾರತವು ಹತ್ತಿಯ ಉತ್ಪಾದನೆಯಲ್ಲಿಯೂ, ಬಾಂಗ್ಲಾದೇಶವು ಸೆಣಬಿನ ಉತ್ಪಾದನೆಯಲ್ಲಿಯೂ ವೈಶಿಷ್ಟ್ಯತೆಯನ್ನು ಸಾಧಿಸಿದರೆ ಹತ್ತು ಶ್ರಮ ಗಂಟೆಗಳ ವೆಚ್ಚದಲ್ಲಿ ಎರಡು ಘಟಕ ಸರಕುಗಳನ್ನು ಉತ್ಪಾದಿಸಲು ಸಾಧ್ಯವಿರುತ್ತದೆ. ಬದಲಾಗಿ ಎರಡೂ ದೇಶ ಗಳೂ ಎರಡೂ ಸರಕುಗಳ ಉತ್ಪಾದನೆಯಲ್ಲಿ ತೊಡಗಿದರೆ ಎರಡು ಘಟಕ ಸರಕುಗಳನ್ನು ಉತ್ಪಾದಿಸಲು 15 ಶ್ರಮ ಗಂಟೆಗಳು ಅಗತ್ಯವಾಗುತ್ತವೆ.

ಶ್ರಮವಿಭಜನೆ ಮತ್ತು ವಿಶೇಷತೆಯ ಪ್ರಯೋಜನಗಳ ಫಲವಾಗಿ ಹೆಚ್ಚುವರಿ ಉತ್ಪನ್ನವು ದೊರಕುತ್ತದೆ. ಇದು ಎರಡೂ ದೇಶಗಳಿಗೆ ಅನುಕೂಲತೆಯನ್ನುಂಟು ಮಾಡುತ್ತದೆ. ಎರಡೂ ದೇಶಗಳಲ್ಲಿ ಸಂಪನ್ಮೂಲಗಳ ಪರಿಣಾಮಕಾರಿ ಮತ್ತು ಪೂರ್ಣ ಬಳಕೆಗೆ ಹಾಗೂ ಉದ್ಯೋಗಾವಕಾಶಗಳ ಹೆಚ್ಚಳಕ್ಕೆ ಈ ಅಂಶವೂ ಸಹ ಸಹಾಯ ಮಾಡುತ್ತದೆ.

ಅನುಕೂಲತೆಗಳು
(Advantages)

ಆ್ಯಡಂಸ್ಮಿತ್‌ನ ಅಭಿಪ್ರಾಯದಲ್ಲಿ ಅಂತರರಾಷ್ಟ್ರೀಯ ವ್ಯಾಪಾರವು ಮೂರು ರೀತಿಗಳ ಅನುಕೂಲತೆಯನ್ನು ಒದಗಿಸುತ್ತದೆ. ಅವುಗಳೆಂದರೆ :

1. ಉತ್ಪಾದನಾ ಸಾಮರ್ಥ್ಯದ ಲಾಭ (Gain of Production Capacity): ಅಂತರರಾಷ್ಟ್ರೀಯ ವ್ಯಾಪಾರದ ಉದ್ಭವದಿಂದ ಯಾವುದೇ ದೇಶವು ತನ್ನಲ್ಲಿರುವ ಸಂಪನ್ಮೂಲಗಳನ್ನು ಗರಿಷ್ಠವಾಗಿ ಉಪಯೋಗಿಸಿಕೊಂಡು ಉತ್ಪಾದನಾ ಸಾಮರ್ಥ್ಯವನ್ನು ವಿಸ್ತರಿಸಲು ಸಾಧ್ಯವಾಗುತ್ತದೆ. ವ್ಯಾಪಾರದ ಹೊರತು ಉತ್ಪಾದನಾ ಸಾಮರ್ಥ್ಯವು ಅರೆ ಬಳಕೆಯಾಗಿರುತ್ತದೆ.

2. ನಿರಪೇಕ್ಷ ವೆಚ್ಚದ ಅನುಕೂಲ (Advantage of Absolute Cost): ಯಾವ ಸರಕಿನ ಉತ್ಪಾದನೆಯಲ್ಲಿ ಸಂಪೂರ್ಣ ವೆಚ್ಚದ ಅನುಕೂಲತೆ ಇದೆಯೋ ಆ ಸರಕಿನ ಉತ್ಪಾದನೆಯಲ್ಲಿ ತನ್ನ ಪ್ರಯತ್ನಗಳನ್ನು ಕೇಂದ್ರೀಕರಿಸಲು ಯಾವುದೇ ಒಂದು ದೇಶಕ್ಕೆ ಅಂತರರಾಷ್ಟ್ರೀಯ ವ್ಯಾಪಾರವು ಸಹಾಯ ಮಾಡುತ್ತದೆ.

3. ಹೆಚ್ಚುವರಿ ಲಾಭಕ್ಕೆ ಅವಕಾಶ (Scope for Additional Profit): ಅಂತರ ರಾಷ್ಟ್ರೀಯ ವ್ಯಾಪಾರದ ಪರಿಣಾಮವಾಗಿ ಒಂದು ದೇಶವು ಉತ್ಪಾದನೆಯನ್ನು ಹೆಚ್ಚಿಸಿ ಕೊಂಡು ಹೆಚ್ಚುವರಿ ಲಾಭಗಳನ್ನು ಗಳಿಸಲು ಶಕ್ತವಾಗುತ್ತದೆ.

ದೌರ್ಬಲ್ಯಗಳು
(Weaknesses)

ಆ್ಯಡಂಸ್ಮಿತ್ ಪ್ರತಿಪಾದಿಸಿರುವ ನಿರಪೇಕ್ಷ ಅನುಕೂಲತೆಯ ಸಿದ್ಧಾಂತವು ಕೆಳಗಿನ ದೌರ್ಬಲ್ಯಗಳಿಂದ ಬಳಲುತ್ತಿದೆ.

1. **ಇತರ ಉತ್ಪಾದನಾಂಗಗಳ ನಿರ್ಲಕ್ಷ್ಯ** (Neglect of other Factors of Production): ಈ ಸಿದ್ಧಾಂತವು ಶ್ರಮವನ್ನು ಮಾತ್ರ ಉತ್ಪಾದನಾಂಗವೆಂದು ಪರಿಗಣಿಸಿ ಇತರೆ ಉತ್ಪಾದನಾಂಗಗಳ ಪಾತ್ರವನ್ನು ನಿರ್ಲಕ್ಷಿಸಿದೆ. ಆದ್ದರಿಂದ ಇದು ಸಂಕುಚಿತವಾದ ಸಿದ್ಧಾಂತವಾಗಿದೆ.
2. **ಪರಿಪೂರ್ಣವಲ್ಲದ ಸಿದ್ಧಾಂತ** (Not a Perfect Theory): ಸರಕಿನ ಉತ್ಪಾದನೆಯಲ್ಲಿ ನಿರಪೇಕ್ಷ ವೆಚ್ಚದ ಅನುಕೂಲತೆಗಳಿದ್ದರೆ ರಾಷ್ಟ್ರಗಳ ನಡುವೆ ವ್ಯಾಪಾರವು ಏರ್ಪಡುತ್ತದೆ ಎಂದು ಈ ಸಿದ್ಧಾಂತವು ಪ್ರತಿಪಾದಿಸಿದೆ. ಆದರೆ ನಿರಪೇಕ್ಷ (ಸಂಪೂರ್ಣ) ವೆಚ್ಚದ ಅನುಕೂಲತೆ ಇಲ್ಲದಿದ್ದರೂ ಸಹ ಮತ್ತು ಸಾಪೇಕ್ಷ ವೆಚ್ಚದ ಅನುಕೂಲತೆ ಹಾಗೂ ಇತರ ಪ್ರಯೋಜನಗಳು ಲಭಿಸು ವಂತಿದ್ದರೂ ಸಹ ಅಂತರರಾಷ್ಟ್ರೀಯ ವ್ಯಾಪಾರವು ಏರ್ಪಡುತ್ತದೆ ಎಂಬ ಸಂಗತಿಯನ್ನು ಪರಿಗಣಿಸಲು ಈ ಸಿದ್ಧಾಂತ ವಿಫಲಗೊಂಡಿದೆ.

3. ಪಾರ್ಶ್ವ ಸಿದ್ಧಾಂತ (Partial Theory): ಉತ್ಪಾದನಾ ವೆಚ್ಚ ಮತ್ತು ಆ ಮೂಲಕ ಲಭಿಸುವ ಅನುಕೂಲತೆಗಳನ್ನು ಪರಿಗಣಿಸುವ ಮೂಲಕ ಈ ಸಿದ್ಧಾಂತವು ಪೂರ್ಣಕೆಯ ಭಾಗಕ್ಕೆ ಮಾತ್ರ ಗಮನ ನೀಡಿದೆ. ಬೇಡಿಕೆಯ ಭಾಗವನ್ನು ಇದು ಲಕ್ಷಿಸಿದೆ. ಈ ದೃಷ್ಟಿಯಿಂದಲೂ ಇದು ಪಾರ್ಶ್ವ ಮೀಮಾಂಸೆಯಾಗಿದೆ.

E. ಸಾಪೇಕ್ಷ ವೆಚ್ಚ ಅನುಕೂಲತೆ ಸಿದ್ಧಾಂತ (Comparative Cost Advantage Theory)

ಈ ಸಿದ್ಧಾಂತವು ಡೇವಿಡ್ ರಿಕಾರ್ಡೊನಿಂದ ಮಂಡಿಸಲ್ಪಟ್ಟಿದೆ. ಎರಡು ದೇಶಗಳು ಬೇರೆ ಬೇರೆ ಸರಕುಗಳ ಉತ್ಪಾದನೆಯಲ್ಲಿ ನಿರಪೇಕ್ಷ ಅನುಕೂಲತೆಯನ್ನು ಹೊಂದಿದ್ದಾಗ ಅಂತರರಾಷ್ಟ್ರೀಯ ವ್ಯಾಪಾರದಿಂದ ಎರಡು ದೇಶಗಳಿಗೂ ಪ್ರಯೋಜನಗಳು ಲಭಿಸುತ್ತವೆ ಎಂಬ ಆ್ಯಡಂ ಸ್ಮಿತ್‌ನ ಅಭಿಪ್ರಾಯವನ್ನು ರಿಕಾರ್ಡೊ ಒಪ್ಪಿಕೊಂಡಿದ್ದಾನೆ. ಆದರೆ ರಿಕಾರ್ಡೊ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಯಾವುದೇ ಒಂದು ದೇಶಕ್ಕೆ ಎರಡೂ ಸರಕುಗಳ ಉತ್ಪಾದನೆಯಲ್ಲಿ ನಿರಪೇಕ್ಷ ಅನುಕೂಲವಿದ್ದಾಗಲೂ ವ್ಯಾಪಾರವು ಪ್ರಯೋಜನಕಾರಿಯಾಗಿರುತ್ತದೆ ಎಂದು ವಾದಿಸಿದ್ದಾನೆ. ಆದರೆ ಇಂತಹ ಸಂದರ್ಭದಲ್ಲಿ ನಿರಪೇಕ್ಷ ಅನುಕೂಲತೆಯು ಎರಡೂ ಸರಕುಗಳಲ್ಲಿ ಭಿನ್ನವಾಗಿರಬೇಕು. ಅಂದರೆ ಒಂದು ವಸ್ತುವಿಗಿಂತ ಇನ್ನೊಂದು ವಸ್ತುವಿನ ಉತ್ಪಾದನೆಯಲ್ಲಿ ಸಾಪೇಕ್ಷವಾಗಿ (ತುಲನಾತ್ಮಕವಾಗಿ) ಹೆಚ್ಚಿನ ಅನುಕೂಲತೆಯಿರಬೇಕು ಎಂದು ಹೇಳಿದ್ದಾನೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಎರಡು ಸರಕುಗಳ ಉತ್ಪಾದನಾ ವೆಚ್ಚದಲ್ಲಿ ಸಾಪೇಕ್ಷ ಭಿನ್ನತೆ ಇದ್ದರೆ ವ್ಯಾಪಾರವು ಅನುಕೂಲಕರವಾಗಿರುತ್ತದೆ.

1817ರಲ್ಲಿ ಪ್ರಕಟಿಸಿದ 'ರಾಜಕೀಯ ಅರ್ಥಶಾಸ್ತ್ರ ಮತ್ತು ತೆರಿಗೆಯ ತತ್ವಗಳು' (The Principles of Political Economy and Taxation) ಎಂಬ ತನ್ನ ಮಹತ್ವದ ಕೃತಿಯಲ್ಲಿ ಡೇವಿಡ್ ರಿಕಾರ್ಡೊ ಪರಿಶುದ್ಧವಾದ ಅಂತರರಾಷ್ಟ್ರೀಯ ವ್ಯಾಪಾರ ಸಿದ್ಧಾಂತವನ್ನು ನಿರೂಪಿಸಿದ್ದಾನೆ. ರಿಕಾರ್ಡೊ ಪ್ರತಿಪಾದಿಸಿರುವ ಅಂತರರಾಷ್ಟ್ರೀಯ ವ್ಯಾಪಾರ ಸಿದ್ಧಾಂತದಲ್ಲಿ ತುಲನಾತ್ಮಕ (ಸಾಪೇಕ್ಷ) ವೆಚ್ಚದ ತತ್ವವೇ ಕೇಂದ್ರಬಿಂದುವಾಗಿದೆ. ತಮಗೆ ವಿಶೇಷ ಅನುಕೂಲತೆ ಇರುವ ಸರಕುಗಳ ಉತ್ಪಾದನೆಯಲ್ಲಿ ವೈಶಿಷ್ಟ್ಯತೆಯನ್ನು ಸಾಧಿಸುವಿಕೆಯು ಎಲ್ಲಾ ದೇಶಗಳಿಗೂ ಪ್ರಯೋಜನಕಾರಿ ಎಂಬ ಭಾವನೆಯು ಇಂದಿಗೂ ಮನ್ನಣೆ ಪಡೆದಿದೆ. ರಿಕಾರ್ಡೊನ ಈ ಕೆಳಗಿನ ಹೇಳಿಕೆಯು ಈ ಅಂಶವನ್ನು ಸ್ಪಷ್ಟಪಡಿಸುತ್ತದೆ. "ಶ್ರಮವನ್ನು ಉತ್ತಮ ರೀತಿಯಲ್ಲಿ ವಿತರಣೆ ಮಾಡುವ ಮೂಲಕ, ಪ್ರತಿಯೊಂದು ದೇಶವೂ ತನ್ನ ನೆಲೆ, ಹವಾಗುಣ, ಅದರ ಪ್ರಾಕೃತಿಕ ಅಥವಾ ಕೃತಕ ಅನುಕೂಲತೆಗಳಿಗೆ ಅನುಗುಣವಾದಂತಹ ಸರಕುಗಳನ್ನು ಉತ್ಪಾದಿಸುವ ಮೂಲಕ, ಮತ್ತು ಆ ಸರಕುಗಳನ್ನು ಇತರ ದೇಶಗಳ

ಸರಕುಗಳೊಡನೆ ವಿನಿಮಯಮಾಡಿಕೊಳ್ಳುವ ಮೂಲಕ ನಮ್ಮ ಸುಖಾನುಭವಗಳನ್ನು ಹೆಚ್ಚಿಸಿಕೊಳ್ಳಬಹುದೆಂಬುದು ಮಾನವಕುಲದ ಸಂತೋಷಕ್ಕೆ ಮುಖ್ಯವಾದುದು."[1]

ತನ್ನದೇ ಆದ ಪ್ರತಿಪಾದನೆಯಿಂದ ಶ್ರಮದ ಮೌಲ್ಯ ಸಿದ್ಧಾಂತದ ಮುಖಾಂತರ ರಿಕಾರ್ಡೊ ಸಾಪೇಕ್ಷ ವೆಚ್ಚ ಅನುಕೂಲತೆಯ ತತ್ವವನ್ನು ಅಭಿವೃದ್ಧಿಪಡಿಸಿದ್ದಾನೆ. ಈ ಸಿದ್ಧಾಂತದ ಪ್ರಕಾರ ಯಾವುದೇ ಸರಕಿನ ಮೌಲ್ಯವು ಅದರ ಶ್ರಮ ವೆಚ್ಚದ ಮೂಲಕ ನಿರ್ಧರಿಸಲ್ಪಡುತ್ತದೆ. ಅಂದರೆ ಪ್ರತಿಯೊಂದು ವಸ್ತುವಿನ ಉತ್ಪಾದನೆಗೂ ಎಷ್ಟು ಶ್ರಮ ತಗುಲಿದೆಯೋ ಅದರ ಮೂಲಕ ಆ ವಸ್ತುವಿನ ಮೌಲ್ಯವನ್ನು ಅಳೆಯಲಾಗುತ್ತದೆ. ರಿಕಾರ್ಡೊನ ಮಾತುಗಳಲ್ಲಿಯೇ ಹೇಳುವುದಾದರೆ "ಶ್ರಮವು ಉತ್ಪಾದಿಸುವ ಸರಕುಗಳ ಸಾಪೇಕ್ಷ ಪರಿಮಾಣವು ಅವುಗಳ ಪ್ರಸ್ತುತ ಅಥವಾ ಭೂತ ತುಲನಾತ್ಮಕ ಮೌಲ್ಯವನ್ನು ನಿರ್ಣಯಿಸುತ್ತದೆ".

ಸಾಪೇಕ್ಷ ವೆಚ್ಚದ ಅನುಕೂಲತೆ ಎಂದರೇನೆಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳುವುದು ಆವಶ್ಯಕ. ಸಾಪೇಕ್ಷ ವೆಚ್ಚದ ಅನುಕೂಲತೆ ಎಂದರೆ ತುಲನಾತ್ಮಕ ವೆಚ್ಚದ ಅಥವಾ ಹೋಲಿಕೆಯಿಂದ ವ್ಯಕ್ತವಾಗುವ ವೆಚ್ಚದ ಅನುಕೂಲತೆ ಎಂದರ್ಥ. ನಿರಪೇಕ್ಷ ಅಥವಾ ಸಂಪೂರ್ಣ ವೆಚ್ಚದ ಅನುಕೂಲತೆಯ ವಿಶ್ಲೇಷಣೆಯಲ್ಲಿ ಯಾವುದೇ ಒಂದು ದೇಶದಲ್ಲಿ ಎರಡು ಸರಕುಗಳ ಉತ್ಪಾದನಾ ವೆಚ್ಚವನ್ನು ಗಂಭೀರವಾಗಿ ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಯಾವ ಸರಕಿನ ಉತ್ಪಾದನೆಯಲ್ಲಿ ಆ ದೇಶವು ಸಂಪೂರ್ಣ ವೆಚ್ಚದ ಅನುಕೂಲತೆಯನ್ನು ಅನುಭವಿಸುತ್ತದೆಯೋ ಆ ನಿರ್ದಿಷ್ಟ ಸರಕಿನ ಉತ್ಪಾದನೆಯಲ್ಲಿ ಮಾತ್ರ ಆ ದೇಶವು ಪ್ರಯತ್ನಗಳನ್ನು ಕೇಂದ್ರೀಕರಿಸುತ್ತದೆ. ಆದರೆ ಸಾಪೇಕ್ಷ ವೆಚ್ಚ ಅನುಕೂಲತೆಯ ವಿಶ್ಲೇಷಣೆಯಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಲಾಗುತ್ತದೆ. ಇಲ್ಲಿ ಯಾವುದೇ ಸರಕಿನ ಉತ್ಪಾದನೆಯಲ್ಲಿ ವೆಚ್ಚದ ಅನುಕೂಲತೆ ಮತ್ತು ಅನಾನುಕೂಲತೆಯನ್ನು ಎರಡೂ ದೇಶಗಳಿಗೆ ಸಂಬಂಧಿಸಿದಂತೆ ಪರಿಗಣಿಸಲಾಗುತ್ತದೆ. ಉದಾಹರಣೆಗೆ, ಒಂದು ದೇಶವು ಎರಡು ಸರಕುಗಳನ್ನು ಇನ್ನೊಂದು ದೇಶಕ್ಕಿಂತ ಕಡಿಮೆ ವೆಚ್ಚದಲ್ಲಿ ಉತ್ಪಾದಿಸಬಲ್ಲದಾಗಿದೆ. ಅಂದ ಮಾತ್ರಕ್ಕೆ ಆ ದೇಶವು ಎರಡೂ ಸರಕುಗಳ ಉತ್ಪಾದನೆಯಲ್ಲಿ ತೊಡಗುವುದಿಲ್ಲ. ಎರಡು ಸರಕುಗಳ ಉತ್ಪಾದನ ವೆಚ್ಚದಲ್ಲಿ ಕಂಡುಬಂದಂತೆ ಯಾವುದರಲ್ಲಿ ಹೆಚ್ಚಿನ ಅನುಕೂಲತೆ ಲಭ್ಯವಿದೆಯೋ, ಅಂದರೆ ಇನ್ನೊಂದು ದೇಶದಲ್ಲಿ ಈ ಸರಕುಗಳ ಉತ್ಪಾದನಾ ವೆಚ್ಚವನ್ನು ಗಮನಿಸಿದಾಗ ಹೆಚ್ಚಿನ ಅನುಕೂಲತೆ ಕಂಡುಬರುತ್ತದೆಯೋ, ಆ ನಿರ್ದಿಷ್ಟ ಸರಕಿನ ಉತ್ಪಾದನೆಯಲ್ಲಿ ಮಾತ್ರ ತನ್ನ ಪ್ರಯತ್ನಗಳನ್ನು ಉಪಯೋಗಿಸುತ್ತದೆ. ಬದಲಾಗಿ, ಇನ್ನೊಂದು ದೇಶಕ್ಕೆ ಎರಡೂ ಸರಕುಗಳ ಉತ್ಪಾದನೆಯಲ್ಲಿ ವೆಚ್ಚವು ಅಧಿಕವಾಗಿರಬಹುದು. ಆದಾಗ್ಯೂ ಅದು ಎರಡು ಸರಕುಗಳ ಉತ್ಪಾದನ ವೆಚ್ಚದಲ್ಲಿ ವ್ಯಕ್ತವಾಗುವಂತೆ ಯಾವುದರಲ್ಲಿ ಅನಾನುಕೂಲತೆ

1. M.C. Vaish and Sudama Singh, International Economics, p. 33.

ಕಡಿಮೆ ಇದೆಯೋ ಆ ನಿರ್ದಿಷ್ಟ ಸರಕನ್ನು ಉತ್ಪಾದಿಸಲು ಮುಂದಾಗುತ್ತದೆ. ಈ ಪ್ರಕಾರ, ಎರಡೂ ದೇಶಗಳು ಒಂದೊಂದು ವಸ್ತುವಿನ ಉತ್ಪಾದನೆಯಲ್ಲಿ ವೈಶಿಷ್ಟ್ಯವನ್ನು ಸಾಧಿಸುತ್ತದೆ.

ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಯಾವ ಅಂಶವು ವಸ್ತುಗಳ ಮೌಲ್ಯವನ್ನು ನಿರ್ಧರಿಸುತ್ತದೆ ಎಂಬ ಪ್ರಶ್ನೆಗೆ ಉತ್ತರಿಸಲು ರಿಕಾರ್ಡೊ ಸಾಪೇಕ್ಷ ವೆಚ್ಚ ಅನುಕೂಲತೆಯ ತತ್ವವನ್ನು ಬಳಸಿಕೊಂಡಿದ್ದಾನೆ. ಈ ತತ್ವದ ಪ್ರಕಾರ ಯಾವುದೊಂದು ದೇಶವು ಯಾವ ಸರಕಿನ ಉತ್ಪಾದನೆಯಲ್ಲಿ ಶ್ರಮದ ವೆಚ್ಚವು ತುಲನಾತ್ಮಕವಾಗಿ ಅತಿ ಕಡಿಮೆ ಇರುವುದೋ ಆ ಸರಕಿನ ಉತ್ಪಾದನೆಯಲ್ಲಿ ವಿಶೇಷತೆಯನ್ನು ಸಾಧಿಸುತ್ತದೆ. ಆ ಪ್ರಕಾರ, ಯಾವುದೇ ದೇಶವು ಇತರ ಸರಕುಗಳಿಗೆ ಹೋಲಿಸಿದಂತೆ ಯಾವ ಸರಕಿನ ಉತ್ಪಾದನೆಯಲ್ಲಿ ತುಲನಾತ್ಮಕ ವೆಚ್ಚ ಅನುಕೂಲತೆ ಅಥವಾ ಶ್ರೇಷ್ಠತೆಯನ್ನು ಹೊಂದಿದೆಯೋ ಆ ಸರಕನ್ನು ಉತ್ಪಾದಿಸಿ ರಫ್ತು ಮಾಡುತ್ತದೆ ಮತ್ತು ಯಾವ ಸರಕಿನಲ್ಲಿ ಅದರ ವೆಚ್ಚ ಅನುಕೂಲತೆಯು ಕನಿಷ್ಠ ವಾಗಿದೆಯೋ ಅಥವಾ ಯಾವ ಸರಕಿನಲ್ಲಿ ತುಲನಾತ್ಮಕ ವೆಚ್ಚ ಅನಾನುಕೂಲತೆ ಇದೆಯೋ ಆ ಸರಕನ್ನು ಆಮದು ಮಾಡಿಕೊಳ್ಳುತ್ತದೆ.

ಸಾಪೇಕ್ಷ ವೆಚ್ಚದ ತತ್ವದ ಪ್ರಕಾರ, ವ್ಯಾಪಾರವನ್ನು ಮುಕ್ತವಾಗಿ ನೆರವೇರಲು ಬಿಟ್ಟರೆ ಪ್ರತಿಯೊಂದು ದೇಶವೂ ದೀರ್ಘಾವಧಿಯಲ್ಲಿ ಯಾವ ಸರಕುಗಳ ಉತ್ಪಾದನೆಯಲ್ಲಿ ನೈಜ ವೆಚ್ಚಗಳ ರೂಪದಲ್ಲಿ ತುಲನಾತ್ಮಕ ಅನುಕೂಲತೆ ದೊರೆಯುತ್ತದೆಯೋ ಆ ಸರಕುಗಳ ಉತ್ಪಾದನೆ ಮತ್ತು ರಫ್ತಿನಲ್ಲಿ ಮಾತ್ರ ವಿಶೇಷತೆಯನ್ನು ಸಾಧಿಸುತ್ತದೆ. ಮತ್ತು ಯಾವ ಸರಕುಗಳ ಉತ್ಪಾದನೆಯಲ್ಲಿ ನೈಜ ವೆಚ್ಚಗಳ ರೂಪದಲ್ಲಿ ತುಲನಾತ್ಮಕ ಅನಾನುಕೂಲತೆ ಇರುತ್ತದೆಯೋ ಆ ಸರಕುಗಳನ್ನು ಆಮದು ಮಾಡಿಕೊಳ್ಳಲು ತೊಡಗುತ್ತದೆ. ವ್ಯಾಪಾರದಲ್ಲಿ ಭಾಗಿಗಳಾಗುವ ಎಲ್ಲಾ ದೇಶಗಳಿಗೂ ಈ ವಿಶೇಷತೆಯು ಪರಸ್ಪರ ಪ್ರಯೋಜನವನ್ನು ದೊರಕಿಸಿಕೊಡುತ್ತದೆ.

ಸಾಪೇಕ್ಷ ವೆಚ್ಚದ ಸಿದ್ಧಾಂತದ ಕಲ್ಪನೆಗಳು
(Assumptions of Comparative Cost Theory)

ರಿಕಾರ್ಡೊನ ಸಾಪೇಕ್ಷ ವೆಚ್ಚದ ಅಂತರರಾಷ್ಟ್ರೀಯ ವ್ಯಾಪಾರ ಸಿದ್ಧಾಂತವು ಈ ಕೆಳಗೆ ನಮೂದಿಸಿರುವ ಕಲ್ಪನೆಗಳ ಮೇಲೆ ನಿಂತಿದೆ.

1. **ಶ್ರಮವು ಮಾತ್ರ ಉತ್ಪಾದನಾಂಗ (Only Labour is the Factor of Production):** ಶ್ರಮ ಒಂದೇ ಉತ್ಪಾದನಾಂಗವಾಗಿರುತ್ತದೆ. ಆದ್ದರಿಂದ ಉತ್ಪಾದನಾ ವೆಚ್ಚವೆಂದರೆ ಶ್ರಮದ ವೆಚ್ಚ ಮಾತ್ರ ಆಗಿರುತ್ತದೆ. ಶ್ರಮದ ವೆಚ್ಚವನ್ನು ದಿನಗಳಲ್ಲಿ ಅಥವಾ ನಿರ್ದಿಷ್ಟ ಘಟಕಗಳ ರೂಪದಲ್ಲಿ ಅಳೆಯಲಾಗುತ್ತದೆ. ಆದ್ದರಿಂದ ಈ ಸಿದ್ಧಾಂತವು ಶ್ರಮದ ಮೌಲ್ಯ ಸಿದ್ಧಾಂತವನ್ನು ಆಧರಿಸಿದೆ.

2. **ಎರಡು ದೇಶಗಳ ನಡುವೆ ಎರಡು ಸರಕುಗಳ ವಿನಿಮಯ (Exchange of Two Commodities between Two Countries):** ಸಾಪೇಕ್ಷ ವೆಚ್ಚದ ಸಿದ್ಧಾಂತವು ಎರಡು ದೇಶಗಳ ಮತ್ತು ಎರಡು ಸರಕುಗಳ ಮಾದರಿಯಾಗಿದೆ. ಅಂದರೆ ಯಾವುದೇ ಸಮಯದಲ್ಲಿ ಎರಡು ದೇಶಗಳ ನಡುವೆ ಎರಡು ಸರಕುಗಳ ವಿನಿಮಯ ನಡೆಯುತ್ತಿರುತ್ತದೆ.

3. **ಉತ್ಪಾದನಾಂಗಗಳ ಚಲನಶೀಲತೆ (Mobility of Factors of Production):** ಉತ್ಪಾದನಾಂಗಗಳು ದೇಶದ ಒಳಗಡೆ ಚಲಿಸುತ್ತವೆ ಮತ್ತು ಅಂತರರಾಷ್ಟ್ರೀಯವಾಗಿ ಸಂಪೂರ್ಣವಾಗಿ ಚಲನರಹಿತತೆಯ ಗುಣವನ್ನು ಹೊಂದಿರುತ್ತವೆ.

4. **ಶ್ರಮದ ಏಕರೂಪತೆ (Homogeneity of Labour):** ಶ್ರಮವು ಉತ್ಪಾದನ ದಕ್ಷತೆಯಲ್ಲಿ ಏಕರೂಪತೆಯನ್ನು ಪಡೆದಿರುತ್ತದೆ. ಅಂದರೆ ಶ್ರಮದ ಎಲ್ಲಾ ಘಟಕಗಳು ಯಾವುದೇ ಉತ್ಪಾದನೆಯಲ್ಲಿ ಒಂದೇ ಪ್ರಮಾಣದ ದಕ್ಷತೆಯನ್ನು ಪಡೆದಿರುತ್ತವೆ.

5. **ಮುಕ್ತ ವ್ಯಾಪಾರ (Free Trade):** ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಯಾವುದೇ ರೀತಿಯ ನಿರ್ಬಂಧಗಳಿರುವುದಿಲ್ಲ. ಅಂದರೆ ವ್ಯಾಪಾರವು ಮುಕ್ತವಾಗಿರುತ್ತದೆ.

6. **ಸಾಗಣೆ ವೆಚ್ಚದ ಪರಿಗಣನೆ ಇರುವುದಿಲ್ಲ (No Consideration of Transport Cost):** ಈ ಸಿದ್ಧಾಂತವು ಸಾಗಣೆ ವೆಚ್ಚವನ್ನು ಗಣನೆಗೆ ತೆಗೆದುಕೊಂಡಿರುವುದಿಲ್ಲ. ಉತ್ಪಾದನ ವೆಚ್ಚವೇ ಒಟ್ಟು ವೆಚ್ಚವಾಗಿರುತ್ತದೆ.

7. **ಸ್ಥಿರ ವೆಚ್ಚದ ನಿಯಮ (The Law of Constant Cost) :** ಉತ್ಪಾದನೆಯಲ್ಲಿ ಸ್ಥಿರ ವೆಚ್ಚದ ನಿಯಮವು ಆಚರಣೆಯಲ್ಲಿರುತ್ತದೆ. ಆದ್ದರಿಂದ ಸರಾಸರಿ ವೆಚ್ಚವು ಸದಾ ಸ್ಥಿರವಾಗಿರುತ್ತದೆ.

8. **ಒಂದೇ ನಾಣ್ಯ ಪದ್ಧತಿ (The Same Currency System):** ವ್ಯಾಪಾರದಲ್ಲಿ ನಿರತವಾಗಿರುವ ಎರಡೂ ದೇಶಗಳಲ್ಲಿ ಒಂದೇ ನಾಣ್ಯ ಪದ್ಧತಿ ಅಸ್ತಿತ್ವ ದಲ್ಲಿರುತ್ತದೆ.

9. **ಹಣದ ಪರಿಮಾಣ ಸಿದ್ಧಾಂತ (Quantity Theory of Money):** ಸಾಪೇಕ್ಷ ವೆಚ್ಚದ ಸಿದ್ಧಾಂತವು ಹಣದ ಪರಿಮಾಣ ಸಿದ್ಧಾಂತವನ್ನು ಅವಲಂಬಿಸಿದೆ. ವ್ಯಾಪಾರದಲ್ಲಿ ಒಂದು ದೇಶವು ತಾನು ಪಾವತಿ ಮಾಡುವ ಹಣಕ್ಕಿಂತಲೂ ಗಳಿಸುವ ಹಣವು ಹೆಚ್ಚಿನ ಮೊತ್ತದ್ದಾಗಿದ್ದರೆ ಹಣದ ಪೂರೈಕೆಯ ಹೆಚ್ಚಳದಿಂದ ಬೆಲೆಗಳು ಏರುತ್ತವೆ ಎಂಬ ಕಲ್ಪನೆಯನ್ನು ಈ ಸಿದ್ಧಾಂತವು ಒಪ್ಪಿಕೊಳ್ಳುತ್ತದೆ.

10. ಸ್ಥಿರ ತಂತ್ರಜ್ಞಾನ (Constant Technology): ಉತ್ಪಾದನ ಪ್ರಕ್ರಿಯೆಯಲ್ಲಿ ತಂತ್ರಜ್ಞಾನವು ಸ್ಥಿರವಾಗಿರುತ್ತದೆ ಎಂಬುದು ಸಾಪೇಕ್ಷ ವೆಚ್ಚ ಸಿದ್ಧಾಂತದ ಇನ್ನೊಂದು ಕಲ್ಪನೆಯಾಗಿದೆ. ಅಂದರೆ ಉತ್ಪಾದನ ಪ್ರಕ್ರಿಯೆಯಲ್ಲಿ ತಂತ್ರಜ್ಞಾನ ಸ್ಥಿತಿಯಲ್ಲಿ ಯಾವುದೇ ಬದಲಾವಣೆಗಳು ಜರುಗುವುದಿಲ್ಲ.

11. ಸಾಟಿ ಪದ್ಧತಿ (Barter System): ಎರಡು ದೇಶಗಳ ನಡುವೆ ಸಾಟಿ ಪದ್ಧತಿಯ ಆಧಾರದಲ್ಲಿ ವ್ಯಾಪಾರವು ನೆರವೇರುತ್ತದೆ. ಅಂದರೆ ಸರಕುಗಳನ್ನು ಸರಕುಗಳಿಗೆ ವಿನಿಮಯ ಮಾಡಿಕೊಳ್ಳುವ ಪದ್ಧತಿ ಅಸ್ತಿತ್ವದಲ್ಲಿರುತ್ತದೆ.

12. ಉತ್ಪಾದನಾಂಗಗಳ ಪೂರ್ಣ ಬಳಕೆ (Full Utilistation of Factors of Production): ಎರಡೂ ದೇಶಗಳಲ್ಲಿ ಎಲ್ಲಾ ಉತ್ಪಾದನಾಂಗಗಳನ್ನು ಪೂರ್ಣವಾಗಿ ಉತ್ಪಾದನೆಯಲ್ಲಿ ಬಳಸಿಕೊಳ್ಳಲಾಗಿರುತ್ತದೆ.

13. ಪರಿಪೂರ್ಣ ಅಂತರರಾಷ್ಟ್ರೀಯ ಮಾರುಕಟ್ಟೆ (Perfect International Market): ಅಂತರರಾಷ್ಟ್ರೀಯ ಮಾರುಕಟ್ಟೆಯು ಪರಿಪೂರ್ಣವಾಗಿರುತ್ತದೆ ಮತ್ತು ಈ ಕಾರಣದಿಂದ ಎರಡೂ ಸರಕುಗಳಿಗೆ ವಿನಿಮಯ ಅನುಪಾತವು ಒಂದೇ ಆಗಿರುತ್ತದೆ.

14. ಶ್ರಮದ ಪೂರೈಕೆಯಲ್ಲಿ ಸ್ಥಿರತೆ (Constancy in Labour Supply): ಉತ್ಪಾದನ ಪ್ರಕ್ರಿಯೆಯಲ್ಲಿ ಶ್ರಮದ ಪೂರೈಕೆಯು ಬದಲಾಗದೆ ಸ್ಥಿರವಾಗಿ ಉಳಿಯುತ್ತದೆ. ಅಂದರೆ ಶ್ರಮವು ನಿರಂತರವಾಗಿ ಪೂರೈಕೆಯಾಗುತ್ತಿದ್ದು ಅದರ ಕೊರತೆ ಸಂಭವಿಸುವುದಿಲ್ಲ.

15. ಸಮಾನ ಅಭಿರುಚಿಗಳು (Similar Tastes): ಎರಡೂ ದೇಶಗಳಲ್ಲಿ ಅಭಿರುಚಿಗಳು ಒಂದೇ ಆಗಿರುತ್ತವೆ. ಅಂದರೆ ಸರಕುಗಳ ಬಗೆಗೆ ಜನರ ಅಭಿರುಚಿಗಳು ಬದಲಾಗದೆ ಉಳಿಯುತ್ತವೆ.

ಸಾಪೇಕ್ಷ ವೆಚ್ಚದ ಸಿದ್ಧಾಂತವನ್ನು ಒಂದು ಕಾಲ್ಪನಿಕ ಉದಾಹರಣೆಯ ಮೂಲಕ ಈ ಕೆಳಗಿನಂತೆ ವಿವರಿಸಬಹುದು.

ಭಾರತದಲ್ಲಿ ಒಂದು ಕ್ವಿಂಟಾಲ್ ಗೋಧಿಯನ್ನು ಉತ್ಪಾದಿಸಲು 8 ದಿನಗಳ ಶ್ರಮ ಆವಶ್ಯಕವಾಗಿದೆ ಮತ್ತು ಒಂದು ಕ್ವಿಂಟಾಲ್ ಗೋಧಿಯನ್ನು ಉತ್ಪಾದಿಸಲು 6 ದಿನಗಳ ಶ್ರಮ ಆವಶ್ಯಕವಾಗಿದೆ.

ಪಾಕಿಸ್ತಾನದಲ್ಲಿ 1 ಕ್ವಿಂಟಾಲ್ ಹತ್ತಿಯನ್ನು ಉತ್ಪಾದಿಸಲು 8 ದಿನಗಳ ಶ್ರಮ ಆವಶ್ಯಕವಾಗಿದೆ ಮತ್ತು ಒಂದು ಕ್ವಿಂಟಾಲ್ ಗೋಧಿಯನ್ನು ಉತ್ಪಾದಿಸಲು 6 ದಿನಗಳ ಶ್ರಮ ಆವಶ್ಯಕವಾಗಿದೆ.

ಈ ಉದಾಹರಣೆಯಲ್ಲಿ ಪಾಕಿಸ್ತಾನವು ಗೋಧಿ ಮತ್ತು ಹತ್ತಿ ಎರಡು ಸರಕುಗಳನ್ನೂ ಭಾರತಕ್ಕಿಂತ ಕಡಿಮೆ ವೆಚ್ಚದಲ್ಲಿ ಉತ್ಪಾದಿಸಲು ಶಕ್ತವಾಗಿದೆ. ಆದರೆ ಸಾಪೇಕ್ಷ ಅನುಕೂಲತೆಯು ಗೋಧಿಯ ಉತ್ಪಾದನೆಗಿಂತಲೂ ಹತ್ತಿಯ ಉತ್ಪಾದನೆಯಲ್ಲಿ ಹೆಚ್ಚಾಗಿದೆ. ಪಾಕಿಸ್ತಾನದೊಡನೆ ಹೋಲಿಸಿದಾಗ ಭಾರತವು ಎರಡೂ ವಸ್ತುಗಳ ಉತ್ಪಾದನೆಯಲ್ಲಿ ಅನಾನುಕೂಲಕರ ಪರಿಸ್ಥಿತಿ ಯಲ್ಲಿದೆ. ಆದರೆ ಅನಾನುಕೂಲತೆಯು ಹತ್ತಿಯ ಉತ್ಪಾದನೆಗಿಂತ ಗೋಧಿಯ ಉತ್ಪಾದನೆಯಲ್ಲಿ ಕಡಿಮೆ ಇದೆ.


ಎರಡು ದೇಶಗಳಲ್ಲಿ ವೆಚ್ಚದ ಅನುಪಾತವು ಕೆಳಗಿನಂತಿರುತ್ತದೆ.

ಭಾರತದಲ್ಲಿ 1 ಕ್ವಿಂಟಾಲ್ ಗೋಧಿ = 1/2 ಕ್ವಿಂಟಾಲ್ ಹತ್ತಿ 2:1

ಪಾಕಿಸ್ತಾನದಲ್ಲಿ 1 ಕ್ವಿಂಟಾಲ್ ಗೋಧಿ = 6/8 ಅಥವಾ 0.75 ಕ್ವಿಂಟಾಲ್ ಹತ್ತಿ 1:3/4 ; 2:1.5

ಪಾಕಿಸ್ತಾನವು ಗೋಧಿ ಮತ್ತು ಹತ್ತಿ ಎರಡನ್ನೂ ಭಾರತಕ್ಕಿಂತ ಕಡಿಮೆ ವೆಚ್ಚದಲ್ಲಿ ಉತ್ಪಾದಿಸ ಬಲ್ಲದಾಗಿದೆ. ಅಂತರರಾಷ್ಟ್ರೀಯ ವ್ಯಾಪಾರವು ಇಲ್ಲದಿದ್ದ ಪಕ್ಷದಲ್ಲಿ ಅದು ಎರಡೂ ಸರಕುಗಳನ್ನು ಉತ್ಪಾದಿಸುತ್ತಿತ್ತು. ಉತ್ಪಾದನಾ ವೆಚ್ಚದ ದೃಷ್ಟಿಯಿಂದ ಎರಡೂ ಸರಕುಗಳ ಉತ್ಪಾದನೆಯಲ್ಲಿ ಪಾಕಿಸ್ತಾನಕ್ಕೆ ಭಾರತಕ್ಕಿಂತ ಹೆಚ್ಚಿನ ಅನುಕೂಲತೆ ಇರುವುದಾದರೂ ಹತ್ತಿಯ ಉತ್ಪಾದನೆಯಲ್ಲಿ ಸಾಪೇಕ್ಷ ಅನುಕೂಲತೆ ಹೆಚ್ಚಾಗಿದೆ. ಆದ್ದರಿಂದ ವ್ಯಾಪಾರವೇರ್ಪಡುವ ದೃಷ್ಟಿಯಿಂದ ಪಾಕಿಸ್ತಾನವು ಹತ್ತಿಯ ಉತ್ಪಾದನೆಯಲ್ಲಿ ಮಾತ್ರ ತನ್ನ ಪ್ರಯತ್ನಗಳನ್ನು ಕೇಂದ್ರೀಕರಿಸಿ ಗೋಧಿಯ ಉತ್ಪಾದನೆ ಯನ್ನು ಭಾರತಕ್ಕೆ ಬಿಟ್ಟುಕೊಡುತ್ತದೆ. ಈ ಮೊದಲೇ ತಿಳಿಸಿದಂತೆ ಭಾರತಕ್ಕೆ ಎರಡೂ ಸರಕುಗಳ ಉತ್ಪಾದನೆಯಲ್ಲಿ ಸಾಪೇಕ್ಷ ಅನಾನುಕೂಲತೆಯಿದೆ. ಆದರೆ ಈ ಅನಾನುಕೂಲತೆಯು ಗೋಧಿಯ ಉತ್ಪಾದನೆಯಲ್ಲಿ ಕಡಿಮೆ ಇರುವುದರಿಂದ ಅದು ಗೋಧಿಯನ್ನು ಉತ್ಪಾದಿಸಲು ಒಪ್ಪಿಕೊಳ್ಳುತ್ತದೆ. ಈಗ ಭಾರತವು ಗೋಧಿಯ ಉತ್ಪಾದನೆಯಲ್ಲಿಯೂ ಮತ್ತು ಪಾಕಿಸ್ತಾನವು ಹತ್ತಿಯ ಉತ್ಪಾದನೆಯಲ್ಲಿಯೂ ವೈಶಿಷ್ಟತೆ ಸಾದಿಸುತ್ತವೆ.

ಸಾಪೇಕ್ಷ ವೆಚ್ಚದ ಅನುಕೂಲತೆಯ ಆಧಾರದಲ್ಲಿ ಒಂದು ದೇಶವು ನಿರ್ದಿಷ್ಟ ಸರಕಿನ ಉತ್ಪಾದನೆಯಲ್ಲಿ ವೈಶಿಷ್ಟ್ಯತೆಯನ್ನು ಸಾಧಿಸುವಿಕೆಯೇ ಅಂತರರಾಷ್ಟ್ರೀಯ ವ್ಯಾಪಾರದ ಉದ್ಭವಕ್ಕೆ ಕಾರಣ ಎಂದು ರಿಕಾರ್ಡೊ ವಾದಿಸಿದ್ದಾನೆ. ವ್ಯಾಪಾರದ ಹೊರತು ಎರಡು ದೇಶಗಳು ಎರಡು ಸರಕು ಗಳನ್ನು ಉತ್ಪಾದಿಸಲು ತೊಡಗಿ ವೆಚ್ಚದ ಅನಾನುಕೂಲತೆಯನ್ನು ಅನುಭವಿಸುತ್ತಿದ್ದವು. ರಿಕಾರ್ಡೊನ ಸಾಪೇಕ್ಷ ವೆಚ್ಚದ ಸಿದ್ಧಾಂತವನ್ನು ಕೆಳಗಿನ ಚಿತ್ರದ ಸಹಾಯದಿಂದ ಅರ್ಥಮಾಡಿಕೊಳ್ಳಬಹುದು.



ರೇಖಾ ಚಿತ್ರ 1.1

ರೇಖಾಚಿತ್ರ 1.1 ರಲ್ಲಿ PQ ಪಾಕಿಸ್ತಾನದ ಉತ್ಪಾದನಾ ಸಾಧ್ಯತಾ ರೇಖೆ ಮತ್ತು RS ಭಾರತದ ಉತ್ಪಾದನಾ ಸಾಧ್ಯತಾ ರೇಖೆಗಳಾಗಿವೆ. ಪಾಕಿಸ್ತಾನವು ಹತ್ತಿ ಮತ್ತು ಗೋಧಿ ಎರಡೂ ಸರಕುಗಳ ಉತ್ಪಾದನೆಯಲ್ಲಿ ಭಾರತಕ್ಕಿಂತ ಹೆಚ್ಚಿನ ನಿರಪೇಕ್ಷ ಅನುಕೂಲತೆಯನ್ನು ಹೊಂದಿದೆ. ಅದು OQ ಪ್ರಮಾಣದ ಹತ್ತಿಯನ್ನು ಅಥವಾ OP ಪ್ರಮಾಣದ ಗೋಧಿಯನ್ನು ಉತ್ಪಾದಿಸಬಲ್ಲದಾಗಿದೆ. ಆದರೆ ಭಾರತವು OS ಪ್ರಮಾಣದ ಹತ್ತಿಯನ್ನು ಅಥವಾ OR ಪ್ರಮಾಣದ ಗೋಧಿಯನ್ನು ಉತ್ಪಾದಿಸಬಲ್ಲದು. RT ರೇಖೆಯು ಪಾಕಿಸ್ತಾನವು ಹತ್ತಿಯ ಉತ್ಪಾದನೆಯಲ್ಲಿ ಹೊಂದಿರುವ ಸಾಪೇಕ್ಷ ಅನುಕೂಲತೆಯನ್ನು ತೋರಿಸುತ್ತದೆ. ಈ ರೇಖೆಯು PQ ರೇಖೆಗೆ ಸಮಾನಾಂತರವಾಗಿದೆ. ಪಾಕಿಸ್ತಾನವು OR ಪ್ರಮಾಣದ ಗೋಧಿಯ ಉತ್ಪಾದನೆಯನ್ನು ತ್ಯಜಿಸಿದರೆ OT ಪ್ರಮಾಣದ ಹತ್ತಿಯನ್ನು ಉತ್ಪಾದಿಸಬಲ್ಲದು. ಇದು ಭಾರತದ OS ಪ್ರಮಾಣದ ಹತ್ತಿಯ ಉತ್ಪಾದನೆಗಿಂತ ಅಧಿಕವಾಗಿದೆ. ಭಾರತವು OR ಪ್ರಮಾಣದ ಗೋಧಿಯ ಉತ್ಪಾದನೆಯಲ್ಲಿ ಕನಿಷ್ಠ ಸಾಪೇಕ್ಷ ಅನಾನುಕೂಲತೆಯನ್ನು ಹೊಂದಿದೆ. ಆದ್ದರಿಂದ ಪಾಕಿಸ್ತಾನವು OT ಪ್ರಮಾಣದ ಹತ್ತಿಯನ್ನು ಉತ್ಪಾದಿಸಿ ರಫ್ತು ಮಾಡುತ್ತದೆ ಮತ್ತು ಭಾರತವು OR ಪ್ರಮಾಣದ ಗೋಧಿಯನ್ನು ಉತ್ಪಾದಿಸಿ ರಫ್ತು ಮಾಡುತ್ತದೆ. ಹೀಗೆ ಎರಡೂ ದೇಶಗಳ ನಡುವೆ ಸರಕುಗಳ ವಿನಿಮಯವು ನಡೆಯುತ್ತದೆ.

ಪ್ರಮುಖ ಪ್ರತಿಪಾದನೆಗಳು
(Main Propositions)

ಸಾಪೇಕ್ಷ ವೆಚ್ಚದ ಸಿದ್ಧಾಂತವು ಸಂಪ್ರದಾಯ ಪಂಥದ ಅಂತರರಾಷ್ಟ್ರೀಯ ವ್ಯಾಪಾರ ಸಿದ್ಧಾಂತವೆಂದೇ ಪ್ರಸಿದ್ಧವಾಗಿದೆ. ಈ ಸಿದ್ಧಾಂತವು ಪ್ರಸ್ತುತಪಡಿಸುವ ಮುಖ್ಯ ಅಂಶಗಳನ್ನು ಕೆಳಗಿನಂತೆ ನಮೂದಿಸಬಹುದು.

1. ವ್ಯಾಪಾರದ ಉದ್ಭವಕ್ಕೆ ಉತ್ಪಾದನ ವೆಚ್ಚದಲ್ಲಿನ ವ್ಯತ್ಯಾಸಗಳೇ ಆಧಾರ (Differences in Cost of Production are the Basis for Birth of Trade): ಎರಡು ದೇಶಗಳಲ್ಲಿ ಉತ್ಪಾದನ ವೆಚ್ಚದ ಅನುಪಾತಗಳು (ಪ್ರಮಾಣಗಳು) ಒಂದೇ ಆಗಿದ್ದರೆ ವ್ಯಾಪಾರವು ನೆರವೇರುವುದೇ ಇಲ್ಲ. ಏಕೆಂದರೆ ವ್ಯಾಪಾರದ ಉದ್ಭವಕ್ಕೆ ಉತ್ಪಾದನ ವೆಚ್ಚದಲ್ಲಿನ ವ್ಯತ್ಯಾಸಗಳೇ ಆಧಾರ.

2. ಸಂಪೂರ್ಣ ವೆಚ್ಚದ ವ್ಯತ್ಯಾಸ ಆವಶ್ಯಕವಲ್ಲ (Absolute Cost Difference is not Necessary): ಸಂಪೂರ್ಣ (ನಿರಪೇಕ್ಷ) ವೆಚ್ಚದ ವ್ಯತ್ಯಾಸವಿರುವಾಗಲೂ ಅಂತರರಾಷ್ಟ್ರೀಯ ವ್ಯಾಪಾರವು ನಡೆಯುತ್ತದೆ. ಆದರೆ ಸಂಪೂರ್ಣ ವೆಚ್ಚದ ವ್ಯತ್ಯಾಸವನ್ನು ಹೊಂದುವುದು ಸುಲಭವೂ ಅಲ್ಲ, ಆವಶ್ಯಕವೂ ಅಲ್ಲ.

3. ಸಾಪೇಕ್ಷ ವೆಚ್ಚ ಭಿನ್ನತೆಗಳು (Comparative Cost Differences): ವ್ಯಾಪಾರವು ಏರ್ಪಡಲು ಸಾಪೇಕ್ಷ ವೆಚ್ಚದ ಭಿನ್ನತೆಗಳು ಇದ್ದರೆ ಸಾಕು. ಅಂದರೆ ಒಂದು ದೇಶವು ಒಂದು ನಿರ್ದಿಷ್ಟ ವಸ್ತುವಿನ ಉತ್ಪಾದನೆಯಲ್ಲಿ ಇನ್ನೊಂದು ದೇಶಕ್ಕಿಂತ ಸಾಪೇಕ್ಷ ಅನುಕೂಲತೆಯನ್ನು ಹೊಂದಿರಬೇಕು ಮತ್ತು ಇನ್ನೊಂದು ದೇಶವು ಬೇರೊಂದು ಸರಕಿನ ಉತ್ಪಾದನೆಯಲ್ಲಿ ಸಾಪೇಕ್ಷ ಅನುಕೂಲತೆಯನ್ನು ಹೊಂದಿರಬೇಕು.

4. ಉತ್ಪಾದನೆಯಲ್ಲಿ ವೈಶಿಷ್ಟ್ಯ ಸಾಧನೆಗೆ ವೆಚ್ಚ ಅನುಕೂಲತೆ (Cost Advantage for Specialisation in Production): ಅಂತರರಾಷ್ಟ್ರೀಯ ವ್ಯಾಪಾರವು ಪ್ರಾರಂಭವಾದ ಬಳಿಕ ಪ್ರತಿಯೊಂದು ದೇಶವೂ ತನಗೆ ಉತ್ಪಾದನ ವೆಚ್ಚದಲ್ಲಿ ಹೆಚ್ಚಿನ ಅನುಕೂಲತೆ ಇರುವ ಸರಕಿನ ಉತ್ಪಾದನೆಯಲ್ಲಿ ವೈಶಿಷ್ಟ್ಯವನ್ನು ಸಾಧಿಸುತ್ತದೆ. ವೆಚ್ಚದ ಅನುಕೂಲತೆ ಅಧಿಕವಾಗಿರುವ ಸರಕನ್ನು ಅದು ಉತ್ಪಾದಿಸಿ ರಫ್ತು ಮಾಡುತ್ತದೆ.

ಅನುಕೂಲತೆಗಳು
(Advantages)

ರಿಕಾರ್ಡೊನ ಸಾಪೇಕ್ಷ ವೆಚ್ಚದ ಸಿದ್ಧಾಂತದ ಪ್ರಕಾರ ಅಂತರರಾಷ್ಟ್ರೀಯ ವ್ಯಾಪಾರವು ಕೆಳಗಿನ ಪ್ರಯೋಜನಗಳನ್ನು ದೊರಕಿಸಿಕೊಡುತ್ತದೆ.

1. ವೈಶಿಷ್ಟ್ಯತೆಯ ಸಾಧನೆ (Achievement of Specialisation): ಅಂತರ

ರಾಷ್ಟ್ರೀಯ ವ್ಯಾಪಾರವು ಉತ್ಪಾದನೆಯಲ್ಲಿ ವೈಶಿಷ್ಟ್ಯತೆಯ ಸಾಧನೆಗೆ ಅವಕಾಶವನ್ನು ಕಲ್ಪಿಸುತ್ತದೆ. ಅಂದರೆ ಪ್ರತಿಯೊಂದು ದೇಶವೂ ತಾನು ಸಾಪೇಕ್ಷವಾಗಿ ಕಡಿಮೆ ವೆಚ್ಚದಲ್ಲಿ ಉತ್ಪಾದಿಸಬಲ್ಲ ಸರಕಿನ ಉತ್ಪಾದನೆಯಲ್ಲಿ ಮಾತ್ರ ತನ್ನ ಪ್ರಯತ್ನಗಳನ್ನು ಕೇಂದ್ರೀಕರಿಸುತ್ತದೆ. ಈ ಪರಿಣಾಮವಾಗಿ ಅದು ಒಂದೇ ಸರಕನ್ನು ಕಡಿಮೆ ವೆಚ್ಚದಲ್ಲಿ ಅಧಿಕವಾಗಿ ಉತ್ಪಾದಿಸಲು ಸಾಧ್ಯವಾಗುತ್ತದೆ.

2. ಬೃಹತ್ ಪ್ರಮಾಣದ ಉತ್ಪಾದನೆ (Large Scale Production): ದೇಶಗಳ ನಡುವಿನ ಮುಕ್ತ ವ್ಯಾಪಾರವು ಬೃಹತ್ ಪ್ರಮಾಣದ ಉತ್ಪಾದನೆಗೆ ದಾರಿ ಮಾಡಿಕೊಡುತ್ತದೆ. ಯಾವುದೇ ದೇಶವು ವಿಭಿನ್ನ ಸರಕುಗಳ ಉತ್ಪಾದನೆಯಲ್ಲಿ ತೊಡಗದೆ ಒಂದೇ ವಸ್ತುವಿನ ಉತ್ಪಾದನೆಯಲ್ಲಿ ವೈಶಿಷ್ಟ್ಯತೆಯನ್ನು ಸಾಧಿಸುವುದರಿಂದ ಶ್ರಮ ವಿಭಜನೆಯ ಅನುಕೂಲತೆಯಿಂದ ಅದು ಅತಿ ದೊಡ್ಡ ಪ್ರಮಾಣದಲ್ಲಿ ಉತ್ಪಾದನೆಯನ್ನು ನೆರವೇರಿಸಬಲ್ಲದಾಗಿರುತ್ತದೆ.

3. ಸಂಪನ್ಮೂಲಗಳ ದಕ್ಷ ಹಂಚಿಕೆ (Efficient Allocation of Resources): ಅಂತರರಾಷ್ಟ್ರೀಯ ವ್ಯಾಪಾರವು ಸಂಪನ್ಮೂಲಗಳ ದಕ್ಷ ಹಂಚಿಕೆಗೆ ಸಾಧ್ಯತೆಯನ್ನು ಕಲ್ಪಿಸುತ್ತದೆ. ಪ್ರತಿಯೊಂದು ದೇಶವೂ ತಾನು ಅತಿ ಕಡಿಮೆ ವೆಚ್ಚದಲ್ಲಿ ಹಾಗೂ ಗರಿಷ್ಠ ಅನುಕೂಲತೆಯಿಂದ ಉತ್ಪಾದಿಸಬಹುದಾದ ಸರಕಿನ ಉತ್ಪಾದನೆಯಲ್ಲಿ ತೊಡಗುವುದರಿಂದ ಆ ಸರಕಿನ ಉತ್ಪಾದನೆಗೆ ಸೂಕ್ತವಾದ ಸಂಪನ್ಮೂಲವನ್ನೇ ಬಳಸಿಕೊಳ್ಳುತ್ತದೆ. ಇದರಿಂದ ಸಂಪನ್ಮೂಲಗಳು ದಕ್ಷವಾಗಿ ಹಂಚಿಕೆಯಾಗಿ ಸದುಪಯೋಗಗೊಳ್ಳುತ್ತವೆ.

4. ಗರಿಷ್ಠ ಉತ್ಪಾದನೆ (Maximum Production): ಅಂತರರಾಷ್ಟ್ರೀಯ ವ್ಯಾಪಾರವು ಗರಿಷ್ಠ ಉತ್ಪಾದನೆಗೆ ಅವಕಾಶಗಳನ್ನು ಕಲ್ಪಿಸುತ್ತದೆ. ಯಾವ ಸರಕಿನ ಉತ್ಪಾದನೆಯಲ್ಲಿ ಅನುಕೂಲತೆ ಇದೆಯೋ ಆ ಸರಕಿನ ಉತ್ಪಾದನೆಯಲ್ಲಿ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡಾಗ ಗರಿಷ್ಠ ಉತ್ಪಾದನೆ ಸಾಧ್ಯವಾಗುತ್ತದೆ.

5. ವೈಶಿಷ್ಟ್ಯತೆಯ ಸಾಧನೆ (Achievement of Specialisation): ಮುಕ್ತ ವ್ಯಾಪಾರವು ಅಸ್ತಿತ್ವದಲ್ಲಿರುವಾಗ ವ್ಯಾಪಾರದಲ್ಲಿ ತೊಡಗಿರುವ ದೇಶಗಳ ನಡುವೆ ಸರಕುಗಳ ಬೆಲೆಯಲ್ಲಿ ಸಮಾನತೆ ಮತ್ತು ಸಂಪನ್ಮೂಲಗಳ ಬೆಲೆಗಳಲ್ಲಿ ಸಮಾನತೆ ಏರ್ಪಡುತ್ತದೆ.

ಟೀಕೆಗಳು

(Criticisms)

ಬರ್ಟಿಲ್ ಒಹ್ಲಿನ್, ಗ್ರಹಾಮ್ ಮೊದಲಾದ ಅರ್ಥಶಾಸ್ತ್ರಜ್ಞರು ಸಾಪೇಕ್ಷ ವೆಚ್ಚದ ಸಿದ್ಧಾಂತವು ಬಹಳ ಅವಾಸ್ತವಿಕವಾದುದೆಂದು ಅದನ್ನು ಕಟುವಾಗಿ ಟೀಕಿಸಿದ್ದಾರೆ.

1. ಶ್ರಮದ ವೆಚ್ಚದ ಪರಿಕಲ್ಪನೆ ಸರಿಯಲ್ಲ (The Concept of Labour Cost is not Prudent): ಶ್ರಮದ ವೆಚ್ಚವೊಂದೇ ಸಂಪೂರ್ಣ ಉತ್ಪಾದನ ವೆಚ್ಚವಾಗಿರುತ್ತದೆ

ಎಂದು ಭಾವಿಸಿರುವುದು ಈ ಸಿದ್ಧಾಂತದ ಪ್ರಮುಖ ದೋಷವಾಗಿದೆ. ಉತ್ಪಾದನ ವೆಚ್ಚದಲ್ಲಿ ಸೇರಿಕೊಂಡಿರುವ ಗೇಣಿ, ಬಡ್ಡಿ, ಕಚ್ಚಾವಸ್ತುಗಳ ಬೆಲೆ ಮೊದಲಾದವುಗಳನ್ನು ಅಲಕ್ಷಿಸಿರುವುದರಿಂದ ಈ ಸಿದ್ಧಾಂತವು ಅವಾಸ್ತವಿಕವೂ, ಅಸಮಗ್ರವೂ ಆದುದಾಗಿದೆ. ಶ್ರಮದ ಬದಲಾಗಿ ಹಣದ ಮೂಲಕ ಉತ್ಪಾದನ ವೆಚ್ಚವನ್ನು ಅಳೆಯುವುದಾಗಿದ್ದರೆ ಈ ಸಿದ್ಧಾಂತವು ಹೆಚ್ಚು ಪರಿಪೂರ್ಣಗೊಳ್ಳುತ್ತಿತ್ತು.

2. ಎರಡು ದೇಶಗಳು ಮತ್ತು ಎರಡು ಸರಕುಗಳ ಮಾದರಿ ಅಸಂಬದ್ಧವಾದುದು (Two Country and Two Commodity Model is Unsound): ಸಾಪೇಕ್ಷ ವೆಚ್ಚದ ಸಿದ್ಧಾಂತದ ಪ್ರಕಾರ ವ್ಯಾಪಾರದಲ್ಲಿ ಯಾವ ಸಮಯದಲ್ಲಿಯಾದರೂ ಎರಡು ದೇಶಗಳು ಮತ್ತು ಎರಡು ಸರಕುಗಳಿರುತ್ತವೆ. ಈ ಸಿದ್ಧಾಂತವು ಎರಡು ದೇಶಗಳನ್ನು ಮತ್ತು ಎರಡು ಸರಕುಗಳನ್ನು ಮಾತ್ರ ಗಣನೆಗೆ ತೆಗೆದುಕೊಂಡು ಅದರ ನಿರ್ಣಯಗಳನ್ನು ಇಡೀ ಜಗತ್ತಿಗೆ ಅನ್ವಯಿಸುವಂತೆ ಪ್ರಯೋಗಿಸುತ್ತದೆ. ಆಧುನಿಕ ಜಗತ್ತಿನಲ್ಲಿ ವ್ಯಾಪಾರವು ಅನೇಕ ದೇಶಗಳ ನಡುವೆ ನಡೆಯುತ್ತದೆ ಮತ್ತು ಆಗಮಾತ್ರ ಅವು ವ್ಯಾಪಾರದಿಂದ ಪ್ರಯೋಜನಗಳನ್ನು ಪಡೆಯಲು ಸಾಧ್ಯವಿರುತ್ತದೆ. ರಿಕಾರ್ಡೋನ ಸಿದ್ಧಾಂತ ಈ ಸಂಗತಿಯನ್ನು ನಿರ್ಲಕ್ಷಿಸಿದೆ. ಆದ್ದರಿಂದ ಈ ಸಿದ್ಧಾಂತವು ಅಸಮರ್ಪಕವೂ, ಅಪಾಯಕಾರಿಯಾದುದೂ ಆಗಿದೆ.

3. ಸ್ಥಿರ ವೆಚ್ಚ ಅಸಾಧ್ಯವಾದುದು (Constant Cost is Impossible): ಉತ್ಪಾದನೆಯು ಸ್ಥಿರ ವೆಚ್ಚದ ನಿಯಮಕ್ಕೆ ಬದ್ಧವಾಗಿರುತ್ತದೆ ಎಂಬ ಈ ಸಿದ್ಧಾಂತದ ಕಲ್ಪನೆಯು ದೋಷಪೂರಿತವಾಗಿದೆ. ಉತ್ಪಾದನಾಕಾರ್ಯವಿಧಾನವು ಮುಂದುವರೆದಂತೆ ಏರುಮುಖ ಅಥವಾ ಇಳಿಮುಖ ವೆಚ್ಚವು ಆಚರಣೆಗೆ ಬರುತ್ತದೆ ಎಂಬುದು ಆಧುನಿಕ ಅರ್ಥಶಾಸ್ತ್ರಜ್ಞರ ಅಭಿಮತವಾಗಿದೆ. ಎರಡು ದೇಶಗಳ ನಡುವೆ ವೈಶಿಷ್ಟ್ಯವು ಮುಂದುವರಿದಂತೆ ವೆಚ್ಚದ ಅನುಪಾತವು ಬದಲಾಗಿಯೇ ತೀರುತ್ತದೆ. ಆದ್ದರಿಂದ ಸ್ಥಿರ ವೆಚ್ಚವು ದೀರ್ಘಕಾಲ ಆಚರಣೆಯಲ್ಲಿ ಉಳಿಯಲು ಸಾಧ್ಯವಿರುವುದಿಲ್ಲ.

4. ಸಾಗಣೆ ವೆಚ್ಚವನ್ನು ಉಪೇಕ್ಷಿಸಲು ಸಾಧ್ಯವಿಲ್ಲ (Not Possible to Neglect Transport Cost) : ಸಾಪೇಕ್ಷ ವೆಚ್ಚದ ಸಿದ್ಧಾಂತದ ಪ್ರಕಾರ ವಸ್ತುವಿನ ಬೆಲೆಯಲ್ಲಿ ಸಾಗಣೆ ವೆಚ್ಚವು ಸೇರಿರುವುದಿಲ್ಲ. ಆದರೆ ಸಾಗಣೆ ವೆಚ್ಚವು ವಸ್ತುವಿನ ಬೆಲೆ ನಿರ್ಣಯದಲ್ಲಿ ಮುಖ್ಯ ಪಾತ್ರ ವಹಿಸುತ್ತದೆ ಎಂಬುದನ್ನು ಮರೆಯುವಂತಿಲ್ಲ. ಬಹುತೇಕ ವೇಳೆಗಳಲ್ಲಿ ಸಾಗಣೆ ವೆಚ್ಚವು ಉತ್ಪಾದನಾ ವೆಚ್ಚಕ್ಕಿಂತಲೂ ಹೆಚ್ಚಿರುವ ಸಂಭವವಿರುತ್ತದೆ. ಎಷ್ಟೋ ಸಂದರ್ಭಗಳಲ್ಲಿ ಸಾಗಣೆ ವೆಚ್ಚದ ಪರಿಣಾಮವಾಗಿ ವಸ್ತುಗಳ ಬೆಲೆ ದುಬಾರಿಯಾಗಿ ವ್ಯಾಪಾರಕ್ಕೆ ಧಕ್ಕೆ ಉಂಟಾಗುತ್ತದೆ.

5. ಉತ್ಪಾದನಾಂಗಗಳ ಚಲನಶೀಲತೆಯ ಕುರಿತ ಭಾವನೆ ಅಸಮಂಜಸವಾದುದು (Idea on Mobility of Factors of Production is Inconsistent): ಉತ್ಪಾದನಾಂಗ

ಗಳು ದೇಶದ ಒಳಗಡೆ ಪರಿಪೂರ್ಣವಾಗಿ ಚಲಿಸುತ್ತವೆ ಮತ್ತು ವಿವಿಧ ದೇಶಗಳ ನಡುವೆ ಸಂಪೂರ್ಣ ಚಲನರಹಿತವಾಗಿವೆ ಎಂಬ ಈ ಸಿದ್ಧಾಂತದ ಕಲ್ಪನೆಯು ಸತ್ಯಕ್ಕೆ ದೂರ ವಾದುದು. ಸುಲಭ ಸಾಗಾಣಿಕೆ ವಿಧಾನಗಳು, ನಾಗರೀಕತೆ ಮತ್ತು ಅಂತರರಾಷ್ಟ್ರೀಯ ತಿಳುವಳಿಕೆಯ ಪ್ರಗತಿ, ಆಧುನೀಕರಣ ಇತ್ಯಾದಿ ಸಂಗತಿಗಳಿಂದಾಗಿ ಉತ್ಪಾದನಾಂಗಗಳ ಚಲಿಸುವಿಕೆಯು ದೇಶಗಳ ನಡುವೆ ಕಂಡುಬರುತ್ತದೆ. ಬದಲಾಗಿ ಹಲವಾರು ವೈವಿಧ್ಯತೆಗಳು ಮತ್ತು ನಿರ್ಬಂಧಗಳಿಂದಾಗಿ ದೇಶದ ಒಳಗಡೆ ಉತ್ಪಾದನಾಂಗಗಳು ಚಲನಶೀಲತೆಯನ್ನು ಹೊಂದದೆ ಇರುವ ಲಕ್ಷಣಗಳು ವ್ಯಾಪಕವಾಗಿ ಕಂಡುಬರುತ್ತವೆ.

6. ಸಂಪೂರ್ಣ ವೈಶಿಷ್ಟ್ಯತೆ ಸಾಧ್ಯವಿರುವುದಿಲ್ಲ (Complete Specialisation is not Possible): ಎರಡು ವಿಭಿನ್ನ ಸರಕುಗಳ ಉತ್ಪಾದನೆಯಲ್ಲಿ ವೈಶಿಷ್ಟ್ಯತೆ ಸಾಧಿಸಿ ಹೆಚ್ಚುವರಿ ಸರಕುಗಳನ್ನು ವಿನಿಮಯ ಮಾಡಿಕೊಳ್ಳುವ ಎರಡು ಚಿಕ್ಕ ದೇಶಗಳಿಗೆ ಮಾತ್ರ ಈ ಸಿದ್ಧಾಂತವು ಅನ್ವಯವಾಗಬಹುದು. ಆದರೆ ಒಂದು ದೊಡ್ಡ ದೇಶ ಮತ್ತೊಂದು ಚಿಕ್ಕ ದೇಶದ ನಡುವೆ ವ್ಯಾಪಾರ ನೆರವೇರುವುದಾದರೆ ಈ ಸಿದ್ಧಾಂತ ಸಮಂಜಸವಾಗಿರುವುದಿಲ್ಲ. ಏಕೆಂದರೆ ಒಂದು ಚಿಕ್ಕ ದೇಶಕ್ಕೆ ದೊಡ್ಡ ದೇಶದ ಎಲ್ಲಾ ಹೆಚ್ಚುವರಿ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳಲು ಸಾಧ್ಯವಿರುವುದಿಲ್ಲ ಅಥವಾ ದೊಡ್ಡ ದೇಶಕ್ಕೆ ಅಗತ್ಯವಾದ ಒಂದು ಸರಕನ್ನು ಪೂರ್ತಿ ಉತ್ಪಾದಿಸಲು ಚಿಕ್ಕ ದೇಶಕ್ಕೆ ಸಾಧ್ಯವಾಗದಿರಬಹುದು. ಇಂತಹ ಸಂದರ್ಭಗಳಲ್ಲಿ ಸಂಪೂರ್ಣ ವೈಶಿಷ್ಟ್ಯತೆಯೊಡನೆ ಅಂತರರಾಷ್ಟ್ರೀಯ ವ್ಯಾಪಾರವು ಏರ್ಪಡಲು ಸಾಧ್ಯವಿರುವುದಿಲ್ಲ.

7. ಮುಕ್ತ ವ್ಯಾಪಾರದ ಕಲ್ಪನೆ ತಪ್ಪಾದುದು (Assumption of Free Trade is Wrong): ಸಾಪೇಕ್ಷ ವೆಚ್ಚದ ಸಿದ್ಧಾಂತದ ಪ್ರಕಾರ ಮುಕ್ತ ಅಂತರರಾಷ್ಟ್ರೀಯ ವ್ಯಾಪಾರವು ಚಾಲ್ತಿಯಲ್ಲಿರುತ್ತದೆ. ಆದರೆ ದೇಶಗಳು ರಫ್ತುಗಳ ಮತ್ತು ಆಮದುಗಳ ಮೇಲೆ ವಿವಿಧ ವಿಧಗಳ ನಿರ್ಬಂಧಗಳನ್ನು ವಿಧಿಸುವಿಕೆಯು ಸಾಮಾನ್ಯವಾಗಿದೆ. ಆದ್ದರಿಂದ ಮುಕ್ತ ವ್ಯಾಪಾರವು ಇಂದು ಕೇವಲ ಕಲ್ಪನೆಯಾಗಿದೆ. ವರಮಾನ ಗಳಿಕೆಯ ದೃಷ್ಟಿಯಿಂದಲೂ ಸಹ ಆಮದು ಸುಂಕಗಳನ್ನು ಮತ್ತು ರಫ್ತು ಸುಂಕಗಳನ್ನು ವಿಧಿಸಲಾಗುತ್ತದೆ. ಈ ಸುಂಕಗಳು ಆಧುನಿಕ ಸರ್ಕಾರಗಳ ಪ್ರಮುಖ ಆದಾಯ ಮೂಲಗಳಾಗಿವೆ.

8. ಪೂರೈಕೆಯ ಭಾಗವನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗಿದೆ (Only Supply Side is taken into Account) : ಈ ಸಿದ್ಧಾಂತವು ಪೂರೈಕೆಯ ಭಾಗವನ್ನು ಮಾತ್ರ ಗಣನೆಗೆ ತೆಗೆದುಕೊಂಡು ಬೇಡಿಕೆಯ ಭಾಗವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದೆ. ಒಂದು ದೇಶವು ಯಾವ ವಸ್ತುಗಳನ್ನು ರಫ್ತು ಮಾಡುತ್ತದೆ ಮತ್ತು ಯಾವ ವಸ್ತುಗಳನ್ನು ಆಮದು ಮಾಡಿಕೊಳ್ಳುತ್ತದೆ ಎಂಬುದನ್ನು ಇದು ತಿಳಿಸುತ್ತದೆಯೇ ಹೊರತು, ಯಾವ ಬೆಲೆಯಲ್ಲಿ ವಸ್ತುಗಳು ವಿನಿಮಯಗೊಳ್ಳುತ್ತವೆ ಎಂಬುದನ್ನು ತಿಳಿಸುವುದಿಲ್ಲ.

9. ಪರಾವಲಂಬನವು ಅಪಾಯಕಾರಿ (Dependence is Dangerous): ಸರಕುಗಳ ವಿನಿಮಯಕ್ಕೆ ದೇಶಗಳ ನಡುವೆ ಪರಸ್ಪರ ಅವಲಂಬನೆಯನ್ನು ಈ ಸಿದ್ಧಾಂತವು ಪ್ರತಿಪಾದಿಸಿದೆ. ವ್ಯಾಪಾರವು ಸಾಪೇಕ್ಷ ಅನುಕೂಲತೆಗೆ ಬದಲಾಗಿ ಸ್ವದೇಶೀ ಆವಶ್ಯಕತೆ ಮತ್ತು ರಾಜಕೀಯಗಳಿಂದ ಪ್ರಭಾವಗೊಳ್ಳುತ್ತದೆ ಎಂಬುದನ್ನು ಮರೆಯುವಂತಿಲ್ಲ. ರಕ್ಷಣಾ ಸರಕುಗಳು ಮತ್ತಿತರ ಅತ್ಯಾವಶ್ಯಕ ಸರಕುಗಳಿಗಾಗಿ ಒಂದು ದೇಶವು ಇತರ ದೇಶಗಳನ್ನು ಅವಲಂಬಿಸದೆ, ಅವುಗಳ ಉತ್ಪಾದನೆಯಲ್ಲಿ ಸಾಪೇಕ್ಷ ಅನುಕೂಲತೆ ಇಲ್ಲದಿದ್ದರೂ ಹೆಚ್ಚಿನ ವೆಚ್ಚದಲ್ಲಿ ಉತ್ಪಾದಿಸಲು ಇಷ್ಟಪಡಬಹುದು. ಏಕೆಂದರೆ ಇಂತಹ ಸರಕುಗಳಲ್ಲಿ ಸ್ವಾವಲಂಬನೆಯನ್ನು ಸಾಧಿಸದೆ ಇತರ ದೇಶಗಳನ್ನು ಅವಲಂಬಿಸುವುದು ದೇಶದ ರಕ್ಷಣೆ ಮತ್ತು ಆರ್ಥಿಕಾಭಿವೃದ್ಧಿಯ ದೃಷ್ಟಿಯಿಂದ ಹೆಚ್ಚು ಅಪಾಯಕಾರಿಯಾಗಿರುತ್ತದೆ.

10. ಶ್ರಮದ ಅನುಪಾತ ಭಿನ್ನವಾಗಿರುವಿಕೆ (Difference in Labour Proportions): ಶ್ರಮದ ಮೌಲ್ಯ ಸಿದ್ಧಾಂತವು ಸ್ವದೇಶೀ ವ್ಯಾಪಾರಕ್ಕೆ ಔಚಿತ್ಯಪೂರ್ಣವಾಗಿದ್ದು, ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ವಿನಿಮಯ ಮೌಲ್ಯವನ್ನು ವಿವರಿಸಲು ಅಶಕ್ತವಾಗಿದೆ. ಏಕೆಂದರೆ ಎರಡು ದೇಶಗಳ ನಡುವೆ ಶ್ರಮವು ಚಲನಶೀಲತೆಯನ್ನು ಪಡೆಯದಿರುವಿಕೆಯು ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಈ ಸಿದ್ಧಾಂತವು ಅನ್ವಯಿಸದಂತೆ ಮಾಡುತ್ತದೆ. ವಿವಿಧ ದೇಶಗಳ ನಡುವೆ ಶ್ರಮವು ಪರಿಪೂರ್ಣವಾಗಿ ಚಲನೆಯಿಂದಿದ್ದರೆ, ಸರಕುಗಳು ಒಳಗೊಂಡಿರುವ ಶ್ರಮದ ಪರಿಮಾಣಗಳ ಅನುಪಾತಕ್ಕನುಗುಣವಾಗಿ ಅವು ವಿನಿಮಯಗೊಳ್ಳುತ್ತಿದ್ದವು. ಉತ್ಪಾದನಾಂಗವಾಗಿರುವ ಶ್ರಮವು ಅಂತರರಾಷ್ಟ್ರೀಯವಾಗಿ ಚಲನೆಯ ಗುಣವನ್ನು ಹೊಂದಿಲ್ಲದಿರುವುದರಿಂದ ಎರಡು ದೇಶಗಳಲ್ಲಿ ಎರಡು ಸರಕುಗಳ ನಡುವೆ ವಿನಿಮಯ ಅನುಪಾತವು ಭಿನ್ನವಾಗಿರುತ್ತದೆ.

11. ಅಭಿರುಚಿಗಳು ಒಂದೇ ಆಗಿರುತ್ತವೆ ಎಂಬ ತಪ್ಪು ಕಲ್ಪನೆ (Wrong Assumption of Similar Tastes): ಜನರ ಅಭಿರುಚಿಗಳು ಒಂದೇ ಆಗಿರುತ್ತವೆ ಎಂದು ರಿಕಾರ್ಡೊ ತನ್ನ ಸಿದ್ಧಾಂತದಲ್ಲಿ ಭಾವಿಸಿರುವನು. ಆದರೆ ಇದು ಅವಾಸ್ತವಿಕವಾದ ಕಲ್ಪನೆಯಾಗಿರುತ್ತದೆ. ಯಾವುದೇ ಒಂದು ದೇಶದಲ್ಲಿ ಜನರ ಆದಾಯದ ಮಟ್ಟಕ್ಕೆ ತಕ್ಕಂತೆ ಅವರ ಅಭಿರುಚಿಗಳಲ್ಲಿಯೂ ಭಿನ್ನತೆ ಇರುವುದು ಸಹಜ. ಅಲ್ಲದೆ ಅರ್ಥವ್ಯವಸ್ಥೆಯ ಬೆಳವಣಿಗೆಯೊಂದಿಗೆ ಮತ್ತು ಇತರ ದೇಶಗಳೊಡನೆ ಅದರ ವ್ಯಾಪಾರ ಸಂಬಂಧಗಳ ಬೆಳವಣಿಗೆಯೊಂದಿಗೆ ಈ ಅಭಿರುಚಿಗಳು ಬದಲಾಗುತ್ತವೆ.

12. ಶ್ರಮವನ್ನು ಸ್ಥಿರ ಪ್ರಮಾಣಗಳಲ್ಲಿ ಉಪಯೋಗಿಸಲಾಗುತ್ತದೆ ಎಂಬ ಅವಾಸ್ತವಿಕ ಕಲ್ಪನೆ (Unrealistic Assumption of Fixed Proportions of Labour): ಎಲ್ಲಾ ಸರಕುಗಳ ಉತ್ಪಾದನೆಯಲ್ಲಿ ಶ್ರಮವನ್ನು ಒಂದೇ ಪ್ರಮಾಣದಲ್ಲಿ ಬಳಸಿಕೊಳ್ಳಲಾಗುತ್ತದೆ ಎಂಬ ಕಲ್ಪನೆಯ ಮೇಲೆ ಸಾಪೇಕ್ಷ ವೆಚ್ಚಗಳ ಸಿದ್ಧಾಂತವು ನಿಂತಿದೆ. ಆದರೆ ಇದು ಸ್ಥಿರ

ವಿಶ್ಲೇಷಣೆಯಾಗಿದ್ದು ಅವಾಸ್ತವಿಕತೆಯಿಂದ ಕೂಡಿರುತ್ತದೆ. ವಾಸ್ತವವಾಗಿ ವಿಭಿನ್ನ ಸರಕುಗಳ ಉತ್ಪಾದನೆಯಲ್ಲಿ ಶ್ರಮವನ್ನು ವಿವಿಧ ಪ್ರಮಾಣಗಳಲ್ಲಿ ಬಳಸಲಾಗುತ್ತದೆ. ಉದಾಹರಣೆಗೆ, ಜವಳಿಗಳ ಉತ್ಪಾದನೆಯಲ್ಲಿ ಬಂಡವಾಳಕ್ಕಿಂತ ಕಡಿಮೆ ಶ್ರಮವನ್ನು ಬಳಸಿದರೆ, ಕೈಗಾರಿಕಾ ಸರಕುಗಳ ಉತ್ಪಾದನೆಯಲ್ಲಿ ಬಂಡವಾಳಕ್ಕಿಂತ ಹೆಚ್ಚು ಶ್ರಮವನ್ನು ಬಳಸಲಾಗುತ್ತದೆ.

13. ಪೂರ್ಣೋದ್ಯೋಗದ ಅಸಮಂಜಸ ಕಲ್ಪನೆ (Irrelevant Assumption of Full-employment): ಎಲ್ಲಾ ಸಂಪ್ರದಾಯ ಪಂಥದ ಸಿದ್ಧಾಂತಗಳಂತೆ ಸಾಪೇಕ್ಷ ವೆಚ್ಚದ ಸಿದ್ಧಾಂತವೂ ಸಹ ಪೂರ್ಣೋದ್ಯೋಗದ ಕಲ್ಪನೆಯ ಮೇಲೆ ನಿಂತಿದೆ. ಆದರೆ ಯಾವುದೇ ಅರ್ಥವ್ಯವಸ್ಥೆಯಲ್ಲಿ ಪೂರ್ಣೋದ್ಯೋಗವಿರುವುದು ಅಸಂಭವವಾದುದು. ಅರ್ಥವ್ಯವಸ್ಥೆಯು ಯಾವಾಗಲೂ ಅಪೂರ್ಣೋದ್ಯೋಗದ ಸಮತೋಲನದಲ್ಲಿರುತ್ತದೆ ಎಂದು ಜೆ.ಎಂ. ಕೇನ್ಸ್ ರುಜುವಾತುಪಡಿಸಿರುವನು.

14. ತಂತ್ರಜ್ಞಾನದ ಪಾತ್ರದ ನಿರ್ಲಕ್ಷ್ಯ (Neglect of the Role of Technology): ರಿಕಾರ್ಡೊನ ಸಿದ್ಧಾಂತವು ಅಂತರರಾಷ್ಟ್ರೀಯ ವ್ಯಾಪಾರ ಕ್ಷೇತ್ರದಲ್ಲಿ ತಂತ್ರಜ್ಞಾನ ಮತ್ತು ನವಪ್ರವರ್ತನೆಗಳ ಪಾತ್ರವನ್ನು ನಿರ್ಲಕ್ಷಿಸಿದೆ. ಆದ್ದರಿಂದ ಈ ಸಿದ್ಧಾಂತವು ಅಸಮಂಜಸವಾದುದಾಗಿದೆ. ಏಕೆಂದರೆ ತಾಂತ್ರಿಕ ಬದಲಾವಣೆಗಳು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸರಕುಗಳ ಪೂರೈಕೆಯ ಹೆಚ್ಚಳಕ್ಕೆ ಕಾರಣವಾಗುತ್ತವೆ. ಜಾಗತಿಕ ವ್ಯಾಪಾರವು ಸಂಶೋಧನೆಗಳಿಂದ ಮತ್ತು ನವಪ್ರರ್ವತನೆಗಳಿಂದ ಗಮನಾರ್ಹವಾಗಿ ಅಭಿವೃದ್ಧಿ ಹೊಂದಿರುತ್ತದೆ.

15. ಸ್ವಹಿತಾಸಕ್ತಿಯ ಕಾರ್ಯಾಚರಣೆಯನ್ನು ಗಣನೆಗೆ ತೆಗೆದುಕೊಂಡಿರುವುದಿಲ್ಲ (Not taken into Consideration the Operation of Self - interest): ಸಾಪೇಕ್ಷ ಅನಾನುಕೂಲತೆಯನ್ನು ಅನುಭವಿಸುತ್ತಿರುವ ಒಂದು ದೇಶವು ಸೈನಿಕ ಆಚರಣೆಯ, ಅಭಿವೃದ್ಧಿಪರವಾದ ಮತ್ತು ರಕ್ಷಣೆಯ ಕಾರಣಗಳಿಂದ ಇನ್ನೊಂದು ದೇಶದಿಂದ ಸರಕುಗಳನ್ನು ಆಮದುಮಾಡಿಕೊಳ್ಳಬಾರದೆಂದು ತೀರ್ಮಾನಿಸಿ, ಸ್ವಹಿತಾಸಕ್ತಿಯ ನೀತಿಯನ್ನು ಅನುಸರಿಸಿದರೆ ಈ ಸಿದ್ಧಾಂತವು ಸತ್ವರಹಿತವಾಗುತ್ತದೆ.

F. ಹ್ಯಾಬೆರ್ಲರನ ಅವಕಾಶ ವೆಚ್ಚ ಸಿದ್ಧಾಂತ
(Haberler's Opportunity Cost Theory)

ಸಾಪೇಕ್ಷ ವೆಚ್ಚದ ಸಿದ್ಧಾಂತಕ್ಕೆ ಇನ್ನೂ ಒಂದು ಬೆಳವಣಿಗೆಯಾಗಿ ಪ್ರೊ. ಹ್ಯಾಬೆರ್ಲರ್ ಕ್ರಿ.ಶ. 1935ರಲ್ಲಿ ಅವಕಾಶ ವೆಚ್ಚದ ಸಿದ್ಧಾಂತವನ್ನು ಪ್ರತಿಪಾದಿಸಿದನು. ಒಂದು ವಸ್ತುವಿನ ಅವಕಾಶ ವೆಚ್ಚ ಎಂದರೆ ಅದನ್ನು ಉತ್ಪಾದಿಸಲು ಇನ್ನೊಂದು ವಸ್ತುವಿನ ಉತ್ಪಾದನೆಯನ್ನು ತ್ಯಾಗ ಮಾಡುವುದು ಎಂದರ್ಥ. ಉದಾಹರಣೆಗೆ, ಲಭ್ಯವಿರುವ ಸಂಪನ್ಮೂಲಗಳಿಂದ 100 ಕ್ವಿಂಟಾಲ್ ಗೋಧಿಯನ್ನು ಅಥವಾ 200 ಮೀಟರ್ ಬಟ್ಟೆಯನ್ನು ಉತ್ಪಾದಿಸಬಹುದೆಂದು

ಭಾವಿಸೋಣ. ಈಗ ಪೂರ್ತಿಯಾಗಿ ಗೋಧಿಯನ್ನೇ ಉತ್ಪಾದಿಸಲು ಸಂಪನ್ಮೂಲಗಳನ್ನು ಬಳಸಿಕೊಳ್ಳುವುದಾದರೆ ಬಟ್ಟೆಯ ಉತ್ಪಾದನೆಯನ್ನು ತ್ಯಾಗ ಮಾಡಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ 100 ಕ್ವಿಂಟಾಲ್ ಗೋಧಿಯ ಅವಕಾಶ ವೆಚ್ಚವು 200 ಮೀಟರ್ ಬಟ್ಟೆಯ ಉತ್ಪಾದನೆಯ ವೆಚ್ಚಕ್ಕೆ ಸಮಾನವಾಗಿದೆ. ಬಟ್ಟೆಯ ಉತ್ಪಾದನೆಯನ್ನು ತ್ಯಾಗ ಮಾಡಿದುದರಿಂದ ಗೋಧಿಯ ಉತ್ಪಾದನೆಗೆ ಅವಕಾಶ ಲಭಿಸಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಒಂದು ವಸ್ತುವನ್ನು ಉತ್ಪಾದಿಸದೆ ಅದನ್ನು ತ್ಯಾಗ ಮಾಡಿ ಬೇರೊಂದು ವಸ್ತುವನ್ನು ಉತ್ಪಾದಿಸಲು ಎಷ್ಟು ವೆಚ್ಚ ತಗಲುತ್ತದೆಯೋ ಅದೇ ಅವಕಾಶ ವೆಚ್ಚ. ಸಂಪನ್ಮೂಲಗಳು ವಿರಳತೆಯಿಂದಿದ್ದು ಬದಲಿ ಉಪಯೋಗಗಳಿಗೆ ಬಳಸಲು ಸಾಧ್ಯವಿರುವಾಗ ಒಂದು ವಸ್ತುವಿನ ಉತ್ಪಾದನೆಯು ಆವಶ್ಯಕವಾಗಿ ಇನ್ನೊಂದು ವಸ್ತುವಿನ ತ್ಯಾಗವನ್ನು ಕೋರುತ್ತದೆ. ಆದ್ದರಿಂದ ಯಾವುದೇ ಸರಕಿನ ನೈಜ ಉತ್ಪಾದನ ವೆಚ್ಚವು ತ್ಯಾಗ ಮಾಡಲಾದ ಉತ್ಪಾದನೆಯ ಬದಲಿ ಅವಕಾಶಗಳಿಂದ ನಿರ್ಧಾರವಾಗುತ್ತದೆ ಎಂಬುದು ಹ್ಯಬೆರ್ಲ್ರನ ಅಭಿಪ್ರಾಯವಾಗಿದೆ.

ರಿಕಾರ್ಡೊನ ಸಾಪೇಕ್ಷ ವೆಚ್ಚದ ಸಿದ್ಧಾಂತಕ್ಕೆ ಪ್ರಬಲ ಪ್ರತಿಕ್ರಿಯೆಯಾಗಿ ಅವಕಾಶ ವೆಚ್ಚದ ಸಿದ್ಧಾಂತವು ಮೂಡಿ ಬಂದಿದೆ. ರಿಕಾರ್ಡೊನ ಸಿದ್ಧಾಂತವು ಶ್ರಮದ ಮೌಲ್ಯ ಸಿದ್ಧಾಂತದ ಮೇಲೆ ನಿಂತಿದೆ. ಶ್ರಮದ ಮೌಲ್ಯ ಸಿದ್ಧಾಂತದ ಪ್ರಕಾರ ಪ್ರತಿಯೊಂದು ಸರಕಿನ ಮೌಲ್ಯವು ಆ ಸರಕನ್ನು ಉತ್ಪಾದಿಸಲು ತಗಲಿರುವ ಶ್ರಮದ ಅವಧಿಗೆ ಸಮನಾಗಿರುತ್ತದೆ. ಶ್ರಮವು ಮಾತ್ರ ಉತ್ಪಾದನಾಂಗವಾಗಿರುತ್ತದೆ, ಶ್ರಮವು ಒಂದೇ ರೂಪದಲ್ಲಿರುತ್ತದೆ ಮತ್ತು ಎಲ್ಲಾ ಸರಕುಗಳ ಉತ್ಪಾದನೆಯಲ್ಲಿ ಶ್ರಮವನ್ನು ನಿಗದಿತ ಪ್ರಮಾಣಾನುಗುಣದಲ್ಲಿ ತೊಡಗಿಸಲಾಗುತ್ತದೆ ಎಂಬುದು ಇದರ ಸೂಚ್ಯಾರ್ಥವಾಗಿರುತ್ತದೆ.

ಆದರೆ ಈ ಎಲ್ಲಾ ಕಲ್ಪನೆಗಳು ಅವಾಸ್ತವಿಕವಾಗಿರುತ್ತದೆ. ಶ್ರಮವು ಮಾತ್ರವೇ ಉತ್ಪಾದನಾಂಗವಲ್ಲ. ಭೂಮಿ, ಬಂಡವಾಳ ಮತ್ತಿತರ ಸಂಪನ್ಮೂಲಗಳ ಜೊತೆ ಶ್ರಮವನ್ನು ಸಂಯೋಜಿಸಿ ಸರಕುಗಳನ್ನು ಉತ್ಪಾದಿಸಲಾಗುತ್ತದೆ. ಅಂತೆಯೇ ಶ್ರಮವು ಏಕರೂಪದ್ದಾಗಿರುವುದಿಲ್ಲ. ಶ್ರಮದ ಗುಣದರ್ಜೆಯಲ್ಲಿ ವೈವಿಧ್ಯತೆ ಇರುತ್ತದೆ. ಅಲ್ಲದೇ ಸರಕುಗಳ ಉತ್ಪಾದನೆಯಲ್ಲಿ ಶ್ರಮವನ್ನು ವಿವಿಧ ಪ್ರಮಾಣದಲ್ಲಿ ಬಳಸಲಾಗುತ್ತದೆ ಮತ್ತು ಶ್ರಮಕ್ಕೆ ಬದಲಾಗಿ ಬಂಡವಾಳವನ್ನು ಹಾಗೂ ಬಂಡವಾಳಕ್ಕೆ ಬದಲಾಗಿ ಶ್ರಮವನ್ನು ತೊಡಗಿಸಬಹುದಾಗಿರುತ್ತದೆ.

ಈ ಎಲ್ಲಾ ಅಂಶಗಳಿಂದಾಗಿ ಶ್ರಮದ ಮೌಲ್ಯ ಸಿದ್ಧಾಂತವನ್ನು ಆಧರಿಸಿರುವ ರಿಕಾರ್ಡೊನ ಅಂತರರಾಷ್ಟ್ರೀಯ ವ್ಯಾಪಾರ ಸಿದ್ಧಾಂತವು ಸತ್ವರಹಿತವಾದುದಾಗಿದೆ. ಹ್ಯಾಬೆರ್ಲರನ ಅವಕಾಶ ವೆಚ್ಚದ ಸಿದ್ಧಾಂತವು ಈ ದೋಷಗಳಿಂದ ಹೊರಬಂದು ಸಾಪೇಕ್ಷ ವೆಚ್ಚಗಳ ತತ್ವವನ್ನು ಉತ್ಪಾದನ ಸಾಧ್ಯತೆಯ ರೂಪದಲ್ಲಿ ವಿವರಿಸುತ್ತದೆ.

ಹ್ಯಬೆರ್ಲರನ ಪ್ರಕಾರ ಒಂದು ದೇಶದಲ್ಲಿ ಲಭ್ಯವಿರುವ ಉತ್ಪಾದನಾಂಗಗಳ ಪೂರ್ಕೆಯು ಮೊದಲೇ ನಿರ್ಧಾರವಾಗಿರುತ್ತದೆ. ಅಂದರೆ ಅವುಗಳ ಪೂರ್ಕೆಯನ್ನು ಹೆಚ್ಚಿಸಲು ಸಾಧ್ಯವಿರುವುದಿಲ್ಲ. ಈ ಉತ್ಪಾದನಾಂಗಗಳನ್ನು ಅನೇಕ ಉಪಯೋಗಗಳಲ್ಲಿ ಬಳಸಿಕೊಳ್ಳ ಬಹುದು. ಆದ್ದರಿಂದ ಒಂದು ವಸ್ತುವಿನ ಉತ್ಪಾದನೆಯನ್ನು ಹೆಚ್ಚಿಸಲು ಲಭ್ಯವಿರುವ ಏಕೈಕ ಮಾರ್ಗವೆಂದರೆ ಬೇರೊಂದು ವಸ್ತುವಿನ ಉತ್ಪಾದನೆಯನ್ನು ತಗ್ಗಿಸುವುದು. ಆದ್ದರಿಂದ ಪ್ರತಿಯೊಂದು ದೇಶವೂ ಸಂಪನ್ಮೂಲಗಳ ಲಭ್ಯತೆಯ ಆಧಾರದ ಮೇಲೆ ವಿವಿಧ ಉತ್ಪಾದನಾ ಸಾಧ್ಯತೆಗಳನ್ನು ಪಡೆದಿರುತ್ತದೆ.

ಕಲ್ಪನೆಗಳು

(Assumptions)

ಅವಕಾಶ ವೆಚ್ಚದ ಸಿದ್ಧಾಂತದ ಕಲ್ಪನೆಗಳು ಕೆಳಕಂಡಂತಿವೆ.

1. ಎರಡು ದೇಶಗಳು ಮಾತ್ರ ಇರುತ್ತವೆ. ಅಂದರೆ ವ್ಯಾಪಾರದ ಉದಾಹರಣೆಯಲ್ಲಿ ಎರಡು ದೇಶಗಳನ್ನು ಮಾತ್ರ ಪರಿಗಣಿಸಲಾಗುತ್ತದೆ.
2. ಪ್ರತಿಯೊಂದು ದೇಶವು ಎರಡು ಸರಕುಗಳನ್ನು ಉತ್ಪಾದಿಸಬಲ್ಲದು.
3. ಪ್ರತಿಯೊಂದು ದೇಶವು ಎರಡು ಉತ್ಪಾದನಾಂಗಗಳನ್ನು ಹೊಂದಿರುತ್ತದೆ. ಅವುಗಳೆಂದರೆ ಶ್ರಮ ಮತ್ತು ಬಂಡವಾಳ.
4. ಪ್ರತಿಯೊಂದು ಉತ್ಪಾದನಾಂಗದ ಪೂರ್ಕೆಯು ನಿಗದಿತ ಪ್ರಮಾಣದ್ದಾಗಿರುತ್ತದೆ.
5. ಪ್ರತಿಯೊಂದು ದೇಶದಲ್ಲಿಯೂ ಪೂರ್ಣೋದ್ಯೋಗವಿರುತ್ತದೆ.
6. ತಂತ್ರಜ್ಞಾನದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.
7. ಎಲ್ಲಾ ಉತ್ಪಾದನಾಂಗಗಳನ್ನು ಪೂರ್ಣವಾಗಿ ಬಳಸಿಕೊಳ್ಳಲಾಗುತ್ತದೆ. ಪ್ರತಿಯೊಂದು ಉತ್ಪಾದನಾಂಗದ ಬೆಲೆಯು ಅದರ ಸೀಮಾಂತ ಉತ್ಪಾದಕತೆಗೆ ಸಮನಾಗಿರುತ್ತದೆ.
8. ಪ್ರತಿಯೊಂದು ಸರಕಿನ ಬೆಲೆಯು ಅದರ ಸೀಮಾಂತ ವೆಚ್ಚಕ್ಕೆ ಸಮನಾಗಿರುತ್ತದೆ.
9. ಉತ್ಪಾದನಾಂಗಗಳ ಮಾರುಕಟ್ಟೆ ಮತ್ತು ಸರಕುಗಳ ಮಾರುಕಟ್ಟೆ ಎರಡರಲ್ಲಿಯೂ ಪರಿಪೂರ್ಣ ಪೈಪೋಟಿ ಇರುತ್ತದೆ.
10. ಎರಡೂ ದೇಶಗಳಲ್ಲಿ ಉತ್ಪಾದನಾಂಗಗಳು ಸಮಾನ ಗುಣದರ್ಜೆಯವಾಗಿರುತ್ತವೆ.
11. ಪ್ರತಿಯೊಂದು ಸರಕಿನ ಉತ್ಪಾದನೆಯಲ್ಲಿ ಸ್ಥಿರ ವೆಚ್ಚ ಆಚರಣೆಯಲ್ಲಿರುತ್ತದೆ.
12. ವ್ಯಾಪಾರದಲ್ಲಿ ಸಾಗಣೆ ವೆಚ್ಚ ಇರುವುದಿಲ್ಲ.
13. ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಯಾವುದೇ ವಿಧದ ನಿರ್ಬಂಧಗಳಿರುವುದಿಲ್ಲ.

14. ಉತ್ಪಾದನಾಂಗಗಳು ದೇಶದ ಒಳಗಡೆ ಮುಕ್ತವಾಗಿ ಚಲಿಸುತ್ತವೆ ಮತ್ತು ದೇಶಗಳ ನಡುವೆ ಚಲನರಹಿತವಾಗಿರುತ್ತವೆ.

ಈಗ ಇಂಗ್ಲೆಂಡ್ ಮತ್ತು ಫ್ರಾನ್ಸ್ ಈ ಎರಡು ದೇಶಗಳನ್ನು ಉದಾಹರಣೆಯಾಗಿ ತೆಗೆದುಕೊಳ್ಳೋಣ. ತನ್ನಲ್ಲಿರುವ ಭೂಮಿ, ಬಂಡವಾಳ, ಶ್ರಮ ಈ ಎಲ್ಲಾ ಸಂಪನ್ಮೂಲಗಳನ್ನು ಬಳಸಿಕೊಂಡಾಗ ಇಂಗ್ಲೆಂಡ್ 200 ಘಟಕಗಳ ಬಟ್ಟೆ ಅಥವಾ 100 ಘಟಕಗಳ ಗೋಧಿಯನ್ನು ಉತ್ಪಾದಿಸಬಲ್ಲದು. ಆದ್ದರಿಂದ ಇಂಗ್ಲೆಂಡಿನಲ್ಲಿ ಎರಡು ಘಟಕಗಳ ಬಟ್ಟೆಯ ಉತ್ಪಾದನೆಯ ಅವಕಾಶ ವೆಚ್ಚ ಒಂದು ಘಟಕ ಗೋಧಿಯಾಗಿದೆ. ತನ್ನ ಎಲ್ಲಾ ಸಂಪನ್ಮೂಲಗಳನ್ನು ಬಳಸಿಕೊಂಡಾಗ ಫ್ರಾನ್ಸ್ 200 ಘಟಕಗಳ ಗೋಧಿಯನ್ನು ಅಥವಾ 100 ಘಟಕಗಳ ಬಟ್ಟೆಯನ್ನು ಉತ್ಪಾದಿಸಬಲ್ಲದು. ಆದ್ದರಿಂದ ಫ್ರಾನ್ಸ್‌ನಲ್ಲಿ ಎರಡು ಘಟಕಗಳ ಗೋಧಿಯ ಉತ್ಪಾದನೆಯ ಅವಕಾಶ ವೆಚ್ಚ ಒಂದು ಘಟಕ ಬಟ್ಟೆಯಾಗಿದೆ. ಇಂಗ್ಲೆಂಡಿಗೆ ಬಟ್ಟೆಯ ಉತ್ಪಾದನೆಯಲ್ಲಿಯೂ ಫ್ರಾನ್ಸ್‌ಗೆ ಗೋಧಿಯ ಉತ್ಪಾದನೆ ಯಲ್ಲಿಯೂ ಅನುಕೂಲತೆಗಳಿವೆ. ಆದ್ದರಿಂದ ಇಂಗ್ಲೆಂಡ್ ಬಟ್ಟೆಯ ಉತ್ಪಾದನೆಯಲ್ಲಿಯೂ ಫ್ರಾನ್ಸ್ ಗೋಧಿಯ ಉತ್ಪಾದನೆಯಲ್ಲಿಯೂ ವೈಶಿಷ್ಟ್ಯತೆ ಸಾಧಿಸುತ್ತವೆ. ಆ ಪ್ರಕಾರ, ಇಂಗ್ಲೆಂಡ್ ಬಟ್ಟೆಯನ್ನು ರಫ್ತು ಮಾಡಿ ಗೋಧಿಯನ್ನು ಆಮದು ಮಾಡಿಕೊಳ್ಳುತ್ತದೆ ಮತ್ತು ಫ್ರಾನ್ಸ್ ಗೋಧಿಯನ್ನು ರಫ್ತು ಮಾಡಿ ಬಟ್ಟೆಯನ್ನು ಆಮದು ಮಾಡಿಕೊಳ್ಳುತ್ತದೆ. ಈ ಮೂಲಕ ಎರಡು ದೇಶಗಳ ನಡುವೆ ವ್ಯಾಪಾರವೇರ್ಪಡುತ್ತದೆ.

ಎಲ್ಲಾ ಉತ್ಪಾದನಾಂಗಗಳನ್ನು ಗಣನೆಗೆ ತೆಗೆದುಕೊಂಡಿರುವುದರಿಂದ ಹ್ಯಬೆರ್ಲ್ರನ ಸಿದ್ಧಾಂತವು ಸಾರ್ವತ್ರಿಕ ಮೀಮಾಂಸೆಯ ಒಂದು ಭಾಗವಾಗಿದೆ ಮತ್ತು ಅದು ಉತ್ಪಾದನಾ ವೆಚ್ಚವನ್ನು ಹಣದ ರೂಪದಲ್ಲಿ ವ್ಯಕ್ತಪಡಿಸುತ್ತದೆ. ಈ ದೃಷ್ಟಿಗಳಿಂದ ಅವಕಾಶ ವೆಚ್ಚದ ಸಿದ್ಧಾಂತವು ಸಾಪೇಕ್ಷ ವೆಚ್ಚದ ಸಿದ್ಧಾಂತಕ್ಕಿಂತ ಉತ್ತಮವಾದುದಾಗಿದೆ.

ಅವಕಾಶ ವೆಚ್ಚ ಸಿದ್ಧಾಂತದ ಶ್ರೇಷ್ಠತೆ

(Superiority of Opportunity Cost Theory)

ಸಾಪೇಕ್ಷ ವೆಚ್ಚದ ಸಿದ್ಧಾಂತಕ್ಕೆ ಪರ್ಯಾಯವಾಗಿ ಮಂಡಿಸಲ್ಪಟ್ಟಿರುವ ಅವಕಾಶ ವೆಚ್ಚದ ಸಿದ್ಧಾಂತವು ಹೆಚ್ಚು ವಾಸ್ತವಿಕವಾದುದು ಮತ್ತು ಉತ್ತಮವಾದುದು ಆಗಿದೆ. ಈ ಕೆಳಗಿನ ಅಂಶಗಳನ್ನು ಗಮನಿಸಿದಾಗ ಅದರ ಶ್ರೇಷ್ಠತೆಯು ಸ್ಪಷ್ಟಗೊಳ್ಳುತ್ತದೆ.

1. ವಾಸ್ತವ ಸಂಗತಿಗಳನ್ನು ಆಧರಿಸಿದ ಸಿದ್ಧಾಂತ (Theory based on Realistic Factors): ಸಾಪೇಕ್ಷ ವೆಚ್ಚದ ಸಿದ್ಧಾಂತವು ಅವಾಸ್ತವಿಕವಾದ ಶ್ರಮದ ಮೌಲ್ಯ ಸಿದ್ಧಾಂತವನ್ನು ಆಶ್ರಯಿಸಿದೆ. ಆದರೆ ಅವಕಾಶ ವೆಚ್ಚದ ಸಿದ್ಧಾಂತವು ಶ್ರಮದ ಮೌಲ್ಯ ತತ್ವವನ್ನು ವರ್ಜಿಸಿದೆ. ಇದರಿಂದ ಇದು ವಾಸ್ತವ ಸಂಗತಿಗಳನ್ನು ಆಧರಿಸಿದ ಸಿದ್ಧಾಂತವಾಗಿ ರೂಪುಗೊಂಡಿದೆ.

2. ವ್ಯಾಪಾರದ ಸನ್ನಿವೇಶಗಳ ಸಮರ್ಥ ವಿಶ್ಲೇಷಣೆ (Perfect Analysis of Circumstances of Trade): ಸಾಪೇಕ್ಷ ವೆಚ್ಚದ ಸಿದ್ಧಾಂತವು ದೇಶದ ಒಳಗಡೆ ಸ್ಥಿರ ಉತ್ಪಾದನ ವೆಚ್ಚ, ಮತ್ತು ಎರಡು ದೇಶಗಳ ನಡುವೆ ತುಲನಾತ್ಮಕ ಅನುಕೂಲತೆ ಹಾಗೂ ಅನಾನುಕೂಲತೆಯ ತತ್ವಗಳನ್ನು ಅವಲಂಬಿಸಿದೆ. ಆದರೆ ಅವಕಾಶ ವೆಚ್ಚದ ಸಿದ್ಧಾಂತವು ಸ್ಥಿರ, ಏರುಮುಖ ಮತ್ತು ಇಳಿಮುಖ ವೆಚ್ಚಗಳ ಸಂದರ್ಭಗಳಲ್ಲಿ ವ್ಯಾಪಾರ ಪೂರ್ವ ಹಾಗೂ ವ್ಯಾಪಾರೋತ್ತರ ಸನ್ನಿವೇಶಗಳನ್ನು ಸಮರ್ಥವಾಗಿ ವಿಶ್ಲೇಷಿಸುತ್ತದೆ.

ಆ ಪ್ರಕಾರ, ವಿಶ್ಲೇಷಣಾತ್ಮಕ ನೆಲೆಯಲ್ಲಿ ಗಮನಿಸಿದಾಗ ಅವಕಾಶ ವೆಚ್ಚದ ಸಿದ್ಧಾಂತವು ಸಾಪೇಕ್ಷ ವೆಚ್ಚದ ಸಿದ್ಧಾಂತಕ್ಕಿಂತ ಶ್ರೇಷ್ಠವಾದುದಾಗಿದೆ.

ಟೀಕೆಗಳು
(Criticisms)

ಅವಕಾಶ ವೆಚ್ಚದ ಸಿದ್ಧಾಂತವು ಅದರ ಶ್ರೇಷ್ಠತೆಯ ನಡುವೆಯೂ ಹಲವು ಟೀಕೆಗಳಿಗೆ ಒಳಗಾಗಿದೆ. ಜೇಕಬ್ ವೈನರ್ ಈ ಸಿದ್ಧಾಂತದ ಉಗ್ರ ಟೀಕಾಕಾರನಾಗಿರುವನು.

1. ಕ್ಷೇಮಾಭಿವೃದ್ಧಿ ಮೌಲ್ಯ ನಿರ್ಣಯದಲ್ಲಿ ವಿಫಲತೆ (Failure in Evaluation of Welfare): ಜೇಕಬ್ ವೈನರ್‌ನ ಅಭಿಪ್ರಾಯದಲ್ಲಿ ಉತ್ಪಾದಕ ಸೇವೆಗಳನ್ನು ಒದಗಿಸುವ ಕಾರ್ಯದಲ್ಲಿ ಒಳಗೊಂಡಿರುವ ತ್ಯಾಗಗಳು, ಅಪಉಪಯೋಗಗಳು (Disutilities), ಜುಗುಪ್ಸೆ (Irksomeness) ಮುಂತಾದವುಗಳನ್ನು ನೈಜ ವೆಚ್ಚದ ರೂಪದಲ್ಲಿ ಅಳತೆ ಮಾಡಲು ಅವಕಾಶ ವೆಚ್ಚಗಳ ತತ್ವವು ವಿಫಲಗೊಳ್ಳುತ್ತದೆ. ಆದ್ದರಿಂದ ಕ್ಷೇಮಾಭ್ಯುದಯ ಮೌಲ್ಯ ನಿರ್ಣಯದ ಕಾರ್ಯದಲ್ಲಿ ಇದು ಸಾಪೇಕ್ಷ ವೆಚ್ಚದ ಸಿದ್ಧಾಂತಕ್ಕಿಂತ ಕೀಳಾದುದಾಗಿದೆ.

2. ಉತ್ಪಾದನಾಂಗಗಳ ಪೂರೈಕೆಯಲ್ಲಿನ ಬದಲಾವಣೆಗಳ ಅಲಕ್ಷ್ಯ (Neglect of Changes in Factor Supplies) : ಅವಕಾಶ ವೆಚ್ಚದ ತತ್ವವು ಪ್ರಸ್ತುತಪಡಿಸುವ ಉತ್ಪಾದನ ಸಾಧ್ಯತಾ ರೇಖೆಯು ಉತ್ಪಾದನಾಂಗಗಳ ಪೂರೈಕೆಯಲ್ಲಿನ ಬದಲಾವಣೆಗಳನ್ನು ಗಣನೆಗೆ ತೆಗೆದುಕೊಳ್ಳವುದಿಲ್ಲ.

G. ಹೆಕ್‌ಷರ್-ಒಹ್ಲಿನ್‌ರವರ ಉತ್ಪಾದನಾಂಗ ಸಮೃದ್ಧಿ (ಸಂಪನ್ನತೆ) ಸಿದ್ಧಾಂತ
(Hecksher-Ohlin's Factor Endowment Theory)

ಸಾಪೇಕ್ಷ ವೆಚ್ಚದ ಸಿದ್ಧಾಂತಕ್ಕೆ ಬದಲಾಗಿ ಅಂತರರಾಷ್ಟ್ರೀಯ ವ್ಯಾಪಾರ ಕುರಿತು ಹೆಚ್ಚು ಸಮಂಜಸವಾದ ಸಿದ್ಧಾಂತವೊಂದನ್ನು ಮಂಡಿಸಲು ನಡೆಸಿದ ಪ್ರಯತ್ನವೇ ಉತ್ಪಾದನಾಂಗ ಸಮೃದ್ಧಿ ಸಿದ್ಧಾಂತವಾಗಿದೆ. ಇದನ್ನು ಅಂತರರಾಷ್ಟ್ರೀಯ ವ್ಯಾಪಾರದ ಆಧುನಿಕ ಸಿದ್ಧಾಂತ (Modern Theory) ವೆಂತಲೂ ಕರೆಯಲಾಗುತ್ತದೆ. ಈ ಸಿದ್ಧಾಂತದ ಪ್ರತಿಪಾದನೆಗೆ ಮೊಟ್ಟಮೊದಲ ಪ್ರಯತ್ನ 1919ರಲ್ಲಿ ಎಲಿ ಹೆಕ್‌ಷರ್ ಎಂಬ ಸ್ವೀಡನ್ನಿನ

ಅರ್ಥಶಾಸ್ತ್ರಜ್ಞನಿಂದ ನಡೆಯಿತು. ವಿವಿಧ ದೇಶಗಳಲ್ಲಿ ವಿಭಿನ್ನ ಉತ್ಪಾದನ ವೆಚ್ಚಗಳು ಚಾಲ್ತಿಯಲ್ಲಿರಲು ಕಾರಣಗಳೇನೆಂಬುದನ್ನು ಶೋಧಿಸಲು ಹೆಕ್‌ಷರ್ ಪ್ರಯತ್ನಿಸಿರುತ್ತಾನೆ. ನಂತರ 1933ರಲ್ಲಿ ಸ್ವೀಡನ್ನಿನ ಇನ್ನೊಬ್ಬ ಅರ್ಥಶಾಸ್ತ್ರಜ್ಞ ಬರ್ಟಿಲ್ ಒಹ್ಲಿನ್ ಎಂಬುವನು ಇದರ ಮೇಲೆ ಆಳವಾದ ಅಧ್ಯಯನ ನಡೆಸಿ ಇದನ್ನು ಹೆಚ್ಚು ವ್ಯಾಪಕವಾದ ಸಿದ್ಧಾಂತವಾಗಿ ಮಾಡಿದನು.

ಸಾಪೇಕ್ಷ ವೆಚ್ಚದ ಸಿದ್ಧಾಂತವನ್ನು ಕಟುವಾಗಿ ಟೀಕಿಸುತ್ತಲೇ ಒಹ್ಲಿನ್ ತನ್ನ ಸಿದ್ಧಾಂತವನ್ನು ಬೆಳೆಸಿದ್ದಾನೆ. ಉತ್ಪಾದನಾಂಗಗಳು ದೇಶದ ಒಳಗಡೆ ಚಲಿಸುತ್ತವೆ ಮತ್ತು ದೇಶಗಳ ನಡುವೆ ಚಲನರಹಿತವಾಗಿರುತ್ತವೆ ಎಂಬ ಸಾಪೇಕ್ಷ ವೆಚ್ಚದ ಸಿದ್ಧಾಂತದ ಕಲ್ಪನೆಯನ್ನು ಒಹ್ಲಿನ್ ಅಲ್ಲಗಳೆದಿದ್ದಾನೆ. ಅವನ ಪ್ರಕಾರ ಉತ್ಪಾದನಾಂಗಗಳು ದೇಶಗಳ ನಡುವೆ ಚಲಿಸುತ್ತವೆ ಮತ್ತು ದೇಶದ ಒಳಗಡೆಯೇ ಕೆಲವು ಸಂದರ್ಭಗಳಲ್ಲಿ ಚಲನರಹಿತತೆಯನ್ನು ಹೊಂದಿರುತ್ತವೆ. ದೇಶಗಳ ನಡುವೆ ಕಂಡುಬರುವ ವೈವಿಧ್ಯತೆಗಳು ದೇಶದ ಒಳಗಡೆಯೂ ಗೋಚರಿಸುತ್ತವೆ. ಆದ್ದರಿಂದ ಚಲನಶೀಲತೆಯ ಕೊರತೆಯು ಅಂತರರಾಷ್ಟ್ರೀಯ ವ್ಯಾಪಾರಕ್ಕೆ ವಿಶೇಷವಾದುದಲ್ಲ ಎಂದು ಒಹ್ಲಿನ್ ಅಭಿಪ್ರಾಯಪಟ್ಟಿದ್ದಾನೆ.

ಒಹ್ಲಿನ್‌ನ ಅಂತರರಾಷ್ಟ್ರೀಯ ವ್ಯಾಪಾರ ಸಿದ್ಧಾಂತವು ಸಾರ್ವತ್ರಿಕ ಸಮತೋಲನ ಮೌಲ್ಯ ಸಿದ್ಧಾಂತವನ್ನು (General Equilibrium Theory of Value) ಆಧರಿಸಿದೆ ಮತ್ತು ಆ ಸಿದ್ಧಾಂತದ ವಿಸ್ತರಣೆಯಾಗಿದೆ. ಸಾರ್ವತ್ರಿಕ ಮೌಲ್ಯ ಸಿದ್ಧಾಂತದ ಪ್ರಕಾರ ಯಾವುದೇ ವಸ್ತುವಿನ ಬೆಲೆಯು ಅದಕ್ಕಿರುವ ಬೇಡಿಕೆ ಮತ್ತು ಅದರ ಒಟ್ಟು ಪೂರೈಕೆಯ ಪರಸ್ಪರ ಕ್ರಿಯೆಯಿಂದ ನಿರ್ಧಾರವಾಗುತ್ತದೆ. ಯಾವುದೇ ಸರಕಿನ ಬೇಡಿಕೆಯು ಅನುಭೋಗಿಗಳ ಬಯಕೆಗಳು, ಒಲವುಗಳು, ಅವರ ಆದಾಯಗಳು ಮತ್ತು ಇತರ ಎಲ್ಲಾ ಸರಕುಗಳ ಬೆಲೆಗಳಿಂದ ನಿರ್ಣಯಿಸಲ್ಪಡುತ್ತವೆ. ಸರಕಿನ ಪೂರೈಕೆಯು ಉತ್ಪಾದನಾಂಗಗಳ ಪೂರೈಕೆ ಮತ್ತು ಉತ್ಪಾದನೆಯ ಭೌತಿಕ ಹಾಗೂ ತಾಂತ್ರಿಕ ಸ್ಥಿತಿಗತಿಗಳನ್ನು ಅವಲಂಬಿಸಿರುತ್ತದೆ.

ಆಂತರಿಕ ವ್ಯಾಪಾರಕ್ಕೆ ಅನ್ವಯವಾಗುವ ಸಾರ್ವತ್ರಿಕ ಸಮತೋಲನ ವಿಶ್ಲೇಷಣೆಯನ್ನು (General Equilibrium Analysis) ಗಣನೀಯ ಬದಲಾವಣೆಗಳಿಲ್ಲದೆ ಅಂತರರಾಷ್ಟ್ರೀಯ ವ್ಯಾಪಾರದ ಸಮಸ್ಯೆಗಳಿಗೂ ಅನ್ವಯಿಸಬಹುದು ಎಂದು ಬರ್ಟಿಲ್ ಒಹ್ಲಿನ್ ವಾದಿಸಿದ್ದಾನೆ. ಅವನ ಪ್ರಕಾರ ರಾಷ್ಟ್ರಗಳು ಕೇವಲ ರಾಷ್ಟ್ರೀಯ ಸರಹದ್ದುಗಳು, ಸುಂಕದ ಅಡೆತಡೆಗಳು, ಭಾಷೆ, ಪದ್ಧತಿಗಳು, ಸಂಸ್ಕೃತಿ ಮತ್ತು ಹಣಕಾಸಿನ ಪದ್ಧತಿಗಳಂತಹ ಗುರುತುಗಳ ಮೂಲಕ ಪ್ರತ್ಯೇಕಿಸಲ್ಪಟ್ಟಿರುವ ಪ್ರದೇಶಗಳಾಗಿವೆ. ಪ್ರಾಯೋಗಿಕವಾಗಿ ನೋಡಿದಾಗ ರಾಜಕೀಯ ಗಡಿಗಳು, ಸುಂಕದ ಅಡೆತಡೆಗಳು, ಇತರ ಭಿನ್ನತೆಗಳು ಮತ್ತು ಎರಡು ದೇಶಗಳ ನಡುವೆ

ಸರಕುಗಳ ಹಾಗೂ ಉತ್ಪಾದನಾಂಗಗಳ ಮುಕ್ತ ಚಲನೆಗೆ ಇರುವ ಅಡಚಣೆಗಳು ಶಾಶ್ವತವಾದವುಗಳಲ್ಲ. ಅಂತರರಾಷ್ಟ್ರೀಯ ಸರಹದ್ದುಗಳು ಬದಲಾಗುತ್ತವೆ ಮತ್ತು ಸುಂಕದ ಗೋಡೆಗಳು ಕುಸಿದು ಬೀಳುತ್ತವೆ. ಆ ಪ್ರಕಾರ ಪ್ರದೇಶಗಳ ಮತ್ತು ದೇಶಗಳ ನಡುವೆ ಭಿನ್ನತೆ ಇರುವುದಿಲ್ಲ ಮತ್ತು ಅಂತರ ಪ್ರಾದೇಶಿಕ (ಆಂತರಿಕ) ವ್ಯಾಪಾರವು ಅಂತರರಾಷ್ಟ್ರೀಯ ವ್ಯಾಪಾರದಂತೆಯೇ ಇರುತ್ತದೆ. ವ್ಯಾಪಾರವು ಒಂದೇ ದೇಶದ ವಿವಿಧ ಪ್ರದೇಶಗಳ ನಡುವೆ ನಡೆಯಲಿ ಅಥವಾ ವಿವಿಧ ದೇಶಗಳ ನಡುವೆ ನಡೆಯಲಿ ಎಲ್ಲಾ ವ್ಯಾಪಾರಕ್ಕೂ ಸಾಮಾನ್ಯ ಮೌಲ್ಯ ಸಿದ್ಧಾಂತದ ಮೂಲಭೂತ ತತ್ವವು ಒಂದೇ ಸಮನಾಗಿ ಅನ್ವಯಿಸುತ್ತದೆ ಎಂದು ಒಹ್ಲಿನ್ ಅಭಿಪ್ರಾಯಪಟ್ಟಿರುವನು.

ಆಂತರಿಕ ವ್ಯಾಪಾರ ಮತ್ತು ಅಂತರರಾಷ್ಟ್ರೀಯ ವ್ಯಾಪಾರಗಳೆರಡೂ ಒಂದೇ ತತ್ವದ ಮೇಲೆ ನಿಂತಿವೆ ಎಂದು ಒಹ್ಲಿನ್ ವಾದಿಸಿದ್ದಾನೆ. ಸಾಪೇಕ್ಷ ವೆಚ್ಚದ ಕಲ್ಪನೆಯು ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಮಾತ್ರವಲ್ಲದೆ ಆಂತರಿಕ ವ್ಯಾಪಾರಕ್ಕೂ ಅನ್ವಯಿಸುತ್ತದೆ. ವ್ಯಕ್ತಿಗಳ ನಡುವೆ, ಪ್ರದೇಶಗಳ ನಡುವೆ, ಮತ್ತು ದೇಶಗಳ ನಡುವೆ ವಸ್ತುಗಳ ವಿನಿಮಯ ಏರ್ಪಡಲು ಸಾಪೇಕ್ಷ ಅನುಕೂಲತೆಯೇ ಕಾರಣ ಎಂಬುದು ಅವನ ಅಭಿಪ್ರಾಯವಾಗಿದೆ. ಯಾವ ರೀತಿ ವ್ಯಕ್ತಿಗಳು ಒಂದೊಂದು ವೃತ್ತಿಗೆ ಮಾತ್ರ ಸೂಕ್ತ ವಾಗಿರುತ್ತಾರೆಯೋ ಹಾಗೆಯೇ ಪ್ರದೇಶಗಳು ಮತ್ತು ದೇಶಗಳು ತಮಗೆ ಅನುಕೂಲಕರವಾದ ವಸ್ತುಗಳನ್ನು ಮಾತ್ರ ಉತ್ಪಾದಿಸಲು ಸೂಕ್ತವಾಗಿರುತ್ತವೆ. ಒಬ್ಬ ವ್ಯಕ್ತಿ ಉತ್ತಮ ಉಪಾಧ್ಯಾಯನಾಗಿರಬಹುದು, ಇನ್ನೊಬ್ಬ ವ್ಯಕ್ತಿ ಉತ್ತಮ ವೈದ್ಯನಿರಬಹುದು, ಮತ್ತೊಬ್ಬ ವ್ಯಕ್ತಿ ಉತ್ತಮ ನ್ಯಾಯವಾದಿ ಇರಬಹುದು, ಅಂತೆಯೇ ಪ್ರದೇಶಗಳು ಹಾಗೂ ದೇಶಗಳು ಕೆಲವು ವಸ್ತುಗಳನ್ನು ಮಾತ್ರ ಉತ್ಪಾದಿಸಲು ಉತ್ತಮ ಪರಿಸರವನ್ನು ಪಡೆದಿರಬಹುದು. ಯಾವ ಉತ್ಪಾದನಾಂಗವು ಸುಲಭವಾಗಿ ಮತ್ತು ಯಥೇಚ್ಛವಾಗಿ ದೊರೆಯುತ್ತದೆಯೋ ಅದನ್ನು ಬಳಸಿಕೊಂಡು ಉತ್ಪಾದನೆ ಮಾಡಲಾಗುತ್ತದೆ. ಸಂಪನ್ಮೂಲಗಳ ಲಭ್ಯತೆಯ ಸ್ವರೂಪವನ್ನು ಗಮನಿಸಿದಾಗ ಪ್ರದೇಶಗಳು ಅಥವಾ ದೇಶಗಳು ಎಲ್ಲಾ ವಸ್ತುಗಳನ್ನು ಉತ್ಪಾದಿಸುವುದು ಹಿತಕರವಾಗಿರುವುದಿಲ್ಲ. ಆದ್ದರಿಂದ ಯಾವ ವಸ್ತುಗಳ ಉತ್ಪಾದನೆಗೆ ಉತ್ಪಾದನಾಂಗವು ಸೂಕ್ತವಾಗಿದೆಯೋ ಆ ವಸ್ತುಗಳನ್ನು ಮಾತ್ರ ಉತ್ಪಾದಿಸುವುದು ಅನುಕೂಲಕರ ಎಂದು ಒಹ್ಲಿನ್ ಪ್ರತಿಪಾದಿಸಿದ್ದಾನೆ. ಆ ಮೂಲಕ ಪ್ರದೇಶಗಳಾಗಲೀ ಅಥವಾ ದೇಶಗಳಾಗಲೀ ಉತ್ಪಾದನೆಯಲ್ಲಿ ವೈಶಿಷ್ಟ್ಯತೆಯನ್ನು ಸಾಧಿಸಿ ವ್ಯಾಪಾರವನ್ನು ಬೆಳೆಸುತ್ತವೆ. ಸಾಪೇಕ್ಷ ಅನುಕೂಲತೆಯ ಆಧಾರದ ಮೇಲೆ ವೈಶಿಷ್ಟ್ಯತೆಯೇ ಎಲ್ಲಾ ವ್ಯಾಪಾರಗಳ ಮೂಲ ಬಿಂದುವಾಗಿರುವುದರಿಂದ ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಪ್ರತ್ಯೇಕ ಸಿದ್ಧಾಂತದ ಅಗತ್ಯವಿಲ್ಲವೆಂಬುದು ಅವನ ವಾದವಾಗಿದೆ. **ಆದ್ದರಿಂದ ಒಹ್ಲಿನ್‌ನ ಪ್ರಕಾರ ಅಂತರರಾಷ್ಟ್ರೀಯ ವ್ಯಾಪಾರವು ಆಂತರಿಕ ವ್ಯಾಪಾರದ ಒಂದು ವಿಶೇಷ ಭಾಗ ಅಷ್ಟೆ. ಎರಡೂ ವ್ಯಾಪಾರಗಳಲ್ಲಿಯೂ ಒಂದೇ ತತ್ವ ಅಡಗಿದೆ.**

ಉತ್ಪಾದನಾಂಗಗಳ ಪೂರೈಕೆಯ ಸಾಪೇಕ್ಷ ಲಭ್ಯತೆಯು ಉತ್ಪಾದನೆಯ ರಚನೆ, ವೈಶಿಷ್ಟ್ಯ ಮತ್ತು ವಿವಿಧ ಪ್ರದೇಶಗಳ ನಡುವಿನ ವ್ಯಾಪಾರದ ಏರ್ಪಾಡನ್ನು ನಿರ್ಣಯಿಸುವ ಮುಖ್ಯ ಸಂಗತಿಯಾಗಿದೆ ಎಂಬುದು ಒಹ್ಲಿನ್‌ನ ನಿಲುವಾಗಿದೆ. ವಿವಿಧ ಪ್ರದೇಶಗಳು ಮತ್ತು ದೇಶಗಳು ಉತ್ಪಾದನಾಂಗ ಸಂಪನ್ನತೆಯಲ್ಲಿ ಮತ್ತು ಪೂರೈಕೆಯಲ್ಲಿ ಭಿನ್ನತೆಯನ್ನು ಹೊಂದಿರುತ್ತವೆ. ಕೆಲವು ದೇಶಗಳು ಹೆಚ್ಚು ಬಂಡವಾಳವನ್ನು ಹೊಂದಿರುತ್ತವೆ. ಇನ್ನು ಕೆಲವು ದೇಶಗಳು ಹೆಚ್ಚು ಶ್ರಮವನ್ನು ಹೊಂದಿರುತ್ತವೆ. ಬಂಡವಾಳವನ್ನು ಅಧಿಕವಾಗಿ ಹೊಂದಿರುವ ದೇಶಗಳು ಬಂಡವಾಳ ಸಾಂದ್ರ ಸರಕುಗಳನ್ನು ಹೆಚ್ಚಾಗಿ ರಫ್ತು ಮಾಡುತ್ತವೆ ಮತ್ತು ಶ್ರಮವನ್ನು ಅಧಿಕವಾಗಿ ಹೊಂದಿರುವ ದೇಶಗಳು ಶ್ರಮ ಸಾಂದ್ರ ಸರಕುಗಳನ್ನು ಹೆಚ್ಚಾಗಿ ರಫ್ತು ಮಾಡುತ್ತವೆ ಎಂಬುದು ಉತ್ಪಾದನಾಂಗ ಸಂಪನ್ನತೆಯ ಸಿದ್ಧಾಂತದ ಸಾರವಾಗಿದೆ. ಕೆಲವು ಸರಕುಗಳನ್ನು ಬೇರೆ ದೇಶಗಳಿಂದ ಸಡಿಮೆ ಬೆಲೆಯಲ್ಲಿ ಪಡೆದುಕೊಳ್ಳಬಹುದಾಗಿರುತ್ತದೆ ಮತ್ತು ಅದೇ ಸರಕುಗಳನ್ನು ಸ್ವದೇಶದಲ್ಲಿಯೇ ಉತ್ಪಾದಿಸುವುದಾದರೆ ಹೆಚ್ಚಿನ ವೆಚ್ಚ ತಗಲುತ್ತದೆ ಎಂಬುದೇ ಅಂತರರಾಷ್ಟ್ರೀಯ ವ್ಯಾಪಾರದ ಉದ್ಭವಕ್ಕೆ ಯಾವಾಗಲೂ ಅತ್ಯಂತ ಸನಿಹದ ಕಾರಣವೆಂದು ಒಹ್ಲಿನ್ ವಾದಿಸಿದ್ದಾನೆ. ಆ ಪ್ರಕಾರ, ಸರಕುಗಳ ಬೆಲೆಗಳಲ್ಲಿನ ವ್ಯತ್ಯಾಸವೇ ಅಂತರರಾಷ್ಟ್ರೀಯ ವ್ಯಾಪಾರದ ಪ್ರಧಾನ ಕಾರಣವಾಗಿದೆ.

ಉತ್ಪಾದನಾಂಗಗಳ ಸಂಪನ್ನತೆಯಲ್ಲಿ ಶ್ರೀಮಂತಿಕೆಯನ್ನು ಉತ್ಪಾದನಾಂಗಗಳ ಬೆಲೆಗಳ ರೂಪದಲ್ಲಿ ಒಹ್ಲಿನ್ ವಿವರಿಸಿದ್ದಾನೆ. A ದೇಶದಲ್ಲಿ ಬಂಡವಾಳವು ಹೆಚ್ಚು ಅಗ್ಗವಾಗಿ ದೊರೆಯುವಂತಿದ್ದರೆ ಆ ದೇಶದಲ್ಲಿ ಬಂಡವಾಳವು ಹೇರಳವಾಗಿ ಲಭ್ಯವಿದೆ ಎಂದರ್ಥ. B ದೇಶದಲ್ಲಿ ಶ್ರಮವು ಸಾಪೇಕ್ಷವಾಗಿ ಸುಲಭ ಬೆಲೆಯಲ್ಲಿ ಲಭ್ಯವಿದ್ದರೆ ಆ ದೇಶವು ಶ್ರಮವನ್ನು ಯಥೇಚ್ಛವಾಗಿ ಹೊಂದಿದೆ ಎಂದರ್ಥ. ಯಾವುದೊಂದು ದೇಶದಲ್ಲಿ ಯಾವ ಉತ್ಪಾದನಾಂಗವು ಸುಲಭ ಬೆಲೆಯಲ್ಲಿ ಮತ್ತು ಹೇರಳವಾಗಿ ದೊರೆಯುತ್ತದೆಯೋ ಆ ಉತ್ಪಾದನಾಂಗದ ನೆರವಿನಿಂದ ಉತ್ಪಾದಿಸಬಹುದಾದ ಸರಕುಗಳನ್ನು ಅಧಿಕವಾಗಿ ಉತ್ಪಾದಿಸಿ ರಫ್ತು ಮಾಡಲು ಆ ದೇಶವು ತೊಡಗುತ್ತದೆ. ಇದಕ್ಕೆ ವಿರುದ್ಧವಾಗಿ, ಯಾವ ದೇಶದಲ್ಲಿ ಯಾವ ಉತ್ಪಾದನಾಂಗವು ಸಾಪೇಕ್ಷವಾಗಿ ಸುಲಭ ಬೆಲೆಯಲ್ಲಿ ಮತ್ತು ಯಥೇಚ್ಛವಾಗಿ ಲಭಿಸುವುದಿಲ್ಲವೋ ಆ ಉತ್ಪಾದನಾಂಗದ ನೆರವಿನಿಂದ ಉತ್ಪಾದಿಸಬಹುದಾದ ಸರಕುಗಳನ್ನು ಬೇರೆ ದೇಶದಿಂದ ಆಮದು ಮಾಡಿಕೊಳ್ಳಲು ತೊಡಗುತ್ತದೆ. ನಮ್ಮ ಉದಾಹರಣೆಯಲ್ಲಿ Aದೇಶವು ಬಂಡವಾಳ ಸಾಂದ್ರ ಸರಕುಗಳನ್ನು ರಫ್ತು ಮಾಡುತ್ತದೆ ಮತ್ತು B ದೇಶವು ಶ್ರಮ ಸಾಂದ್ರ ಸರಕುಗಳನ್ನು ರಫ್ತು ಮಾಡುತ್ತದೆ.

ಒಹ್ಲಿನ್ ಉತ್ಪಾದನಾ ವೆಚ್ಚವನ್ನು ಹಣದ ರೂಪದಲ್ಲಿ ವ್ಯಕ್ತಪಡಿಸಿದ್ದಾನೆ. ಉತ್ಪಾದನಾಂಗಗಳ ವೆಚ್ಚಗಳಲ್ಲಿ ಭಿನ್ನತೆಗಳಿರುವ ಪರಿಣಾಮವಾಗಿ ಸರಕುಗಳ ಬೆಲೆಯಲ್ಲಿ

ವ್ಯತ್ಯಾಸಗಳಿರುವುದೇ ಅಂತರ ರಾಷ್ಟ್ರೀಯ ವ್ಯಾಪಾರದ ಉಗಮಕ್ಕೆ ನಿಕಟ ಕಾರಣವಾಗಿದೆ ಎಂಬುದು ಅವನ ಅಭಿಮತವಾಗಿದೆ.

ಉದಾಹರಣೆಗೆ, ಭಾರತದಲ್ಲಿ ಒಂದು ಬೈಸಿಕಲ್ಲನ್ನು ಉತ್ಪಾದಿಸಲು 40,000 ರೂಪಾಯಿಗಳು ವೆಚ್ಚವಾದರೆ ಜಪಾನಿನಲ್ಲಿ ಒಂದು ಬೈಸಿಕಲ್ಲನ್ನು ಉತ್ಪಾದಿಸಲು 30,000 ರೂಪಾಯಿಗಳ ವೆಚ್ಚ ತಗಲುತ್ತದೆ. ಆದ್ದರಿಂದ ನಾವು ಉತ್ಪಾದಿಸುವುದರ ಬದಲು ಜಪಾನಿನಿಂದ ಆಮದು ಮಾಡಿಕೊಳ್ಳುವುದು ಸೂಕ್ತವಾದುದಲ್ಲವೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ವಿದೇಶದಿಂದ ಕಡಿಮೆ ಬೆಲೆಯಲ್ಲಿ ಈ ವಸ್ತುವು ಲಭ್ಯವಾಗುವುದರಿಂದ ಅದನ್ನು ಉತ್ಪಾದಿಸುವ ಬದಲು ಆಮದು ಮಾಡಿಕೊಳ್ಳುವುದೆ ಅನುಕೂಲಕರ ಎಂಬ ಉತ್ತರ ದೊರೆಯುತ್ತದೆ. ಉತ್ಪಾದನಾಂಗದ ವೆಚ್ಚವು ಕಡಿಮೆ ಇರುವುದರಿಂದ ಕಡಿಮೆ ವೆಚ್ಚದಲ್ಲಿ ಸರಕನ್ನು ಉತ್ಪಾದಿಸಲು ಸಾಧ್ಯವಾಗುತ್ತದೆ.

ಉತ್ಪಾದನಾಂಗಗಳ ಲಭ್ಯತೆಯಲ್ಲಿ ಭಿನ್ನತೆ ಇರುವಿಕೆಯೊಂದೇ ವ್ಯಾಪಾರಕ್ಕೆ ಕಾರಣವಾಗುವುದಿಲ್ಲ. ಇನ್ನೂ ಒಂದು ಮುಖ್ಯವಾದ ಮತ್ತು ಅತ್ಯಾವಶ್ಯಕವಾದ ಕಾರಣವಿದೆ. ಅದೆಂದರೆ ಒಂದು ವಸ್ತು ಮತ್ತು ಇನ್ನೊಂದು ವಸ್ತುವಿನ ಉತ್ಪಾದನೆಗೆ ಆವಶ್ಯಕವಿರುವ ಉತ್ಪಾದನಾಂಗಗಳ ಪ್ರಮಾಣದಲ್ಲಿ ಭಿನ್ನತೆ ಇರುವುದು. ಆದ್ದರಿಂದ ವಿವಿಧ ವಸ್ತುಗಳು ತಮ್ಮ ಉತ್ಪಾದನೆಗೆ ವಿಭಿನ್ನ ಪ್ರಮಾಣದಲ್ಲಿ ಉತ್ಪಾದನಾಂಗಗಳನ್ನು ಕೋರುತ್ತವೆ. ಅಂದರೆ ಒಂದು ವಸ್ತುವಿನ ಉತ್ಪಾದನೆಗೆ ಹೆಚ್ಚು ಶ್ರಮ ಮತ್ತು ಕಡಿಮೆ ಬಂಡವಾಳ ಆವಶ್ಯಕವಿರಬಹುದು. ಇನ್ನೊಂದು ವಸ್ತುವಿನ ಉತ್ಪಾದನೆಗೆ ಹೆಚ್ಚು ಬಂಡವಾಳ ಮತ್ತು ಕಡಿಮೆ ಶ್ರಮ ಆವಶ್ಯಕವಿರಬಹುದು. ಒಂದು ದೇಶವು ಬಂಡವಾಳದಲ್ಲಿ ಸಿರಿವಂತವಾಗಿದೆ ಎಂದು ಹೇಳಿದರೆ ಬೇರೆ ದೇಶದೊಡನೆ ಹೋಲಿಸಿದಾಗ ಅದರಲ್ಲಿ ಬಂಡವಾಳ ಹೆಚ್ಚಾಗಿದೆ, ಆದ್ದರಿಂದ ಅದು ಸುಲಭ ಬೆಲೆಯಲ್ಲಿ ಸಿಗುತ್ತದೆ ಮತ್ತು ಆ ದೇಶದಲ್ಲಿ ಲಭ್ಯವಿರುವ ಬಂಡವಾಳದ ಪ್ರಮಾಣ ಹೆಚ್ಚಾಗಿದೆ ಎಂದು ಅರ್ಥ.

ಕಲ್ಪನೆಗಳು
(Assumptions)

ಉತ್ಪಾದನಾಂಗ ಸಮೃದ್ಧಿ ಸಿದ್ಧಾಂತವು ಈ ಕೆಳಗಿನ ಕಲ್ಪನೆಗಳನ್ನು ಆಧರಿಸಿದೆ.

1. ವ್ಯಾಪಾರದಲ್ಲಿ ಎರಡು ಪ್ರದೇಶಗಳನ್ನು ಪರಿಗಣಿಸಬೇಕು. ಇವುಗಳನ್ನು ಎರಡು ದೇಶಗಳು ಎಂತಲೂ ಕಲ್ಪಿಸಿಕೊಳ್ಳಬಹುದು.
2. ದೇಶಗಳ ನಡುವೆ ಉತ್ಪಾದನಾಂಗಗಳ ಲಭ್ಯತೆಯಲ್ಲಿ ಭಿನ್ನತೆ ಇರುತ್ತದೆ.
3. ಬೇರೆ ಬೇರೆ ವಸ್ತುಗಳ ಉತ್ಪಾದನೆಗೆ ವಿಭಿನ್ನ ಉತ್ಪಾದನಾಂಗಗಳು ಅಗತ್ಯವಾಗಿರುತ್ತವೆ.

4. ಸರಕಿನ ಬೆಲೆ ನಿರ್ಧಾರದಲ್ಲಿ ಸಾಗಣೆ ವೆಚ್ಚವು ಪಾತ್ರವಹಿಸುತ್ತದೆ. ಅಂದರೆ ಒಟ್ಟು ಉತ್ಪಾದನ ವೆಚ್ಚದಲ್ಲಿ ಸಾಗಣೆ ವೆಚ್ಚವು ಸೇರಿರುತ್ತದೆ.
5. ಉತ್ಪಾದನ ಕಾರ್ಯ ವಿಧಾನದಲ್ಲಿ ಶ್ರಮ, ಬಂಡವಾಳ, ನೈಸರ್ಗಿಕ ಸಂಪನ್ಮೂಲಗಳು ಮೊದಲಾದ ಎಲ್ಲಾ ಸಂಪನ್ಮೂಲಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.
6. ಉತ್ಪಾದನಾಂಗಗಳ ಲಭ್ಯತೆಯಲ್ಲಿ ವಿಭಿನ್ನತೆ ಇರುವುದರಿಂದಲೇ ಅವುಗಳ ಬೆಲೆಯಲ್ಲಿ ವ್ಯತ್ಯಾಸವಿರುತ್ತದೆ. ಆದ್ದರಿಂದಲೇ ಸರಕುಗಳ ಬೆಲೆಯಲ್ಲಿ ಭಿನ್ನತೆಗಳು ತಲೆದೋರುತ್ತವೆ.
7. ಉತ್ಪಾದನಾಂಗಗಳ ಮಾರುಕಟ್ಟೆ ಮತ್ತು ಸರಕುಗಳ ಮಾರುಕಟ್ಟೆ ಎರಡರಲ್ಲೂ ಪರಿಪೂರ್ಣ ಪೈಪೋಟಿ ಇರುತ್ತದೆ.
8. ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಸರಕುಗಳ ವ್ಯವಹಾರವನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಬೇಕು.
9. ಪ್ರತಿಯೊಂದು ಪ್ರದೇಶ ಅಥವಾ ದೇಶದಲ್ಲಿ ಪ್ರತ್ಯೇಕವಾದ ಕಾಗದದ ಹಣದ ಪದ್ಧತಿ ಅಸ್ತಿತ್ವದಲ್ಲಿ ಇರುತ್ತದೆ.
10. ದೇಶದ ಒಳಗಡೆ ಸಂಪನ್ಮೂಲಗಳ ಪರಿಪೂರ್ಣ ಚಲನಶೀಲತೆ ಇರುತ್ತದೆ. ಆದರೆ ಅಂತರರಾಷ್ಟ್ರೀಯವಾಗಿ ಇವು ಚಲನಶೀಲತೆಯನ್ನು ಪಡೆದಿರುವುದಿಲ್ಲ.
11. ಅರ್ಥವ್ಯವಸ್ಥೆಯಲ್ಲಿ ಪೂರ್ಣೋದ್ಯೋಗವಿರುತ್ತದೆ. ಅಂದರೆ ಎಲ್ಲಾ ಸಂಪನ್ಮೂಲಗಳು ಪೂರ್ಣವಾಗಿ ಉತ್ಪಾದನೆಯಲ್ಲಿ ತೊಡಗಿಸಲ್ಪಟ್ಟಿರುತ್ತವೆ.
12. ಮುಕ್ತ ವ್ಯಾಪಾರವು ಅಸ್ತಿತ್ವದಲ್ಲಿರುತ್ತದೆ. ಅಂದರೆ ಎರಡೂ ದೇಶಗಳ ನಡುವಣ ವ್ಯಾಪಾರ ಸಂಬಂಧಗಳಲ್ಲಿ ಯಾವುದೇ ನಿರ್ಬಂಧಗಳಿರುವುದಿಲ್ಲ.
13. ಎರಡೂ ಸರಕುಗಳ ಉತ್ಪಾದನಾ ಬಿಂಬಕ(ಕಾರ್ಯ)ಗಳು ವಿಭಿನ್ನ ಉತ್ಪಾದನಾಂಗ ತೀವ್ರತೆಯನ್ನು ಹೊಂದಿರುತ್ತವೆ. ಕೆಲವು ಉತ್ಪಾದನಾ ಬಿಂಬಕಗಳು ಶ್ರಮಸಾಂದ್ರವಾಗಿದ್ದರೆ, ಇನ್ನು ಕೆಲವು ಉತ್ಪಾದನಾ ಬಿಂಬಕಗಳು ಬಂಡವಾಳ ಸಾಂದ್ರವಾಗಿರುತ್ತವೆ.
14. ಪ್ರತಿಯೊಂದು ಪ್ರದೇಶದಲ್ಲಿಯೂ, ಪ್ರತಿಯೊಂದು ವಸ್ತುವಿನ ಉತ್ಪಾದನೆಯಲ್ಲಿ ಸ್ಥಿರ ವೆಚ್ಚದ ನಿಯಮವು ಆಚರಣೆಯಲ್ಲಿರುತ್ತದೆ.
15. ಎರಡೂ ದೇಶಗಳಲ್ಲಿ ಅನುಭೋಗಿಗಳ ಅಭಿರುಚಿಗಳು ಮತ್ತು ಅವರ ಬೇಡಿಕೆಯ ರಚನೆಗಳು ಒಂದೇ ಆಗಿರುತ್ತವೆ.
16. ತಾಂತ್ರಿಕ ಜ್ಞಾನದಲ್ಲಿ ಬದಲಾವಣೆಗಳು ಇರುವುದಿಲ್ಲ.

ಸಾಪೇಕ್ಷ ವೆಚ್ಚದ ಸಿದ್ಧಾಂತವು ಶ್ರಮವನ್ನು ಮಾತ್ರ ಉತ್ಪಾದನಾಂಗವೆಂದು ಪರಿಗಣಿಸಿದೆ. ಆದರೆ ಉತ್ಪಾದನಾಂಗ ಸಂಪನ್ನತೆಯ ಸಿದ್ಧಾಂತದ ಪ್ರಕಾರ ಶ್ರಮ, ಬಂಡವಾಳ, ನೈಸರ್ಗಿಕ ಸಂಪನ್ಮೂಲಗಳು ಇತ್ಯಾದಿ ಎಲ್ಲವೂ ಉತ್ಪಾದನಾಂಗಗಳಾಗಿರುತ್ತವೆ. ಆದ್ದರಿಂದ ಇದು ಸಾರ್ವತ್ರಿಕ ಮೌಲ್ಯ ಸಿದ್ಧಾಂತದ ಒಂದು ಭಾಗವಾಗಿದೆ. ಅದೇ ಉದ್ದೇಶದಿಂದ ಇದನ್ನು "ಸಾರ್ವತ್ರಿಕ ಸಮತೋಲನ ಸಿದ್ಧಾಂತ" (General Equilibrium Theory) ಎಂಬ ಹೆಸರಿನಿಂದಲೂ ಕರೆಯಲಾಗುತ್ತದೆ.

ಶ್ರಮವು ಯಥೇಚ್ಛವಾಗಿ ಲಭ್ಯವಿರುವ ದೇಶವು ಶ್ರಮ ಸಾಂದ್ರ ಸರಕುಗಳ ಉತ್ಪಾದನೆಯಲ್ಲಿ ವೈಶಿಷ್ಟ್ಯತೆಯನ್ನು ಸಾಧಿಸಿ ಅವುಗಳನ್ನು ರಫ್ತು ಮಾಡಿ ಬಂಡವಾಳ ಸಾಂದ್ರ ಸರಕುಗಳನ್ನು ಆಮದು ಮಾಡಿಕೊಳ್ಳುತ್ತದೆ. ತದ್ವಿರುದ್ಧವಾಗಿ, ಬಂಡವಾಳವನ್ನು ಯಥೇಚ್ಛವಾಗಿ ಹೊಂದಿರುವ ದೇಶವು ಬಂಡವಾಳ ಸಾಂದ್ರ ಸರಕುಗಳ ಉತ್ಪಾದನೆಯಲ್ಲಿ ಪ್ರಯತ್ನಗಳನ್ನು ಕೇಂದ್ರೀಕರಿಸಿ ಇತರ ಸರಕುಗಳನ್ನು ಅಂದರೆ ಶ್ರಮ ಸಾಂದ್ರ ಸರಕುಗಳನ್ನು ಆಮದು ಮಾಡಿಕೊಳ್ಳುತ್ತದೆ.

ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ಎರಡು ದೇಶಗಳ ಉದಾಹರಣೆಯನ್ನು ತೆಗೆದುಕೊಳ್ಳುವ ಮೂಲಕ ಒಹ್ಲಿನ್ ತನ್ನ ಸಿದ್ಧಾಂತವನ್ನು ಸ್ಪಷ್ಟಪಡಿಸುತ್ತಾನೆ. ಆಸ್ಟ್ರೇಲಿಯಾದಲ್ಲಿ ಯಥೇಚ್ಛವಾದ ಭೂಮಿ ಇದೆ. ಆದರೆ ವಿರಳವಾದ ಶ್ರಮ ಮತ್ತು ಬಂಡವಾಳ ಇವೆ. ಆದ್ದರಿಂದ ಅಲ್ಲಿ ಭೂಮಿಯು ಅಗ್ಗವಾಗಿಯೂ ಇತರ ಸಂಪನ್ಮೂಲಗಳು ಸಾಪೇಕ್ಷವಾಗಿ ದುಬಾರಿಯಾಗಿಯೂ ಇವೆ. ಆದ್ದರಿಂದ ಆಸ್ಟ್ರೇಲಿಯಾವು ಹೆಚ್ಚು ಭೂಮಿಯನ್ನು ಮತ್ತು ಕಡಿಮೆ ಶ್ರಮ ಹಾಗೂ ಬಂಡವಾಳವನ್ನು ಅಪೇಕ್ಷಿಸುವ ಸರಕುಗಳನ್ನು ಉತ್ಪಾದಿಸುತ್ತದೆ. ಉದಾಹರಣೆಗೆ, ಗೋಧಿ, ಮಾಂಸ, ಉಣ್ಣೆ ಇತ್ಯಾದಿ. ಇವು ಆಸ್ಟ್ರೇಲಿಯಾದಲ್ಲಿ ಬಹಳ ಅಗ್ಗದ ಬೆಲೆಯಲ್ಲಿ ದೊರೆಯುತ್ತವೆ. ಆದರೆ ಇಂಗ್ಲೆಂಡಿನಲ್ಲಿ ಬಂಡವಾಳವು ಯಥೇಚ್ಛವಾಗಿದೆ ಮತ್ತು ಶ್ರಮ ಹಾಗೂ ಭೂಮಿ ವಿರಳವಾಗಿವೆ. ಆದ್ದರಿಂದ ಇಂಗ್ಲೆಂಡ್ ಹೆಚ್ಚು ಬಂಡವಾಳವನ್ನು, ಆದರೆ ಕಡಿಮೆ ಶ್ರಮ ಮತ್ತು ಭೂಮಿಯನ್ನು ಅಪೇಕ್ಷಿಸುವ ಸರಕುಗಳನ್ನು ಉತ್ಪಾದಿಸುತ್ತದೆ. ಅಂದರೆ ಸಾಮಾನ್ಯವಾಗಿ ಯಂತ್ರಗಳು ಮತ್ತು ಯಂತ್ರೋಪಕರಣಗಳಿಂದ ತಯಾರಿಸಲ್ಪಡುವ ವಸ್ತುಗಳನ್ನು ಅದು ಉತ್ಪಾದಿಸುತ್ತದೆ. ಈ ಸರಕುಗಳು, ಇಂಗ್ಲೆಂಡಿನಲ್ಲಿ ಸುಲಭ ಬೆಲೆಯಲ್ಲಿ ದೊರೆಯುತ್ತವೆ. ಆದ್ದರಿಂದ ಆಸ್ಟ್ರೇಲಿಯಾವು ಗೋಧಿ, ಮಾಂಸ, ಉಣ್ಣೆ ಮುಂತಾದ ವಸ್ತುಗಳನ್ನು ರಫ್ತು ಮಾಡಿ ಯಂತ್ರಗಳು ಹಾಗೂ ಯಂತ್ರೋಪಕರಣಗಳಿಂದ ತಯಾರಿಸಿದ ವಸ್ತುಗಳನ್ನು ಆಮದು ಮಾಡಿಕೊಳ್ಳುತ್ತದೆ. ಇಂಗ್ಲೆಂಡ್ ಯಂತ್ರೋಪಕರಣಗಳನ್ನು ಹಾಗೂ ಯಂತ್ರ ತಯಾರಿಕಾ ವಸ್ತುಗಳನ್ನು ರಫ್ತುಮಾಡಿ ಗೋಧಿ, ಮಾಂಸ, ಉಣ್ಣೆ ಇತ್ಯಾದಿ ವಸ್ತುಗಳನ್ನು ಆಮದು ಮಾಡಿಕೊಳ್ಳುತ್ತದೆ.

ಉತ್ಪಾದನಾಂಗ ಸಂಪನ್ನತೆಯ (ಸಮೃದ್ಧಿ) ಸಿದ್ಧಾಂತವನ್ನು ಎರಡು ವಿಧಗಳಲ್ಲಿ ನಿರೂಪಿಸಬಹುದು.

i) ಮೊದಲನೆಯದಾಗಿ, ಉತ್ಪಾದನಾಂಗದ ಬೆಲೆಯ ಮೂಲಕ ಉತ್ಪಾದನಾಂಗದ ಸಮೃದ್ಧಿ (ಸಂಪನ್ನತೆ) ಅಥವಾ ಕೊರತೆಯ ವಿವರಣೆ.

ii) ಎರಡನೆಯದಾಗಿ, ಭೌತಿಕ ರೂಪದಲ್ಲಿ ಉತ್ಪಾದನಾಂಗ ಸಂಪನ್ನತೆ ಅಥವಾ ಕೊರತೆಯ ವಿವರಣೆ.

ಈ ಎರಡು ನಿರೂಪಣೆಯಲ್ಲಿ ಈ ಸಿದ್ಧಾಂತವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸೋಣ.

I. ಉತ್ಪಾದನಾಂಗಗಳ ಬೆಲೆಯ ರೂಪದಲ್ಲಿ ಅವುಗಳ ಸಮೃದ್ಧಿ (ಸಂಪನ್ನತೆ)


(Factor Abundance in Terms of Factor Prices)

ಮೊದಲೇ ವಿವರಿಸಿದಂತೆ ಒಹ್ಲಿನ್ ಉತ್ಪಾದನಾಂಗಗಳ ಸಂಪನ್ನತೆಯಲ್ಲಿ ಶ್ರೀಮಂತಿಕೆಯನ್ನು ಉತ್ಪಾದನಾಂಗಗಳ ಬೆಲೆಗಳ ರೂಪದಲ್ಲಿ ವಿವರಿಸಿದ್ದಾನೆ. ಅವನ ಪ್ರಕಾರ ಒಂದು ದೇಶವು ಬಂಡವಾಳವನ್ನು ಹೇರಳವಾಗಿ ಹೊಂದಿದೆ ಎಂದಾದರೆ ಆ ಪರಿಸ್ಥಿತಿಯನ್ನು ಕೆಳಗಿನ ಸೂತ್ರದ ಮೂಲಕ ವಿವರಿಸಬಹುದು.

$$(PC/PL)\ A < (PC/PL)\ B$$

ಈ ಸೂತ್ರದಲ್ಲಿ PC ಬಂಡವಾಳದ ಬೆಲೆಯನ್ನು ಮತ್ತು PL ಶ್ರಮದ ಬೆಲೆಯನ್ನು ಸೂಚಿಸುತ್ತವೆ. A ಮತ್ತು B ಎಂಬ ಅಕ್ಷರಗಳು ಎರಡು ದೇಶಗಳನ್ನು ಸೂಚಿಸುತ್ತವೆ. A ದೇಶದಲ್ಲಿ ಬಂಡವಾಳವು ಸಾಪೇಕ್ಷವಾಗಿ ಕಡಿಮೆ ಬೆಲೆಗೆ ದೊರೆಯುವಂತಿದ್ದರೆ ಆ ದೇಶವು ಬಂಡವಾಳದಲ್ಲಿ ಸಮೃದ್ಧವಾಗಿದೆ ಎಂದರ್ಥ. B ದೇಶದಲ್ಲಿ ಶ್ರಮವು ಸಾಪೇಕ್ಷವಾಗಿ ಅಗ್ಗವಾಗಿದ್ದರೆ ಆ ದೇಶವು ಶ್ರಮದಲ್ಲಿ ಸಮೃದ್ಧವಾಗಿದೆ ಎಂದರ್ಥ. ಈಗ A ದೇಶವು ಬಂಡವಾಳ ಸಾಂದ್ರ ಸರಕುಗಳನ್ನು ಉತ್ಪಾದಿಸಿ ರಫ್ತು ಮಾಡುತ್ತದೆ ಮತ್ತು B ದೇಶವು ಶ್ರಮ ಸಾಂದ್ರ ಸರಕುಗಳನ್ನು ಉತ್ಪಾದಿಸಿ ರಫ್ತು ಮಾಡುತ್ತದೆ.

ರೇಖಾ ಚಿತ್ರ 1.2 ಅದನ್ನು ಪ್ರಸ್ತುತಪಡಿಸುತ್ತದೆ. OX ತಲಾಕ್ಷದಲ್ಲಿ ಶ್ರಮಸಾಂದ್ರ X ಸರಕನ್ನು ಮತ್ತು OY ಲಂಬಾಕ್ಷದಲ್ಲಿ ಬಂಡವಾಳ ಸಾಂದ್ರ Y ಸರಕನ್ನು ತೋರಿಸಲಾಗಿದೆ. A ಮತ್ತು B ಎಂಬ ಎರಡು ದೇಶಗಳನ್ನು ಉದಾಹರಣೆಯಾಗಿ ತೆಗೆದುಕೊಳ್ಳಲಾಗಿದೆ. AA ರೇಖೆಯು A ದೇಶದಲ್ಲಿ ಎರಡೂ ಸರಕುಗಳ ಉತ್ಪಾದನಾಂಗಗಳ ಬೆಲೆ ರೇಖೆಯಾಗಿದೆ. ಅಂತೆಯೇ BB ರೇಖೆಯು B ದೇಶದಲ್ಲಿ ಎರಡೂ ಸರಕುಗಳ ಉತ್ಪಾದನಾಂಗಗಳ ಬೆಲೆ ರೇಖೆಯಾಗಿದೆ. XX ವಕ್ರ ರೇಖೆಯು X ಸರಕಿನ ಸಮಾನ ಉತ್ಪನ್ನ ರೇಖೆ (Iso Quant Curve) ಯಾಗಿದೆ. YY ವಕ್ರ ರೇಖೆಯು Y ಸರಕಿನ ಸಮಾನ ಉತ್ಪನ್ನ ರೇಖೆಯಾಗಿದೆ.



ರೇಖಾ ಚಿತ್ರ 1.2

A ದೇಶವು ಬಂಡವಾಳ ಸಂಪನ್ನತೆಯ (ಸಮೃದ್ಧ) ದೇಶವಾಗಿದ್ದು ಅದು ಬಂಡವಾಳ ಸಾಂದ್ರ Y ಸರಕಿನ ಉತ್ಪಾದನೆಯಲ್ಲಿ ತನ್ನ ಪ್ರಯತ್ನಗಳನ್ನು ಕೇಂದ್ರೀಕರಿಸುತ್ತದೆ. ಒಂದು ಘಟಕ Y ಸರಕಿನ ಉತ್ಪಾದನೆಗೆ A ದೇಶದಲ್ಲಿ OC ಪ್ರಮಾಣದ ಬಂಡವಾಳ ಮತ್ತು OL ಪ್ರಮಾಣದ ಶ್ರಮ ಅಗತ್ಯವಿರುತ್ತದೆ. ಆದ್ದರಿಂದ A ದೇಶವು ಬಂಡವಾಳ ಸಾಂದ್ರ Y ಸರಕನ್ನು ಉತ್ಪಾದಿಸಿ B ದೇಶಕ್ಕೆ ರಫ್ತು ಮಾಡುತ್ತದೆ. ಬದಲಾಗಿ B ದೇಶದಲ್ಲಿ ಶ್ರಮವು ಸಮೃದ್ಧವಾಗಿರುವ ಉತ್ಪಾದನಾಂಗವಾಗಿದೆ. ಆ ದೇಶದಲ್ಲಿ ಒಂದು ಘಟಕ X ಸರಕನ್ನು ಉತ್ಪಾದಿಸಲು OC_1 ಪ್ರಮಾಣದ ಬಂಡವಾಳ ಮತ್ತು OL_1 ಪ್ರಮಾಣದ ಶ್ರಮ ಬೇಕಾಗುತ್ತವೆ. ಆದ್ದರಿಂದ B ದೇಶವು ಶ್ರಮ ಸಾಂದ್ರ X ಸರಕನ್ನು ಉತ್ಪಾದಿಸಿ A ದೇಶಕ್ಕೆ ರಫ್ತು ಮಾಡುತ್ತದೆ.

ಆ ಮೇರೆಗೆ, ಬಂಡವಾಳ ಸಂಪನ್ನತೆಯ A ದೇಶವು ಬಂಡವಾಳ ಸಾಂದ್ರ Y ಸರಕನ್ನು ಉತ್ಪಾದಿಸಿ ರಫ್ತು ಮಾಡುತ್ತದೆ ಮತ್ತು ಶ್ರಮ ಸಂಪನ್ನತೆಯ B ದೇಶವು ಶ್ರಮ ಸಾಂದ್ರ X ಸರಕನ್ನು ಉತ್ಪಾದಿಸಿ ರಫ್ತು ಮಾಡುತ್ತದೆ.

I. ಭೌತಿಕ ರೂಪದಲ್ಲಿ ಉತ್ಪಾದನಾಂಗಗಳ ಸಮೃದ್ಧಿ (ಸಂಪನ್ನತೆ)

(Factor Abundance in Physical Terms)

ಭೌತಿಕರೂಪದಲ್ಲಿ ಉತ್ಪಾದನಾಂಗಗಳ ಸಮೃದ್ಧಿಯ ಮೂಲಕವೂ ಒಹ್ಲಿನ್‌ನ ಸಿದ್ಧಾಂತವನ್ನು ವಿವರಿಸಬಹುದಾಗಿದೆ. A ದೇಶವು ಬಂಡವಾಳ ಸಮೃದ್ಧಿಯನ್ನು ಮತ್ತು B ದೇಶವು ಶ್ರಮ ಸಮೃದ್ಧಿಯನ್ನು ಹೊಂದಿದ್ದರೆ ಭೌತಿಕ ರೂಪದಲ್ಲಿ ಈ ಕೆಳಗಿನ ಸೂತ್ರ ದೊರೆಯುತ್ತದೆ.

$CA/LA > CB/LB$

ಈ ಸೂತ್ರದಲ್ಲಿ


CA = A ದೇಶದಲ್ಲಿ ಒಟ್ಟು ಬಂಡವಾಳದ ಪ್ರಮಾಣ

LA = A ದೇಶದಲ್ಲಿ ಒಟ್ಟು ಶ್ರಮದ ಪ್ರಮಾಣ

CB = B ದೇಶದಲ್ಲಿ ಒಟ್ಟು ಬಂಡವಾಳ ಪ್ರಮಾಣ

LB = B ದೇಶದಲ್ಲಿ ಒಟ್ಟು ಶ್ರಮದ ಪ್ರಮಾಣ

ಇದನ್ನು ಕೆಳಗೆ ಕೊಟ್ಟಿರುವ ರೇಖಾ ಚಿತ್ರದ ಮೂಲಕ ವಿವರಿಸಬಹುದು.



ರೇಖಾ ಚಿತ್ರ 1.3

ರೇಖಾ ಚಿತ್ರ 1.3ರಲ್ಲಿ OX ಅಕ್ಷದಲ್ಲಿ X ಸರಕನ್ನು ಹಾಗೂ OY ಅಕ್ಷದಲ್ಲಿ Y ಸರಕನ್ನು ತೋರಿಸಲಾಗಿದೆ. X ಶ್ರಮ ಸಾಂದ್ರ ಸರಕು ಮತ್ತು Y ಬಂಡವಾಳದ ಸಾಂದ್ರ ಸರಕು ಆಗಿವೆ. A ದೇಶದ ಉತ್ಪಾದನ ಸಾಧ್ಯತಾ ರೇಖೆಯು AA_1 ಆಗಿದೆ ಮತ್ತು B ದೇಶದ ಉತ್ಪಾದನ ಸಾಧ್ಯತಾ ರೇಖೆಯು BB_1 ಆಗಿದೆ.

A ಮತ್ತು B ದೇಶಗಳು X ಮತ್ತು Y ಎರಡೂ ಸರಕುಗಳನ್ನು ಒಂದೇ ಪ್ರಮಾಣದಲ್ಲಿ ಉತ್ಪಾದಿಸುವುದಾದರೆ, ಅವುಗಳ ಉತ್ಪಾದನೆಯು OR ರೇಖೆಯಲ್ಲಿ ತೋರಿಸಿದಂತಿರುತ್ತದೆ. A ದೇಶವು ಅದರ ಉತ್ಪಾದನ ಸಾಧ್ಯತಾ ರೇಖೆ AA_1 ಮೇಲೆ E ಬಿಂದುವಿನಲ್ಲಿ ಉತ್ಪಾದಿಸುತ್ತದೆ ಮತ್ತು B ದೇಶವು ಅದರ ಉತ್ಪಾದನ ಸಾಧ್ಯತಾ ರೇಖೆ BB_1 ಮೇಲೆ F ಬಿಂದುವಿನಲ್ಲಿ ಉತ್ಪಾದಿಸುತ್ತಿರುತ್ತದೆ. ಎರಡೂ ದೇಶಗಳು ತಮ್ಮ ಬಿಂದುಗಳಲ್ಲಿ ಉತ್ಪಾದಿಸುತ್ತವೆ ಎಂದಾದರೆ A ದೇಶವು Y ಸರಕನ್ನು B ದೇಶಕ್ಕಿಂತ ಕಡಿಮೆ ಬೆಲೆಯಲ್ಲಿ ಉತ್ಪಾದಿಸಬಲ್ಲದು. ಬದಲಾಗಿ B ದೇಶವು X ಸರಕನ್ನು B ದೇಶಕ್ಕಿಂತ ಕಡಿಮೆ ಬೆಲೆಯಲ್ಲಿ ಉತ್ಪಾದಿಸಬಲ್ಲದು. ಆದ್ದರಿಂದ A ದೇಶವು Y ಸರಕಿನ ಉತ್ಪಾದನೆಯಲ್ಲಿ ಮತ್ತು B ದೇಶವು X ಸರಕಿನ ಉತ್ಪಾದನೆಯಲ್ಲಿ ತೊಡಗುತ್ತವೆ. A ದೇಶದ ಉತ್ಪಾದನ ಸಾಧ್ಯತಾ

ರೇಖೆಯು E ಬಿಂದುವಿನಲ್ಲಿ ಕಡಿದಾಗಿರುವಿಕೆ ಮತ್ತು B ದೇಶದ ಉತ್ಪಾದನ ಸಾಧ್ಯತಾ ರೇಖೆಯು F ಬಿಂದುವಿನಿಂದ ಚಪ್ಪಟೆಯಾಗಿರುವಿಕೆಯು ಈ ಅಂಶವನ್ನು ದೃಢಪಡಿಸುತ್ತವೆ. ಈ ಸಂಗತಿಯು ಬೆಲೆ ರೇಖೆಯ ಸ್ವರೂಪದಿಂದಲೂ ಸಹ ತಿಳಿದು ಬರುತ್ತದೆ. A ದೇಶದ ಬೆಲೆ ರೇಖೆ ST ತುಂಬಾ ಕಡಿದಾಗಿದ್ದರೆ, B ದೇಶದ ಬೆಲೆ ರೇಖೆ KP ಚಪ್ಪಟೆ ಯಾಕಾರವನ್ನು ತಾಳಿದೆ.

ಆ ಪ್ರಕಾರ, ಬಂಡವಾಳ ಸಮೃದ್ಧ A ದೇಶವು ಬಂಡವಾಳ ಸಾಂದ್ರ Y ಸರಕಿನ ಉತ್ಪಾದನೆಯ ಕಡೆಗೆ ಒಲವು ತೋರಿಸುತ್ತದೆ ಮತ್ತು ಶ್ರಮ ಸಾಂದ್ರ B ದೇಶವು ಶ್ರಮ ಸಾಂದ್ರ ಸರಕಿನ ಉತ್ಪಾದನೆಯ ಕಡೆಗೆ ಒಲವು ತೋರಿಸುತ್ತದೆ ಎಂಬ ಸಂಗತಿ ಮೇಲಿನ ವಿಶ್ಲೇಷಣೆಯಿಂದ ತಿಳಿದುಬರುತ್ತದೆ.

ಸಂಪ್ರದಾಯ ಪಂಥದ ಸಿದ್ಧಾಂತದ ವಿರುದ್ಧ ಒಹ್ಲಿನ್‌ನ ಸಿದ್ಧಾಂತದ ಶ್ರೇಷ್ಠತೆ
(Superiority of Ohlin's Theory as Against Classical Theory)

ಒಹ್ಲಿನ್ ಪ್ರಸ್ತುತಪಡಿಸಿದ ಅಂತರರಾಷ್ಟ್ರೀಯ ವ್ಯಾಪಾರ ಸಿದ್ಧಾಂತವು ಸಂಪ್ರದಾಯ ಪಂಥದ ಸಿದ್ಧಾಂತಕ್ಕಿಂತ ಹಲವು ರೀತಿಗಳಲ್ಲಿ ಉತ್ತಮವಾದುದಾಗಿದೆ.

1. ಅಂತರರಾಷ್ಟ್ರೀಯ ವ್ಯಾಪಾರವು ಆಂತರಿಕ ವ್ಯಾಪಾರದ ಒಂದು ಭಾಗ (International Trade is a Part of Internal Trade) : ಸಂಪ್ರದಾಯ ಪಂಥದ ಸಿದ್ಧಾಂತದ ಪ್ರಕಾರ ಅಂತರರಾಷ್ಟ್ರೀಯ ವ್ಯಾಪಾರವು ಆಂತರಿಕ ವ್ಯಾಪಾರದಿಂದ ಸಂಪೂರ್ಣವಾಗಿ ಭಿನ್ನವಾದುದಾಗಿದೆ. ಆದರೆ ಒಹ್ಲಿನ್ ಸಿದ್ಧಾಂತವು ಅಂತರರಾಷ್ಟ್ರೀಯ ವ್ಯಾಪಾರವನ್ನು ಆಂತರಿಕ ವ್ಯಾಪಾರದ ಒಂದು ವಿಶೇಷ ಭಾಗ ಎಂದು ಪರಿಗಣಿಸುವುದರಲ್ಲಿ ಅದರ ಶ್ರೇಷ್ಠತೆ ಅಡಗಿದೆ.

2. ಸಾರ್ವತ್ರಿಕ ಮೌಲ್ಯ ಸಿದ್ಧಾಂತ (General Theory of Value) : ಸಂಪ್ರದಾಯ ಪಂಥದ ಸಿದ್ಧಾಂತವು ಅವಾಸ್ತವವಾದ ಶ್ರಮದ ಮೌಲ್ಯ ಸಿದ್ಧಾಂತವನ್ನು ಅವಲಂಬಿಸಿದೆ. ಇದಕ್ಕೆ ವಿರುದ್ಧವಾಗಿ ಒಹ್ಲಿನ್‌ನ ಸಿದ್ಧಾಂತವು ವಾಸ್ತವತೆಯನ್ನು ಆಧರಿಸಿದ ಸಾರ್ವತ್ರಿಕ ಮೌಲ್ಯ ಸಿದ್ಧಾಂತದ ಚೌಕಟ್ಟಿನೊಳಗೆ ಬರುತ್ತದೆ.

3. ಶ್ರಮ ಮತ್ತು ಬಂಡವಾಳ ಎರಡರ ಪರಿಗಣನೆ (Consideration of both Labour and Capital) : ಒಹ್ಲಿನ್‌ನ ಸಿದ್ಧಾಂತವು ಶ್ರಮ ಮತ್ತು ಬಂಡವಾಳ – ಈ ಎರಡು ಉತ್ಪಾದನಾಂಗಗಳನ್ನೂ ಗಣನೆಗೆ ತೆಗೆದುಕೊಂಡಿದೆ. ಆದರೆ ಸಂಪ್ರದಾಯ ಪಂಥದ ಸಿದ್ಧಾಂತವು ಉತ್ಪಾದನಾಂಗವಾಗಿ ಶ್ರಮಕ್ಕೆ ಮಾತ್ರ ಮಾನ್ಯತೆ ನೀಡಿದೆ. ಆ ಪ್ರಕಾರ, ಸಂಪ್ರದಾಯ ಪಂಥದ ಸಿದ್ಧಾಂತವು ಪಾರ್ಶ್ವವಾಗಿದ್ದರೆ, ಒಹ್ಲಿನ್‌ನ ಸಿದ್ಧಾಂತವು ವ್ಯಾಪಕವಾದುದಾಗಿದೆ.

4. ಅಂತರರಾಷ್ಟ್ರೀಯ ವ್ಯಾಪಾರದ ರಚನೆಯ ನಿರ್ಧಾರದ ವಿಶ್ಲೇಷಣೆ (Analysis of the Structure of International Trade) : ಅಂತರರಾಷ್ಟ್ರೀಯ ವ್ಯಾಪಾರದ ರಚನೆಯ ನಿರ್ಧಾರಕ್ಕೆ ಉತ್ಪಾದನಾಂಗಗಳ ಪೂರೈಕೆಯಲ್ಲಿರುವ ವ್ಯತ್ಯಾಸಗಳೇ ಆಧಾರ ಎಂದು ಒಹ್ಲಿನ್‌ನ ವಿಶ್ಲೇಷಣೆಯು ಪ್ರಸ್ತುತಪಡಿಸುತ್ತದೆ. ಆದರೆ ಸಂಪ್ರದಾಯ ಪಂಥದ ಸಿದ್ಧಾಂತವು ಈ ಅಂಶವನ್ನು ನಿರ್ಲಕ್ಷಿಸಿದೆ.

5. ಉತ್ಪಾದನಾಂಗಗಳ ಬೆಲೆಗಳ ಪರಿಗಣನೆ (Consideration of Prices of Factors of Production) : ಸರಕುಗಳ ಸಾಪೇಕ್ಷ ಬೆಲೆಗಳ ಮೇಲೆ ಪ್ರಭಾವ ಬೀರುವ ಉತ್ಪಾದನಾಂಗಗಳ ಬೆಲೆಗಳನ್ನು ಒಹ್ಲಿನ್‌ನ ಸಿದ್ಧಾಂತವು ಗಣನೆಗೆ ತೆಗೆದುಕೊಂಡಿದೆ. ಉತ್ಪಾದನಾಂಗಗಳ ಬೆಲೆಗಳು ಸರಕುಗಳ ಬೆಲೆಗಳನ್ನು ನಿರ್ಧರಿಸುವುದರಿಂದ ಇದು ವಾಸ್ತವಿಕವಾದ ವಿಶ್ಲೇಷಣೆಯಾಗಿದೆ. ಇದಕ್ಕೆ ವಿರುದ್ಧವಾಗಿ ರಿಕಾರ್ಡೊನ ಸಿದ್ಧಾಂತವು ಸರಕುಗಳ ಬೆಲೆಗಳನ್ನು ಮಾತ್ರ ಪರಿಗಣಿಸಿದೆ. ಉತ್ಪಾದನಾಂಗಗಳ ಬೆಲೆಗಳ ವಿಶ್ಲೇಷಣೆಗೆ ಗಮನ ನೀಡದಿರುವುದರಿಂದ ಅದು ಅವಾಸ್ತವಿಕವಾದುದಾಗಿದೆ.

6. ಅಂತರರಾಷ್ಟ್ರೀಯ ವ್ಯಾಪಾರದ ಆಧಾರದ ವಿಶ್ಲೇಷಣೆ (Analysis of the Basis of International Trade) : ಶ್ರಮ ಮತ್ತು ಬಂಡವಾಳದ ಸಾಪೇಕ್ಷ ಉತ್ಪಾದಕತೆಗಳಲ್ಲಿರುವ ಭಿನ್ನತೆಗಳೇ ಅಂತರ ರಾಷ್ಟ್ರೀಯ ವ್ಯಾಪಾರದ ಆಧಾರ ಎಂದು ಒಹ್ಲಿನ್‌ನ ಸಿದ್ಧಾಂತದ ನಿಲುವಾಗಿದೆ. ಆದರೆ ಸಂಪ್ರದಾಯ ಪಂಥದ ಸಿದ್ಧಾಂತವು ಶ್ರಮದ ಉತ್ಪಾದಕತೆಯನ್ನು ಮಾತ್ರ ಗಣನೆಗೆ ತೆಗೆದುಕೊಂಡಿದೆ. ಆದ್ದರಿಂದ ಒಹ್ಲಿನ್‌ನ ಸಿದ್ಧಾಂತವು ಸಂಪ್ರದಾಯ ಪಂಥದ ಸಿದ್ಧಾಂತಕ್ಕಿಂತ ಶ್ರೇಷ್ಠವಾದುದಾಗಿದೆ.

7. ಉತ್ಪಾದನಾಂಗಗಳಲ್ಲಿರುವ ವ್ಯತ್ಯಾಸಗಳ ಪರಿಗಣನೆ (Consideration of Differences in Factors of Production) : ಒಹ್ಲಿನ್‌ನ ಸಿದ್ಧಾಂತವು ವಿವಿಧ ದೇಶಗಳಲ್ಲಿ ವಿವಿಧ ಉತ್ಪಾದನಾಂಗಗಳಲ್ಲಿರುವ ವ್ಯತ್ಯಾಸಗಳನ್ನು ಆಧರಿಸಿದೆ. ಅಂತರರಾಷ್ಟ್ರೀಯ ವ್ಯಾಪಾರದ ಮೌಲ್ಯ ನಿರ್ಣಯ ಮಾಡುವಾಗ ವಿವಿಧ ಉತ್ಪಾದನಾಂಗಗಳ ಗುಣಮಟ್ಟವನ್ನು ಮಾತ್ರವಲ್ಲದೆ ಪರಿಮಾಣವನ್ನೂ ಲಕ್ಷ್ಯಕ್ಕೆ ತೆಗೆದುಕೊಂಡಿರುವುದು ಅದರ ಹಿರಿತನವಾಗಿದೆ. ಆದರೆ ರಿಕಾರ್ಡೊನ ಸಿದ್ಧಾಂತವು ಶ್ರಮದ ಗುಣಮಟ್ಟವನ್ನು ಮಾತ್ರ ಪರಿಗಣಿಸುವ ಮೂಲಕ ಸಂಕುಚಿತ ಸಿದ್ಧಾಂತವೆನಿಸಿಕೊಂಡಿದೆ.

8. ಸಾಪೇಕ್ಷ ಅನುಕೂಲತೆಯಲ್ಲಿರುವ ವ್ಯತ್ಯಾಸಗಳಿಗೆ ಕಾರಣಗಳ ವಿವರಣೆ (Explanation of Reasons for Differences in Comparative Advantage) : ಸಾಮ್ಯುಯಲ್ಸನ್‌ನ ಪ್ರಕಾರ ರಿಕಾರ್ಡೊನ ಸಿದ್ಧಾಂತವು ಸಾಪೇಕ್ಷ ಅನುಕೂಲತೆಯಲ್ಲಿರುವ ವ್ಯತ್ಯಾಸಗಳಿಗೆ ಕಾರಣಗಳನ್ನು ವಿವರಿಸುವುದಿಲ್ಲ. ಆದರೆ ಉತ್ಪಾದನಾಂಗ ಸಂಪನ್ನತೆಯ ಸಿದ್ಧಾಂತವು ಈ ಕಾರಣಗಳನ್ನು ತೃಪ್ತಿಕರವಾಗಿ ವಿವರಿಸುತ್ತದೆ.

9. ವ್ಯಾಪಾರದ ಉದ್ಭವಕ್ಕೆ ಕಾರಣಗಳ ವಿವರಣೆ (Explanation of Reasons for Birth of Trade) : ಎರಡು ದೇಶಗಳ ನಡುವೆ ವ್ಯಾಪಾರವು ಏರ್ಪಡುವುದರಿಂದ ಉದ್ಭವಿಸುವ ಪ್ರಯೋಜನಗಳನ್ನು ಮಾತ್ರ ಸಂಪ್ರದಾಯ ಪಂಥದ ಸಿದ್ಧಾಂತವು ತೋರಿಸುತ್ತದೆ. ಆದರೆ ಒಹ್ಲಿನ್‌ನ ಸಿದ್ಧಾಂತವು ವ್ಯಾಪಾರವು ಮೂಲಭೂತವಾಗಿ ಏಕೆ ಉದ್ಭವಿಸುತ್ತದೆ ಮತ್ತು ಅದಕ್ಕೆ ಆಧಾರಗಳೇನು ಎಂಬುದನ್ನು ವಿವರಿಸುತ್ತದೆ.

10. ಸ್ಥಳದ ಅಂಶಕ್ಕೆ ಪ್ರಾಧಾನ್ಯ (Emphasis on Space) : ಹ್ಯಾಬೆರ್ಲರನ ಅಭಿಪ್ರಾಯದಲ್ಲಿ ಒಹ್ಲಿನ್‌ನ ಸಿದ್ಧಾಂತವು ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಸ್ಥಳದ (Space) ಅಂಶಕ್ಕೆ ಪ್ರಾಧಾನ್ಯತೆಯನ್ನು ಕೊಟ್ಟಿದೆ. ಆದರೆ ಸಂಪ್ರದಾಯ ಪಂಥದ ಸಿದ್ಧಾಂತವು ವಿವಿಧ ದೇಶಗಳನ್ನು ಸ್ಥಳರಹಿತ ಮಾರುಕಟ್ಟೆಗಳನ್ನಾಗಿ ಪರಿಗಣಿಸಿದೆ.

ಟೀಕೆಗಳು

(Criticisms)

ಹ್ಯಾಬೆರ್ಲರ್ ಮೊದಲಾದ ಬರಹಗಾರರು ಒಹ್ಲಿನ್‌ನ ಸಿದ್ಧಾಂತವನ್ನು ಅನೇಕ ಸಂಗತಿಗಳ ಮೇಲೆ ಟೀಕಿಸಿದ್ದಾರೆ. ಅದರ ಮೇಲಿನ ಪ್ರಮುಖ ಟೀಕೆಗಳು ಈ ಕೆಳಗಿನಂತಿವೆ.

1. ಬೇಡಿಕೆಯ ಭಾಗದ ನಿರ್ಲಕ್ಷ್ಯ (Neglect of Demand Side) : ಉತ್ಪಾದನಾಂಗಗಳ ಲಭ್ಯತೆಯು ಉತ್ಪಾದನಾಂಗಗಳ ಬೆಲೆಯನ್ನು ನಿರ್ಧರಿಸುತ್ತದೆ ಎಂಬ ಒಹ್ಲಿನ್ ನ ಕಲ್ಪನೆಯು ಪೂರೈಕೆಯ ಭಾಗಕ್ಕೆ ಮಾತ್ರ ಮಹತ್ವ ನೀಡಿ ಬೇಡಿಕೆಯ ಭಾಗವನ್ನು ಅಲಕ್ಷಿಸುತ್ತದೆ. ಆದರೆ ಅಂತರರಾಷ್ಟ್ರೀಯ ವ್ಯಾಪಾರದ ತಳಹದಿಯನ್ನು ವಿವರಿಸಲು ಬೇಡಿಕೆಯ ಭಾಗಕ್ಕೂ ಪ್ರಾಮುಖ್ಯ ಇರಬೇಕಾದುದು ಆವಶ್ಯಕ.

2. ಬೆಲೆಗಳ ವ್ಯತ್ಯಾಸಕ್ಕೆ ಸಂಕುಚಿತ ವಿವರಣೆ (Narrow Explanation for Difference in Prices): ಉತ್ಪಾದನಾಂಗಗಳ ಲಭ್ಯತೆಯಲ್ಲಿರುವ ಭಿನ್ನತೆಯು ಸರಕುಗಳ ಬೆಲೆ ವ್ಯತ್ಯಾಸಕ್ಕೆ ಕಾರಣವಾಗುತ್ತದೆಂದು ಒಹ್ಲಿನ್‌ನು ಅಭಿಪ್ರಾಯಪಟ್ಟಿರುವನು. ಆದರೆ ಉತ್ಪಾದನಾಂಗಗಳ ಲಭ್ಯತೆಯಲ್ಲಿರುವ ಭಿನ್ನತೆಯು ಸರಕುಗಳ ಬೆಲೆ ವ್ಯತ್ಯಾಸಕ್ಕೆ ಒಂದು ಕಾರಣ ಮಾತ್ರ. ಉತ್ಪಾದನ ತಂತ್ರದಲ್ಲಿ ಭಿನ್ನತೆ, ಉತ್ಪಾದನಾಂಗಗಳ ಗುಣಮಟ್ಟದಲ್ಲಿ ವ್ಯತ್ಯಾಸ, ಅನುಭೋಗಿಗಳ ಬೇಡಿಕೆಯಲ್ಲಿ ವೈವಿಧ್ಯತೆ ಮೊದಲಾದ ಅಂಶಗಳು ಸರಕುಗಳ ಬೆಲೆ ವ್ಯತ್ಯಾಸಕ್ಕೆ ಇತರ ಕಾರಣಗಳಾಗಿರುತ್ತವೆ. ಆದರೆ ಈ ಸಂಗತಿಗಳನ್ನು ಗಣನೆಗೆ ತೆಗೆದುಕೊಳ್ಳದಿರುವುದು ಈ ಸಿದ್ಧಾಂತದ ಒಂದು ದೋಷವಾಗಿದೆ.

3. ಪಾರ್ಶ್ವ ಸಮತೋಲನ ವಿಶ್ಲೇಷಣೆ (Partial Equilibrium Analysis): ಹ್ಯಾಬೆರ್ಲರನ ಅಭಿಪ್ರಾಯದಲ್ಲಿ ಈ ಸಿದ್ಧಾಂತವು ಸವಿಸ್ತಾರವಾದ ಸಾರ್ವತ್ರಿಕ ಸಮತೋಲನ ವಿಶ್ಲೇಷಣೆಯಾಗಿಲ್ಲ. ಬದಲಾಗಿ ಕೇವಲ ಒಂದು ಪಾರ್ಶ್ವ ಸಮತೋಲನ ವಿಶ್ಲೇಷಣೆಯಾಗಿದೆ.

4. ಸರಕುಗಳ ಬೆಲೆ ನಿರ್ಧಾರದ ಬಗೆಗೆ ತಪ್ಪು ತರ್ಕ (Wrong Logic about Determination of Prices of Commodities) : ಸರಕುಗಳ ಬೆಲೆಗಳು ಉತ್ಪಾದನಾಂಗಗಳ ಬೆಲೆಗಳಿಂದ ನಿರ್ಧಾರವಾಗುತ್ತವೆ ಎಂಬುದು ಒಹ್ಲಿನ್‌ನ ತರ್ಕವಾಗಿದೆ. ಆದರೆ ವಿಜನ್ ಹೋಲ್ಸ್ ಇದನ್ನು ಟೀಕಿಸಿದ್ದಾನೆ. ಅವನ ಪ್ರಕಾರ ಸರಕುಗಳ ಬೆಲೆಗಳು ಉತ್ಪಾದನಾಂಗಗಳ ಬೆಲೆಗಳಿಂದ ನಿರ್ಧಾರವಾಗುವುದಿಲ್ಲ. ಬದಲಾಗಿ ಉತ್ಪಾದನಾಂಗಗಳ ಬೆಲೆಗಳು ಅಂತಿಮ ಸರಕುಗಳಿಗೆ ಅನುಭೋಗಿಗಳು ನೀಡುವ ಬೆಲೆಗಳನ್ನು ಅವಲಂಬಿಸಿರುತ್ತವೆ ಎಂದು ಅವನು ವಾದಿಸಿದ್ದಾನೆ.

5. ಪರಿಪೂರ್ಣ ಪೈಪೋಟಿಯ ಅವಾಸ್ತವಿಕ ಕಲ್ಪನೆ (Unrealistic Assumption of Perfect Competition) : ಒಹ್ಲಿನ್‌ನ ಸಿದ್ಧಾಂತವೂ ಸಹ ಪರಿಪೂರ್ಣ ಪೈಪೋಟಿ ಮತ್ತು ಪೂರ್ಣೋದ್ಯೋಗದ ಅವಾಸ್ತವಿಕ ಕಲ್ಪನೆಗಳ ಮೇಲೆ ನಿಂತಿದೆ. ವಾಸ್ತವವಾಗಿ ಅಪರಿಪೂರ್ಣ ಪೈಪೋಟಿಯು ಹೆಚ್ಚು ವ್ಯಾಪಕವಾಗಿ ಅಸ್ತಿತ್ವದಲ್ಲಿರುವ ಮಾರಕಟ್ಟೆ ಸನ್ನಿವೇಶ ವಾಗಿರುತ್ತದೆ. ಅಂತೆಯೇ ಯಾವುದೇ ಅರ್ಥವ್ಯವಸ್ಥೆಯಲ್ಲಿ ಪೂರ್ಣೋದ್ಯೋಗವು ನೆಲೆಸಿರುತ್ತದೆ ಎಂದು ಭಾವಿಸಿದರೆ ಅದು ವಾಸ್ತವಾಂಶವನ್ನು ಮರೆಮಾಚಿದಂತೆ.

6. ಸಮ ಸ್ಥಿತಿಯ ಸಿದ್ಧಾಂತ (Static Theory): ಸಂಪ್ರದಾಯ ಪಂಥದ ಸಿದ್ಧಾಂತದಂತೆ ಒಹ್ಲಿನ್‌ನ ಸಿದ್ಧಾಂತವು ಸಹ ಸಮಸ್ಥಿತಿಯ ಸಿದ್ಧಾಂತ (Static Theory)ವಾಗಿದೆ. ಯಾವುದೋ ಒಂದು ನಿರ್ದಿಷ್ಟ ಸಮಯ ಬಿಂದುವಿನಲ್ಲಿ ಅರ್ಥವ್ಯವಸ್ಥೆಯ ಕೆಲವು ಲಕ್ಷಣಗಳನ್ನು ಮಾತ್ರ ಅದು ವ್ಯಕ್ತಪಡಿಸುತ್ತದೆ. ಉದಾಹರಣೆಗೆ, ಯಾವುದೊಂದು ಸಮಯದಲ್ಲಿ ಸರಕುಗಳನ್ನು ಹೇಗೆ ವಿಂಗಡಿಸಬೇಕು ಎಂದು ಅದು ತಿಳಿಸುತ್ತದೆ ಅಷ್ಟೇ. ಆದರೆ ಉತ್ಪಾದನೆಯ ಸ್ಥಿತಿಗತಿಗಳು ಬದಲಾದರೆ ಅರ್ಥವ್ಯವಸ್ಥೆಯು ಹೇಗೆ ಅಭಿವೃದ್ಧಿ ಹೊಂದುತ್ತದೆ ಎಂಬ ಬಗೆಗೆ ಅದು ಸೂಚನೆಗಳನ್ನು ನೀಡುವುದಿಲ್ಲ.

7. ಏಕರೂಪದ ಉತ್ಪಾದನಾಂಗಗಳ ಅಸ್ತಿತ್ವದ ಅವಾಸ್ತವಿಕ ಕಲ್ಪನೆ (Unrealistic Assumption of Existence of Homogeneous Factors): ಎರಡೂ ದೇಶಗಳಲ್ಲಿ ಏಕರೂಪದ ಉತ್ಪಾದನಾಂಗಗಳು ಅಸ್ತಿತ್ವದಲ್ಲಿರುತ್ತವೆ ಮತ್ತು ಉತ್ಪಾದನಾಂಗ ಸಂಪನ್ನತೆಯ ಅನುಪಾತವನ್ನು ಅಂದಾಜು ಮಾಡಲು ಇವುಗಳನ್ನು ಮಾಪನ ಮಾಡಬಹುದಾಗಿರುತ್ತದೆ ಎಂಬುದು ಈ ಸಿದ್ಧಾಂತದ ಒಂದು ಕಲ್ಪನೆಯಾಗಿದೆ. ಆದರೆ ವಾಸ್ತವವಾಗಿ ಎರಡು ದೇಶಗಳಲ್ಲಿ ಸಂಪನ್ಮೂಲಗಳು ಗುಣದರ್ಜೆಯಲ್ಲಿ ಏಕರೂಪದವುಗಳಾಗಿರುವುದಿಲ್ಲ. ಒಂದೇ ಉತ್ಪಾದನಾಂಗವೂ ಸಹ ವಿವಿಧ ಗುಣದರ್ಜೆಗಳಿಂದ ಕೂಡಿರುತ್ತದೆ. ಉದಾಹರಣೆಗೆ, ಶ್ರಮದಲ್ಲಿ ಪರಿಣತ ಮತ್ತು ಪರಿಣತಿ ಪಡೆದಿರದ ಶ್ರಮವಿರುತ್ತದೆ. ಅಂತೆಯೇ ಬಂಡವಾಳದಲ್ಲಿಯೂ ವಿಭಿನ್ನ ವಿಧಗಳಿದ್ದು, ಕೆಲವೊಮ್ಮೆ ಅದು ಶ್ರಮ ಉಳಿತಾಯದ ಕೆಲಸವನ್ನು ನಿರ್ವಹಿಸುತ್ತದೆ.

8. ಉತ್ಪಾದನ ತಂತ್ರದ ಬಗೆಗೆ ತಪ್ಪು ಕಲ್ಪನೆ (Wrong Assumption About Production Technique) : ಒಹ್ಲಿನ್‌ನ ಸಿದ್ಧಾಂತವು ಎರಡು ದೇಶಗಳಲ್ಲಿ ಪ್ರತಿಯೊಂದು ವಸ್ತುವಿನ ಉತ್ಪಾದನ ತಂತ್ರವು ಏಕರೂಪದ್ದಾಗಿರುತ್ತದೆ ಎಂಬ ಕಲ್ಪನೆಯ ಮೇಲೆ ನಿಂತಿದೆ. ಆದರೆ ವಾಸ್ತವದಲ್ಲಿ ಎರಡೂ ದೇಶಗಳಲ್ಲಿ ಒಂದೇ ಸರಕಿನ ಉತ್ಪಾದನ ತಂತ್ರಗಳು ಭಿನ್ನವಾಗಿರುತ್ತವೆ. ಉದಾಹರಣೆಗೆ, ಜವಳಿ ಸರಕುಗಳನ್ನು ಹೆಚ್ಚು ಶ್ರಮ ಮತ್ತು ಕಡಿಮೆ ಬಂಡವಾಳವನ್ನು ಕೋರುವ ಕೈಮಗ್ಗದ ಮೂಲಕವಾದರೂ ಉತ್ಪಾದಿಸಬಹುದು, ಅಥವಾ ಅತ್ಯಲ್ಪ ಶ್ರಮವನ್ನು ಒಳಗೊಳ್ಳುವ ಅತ್ಯಾಧುನಿಕ ಯಂತ್ರಚಾಲಿತ ಮಗ್ಗಗಳ ಮೂಲಕವಾದರೂ ಉತ್ಪಾದಿಸಬಹುದು. ಇಂತಹ ಸನ್ನಿವೇಶದಲ್ಲಿ ಒಹ್ಲಿನ್ ನಿರೂಪಿಸಿರುವ ರೀತಿಯಲ್ಲಿ ವ್ಯಾಪಾರವು ಏರ್ಪಡುವುದಿಲ್ಲ.

H. ಲಿಯಾಂಟೀಫ್‌ನ ವಿರೋಧಾಭಾಸ
(Leontief 's Paradox)

ಹೆಕ್‌ಷರ್-ಒಹ್ಲಿನ್‌ರವರ ಅಂತರರಾಷ್ಟ್ರೀಯ ವ್ಯಾಪಾರ ಸಿದ್ಧಾಂತದ ಔಚಿತ್ಯವನ್ನು ಪರೀಕ್ಷಿಸುವಂತಹ ಅನೇಕ ಪ್ರಾಯೋಗಿಕ ಅಧ್ಯಯನಗಳು ಕಳೆದ ನಾಲ್ಕು ದಶಕಗಳ ಅವಧಿಯಲ್ಲಿ ನಡೆದಿವೆ. ಉತ್ಪಾದನಾಂಗ ಸಂಪನ್ನತೆಯ ಸಿದ್ಧಾಂತದ ತೀರ್ಮಾನಗಳು ವಿಭಿನ್ನ ದೇಶಗಳ ಅಂತರರಾಷ್ಟ್ರೀಯ ವ್ಯಾಪಾರದ ಸ್ಥಿತಿಗತಿಗಳಿಗೆ ಸರಿಹೊಂದುತ್ತವೆಯೇ ಎಂದು ಒರೆಗೆ ಹಚ್ಚಿ ನೋಡುವುದೇ ಈ ಅಧ್ಯಯನಗಳ ಉದ್ದೇಶವಾಗಿದೆ. ವ್ಯಾಪಕವಾದ ಮತ್ತು ವಿವರವಾದ ಇಂತಹ ಒಂದು ಅಧ್ಯಯನವು ನೊಬೆಲ್ ಪಾರಿತೋಷಕ ವಿಜೇತ ಅರ್ಥವಿಜ್ಞಾನಿ (1973) ಡಬ್ಲ್ಯು. ಡಬ್ಲ್ಯು. ಲಿಯಾಂಟೀಫ್‌ನಿಂದ ನಡೆದಿದೆ. 1953-56ರ ಅವಧಿಯಲ್ಲಿ ಲಿಯಾಂಟೀಫ್ ಈ ಬಗೆಗೆ ಪ್ರಾಯೋಗಿಕ ಅಧ್ಯಯನವನ್ನು ನಡೆಸಿ ಕೆಲವು ನಿರ್ಣಯಗಳನ್ನು ಪ್ರಸ್ತುತಪಡಿಸಿರುವನು.

ಹೆಕ್‌ಷರ್-ಒಹ್ಲಿನ್ ಸಿದ್ಧಾಂತದ ಪ್ರಮುಖ ತೀರ್ಮಾನವೆಂದರೆ ಯಾವುದೊಂದು ದೇಶವು ತನ್ನಲ್ಲಿ ಹೇರಳವಾಗಿ ಲಭ್ಯವಿರುವ ಸಂಪನ್ಮೂಲವನ್ನು ಉಪಯೋಗಿಸಿಕೊಂಡು ಸರಕುಗಳನ್ನು ಉತ್ಪಾದಿಸಿ ಬೇರೆ ದೇಶಗಳಿಗೆ ರಫ್ತು ಮಾಡುತ್ತದೆ ಮತ್ತು ತನ್ನಲ್ಲಿ ಕೊರತೆಯಿಂದಿರುವ ಸಂಪನ್ಮೂಲದ ನೆರವಿನಿಂದ ಉತ್ಪಾದಿಸಬಹುದಾದ ಸರಕನ್ನು ಸ್ವಲ್ಪ ಪ್ರಮಾಣದಲ್ಲಿ ಉತ್ಪಾದಿಸಿ ಅಥವಾ ಸ್ವಲ್ಪವೂ ಉತ್ಪಾದಿಸದೆ ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳುತ್ತದೆ ಎಂಬುದು. ಉದಾಹರಣೆಗೆ, ಒಂದು ದೇಶವು ಬಂಡವಾಳವನ್ನು ಯಥೇಚ್ಛವಾಗಿ ಹೊಂದಿದ್ದರೆ ಅದು ಬಂಡವಾಳ ಸಾಂದ್ರತಾ ಸರಕುಗಳನ್ನು ರಫ್ತು ಮಾಡುತ್ತದೆ ಮತ್ತು ಶ್ರಮ ಸಾಂದ್ರತಾ ಸರಕುಗಳನ್ನು ಆಮದು ಮಾಡಿಕೊಳ್ಳುತ್ತದೆ. ಇದೇಕೆಂದರೆ, ಶ್ರಮವು ಆ ದೇಶದಲ್ಲಿ ತುಂಬಾ ವಿರಳವಾದ ಸಂಪನ್ಮೂಲವಾಗಿರುವುದರಿಂದ ಶ್ರಮಸಾಂದ್ರತಾ ಸರಕನ್ನು ಉತ್ಪಾದಿಸಲು ಸಾಪೇಕ್ಷವಾಗಿ ಹೆಚ್ಚಿನ ಪ್ರಮಾಣದ ಶ್ರಮ ಅಗತ್ಯವಾಗುತ್ತದೆ.

ಆದ್ದರಿಂದ ಬಂಡವಾಳ ಸಾಂದ್ರತಾ ಸರಕನ್ನು ರಫ್ತು ಮಾಡುವಿಕೆ ಮತ್ತು ಶ್ರಮ ಸಾಂದ್ರತಾ ಸರಕನ್ನು ಆಮದು ಮಾಡಿಕೊಳ್ಳುವಿಕೆ ಆ ದೇಶದ ದೃಷ್ಟಿಯಿಂದ ಪ್ರಯೋಜನಕಾರಿಯೂ ಹಾಗೂ ಮಿತವ್ಯಯಕಾರಿಯೂ ಆಗುತ್ತದೆ.

ಹೆಕ್‌ಷರ್ - ಒಹ್ಲಿನ್‌ರವರ ಉತ್ಪಾದನಾಂಗ ಸಂಪನ್ನತೆಯ ಮೀಮಾಂಸೆಯು ಸಮಂಜಸವಾಗಿರುವುದರಿಂದ ಅಮೇರಿಕಾ ದೇಶವು ಬಂಡವಾಳ ಸಾಂದ್ರತಾ ಸರಕುಗಳನ್ನು ರಫ್ತು ಮಾಡಿ, ಶ್ರಮ ಸಾಂದ್ರತಾ ಸರಕುಗಳನ್ನು ಆಮದು ಮಾಡಿಕೊಳ್ಳಬೇಕಾಗಿರುತ್ತದೆ. ಏಕೆಂದರೆ ಆ ದೇಶದಲ್ಲಿ ಬಂಡವಾಳವು ಯಥೇಚ್ಛವಾಗಿ ಲಭ್ಯವಿರುವ ಮತ್ತು ಶ್ರಮವು ಕೊರತೆಯಿಂದಿರುವ ಸಂಪನ್ಮೂಲ ಗಳಾಗಿವೆ.

ಆದರೆ ಲಿಯಾಂಟೀಫ್ ಇದನ್ನು ಪರೀಕ್ಷಿಸಲು ಅಧ್ಯಯನವನ್ನು ನಡೆಸಿದಾಗ ಈ ತೀರ್ಮಾನವು ತಪ್ಪೆಂದು ಕಂಡುಬಂದಿತು. ಅಮೆರಿಕದ ಸ್ವದೇಶೀ ಉತ್ಪಾದನೆ ಮತ್ತು ವ್ಯಾಪಾರದ ಬಗೆಗೆ ಲಿಯಾಂಟೀಫ್ ನಡೆಸಿದ ವ್ಯಾಪಕವಾದ ಅಧ್ಯಯನವು ಹೆಕ್‌ಷರ್-ಒಹ್ಲಿನ್ ಸಿದ್ಧಾಂತದಿಂದ ಹೊರಹೊಮ್ಮಿದ ತೀರ್ಮಾನಕ್ಕೆ ವಿರುದ್ಧವಾದ ಫಲಿತಾಂಶಗಳನ್ನು ನೀಡಿತು. ಬಂಡವಾಳವನ್ನು ಹೇರಳವಾಗಿ ಪಡೆದಿರುವ ಅಮೆರಿಕ ಶ್ರಮ ಸಾಂದ್ರತಾ ಸರಕುಗಳನ್ನು ರಫ್ತು ಮಾಡುತ್ತದೆ ಎಂಬುದು ಲಿಯಾಂಟೀಫ್‌ನ ನಿರ್ಣಯವಾಗಿದ್ದಿತು. ಲಿಯಾಂಟೀಫ್‌ನ ಅಧ್ಯಯನದ ಈ ಫಲಿತಾಂಶವನ್ನು **'ಲಿಯಾಂಟೀಫ್‌ನ ವಿರೋಧಾಭಾಸ'** ಎಂಬ ಹೆಸರಿನಿಂದ ಕರೆಯಲಾಗಿದೆ. ಹೆಕ್‌ಷರ್ -ಒಹ್ಲಿನ್‌ರವರ ಸಿದ್ಧಾಂತವನ್ನು ಅನುಸರಿಸಿ, ಅಂತರರಾಷ್ಟ್ರೀಯ ವ್ಯಾಪಾರ ವಲಯದಲ್ಲಿ ವ್ಯಾಪಕವಾಗಿ ಯಾವುದನ್ನು ನಂಬಲಾಗಿದ್ದಿತೋ ಅದನ್ನು ನಿರಾಕರಿಸುವಂತಹ ಮತ್ತು ಅದಕ್ಕೆ ಸಂಪೂರ್ಣ ವಿರುದ್ಧವಾದ ತೀರ್ಮಾನವನ್ನು ಲಿಯಾಂಟೀಫ್ ಪ್ರಸ್ತುತಪಡಿಸಿರುವುದರಿಂದ ಇದನ್ನು ವಿರೋಧಾಭಾಸ ಎಂದು ಪರಿಗಣಿಸಲಾಗಿದೆ.

ಲಿಯಾಂಟೀಫ್ ಅಳವಡಿಸಿದ ಪರೀಕ್ಷಾ ವಿಧಾನ
(Testing Method adopted by Leontief)

ತನ್ನ ನಿರ್ಣಯವನ್ನು ತಲುಪುವ ಮುನ್ನ ಲಿಯಾಂಟೀಫ್ ಅಳವಾದ ಪ್ರಾಯೋಗಿಕ ಅಧ್ಯಯನವನ್ನು ನಡೆಸಿರುವನು. ಜಗತ್ತಿನ ಉಳಿದ ದೇಶಗಳೊಡನೆ ಹೋಲಿಸಿದಾಗ ಅಮೇರಿಕಾ ಬಂಡವಾಳವನ್ನು ಯಥೇಚ್ಛವಾಗಿ ಹೊಂದಿದೆ ಮತ್ತು ಆ ದೇಶದಲ್ಲಿ ಶ್ರಮವು ಕೊರತೆಯಿಂದಿದೆ ಎಂಬ ಅಭಿಪ್ರಾಯದೊಂದಿಗೆ ಅವನು ತನ್ನ ವಿಶ್ಲೇಷಣೆಯನ್ನು ಪ್ರಾರಂಭಿಸಿರುವನು. ಅಮೇರಿಕ ತನ್ನ ರಫ್ತುಗಳನ್ನು ಕಡಿಮೆ ಮಾಡಿ, ಅಷ್ಟೇ ಪ್ರಮಾಣದ ಸರಕುಗಳನ್ನು ಆಮದು ಮಾಡಿಕೊಳ್ಳುತ್ತದೆ ಮತ್ತು ಈ ಮೊದಲು ರಫ್ತು ಕೈಗಾರಿಕೆಗಳಲ್ಲಿ ತೊಡಗಿಸಿದ್ದ ಸಂಪನ್ಮೂಲಗಳನ್ನು ಆಮದು ಬದಲಿಕೆಯ (Import Substitution) ಕೈಗಾರಿಕೆಗಳಿಗೆ ವರ್ಗಾಯಿಸುತ್ತದೆ ಎಂದು ಲಿಯಾಂಟೀಫ್ ಕಲ್ಪಿಸಿಕೊಂಡಿದ್ದಾನೆ.

ಹೆಕ್‌ಷರ್-ಒಹ್ಲಿನ್ ಸಿದ್ಧಾಂತವು ನಿಜವಾಗಿರುವುದಾದರೆ, ರಷ್ಯ ಸಂಕುಚನವು ಆಮದು ಬದಲಿಕೆಯ ಕೈಗಾರಿಕೆಗಳು ಹೀರಿಕೊಳ್ಳುವುದಕ್ಕಿಂತ ಹೆಚ್ಚಿನ ಪ್ರಮಾಣದ ಬಂಡವಾಳವನ್ನು ಮತ್ತು ಕಡಿಮೆ ಪ್ರಮಾಣದ ಶ್ರಮವನ್ನು ಬಿಟ್ಟುಕೊಡಬೇಕು. ಆದರೆ ರಷ್ಯ ಕೈಗಾರಿಕೆಗಳು ಬಂಡವಾಳಕ್ಕಿಂತ ಶ್ರಮವನ್ನೇ ಹೆಚ್ಚಾಗಿ ಬಿಟ್ಟುಕೊಟ್ಟಿರುವ ಸಂಗತಿಯು ಲಿಯಾಂಟೀಫ್‌ನ ಅಧ್ಯಯನದಿಂದ ಹೊರಹೊಮ್ಮಿತು. ಅಮೆರಿಕವು ಶ್ರಮ ಸಾಂದ್ರತಾ ಸರಕುಗಳನ್ನು ರಫ್ತು ಮಾಡುತ್ತದೆ ಮತ್ತು ಆಮದು ಸ್ಥಾನಪಲ್ಲಟದ ಕೈಗಾರಿಕೆಗಳು ಶ್ರಮಕ್ಕಿಂತ ಹೆಚ್ಚಾಗಿ ಬಂಡವಾಳವನ್ನು ಅಪೇಕ್ಷಿಸುತ್ತವೆ ಎಂಬುದು ಈ ಫಲಿತಾಂಶದ ಸಾರವಾಗಿದ್ದಿತು. ಆ ಪ್ರಕಾರ, ಅಮೆರಿಕವು ಅಂತರರಾಷ್ಟ್ರೀಯ ಶ್ರಮ ವಿಭಜನೆಯಲ್ಲಿ ಪಾಲ್ಗೊಂಡಿರುವಿಕೆಯು ಬಂಡವಾಳ ಸಾಂದ್ರತಾ ಉತ್ಪಾದನ ಕ್ರಮಕ್ಕೆ ಬದಲಾಗಿ ಶ್ರಮ ಸಾಂದ್ರತಾ ಉತ್ಪಾದನ ಕ್ರಮದಲ್ಲಿ ಅದು ಸಾಧಿಸಿರುವ ವೈಶಿಷ್ಟ್ಯದ ಫಲವಾಗಿದೆ ಎಂಬ ನಿರ್ಣಯವನ್ನು ಲಿಯಾಂಟೀಫ್ ತಲುಪಿದನು. ಅಮೆರಿಕವು ತನ್ನ ಬಂಡವಾಳದಲ್ಲಿ ಮಿತವ್ಯಯವನ್ನು ಸಾಧಿಸಿ, ಹೆಚ್ಚುವರಿ ಶ್ರಮವನ್ನು ಉಪಯೋಗಿಸಿಕೊಳ್ಳಲು ವಿದೇಶೀ ವ್ಯಾಪಾರವನ್ನು ಆಶ್ರಯಿಸಿದೆ ಎಂದು ಅವನು ಘೋಷಿಸಿದನು.

ತನ್ನ ಅಧ್ಯಯನದಲ್ಲಿ ಲಿಯಾಂಟೀಫ್ ಅಮೆರಿಕದ ಅರ್ಥವ್ಯವಸ್ಥೆಗೆ ಸಂಬಂಧಿಸಿದಂತೆ 1947ನೇ ಸಾಲಿನ ಹೂಡುವಳಿ-ಉತ್ಪನ್ನ ಕೋಷ್ಟಕ (Tables)ಗಳನ್ನು ಉಪಯೋಗಿಸಿ ಕೊಂಡಿರುತ್ತಾನೆ. ತನ್ನ ವಿಶ್ಲೇಷಣೆಯಲ್ಲಿ ಅವನು 200 ಗುಂಪುಗಳ ಕೈಗಾರಿಕೆಗಳನ್ನು 50 ವಲಯಗಳಾಗಿ ಒಟ್ಟುಗೂಡಿಸಿರುತ್ತಾನೆ. ಇವುಗಳಲ್ಲಿ 38 ವಲಯಗಳು ತಮ್ಮ ಉತ್ಪನ್ನಗಳನ್ನು ನೇರವಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿದ್ದವು. ಅಮೆರಿಕ ಸಂಯುಕ್ತ ಸಂಸ್ಥಾನಗಳಿಗೆ ಸಂಬಂಧಿಸಿದಂತೆ ಒಂದು ದಶಲಕ್ಷ ಡಾಲರುಗಳ ರಫ್ತು ಸರಕುಗಳ ಮತ್ತು ಒಂದು ದಶಲಕ್ಷ ಡಾಲರುಗಳ ಮೌಲ್ಯದ ಆಮದು-ಸ್ಪರ್ಧಿ ಸರಕುಗಳ ಉತ್ಪಾದನೆಗೆ ಅಗತ್ಯವಿರುವ ಬಂಡವಾಳ ಮತ್ತು ಶ್ರಮವನ್ನು ಅವನು ಅಂದಾಜುಮಾಡಿದನು.

ಲಿಯಾಂಟೀಫ್‌ನ ಪರೀಕ್ಷೆಯ ಅನುಭವ ಸಿದ್ಧ ಫಲಿತಾಂಶಗಳನ್ನು ಮುಂದಿನ ಪಟ್ಟಿಯ ಸಹಾಯದಿಂದ ನಿರೂಪಿಸಬಹುದು.

ಪಟ್ಟಿ 1.2

ಅಮೆರಿಕದಲ್ಲಿ ಒಂದು ದಶಲಕ್ಷ ಡಾಲರುಗಳ ರಫ್ತು ಸರಕುಗಳ ಮತ್ತು ಆಮದು ಬದಲಿ ಸರಕುಗಳ ಉತ್ಪಾದನೆಯಲ್ಲಿ ಬಂಡವಾಳ ಮತ್ತು ಶ್ರಮ ಕೋರಿಕೆಗಳು (1947)

ಉತ್ಪಾದನಾಂಗ ಕೋರಿಕೆಗಳು	ರಫ್ತು ಸರಕುಗಳು	ಆಮದು ಬದಲಿ ಸರಕುಗಳು
ಬಂಡವಾಳ	$2,550,780	$ 3, 091,339
ಶ್ರಮ (ಮಾನವ ವರ್ಷಗಳು)	1,82,312	1,70,004
ಬಂಡವಾಳ-ಶ್ರಮ	$ 13,911	$ 18,185

ಅಮೆರಿಕದ ರಫ್ತು ಸರಕುಗಳು ಪ್ರತಿಮಾನವ ವರ್ಷದಲ್ಲಿ (Man-year) 13,911 ಡಾಲರುಗಳ ಬಂಡವಾಳ-ಶ್ರಮ ಪ್ರಮಾಣವನ್ನು ಮತ್ತು ಆಮದು ಬದಲಿ ಸರಕುಗಳು ಪ್ರತಿಮಾನವ ವರ್ಷದಲ್ಲಿ 18,185 ಬಂಡವಾಳ-ಶ್ರಮ ಪ್ರಮಾಣವನ್ನು ಉಪಯೋಗಿಸಿಕೊಂಡವು ಎಂಬುದು ಲಿಯಾಂಟೀಫ್‌ನ ಅಧ್ಯಯನದಿಂದ ವ್ಯಕ್ತವಾಯಿತು. ಬಂಡವಾಳ-ಶ್ರಮದ ಪ್ರಮಾಣವು ಅಮೆರಿಕದ ರಫ್ತು ಸರಕುಗಳ ಕೈಗಾರಿಕೆಗಳಿಗಿಂತ ಆದರ ರಫ್ತು ಬದಲಿ ಸರಕುಗಳ ಕೈಗಾರಿಕೆಗಳಲ್ಲಿ ಶೇಕಡ 30 ರಷ್ಟು ಹೆಚ್ಚಾಗಿತ್ತು ಎಂಬ ಸಂಗತಿಯು ಲಿಯಾಂಟೀಫ್‌ನ ಪರೀಕ್ಷೆಯಿಂದ ತಿಳಿದುಬಂದಿತು. ಅಮೆರಿಕದಲ್ಲಿ ರಫ್ತು ರಕುಗಳ ಕೈಗಾರಿಕೆಗಳಿಗಿಂತ ಆಮದು ಬದಲಿಕೆಯ (ಆಮದು - ಸ್ಪರ್ಧಿ) ಸರಕುಗಳ ಕೈಗಾರಿಕೆಗಳು ಹೆಚ್ಚು ಬಂಡವಾಳ ಸಾಂದ್ರವಾಗಿವೆ ಎಂಬುದು ಇದರ ಅರ್ಥವಾಗಿರುತ್ತದೆ. "ಅಂತರ ರಾಷ್ಟ್ರೀಯ ಶ್ರಮ ವಿಭಜನೆಯಲ್ಲಿ ಅಮೆರಿಕದ ಪಾಲ್ಗೊಳ್ಳುವಿಕೆಯು ಬಂಡವಾಳ ಸಾಂದ್ರ ಉತ್ಪಾದನ ಕ್ರಮಗಳಿಗೆ ಬದಲಾಗಿ ಶ್ರಮ ಸಾಂದ್ರ ಉತ್ಪಾದನ ಕ್ರಮಗಳಲ್ಲಿ ಅದರ ವಿಶೇಷತೆಯನ್ನು ಆಧರಿಸಿದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಆ ದೇಶವು ತನ್ನ ಬಂಡವಾಳದಲ್ಲಿ ಮಿತವ್ಯಯವನ್ನು ಸಾಧಿಸುವ ಮತ್ತು ಹೆಚ್ಚುವರಿ ಶ್ರಮವನ್ನು ವಿನಿಮಯ ಮಾಡುವ ಉದ್ದೇಶದಿಂದ ವಿದೇಶೀ ವ್ಯಾಪಾರವನ್ನು ಆಶ್ರಯಿಸುತ್ತದೆಯೇ ಹೊರತು ಇದಕ್ಕೆ ತಿರುಗುಮುರುಗಾದ ಉದ್ದೇಶಕ್ಕಾಗಿ ಅಲ್ಲ" ಎಂಬ ನಿರ್ಣಯವನ್ನು ಲಿಯಾಂಟೀಫ್ ತಲುಪಿರುತ್ತಾನೆ.

ಹೆಕ್‌ಷರ್ - ಒಹ್ಲಿನ್ ಸಿದ್ಧಾಂತದ ತೀರ್ಮಾನದೊಡನೆ ತನ್ನ ಅಧ್ಯಯನದ ಫಲಿತಾಂಶಗಳನ್ನು ಹೋಲಿಸಿ ನೋಡಲು ಲಿಯಾಂಟೀಫ್ ಪ್ರಯತ್ನಿಸಿರುವನು. ಅಮೆರಿಕ ಶ್ರಮ ಸಂಪನ್ಮೂಲ ವನ್ನು ಯಥೇಚ್ಛವಾಗಿ ಪಡೆದಿರುವುದರಿಂದ ಅದು ಶ್ರಮ ಸಾಂದ್ರತಾ ಸರಕುಗಳನ್ನು ರಫ್ತು ಮಾಡುತ್ತದೆ ಎಂಬ ತೀರ್ಮಾನವನ್ನು ಅವನು ವ್ಯಕ್ತಪಡಿಸಿದ್ದಾನೆ. ಅಮೆರಿಕದ ಶ್ರಮಿಕರು ಇತರ ದೇಶಗಳ ಶ್ರಮಿಕರಿಗಿಂತ ಮೂರು ಪಟ್ಟು ಅಧಿಕ ಉತ್ಪಾದಕತೆಯನ್ನು ಹೊಂದಿರುತ್ತಾರೆ ಎಂಬುದು ಅವನ ವಾದವಾಗಿದೆ. ದಕ್ಷತೆಯ ಘಟಕಗಳ ರೂಪದಲ್ಲಿ ಅಮೆರಿಕದ ಶ್ರಮಿಕರನ್ನು ಪರಿಗಣಿಸಿದರೆ ಅಮೆರಿಕದಲ್ಲಿ ಶ್ರಮದ ಪೂರೈಕೆಯು ಮೇಲ್ನೋಟಕ್ಕೆ ಕಂಡುಬರುವ ಶ್ರಮದ ಪೂರೈಕೆಯ ಪ್ರಮಾಣಕ್ಕಿಂತ ಬಹುಪಟ್ಟು ಅಧಿಕವಾಗಿರುತ್ತದೆ. ಆದ್ದರಿಂದ ಅಮೇರಿಕವು ಶ್ರಮದಲ್ಲಿ ಸಿರಿವಂತ ದೇಶವಾಗಿದ್ದು, ಶ್ರಮ ಸಾಂದ್ರತಾ ಸರಕುಗಳನ್ನು ಹೆಚ್ಚಾಗಿ ಉತ್ಪಾದಿಸಿ ನಿರ್ಯಾತ ಮಾಡುತ್ತದೆ ಎಂಬುದು ಅವನ ತೀರ್ಮಾನವಾಗಿರುತ್ತದೆ.

ಲಿಯಾಂಟೀಫ್ ತಲುಪಿದ ನಿರ್ಣಯಗಳು ಅವನನ್ನು ಮಾತ್ರವಲ್ಲದೆ ಜಗತ್ತಿನಾದ್ಯಂತ ಹಲವು ಅರ್ಥಶಾಸ್ತ್ರಜ್ಞರನ್ನು ಆಶ್ಚರ್ಯಚಕಿತರನ್ನಾಗಿ ಮಾಡಿದವು. ಕೆಲವು ಅರ್ಥಶಾಸ್ತ್ರಜ್ಞರು ಹೆಕ್‌ಷರ್-ಒಹ್ಲಿನ್‌ನ ಸಿದ್ಧಾಂತ ಮತ್ತು ಲಿಯಾಂಟೀಫ್‌ನ ವಿರೋಧಾಭಾಸಗಳನ್ನು ಮರುಪರಿಶೀಲಿಸುವ ಉದ್ದೇಶದಿಂದ ಸಂಶೋಧನೆಗಳನ್ನು ಕೈಗೊಂಡರು. ಇನ್ನು ಕೆಲವರು

ಲಿಯಾಂಟೀಫ್‌ನ ಅಧ್ಯಯನವನ್ನು ವಿಧಾನಶಾಸ್ತ್ರ (Methodology) ಮತ್ತು ಸಂಖ್ಯಾಶಾಸ್ತ್ರದ ಆಧಾರದಲ್ಲಿ ಟೀಕಿಸಿದರು.

ಟೀಕೆಗಳು

(Criticisms)

ಲಿಯಾಂಟೀಫ್‌ನ ಅಧ್ಯಯನ ವಿಧಾನ ಮತ್ತು ತೀರ್ಮಾನಗಳು ಕಟು ಟೀಕೆಗಳಿಗೆ ಒಳಗಾಗಿವೆ.

1. ಉತ್ಪಾದನ ಕಾರ್ಯಗಳಲ್ಲಿ ಭಿನ್ನತೆಗಳನ್ನು ನಿರ್ಲಕ್ಷಿಸಲಾಗಿದೆ (Neglected the Differences in Production Functions): ಪಿ.ಟಿ.ಎಲ್ಸ್‌ವರ್ಥ್ ಈ ವಿರೋಧಾಭಾಸವನ್ನು ಉಗ್ರವಾಗಿ ಟೀಕಿಸಿದ್ದಾನೆ. ಅವನ ಅಭಿಪ್ರಾಯದಲ್ಲಿ ಅಮೇರಿಕಾದ ಆಮದು ಬದಲಿಕೆಯ ಕೈಗಾರಿಕೆಗಳ ಬಂಡವಾಳ ಸಾಂದ್ರತೆಯು ಹೋಲಿಕೆಯ ದೃಷ್ಟಿಯಿಂದ ಅಸಂಗತವಾಮದು. ಅಮೆರಿಕದ ರಫ್ತು ಕೈಗಾರಿಕೆಗಳಲ್ಲಿನ ಬಂಡವಾಳ ಸಾಂದ್ರತೆಯ ಹೋಲಿಕೆಯನ್ನು ಅಮೆರಿಕದ ಆಮದು ಸರಕುಗಳನ್ನು ಉತ್ಪಾದಿಸುವ ದೇಶಗಳಲ್ಲಿನ ಬಂಡವಾಳ ಸಾಂದ್ರತೆ ಜೊಡನೆ ಮಾಡುವುದು ಸೂಕ್ತವೆಂದು ಎಲ್ಸ್‌ವರ್ಥ್‌ವಾದಿಸಿದ್ದಾನೆ. ಅಮೇರಿಕಾದಲ್ಲಿ ಬಂಡವಾಳವು ಯಥೇಚ್ಛವಾಗಿರುವುದರಿಂದ ಆಮದು ಬದಲಿಕೆಯ ಕೈಗಾರಿಕೆಗಳಲ್ಲಿಯೂ ಸಹ ಆಮದು ಬದಲಿ ಸರಕುಗಳನ್ನು ಉತ್ಪಾದಿಸಲು ಬಂಡವಾಳ ಸಾಂದ್ರತಾ ತಂತ್ರಗಳನ್ನು ಆಳವಡಿಸುತ್ತದೆ. ಆದಕಾರಣ ಲಿಯಾಂಟೀಫ್‌ನ ಅಧ್ಯಯನವು ರಫ್ತು ಬದಲಿಕೆಯ ಕೈಗಾರಿಕೆಗಳಲ್ಲಿ ಹೆಚ್ಚಿನ ಬಂಡವಾಳ ಸಾಂದ್ರತೆ ಇರುತ್ತದೆ ಎಂಬ ನಿರ್ಣಯವನ್ನು ತಲುಪಿದೆ. ಅಮೆರಿಕವು ಆಮದು ಮಾಡಿಕೊಳ್ಳುವ ಸರಕುಗಳು ಅವುಗಳ ಮೂಲದ ದೇಶಗಳಲ್ಲಿ ಬಂಡವಾಳ ಸಾಂದ್ರತೆಯಾಗಿವೆಯೇ ಅಥವಾ ಶ್ರಮ ಸಾಂದ್ರತೆಯಾಗಿವೆಯೇ ಎಂಬ ವಿಷಯದ ಬಗೆಗೆ ಬೆಳಕು ಚೆಲ್ಲುವಂತೆ ಲಿಯಾಂಟೀಫ್ ಅಧ್ಯಯನ ನಡೆಸುವುದು ಸಮಂಜಸವಾಗಿತ್ತೆಂದು ಎಲ್ಸ್‌ವರ್ಥ್ ಅಭಿಪ್ರಾಯಪಟ್ಟಿರುವನು. ವಿಭಿನ್ನ ದೇಶಗಳ ನಡುವೆ ಉತ್ಪಾದನ ಬಿಂಬಕಗಳಲ್ಲಿ ವ್ಯತ್ಯಾಸವಿರುತ್ತದೆ ಎಂಬುದು ಎಲ್ಸ್‌ವರ್ಥ್‌ನ ತರ್ಕವಾಗಿದೆ. ಆದರೆ ಲಿಯಾಂಟೀಫ್ ಏಕರೂಪದ ಉತ್ಪಾದನ ಬಿಂಬಕಗಳಿರುತ್ತವೆ ಎಂಬ ಊಹೆಯ ಮೇಲೆ ತನ್ನ ಅಧ್ಯಯನವನ್ನು ಬೆಳೆಸಿರುವನು.

2. ನೈಸರ್ಗಿಕ ಸಂಪನ್ಮೂಲಗಳ ಪಾತ್ರವನ್ನು ಕಡೆಗಣಿಸಲಾಗಿದೆ (Neglected the Role of Natural Resources): ಉತ್ಪಾದನೆ ಮತ್ತು ವ್ಯಾಪಾರ ವ್ಯವಸ್ಥೆಯಲ್ಲಿ ಲಿಯಾಂಟೀಫ್ ನೈಸರ್ಗಿಕ ಸಂಪನ್ಮೂಲಗಳ ಪಾತ್ರವನ್ನು ಕಡೆಗಣಿಸಿರುವನು. ಜೆ. ವಾನೆಕ್ ಎಂಬ ಅರ್ಥಶಾಸ್ತ್ರಜ್ಞನ ಅಭಿಪ್ರಾಯದಲ್ಲಿ ನೈಸರ್ಗಿಕ ಸಂಪನ್ಮೂಲಗಳು ಮತ್ತು ಬಂಡವಾಳ ಉತ್ಪಾದನೆಯಲ್ಲಿ ಒಂದಕ್ಕೊಂದು ಪೂರಕವಾದವುಗಳಾಗಿವೆ. ಅಮೆರಿಕದಲ್ಲಿ ಅನೇಕ ನೈಸರ್ಗಿಕ ಸಂಪನ್ಮೂಲಗಳು ಕೊರತೆಯಲ್ಲಿರುವುದರಿಂದ, ಅದು ಬಂಡವಾಳವನ್ನು ಯಥೇಚ್ಛವಾಗಿ

ಪಡೆದಿದ್ದಾಗ್ಯೂ ಬಂಡವಾಳ ಸಾಂದ್ರತಾ ಸರಕುಗಳನ್ನು ಆಮದು ಮಾಡಿಕೊಳ್ಳಬೇಕಾದ ಪರಿಸ್ಥಿತಿ ಉದ್ಭವಿಸಿದೆ ಎಂದು ವಾನೆಕ್ ಅಭಿಪ್ರಾಯಪಟ್ಟಿದ್ದಾನೆ. ಅಧಿಕ ಬಂಡವಾಳ - ಶ್ರಮ ಅನುಪಾತವನ್ನು ಹೊಂದಿರುವ ಖನಿಜಗಳು, ಅರಣ್ಯ ಉತ್ಪನ್ನಗಳು ಮೊದಲಾದ ನೈಸರ್ಗಿಕ ಸಂಪನ್ಮೂಲಗಳ ಆಮದು ಮತ್ತು ಕಡಿಮೆ ಬಂಡವಾಳ ಶ್ರಮ ಸಾಂದ್ರತೆಯನ್ನು ಹೊಂದಿರುವಂತಹ ಕೃಷಿ ಉತ್ಪನ್ನಗಳ ರಫ್ತು ಅಮೇರಿಕಾದಲ್ಲಿ ನಡೆದಿದ್ದರೂ ಸಹ ಕೊರತೆಯ ಸಂಪನ್ಮೂಲಗಳನ್ನು ಕಾಪಾಡುವ ಉದ್ದೇಶದಿಂದ ಈ ರೀತಿಯ ವ್ಯಾಪಾರ ರಚನೆ ವಿಕಾಸಗೊಂಡಿದೆ–ಎಂದು ವಾನೆಕ್ ತರ್ಕಿಸಿದ್ದಾನೆ.

3. ಮಾನವ ಬಂಡವಾಳದ ಪ್ರಾಶಸ್ತ್ಯವನ್ನು ಗಣನೆಗೆ ತೆಗೆದುಕೊಂಡಿಲ್ಲ (Not Taken the Importance of Human Capital into Consideration): ಆರ್ಥಿಕಾ ಭಿವೃದ್ಧಿಯ ನಿರ್ಧಾರದಲ್ಲಿ ಮಾನವ ಬಂಡವಾಳವು ಮಹತ್ವಪೂರ್ಣವಾದ ಪಾತ್ರವನ್ನು ನಿರ್ವಹಿಸುತ್ತದೆ. ಆದರೆ ಲಿಯಾಂಟೀಫ್‌ನ ಅಧ್ಯಯನವು ಮಾನವ ಬಂಡವಾಳವನ್ನು ಗಣನೆಗೆ ತೆಗೆದುಕೊಂಡಿಲ್ಲ. ಅಮೆರಿಕದ ಆಮದು ಬದಲಿಕೆಯ ಕೈಗಾರಿಕೆಗಳಿಗಿಂತಲೂ, ರಫ್ತು ಕೈಗಾರಿಕೆಗಳಲ್ಲಿ ಕುಶಲ ಶ್ರಮವು ಹೆಚ್ಚಿನ ಪ್ರಮಾಣದಲ್ಲಿ ಬಳಕೆಯಾಗಿದೆ ಎಂಬ ವಿಷಯವು ಲಿಯಾಂಟೀಫ್‌ನ ಅಧ್ಯಯನದಿಂದ ದೃಢಪಟ್ಟಿದೆ. ಅಮೇರಿಕಾದ ರಫ್ತುಗಳು ಶ್ರಮ ಸಾಂದ್ರವಾಗಿರಲು ಕುಶಲ ಶ್ರಮದ ಬಳಕೆಯೇ ಕಾರಣ ಎಂದು ಪೀಟರ್ ಬಿ. ಕೆನೆನ್ ಅಭಿಪ್ರಾಯಪಟ್ಟಿರುವನು. ಶ್ರಮದ ಈ ಕುಶಲತೆಯನ್ನೇ ಮಾನವ ಬಂಡವಾಳ ಎಂದು ಪರಿಗಣಿಸಬೇಕು ಮತ್ತು ಅಮೆರಿಕದ ರಫ್ತುಗಳನ್ನು ಶ್ರಮಸಾಂದ್ರ ಎಂದು ಕರೆಯುವ ಬದಲು ಮಾನವ ಬಂಡವಾಳ ಸಾಂದ್ರ ಎಂದು ಕರೆಯಬೇಕೆಂದು ಕೆನೆನ್ ವಾದಿಸಿದ್ದಾನೆ. ಆ ಪ್ರಕಾರ, ಬಂಡವಾಳ ವಿಪುಲತೆಯ ಪರಿಗಣನೆಯಲ್ಲಿ ಭೌತಿಕ ಬಂಡವಾಳದ ಜೊತೆಗೆ ಮಾನವ ಬಂಡವಾಳವನ್ನು ಸೇರಿಸಿ ವಿಶ್ಲೇಷಣೆ ನಡೆಸುವುದು ಹೆಚ್ಚು ಸಮಂಜಸವಾದುದೆಂದು ಕೆನೆನ್ ಹೇಳಿದ್ದಾನೆ. ಆದರೆ ಲಿಯಾಂಟೀಫ್‌ನ ಅಧ್ಯಯನವು ಮಾನವ ಬಂಡವಾಳಕ್ಕೆ ಮಾನ್ಯತೆ ನೀಡದಿರುವುದರಿಂದ ಅದು ಪಾರ್ಶ್ವ ವಿಶ್ಲೇಷಣೆಯಾಗಿದೆ ಎಂದು ಹೇಳಬಹುದು.

4. ಅಮೆರಿಕದ ಶ್ರಮಿಕರ ದಕ್ಷತೆಯ ಉತ್ಪ್ರೇಕ್ಷೆ (Exaggeration of the Efficiency of American Labourers): ಅಮೆರಿಕದ ಶ್ರಮಿಕರು ಉಳಿದ ದೇಶಗಳ ಶ್ರಮಿಕರಿಗಿಂತ ಮೂರು ಪಟ್ಟು ಹೆಚ್ಚು ದಕ್ಷರು ಎಂಬ ಲಿಯಾಂಟೀಫ್‌ನ ನಿರ್ಣಯವು ಸಂದೇಹಕ್ಕೆ ಎಡೆ ಮಾಡುತ್ತದೆ. 1965ರಲ್ಲಿ ಕ್ರೀನಿನ್ ಎಂಬ ಅರ್ಥಶಾಸ್ತ್ರಜ್ಞನು ಅಮೆರಿಕದಲ್ಲಿ ನಡೆಸಿದ ಸಮೀಕ್ಷೆಯಿಂದ ಅಮೆರಿಕದ ಶ್ರಮಿಕರ ದಕ್ಷತೆಯ ಮಟ್ಟ ಉಳಿದ ದೇಶಗಳ ಶ್ರಮಿಕರ ದಕ್ಷತೆಯ ಮಟ್ಟಕ್ಕಿಂತ ಶೇಕಡ 20 ಅಥವಾ ಶೇಕಡ 25ರಷ್ಟು ಮಾತ್ರ ಹೆಚ್ಚಿರಬಹುದೆಂದು ವ್ಯಕ್ತವಾಗಿರುತ್ತದೆ. ಅಮೆರಿಕದ ಶ್ರಮಿಕರು ಮೂರು ಪಟ್ಟು ಹೆಚ್ಚು ದಕ್ಷರು ಎಂಬ ಲಿಯಾಂಟೀಫ್‌ನ ನಿರ್ಣಯಕ್ಕೆ ಯಾವ ಆಧಾರಗಳೂ ಇಲ್ಲ.

5. ಅನುಭೋಗ ರಚನೆಗಳ ನಿರ್ಲಕ್ಷ್ಯ (Neglect of Consumption Patterns): ಲಿಯಾಂಟೀಫ್‌ನ ಅಧ್ಯಯನವು ಅಮೆರಿಕದ ರಫ್ತುಗಳ ಮತ್ತು ಆಮದುಗಳ ಮೇಲೆ ಅನುಭೋಗ ರಚನೆಗಳ ಪರಿಣಾಮಗಳನ್ನು ಗಣನೆಗೆ ತೆಗೆದುಕೊಳ್ಳಲು ವಿಫಲಗೊಂಡಿರುತ್ತದೆ. ರೋಮ್ನೆ ರಾಬಿನ್‌ಸನ್‌ರವರ ಅಭಿಪ್ರಾಯದಲ್ಲಿ ಯಾವುದೊಂದು ಸರಕನ್ನು ಸಾಪೇಕ್ಷವಾಗಿ ಸಮೃದ್ಧವಾಗಿರುವ ಉತ್ಪಾದನಾಂಗದ ಬಳಕೆಯಿಂದ ಉತ್ಪಾದಿಸುವ ರೀತಿಯಲ್ಲಿ ಆ ಸರಕಿನ ಅನುಭೋಗದೆಡೆಗೆ ಬೇಡಿಕೆಯ ಸ್ಥಿತಿಗತಿಗಳು ಪಕ್ಷಪಾತಿಯಾಗಿರಬಹುದು. ತಲಾಆದಾಯದಲ್ಲಿ ಏರಿಕೆಯಾದಂತೆಲ್ಲಾ ಅನುಭೋಗ ರಚನೆಗಳು ಶ್ರಮಸಾಂದ್ರ ಅಥವಾ ಬಂಡವಾಳ ಸಾಂದ್ರ ಸರಕುಗಳ ಕಡೆಗೆ ಒಲಿಯುತ್ತವೆ. ಎ.ಜೆ. ಬ್ರೌನ್ ಎಂಬ ಇನ್ನೊಬ್ಬ ಅರ್ಥಶಾಸ್ತ್ರಜ್ಞರ ಅಧ್ಯಯನದಿಂದ ವ್ಯಕ್ತವಾದ ಪ್ರಕಾರ, ಅಮೆರಿಕದ ಅನುಭೋಗ ರಚನೆಗಳು ಬಂಡವಾಳ ಸಾಂದ್ರ ಸರಕುಗಳಿಗೆ ಬದಲಾಗಿ ಶ್ರಮಸಾಂದ್ರ ಸರಕುಗಳಿಗೆ ಪಕ್ಷಪಾತಿಯಾಗಿವೆ. ಇದು ಲಿಯಾಂಟೀಫ್‌ನ ವಿರೋಧಾಭಾಸದಲ್ಲಿರುವ ದೋಷವನ್ನು ತೋರಿಸುತ್ತದೆ.

6. ಸುಂಕಗಳನ್ನು ಗಣನೆಗೆ ತೆಗೆದುಕೊಳ್ಳದಿರುವಿಕೆ (Tariffs Ignored): ಸುಂಕವನ್ನು ವಿಧಿಸುವಿಕೆಯಿಂದ ವ್ಯಾಪಾರ ರಚನೆಯು ವಿರೂಪಗೊಳ್ಳುತ್ತದೆ ಮತ್ತು ಇದು ದೇಶವೊಂದರ ಸಂಪನ್ಮೂಲ ಸಮೃದ್ಧಿಯ ಮೇಲೆ ಪ್ರಭಾವ ಬೀರುತ್ತದೆ ಎಂದು ಡಬ್ಲ್ಯು.ಪಿ. ಟ್ರೇವಿಸ್ ವಾದಿಸಿದ್ದಾರೆ. ಅಮೆರಿಕ ಮತ್ತು ಇತರ ದೇಶಗಳು ವಿಧಿಸುವ ಸುಂಕಗಳು ವ್ಯಾಪಾರ ರಚನೆಯ ಮೇಲೆ ಪ್ರಭಾವ ಬೀರುವುದರಿಂದ ಲಿಯಾಂಟೀಫ್‌ನ ನಿರ್ಣಯಗಳಲ್ಲಿ ಹುರುಳಿಲ್ಲ ಎಂಬುದು ಅವರ ಅಭಿಪ್ರಾಯವಾಗಿರುತ್ತದೆ.

7. ಹೂಡುವಳಿ-ಉತ್ಪನ್ನ ಮಾದರಿಯ ಅಸಾಮರಸ್ಯ (Incompatibility of Input-Output Model): ಲಿಯಾಂಟೀಫ್‌ನ ಮಾದರಿಯು ಸ್ಥಿರ ಹೂಡುವಳಿ ಸಹಕೃತ್ಯ (Fixed Input Co-efficients) ಗಳನ್ನು ಅವಲಂಬಿಸಿರುವುದರಿಂದ ಅದು ಅಂತರರಾಷ್ಟ್ರೀಯ ವ್ಯಾಪಾರದಿಂದ ಉದ್ಭವಿಸುವ ಪ್ರಯೋಜನಗಳ ವಿವರಣೆಗೆ ಸಮಂಜಸವಾಗಿರುವುದಿಲ್ಲ ಎಂದು ವಿಮರ್ಶಕರು ಅದನ್ನು ಟೀಕಿಸಿರುವರು. ಜಾಗತಿಕ ವ್ಯಾಪಾರ ಸಮತೋಲನದಲ್ಲಿ ಪ್ರತಿಯೊಂದು ದೇಶಕ್ಕೂ ವ್ಯಾಪಾರದಿಂದ ಲಾಭವಾಗುತ್ತದೆ, ಪೂರ್ಣೋದ್ಯೋಗವು ನೆಲೆಸಿರುತ್ತದೆ ಮತ್ತು ವ್ಯಾಪಾರದ ಪ್ರಾರಂಭದೊಡನೆ ಕೆಲವು ಸರಕುಗಳ ಉತ್ಪಾದನೆಯು ಹೆಚ್ಚುತ್ತದೆ ಮತ್ತು ಕೆಲವು ಸರಕುಗಳ ಉತ್ಪಾದನೆಯು ಕಡಿಮೆಯಾಗುತ್ತದೆ.

8. ಅಲ್ಪ ಬಂಡವಾಳ-ಶ್ರಮ ಪ್ರಮಾಣದ ಕೈಗಾರಿಕೆಗಳ ಪರಿಗಣನೆ (Consideration of Low Capital-labour Ratio Industries): ಕೆಲವು ಅಲ್ಪ ಬಂಡವಾಳ-ಶ್ರಮ ಪ್ರಮಾಣದ ಕೈಗಾರಿಕೆಗಳನ್ನು ಲಿಯಾಂಟೀಫ್ ತನ್ನ ಅಧ್ಯಯನದಲ್ಲಿ ಸೇರಿಸಿಕೊಂಡಿದ್ದಾನೆ ಎಂದು ಸ್ಟರ್ಲಿಂಗ್ ಎಂಬ ಅರ್ಥಶಾಸ್ತ್ರಜ್ಞನು ಟೀಕಿಸಿರುತ್ತಾನೆ. ವ್ಯವಸಾಯ, ಮೀನುಗಾರಿಕೆ, ಸಾಗಾಣಿಕೆ, ಸಗಟು ವ್ಯಾಪಾರ ಮುಂತಾದುವು ಇಂತಹ ಕೈಗಾರಿಕೆಗಳಾಗಿರುತ್ತವೆ. ಇಂತಹ ಕೈಗಾರಿಕೆಗಳ ಪರಿಗಣನೆಯು ಲಿಯಾಂಟೀಫ್ ತಪ್ಪು ನಿರ್ಣಯಗಳನ್ನು ತಲುಪಲು ಅವಕಾಶ

ಮಾಡಿಕೊಟ್ಟಿರುತ್ತದೆ.

9. ಬಂಡವಾಳ ಬಾಳಿಕೆಯಲ್ಲಿ ವ್ಯತ್ಯಾಸದ ನಿರ್ಲಕ್ಷ್ಯ (Neglect of Difference in the Durability of Capital): ಬಂಡವಾಳದ ಬಾಳಿಕೆಯಲ್ಲಿ ವಿವಿಧ ಕೈಗಾರಿಕೆಗಳಲ್ಲಿ ವ್ಯತ್ಯಾಸಗಳಿರುತ್ತವೆ. ಉದಾಹರಣೆಗೆ, ಕೆಲವು ಕೈಗಾರಿಕೆಗಳಲ್ಲಿ ಬಂಡವಾಳವು ಬಹುಕಾಲ ಬಾಳಿಕೆಯ ಲಕ್ಷಣವನ್ನು ಹೊಂದಿದ್ದರೆ, ಇನ್ನು ಕೆಲವು ಕೈಗಾರಿಕೆಗಳಲ್ಲಿ ಅದು ಅಷ್ಟು ಬಾಳಿಕೆಯನ್ನು ಹೊಂದಿರಲಾರದು. ಲಿಯಾಂಟೀಫ್ ಈ ಅಂಶವನ್ನು ಕಡೆಗಣಿಸಿರುತ್ತಾನೆ ಎಂದು ಬುಚಾನನ್ ಟೀಕಿಸಿರುತ್ತಾನೆ.

10. ವ್ಯಾಪಾರವು ಅಸಮತೋಲನದಲ್ಲಿರುವಾಗ ಅನ್ವಯಿಸದಿರುವಿಕೆ (Not Applicable when Trade is Unbalanced): ಜಗತ್ತಿನಲ್ಲಿ ವ್ಯಾಪಾರವು ಅಸಮತೋಲನದಲ್ಲಿರುವಾಗ ಲಿಯಾಂಟೀಫ್‌ನ ವಿರೋಧಾಭಾಸ ಅನ್ವಯಿಸುವುದಿಲ್ಲ ಎಂಬುದು ಲೀಮರ್ ಎಂಬ ಅರ್ಥಶಾಸ್ತ್ರಜ್ಞನ ಅಭಿಪ್ರಾಯವಾಗಿರುತ್ತದೆ. 1947ರಲ್ಲಿ ಅವನು ಅಧ್ಯಯನವನ್ನು ನಡೆಸಿದಾಗ ಅಮೆರಿಕವು ವ್ಯಾಪಾರ ಹೆಚ್ಚುವರಿಯನ್ನು ಹೊಂದಿತ್ತು ಮತ್ತು ಲಿಯಾಂಟೀಫ್ ಹೇಳುವಂತೆ ಅದರ ರಫ್ತುಗಳು ಸಾಪೇಕ್ಷವಾಗಿ ಶ್ರಮಸಾಂದ್ರವಾಗಿದ್ದವು ಎಂಬ ನಿರ್ಣಯವನ್ನು ತಲುಪಲು ಆಧಾರಗಳಿರಲಿಲ್ಲ ಎಂಬ ನಿಲುವನ್ನು ತಳೆದಿದ್ದಾನೆ.

11. 1947 ಮಾದರಿ ವರ್ಷವಲ್ಲ (1947 Not a Typical Year): ಹೆಕ್‌ಶ್ಚರ್-ಒಹ್ಲಿನ್ ಮಾದರಿಯ ಪರೀಕ್ಷೆಗೆ 1947 ರ ವರ್ಷವನ್ನು ಆಯ್ಕೆ ಮಾಡಿಕೊಂಡಿರುವುದು ಸರಿಯಾದುದಲ್ಲ ಎಂದು ಸ್ಟರ್ಲಿಂಗ್ ಎಂಬ ಅರ್ಥಶಾಸ್ತ್ರಜ್ಞನು ಟೀಕಿಸಿರುತ್ತಾನೆ. ಏಕೆಂದರೆ 1947 ಪ್ರಾತಿನಿಧಿಕ (ಮಾದರಿ) ವರ್ಷವಾಗಲು ವಿಫಲಗೊಳ್ಳುತ್ತದೆ ಎಂಬುದು ಅವನ ಅಭಿಪ್ರಾಯವಾಗಿರುತ್ತದೆ. ಎರಡನೆಯ ಮಹಾಯುದ್ಧದ ಭೀಕರ ದುಷ್ಪರಿಣಾಮಗಳ ಕಾರಣದಿಂದ ಪ್ರಪಂಚದಾದ್ಯಂತ ಉತ್ಪಾದನೆಯಲ್ಲಿ ತಲೆದೋರಿದ್ದ ಅವ್ಯವಸ್ಥೆಯು 1947ರ ಸಮಯದಲ್ಲಿ ಇನ್ನೂ ಸರಿಯಾಗಿರಲಿಲ್ಲ. ಆದ್ದರಿಂದ ಲಿಯಾಂಟೀಫ್‌ನ ಅಧ್ಯಯನವು 1947ರ ಒಂದು ವರ್ಷದಲ್ಲಿ ಅಮೆರಿಕದ ವ್ಯಾಪಾರಕ್ಕೆ ಸಂಬಂಧಿಸಿದ ಒಂದು ವಿವರಣೆ ಮಾತ್ರ ಆಗಿರುತ್ತದೆ ಎಂಬುದು ಸ್ಟರ್ಲಿಂಗ್‌ನ ನಿಲುವಾಗಿರುತ್ತದೆ.

ಉಪಸಂಹಾರ

ಲಿಯಾಂಟೀಫ್‌ನ ವಿರೋಧಾಭಾಸವು ಅನೇಕ ಟೀಕೆಗಳಿಗೆ ಒಳಗಾಗಿದ್ದರೂ ಮತ್ತು ಅದರ ವಿಶ್ಲೇಷಣೆಯ ವಿಧಾನವು ಅಸಾಂಗತ್ಯದಿಂದ ಕೂಡಿದೆ ಎಂಬುದು ನಿಜವಾಗಿದ್ದಾಗ್ಯೂ ಸಹ ಅದರ ಪ್ರಾಯೋಗಿಕ ಮಹತ್ವವನ್ನು ಅಲ್ಲಗಳೆಯುವಂತಿರುವುದಿಲ್ಲ. ಲಿಯಾಂಟೀಫ್‌ನ ಅಧ್ಯಯನವು ಅಂತರರಾಷ್ಟ್ರೀಯ ವ್ಯಾಪಾರ ವಿಶ್ಲೇಷಣೆಯ ಬಗೆಗೆ ಅನೇಕ ಒಳನೋಟಗಳನ್ನು ಬೀರಿರುವುದಲ್ಲದೆ, ಇದೇ ಹಾದಿಯಲ್ಲಿ ಹಲವು ವಿಶ್ಲೇಷಣೆಗಳಿಗೆ ಪ್ರೇರಣೆಯನ್ನು ನೀಡಿದೆ.

ಅಧ್ಯಾಯ - II

ವ್ಯಾಪಾರದ ಷರತ್ತುಗಳು (ಕರಾರುಗಳು) ಮತ್ತು ವಾಣಿಜ್ಯ ನೀತಿ
(Terms of Trade and Commercial Policy)

ಚರ್ಚಿಸಲಾಗಿರುವ ವಿಷಯಗಳು

A. ವ್ಯಾಪಾರದ ಷರತ್ತುಗಳು: ಪರಿಕಲ್ಪನೆ ಮತ್ತು ವಿಧಗಳು
B. ವ್ಯಾಪಾರದ ಕರಾರುಗಳನ್ನು ನಿರ್ಧರಿಸುವ ಸಂಗತಿಗಳು
C. ವಾಣಿಜ್ಯ ನೀತಿ : ಮುಕ್ತ ವ್ಯಾಪಾರ ಮತ್ತು ರಕ್ಷಣಾ ನೀತಿ
D. ಸುಂಕಗಳು : ವಿಧಗಳು ಮತ್ತು ಪರಿಣಾಮಗಳು
E. ದೇಯಾಂಶಗಳು
F. ಸುರಿ ಮಾರಾಟ
G. ಆರ್ಥಿಕ ಸಂಯೋಜನೆ : ಅರ್ಥ ಮತ್ತು ಪಂತಗಳು

A. ವ್ಯಾಪಾರದ ಷರತ್ತುಗಳು: ಪರಿಕಲ್ಪನೆ ಮತ್ತು ವಿಧಗಳು
(Terms of Trade : Concept and Types)

ವ್ಯಾಪಾರದ ಷರತ್ತುಗಳು ಅಥವಾ ಕರಾರುಗಳು ರಫ್ತುಗಳ ಮತ್ತು ಆಮದುಗಳ ವಿನಿಮಯದಲ್ಲಿ ಎರಡೂ ದೇಶಗಳ ಪರಸ್ಪರ ಬೇಡಿಕೆಯ ಸಾಂದ್ರತೆಯನ್ನು ಅವಲಂಬಿಸಿರುತ್ತವೆ. ಅಂದರೆ ವ್ಯಾಪಾರದ ಷರತ್ತುಗಳು ಎರಡೂ ದೇಶಗಳ ಅನ್ಯೋನ್ಯ ಬೇಡಿಕೆ ಅಥವಾ ವಿಪರ್ಯಯ ಬೇಡಿಕೆಯಿಂದ (Reciprocal Demand) ನಿರ್ಧಾರವಾಗುತ್ತವೆ. ಮೊದಲಿನ ಉದಾಹರಣೆಯನ್ನೇ ತೆಗೆದುಕೊಳ್ಳುವುದಾದರೆ, ಅಮೆರಿಕದ ಗೋಧಿಗೆ ಇಂಗ್ಲೆಂಡಿನ ಬೇಡಿಕೆ ಮತ್ತು ಇಂಗ್ಲೆಂಡಿನ ಬಟ್ಟೆಗೆ ಅಮೆರಿಕದ ಬೇಡಿಕೆಯಿಂದ ಸಮಾನಾಂತರ ವಿನಿಮಯ ದರವು ನಿರ್ಣಯಿಸಲ್ಪಡುತ್ತದೆ.

ಇಂಗ್ಲೆಂಡಿನ ಬಟ್ಟೆಗೆ ಅಮೆರಿಕದ ಬೇಡಿಕೆಗಿಂತಲೂ ಅಮೆರಿಕದ ಗೋಧಿಗೆ ಇಂಗ್ಲೆಂಡಿನ ಬೇಡಿಕೆ ಹೆಚ್ಚಾಗಿರುತ್ತದೆ ಎಂದು ಊಹಿಸಿಕೊಳ್ಳೋಣ. ಈಗ ವ್ಯಾಪಾರದ ಷರತ್ತುಗಳು ಇಂಗ್ಲೆಂಡಿಗೆ ಅನಾನುಕೂಲವಾಗಿರುತ್ತವೆ ಮತ್ತು ಅಮೆರಿಕಕ್ಕೆ ಅನುಕೂಲಕರ ವಾಗಿರುತ್ತವೆ. ಏಕೆಂದರೆ ಅತಿ ಹೆಚ್ಚಿನ ಬೆಲೆಯಲ್ಲಾದರೂ ಇಂಗ್ಲೆಂಡ್ ಗೋಧಿಯನ್ನು ಆಮದು

ಮಾಡಿಕೊಳ್ಳಲೇಬೇಕಾಗುತ್ತದೆ. ತದ್ವಿರುದ್ಧವಾಗಿ, ಬಟ್ಟೆಯ ಬೆಲೆ ಏರಿದರೆ ಅಮೆರಿಕವು ಅದರ ಆಮದನ್ನು ತಗ್ಗಿಸಬಹುದು.

ವ್ಯಾಪಾರದ ಷರತ್ತುಗಳನ್ನು ಒಂದು ಸೂತ್ರದ ಸಹಾಯದಿಂದ ವ್ಯಕ್ತಪಡಿಸಬಹುದು.

$$\text{ವ್ಯಾಪಾರದ ಷರತ್ತುಗಳು} = \frac{\text{ಆಮದುಗಳ ಬೆಲೆಗಳು}}{\text{ರಫ್ತುಗಳ ಬೆಲೆಗಳು}}$$

ಅಥವಾ

$$TC = \frac{Px}{Pm}$$

ಈ ಸೂತ್ರದಲ್ಲಿ

TC = ವ್ಯಾಪಾರದ ಕರಾರುಗಳು

PA = ಆಮದುಗಳ ಬೆಲೆಗಳು

Pm = ರಫ್ತುಗಳ ಬೆಲೆಗಳು

ಆ ಪ್ರಕಾರ, ವ್ಯಾಪಾರದ ಕರಾರುಗಳು ಆಮದು ಬೆಲೆಗಳ ಮತ್ತು ರಫ್ತು ಬೆಲೆಗಳ ನಡುವಣ ಅನುಪಾತವಾಗಿರುತ್ತದೆ.

ಒಂದು ದೇಶವು ಅನೇಕ ದೇಶಗಳೊಡನೆ ಹಲವಾರು ಸರಕುಗಳನ್ನು ಒಳಗೊಂಡಂತೆ ವ್ಯಾಪಾರದಲ್ಲಿ ನಿರತವಾಗಿರುವ ವ್ಯಾಪಾರದ ಷರತ್ತುಗಳನ್ನು ತಿಳಿಯಲು ಎಲ್ಲಾ ರಫ್ತು ಸರಕುಗಳ ಮತ್ತು ಆಮದು ಸರಕುಗಳ ಬೆಲೆಗಳನ್ನು ತಿಳಿದುಕೊಳ್ಳಬೇಕಾಗುತ್ತದೆ.

ಕಾಲಾನುಕ್ರಮದಲ್ಲಿ ವ್ಯಾಪಾರದ ಷರತ್ತುಗಳು ಹೇಗೆ ಬದಲಾಗಿವೆ ಎಂಬುದನ್ನು ನಿರ್ಧರಿಸಲು ರಫ್ತುಗಳ ಮತ್ತು ಆಮದುಗಳ ಸೂಚ್ಯಂಕವನ್ನು ತಯಾರಿಸಬೇಕಾಗುತ್ತದೆ. ಇದಕ್ಕಾಗಿ ಒಂದು ಮೂಲ ವರ್ಷವನ್ನು ಆಯ್ಕೆ ಮಾಡಬೇಕು. ವಿವಿಧ ವರ್ಷಗಳಲ್ಲಿ ವ್ಯಾಪಾರದ ಷರತ್ತುಗಳ ಬದಲಾವಣೆಯನ್ನು ಈ ಸೂಚ್ಯಂಕದ ಸಹಾಯದಿಂದ ತಿಳಿಯಬಹುದು.

ವ್ಯಾಪಾರದ ಕರಾರುಗಳ ಪರಿಭಾವನೆಯನ್ನು ಆರ್ಥಿಕ ವಿಶ್ಲೇಷಣೆಯಲ್ಲಿ ಮೊಟ್ಟ ಮೊದಲಿಗೆ ಬಳಸಿದವನು **ಆಲ್‌ಫ್ರೆಡ್ ಮಾರ್ಷಲ್**. ತರುವಾಯ **ಎ.ಸಿ.ಪಿಗೂ, ಟಾಸಿಗ್** ಮೊದಲಾದ ಅರ್ಥಶಾಸ್ತ್ರಜ್ಞರು ಇದರ ಅಭಿವೃದ್ಧಿಗೆ ಕೊಡುಗೆ ನೀಡಿದರು.

ವ್ಯಾಪಾರದ ಷರತ್ತುಗಳ ಪರಿಕಲ್ಪನೆಯ ಪ್ರಾಮುಖ್ಯ
(Importance of the Concept of Terms of Trade)

ವ್ಯಾಪಾರದ ಕರಾರುಗಳ ಪರಿಕಲ್ಪನೆಯು ಬಹಳ ಹೆಚ್ಚಿನದಾದ ಪ್ರಾಯೋಗಿಕ ಮಹತ್ವವನ್ನು ಪಡೆದಿದೆ. ವ್ಯಾಪಾರದ ಕರಾರುಗಳ ಸಹಾಯದಿಂದ ಒಂದು ದೇಶದ ವಿದೇಶೀ ವ್ಯಾಪಾರ ಪರಿಸ್ಥಿತಿಯನ್ನು ಸುಲಭವಾಗಿ ತಿಳಿದುಕೊಳ್ಳಬಹುದು. ಆ ದೇಶದ

ಆರ್ಥಿಕಾಭಿವೃದ್ಧಿಯ ಮಟ್ಟ, ರಫ್ತುಗಳ ಮತ್ತು ಆಮದುಗಳ ಪ್ರಮಾಣ, ವ್ಯಾಪಾರಕ್ಕೆ ಒಳಪಟ್ಟ ಸರಕುಗಳ ಸ್ವರೂಪ ಮೊದಲಾದ ಸಂಗತಿಗಳು ಇದರಿಂದ ವೇದ್ಯವಾಗುತ್ತವೆ. ಮೂಲ ವರ್ಷದೊಡನೆ ವಿವಿಧ ವರ್ಷಗಳ ಸೂಚ್ಯಂಕಗಳನ್ನು ಹೋಲಿಸುವುದರಿಂದ ಕಾಲಾನುಕ್ರಮದಲ್ಲಿ ವಿದೇಶೀ ವ್ಯಾಪಾರವು ದೇಶಕ್ಕೆ ಅನುಕೂಲಕರವಾಗಿದೆಯೇ ಅಥವಾ ಪ್ರತಿಕೂಲಕರವಾಗಿದೆಯೇ ಎಂಬ ವಿಚಾರವು ಮನದಟ್ಟಾಗುತ್ತದೆ.

ವ್ಯಾಪಾರದ ಷರತ್ತುಗಳ ವಿಧಗಳು
(Types of Terms of Trade)

ವ್ಯಾಪಾರದ ಷರತ್ತುಗಳ ವಿವಿಧ ವಿಧಗಳನ್ನು ಈಗ ಪರಿಚಯಮಾಡಿಕೊಳ್ಳೋಣ.

1. ನಿವ್ವಳ ಸಾಟಿ ವಿನಿಮಯ ವ್ಯಾಪಾರದ ಷರತ್ತುಗಳು
(Net Barter Terms of Trade)

'ನಿವ್ವಳ ಸಾಟಿ ವಿನಿಮಯ ವ್ಯಾಪಾರದ ಷರತ್ತುಗಳು' ಎಂಬ ಪರಿಕಲ್ಪನೆಯನ್ನು **ಫ್ರಾಂಕ್ ವಿಲಿಯಮ್ ಟಾಸಿಗ್** ಎಂಬ ಅರ್ಥಶಾಸ್ತ್ರಜ್ಞನು ಪರಿಚಯಿಸಿದನು. ಇದನ್ನು 'ಸರಕು ವ್ಯಾಪಾರ ಷರತ್ತುಗಳು' (Commodity Terms of Trade) ಎಂತಲೂ ಕರೆಯಲಾಗುತ್ತದೆ.

ಈ ಪರಿಕಲ್ಪನೆಯಲ್ಲಿ **'ಸಾಟಿ'** ಎಂಬ ಪದವು ರಫ್ತು ಸರಕುಗಳಿಗೆ ಆಮದು ಸರಕುಗಳ ವಿನಿಮಯವನ್ನು ಸೂಚಿಸುತ್ತದೆ. ರಫ್ತು ಸರಕುಗಳ ಬೆಲೆಗಳನ್ನು ಆಮದು ಸರಕುಗಳ ಬೆಲೆಗಳೊಡನೆ ಹೋಲಿಕೆ ಮಾಡಲಾಗುತ್ತದೆ. ಅಂದರೆ ಇದರಲ್ಲಿ ರಫ್ತು ಮಾಡಲಾದ ಅಥವಾ ಆಮದು ಮಾಡಿಕೊಂಡ ಸರಕುಗಳ ಪರಿಮಾಣವನ್ನು ವ್ಯಕ್ತಪಡಿಸಲಾಗುವುದಿಲ್ಲ ಎಂಬುದು ಗಮನಾರ್ಹವಾದ ವಿಷಯ. ಆದ್ದರಿಂದ ಇದನ್ನು ನಿವ್ವಳ ಸಾಟಿ ವಿನಿಮಯ ವ್ಯಾಪಾರ ಷರತ್ತುಗಳು ಎಂದು ಕರೆಯಲಾಗುತ್ತದೆ.

ಈ ಪರಿಕಲ್ಪನೆಯು ರಫ್ತು ಬೆಲೆಗಳ ಮತ್ತು ಆಮದು ಬೆಲೆಗಳ ನಡುವಣ ಅನುಪಾತವನ್ನು ತೋರಿಸುತ್ತದೆ. ಅಂದರೆ ಯಾವುದೊಂದು ಮೂಲ ಅವಧಿಗೆ ಹೋಲಿಸಿದಂತೆ ಒಂದು ನಿರ್ದಿಷ್ಟ ಅವಧಿಯಲ್ಲಿ ಆಮದು ಸರಕುಗಳ ಬೆಲೆಗಳಿಗೆ ರಫ್ತು ಸರಕುಗಳ ಬೆಲೆಗಳನ್ನು ಸೂಚಿಸುವ ಅಂಶವೇ ನಿವ್ವಳ ಸಾಟಿ ವಿನಿಮಯ ವ್ಯಾಪಾರ ಷರತ್ತುಗಳು. ಇದನ್ನು ಕಂಡುಹಿಡಿಯಲು ಈ ಕೆಳಗಿನ ಸೂತ್ರವನ್ನು ಉಪಯೋಗಿಸಲಾಗುತ್ತದೆ.

$$TC = \frac{Px}{Pm} \times 100$$

ಇದರಲ್ಲಿ : TC = ನಿವ್ವಳ ಸಾಟಿ ವಿನಿಮಯ ವ್ಯಾಪಾರ ಷರತ್ತುಗಳು

Px = ರಫ್ತುಗಳು ಬೆಲೆಗಳ ಸೂಚ್ಯಂಕ

Pm = ಆಮದು ಬೆಲೆಗಳ ಸೂಚ್ಯಂಕ

ರಫ್ತು ಬೆಲೆಗಳ ಸೂಚ್ಯಂಕವು ಆಮದು ಬೆಲೆಗಳ ಸೂಚ್ಯಂಕಕ್ಕಿಂತ ಅಧಿಕವಾಗಿರುವಾಗ ($Px > Pm$) ವ್ಯಾಪಾರ ಷರತ್ತುಗಳು ಆ ದೇಶಕ್ಕೆ ಅನುಕೂಲಕರವಾಗಿರುತ್ತವೆ. ಬದಲಾಗಿ ಆಮದು ಬೆಲೆಗಳ ಸೂಚ್ಯಂಕವು ರಫ್ತು ಬೆಲೆಗಳ ಸೂಚ್ಯಂಕಕ್ಕಿಂತ ಹೆಚ್ಚಾಗಿದ್ದರೆ ($Px < Pm$) ವ್ಯಾಪಾರದ ಷರತ್ತುಗಳು ಆ ದೇಶಕ್ಕೆ ಅನಾನುಕೂಲಕರವಾಗಿರುತ್ತವೆ.

ಎರಡು ಅವಧಿಗಳ ನಡುವೆ ವ್ಯಾಪಾರದ ಷರತ್ತುಗಳನ್ನು ಹೋಲಿಕೆ ಮಾಡಬೇಕೆಂದಾಗ ಈ ಕೆಳಗಿನ ಸೂತ್ರಗಳನ್ನು ಅನ್ವಯಿಸಬೇಕಾಗುತ್ತದೆ.

$$\frac{Px_1}{Pm_1} = \frac{Px^0}{Pm^0}$$

ಈ ಸೂತ್ರದಲ್ಲಿ :

O = ಮೂಲ ಅವಧಿ

1 = ಪ್ರಸಕ್ತ ಅವಧಿ

ಮೂಲ ಅವಧಿಯಲ್ಲಿ ರಫ್ತು ಬೆಲೆಗಳ ಸೂಚ್ಯಂಕಗಳು ಮತ್ತು ಆಮದು ಬೆಲೆಗಳ ಸೂಚ್ಯಂಕ ಗಳು ಎರಡೂ 100 ಆಗಿರುತ್ತವೆ. ಆದ್ದರಿಂದ ಮೂಲ ಅವಧಿಯಲ್ಲಿ ವ್ಯಾಪಾರದ ಷರತ್ತುಗಳು :

$$\frac{100}{100} = 1$$ ಆಗಿರುತ್ತದೆ.

ಪ್ರಸಕ್ತ ಅವಧಿಯಲ್ಲಿ ರಫ್ತು ಬೆಲೆಗಳ ಸೂಚ್ಯಂಕವು ಎರಡರಷ್ಟು ಹೆಚ್ಚಿದೆ ಮತ್ತು ಆಮದು ಬೆಲೆಗಳ ಸೂಚ್ಯಂಕವು ಕೇವಲ ಶೇಕಡ 50ರಷ್ಟು ಹೆಚ್ಚಿದೆ ಎಂದು ಭಾವಿಸೋಣ. ಈಗ ನಿವ್ವಳ ಸಾಟಿ ವಿನಿಮಯ ವ್ಯಾಪಾರ ಷರತ್ತುಗಳು :

$$\frac{Px}{Pm} \times 100 = \frac{200}{150} \times 100 = 133.33$$ ಆಗಿರುತ್ತವೆ.

ಪ್ರಸಕ್ತ ವರ್ಷದಲ್ಲಿ ವ್ಯಾಪಾರದ ಷರತ್ತುಗಳು ಶೇಕಡ 33.3ರಷ್ಟು ಉತ್ತಮಗೊಂಡಿವೆ ಎಂಬುದನ್ನು ಮೇಲಿನ ಸೂತ್ರವು ಸೂಚಿಸುತ್ತದೆ. ಆ ಪ್ರಕಾರ ರಫ್ತು ಬೆಲೆಗಳು ಆಮದು ಬೆಲೆಗಳಿಗಿಂತ ಹೆಚ್ಚಿದರೆ ವ್ಯಾಪಾರದ ಷರತ್ತುಗಳು ಆ ದೇಶಕ್ಕೆ ಅನುಕೂಲಕರವಾಗಿ ಪರಿಣಮಿಸುತ್ತವೆ.

ವ್ಯಾಪಾರದ ಷರತ್ತುಗಳು ದೇಶಕ್ಕೆ ಅನಾನುಕೂಲಕರವಾಗಿರುವ ಒಂದು ಸನ್ನಿವೇಶವನ್ನು ಗಮನಿಸೋಣ. ರಫ್ತು ಬೆಲೆಗಳ ಸೂಚ್ಯಂಕವು ಶೇಕಡ 50 ರಷ್ಟು ಮಾತ್ರ ಅಧಿಕಗೊಂಡಿದೆ. ಮತ್ತು ಆಮದು ಬೆಲೆಗಳ ಸೂಚ್ಯಂಕವು ಎರಡರಷ್ಟು ಏರಿದೆ ಎಂದು ತಿಳಿಯೋಣ. ಈಗ

ವ್ಯಾಪಾರದ ಷರತ್ತುಗಳು :

$$\frac{Px}{Pm} \times 100 = \frac{150}{200} \times 100 = 75$$ ಆಗಿರುತ್ತವೆ.

ಮೂಲ ಅವಧಿಯಲ್ಲಿ 100 ಇದ್ದ ವ್ಯಾಪಾರದ ಷರತ್ತುಗಳು ಪ್ರಸಕ್ತ ಅವಧಿಯಲ್ಲಿ 75ಕ್ಕೆ ಇಳಿದಿವೆ ಎಂಬುದು ಮೇಲಿನ ವಿಶ್ಲೇಷಣೆಯಿಂದ ವ್ಯಕ್ತವಾಗುತ್ತದೆ. ಅಂದರೆ ವ್ಯಾಪಾರದ ಷರತ್ತುಗಳು ಆ ದೇಶಕ್ಕೆ ಅನಾನುಕೂಲಕರವಾಗಿವೆ ಎಂಬುದು ಇದರ ಸೂಚ್ಯಾರ್ಥವಾಗಿದೆ. ಆ ಪ್ರಕಾರ, ಆಮದು ಬೆಲೆಗಳಿಗಿಂತ ಕಡಿಮೆ ಪ್ರಮಾಣದಲ್ಲಿ ರಫ್ತು ಬೆಲೆಗಳು ಏರಿದರೆ ವ್ಯಾಪಾರದ ಷರತ್ತುಗಳು ಕ್ಷೀಣಿಸುತ್ತವೆ ಅಥವಾ ಆ ದೇಶಕ್ಕೆ ಅನಾನುಕೂಲಕರವಾಗಿರುತ್ತವೆ.

ಮಿತಿಗಳು

(Limitations)

ನಿವ್ವಳ ಸಾಟಿ ವಿನಿಮಯ ವ್ಯಾಪಾರದ ಕರಾರುಗಳ ಅಥವಾ ಸರಕು ವ್ಯಾಪಾರದ ಕರಾರುಗಳ ಸೂಚಿಯು ಬಹಳ ಪ್ರಾಯೋಗಿಕ ಮಹತ್ವವನ್ನು ಪಡೆದಿದ್ದರೂ ಸಹ ಅದು ಅನೇಕ ಮಿತಿಗಳಿಂದ ಕೂಡಿದೆ.

1. ಸರಕುಗಳ ಸಂಯೋಜನೆ ಮತ್ತು ಗುಣಮಟ್ಟದ ಬದಲಾವಣೆಗಳನ್ನು ಗಣನೆಗೆ ತೆಗೆದುಕೊಳ್ಳದಿರುವಿಕೆ (Not taking into Account Changes in Combination and Quality of Commodities): ನಿವ್ವಳ ಸಾಟಿ ವಿನಿಮಯ ವ್ಯಾಪಾರದ ಕರಾರುಗಳು ರಫ್ತು ಸರಕುಗಳ ಮತ್ತು ಆಮದು ಸರಕುಗಳ ಬೆಲೆಯನ್ನು ಅವಲಂಬಿಸಿವೆ. ಆದರೆ ಈ ಸೂಚಿಯು ಎರಡು ದೇಶಗಳ ನಡುವೆ ನಡೆಯುವ ವ್ಯಾಪಾರದಲ್ಲಿ ಒಳಗೊಳ್ಳುವ ಸರಕುಗಳ ಸಂಯೋಜನೆ ಮತ್ತು ಗುಣಮಟ್ಟದಲ್ಲಿ ಸಂಭವಿಸುವ ಬದಲಾವಣೆಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಅಂತೆಯೇ ಇದು ಅಂತರರಾಷ್ಟ್ರೀಯ ವ್ಯಾಪಾರದೊಳಗೆ ಸದಾ ಪ್ರವೇಶಿಸುವ ಹೊಸ ಸರಕುಗಳನ್ನು ಗಣನೆಗೆ ತೆಗೆದುಕೊಳ್ಳಲು ವಿಫಲಗೊಳ್ಳುತ್ತದೆ. ಹೆಚ್ಚೆಂದರೆ ಈ ಸೂಚಿಯು ಮೂಲ ವರ್ಷದಲ್ಲಿ ರಫ್ತು ಮಾಡಿದ ಮತ್ತು ಆಮದು ಮಾಡಿಕೊಂಡ ಸರಕುಗಳ ಸಾಪೇಕ್ಷ ಬೆಲೆಗಳಲ್ಲಿ ಸಂಭವಿಸುವ ಬದಲಾವಣೆಗಳನ್ನು ಮಾತ್ರ ತೋರಿಸುತ್ತದೆ.

2. ಅಲ್ಪಾವಧಿಯ ಬದಲಾವಣೆಗಳ ಅಧ್ಯಯನ (Study of Short - term Changes): ಸರಕು ವ್ಯಾಪಾರದ ಕರಾರುಗಳ ಪರಿಭಾವನೆಯು ಅಲ್ಪಾವಧಿಗಳಿಗೆ ಮಾತ್ರ ಪ್ರಯೋಜನಕಾರಿಯಾಗಿದೆ. ಇದು ರಫ್ತು ಮಾಡಿದ ಮತ್ತು ಆಮದು ಮಾಡಿಕೊಂಡ ಸರಕುಗಳ ಸಂಯೋಜನೆ ಮತ್ತು ಗುಣಮಟ್ಟದಲ್ಲಿ ಸಂಭವಿಸುವ ಬದಲಾವಣೆಗಳನ್ನು ಗಣನೆಗೆ ತೆಗೆದು

ಕೊಳ್ಳದಿರುವುದರಿಂದ ಇದು ವ್ಯಾಪಾರದ ಕರಾರುಗಳಲ್ಲಿ ದೀರ್ಘಾವಧಿಯ ಬದಲಾವಣೆಗಳನ್ನು ಅಧ್ಯಯನ ಮಾಡುವುದಿಲ್ಲ.

3. ಆಮದು ಮಾಡಿಕೊಳ್ಳುವ ಸಾಮರ್ಥ್ಯದ ನಿರ್ಲಕ್ಷ್ಯ (Neglect of Capacity to Import): ಸರಕು ವ್ಯಾಪಾರದ ಕರಾರುಗಳ ಪರಿಭಾವನೆಯು ಒಂದು ದೇಶವು ಆಮದು ಮಾಡಿಕೊಳ್ಳಲು ಹೊಂದಿರುವ ಸಾಮರ್ಥ್ಯದ ಮೇಲೆ ಬೆಳಕು ಚೆಲ್ಲುವುದಿಲ್ಲ. ಉದಾಹರಣೆಗೆ, ಒಂದು ದೇಶದ ಸರಕು ವ್ಯಾಪಾರದ ಕರಾರುಗಳು ಕ್ಷೀಣಿಸಿವೆ ಎಂದು ಭಾವಿಸೋಣ. ಆ ದೇಶದ ನಿರ್ದಿಷ್ಟ ಪ್ರಮಾಣದ ರಫ್ತುಗಳು ಮೊದಲಿಗಿಂತ ಕಡಿಮೆ ಪ್ರಮಾಣದ ಆಮದುಗಳನ್ನು ಪಡೆದುಕೊಳ್ಳುತ್ತವೆ ಎಂಬುದು ಇದರ ಅರ್ಥ. ಇದೇ ಸಂದರ್ಭದಲ್ಲಿ ರಫ್ತು ಸರಕುಗಳ ಬೆಲೆಗಳ ಇಳಿಯುವಿಕೆಯ ಕಾರಣದಿಂದ ಆ ದೇಶದ ರಫ್ತುಗಳ ಗಾತ್ರವು ಸ್ವಲ್ಪ ಹೆಚ್ಚಬಹುದು. ಈ ಎರಡು ವಿದ್ಯಮಾನಗಳ ಪರಿಣಾಮವಾಗಿ ಆ ದೇಶದ ಆಮದು ಸಾಮರ್ಥ್ಯ ಬದಲಾಗದೆ ಉಳಿಯುತ್ತದೆ, ಅಥವಾ ಅದು ಸ್ವಲ್ಪ ಮಟ್ಟಿಗೆ ಸುಧಾರಿಸಲೂಬಹುದು. ಆ ಪ್ರಕಾರ, ಸರಕು ವ್ಯಾಪಾರದ ಕರಾರುಗಳು ದೇಶವೊಂದರ ಆಮದು ಮಾಡಿಕೊಳ್ಳುವಿಕೆಯ ಸಾಮರ್ಥ್ಯವನ್ನು ಪರಿಗಣನೆಗೆ ತೆಗೆದುಕೊಳ್ಳಲು ಸಂಪೂರ್ಣವಾಗಿ ವಿಫಲಗೊಳ್ಳುತ್ತವೆ.

4. ಉತ್ಪಾದನ ಸಾಮರ್ಥ್ಯದ ಬದಲಾವಣೆಗಳನ್ನು ಗಣನೆಗೆ ತೆಗೆದುಕೊಳ್ಳದಿರುವಿಕೆ (Not Taking into Account Changes in Production Capacity): ದೇಶದ ಉತ್ಪಾದನ ಸಾಮರ್ಥ್ಯದಲ್ಲಿ ಜರುಗುವ ಬದಲಾವಣೆಗಳನ್ನು ಸಹ ಸರಕು ವ್ಯಾಪಾರದ ಕರಾರುಗಳು ನಿರ್ಲಕ್ಷಿಸುತ್ತವೆ. ದೇಶವೊಂದರ ಉತ್ಪಾದನ ದಕ್ಷತೆ ಹೆಚ್ಚಿದೆ ಎಂದು ಭಾವಿಸೋಣ. ಈ ಕಾರಣದಿಂದ ಉತ್ಪಾದನ ವೆಚ್ಚ ಮತ್ತು ರಫ್ತು ಸರಕುಗಳ ಬೆಲೆಗಳು ಕುಸಿಯುತ್ತವೆ. ರಫ್ತು ಸರಕುಗಳ ಬೆಲೆಗಳ ಇಳಿಕೆಯ ಪರಿಣಾಮವಾಗಿ ಸರಕು ವ್ಯಾಪಾರದ ಕರಾರುಗಳು ಇನ್ನೂ ಕೆಳಮಟ್ಟಕ್ಕೆ ಬರುತ್ತವೆ. ಆದರೆ ವಾಸ್ತವವಾಗಿ ಆ ದೇಶವು ಮೊದಲಿಗಿಂತ ಕೆಳಮಟ್ಟದಲ್ಲಿರುವುದಿಲ್ಲ. ನಿರ್ದಿಷ್ಟ ಮೌಲ್ಯದ ರಫ್ತುಗಳು ಮೊದಲಿಗಿಂತ ಕಡಿಮೆ ಮೌಲ್ಯದ ಆಮದು ಸರಕುಗಳನ್ನು ಪಡೆದರೂ ಸಹ ಆ ದೇಶವು ಉತ್ತಮವಾದ ಪರಿಸ್ಥಿತಿಯಲ್ಲಿರುತ್ತದೆ. ಇದೇಕೆಂದರೆ ನಿರ್ದಿಷ್ಟ ಗಾತ್ರದ ರಫ್ತುಗಳನ್ನು ಈಗ ಕಡಿಮೆ ಪ್ರಮಾಣದ ಸಂಪನ್ಮೂಲಗಳ ನೆರವಿನಿಂದ ಉತ್ಪಾದಿಸಬಹುದು. ಈ ಕಾರಣದಿಂದ ಆ ದೇಶವು ಮೊದಲಿನ ಪರಿಸ್ಥಿತಿಯಲ್ಲಿಯೇ ಇರುತ್ತದೆ.

5. ಪಾವತಿ ಶಿಲ್ಕಿನ ವಾಸ್ತವ ಚಿತ್ರಣವನ್ನು ನೀಡಲು ವಿಫಲತೆ (Failure to provide Real Picture of Balance of Payments): ದೇಶವೊಂದರ ಪಾವತಿ ಶಿಲ್ಕು ಸರಕುಗಳ ಮತ್ತು ಸೇವೆಗಳ ರಫ್ತುಗಳನ್ನು ಮತ್ತು ಆಮದುಗಳನ್ನು ಮಾತ್ರ ಒಳಗೊಂಡಿದ್ದರೆ ಹಾಗೂ ಪಾವತಿ ಶಿಲ್ಕು ಮೂಲ ವರ್ಷದಲ್ಲಿ ಮತ್ತು ಪರಿಗಣಿತ ವರ್ಷಗಳಲ್ಲಿ ಸಮತೋಲನದಲ್ಲಿದ್ದರೆ ಮಾತ್ರ ಸರಕು ವ್ಯಾಪಾರದ ಕರಾರುಗಳ ಪರಿಕಲ್ಪನೆಯು ಔಚಿತ್ಯಪೂರ್ಣವಾಗಿರು

ತ್ತದೆ. ಬದಲಾಗಿ ಪಾವತಿ ಶಿಲ್ಕು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಉಡುಗೊರೆಗಳು, ಇತರೆ ರೂಪಗಳ ಹಣದ ರವಾನೆಗಳು ಮೊದಲಾದ ಏಕಮುಖ ಸಂದಾಯಗಳನ್ನು ಮತ್ತು ಕೋರಿಕೆಯಿಲ್ಲದ ರಫ್ತುಗಳನ್ನು ಮತ್ತು ಆಮದುಗಳನ್ನು ಒಳಗೊಂಡಿದ್ದರೆ ಪಾವತಿ ಶಿಲ್ಕು ಅಸಮತೋಲನಕ್ಕೆ ಈಡಾಗುತ್ತದೆ. ಆಗ ವ್ಯಾಪಾರದಿಂದ ದೊರಕುವ ಲಾಭಗಳನ್ನು ಮಾಪನ ಮಾಡಲು ನಿವ್ವಳ ಸಾಟಿ ವಿನಿಮಯ ವ್ಯಾಪಾರದ ಕರಾರುಗಳು ಪ್ರಯೋಜನಕಾರಿಯಾಗುವುದಿಲ್ಲ.

ಉಪಸಂಹಾರ

ನಿವ್ವಳ ಸಾಟಿ ವಿನಿಮಯ ವ್ಯಾಪಾರದ ಷರತ್ತುಗಳು ವ್ಯಾಪಾರ ಪರಿಸ್ಥಿತಿಯಲ್ಲಿ ಅಲ್ಪಾವಧಿಯ ಬದಲಾವಣೆಗಳನ್ನು ಮಾಪನ ಮಾಡಲು ಅತ್ಯಂತ ಸೂಕ್ತವಾದ ಮತ್ತು ಪ್ರಯೋಜನಕಾರಿಯಾದ ಸಾಧನ ಎಂದು ವ್ಯಾಪಕವಾಗಿ ಅಂಗೀಕರಿಸಲಾಗಿದೆ. ಆದಾಗ್ಯೂ ಈ ಪರಿಕಲ್ಪನೆಯ ಮುಖ್ಯ ದೋಷವೆಂದರೆ ಅದು ವ್ಯಾಪಾರದ ಪರಿಮಾಣದ ಬಗೆಗೆ ಮಾಹಿತಿ ನೀಡದಿರುವುದರಿಂದ ಪಾವತಿ ಶಿಲ್ಕನ್ನು ನಿರ್ಲಕ್ಷಿಸುತ್ತದೆ. ಅಂದರೆ ಯಾವುದೇ ದೇಶದ ವಿದೇಶೀ ಪಾವತಿ ಶಿಲ್ಕು ಉತ್ತಮಗೊಂಡಿದೆಯೇ ಅಥವಾ ಪ್ರತಿಕೂಲಕರವಾಗಿದೆಯೇ ಎಂಬ ಮಾಹಿತಿ ನಿವ್ವಳ ಸಾಟಿ ವಿನಿಮಯ ವ್ಯಾಪಾರ ಷರತ್ತುಗಳ ಪರಿಕಲ್ಪನೆಯಿಂದ ದೊರೆಯುವುದಿಲ್ಲ.

ಯಾವುದೊಂದು ದೇಶಕ್ಕೆ ನಿವ್ವಳ ಸಾಟಿ ವಿನಿಮಯ ವ್ಯಾಪಾರ ಷರತ್ತುಗಳು ಅನುಕೂಲಕರವಾಗಿವೆ ಎಂದಾದರೆ ಆ ದೇಶದ ರಫ್ತುಗಳು ಮೊದಲಿನಷ್ಟೇ ಇವೆಯೇ ಅಥವಾ ಕಡಿಮೆ ಗಾತ್ರದ ರಫ್ತುಗಳೊಡನೆ ಮೊದಲಿನಷ್ಟೇ ಗಾತ್ರದ ಆಮದುಗಳನ್ನು ವಿನಿಮಯ ಮಾಡಿಕೊಳ್ಳಲಾಗುತ್ತಿದೆಯೋ ಅಥವಾ ಮೊದಲಿನಷ್ಟೇ ಗಾತ್ರದ ರಫ್ತುಗಳಿಗೆ ಹೆಚ್ಚಿನ ಪ್ರಮಾಣದ ಆಮದುಗಳನ್ನು ಪಡೆಯಲಾಗುತ್ತಿದೆಯೋ ಅಥವಾ ರಫ್ತುಗಳು ಆಮದುಗಳನ್ನು ಮೀರಿದ್ದು ಹೆಚ್ಚುವರಿಯಾಗಿ ದೊರತ ಆದಾಯವನ್ನು ವಿದೇಶಗಳಲ್ಲಿ ಹೂಡಿಕೆ ಮಾಡಲಾಗುತ್ತಿದೆಯೋ ಎಂಬಿವೇ ಮುಂತಾದ ಪ್ರಶ್ನೆಗಳಿಗೆ ಸ್ಪಷ್ಟ ಉತ್ತರ ಸಿಗುವುದಿಲ್ಲ.

2. ಒಟ್ಟಿನ ಸಾಟಿ ವಿನಿಮಯ ವ್ಯಾಪಾರ ಷರತ್ತುಗಳು
(Gross Barter Terms of Trade)

ನಿವ್ವಳ ಸಾಟಿ ವಿನಿಮಯ ವ್ಯಾಪಾರ ಷರತ್ತುಗಳ ಪರಿಕಲ್ಪನೆಯ ನ್ಯೂನತೆಯನ್ನು ಹೋಗಲಾಡಿಸಲು ಒಟ್ಟಿನ ಸಾಟಿ ವಿನಿಮಯ ವ್ಯಾಪಾರ ಷರತ್ತುಗಳ ಪರಿಕಲ್ಪನೆಯನ್ನು ಟಾಸಿಗ್ ಪರಿಚಯಿಸಿದನು. ಯಾವುದೊಂದು ದೇಶದ ರಫ್ತುಗಳ ಒಟ್ಟು ಭೌತಿಕ ಪರಿಮಾಣಕ್ಕೆ ಆ ದೇಶದ ಆಮದುಗಳ ಒಟ್ಟು ಭೌತಿಕ ಪರಿಮಾಣದ ಅನುಪಾತವೇ ಒಟ್ಟಿನ ಸಾಟಿ ವಿನಿಮಯ ವ್ಯಾಪಾರ ಷರತ್ತುಗಳು. ಅಂದರೆ ಇಲ್ಲಿ ಆಮದು ಬೆಲೆಗಳನ್ನು ರಫ್ತು ಬೆಲೆಗಳಿಗೆ ಸಂಬಂಧಿಸುವ ಬದಲು ಆಮದುಗಳ ಪರಿಮಾಣ ಮತ್ತು ರಫ್ತುಗಳ ಪರಿಮಾಣವನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಆ ಪ್ರಕಾರ, ಒಟ್ಟು ರಫ್ತುಗಳ ಗಾತ್ರ ಮತ್ತು ಒಟ್ಟು

ಆಮದುಗಳ ಗಾತ್ರದ ನಡುವಿನ ಸಂಬಂಧದ ಸೂಚ್ಯಂಕವೇ ಒಟ್ಟಿನ ಸಾಟಿ ವಿನಿಮಯ ವ್ಯಾಪಾರ ಷರತ್ತುಗಳು.

ಈ ಪರಿಕಲ್ಪನೆಯನ್ನು ಕೆಳಗಿನ ಸೂತ್ರದ ಸಹಾಯದಿಂದ ಅರ್ಥಮಾಡಿಕೊಳ್ಳಬಹುದು.

$$Tg = \frac{Qx}{Qm} \times 100$$

ಈ ಸೂತ್ರದಲ್ಲಿ

Tg = ಒಟ್ಟಿನ ಸಾಟಿ ವಿನಿಮಯ ವ್ಯಾಪಾರ ಷರತ್ತುಗಳು

Qx = ರಫ್ತುಗಳ ಪರಿಮಾಣ

Qm = ಆಮದುಗಳ ಗಾತ್ರ

ಯಾವುದೊಂದು ದೇಶದ ನಿರ್ದಿಷ್ಟ ಪರಿಮಾಣದ ರಫ್ತುಗಳಿಗೆ ಹೆಚ್ಚಿನ ಪರಿಮಾಣದ ರಫ್ತುಗಳಿಗೆ ಕಡಿಮೆ ಪ್ರಮಾಣದ ಆಮದುಗಳನ್ನು ಪಡೆದುಕೊಳ್ಳಲಾಗುತ್ತಿದ್ದರೆ ವ್ಯಾಪಾರದ ಷರತ್ತುಗಳು ಆ ದೇಶಕ್ಕೆ ಪ್ರತಿಕೂಲಕರವಾಗಿವೆ ಎಂಬುದು ಸೂಚ್ಯಾರ್ಥ.

ಮೂಲ ವರ್ಷದೊಡನೆ ಹೋಲಿಸಿದಂತೆ ಪ್ರಸಕ್ತ ವರ್ಷದಲ್ಲಿ ಒಟ್ಟಿನ ಸಾಟಿ ವಿನಿಮಯ ವ್ಯಾಪಾರ ಷರತ್ತುಗಳು ಅಧಿಕಗೊಂಡಿವೆ ಎಂದಾದರೆ ವ್ಯಾಪಾರದ ಷರತ್ತುಗಳು ಆ ದೇಶಕ್ಕೆ ಅನುಕೂಲಕರವಾಗಿವೆ ಎಂದರ್ಥ. ಏಕೆಂದರೆ ಆಗ ಒಂದು ನಿರ್ದಿಷ್ಟ ಪರಿಮಾಣದ ರಫ್ತು ಸರಕುಗಳಿಗೆ ಮೊದಲಿಗಿಂತ ಹೆಚ್ಚಿನ ಪರಿಮಾಣದ ಆಮದುಗಳನ್ನು ಪಡೆದುಕೊಳ್ಳಲು ಸಾಧ್ಯವಾಗಿದೆ ಎಂದರ್ಥ.

ರಫ್ತುಗಳ ಮೌಲ್ಯದ ಸೂಚ್ಯಾಂಕವನ್ನು ಬೆಲೆಗಳ ಸೂಚ್ಯಾಂಕದಿಂದ ಭಾಗಿಸುವ ಮೂಲಕ ರಫ್ತುಗಳ ಪರಿಮಾಣವನ್ನು ಕಂಡುಹಿಡಿಯಲಾಗುವುದು. ಅಂತೆಯೇ ಆಮದುಗಳ ಮೌಲ್ಯದ ಸೂಚ್ಯಾಂಕವನ್ನು ಬೆಲೆಗಳ ಸೂಚ್ಯಾಂಕದಿಂದ ಭಾಗಿಸುವ ಮುಖಾಂತರ ಆಮದುಗಳ ಪರಿಮಾಣವನ್ನು ಲೆಕ್ಕಾಚಾರ ಮಾಡಲಾಗುತ್ತದೆ.

ದೋಷಗಳು
(Defects)

ಒಟ್ಟಿನ ಸಾಟಿ ವಿನಿಮಯ ವ್ಯಾಪಾರದ ಕರಾರುಗಳ ಪರಿಭಾವನೆಯೂ ಸಹ ದೋಷಗಳಿಂದ ಕೂಡಿದೆ. ಆ ಕಾರಣದಿಂದ ಇದು ಟೀಕೆಗಳಿಗೆ ಒಳಗಾಗಿದೆ.

1. ಬಂಡವಾಳದ ವರ್ಗಾವಣೆ ಮತ್ತು ಸರಕುಗಳ ವರ್ಗಾವಣೆಯನ್ನು ವರ್ಗೀಕರಿಸದಿರುವಿಕೆ (No Classification of Transfer of Capital and Transfer of Goods) : ಒಂದು ದೇಶವು ಇನ್ನೊಂದು ದೇಶಕ್ಕೆ ಮಾಡುವ ಏಕಮುಖ ವರ್ಗಾವಣೆ

ಗಳನ್ನು ಇದು ಆಮದು ಮತ್ತು ರಫ್ತುಗಳ ಪ್ರಮಾಣದ ಸೂಚ್ಯಾಂಕದಲ್ಲಿ ಸೇರಿಸುತ್ತದೆ. ಆದ್ದರಿಂದ ವಿವಿಧ ರೀತಿಗಳ ವಿಕಮುವಿ ವರ್ಗಾವಣೆಗಳನ್ನು ಬೇರೆಬೇರೆಯಾಗಿ ವರ್ಗೀಕರಿಸಲು ಹಾಗೂ ಆಮದುಗಳ ಮತ್ತು ರಫ್ತುಗಳ ಪ್ರಮಾಣದಿಂದ ಅವುಗಳನ್ನು ಪ್ರತ್ಯೇಕಿಸಲು ಸಾಧ್ಯವಾಗುವುದಿಲ್ಲ. ಉದಾಹರಣೆಗೆ, ಈ ಸೂಚಿಯು ಬಂಡವಾಳದ ವರ್ಗಾವಣೆ ಮತ್ತು ಸರಕುಗಳ ವರ್ಗಾವಣೆ ಎರಡನ್ನೂ ಒಂದೇ ವರ್ಗ ಎಂದು ಪರಿಗಣಿಸುತ್ತದೆ.

2. ಸರಕುಗಳ ಸಂಯೋಜನೆ ಮತ್ತು ಗುಣಮಟ್ಟದ ಬದಲಾವಣೆಯ ನಿರ್ಲಕ್ಷ್ಯ (Neglect of Changes in Combination and Quality of Commodities): ಸರಕು ವ್ಯಾಪಾರದ ಕರಾರುಗಳಂತೆಯೇ ಒಟ್ಟಿನ ಸಾಟಿ ವಿನಿಮಯ ವ್ಯಾಪಾರದ ಕರಾರುಗಳ ಸೂಚಿಯು ಸಹ ವ್ಯಾಪಾರದಲ್ಲಿ ಒಳಗೊಂಡಿರುವ ಸರಕುಗಳ ಸಂಯೋಜನೆ ಮತ್ತು ಗುಣಮಟ್ಟದಲ್ಲಿ ಸಂಭವಿಸುವ ಬದಲಾವಣೆಗಳನ್ನು ನಿರ್ಲಕ್ಷಿಸುತ್ತದೆ.

3. ಆದಾಯ ವ್ಯಾಪಾರ ಷರತ್ತುಗಳು
(Income Terms of Trade)

ನಿವ್ವಳ ಮತ್ತು ಒಟ್ಟಿನ ಸಾಟಿ ವಿನಿಮಯ ವ್ಯಾಪಾರ ಷರತ್ತುಗಳ ಪರಿಕಲ್ಪನೆಗಳಲ್ಲಿರುವ ನ್ಯೂನತೆಗಳಿಂದ ಹೊರಬರಲು ಜೆ.ಎಸ್. ಡಾರೆನ್ಸ್ ಮತ್ತು ಸ್ಟೇಹ್ಲ್ ಎಂಬ ಅರ್ಥಶಾಸ್ತ್ರಜ್ಞರು "ಆದಾಯ ವ್ಯಾಪಾರ ಷರತ್ತುಗಳು" ಎಂಬ ಪರಿಕಲ್ಪನೆಯನ್ನು ಪರಿಚಯಿಸಿದರು. ಈ ಪರಿಕಲ್ಪನೆಯು ಯಾವುದೊಂದು ದೇಶದ ಅಂತರರಾಷ್ಟ್ರೀಯ ಆದಾಯವನ್ನು ವ್ಯಕ್ತಪಡಿಸುತ್ತದೆ.

ಸರಕು ವ್ಯಾಪಾರ ಷರತ್ತುಗಳು ರಫ್ತುಗಳು ಬೆಲೆಗಳಲ್ಲಿ ಮತ್ತು ಆಮದುಗಳ ಬೆಲೆಗಳಲ್ಲಿ ಸಂಭವಿಸಿರುವ ಬದಲಾವಣೆಗಳ ಪರಿಣಾಮವಾಗಿ ವ್ಯಾಪಾರದಿಂದ ಉದ್ಭವಿಸುವ ಪ್ರಯೋಜನಗಳನ್ನು ವಿವರಿಸಿದರೆ, **ಆದಾಯ ವ್ಯಾಪಾರದ ಷರತ್ತುಗಳು ಬೆಲೆಯ ಬದಲಾವಣೆಗಳ ಜೊತೆಗೆ ವ್ಯಾಪಾರದಲ್ಲಿ ಬದಲಾವಣೆಗಳ ಗಾತ್ರವನ್ನೂ ಸಹ ವ್ಯಕ್ತಪಡಿಸುತ್ತವೆ.** ವ್ಯಾಪಾರದಿಂದ ಲಭಿಸುವ ಸಮಗ್ರ ಪ್ರಯೋಜನಗಳ ಸೂಚಿಯಾಗಿ ಆದಾಯ ವ್ಯಾಪಾರ ಷರತ್ತುಗಳು ಕಾರ್ಯ ನಿರ್ವಹಿಸುತ್ತವೆ.

ರಫ್ತುಗಳ ಪರಿಮಾಣವನ್ನು ನಿವ್ವಳ ಸಾಟಿ ವಿನಿಮಯ ವ್ಯಾಪಾರ ಷರತ್ತುಗಳೊಂದಿಗೆ ಗುಣಿಸಿದಾಗ ಆದಾಯ ವ್ಯಾಪಾರ ಷರತ್ತುಗಳು ದೊರೆಯುತ್ತವೆ.

$$Ti = Qx\left(\frac{Px}{Pm}\right)$$

ಈ ಸೂತ್ರದಲ್ಲಿ –

Ti = ಆದಾಯ ವ್ಯಾಪಾರ ಷರತ್ತುಗಳು
Qx = ರಫ್ತುಗಳ ಪರಿಮಾಣ
Px = ರಫ್ತುಗಳ ಬೆಲೆಗಳು
Pm = ಆಮದುಗಳ ಬೆಲೆಗಳು

ನಿರ್ದಿಷ್ಟ ಆಮದು ಬೆಲೆಗಳಲ್ಲಿ, ರಫ್ತು ಬೆಲೆಗಳು ಏರಿದರೆ ಮತ್ತು ದೇಶದ ರಫ್ತುಗಳ ಪರಿಮಾಣವು ಅದೇ ಪ್ರಮಾಣದಲ್ಲಿ ಕುಸಿದರೆ ನಿವ್ವಳ ಸಾಟಿ ವಿನಿಮಯ ವ್ಯಾಪಾರ ಷರತ್ತುಗಳು ಅನುಕೂಲಕರವಾಗಿ ಪರಿಣಮಿಸುತ್ತವೆ. ಆದಾಯ ವ್ಯಾಪಾರ ಷರತ್ತುಗಳನ್ನು ಯಾವುದೊಂದು ದೇಶದ **'ಆಮದು ಮಾಡಿಕೊಳ್ಳುವ ಸಾಮರ್ಥ್ಯ'** (Capacity to Import) ಎಂತಲೂ ಕರೆಯಲಾಗುತ್ತದೆ. ಏಕೆಂದರೆ ರಫ್ತುಗಳ ಪರಿಮಾಣವನ್ನು ನಿವ್ವಳ ಸಾಟಿ ವಿನಿಮಯ ವ್ಯಾಪಾರ ಷರತ್ತುಗಳೊಡನೆ ಗುಣಿಸಿದಾಗ ಆ ದೇಶವು ಎಷ್ಟು ಪರಿಮಾಣವನ್ನು ಆಮದು ಮಾಡಿಕೊಳ್ಳಲು ಶಕ್ತವಾಗಿದೆ ಎಂಬುದು ತಿಳಿದುಬರುತ್ತದೆ.

ದೋಷಗಳು
(Defects)

ಆದಾಯ ವ್ಯಾಪಾರದ ಕರಾರುಗಳ ಸೂಚಿಯು ಕೆಲವು ಮಿತಿಗಳಿಂದ ಕೂಡಿದೆ. ಅವುಗಳೆಂದರೆ:

1. ವ್ಯಾಪಾರದ ಲಾಭ ಅಥವಾ ನಷ್ಟವನ್ನು ಮಾಪನ ಮಾಡಲು ಸಾಧ್ಯವಾಗದಿರುವಿಕೆ (Not Possible to Measure Gains from or Loss in Trade): ಅಂತರರಾಷ್ಟ್ರೀಯ ವ್ಯಾಪಾರದಿಂದ ದೊರಕುವ ಲಾಭ ಅಥವಾ ಸಂಭವಿಸುವ ನಷ್ಟವನ್ನು ನಿಖರವಾಗಿ ಮಾಪನ ಮಾಡಲು ಆದಾಯ ವ್ಯಾಪಾರದ ಕರಾರುಗಳ ಸೂಚಿಯಿಂದ ಸಾಧ್ಯವಾಗುವುದಿಲ್ಲ. ಯಾವುದೊಂದು ದೇಶದ ಆಮದು ಮಾಡಿಕೊಳ್ಳುವ ಸಾಮರ್ಥ್ಯವು ಹೆಚ್ಚಿದೆ ಎಂದಾದರೆ, ಆ ದೇಶವು ಮೊದಲಿಗಿಂತ ಹೆಚ್ಚಾಗಿ ರಫ್ತು ಮಾಡುತ್ತಿದೆ ಎಂಬುದನ್ನು ಅದು ಸೂಚಿಸುತ್ತದೆ. ಏಕೆಂದರೆ ಸರಕುಗಳನ್ನು ರಫ್ತು ಮಾಡುವಿಕೆಯಿಂದ ಆ ದೇಶದ ಸಂಪನ್ಮೂಲ ಗಳು ಅಧಿಕಗೊಳ್ಳುವುದರಿಂದ ಅವುಗಳನ್ನು ಸ್ವದೇಶದಲ್ಲಿ ಉಪಯೋಗಿಸಿಕೊಂಡು ಜನರ ಜೀವನ ಮಟ್ಟವನ್ನು ಉತ್ತಮಪಡಿಸಬಹುದು.

2. ಸಂಪೂರ್ಣ ಆಮದು ಸಾಮರ್ಥ್ಯವನ್ನು ಪ್ರತಿಬಿಂಬಿಸಲು ವಿಫಲತೆ (Failure to Reflect the Full Import Capacity): ಆದಾಯ ವ್ಯಾಪಾರದ ಕರಾರುಗಳ ಒಂದು ಮುಖ್ಯವಾದ ದೋಷವೆಂದರೆ ಅದು ಒಂದು ದೇಶದ ಸಂಪೂರ್ಣ ಆಮದು ಸಾಮರ್ಥ್ಯಕ್ಕೆ ಬದಲಾಗಿ ಅದರ ರಫ್ತು ಆಧಾರಿತ ಆಮದು ಸಾಮರ್ಥ್ಯ ವನ್ನು ಮಾತ್ರ ಪ್ರತಿಬಿಂಬಿಸುತ್ತದೆ. ರಫ್ತು ಆಧಾರಿತ ಆಮದು ಸಾಮರ್ಥ್ಯ ಎಂದರೆ ರಫ್ತು ಮಾಡಿದ ಸರಕುಗಳ ಮೌಲ್ಯಕ್ಕೆ

ಪ್ರತಿಯಾಗಿ ಎಷ್ಟು ಆಮದುಗಳನ್ನು ಮಾಡಿಕೊಳ್ಳಬಹುದೋ ಆ ಪ್ರಮಾಣ. ಆದರೆ ಸಂಪೂರ್ಣ ಆಮದು ಸಾಮರ್ಥ್ಯ ಎಂದರೆ ರಫ್ತು ಸರಕುಗಳ ಮೌಲ್ಯದ ಜೊತೆಗೆ ಇತರ ಮೂಲಗಳಿಂದ ಲಭಿಸುವ ವಿದೇಶೀ ವಿನಿಮಯ ಸಂಪನ್ಮೂಲಗಳ ನೆರವಿನಿಂದ ಪಡೆದುಕೊಳ್ಳಬಹುದಾದ ಒಟ್ಟು ಆಮದುಗಳ ಪ್ರಮಾಣ ಎಂದರ್ಥ. ಉದಾಹರಣೆಗೆ, ಒಂದು ದೇಶದ ಆದಾಯ ವ್ಯಾಪಾರದ ಕರಾರುಗಳು ಕ್ಷೀಣಿಸಿದ್ದಾಗ್ಯೂ ಅದರ ವಿದೇಶೀ ವಿನಿಮಯ ಸಂಪನ್ಮೂಲಗಳ ಗಳಿಕೆ ಹೆಚ್ಚಿದ್ದರೆ ಅದರ ಆಮದು ಮಾಡಿಕೊಳ್ಳುವ ಸಾಮರ್ಥ್ಯವು ವಾಸ್ತವವಾಗಿ ಅಧಿಕಗೊಂಡಿರುತ್ತದೆ. ಆ ಕಾರಣದಿಂದ ಅಂತರರಾಷ್ಟ್ರೀಯ ವ್ಯಾಪಾರದಿಂದ ದೊರೆಯುವ ಲಾಭಗಳನ್ನು ಅಳತೆ ಮಾಡಲು ಆದಾಯ ವ್ಯಾಪಾರದ ಕರಾರುಗಳು ದೋಷಪೂರ್ಣ ಸೂಚಿಯಾಗಿದೆ.

4. ಏಕ ಘಟಕ ವ್ಯಾಪಾರದ ಕರಾರುಗಳು
(Single Factoral Terms of Trade)

ಸರಕು ವ್ಯಾಪಾರದ ಕರಾರುಗಳು ತೀವ್ರವಾದ ಮಿತಿಗಳಿಂದ ಬಳಲುತ್ತಿವೆ. ಅತಿ ಮುಖ್ಯವಾಗಿ ಅವು ರಫ್ತು ಕೈಗಾರಿಕೆಗಳಲ್ಲಿನ ಉತ್ಪಾದಕತೆಯ ಬದಲಾವಣೆಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಈ ದೋಷದಿಂದ ಹೊರಬರಲು **ಜೇಕಬ್ ವೈನರ್ 'ಏಕ ಘಟಕ ವ್ಯಾಪಾರದ ಕರಾರುಗಳು'** ಪರಿಭಾವನೆಯನ್ನು ಪ್ರಸ್ತುತಪಡಿಸಿದ್ದಾನೆ. ಸ್ವದೇಶೀ ರಫ್ತು ಕೈಗಾರಿಕೆಯಲ್ಲಿ ಸಂಭವಿಸುವ ಬದಲಾವಣೆಗಳನ್ನು ಗಣನೆಗೆ ತೆಗೆದುಕೊಳ್ಳುವುದು ಈ ಪರಿಭಾವನೆಯ ವೈಶಿಷ್ಟ್ಯವಾಗಿದೆ. ಏಕ ಘಟಕ ವ್ಯಾಪಾರದ ಕರಾರುಗಳನ್ನು ಕಂಡುಹಿಡಿಯಲು ಸರಕು ವ್ಯಾಪಾರದ ಕರಾರುಗಳ ಸೂಚ್ಯಂಕವನ್ನು ಸ್ವದೇಶೀ ರಫ್ತು ಉದ್ಯಮಗಳಲ್ಲಿನ ಉತ್ಪಾದಕತೆಯ ಬದಲಾವಣೆಗಳ ಸೂಚ್ಯಂಕದಿಂದ ಗುಣಿಸಲಾಗುತ್ತದೆ.

$$Ts = Tc.Fx = \frac{Px.Fx}{Pm}$$

$$\therefore \left(Tc = \frac{Px}{Pm}\right)$$

ಇದರಲ್ಲಿ

Ts = ಏಕ ಘಟಕ ವ್ಯಾಪಾರದ ಕರಾರುಗಳು
Tc = ಸರಕು ವ್ಯಾಪಾರದ ಕರಾರುಗಳು
Fx = ರಫ್ತು ಕೈಗಾರಿಕೆಗಳ ಉತ್ಪಾದಕತೆಯ ಸೂಚ್ಯಂಕ
Px = ರಫ್ತು ಕೈಗಾರಿಕೆಗಳ ಬೆಲೆಯ ಸೂಚ್ಯಂಕ
Pm = ಆಮದು ಸರಕುಗಳ ಬೆಲೆಯ ಸೂಚ್ಯಂಕ

ದೇಶದ ರಫ್ತು ಕೈಗಾರಿಕೆಗಳ ಉತ್ಪಾದಕತೆಯು ಹೆಚ್ಚಿದರೆ ಅದರ ಘಟಕ ವ್ಯಾಪಾರದ ಕರಾರುಗಳು ಉತ್ತಮಗೊಳ್ಳುತ್ತವೆ. ಇಲ್ಲಿ ಗಮನಾರ್ಹವಾದ ಅಂಶವೆಂದರೆ ದೇಶದ ರಫ್ತು ಕೈಗಾರಿಕೆಗಳ ಉತ್ಪಾದಕತೆಯು ಹೆಚ್ಚಿದಾಗ ಅದರ ಸರಕು ವ್ಯಾಪಾರದ ಕರಾರುಗಳು ಕ್ಷೀಣಿಸಿದರೂ ಸಹ ಘಟಕ ವ್ಯಾಪಾರದ ಕರಾರುಗಳು ಉತ್ತಮಗೊಳ್ಳುತ್ತವೆ. ಉದಾಹರಣೆಗೆ, ಒಂದು ದೇಶದ ರಫ್ತು ಕೈಗಾರಿಕೆಗಳಲ್ಲಿ ಉತ್ಪಾದಕತೆಯು ಅಧಿಕಗೊಂಡರೆ ಉತ್ಪಾದನೆಯ ಹೆಚ್ಚಳದ ಕಾರಣದಿಂದ ರಫ್ತು ಸರಕುಗಳ ಬೆಲೆಗಳು ಆಮದು ಸರಕುಗಳ ಬೆಲೆಗಳಿಗಿಂತ ಕಡಿಮೆಯಾಗುತ್ತವೆ. ಈ ಕಾರಣದಿಂದ ಸರಕು ವ್ಯಾಪಾರದ ಕರಾರುಗಳು ಕ್ಷೀಣಿಸಿದರೂ ಸಹ ಘಟಕ ವ್ಯಾಪಾರದ ಕರಾರುಗಳು ಉತ್ತಮಗೊಳ್ಳುತ್ತವೆ.

ಮಿತಿಗಳು
(Limitations)

ಏಕ ಘಟಕ ವ್ಯಾಪಾರದ ಕರಾರುಗಳ ಸೂಚಿಯು ಕೆಲವು ಮಿತಿಗಳನ್ನು ಹೊಂದಿದೆ. ಅವು ಕೆಳಗಿನಂತಿವೆ.

1. **ಅಂಕಿ ಅಂಶಗಳ ಕೊರತೆ** (Lack of Data): ಉತ್ಪಾದಕತೆಯ ಸೂಚಿಯನ್ನು ಸಮರ್ಪಕವಾಗಿ ಲೆಕ್ಕಾಚಾರ ಮಾಡಲು ಅಗತ್ಯವಿರುವ ಅಂಕಿ ಅಂಶಗಳನ್ನು ಪಡೆದುಕೊಳ್ಳುವುದು ಕಷ್ಟಕರವಾಗಿರುತ್ತದೆ.
2. **ಬೇರೆ ದೇಶಗಳಲ್ಲಿನ ಉತ್ಪಾದನ ವೆಚ್ಚದ ನಿರ್ಲಕ್ಷ್ಯ** (Neglect of Cost of Production in Other Countries): ಏಕ ಘಟಕ ವ್ಯಾಪಾರದ ಕರಾರುಗಳು ಬೇರೆ ದೇಶಗಳ ಆಮದು ಕೈಗಾರಿಕೆಗಳಲ್ಲಿನ ಉತ್ಪಾದನ ವೆಚ್ಚವನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.

5. ದ್ವಿ ಘಟಕ ವ್ಯಾಪಾರದ ಕರಾರುಗಳು
(Double Factoral Terms of Trade)

ಏಕ ಘಟಕ ವ್ಯಾಪಾರದ ಕರಾರುಗಳ ಮಿತಿಯನ್ನು ನಿವಾರಿಸಲು ವೈನರ್ ದ್ವಿ ಘಟಕ ವ್ಯಾಪಾರದ ಕರಾರುಗಳ ಪರಿಭಾವನೆಯನ್ನು ವಿಕಾಸಗೊಳಿಸಿದ್ದಾನೆ. ಈ ಪರಿಭಾವನೆಯು ಸ್ವದೇಶೀ ರಫ್ತು ವಲಯ ಮತ್ತು ಒಂದು ದೇಶದ ಆಮದು ಸರಕುಗಳನ್ನು ಉತ್ಪಾದಿಸುವ ವಿದೇಶೀ ರಫ್ತು ವಲಯ ಇವೆರಡರ ಉತ್ಪಾದಕತೆಯ ಬದಲಾವಣೆಗಳನ್ನು ಗಣನೆಗೆ ತೆಗೆದುಕೊಳ್ಳುತ್ತದೆ.

ದ್ವಿಘಟಕ ವ್ಯಾಪಾರದ ಕರಾರುಗಳ ಸೂಚಿಯನ್ನು ಮುಂದಿನ ಸೂತ್ರದ ಸಹಾಯದಿಂದ ವ್ಯಕ್ತಪಡಿಸಬಹುದಾಗಿದೆ.

$$Td = Tc.\frac{Fx}{Fm} = \frac{Px}{Pm} = \frac{Fx}{Fm}$$

$$\therefore \left(Tc = \frac{Px}{Pm} \right)$$

ಇದರಲ್ಲಿ Td = ದ್ವಿಘಟಕ ವ್ಯಾಪಾರದ ಕರಾರುಗಳು

$\frac{Px}{Pm}$ = ಸರಕು ವ್ಯಾಪಾರದ ಕರಾರುಗಳು

Fx = ರಫ್ತು ಉತ್ಪಾದಕತೆಯ ಸೂಚಿ

Fm = ಆಮದು ಉತ್ಪಾದಕತೆಯ ಸೂಚಿ

ಯಾವುದೊಂದು ದೇಶದ ರಫ್ತು ಸರಕುಗಳನ್ನು ಉತ್ಪಾದಿಸುವ ಸ್ವದೇಶೀ ಉತ್ಪಾದನಾಂಗಗಳ ಉತ್ಪಾದನ ದಕ್ಷತೆಯ ಬದಲಾವಣೆ ಮತ್ತು ಆ ದೇಶದ ಆಮದು ಸರಕುಗಳನ್ನು ಉತ್ಪಾದಿಸುವ ವಿದೇಶೀ ಉತ್ಪಾದನಾಂಗಗಳ ಉತ್ಪಾದನ ದಕ್ಷತೆಯ ಬದಲಾವಣೆಯ ಪರಿಣಾಮವಾಗಿ ಆ ದೇಶದ ವಿನಿಮಯ ದರದಲ್ಲಿ ಸಂಭವಿಸುವ ಬದಲಾವಣೆಯನ್ನು ಅಳತೆ ಮಾಡಲು ದ್ವಿಘಟಕ ವ್ಯಾಪಾರದ ಕರಾರುಗಳ ಪರಿಭಾವನೆಯು ಸಹಾಯ ಮಾಡುತ್ತದೆ. ಒಂದು ದೇಶದ ದ್ವಿಘಟಕ ವ್ಯಾಪಾರದ ಕರಾರುಗಳ ಸೂಚಿಯು ಉತ್ತಮಗೊಂಡಿದೆ ಎಂದಾದರೆ ರಫ್ತು ಸರಕುಗಳನ್ನು ಉತ್ಪಾದಿಸಲು ಆ ದೇಶವು ಬಳಸುವ ಉತ್ಪಾದನಾಂಗಗಳ ಉತ್ಪಾದನ ದಕ್ಷತೆಯು ಬೇರೆ ದೇಶವು ಉತ್ಪಾದಿಸುವ ಆಮದು ಸರಕುಗಳ ಉತ್ಪಾದನ ದಕ್ಷತೆಗಿಂತ ಅಧಿಕಗೊಂಡಿದೆ ಎಂದರ್ಥ.

ದ್ವಿಘಟಕ ವ್ಯಾಪಾರದ ಕರಾರುಗಳ ನ್ಯೂನತೆಗಳು

(Defects of Double Factoral Terms of Trade)

ದ್ವಿಘಟಕ ವ್ಯಾಪಾರದ ಕರಾರು ಪರಿಭಾವನೆಯೂ ಸಹ ಕೆಲವು ದೋಷಗಳಿಂದ ಬಳಲುತ್ತಿದೆ.

1. ಕಂಡುಹಿಡಿಯುವಿಕೆಯು ಕಷ್ಟಕರವಾದುದು (Estimation is Difficult): ಯಾವುದೇ ಒಂದು ದೇಶದ ದ್ವಿಘಟಕ ವ್ಯಾಪಾರದ ಕರಾರು ಸೂಚಿಯನ್ನು ಕಂಡುಹಿಡಿಯುವುದು ಪ್ರಾಯೋಗಿಕವಾಗಿ ಸಾಧ್ಯವಾಗದ ಕೆಲಸ. ಏಕೆಂದರೆ ದ್ವಿಘಟಕ ವ್ಯಾಪಾರದ ಕರಾರುಗಳ ಸೂಚಿಯನ್ನು ರಚಿಸಲು ಬೇರೆ ದೇಶದ ಆಮದು ಸರಕುಗಳ ಕೈಗಾರಿಕೆಗಳಲ್ಲಿನ ಉತ್ಪಾದನ ದಕ್ಷತೆಯ ಬದಲಾವಣೆಗಳನ್ನು ಅಳತೆ ಮಾಡಬೇಕಾಗಿರುತ್ತದೆ. ಅಲ್ಲದೆ ಈ ಬದಲಾವಣೆಗಳನ್ನು ಸ್ವದೇಶೀ ರಫ್ತು ಸರಕುಗಳ ಕೈಗಾರಿಕೆಗಳಲ್ಲಿನ ಉತ್ಪಾದನ ದಕ್ಷತೆಯ ಬದಲಾವಣೆಗಳೊಡನೆ ಹೋಲಿಕೆ ಮಾಡಬೇಕಾಗಿರುತ್ತದೆ. ಈ ಕಾರ್ಯವು ದುಸ್ಸಾಧ್ಯವಾದುದು.

2. ಪ್ರಾಯೋಗಿಕ ಮಹತ್ವವಿಲ್ಲದಿರುವಿಕೆ (No Practical Importance): ದ್ವಿಘಟಕ ವ್ಯಾಪಾರದ ಕರಾರುಗಳ ಪರಿಭಾವನೆಯು ಪ್ರಾಯೋಗಿಕ ಮಹತ್ವವನ್ನು ಸಹ

ಪಡೆದಿಲ್ಲ. ಏಕೆಂದರೆ ಯಾವುದೊಂದು ದೇಶದ ಆಮದು ಸರಕುಗಳನ್ನು ಉತ್ಪಾದಿಸಲು ಬೇರೊಂದು ದೇಶದಲ್ಲಿ ಅಗತ್ಯವಿರುವ ಉತ್ಪಾದನಾಂಗಗಳ ಪರಿಮಾಣ ಅಷ್ಟು ಮುಖ್ಯವಾದುದಲ್ಲ. ಮುಖ್ಯವಾಗಿ ಆವಶ್ಯಕವಾದುದು ಯಾವುದೆಂದರೆ ಒಂದು ನಿರ್ದಿಷ್ಟ ಪ್ರಮಾಣದ ರಫ್ತುಗಳಿಗೆ ಬದಲಿಯಾಗಿ ಆಮದು ಮಾಡಿಕೊಳ್ಳಬಹುದಾದ ಸರಕುಗಳ ಪ್ರಮಾಣ.

3. ಹೊಸತೇನನ್ನೂ ವಿವರಿಸುವುದಿಲ್ಲ (Does not Explain anything New): ಉತ್ಪಾದನೆಯಲ್ಲಿ ಸ್ಥಿರ ಪ್ರತಿಫಲ ನಿಯಮವು ಆಚರಣೆಯಲ್ಲಿದ್ದರೆ ಮತ್ತು ಉತ್ಪಾದನೆಯಲ್ಲಿ ಸಾಗಣೆ ವೆಚ್ಚಗಳನ್ನು ಪರಿಗಣಿಸದಿದ್ದರೆ, ದ್ವಿಘಟಕ ವ್ಯಾಪಾರದ ಕರಾರುಗಳ ಮತ್ತು ಸರಕು ವ್ಯಾಪಾರದ ಕರಾರುಗಳ ನಡುವೆ ವ್ಯತ್ಯಾಸವೇ ಇರುವುದಿಲ್ಲ. ಈ ದೃಷ್ಟಿಯಿಂದಲೂ ದ್ವಿಘಟಕ ವ್ಯಾಪಾರದ ಕರಾರುಗಳ ಪರಿಕಲ್ಪನೆಯು ಮಿತಿಯಿಂದ ಕೂಡಿದೆ.

6. ನೈಜ ವೆಚ್ಚ ವ್ಯಾಪಾರದ ಕರಾರುಗಳು

(Real Cost Terms of Trade)

ನೈಜ ವೆಚ್ಚ ವ್ಯಾಪಾರದ ಕರಾರುಗಳ ಪರಿಭಾವನೆಯೂ ಸಹ ಪ್ರಾಧ್ಯಾಪಕ ಜೇಕಬ್ ವೈನರ್‌ನಿಂದ ವಿಕಾಸಗೊಂಡಿದೆ. ಅಂತರರಾಷ್ಟ್ರೀಯ ವ್ಯಾಪಾರದಿಂದ ದೊರೆಯುವ ನೈಜ ಲಾಭವನ್ನು ಮಾಪನ ಮಾಡಲು ವೈನರ್ ಈ ಸೂಚಿಯನ್ನು ಬಳಸಿದ್ದಾನೆ. ಏಕ ಘಟಕ ವ್ಯಾಪಾರದ ಕರಾರುಗಳನ್ನು ರಫ್ತು ಸರಕುಗಳ ಉತ್ಪಾದನೆಯಲ್ಲಿ ಬಳಸಿರುವ ಉತ್ಪಾದಕ ಸಂಪನ್ಮೂಲಗಳ ಪ್ರತಿ ಘಟಕವೂ ಒಳಗೊಳ್ಳುವ ಅಪತುಷ್ಟಿಗುಣದ (Disutility) ಪ್ರಮಾಣದ ಸೂಚಿಯೊಡನೆ ಗುಣಿಸಿದಾಗ ನೈಜ ವೆಚ್ಚದ ವ್ಯಾಪಾರದ ಕರಾರುಗಳು ದೊರೆಯುತ್ತವೆ.

ಇದನ್ನು ಮುಂದಿನ ಸೂತ್ರದಿಂದ ವ್ಯಕ್ತಪಡಿಸಬಹುದು.

$$Tr = Ts.Rx = \frac{Px}{Pm}.Fx.Rx$$

$$\therefore \left(Tx = \frac{Px}{Pm} Fx. \right)$$

Tr = ನೈಜ ವೆಚ್ಚ ವ್ಯಾಪಾರದ ಕರಾರುಗಳು

Ts = ರಫ್ತು ಘಟಕ ವ್ಯಾಪಾರದ ಕರಾರುಗಳು

Rx = ರಫ್ತು ಸರಕುಗಳ ಉತ್ಪಾದನೆಯಲ್ಲಿ ತೊಡಗಿಸಿದ ಪ್ರತಿ ಘಟಕ ಸಂಪನ್ಮೂಲಗಳ ಅಪತುಷ್ಟಿಗುಣದ ಪ್ರಮಾಣದ ಸೂಚಿ.

ನೈಜ ವೆಚ್ಚ ವ್ಯಾಪಾರದ ಕರಾರುಗಳ ಸೂಚಿಯು ಅನುಕೂಲಕರವಾಗಿದ್ದರೆ ರಫ್ತು ಸರಕುಗಳ ಉತ್ಪಾದನೆಗೆ ತಗಲುವ ನೈಜ ವೆಚ್ಚಕ್ಕಿಂತ ಆಮದು ಮಾಡಿಕೊಂಡ ಸರಕುಗಳ ಪ್ರಮಾಣವು ಅಧಿಕವಾಗಿರುತ್ತದೆ ಎಂಬುದನ್ನು ಅದು ತೋರಿಸುತ್ತದೆ.

ನೈಜ ವೆಚ್ಚ ವ್ಯಾಪಾರ ಕರಾರುಗಳ ಪರಿಭಾವನೆಯೂ ಸಹ ದೋಷಮುಕ್ತವಾಗಿಲ್ಲ. ಸ್ವದೇಶೀ ಅನುಭೋಗಕ್ಕೆ ಬಳಸಬಹುದಾಗಿದ್ದು, ಆದರೆ ರಫ್ತು ಮಾಡುವುದಕ್ಕಾಗಿ ಉತ್ಪಾದಿಸಿದ ಸರಕುಗಳು ಒಳಗೊಳ್ಳುವ ನೈಜ ವೆಚ್ಚವನ್ನು ಅಳೆಯಲು ಈ ಸೂಚಿಯು ವಿಫಲಗೊಳ್ಳುತ್ತದೆ.

7. ತುಷ್ಟಿಗುಣ ವ್ಯಾಪಾರದ ಕರಾರುಗಳು
(Utility Terms of Trade)

ತುಷ್ಟಿಗುಣ ವ್ಯಾಪಾರದ ಕರಾರುಗಳ ಪರಿಭಾವನೆಯನ್ನು ಸಹ **ಜೇಕಬ್ ವೈನರ್** ಅಭಿವೃದ್ಧಿಪಡಿಸಿದ್ದಾನೆ. ನೈಜ ವೆಚ್ಚ ವ್ಯಾಪಾರದ ಕರಾರುಗಳಲ್ಲಿ ಇರುವ ದೋಷದಿಂದ ಹೊರಬರಲು ಈ ಪರಿಭಾವನೆಯನ್ನು ಪ್ರಸ್ತುತಪಡಿಸಲಾಗಿದೆ.

ತುಷ್ಟಿಗುಣ ವ್ಯಾಪಾರದ ಕರಾರು ಎಂಬುದು ಆಮದು ಸರಕುಗಳಿಂದ ದೊರೆಯುವ ತುಷ್ಟಿಗುಣ ಮತ್ತು ರಫ್ತು ಸರಕುಗಳನ್ನು ಉತ್ಪಾದಿಸಲು ತ್ಯಾಗ ಮಾಡಲಾದ ಸ್ವದೇಶೀ ಸರಕುಗಳ ತುಷ್ಟಿಗುಣವನ್ನು ಹೋಲಿಕೆ ಮಾಡುವ ಸೂಚಿಯಾಗಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಈ ಪರಿಭಾವನೆಯು ಒಂದು ಘಟಕ ರಫ್ತು ಸರಕುಗಳ ಉತ್ಪಾದನೆಯಲ್ಲಿ ಒಳಗೊಂಡಿರುವ ಅಪತುಷ್ಟಿಗುಣದಲ್ಲಿನ ಬದಲಾವಣೆಗಳು, ಆಮದು ಸರಕುಗಳಿಂದ ದೊರಕುವ ಸಾಪೇಕ್ಷ ತುಷ್ಟಿಗಳಲ್ಲಿನ ಬದಲಾವಣೆಗಳು ಮತ್ತು ರಫ್ತು ಸರಕುಗಳ ಉತ್ಪಾದನೆಯ ಪರಿಣಾಮವಾಗಿ ತ್ಯಾಗ ಮಾಡಲಾದ ಸ್ವದೇಶೀ ಉತ್ಪಾದನೆಯ ಪ್ರಮಾಣವನ್ನು ಮಾಪನ ಮಾಡುವ ಸೂಚಿಯಾಗಿದೆ.

ನೈಜ ವೆಚ್ಚ ವ್ಯಾಪಾರದ ಕರಾರುಗಳ ಸೂಚಿಯನ್ನು ಆಮದು ಸರಕುಗಳ ಸಾಪೇಕ್ಷ ಸರಾಸರಿ ತುಷ್ಟಿಗುಣದ ಸೂಚಿ ಮತ್ತು ರಫ್ತು ಸರಕುಗಳ ಉತ್ಪಾದನೆಗಾಗಿ ತ್ಯಜಿಸಲಾದ ಸ್ವದೇಶೀ ಸರಕುಗಳ ಸೂಚಿಯೊಡನೆ ಗುಣಿಸುವುದರಿಂದ ತುಷ್ಟಿಗುಣ ವ್ಯಾಪಾರದ ಕರಾರುಗಳ ಸೂಚಿಯು ದೊರೆಯುತ್ತದೆ. ಪ್ರಾಧ್ಯಾಪಕ **ರಾಬರ್ಟ್‌ಸನ್** ತುಷ್ಟಿಗುಣ ವ್ಯಾಪಾರದ ಕರಾರುಗಳನ್ನು **'ನೈಜ ವ್ಯಾಪಾರದ ಕರಾರುಗಳು'** (Real Terms of Trade) ಎಂದು ಕರೆದಿದ್ದಾನೆ.

ಮುಂದಿನ ಸೂತ್ರದ ಮೂಲಕ ತುಷ್ಟಿಗುಣ ವ್ಯಾಪಾರದ ಕರಾರುಗಳ ಸೂಚಿಯನ್ನು ಕಂಡು ಹಿಡಿಯಲಾಗುತ್ತದೆ.

$$Tu = \frac{Px}{Pm} Fx.Rx.u$$

ಇದರಲ್ಲಿ –

u = ಆಮದು ಸರಕುಗಳ ಸಾಪೇಕ್ಷ ತುಷ್ಟಿಗುಣ

Px = ರಫ್ತು ಬೆಲೆ ಸೂಚ್ಯಂಕ

Pm = ಆಮದು ಬೆಲೆ ಸೂಚ್ಯಂಕ

Fx = ರಫ್ತು ಸರಕುಗಳ ಉತ್ಪಾದಕತೆಯ ಸೂಚಿ

Rx = ರಫ್ತು ಸರಕುಗಳ ಅಪತುಷ್ಟಿಗುಣದ ಪ್ರಮಾಣ

ತುಷ್ಟಿಗುಣ ವ್ಯಾಪಾರದ ಕರಾರುಗಳ ಪರಿಭಾವನೆಯೂ ಸಹ ಮಿತಿಯಿಂದ ಬಳಲುತ್ತಿದೆ. ಈ ಸೂಚಿಯಲ್ಲಿ ತುಷ್ಟಿಗುಣ ಮತ್ತು ಅಪತುಷ್ಟಿಗುಣವನ್ನು ಅಳತೆ ಮಾಡಬೇಕಾಗುತ್ತದೆ. ಆದರೆ ಇವು ಮಾನಸಿಕ ಅಂಶಗಳಾಗಿರುವುದರಿಂದ ಇವುಗಳ ಮಾಪನ ಕಷ್ಟಸಾಧ್ಯವಾದ ಕಾರ್ಯವಾಗಿದೆ.

ಏಕ ಘಟಕ ವ್ಯಾಪಾರದ ಕರಾರುಗಳಂತೆ ಮತ್ತು ದ್ವಿಘಟಕ ವ್ಯಾಪಾರದ ಕರಾರುಗಳಂತೆ ತುಷ್ಟಿಗುಣ ವ್ಯಾಪಾರ ಕರಾರುಗಳು ಸಹ ಪ್ರಾಯೋಗಿಕ ಮಹತ್ವವನ್ನು ಪಡೆದಿಲ್ಲ. ಆದ್ದರಿಂದ ಅವು ವಾಸ್ತವವಾಗಿ ಬಳಕೆಯಲ್ಲಿಲ್ಲ. ಬದಲಾಗಿ ಸರಕು ವ್ಯಾಪಾರದ ಕರಾರುಗಳು ಮತ್ತು ಆದಾಯ ವ್ಯಾಪಾರದ ಕರಾರುಗಳು ಹೆಚ್ಚಿನದಾದ ಪ್ರಾಯೋಗಿಕ ಮಹತ್ವವನ್ನು ಪಡೆದಿವೆ. ಆದ್ದರಿಂದ ಅಂತರರಾಷ್ಟ್ರೀಯ ವ್ಯಾಪಾರದಿಂದ ದೊರೆಯುವ ಲಾಭಗಳನ್ನು ಅಳತೆ ಮಾಡಲು ಈ ಸೂಚಿಗಳನ್ನು ವ್ಯಾಪಕವಾಗಿ ಬಳಸಲಾಗುತ್ತಿದೆ.

B. ವ್ಯಾಪಾರದ ಕರಾರುಗಳನ್ನು ನಿರ್ಧರಿಸುವ ಸಂಗತಿಗಳು
(Factors Determining Terms of Trade)

ವ್ಯಾಪಾರದ ಕರಾರುಗಳ ಮೇಲೆ ಅನೇಕ ಸಂಗತಿಗಳು ಪ್ರಭಾವ ಬೀರುತ್ತವೆ. ಅಂದರೆ ಈ ಸಂಗತಿಗಳು ವ್ಯಾಪಾರದ ಕರಾರುಗಳ ನಿರ್ಧಾರದಲ್ಲಿ ಭಾಗವಹಿಸುತ್ತವೆ. ಇವುಗಳನ್ನು ಕೆಳಗಿನಂತೆ ವಿವರಿಸಬಹುದಾಗಿದೆ.

1. ಸರಕುಗಳ ಸ್ವರೂಪ (Nature of Commodities): ಪ್ರತಿಯೊಂದು ದೇಶದಲ್ಲಿ ಉತ್ಪಾದನೆಯಾಗುವ ಸರಕುಗಳ ಸ್ವರೂಪವು ವ್ಯಾಪಾರದ ಕರಾರುಗಳ ನಿರ್ಧಾರದಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಪ್ರಾಥಮಿಕ ಸರಕುಗಳನ್ನೇ ಹೆಚ್ಚಾಗಿ ಉತ್ಪಾದಿಸಿ ರಫ್ತು ಮಾಡುವ ಅನಭಿವೃದ್ಧ ದೇಶಕ್ಕೆ ವ್ಯಾಪಾರದ ಷರತ್ತುಗಳು ಪ್ರತಿಕೂಲವಾಗಿರುತ್ತವೆ. ಏಕೆಂದರೆ ಈ ಸರಕುಗಳಿಗೆ ಹೆಚ್ಚಿನ ಬೆಲೆ ದೊರೆಯುವುದಿಲ್ಲ. ಯಂತ್ರಗಳು, ಯಂತ್ರ ತಯಾರಿಕಾ ಸರಕುಗಳು ಇವೇ ಮೊದಲಾದ ಬಂಡವಾಳ ಸರಕುಗಳ ಬೆಲೆ ಅಧಿಕವಾಗಿರುವುದರಿಂದ ಅವುಗಳನ್ನು ರಫ್ತು ಮಾಡುವ ದೇಶಗಳಿಗೆ ವ್ಯಾಪಾರದ ಷರತ್ತುಗಳು ಅನುಕೂಲಕರವಾಗಿರುತ್ತವೆ.

2. ಬೇಡಿಕೆಯ ಗಾತ್ರ (Size of Demand): ಒಂದು ದೇಶದ ಸರಕುಗಳಿಗೆ ವಿದೇಶಗಳಲ್ಲಿ ಹೆಚ್ಚಿನ ಬೇಡಿಕೆ ಇದ್ದರೆ ವ್ಯಾಪಾರದ ಷರತ್ತುಗಳು ಆ ದೇಶಕ್ಕೆ ಅನುಕೂಲಕರವಾಗಿರುತ್ತವೆ. ಆ ದೇಶದ ಸರಕುಗಳಿಗೆ ವಿದೇಶಗಳಲ್ಲಿ ಬೇಡಿಕೆ ಕಡಿಮೆ ಇದ್ದರೆ ವ್ಯಾಪಾರದ ಷರತ್ತುಗಳು ಆ ದೇಶಕ್ಕೆ ಅನಾನುಕೂಲಕರವಾಗಿರುತ್ತವೆ.

3. ಬೇಡಿಕೆಯ ಮತ್ತು ಪೂರೈಕೆಯ ಸ್ಥಿತಿಸ್ಥಾಪಕತ್ವ (Elasticity of Demand and Supply): ಒಂದು ದೇಶದ ರಫ್ತು ಸರಕುಗಳ ಪೂರೈಕೆಯ ಸ್ಥಿತಿಸ್ಥಾಪಕತ್ವವು ಆಮದು ಸರಕುಗಳ ಬೇಡಿಕೆಯ ಸ್ಥಿತಿಸ್ಥಾಪಕತ್ವಕ್ಕಿಂತ ಕಡಿಮೆ ಇದ್ದರೆ ರಫ್ತು ಸರಕುಗಳ ಬೆಲೆಯು ಆಮದು ಸರಕುಗಳ ಬೆಲೆಗಿಂತ ಹೆಚ್ಚಾಗಿರುತ್ತದೆ. ಈ ಪರಿಣಾಮವಾಗಿ ವ್ಯಾಪಾರದ ಕರಾರುಗಳು ಆ ದೇಶಕ್ಕೆ ಅನುಕೂಲಕರವಾಗಿರುತ್ತವೆ. ಬದಲಾಗಿ ರಫ್ತು ಸರಕುಗಳ ಬೇಡಿಕೆಯ ಸ್ಥಿತಿಸ್ಥಾಪಕತ್ವವು ಆಮದು ಸರಕುಗಳ ಬೇಡಿಕೆಯ ಸ್ಥಿತಿಸ್ಥಾಪಕತ್ವಕ್ಕಿಂತ ಹೆಚ್ಚಾಗಿದ್ದರೆ ರಫ್ತು ಸರಕುಗಳ ಬೆಲೆಯು ಆಮದು ಸರಕುಗಳ ಬೆಲೆಗಿಂತ ಕಡಿಮೆಯಿರುತ್ತದೆ. ಇದರಿಂದಾಗಿ ವ್ಯಾಪಾರದ ಕರಾರುಗಳು ಆ ದೇಶಕ್ಕೆ ಪ್ರತಿಕೂಲಕರವಾಗಿರುತ್ತವೆ.

ರಫ್ತು ಸರಕುಗಳ ಪೂರೈಕೆಯ ಸ್ಥಿತಿಸ್ಥಾಪಕತ್ವವು ಆಮದು ಸರಕುಗಳ ಪೂರೈಕೆಯ ಸ್ಥಿತಿಸ್ಥಾಪಕತ್ವಕ್ಕಿಂತ ಹೆಚ್ಚಾಗಿದ್ದರೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೇಡಿಕೆ ಮತ್ತು ಬೆಲೆಗಳಿಗೆ ರಫ್ತುಗಳನ್ನು ಹೊಂದಿಸಿಕೊಳ್ಳಬಹುದಾದುದರಿಂದ ವ್ಯಾಪಾರದ ಕರಾರುಗಳು ಅನುಕೂಲಕರವಾಗಿರುತ್ತವೆ. ಬದಲಾಗಿ ರಫ್ತು ಸರಕುಗಳ ಪೂರೈಕೆಯ ಸ್ಥಿತಿಸ್ಥಾಪಕತ್ವವು ಆಮದು ಸರಕುಗಳ ಪೂರೈಕೆಯ ಸ್ಥಿತಿಸ್ಥಾಪಕತ್ವಕ್ಕಿಂತ ಕಡಿಮೆಯಿದ್ದರೆ ವ್ಯಾಪಾರದ ಕರಾರುಗಳು ಪ್ರತಿಕೂಲಕರವಾಗಿರುತ್ತವೆ.

4. ವಿದೇಶೀ ವಿನಿಮಯ ದರ (Foreign Exchange Rate): ವಿದೇಶಗಳ ಹಣಕ್ಕೆ ವಿರುದ್ಧವಾಗಿ ತನ್ನ ಹಣದ ಬಾಹ್ಯ ಮೌಲ್ಯವನ್ನು ಏರಿಸುವುದರ ಮೂಲಕ ಒಂದು ದೇಶವು ರಫ್ತುಗಳ ಮೌಲ್ಯವನ್ನು ಅಧಿಕಗೊಳಿಸಬಹುದು. ಇದರಿಂದಾಗಿ ರಫ್ತು ಗಳಿಕೆಗಳು ಹೆಚ್ಚುತ್ತವೆ ಮತ್ತು ಈ ಕಾರಣದಿಂದ ವ್ಯಾಪಾರದ ಷರತ್ತುಗಳು ಅನುಕೂಲಕರವಾಗುತ್ತವೆ.

5. ಬದಲಿ ಸರಕುಗಳ ಲಭ್ಯತೆ (Availability of Substitute Goods): ಒಂದು ದೇಶವು ರಫ್ತು ಮಾಡುವ ಸರಕುಗಳಿಗೆ ವಿದೇಶೀ ಮಾರುಕಟ್ಟೆಯಲ್ಲಿ ಬದಲಿ ವಸ್ತುಗಳು ಲಭ್ಯವಿಲ್ಲದಿದ್ದರೆ ವ್ಯಾಪಾರದ ಷರತ್ತುಗಳು ಆ ದೇಶಕ್ಕೆ ಅನುಕೂಲಕರವಾಗಿರುತ್ತವೆ. ಏಕೆಂದರೆ ಬದಲಿ ಸರಕುಗಳು ದೊರೆಯದೆ ಒಂದೇ ಸರಕಿಗೆ ಪೂರ್ಣ ಬೇಡಿಕೆ ಇರುವುದರಿಂದ ಅದರ ಬೆಲೆಯನ್ನು ಏರಿಸುವ ಮುಖಾಂತರ ರಫ್ತು ಗಳಿಕೆಯನ್ನು ಹೆಚ್ಚಿಸಿಕೊಳ್ಳಬಹುದು. ತದ್ವಿರುದ್ಧವಾಗಿ ಬದಲಿ ಸರಕುಗಳು ಲಭ್ಯವಿದ್ದರೆ ವ್ಯಾಪಾರದ ಷರತ್ತುಗಳು ಪ್ರತಿಕೂಲಕರ ವಾಗುತ್ತವೆ.

6. ತಂತ್ರಜ್ಞಾನದಲ್ಲಿ ಬದಲಾವಣೆಗಳು (Changes in Technology): ತಂತ್ರಜ್ಞಾನದಲ್ಲಿ ಸಂಭವಿಸುವ ಬದಲಾವಣೆಗಳು ವ್ಯಾಪಾರದ ಕರಾರುಗಳ ಮೇಲೆ ಪ್ರಭಾವ ಬೀರುತ್ತವೆ. ಒಂದು ದೇಶದ ತಂತ್ರಜ್ಞಾನದ ಪರಿಸ್ಥಿತಿಯು ಉತ್ತಮಗೊಂಡಿದೆ ಎಂದಾದರೆ ಅದು ಮೊದಲಿಗಿಂತ ಉತ್ತಮ ಗುಣದರ್ಜೆಯ ಸರಕುಗಳನ್ನು ಹೆಚ್ಚಿನ ದಕ್ಷತೆಯಲ್ಲಿ ಹಾಗೂ ನವೀನ ರೀತಿಗಳಲ್ಲಿ ಉತ್ಪಾದಿಸಲು ಶಕ್ತವಾಗುತ್ತದೆ ಎಂದರ್ಥ. ಈ ಕಾರಣದಿಂದ ಆ ದೇಶದ ಸರಕುಗಳಿಗೆ ವಿದೇಶಗಳಲ್ಲಿ ಬೇಡಿಕೆ ಹೆಚ್ಚುತ್ತದೆ. ಅಲ್ಲದೆ, ಆ ದೇಶವು ಈಗ ತಾನು ಉತ್ಪಾದಿಸುವ ಪ್ರತಿಯೊಂದು ಘಟಕ ಸರಕಿಗೆ ವಿದೇಶಗಳಿಂದ ಮೊದಲಿಗಿಂತ ಹೆಚ್ಚಿನ ಪ್ರಮಾಣದ ಸರಕುಗಳನ್ನು ಪಡೆಯಬಲ್ಲದು. ಈ ಪರಿಣಾಮವಾಗಿ ಆ ದೇಶದ ವ್ಯಾಪಾರದ ಕರಾರುಗಳು ಉತ್ತಮಗೊಳ್ಳುತ್ತವೆ.

7. ಅಭಿರುಚಿಗಳಲ್ಲಿ ಬದಲಾವಣೆಗಳು (Changes in Tastes): ಜನರ ಅಭಿರುಚಿಗಳಲ್ಲಿನ ಬದಲಾವಣೆಗಳೂ ಸಹ ವ್ಯಾಪಾರದ ಕರಾರುಗಳ ನಿರ್ಧಾರದಲ್ಲಿ ಭಾಗವಹಿಸುತ್ತವೆ. ಉದಾಹರಣೆಗೆ, ಭಾರತವು ಜರ್ಮನಿಯಿಂದ ಬಟ್ಟೆಯನ್ನು ಆಮದು ಮಾಡಿಕೊಳ್ಳುತ್ತಿದೆ ಎಂದು ಭಾವಿಸೋಣ. ಈಗ ಭಾರತೀಯರ ಅಭಿರುಚಿಯಲ್ಲಿ ಬದಲಾವಣೆಗಳಾಗಿ ಅವರು ಜರ್ಮನಿಯ ಬಟ್ಟೆಯನ್ನು ಮೊದಲಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಇಷ್ಟಪಡುತ್ತಾರೆ ಎಂದು ತಿಳಿಯೋಣ. ಈ ಕಾರಣದಿಂದ ಜರ್ಮನಿಯ ಬಟ್ಟೆಗೆ ಭಾರತದ ಬೇಡಿಕೆ ಹೆಚ್ಚುತ್ತದೆ ಮಾತ್ರವಲ್ಲದೆ ಬಹಳ ತುರ್ತಾಗಿ ಬಟ್ಟೆಯನ್ನು ಆಮದು ಮಾಡಿಕೊಳ್ಳುವ ಆವಶ್ಯಕತೆ ಉದ್ಭವಿಸುತ್ತದೆ. ಅಂದರೆ ಜರ್ಮನಿಯು ಬಟ್ಟೆಯನ್ನು ಅಧಿಕವಾಗಿ ರಫ್ತುಮಾಡಬಲ್ಲದು ಮತ್ತು ಹೇರಳ ಪ್ರಮಾಣದ ವಿದೇಶೀ ವಿನಿಮಯ ಸಂಪನ್ಮೂಲಗಳನ್ನು ಸಂಪಾದಿಸಬಲ್ಲದು. ಇದರಿಂದ ಆ ದೇಶದ ವ್ಯಾಪಾರದ ಕರಾರುಗಳು ಸುಧಾರಿಸುತ್ತವೆ.

8. ಉತ್ಪಾದನಾಂಗಗಳ ಸಮೃದ್ಧಿಯಲ್ಲಿ ಬದಲಾವಣೆಗಳು (Changes in Factor Endowments): ಉತ್ಪಾದನಾಂಗಗಳು ಯಥೇಚ್ಛವಾಗಿ ಲಭ್ಯವಿದ್ದರೆ ಆ ದೇಶವು ಅನುಕೂಲಕರವಾದ ವ್ಯಾಪಾರದ ಕರಾರುಗಳನ್ನು ಹೊಂದಿರುತ್ತದೆ. ಏಕೆಂದರೆ ಆ ದೇಶವು ವೈವಿಧ್ಯದ ಸರಕುಗಳನ್ನು ಅಗಾಧ ಪ್ರಮಾಣದಲ್ಲಿ ಉತ್ಪಾದಿಸಿ ಜಾಗತಿಕ ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಸಾಮರ್ಥ್ಯ ಪಡೆದಿರುತ್ತದೆ. ಇದಕ್ಕೆ ವಿರುದ್ಧವಾಗಿ, ಉತ್ಪಾದಕ ಸಂಪನ್ಮೂಲಗಳ ಲಭ್ಯತೆಯಲ್ಲಿ ಕೊರತೆ ಇದ್ದರೆ ಅಥವಾ ಅವು ಬರಿದಾಗುತ್ತಿದ್ದರೆ ಆ ದೇಶದ ವ್ಯಾಪಾರದ ಕರಾರುಗಳು ಕ್ಷೀಣಿಸುತ್ತವೆ. ಉದಾಹರಣೆಗೆ, ಇಂಗ್ಲೆಂಡಿನಲ್ಲಿ ಖನಿಜಗಳು ಮತ್ತು ಅದಿರುಗಳು ಬರಿದಾಗುತ್ತಿವೆ ಎಂದು ಭಾವಿಸೋಣ. ಇವು ಪುನರ್ಭರ್ತಿ ಮಾಡಲಾಗದ ಸಂಪನ್ಮೂಲಗಳಾಗಿರುವುದರಿಂದ ಇವುಗಳ ಸಹಾಯದಿಂದ ಉತ್ಪಾದಿಸಬಹು ದಾದ ಸರಕುಗಳ ಉತ್ಪಾದನೆ ಕಡಿಮೆಯಾಗುತ್ತದೆ. ಈ ಸರಕುಗಳಿಗಾಗಿ ಇಂಗ್ಲೆಂಡ್ ಈಗ ಬೇರೆ ದೇಶಗಳನ್ನು ಆಶ್ರಯಿಸಬೇಕಾಗುತ್ತದೆ ಹಾಗೂ ಬೇರೆ ದೇಶಗಳಿಗೆ ಅದರ ರಫ್ತುಗಳು ಸಹ ಕಡಿಮೆಯಾಗುತ್ತವೆ. ಪರಿಣಾಮವಾಗಿ ಇಂಗ್ಲೆಂಡಿನ ವ್ಯಾಪಾರದ ಕರಾರುಗಳು ಕ್ಷೀಣಿಸುತ್ತವೆ.

9. ಆರ್ಥಿಕ ಪ್ರಗತಿ (Economic Progress): ದೀರ್ಘಾವಧಿಯಲ್ಲಿ ದೇಶದ ಉತ್ಪನ್ನ ಮತ್ತು ಆದಾಯ ಹೆಚ್ಚುವಂತಹ ಪ್ರಕ್ರಿಯೆಯೇ ಆರ್ಥಿಕ ಪ್ರಗತಿ. ವ್ಯಾಪಾರದ ಕರಾರುಗಳ ಮೇಲೆ ಆರ್ಥಿಕ ಪ್ರಗತಿಯೂ ಸಹ ಪ್ರಭಾವ ಬೀರುತ್ತದೆ. ಒಂದು ದೇಶವು ಆರ್ಥಿಕ ಪ್ರಗತಿಯನ್ನು ಸಾಧಿಸುತ್ತಿದೆ ಎಂದರೆ ಅದರ ರಾಷ್ಟ್ರೀಯ ಉತ್ಪನ್ನ ಮತ್ತು ಆದಾಯ ನಿರಂತರವಾಗಿ, ಗಮನಾರ್ಹವಾಗಿ ಅಧಿಕಗೊಳ್ಳುತ್ತಿವೆ ಎಂದರ್ಥ. ಇಂತಹ ಸಂದರ್ಭದಲ್ಲಿ ಆ ದೇಶದ ವ್ಯಾಪಾರದ ಕರಾರುಗಳು ಉತ್ತಮಗೊಳ್ಳುವುದರಲ್ಲಿ ಸಂದೇಹವಿಲ್ಲ. ಏಕೆಂದರೆ ಆ ದೇಶವು ಅಧಿಕ ಪ್ರಮಾಣದ, ಉನ್ನತ ಗುಣಮಟ್ಟದ ಸರಕುಗಳನ್ನು ಉತ್ಪಾದಿಸಬಲ್ಲ ದಾಗಿರುವುದರಿಂದ ಅದರ ರಫ್ತುಗಳು ಜಾಸ್ತಿಯಾಗುತ್ತವೆ ಮತ್ತು ಆಮದುಗಳು ಕಡಿಮೆಯಾಗುತ್ತವೆ. ಆ ದೇಶವು ವಿದೇಶಗಳಿಂದ ಸರಕುಗಳನ್ನು ಆಮದು ಮಾಡಿಕೊಳ್ಳು ವಿಕೆಯನ್ನು ನಿರ್ಬಂಧಿಸುತ್ತದೆ ಮತ್ತು ತನ್ನ ಸರಕುಗಳನ್ನು ಹೆಚ್ಚಾಗಿ ಜಾಗತಿಕ ಮಾರುಕಟ್ಟೆಗೆ ರವಾನಿಸುತ್ತದೆ. ಈ ಕಾರಣದಿಂದ ಆ ದೇಶದ ವ್ಯಾಪಾರದ ಕರಾರುಗಳು ಉತ್ತಮಗೊಳ್ಳುತ್ತವೆ.

10. ವ್ಯಾಪಾರ ಸುಂಕಗಳು (Tariffs): ಆಮದು ಸುಂಕಗಳನ್ನು ವಿಧಿಸುವಿಕೆಯಿಂದ ವ್ಯಾಪಾರದ ಕರಾರುಗಳು ಆ ದೇಶಕ್ಕೆ ಅನುಕೂಲಕರವಾಗಿ ಪರಿಣಮಿಸುತ್ತವೆ. ಆಮದು ಸುಂಕಗಳನ್ನು ವಿಧಿಸಿದ ಪರಿಣಾಮದಿಂದ ಆಮದು ಸರಕುಗಳ ಬೆಲೆಗಳು ಏರುತ್ತವೆ. ಆಮದು ಸರಕುಗಳು ಮೊದಲಿಗಿಂತ ದುಬಾರಿಯಾಗುವುದರಿಂದ ಆಮದುಗಳ ಪ್ರಮಾಣವನ್ನು ಕಡಿಮೆ ಮಾಡಲಾಗುತ್ತದೆ. ಇದರ ಫಲವಾಗಿ ಆಮದು ಸರಕುಗಳಿಗೆ ಪಾವತಿಸಲು ಲಭ್ಯವಿದ್ದ ಅಮೂಲ್ಯ ವಿದೇಶಿ ವಿನಿಮಯ ಸಂಪನ್ಮೂಲಗಳು ಉಳಿತಾಯವಾಗುತ್ತವೆ. ಇದರಿಂದ ವ್ಯಾಪಾರದ ಕರಾರುಗಳು ಉತ್ತಮಗೊಳ್ಳುತ್ತವೆ.

11. ಅಪಮೌಲ್ಯ (Devaluation): ನಾಣ್ಯದ ಅಪಮೌಲ್ಯವು ವ್ಯಾಪಾರದ ಕರಾರುಗಳ ಮೇಲೆ ಪ್ರಭಾವ ಬೀರುವ ಮತ್ತೊಂದು ಪ್ರಮುಖ ಅಂಶವಾಗಿದೆ. ಒಂದು ದೇಶವು ನಾಣ್ಯವನ್ನು ಅಪಮೌಲ್ಯಗೊಳಿಸಿದೆ ಎಂದಾದರೆ ವಿದೇಶಗಳ ನಾಣ್ಯಗಳ ಸಂಬಂಧದಲ್ಲಿ ಆ ದೇಶದ ನಾಣ್ಯದ ಕೊಳ್ಳುವ ಶಕ್ತಿಯು ಕುಸಿದಿದೆ ಎಂದರ್ಥ. ನಾಣ್ಯದ ಮೌಲ್ಯವು ಕುಸಿದಿರುವುದರಿಂದ ಈಗ ವಿದೇಶಗಳಿಂದ ಆಮದು ಮಾಡಿಕೊಳ್ಳುವ ಸರಕುಗಳು ದುಬಾರಿ ಯಾಗುತ್ತವೆ. ಅಂಥರೆ ಅಷ್ಟೇ ಪ್ರಮಾಣದ ಹಣದಲ್ಲಿ ಮೊದಲಿಗಿಂತ ಕಡಿಮೆ ಸರಕುಗಳನ್ನು ಆಮದು ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಈ ಕಾರಣದಿಂದ ಆಮದುಗಳು ನಿರ್ಬಂಧ ಗೊಂಡು ವಿದೇಶಿ ವಿನಿಮಯ ಸಂಪನ್ಮೂಲಗಳು ಸಂರಕ್ಷಿಸಲ್ಪಡುತ್ತವೆ. ತದ್ವಿರುದ್ಧವಾಗಿ, ನಾಣ್ಯದ ಅಪಮೌಲ್ಯದೊಡನೆ ಆ ದೇಶದ ರಫ್ತು ಸರಕುಗಳ ಬೆಲೆಗಳು ಕಡಿಮೆಯಾಗುತ್ತವೆ. ಈ ಕಾರಣದಿಂದ ಅದರ ರಫ್ತುಗಳಿಗೆ ವಿದೇಶಗಳಲ್ಲಿ ಬೇಡಿಕೆಯು ಗಣನೀಯವಾಗಿ ಹೆಚ್ಚುತ್ತದೆ. ಆದುದರಿಂದ ಆ ದೇಶದ ಸರಕುಗಳು ಹೇರಳವಾಗಿ ರಫ್ತಾಗುತ್ತವೆ ಮತ್ತು ಆದು ಗಣನೀಯ ಮೊತ್ತದ ವಿದೇಶೀ ವಿನಿಮಯವನ್ನು ಸಂಪಾದಿಸುತ್ತದೆ. ಇದರ ಪರಿಣಾಮವಾಗಿ ಆ ದೇಶದ ವ್ಯಾಪಾರದ ಕರಾರುಗಳು ಉತ್ತಮಗೊಳ್ಳುತ್ತವೆ.

12. ಕಾರ್ಮಿಕರ ದಕ್ಷತೆ (Efficiency of Workers): ಕಾರ್ಮಿಕರ ದಕ್ಷತೆಯೂ ಸಹ ವ್ಯಾಪಾರದ ಕರಾರುಗಳ ನಿರ್ಧಾರಕವಾಗಿದೆ. ಒಂದು ದೇಶದಲ್ಲಿ ಕಾರ್ಮಿಕರು ದಕ್ಷರೂ, ಚತುರರೂ, ಅಗತ್ಯ ಕೌಶಲ್ಯವನ್ನು ಹೊಂದಿರುವವರೂ ಆಗಿದ್ದರೆ ಆ ದೇಶವು ಉತ್ತಮ ಗುಣಮಟ್ಟದ ಸರಕುಗಳನ್ನು ಕಡಿಮೆ ವೆಚ್ಚದಲ್ಲಿ ಮತ್ತು ಬೃಹತ್ ಪ್ರಮಾಣದಲ್ಲಿ ಉತ್ಪಾದಿಸ ಬಲ್ಲದು. ಆಗ ಆ ದೇಶದ ಸರಕುಗಳಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅಧಿಕ ಬೇಡಿಕೆ ಬರುವುದರಲ್ಲಿ ಸಂದೇಹವಿಲ್ಲ. ಇದರಿಂದಾಗಿ ಆ ದೇಶವು ಪೈಪೋಟಿಯುತ ಬೆಲೆ ಗಳಲ್ಲಿ ಬೇಡಿಕೆಯನ್ನು ಕುದುರಿಸಿಕೊಂಡು ಸರಕುಗಳನ್ನು ಮಾರಾಟ ಮಾಡಲು ಸಾಮರ್ಥ್ಯ ಪಡೆಯುತ್ತದೆ. ಅದರ ವಿದೇಶಿ ವಿನಿಮಯ ಗಳಿಕೆಗಳು ಜಾಸ್ತಿಯಾಗಿ ವ್ಯಾಪಾರದ ಕರಾರುಗಳು ಉತ್ತಮಗೊಳ್ಳುತ್ತವೆ.

C. ವಾಣಿಜ್ಯ ನೀತಿ : ಮುಕ್ತ ವ್ಯಾಪಾರ ಮತ್ತು ರಕ್ಷಣಾ ನೀತಿ
(Commercial Policy : Free Trade and Protectionist Policy)

ಪೀಠಿಕೆ

ವಿದೇಶಿ ವ್ಯಾಪಾರಕ್ಕೆ ಸಂಬಂಧಿಸಿದಂತೆ ಒಂದು ದೇಶವು ಅಳವಡಿಸಿಕೊಳ್ಳುವ ನೀತಿಗೆ 'ವಾಣಿಜ್ಯ ನೀತಿ' ಎಂದು ಹೆಸರು. ರಫ್ತು ಸರಕುಗಳ ಹಾಗೂ ಆಮದು ಬದಲಿಕೆಯ ಸರಕುಗಳ ಉತ್ಪಾದನೆ, ಆಮದು ಗಾತ್ರದ ನಿರ್ಣಯ, ರಫ್ತು ಸರಕುಗಳ ಬೆಲೆ ನಿರ್ಧಾರ, ವ್ಯಾಪಾರದ ದಿಕ್ಕು ಮೊದಲಾದ ಸಂಗತಿಗಳು ವಾಣಿಜ್ಯ ನೀತಿಯ ವ್ಯಾಪ್ತಿಗೆ ಬರುತ್ತವೆ.

ವಾಣಿಜ್ಯ ನೀತಿಯು ಯಾವುದೊಂದು ದೇಶದ ಹಲವು ಪ್ರಮುಖ ನೀತಿಗಳಲ್ಲಿ ಒಂದಾಗಿದೆ.

ವಿದೇಶಿ ವ್ಯಾಪಾರ ಸಂಬಂಧವನ್ನು ಏರ್ಪಡಿಸಿಕೊಳ್ಳುವ ವಿಧಾನ, ವಿದೇಶಿ ವ್ಯಾಪಾರದ ಸಂಯೋಜನೆಯನ್ನು ವಿಕಸನಗೊಳಿಸಿಕೊಳ್ಳುವ ರೀತಿ, ಅಂದರೆ ಎಂತಹ ಸರಕುಗಳನ್ನು ರಫ್ತು ಮಾಡಬೇಕು ಮತ್ತು ಯಾವ ಸರಕುಗಳ ಆಮದಿಗೆ ಪ್ರಾಮುಖ್ಯ ನೀಡಬೇಕು ಎಂಬ ವಿಷಯ; ವಿದೇಶಿ ವ್ಯಾಪಾರದ ದಿಕ್ಕನ್ನು ಮಾರ್ಪಡಿಸಿಕೊಳ್ಳುವ ಬಗೆ, ಅಂದರೆ ಯಾವ ದೇಶಗಳೊಡನೆ ವ್ಯಾಪಾರಸಂಬಂಧವನ್ನು ಕುದುರಿಸಿಕೊಳ್ಳಬೇಕು ಎಂಬಿವೇ ಮೊದಲಾದ ವಿಷಯಗಳನ್ನು ವಾಣಿಜ್ಯ ನೀತಿಯು ಒಳಗೊಂಡಿರುತ್ತದೆ. ರಾಷ್ಟ್ರಾಭಿವೃದ್ಧಿಯ ಸಾಧನೆಗೆ ವಿದೇಶಿ ವ್ಯಾಪಾರದ ವಾಹನವನ್ನು ಸಜ್ಜುಗೊಳಿಸಲು ವಾಣಿಜ್ಯ ನೀತಿಯು ಪ್ರಾಮುಖ್ಯ ನೀಡುತ್ತದೆ.

ವಾಣಿಜ್ಯ ನೀತಿಯು ವ್ಯಾಪಾರದ ನಿರ್ವಹಣೆಯ ಬಗೆಗಿನ ನೀತಿಯಾಗಿರುವುದರಿಂದ ಅದರಲ್ಲಿ ಎರಡು ಭಾಗಗಳಿವೆ. ಅವುಗಳೆಂದರೆ :

(i) ಮುಕ್ತ ವ್ಯಾಪಾರ, ಮತ್ತು

(ii) ರಕ್ಷಣಾ ವ್ಯಾಪಾರ.

I. ಮುಕ್ತ ವ್ಯಾಪಾರ
(Free Trade)

ವಿವಿಧ ದೇಶಗಳ ನಡುವೆ ಸರಕುಗಳ ಚಲನೆಗೆ ನಿರ್ಬಂಧಗಳಿಲ್ಲದಿರುವ ನೀತಿಗೆ ಮುಕ್ತ ವ್ಯಾಪಾರ ಎಂದು ಹೆಸರು. ಅಂದರೆ ಯಾವುದೇ ನಿಯಂತ್ರಣಗಳು ಅಥವಾ ಅಡೆತಡೆಗಳಿಲ್ಲದ ಸರಕುಗಳು ಅಂತರರಾಷ್ಟ್ರೀಯವಾಗಿ ಮುಕ್ತವಾಗಿ ಚಲಿಸುತ್ತವೆ. ಇಂತಹ ವ್ಯಾಪಾರದಲ್ಲಿ ಸುಂಕಗಳನ್ನು ವಿಧಿಸಿ ಸರಕುಗಳ ಬೆಲೆಗಳನ್ನು ಏರಿಸುವ ಮೂಲಕ ಅಥವಾ ಸರಕುಗಳ ರಫ್ತಿನ ಮತ್ತು ಆಮದಿನ ಗಾತ್ರವನ್ನು ನಿಯಂತ್ರಿಸುವ ಮೂಲಕ ನಿಯಂತ್ರಣಗಳನ್ನು ಹೇರಲಾಗುವುದಿಲ್ಲ. ಆದ್ದರಿಂದ ಮುಕ್ತ ವ್ಯಾಪಾರದಲ್ಲಿ ಯಾವುದೇ ವಿಧದ ಅಡ್ಡಿ ಆತಂಕಗಳಿಲ್ಲದೆ ದೇಶಗಳ ನಡುವೆ ಸರಕುಗಳ ವಿನಿಮಯವು ಸರಾಗವಾಗಿ ನೆರವೇರುತ್ತದೆ. ಆ್ಯಡಂಸ್ಮಿತ್‌ನ ಮಾತುಗಳಲ್ಲಿ ಹೇಳುವುದಾದರೆ "ಯಾವ ವಾಣಿಜ್ಯ ನೀತಿ ಪದ್ಧತಿಯು ಸ್ವದೇಶೀ ಮತ್ತು ವಿದೇಶೀ ಸರಕುಗಳ ನಡುವೆ ಭೇದಭಾವ ಮಾಡುವುದಿಲ್ಲವೋ, ಮತ್ತು ಆ ಮೂಲಕ ವಿದೇಶಿ ಸರಕುಗಳ ಮೇಲೆ ಹೆಚ್ಚುವರಿ ಹೊರೆಯನ್ನು ಹೇರುವುದಿಲ್ಲವೋ, ಹಾಗೂ ಸ್ವದೇಶಿ ಸರಕುಗಳಿಗೆ ವಿಶೇಷ ಅನುಗ್ರಹ ನೀಡುವುದಿಲ್ಲವೋ ಅದೇ ಮುಕ್ತ ವ್ಯಾಪಾರ". ಸಂಪ್ರದಾಯ ಪಂಥದ ಅರ್ಥಶಾಸ್ತ್ರಜ್ಞರು ಅದರಲ್ಲಿಯೂ ಜೆ.ಎಸ್.ಮಿಲ್ ಮುಕ್ತ ವ್ಯಾಪಾರ ನೀತಿಯ ಪ್ರಬಲ ಪ್ರತಿಪಾದಕರಾಗಿದ್ದರು. ದೇಶಗಳ ನಡುವೆ ಮುಕ್ತ ವ್ಯಾಪಾರವೇರ್ಪಟ್ಟಾಗ ಹಲವು ಪ್ರಯೋಜನಗಳು ಲಭಿಸುತ್ತವೆ ಮತ್ತು ಆರ್ಥಿಕಾಭಿವೃದ್ಧಿಯು ಸುಲಭವಾಗಿ ಸಾಧನೆಯಾಗುತ್ತದೆ ಎಂಬುದು ಅವರ ವಾದವಾಗಿತ್ತು.

ಮುಕ್ತ ವ್ಯಾಪಾರದ ಪರ ವಾದಗಳು
(Arguments For Free Trade)

ಮುಕ್ತ ವ್ಯಾಪಾರವು ಈ ಕೆಳಗಿನ ಪ್ರಯೋಜನಗಳನ್ನು ದೊರಕಿಸಿಕೊಡುತ್ತದೆಂದು ಅದರ ಪ್ರತಿಪಾದಕರು ವಾದಿಸಿದ್ದಾರೆ.

1. ಅಂತರರಾಷ್ಟ್ರೀಯ ವೈಶಿಷ್ಟ್ಯತೆ (International Specialisation): ಮುಕ್ತ ವ್ಯಾಪಾರದ ಫಲವಾಗಿ ಅಂತರರಾಷ್ಟ್ರೀಯ ವೈಶಿಷ್ಟ್ಯತೆ ಬೆಳೆಯುತ್ತದೆ. ವಿವಿಧ ದೇಶಗಳು ತಮಗೆ ಅನುಕೂಲತೆಯಿರುವ ಸರಕುಗಳ ಉತ್ಪಾದನೆಯಲ್ಲಿ ಮಾತ್ರ ತಮ್ಮ ಪ್ರಯತ್ನಗಳನ್ನು ಕೇಂದ್ರೀಕರಿಸಿ ಇತರ ಸರಕುಗಳನ್ನು ನಿರ್ಬಂಧವಿಲ್ಲದೆ ಇತರ ದೇಶಗಳಿಂದ ಆಮದು ಮಾಡಿಕೊಳ್ಳಬಹುದಾಗಿರುತ್ತದೆ.

2. ಒಟ್ಟು ಉತ್ಪಾದನೆಯ ಹೆಚ್ಚಳ (Increase in Total Production): ಪ್ರತಿಯೊಂದು ದೇಶವೂ ತನ್ನಲ್ಲಿರುವ ಕೊರತೆಯ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಮತ್ತು ಗರಿಷ್ಠ ಉತ್ಪಾದನೆಯನ್ನು ನೀಡುವಂತಹ ಚಟುವಟಿಕೆಗಳಲ್ಲಿ ತೊಡಗಿಸುವುದರಿಂದ ಒಟ್ಟು ಉತ್ಪನ್ನದಲ್ಲಿ ಹೆಚ್ಚಳ ಉಂಟಾಗುತ್ತದೆ. ಇದರಿಂದಾಗಿ

ವ್ಯಾಪಾರದಲ್ಲಿ ನಿರತವಾಗಿರುವ ರಾಷ್ಟ್ರಗಳ ನೈಜ ಆದಾಯವು ಅಧಿಕಗೊಳ್ಳುತ್ತದೆ.

3. ಪೈಪೋಟಿ (Competition): ಮುಕ್ತ ವ್ಯಾಪಾರದಲ್ಲಿ ಸ್ವದೇಶಿ ಸರಕುಗಳ ಮತ್ತು ವಿದೇಶಿ ಸರಕುಗಳ ನಡುವೆ ಪೈಪೋಟಿ ಏರ್ಪಡುವುದರಿಂದ ಸ್ವದೇಶಿ ಮಾರುಕಟ್ಟೆಯಲ್ಲಿ ಏಕಸ್ವಾಮ್ಯ ಪ್ರವೃತ್ತಿಗಳ ಬೆಳವಣಿಗೆಗೆ ಅವಕಾಶ ದೊರೆಯುವುದಿಲ್ಲ. ಈ ಪೈಪೋಟಿಯ ಕಾರಣದಿಂದ ಸ್ವದೇಶೀ ಮಾರುಕಟ್ಟೆಯಲ್ಲಿ ಸರಕುಗಳು ಸ್ಪರ್ಧಾತ್ಮಕ ಬೆಲೆಯಲ್ಲಿ ಸಿಗುತ್ತವೆ ಮತ್ತು ಉತ್ಪಾದನೆ ಹಾಗೂ ಮಾರಾಟ ವ್ಯವಸ್ಥೆಯಲ್ಲಿ ಏಕ ಸ್ವಾಮ್ಯದ ಬದಲು ಸಂಪೂರ್ಣ ಪೈಪೋಟಿಯ ಸ್ಥಿತಿಯು ನೆಲೆಸುತ್ತದೆ. ಈ ಪರಿಣಾಮವಾಗಿ ಅನುಭೋಗಿಗಳ ಶೋಷಣೆ ತಪ್ಪುತ್ತದೆ.

4. ಅಗ್ಗದ ಆಮದುಗಳು (Cheap Imports): ಮುಕ್ತ ವ್ಯಾಪಾರದಿಂದ ಅನುಭೋಗಿಗಳಿಗೆ ಸರಕುಗಳು ಸುಲಭ ಬೆಲೆಯಲ್ಲಿ ದೊರೆಯುತ್ತವೆ. ಅಗ್ಗದ ಮೂಲದಿಂದ ವಿಧವಿಧವಾದ ಸರಕುಗಳನ್ನು ಪಡೆದುಕೊಳ್ಳಲು ಮುಕ್ತ ವ್ಯಾಪಾರವು ಅವಕಾಶವನ್ನು ಸೃಷ್ಟಿಸುವುದು ಅದರ ಮಹತ್ವದ ಪ್ರಯೋಜನವೆಂದರೆ ತಪ್ಪಾಗಲಾರದು.

5. ಜಾಗತಿಕ ಸಂಪನ್ಮೂಲಗಳ ಹಿತಕರ ಬಳಕೆ (Optimum Utilisation of World Resources): ಮುಕ್ತ ವ್ಯಾಪಾರದಲ್ಲಿ ಜಾಗತಿಕ ಸಂಪನ್ಮೂಲಗಳನ್ನು ಹಿತಕರ ಉಪಯೋಗದಲ್ಲಿ ತೊಡಗಿಸಲು ಗರಿಷ್ಠ ವ್ಯಾಪ್ತಿಯು ಸಿಗುತ್ತದೆ. ಪ್ರತಿಯೊಂದು ದೇಶವು ತನ್ನ ಸರಕುಗಳನ್ನು ಅತ್ಯಧಿಕ ಬೆಲೆ ದೊರೆಯುವ ದೇಶಕ್ಕೆ ರಫ್ತು ಮಾಡುತ್ತದೆ ಮತ್ತು ತನಗೆ ಅಗತ್ಯವಿರುವ ಕಚ್ಚಾ ಮಾಲುಗಳನ್ನು ಮತ್ತು ಇನ್ನಿತರ ಸರಕುಗಳನ್ನು ಅತಿ ಕಡಿಮೆ ಬೆಲೆಯಲ್ಲಿ ದೊರೆಯುವ ದೇಶಗಳಿಂದ ಆಮದು ಮಾಡಿಕೊಳ್ಳುತ್ತದೆ. ಅಂದರೆ ಮುಕ್ತ ವ್ಯಾಪಾರದಲ್ಲಿ ಪ್ರತಿಯೊಂದು ದೇಶವೂ ತನ್ನ ರಫ್ತು ಸರಕುಗಳ ಮಾರಾಟ ಹಾಗೂ ಆಮದು ಸರಕುಗಳ ವಿರೀದಿಯಲ್ಲಿ ಪೂರ್ಣ ಸ್ವಾತಂತ್ರ್ಯವನ್ನು ಅನುಭವಿಸುತ್ತದೆ. ಪ್ರತಿಯೊಂದು ದೇಶವೂ ಮಾರುವ ಮತ್ತು ಕೊಳ್ಳುವ ಸಹಸ್ರಾರು ಮಾರುಕಟ್ಟೆಗಳನ್ನು ಹೊಂದಿರುವ ಫಲವಾಗಿ ಒಂದು ದೇಶವು ಇನ್ನೊಂದು ದೇಶವನ್ನು ಶೋಷಣೆ ಮಾಡಲು ಸಾಧ್ಯವಾಗುವುದಿಲ್ಲ.

6. ಅಲ್ಪಾಭಿವೃದ್ಧಿ ದೇಶಗಳ ಆರ್ಥಿಕಾಭಿವೃದ್ಧಿ (Economic Development of Less Developed Countries): ಮುಕ್ತ ವ್ಯಾಪಾರವು ಅನಭಿವೃದ್ಧಿ ದೇಶಗಳ ಆರ್ಥಿಕಾಭಿವೃದ್ಧಿಗೆ ಸಹಾಯ ಮಾಡುತ್ತದೆಂದು ಹ್ಯಾಬೆರ್ಲರ್ ವಾದಿಸಿದ್ದಾರೆ. ಈ ದೇಶಗಳು ತಮ್ಮ ಆರ್ಥಿಕಾಭಿವೃದ್ಧಿಗೆ ಅಗತ್ಯವಿರುವ ಬಂಡವಾಳ ಸರಕುಗಳು ಮತ್ತು ಕಚ್ಚಾ ಸರಕುಗಳನ್ನು ಸುಲಭವಾಗಿ ಆಮದು ಮಾಡಿಕೊಳ್ಳಬಹುದು. ಅನಭಿವೃದ್ಧಿ ದೇಶಗಳಿಗೆ ತಾಂತ್ರಿಕ ಮತ್ತು ನಿರ್ವಹಣ ಜ್ಞಾನ ಹಾಗೂ ಉದ್ಯಮ ಶೀಲತೆಯನ್ನು ಆಮದು ಮಾಡಿಕೊಳ್ಳಲು ಮುಕ್ತ ವ್ಯಾಪಾರವು ನೆರವಾಗು ತ್ತದೆ. ಮುಕ್ತ ವ್ಯಾಪಾರ ನೀತಿಯಲ್ಲಿ ಅಂತರರಾಷ್ಟ್ರೀಯ ಬಂಡವಾಳ ಚಲನೆಯು ಸುಗಮವಾಗಿ ನೆರವೇರುವುದರಿಂದ ಅನಭಿವೃದ್ಧಿ ದೇಶಗಳ ಆರ್ಥಿಕಾಭಿವೃದ್ಧಿಗೆ ಅನುಕೂಲವಾಗುತ್ತದೆ.

7. ದಕ್ಷ ಉತ್ಪಾದನ ವ್ಯವಸ್ಥೆ (Efficient Production System): ಮುಕ್ತ ವ್ಯಾಪಾರದಲ್ಲಿ ಸ್ವದೇಶೀ ಮತ್ತು ವಿದೇಶೀ ಉತ್ಪಾದಕರ ನಡುವೆ ತೀವ್ರ ಸ್ಪರ್ಧೆ ಏರ್ಪಡುವುದರಿಂದ ಅದಕ್ಷ ಉತ್ಪಾದಕರು ಉತ್ಪಾದನ ವ್ಯವಸ್ಥೆಯಿಂದ ನಿರ್ಗಮಿಸಬೇಕಾಗುತ್ತದೆ ಅಥವಾ ದಕ್ಷತೆಯನ್ನು ಉತ್ತಮಪಡಿಸಿಕೊಳ್ಳಬೇಕಾಗುತ್ತದೆ. ಏಕೆಂದರೆ ಉದ್ಯಮಿಗಳು ಅದಕ್ಷತೆ ಮತ್ತು ಅಸಮರ್ಥತೆಯನ್ನು ಮೈಗೂಡಿಸಿಕೊಂಡರೆ ಸ್ಪರ್ಧಾತ್ಮಕವಾಗಿ ಉತ್ಪಾದಿಸಲು ಮತ್ತು ಉದ್ಯಮರಂಗದಲ್ಲಿ ಮುಂದುವರಿಯಲು ಸಾಧ್ಯವಾಗುವುದಿಲ್ಲ. ಮುಕ್ತ ವ್ಯಾಪಾರದಿಂದಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಶ್ರಮವಿಭಜನೆಯು ಜರುಗುವುದರಿಂದ ಮಿತವ್ಯಯ ಮತ್ತು ದಕ್ಷತೆಯಿಂದ ಸರಕುಗಳನ್ನು ಉತ್ಪಾದಿಸಲು ಸುವರ್ಣಾವಕಾಶ ಲಭಿಸುತ್ತದೆ.

8. ತುರ್ತು ಸಂದರ್ಭಗಳಲ್ಲಿ ಆಮದುಗಳ ಸಾಧ್ಯತೆ (Possibility of Imports in Emergencies): ಕ್ಷಾಮ ಮೊದಲಾದ ನೈಸರ್ಗಿಕ ವಿಪತ್ತಿನ ಮತ್ತಿತರ ತುರ್ತು ಸಂದರ್ಭಗಳಲ್ಲಿ ಅಗತ್ಯ ವಸ್ತುಗಳನ್ನು ವಿದೇಶಗಳಿಂದ ಶೀಘ್ರವಾಗಿ ಪಡೆದುಕೊಳ್ಳಲು ಮುಕ್ತ ವ್ಯಾಪಾರವು ಸಹಾಯ ಮಾಡುತ್ತದೆ.

9. ಶಾಂತಿ ಮತ್ತು ಸೌಹಾರ್ದತೆ (Peace and Harmony): ಮುಕ್ತ ವ್ಯಾಪಾರದಿಂದ ದೇಶಗಳ ನಡುವೆ ಸೌಹಾರ್ದತೆ ಮತ್ತು ಶಾಂತಿ ಹೆಚ್ಚುತ್ತದೆ. ಜಗತ್ತಿನ ವಿಭಿನ್ನ ರಾಷ್ಟ್ರಗಳು ಅನಗತ್ಯ ಪೈಪೋಟಿ ಮತ್ತು ನಿರ್ಬಂಧಗಳನ್ನು ದೂರವಿರಿಸಿ ವ್ಯಾಪಾರದಲ್ಲಿ ತೊಡಗುತ್ತವೆ. ಇದರಿಂದಾಗಿ ಅಂತರರಾಷ್ಟ್ರೀಯ ಸಹಬಾಳ್ವೆಯ ವಾತಾವರಣ ನಿರ್ಮಾಣಗೊಳ್ಳುತ್ತದೆ.

ಮುಕ್ತ ವ್ಯಾಪಾರದ ವಿರುದ್ಧ ವಾದಗಳು
(Arguments Against Free Trade)

ಮುಕ್ತ ವ್ಯಾಪಾರ ನೀತಿಯ ದುಷ್ಪರಿಣಾಮಗಳು ಈ ಕೆಳಗಿನಂತಿವೆ.

1. ವಿದೇಶಗಳ ಮೇಲೆ ಪರಾವಲಂಬನ (Dependence on Foreign Countries): ಮುಕ್ತ ವ್ಯಾಪಾರದಿಂದ ವಿದೇಶಗಳ ಮೇಲಿನ ಪರಾವಲಂಬನ ಹೆಚ್ಚುತ್ತದೆ. ಸ್ವದೇಶೀ ಉದ್ಯಮದಲ್ಲಿ ದಕ್ಷತೆ ಮತ್ತು ಸಾಮರ್ಥ್ಯ ನಾಶವಾಗುತ್ತವೆ. ಏಕೆಂದರೆ ಯಾವ ಸರಕುಗಳನ್ನಾದರೂ ಸುಲಭ ಬೆಲೆಯಲ್ಲಿ ಮತ್ತು ಸುಗಮವಾಗಿ ಆಮದು ಮಾಡಿಕೊಳ್ಳಲು ಅವಕಾಶವಿರುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಯಾವುದೊಂದು ದೇಶವು ಸರಕುಗಳನ್ನು ವಿದೇಶಗಳಿಂದ ಮುಕ್ತವಾಗಿ, ಅಡೆತಡೆಗಳಿಲ್ಲದೆ ಆಮದು ಮಾಡಿಕೊಳ್ಳಲು ಅವಕಾಶಗಳಿರುವುದರಿಂದ ಆ ಸರಕುಗಳನ್ನು ಸ್ವದೇಶದಲ್ಲಿ ಉತ್ಪಾದಿಸಲು ಅದು ಪ್ರಯತ್ನಗಳನ್ನು ಕೇಂದ್ರೀಕರಿಸುವುದಿಲ್ಲ.

2. ಅನಾರೋಗ್ಯಕರ ಮತ್ತು ಹಾನಿಕಾರಕ ಸ್ಪರ್ಧೆ (Unhealthy and Harmful Competition): ಮುಕ್ತ ವ್ಯಾಪಾರ ನೀತಿಯು ಸ್ವದೇಶೀ ಸರಕುಗಳ ಮತ್ತು ವಿದೇಶೀ

ಸರಕುಗಳ ನಡುವೆ ಅನಾರೋಗ್ಯಕರವಾದ ಮತ್ತು ಹಾನಿಕಾರಕವಾದ ಸ್ಪರ್ಧೆಗೆ ಅವಕಾಶ ಕಲ್ಪಿಸಿಕೊಡುತ್ತದೆ. ವಿದೇಶಗಳಿಂದ ಯಾವುದೇ ನಿರ್ಬಂಧವಿಲ್ಲದೆ ಮುಕ್ತವಾಗಿ ಸರಕುಗಳನ್ನು ಆಮದು ಮಾಡಿಕೊಳ್ಳಲು ಅವಕಾಶವಿರುವುದರಿಂದ ವಿದೇಶೀ ಸರಕುಗಳು ಭಾರೀ ಪ್ರಮಾಣದಲ್ಲಿ ಸ್ವದೇಶೀ ಮಾರುಕಟ್ಟೆಗೆ ಹರಿದು ಬರುತ್ತವೆ ಮತ್ತು ಇದರಿಂದ ಈ ರೀತಿಯ ಸ್ಪರ್ಧೆ ಸಂಭವಿಸುತ್ತದೆ.

3. ಸಮತೂಕರಹಿತ ಆರ್ಥಿಕಾಭಿವೃದ್ಧಿ (Unbalanced Economic Growth): ಸಮತೂಕ ರಹಿತ ಆರ್ಥಿಕಾಭಿವೃದ್ಧಿಯು ಮುಕ್ತ ವ್ಯಾಪಾರದ ಇನ್ನೊಂದು ಅವಗುಣವಾಗಿದೆ. ವಿದೇಶಗಳಿಂದ ಮುಕ್ತವಾಗಿ ಸರಕುಗಳನ್ನು ಆಮದು ಮಾಡಿಕೊಳ್ಳಬಹುದಾಗಿರುವುದರಿಂದ ಯಾವುದೊಂದು ದೇಶವು ಕೆಲವೇ ವಲಯಗಳ ಅಭಿವೃದ್ಧಿಯಲ್ಲಿ ಮತ್ತು ಕೆಲವೇ ಸರಕುಗಳ ಉತ್ಪಾದನೆಯಲ್ಲಿ ತೊಡಗುತ್ತದೆ. ಇದರಿಂದ ಕೆಲವು ಆರ್ಥಿಕ ವಲಯಗಳು ಮಾತ್ರ ಪ್ರಗತಿ ಹೊಂದಿ ಇತರ ವಲಯಗಳು ಹಿಂದುಳಿಯುತ್ತವೆ. ಕೆಲವೇ ಸರಕುಗಳ ಉತ್ಪಾದನೆಯಲ್ಲಿ ಮಾತ್ರ ಪ್ರಯತ್ನ ಗಳನ್ನು ಕೇಂದ್ರೀಕರಿಸಿ ಇತರ ಸರಕುಗಳಿಗೆ ವಿದೇಶಗಳನ್ನು ಅವಲಂಬಿಸಿರುವುದರಿಂದ ದೇಶದಲ್ಲಿ ವ್ಯವಸ್ಥಿತವಾದ ಮತ್ತು ಸಮತೂಕ ಅಭಿವೃದ್ಧಿ ನೆರವೇರುವುದಿಲ್ಲ.

4. ಆರ್ಥಿಕ ಸಮಸ್ಯೆಗಳ ಒಳಪ್ರವಹನ (Inflow of Economic Problems): ಮುಕ್ತ ವ್ಯಾಪಾರದಿಂದ ಹಣದುಬ್ಬರ, ಮುಗ್ಗಟ್ಟು ಮೊದಲಾದ ಆರ್ಥಿಕ ವ್ಯಾಧಿಗಳು ದೇಶದೊಳಗೆ ಸುಲಭವಾಗಿ ಹರಿದು ಬರುತ್ತವೆ. ಉದಾಹರಣೆಗೆ, ವಿದೇಶದಲ್ಲಿ ಸರಕುಗಳ ಬೆಲೆಯು ಅಧಿಕವಾಗಿದ್ದರೆ ಆ ದೇಶದಿಂದ ಸರಕುಗಳನ್ನು ಆಮದು ಮಾಡಿಕೊಂಡಾಗ ಸ್ವದೇಶೀ ಮಾರುಕಟ್ಟೆಯಲ್ಲಿಯೂ ಅದರ ಬೆಲೆ ಹೆಚ್ಚಾಗಿರುತ್ತದೆ. ಅಲ್ಲದೆ ಸ್ವದೇಶೀ ಸರಕಿನ ಬೆಲೆಯನ್ನು ವಿದೇಶೀ ಸರಕಿನ ಮಟ್ಟಕ್ಕೆ ಏರಿಸಲು ಉತ್ಪಾದಕರು ಮುಂದಾಗುತ್ತಾರೆ. ಈ ಕಾರಣದಿಂದ ಬೆಲೆ ಏರಿಕೆಯು ಸುಲಭವಾಗಿ ಸಂಭವಿಸುತ್ತದೆ.

II. ರಕ್ಷಣಾ ನೀತಿ
(Protectionist Policy)

ಸ್ವದೇಶೀ ಉದ್ಯಮಗಳನ್ನು ವಿದೇಶೀ ಸ್ಪರ್ಧೆಯಿಂದ ರಕ್ಷಿಸಲು ಅಳವಡಿಸಿಕೊಳ್ಳುವಂತಹ ವಾಣಿಜ್ಯ ನೀತಿಯನ್ನು ರಕ್ಷಣಾ ನೀತಿ ಅಥವಾ ರಕ್ಷಣಾ ವ್ಯಾಪಾರ ಎಂದು ಕರೆಯಲಾಗುತ್ತದೆ. ಅಗ್ಗದ ಆಮದು ಸರಕುಗಳಿಂದ ಎದುರಾಗುವ ಸ್ಪರ್ಧೆಯಿಂದ ಸ್ವದೇಶೀ ಉದ್ಯಮವನ್ನು ರಕ್ಷಿಸುವುದು ಈ ನೀತಿಯ ಧ್ಯೇಯವಾಗಿರುತ್ತದೆ. ಅದರಲ್ಲಿಯೂ ಸ್ವದೇಶೀ ಸರಕುಗಳ ಬೆಲೆಗಳು ಅಧಿಕವಾಗಿದ್ದರೆ ವಿದೇಶೀ ಸರಕುಗಳ ವಿರುದ್ಧ ಅವುಗಳಿಗೆ ಬೇಡಿಕೆ ಒದಗುವುದಿಲ್ಲ. ಈ ಕಾರಣದಿಂದ ಸ್ವದೇಶೀ ಸರಕುಗಳಿಗೆ ಬೇಡಿಕೆ ಕುಸಿಯುತ್ತದೆ.

ಪರಿಣಾಮವಾಗಿ ಉತ್ಪಾದನೆಯ ಪ್ರಮಾಣವನ್ನು ಕಡಿತಗೊಳಿಸ ಬೇಕಾದ ಅನಿವಾರ್ಯ ಪರಿಸ್ಥಿತಿ ತಲೆದೋರುತ್ತದೆ. ಇದರಿಂದಾಗಿ ಸ್ವದೇಶೀ ಉದ್ಯಮವು ಅಪಾಯದ ಅಂಚನ್ನು ತಲುಪುತ್ತದೆ. ವಿವಿಧ ನಿರ್ಬಂಧಗಳ ಮೂಲಕ ಸರಕುಗಳ ಆಮದುಗಳಿಗೆ ಅಡಚಣೆಯೊಡ್ಡಿ ಸ್ವದೇಶೀ ಉದ್ಯಮಗಳ ಬೆಳವಣಿಗೆಗೆ ಅವಕಾಶ ಕಲ್ಪಿಸುವಂತಹ ಪದ್ಧತಿಯೇ ರಕ್ಷಣಾ ನೀತಿ. ಆಮದುಗಳ ಪ್ರಮಾಣವನ್ನು ನಿರ್ಬಂಧಿಸುವಿಕೆ, ಆಮದು ಸರಕುಗಳ ಮೇಲೆ ಸುಂಕಗಳನ್ನು ವಿಧಿಸುವ ಮೂಲಕ ಅವು ದುಬಾರಿಯಾಗುವಂತೆ ಮಾಡಿ ಆಮದುಗಳನ್ನು ಕುಗ್ಗಿಸುವಿಕೆ, ಆಮದುಗಳನ್ನು ಸಂಪೂರ್ಣವಾಗಿ ನಿಲ್ಲಿಸುವಿಕೆ ಮೊದಲಾದ ಕ್ರಮಗಳ ಮೂಲಕ ಸ್ವದೇಶೀ ಉದ್ಯಮಗಳಿಗೆ ರಕ್ಷಣೆ ನೀಡಲಾಗುತ್ತದೆ ಮತ್ತು ಸ್ವದೇಶೀ ಸರಕುಗಳ ಉತ್ಪಾದನೆಯನ್ನು ವಿಸ್ತರಿಸಲಾಗುತ್ತದೆ.

ಆ ಪ್ರಕಾರ, ಮುಕ್ತ ವ್ಯಾಪಾರಕ್ಕೆ ವಿರುದ್ಧವಾದುದೇ ರಕ್ಷಣಾ ನೀತಿ. ರಕ್ಷಣಾ ವ್ಯಾಪಾರದಲ್ಲಿ ಸ್ವದೇಶೀ ಉದ್ಯಮಗಳಿಗೆ ವಿದೇಶೀ ಸ್ಪರ್ಧೆಯಿಂದ ರಕ್ಷಣೆಯನ್ನು ನೀಡುವಂತಹ ನೀತಿಯನ್ನು ಅನುಸರಿಸಲಾಗುತ್ತದೆ. ವಿದೇಶಗಳಿಂದ ಸರಕುಗಳ ಆಮದಿನ ಪ್ರಮಾಣವನ್ನು ಭೌತಿಕವಾಗಿ ನಿರ್ಬಂಧಿಸುವಿಕೆ, ಆಮದು ಸರಕುಗಳ ಮೇಲೆ ಸುಂಕಗಳನ್ನು ಹೇರುವ ಮೂಲಕ ಅವು ದುಬಾರಿ ಯಾಗುವಂತೆ ಮಾಡಿ ಆಮದುಗಳನ್ನು ಕಡಿತಗೊಳಿಸುವಿಕೆ ಮೊದಲಾದ ಕ್ರಮಗಳ ಮೂಲಕ ವಿದೇಶೀ ಸರಕುಗಳಿಗೆ ಬದಲಾಗಿ ಸ್ವದೇಶದಲ್ಲಿಯೇ ಉತ್ಪಾದನೆಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತದೆ. ಈ ಮಾರ್ಗದಿಂದ ಸ್ವದೇಶೀ ಉದ್ಯಮಗಳಿಂದ ರಕ್ಷಣೆಯನ್ನು ಒದಗಿಸಲಾಗುತ್ತದೆ ಮತ್ತು ಸ್ವದೇಶೀ ಉದ್ಯಮಗಳು ವ್ಯವಸ್ಥಿತವಾಗಿ ಬೆಳೆಯಲು ಅವಕಾಶ ಕಲ್ಪಿಸಿಕೊಡಲಾಗುತ್ತದೆ.

ಈ ಸಂದರ್ಭದಲ್ಲಿ ಒಂದು ಮುಖ್ಯ ಸಂಗತಿಯನ್ನು ಗಮನಿಸುವುದು ಆವಶ್ಯಕ. ವಿದೇಶಗಳಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಸುಂಕಗಳನ್ನು ವಿಧಿಸಿದಾಗ ಆ ಸರಕುಗಳು ದುಬಾರಿಯಾಗುತ್ತವೆ. ಏಕೆಂದರೆ, ಸರಕುಗಳ ಬೆಲೆಯ ಜೊತೆಗೆ ಸುಂಕವೂ ಸೇರಿಕೊಳ್ಳುತ್ತದೆ. ಬೆಲೆಯ ಹೆಚ್ಚಳದಿಂದಾಗಿ ಆಮದು ಸರಕುಗಳಿಗೆ ಬೇಡಿಕೆ ತಗ್ಗುತ್ತದೆ. ಅಲ್ಲದೆ ಸುಂಕ ವಿಧಿಸುವುದಕ್ಕೆ ಮೊದಲು ಅಗ್ಗವಾಗಿದ್ದ ಆಮದು ಸರಕುಗಳ ಬೆಲೆಗಳು ಈಗ ದುಬಾರಿಯಾಗಿರುವ ಸ್ವದೇಶೀ ಸರಕುಗಳ ಮಟ್ಟಕ್ಕೆ ಏರುವುದರಿಂದ ಸ್ವದೇಶೀ ಸರಕುಗಳು ವಿದೇಶೀ ಸರಕುಗಳೊಡನೆ ಅತಿ ಸಮರ್ಥವಾಗಿ ಸ್ಪರ್ಧಿಸುತ್ತವೆ. ಅಂತೆಯೇ ನಮ್ಮ ದೇಶದಿಂದ ರಫ್ತಾಗುವ ಸರಕುಗಳ ಮೇಲೆ ಸುಂಕಗಳನ್ನು ಹೇರುವುದರಿಂದ ಅವುಗಳ ಬೆಲೆಯು ಹೆಚ್ಚಿ ವಿದೇಶಗಳಲ್ಲಿ ಅವುಗಳಿಗೆ ಬೇಡಿಕೆ ಕಡಿಮೆಯಾಗುತ್ತದೆ. ಆದರೆ ಆಮದು ಸುಂಕದಲ್ಲಾಗಲೀ, ರಫ್ತು ಸುಂಕದಲ್ಲಾಗಲೀ ಅದರ ವರಮಾನವು ಅದನ್ನು ವಿಧಿಸಿದ ದೇಶದ ಸರ್ಕಾರಕ್ಕೆ ದೊರೆಯುತ್ತದೆ.

ರಕ್ಷಣೆಯ ವಿಧಗಳು

(Types of Protection)

ಮೊದಲೇ ವಿವರಿಸಿರುವಂತೆ ರಕ್ಷಣೆ ಎಂದರೆ ವಿದೇಶೀ ಉದ್ಯಮಗಳ ಪೈಪೋಟಿಯಿಂದ ಸ್ವದೇಶೀ ಉದ್ಯಮಗಳನ್ನು ರಕ್ಷಿಸುವ ನೀತಿಯಾಗಿರುತ್ತದೆ. ಸ್ವದೇಶೀ ಉದ್ಯಮಗಳನ್ನು ರಕ್ಷಿಸಿದಾಗ ಅವು ಉತ್ಪಾದನೆಯನ್ನು ಹೆಚ್ಚಿಸಿಕೊಂಡು ಬಲಿಷ್ಠಗೊಳ್ಳುತ್ತವೆ ಮತ್ತು ರಾಷ್ಟ್ರದ ಅರ್ಥವ್ಯವಸ್ಥೆಯು ಸದೃಢವಾಗುತ್ತದೆ. ರಕ್ಷಣಾ ನೀತಿಯ ಹೊರತು ವಿದೇಶಗಳ ಮೇಲಿನ ಅವಲಂಬನವು ಹೆಚ್ಚುತ್ತದೆ.

ಸ್ವದೇಶೀ ಉದ್ಯಮದ ರಕ್ಷಣೆಗಾಗಿ ಯಾವುದೊಂದು ದೇಶವು ಹಲವು ರೀತಿಗಳ ನಿರ್ಬಂಧ ವಿಧಾನಗಳನ್ನು ಅನುಸರಿಸಬಹುದು. ಕೆಲವು ವಿಧಾನಗಳು ಆಮದುಗಳನ್ನು ಪರಿಮಾಣಾತ್ಮಕವಾಗಿ ನಿರ್ಬಂಧಿಸಿದರೆ ಮತ್ತು ಕೆಲವು ವಿಧಾನಗಳು ಆಮದು ಸರಕುಗಳ ಬೆಲೆಗಳನ್ನು ಏರಿಸುವ ಮೂಲಕ ಅವುಗಳ ಗಾತ್ರವನ್ನು ಕುಗ್ಗಿಸಲು ನೆರವಾಗುತ್ತವೆ.

1. ಸುಂಕಗಳು (Tariffs) : ಆಮದು ಸರಕುಗಳ ಮತ್ತು ರಫ್ತು ಸರಕುಗಳ ಮೇಲೆ ವಿಧಿಸುವ ತೆರಿಗೆಗಳಿಗೆ ಸುಂಕಗಳೆಂದು ಹೆಸರು. ರಕ್ಷಣಾ ನೀತಿಯ ದೃಷ್ಟಿಯಿಂದ ಆಮದು ಸುಂಕಗಳನ್ನು (Import duties) ವಿಧಿಸಲಾಗುತ್ತದೆ. ಸುಂಕಗಳನ್ನು ವಿಧಿಸುವಿಕೆಯಿಂದ ಆಮದು ಸರಕುಗಳ ಬೆಲೆಗಳು ಹೆಚ್ಚುತ್ತವೆ. ಈ ಪರಿಣಾಮವಾಗಿ ಆಮದುಗಳ ಗಾತ್ರವನ್ನು ಕಡಿಮೆ ಮಾಡಲೇಬೇಕಾಗುತ್ತದೆ. ಆಗ ವಿದೇಶಗಳಿಗೆ ಪಾವತಿಸಬೇಕಾದ ಹಣದ ಉಳಿತಾಯ ವಾಗುವುದಲ್ಲದೆ, ಆಮದು ಸರಕುಗಳನ್ನು ದೇಶದಲ್ಲಿಯೇ ಉತ್ಪಾದಿಸಲು ಅವಕಾಶ ಲಭಿಸುತ್ತದೆ. ಸುಂಕಗಳ ವಿಧಿಸುವಿಕೆ ಯಿಂದಾಗಿ ಆಮದು ಸರಕುಗಳ ಬೆಲೆಗಳು ಸ್ವದೇಶೀ ಸರಕುಗಳ ಬೆಲೆಗಳ ಮಟ್ಟಕ್ಕೆ ಏರುವುದರಿಂದ ಸ್ವದೇಶೀ ಸರಕುಗಳು ವಿದೇಶೀ ಸರಕುಗಳೊಡನೆ ಸಮರ್ಥವಾಗಿ ಸ್ಪರ್ಧಿಸಲು ಸಾಧ್ಯವಾಗುತ್ತದೆ. ಆ ಪ್ರಕಾರ, ಆಮದು ಸುಂಕಗಳು ವ್ಯಾಪಾರದ ಮೇಲಿನ ಪ್ರಮುಖ ನಿರ್ಬಂಧಗಳಾಗಿವೆ.

2. ದೇಯಾಂಶಗಳು (Quotas): ಆಮದುಗಳ ಗಾತ್ರವನ್ನು ನಿಗದಿಗೊಳಿಸಿ ನಿಯಮಿಸುವುದಕ್ಕೆ **"ದೇಯಾಂಶ"** ಎಂದು ಹೆಸರು. ಉದಾಹರಣೆಗೆ, ಯಾವುದೊಂದು ದೇಶವು ಒಂದು ವರ್ಷದಲ್ಲಿ ಇಷ್ಟೇ ಪ್ರಮಾಣದ ಸರಕುಗಳನ್ನು ಆಮದು ಮಾಡಿಕೊಳ್ಳ ಬೇಕೆಂದು ನಿಯಮಿಸಿ ಕೊಂಡಿರುತ್ತದೆ. ಇದಕ್ಕೆ ಮೀರಿ ಆಮದುಗಳನ್ನು ಮಾಡಿಕೊಳ್ಳಲು ನಿರ್ಬಂಧವಿರುತ್ತದೆ. ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ಎಷ್ಟು ಗಾತ್ರದ ಸರಕುಗಳನ್ನು ಆಮದು ಮಾಡಿ ಕೊಳ್ಳಬೇಕೆಂದು ಕಟ್ಟಪ್ಪಣೆ ಮಾಡಲಾಗಿರುತ್ತದೆಯೋ ಅಷ್ಟು ಸರಕುಗಳ ಆಮದಿಗೆ ಮಾತ್ರ ಪರವಾನೆ ನೀಡಲಾಗುತ್ತದೆ. ಈ ಮೂಲಕ ಮನಸ್ಸೇಚ್ಛೆಯಾಗಿ ಮತ್ತು ವಿಪರೀತ ಪ್ರಮಾಣ ದಲ್ಲಿ ಸರಕುಗಳನ್ನು ಆಮದು ಮಾಡಿಕೊಳ್ಳುವುದು ನಿವಾರಣೆಯಾಗುತ್ತದೆ ಮತ್ತು ಈ ಕಾರಣದಿಂದ ವಿದೇಶೀ ವಿನಿಮಯದ ಸಂರಕ್ಷಣೆಯಾಗುತ್ತದೆ.

ದೇಯಾಂಶ ನಿರ್ಬಂಧಗಳನ್ನು ಸಾಮಾನ್ಯವಾಗಿ ಆಮದು ಪರವಾನಗಿ ನೀತಿಯ(Import Licensing) ಮೂಲಕ ಆಚರಣೆಗೆ ತರಲಾಗುತ್ತದೆ. ಎಷ್ಟು ಸರಕುಗಳನ್ನು ಆಮದು ಮಾಡಿಕೊಳ್ಳಬೇಕೆಂದು ನಿಗದಿಪಡಿಸಲಾಗಿರುತ್ತದೆಯೋ ಅಷ್ಟು ಸರಕುಗಳಿಗೆ ಮಾತ್ರ ಆಮದುದಾರರಿಗೆ ಪರವಾನಗಿಯನ್ನು ಕೊಡಲಾಗುತ್ತದೆ.

i) **ದ್ವಿಪಕ್ಷೀಯ ದೇಯಾಂಶ** (Bilateral quota) : ಆಮದು ಮಾಡಿಕೊಳ್ಳುವ ದೇಶ ಮತ್ತು ರಫ್ತು ಮಾಡುವ ದೇಶಗಳ ನಡುವೆ ಒಂದು ಸಮಾಲೋಚನೆಯ ಮೂಲಕ ನಿಗದಿಗೊಳಿಸುವ ಆಮದಿನ ಗಾತ್ರವು ದ್ವಿಪಕ್ಷೀಯ ದೇಯಾಂಶವಾಗಿರುತ್ತದೆ.

ii) **ಮಿಶ್ರ ದೇಯಾಂಶ** (Mixing quota) : ಈ ವಿಧಾನದಲ್ಲಿ ಉತ್ಪಾದಕರು ಸಿದ್ಧಪಡಿಸಿದ ಸರಕಿನ ಉತ್ಪಾದನೆಯಲ್ಲಿ ಒಂದು ನಿರ್ದಿಷ್ಟ ಪ್ರಮಾಣದವರೆಗೆ ಸ್ವದೇಶಿ ಕಚ್ಚಾವಸ್ತು ಗಳನ್ನು ಉಪಯೋಗಿಸಲೇಬೇಕಾಗಿರುತ್ತದೆ.

3. ವಿನಿಮಯ ನಿರ್ಬಂಧಗಳು (Exchange Restrictions): ವಿದೇಶೀ ವಿನಿಮಯದ ಕೊಳ್ಳುವಿಕೆ ಮತ್ತು ಮಾರುವಿಕೆಯನ್ನು ನಿಯಂತ್ರಿಸುವುದೇ ವಿನಿಮಯ ನಿರ್ಬಂಧ ವಿಧಾನ. ಸರಕುಗಳ ಆಮದಿಗೆ ಸರಿಯಾದ ಪ್ರಮಾಣದಲ್ಲಿ ಹಣವು ದೊರೆಯದಂತೆ ಮಾಡುವುದೇ ವಿನಿಮಯ ನಿರ್ಬಂಧದ ಉದ್ದೇಶ. ಇದರಿಂದ ಆಮದುಗಳು ನಿರ್ಬಂಧಗೊಳ್ಳುವುದಲ್ಲದೆ ವಿದೇಶೀ ವಿನಿಮಯದ ಉಳಿತಾಯವೂ ಆಗುತ್ತದೆ. ಕ್ರಿ.ಶ. 1929-32ರ ಮಹಾ ಆರ್ಥಿಕ ಮುಗ್ಗಟ್ಟಿನ ನಂತರ ಈ ವಿಧಾನವು ವ್ಯಾಪಕವಾಗಿ ಬಳಕೆಗೆ ಬಂದಿದೆ. ಆಗ ಅನೇಕ ದೇಶಗಳು ವಿದೇಶೀ ವಿನಿಮಯದ ತೀವ್ರ ಬಿಕ್ಕಟ್ಟನ್ನು ಎದುರಿಸುತ್ತಿದ್ದುದರಿಂದ ಆಮದುಗಳ ನಿಯಂತ್ರಣಕ್ಕೆ ಈ ವಿಧಾನವನ್ನು ಅನುಸರಿಸಿದವು.

4. ಸರ್ಕಾರಿ ವ್ಯಾಪಾರ (State Trading): ಸರ್ಕಾರಿ ವ್ಯಾಪಾರದ ವಿಧಾನವು ಆಮದುಗಳ ನಿರ್ಬಂಧಕ್ಕೆ ಕಾರಣವಾಗುತ್ತದೆ. ಈ ವಿಧಾನದಲ್ಲಿ ಸರ್ಕಾರವೇ ಯಾವ ಸರಕುಗಳನ್ನು ಆಮದು ಮಾಡಿಕೊಳ್ಳಬೇಕೆಂದು, ಎಷ್ಟನ್ನು ಆಮದು ಮಾಡಿಕೊಳ್ಳಬೇಕು, ಮತ್ತು ಯಾವ ದೇಶಗಳಿಂದ ಆಮದು ಮಾಡಿಕೊಳ್ಳಬೇಕೆಂದು ಸ್ವೇಚ್ಛಾಚಾರದಿಂದ ನಿರ್ಧರಿಸುತ್ತದೆ. ಸರ್ಕಾರಿ ವ್ಯಾಪಾರದ ಫಲವಾಗಿ ಮುಕ್ತ ವ್ಯಾಪಾರಕ್ಕೆ ತಡೆಯುಂಟಾಗುತ್ತದೆ.

5. ಇತರ ವಿಧಾನಗಳು (Other Methods): ಅಂತರರಾಷ್ಟ್ರೀಯ ವ್ಯಾಪಾರದ ಮೇಲೆ ನಿರ್ಬಂಧ ಹೇರುವಂತಹ ಇತರ ಕೆಲವು ವಿಧಾನಗಳಿವೆ. ಅವುಗಳಲ್ಲಿ ಮುಖ್ಯವಾದುವು ಗಳೆಂದರೆ :

i) ಬಹುಮುಖಿ ವಿನಿಮಯ ದರಗಳ ಪ್ರಯೋಗ.

ii) ಆರೋಗ್ಯ ಮತ್ತು ಯೋಗಕ್ಷೇಮ ಕಾಪಾಡುವ ನೆಪದಲ್ಲಿ ಕೆಲವು ನಿರ್ದಿಷ್ಟ ಸರಕುಗಳ ಆಮದುಗಳನ್ನು ಪ್ರತಿಬಂಧಿಸುವಿಕೆ.

iii) ಆಮದುಗಳ ಮೇಲೆ ಉಪಕರಗಳನ್ನು (Surcharge) ವಿಧಿಸುವಿಕೆ, ಮತ್ತು

iv) ಆಮದು ಮಾಡಿಕೊಂಡ ಪ್ರತಿ ವಸ್ತುವಿಗೂ ಅಷ್ಟೇ ಪ್ರಮಾಣದ ಸ್ವದೇಶೀ ವಸ್ತುಗಳನ್ನು ಖರೀದಿಸಬೇಕೆಂದು ಆಯಾತದಾರರ ಮೇಲೆ ಪರತ್ತುಗಳನ್ನು ಹೇರುವಿಕೆ.

ರಕ್ಷಣೆಯ ಪರ ವಾದಗಳು

(Arguments for Protection)

ರಕ್ಷಣಾ ನೀತಿಯಿಂದ ಮುಂದೆ ವಿವರಿಸಿರುವ ಪ್ರಯೋಜನಗಳು ದೊರೆಯುತ್ತವೆ ಎಂಬ ಭಾವನೆಯ ಮೇರೆಗೆ ಅದನ್ನು ಅಳವಡಿಸಿಕೊಳ್ಳಬೇಕೆಂದು ವಾದಿಸಲಾಗಿದೆ.

1. ಶೈಶವಾವಸ್ಥೆಯ ಕೈಗಾರಿಕೆಯ ವಾದ (Infant Industry Argument): ಆಗತಾನೆ ಸ್ಥಾಪನೆಯಾಗಿದ್ದು ಶೈಶವಾವಸ್ಥೆಯಲ್ಲಿರುವ ಕೈಗಾರಿಕೆಗಳು ಪ್ರಬಲವಾದ ಸ್ಪರ್ಧೆಯನ್ನು ಸಹಿಸಲು ಶಕ್ತವಾಗಿಲ್ಲದಿರುವುದರಿಂದ ಅಂತಹ ಕೈಗಾರಿಕೆಗಳಿಗೆ ರಕ್ಷಣೆ ನೀಡಬೇಕೆಂದು ಹೇಳಲಾಗಿದೆ. ಜೆ.ಎಸ್. ಮಿಲ್, ಫ್ರೆಡ್ರಿಕ್ ಲಿಸ್ಟ್ ಮೊದಲಾದ ಅರ್ಥಶಾಸ್ತ್ರಜ್ಞರು ಈ ವಾದವನ್ನು ಮಂಡಿಸಿದರು. ಶೈಶವಾವಸ್ಥೆಯ ಕೈಗಾರಿಕೆಗೆ ರಕ್ಷಣೆ ನೀಡಿದರೆ ಅದು ತನ್ನ ಕಾಲ ಮೇಲೆಯೇ ತಾನು ನಿಂತುಕೊಳ್ಳುವಂತಾಗುತ್ತದೆ ಮತ್ತು ಅದು ಮುಚ್ಚಿಹೋಗುವ ಕಳವಳವಿರುವುದಿಲ್ಲ ಎಂಬುದು ಈ ವಾದದ ತಿರುಳಾಗಿದೆ. ಪ್ರತಿಯೊಂದು ಕೈಗಾರಿಕೆಯೂ ಸ್ವಾವಲಂಬನದ ಸಾಮರ್ಥ್ಯವನ್ನು ಪಡೆಯಲು ಸ್ವಲ್ಪ ಸಮಯ ಆವಶ್ಯಕವಾಗಿರುತ್ತದೆ. ಅಲ್ಲಿಯವರೆಗೆ ಅದಕ್ಕೆ ರಕ್ಷಣೆ ನೀಡುವುದು ಅಗತ್ಯವಾಗಿದೆ.

ಯಾವುದೇ ಉದ್ಯಮವು ಪ್ರಾರಂಭದಲ್ಲಿ ಸದೃಢವಾಗಿ ಬೆಳೆದಿರುವುದಿಲ್ಲ. ಅದು ಚಟುವಟಿಕೆಯನ್ನು ವಿಸ್ತರಿಸಿ, ಉತ್ಪಾದನೆ ಮತ್ತು ಹೂಡಿಕೆಯನ್ನು ಹೆಚ್ಚಿಸಿಕೊಂಡು ಬಲಿಷ್ಠವಾಗಿ ಬೆಳೆಯಲು ಸ್ವಲ್ಪ ಕಾಲಾವಕಾಶ ಬೇಕಾಗಿರುತ್ತದೆ. ಅಲ್ಲಿಯವರೆಗೆ ಉದ್ಯಮಕ್ಕೆ ರಕ್ಷಣೆಯನ್ನು ನೀಡಿದರೆ ಅದು ವಿಕಾಸ ಪಥದಲ್ಲಿ ಮುನ್ನಡೆಯಬಹುದು. ರಕ್ಷಣೆಯ ಹೊರತು ಅಂತಹ ಉದ್ಯಮವು ಸೊರಗಿ ನಾಶ ಹೊಂದುತ್ತದೆ. "ಶಿಶುವನ್ನು ಪೋಷಿಸು, ಮಗುವನ್ನು ರಕ್ಷಿಸು ಮತ್ತು ವಯಸ್ಕನನ್ನು ಮುಕ್ತವಾಗಿ ಬಿಡು" (Nurse the baby, Protect the Child and Free the Adult) ಎಂಬ ನೀತಿಯನ್ನೇ ಇಲ್ಲಿ ಅನುಸರಿಸ ಬೇಕೆಂಬುದು ಶೈಶವಾವಸ್ಥೆಯ ಕೈಗಾರಿಕೆಯ ಪರ ಇರುವ ವಾದವಾಗಿದೆ.

ಈ ವಾದವು ಹೆಚ್ಚು ಔಚಿತ್ಯಪೂರ್ಣವಾಗಿದ್ದಾಗ್ಯೂ ಕೆಲವು ಅಂಶಗಳ ಆಧಾರದ ಮೇಲೆ ಇದು ಟೀಕೆಗೆ ಒಳಗಾಗಿದೆ.

i) ಮೊದಲನೆಯದಾಗಿ, ಯಾವುದು ಶೈಶವಾವಸ್ಥೆಯ ಕೈಗಾರಿಕೆ ಎಂದು ನಿರ್ಧರಿಸುವುದು ಕಷ್ಟವಾಗಬಹುದು. ಎಲ್ಲಾ ಕೈಗಾರಿಕೆಗಳು ಈ ಸವಲತ್ತನ್ನು ಕೇಳಬಹುದು. ಆಗ ರಾಜಕೀಯ ಭ್ರಷ್ಟಾಚಾರ ಹೆಚ್ಚುತ್ತದೆ.

ii) ಎರಡನೆಯದಾಗಿ, ರಕ್ಷಣೆಯನ್ನು ಪಡೆದ ಕೈಗಾರಿಕೆಯು ಕೊನೆಯವರೆಗೂ ಅದೇ ಸವಲತ್ತನ್ನು ಅಪೇಕ್ಷಿಸಬಹುದು. ಆದುದರಿಂದ ತಾತ್ಕಾಲಿಕವಾಗಬೇಕಿದ್ದ ರಕ್ಷಣೆಯು ಶಾಶ್ವತವಾಗಬಹುದು. ಇದರಿಂದ ಸುಲಭ ಬೆಲೆಯಲ್ಲಿ ವಿದೇಶಿ ವಸ್ತುಗಳನ್ನು ಪಡೆಯಲಾಗದ ಅನುಭೋಗಿಗಳ ಶೋಷಣೆಯಾಗುತ್ತದೆ.

2. ಉದ್ಯಮಗಳ ವೈವಿಧ್ಯತೆಯ ವಾದ (Diversification of Industries Argumet): ಆರ್ಥಿಕಾಭಿವೃದ್ಧಿಗೆ ನೆರವಾಗುವಂತಹ ಹಲವಾರು ಉದ್ಯಮಗಳನ್ನು ಬೆಳೆಸುವ ನಲುವಾಗಿ ರಕ್ಷಣಾ ನೀತಿಯನ್ನು ಸಲಹೆ ಮಾಡಲಾಗಿದೆ. ರಕ್ಷಣೆಯು ದೊರೆತಾಗ ವಿವಿಧ ರೀತಿಗಳ ಉದ್ಯಮಗಳು ದೇಶದ ತುಂಬಾ ಬೆಳೆಯುತ್ತವೆ. ಇದರಿಂದ ಸಮತೋಲನ ಅಭಿವೃದ್ಧಿ ಉಂಟಾಗುತ್ತದೆ. ರಕ್ಷಣೆಯು ಇಲ್ಲದಿದ್ದರೆ ಕೆಲವೇ ಉದ್ಯಮಗಳು ಕೆಲವೇ ಸ್ಥಳಗಳಲ್ಲಿ ಅಭಿವೃದ್ಧಿ ಹೊಂದುವ ಅಪಾಯವಿರುತ್ತದೆ. ರಕ್ಷಣಾ ನೀತಿಯು ಈ ಅಪಾಯವನ್ನು ನಿವಾರಿಸಿ, ವಿವಿಧ ರೀತಿಗಳ ಕೈಗಾರಿಕೆಗಳ ಬೆಳವಣಿಗೆಗೆ ಅವಕಾಶವನ್ನು ಕಲ್ಪಿಸುತ್ತದೆ.

3. ಪ್ರಮುಖ ಉದ್ಯಮದ ವಾದ (Major Industry Argument): ಪ್ರತಿಯೊಂದು ದೇಶಕ್ಕೂ ಕೆಲವು ಪ್ರಮುಖ ಕೈಗಾರಿಕೆಗಳ ಅಗತ್ಯವಿರುತ್ತದೆ. ಇವು ಅತ್ಯಾವಶ್ಯಕ ಸರಕುಗಳನ್ನು ಉತ್ಪಾದಿಸುವ ಮೂಲಕ ಸ್ವಾವಲಂಬನದ ಸಾಧನೆ, ವಿದೇಶಿ ವಿನಿಮಯ ಗಳಿಕೆ ಮತ್ತು ಆರ್ಥಿಕಾಭಿವೃದ್ಧಿಗೆ ಸಹಾಯಕಾರಿಯಾಗುತ್ತವೆ. ಉದಾಹರಣೆಗೆ, ಕಬ್ಬಿಣ ಮತ್ತು ಉಕ್ಕು, ಯಂತ್ರ ಸಾಮಗ್ರಿಗಳು, ಸಿಮೆಂಟ್, ರಾಸಾಯನಿಕಗಳು ಇತ್ಯಾದಿ ಪ್ರಮುಖ ಕೈಗಾರಿಕೆಗಳನ್ನು ರಕ್ಷಣಾ ನೀತಿಯ ಮೂಲಕ ವ್ಯವಸ್ಥಿತವಾಗಿ ಬೆಳೆಸಬಹುದು. ಬದಲಾಗಿ, ಮುಕ್ತ ವ್ಯಾಪಾರದ ಮೂಲಕ ಪೂರ್ಣವಾಗಿ ಆಮದುಗಳಿಗೆ ಅವಕಾಶವನ್ನು ನೀಡಿದರೆ ಯಾವ ಕೈಗಾರಿಕೆಯೂ ಬೆಳೆಯಲಾರದು. ಆದ್ದರಿಂದ ರಕ್ಷಣೆಯು ಅತ್ಯಾವಶ್ಯಕ.

4. ಉದ್ಯೋಗದ ವಾದ (Employment Argument): ರಕ್ಷಣರಹಿತ ವ್ಯವಸ್ಥೆಯಲ್ಲಿ ವಿದೇಶಿ ಸ್ಪರ್ಧೆಯಿಂದ ಸ್ವದೇಶೀ ಕೈಗಾರಿಕೋದ್ಯಮಗಳು ನಾಶವಾಗ ಬಹುದು. ಆಗ ಆ ಉದ್ಯಮಗಳಲ್ಲಿ ಕಾರ್ಯನಿರತರಾಗಿದ್ದ ಜನರು ನಿರುದ್ಯೋಗಿಗಳಾಗ ಬೇಕಾಗುತ್ತದೆ. ರಕ್ಷಣೆಯ ಮೂಲಕ ಹೊಸ ಕೈಗಾರಿಕೆಗಳನ್ನು ಬೆಳೆಸುವುದರಿಂದಲೂ ಉದ್ಯೋಗಾವಕಾಶಗಳನ್ನು ವಿಸ್ತರಿಸಬಹುದು. ಆದ್ದರಿಂದ ರಕ್ಷಣೆಯ ಮೂಲಕ ಹೊಸ ಉದ್ಯೋಗಗಳನ್ನು ಸೃಷ್ಟಿಸಬಹುದು ಮತ್ತು ನಿರುದ್ಯೋಗವನ್ನು ತಡೆಗಟ್ಟಬಹುದು.

5. ವರಮಾನದ ವಾದ (Revenue Argument): ವ್ಯಾಪಾರವನ್ನು ನಿರ್ಬಂಧಿಸುವ ದೃಷ್ಟಿ ಯಿಂದ ಸರಕುಗಳ ಮೇಲೆ ಸುಂಕ ವಿಧಿಸುವಿಕೆಯಿಂದ ಸರ್ಕಾರಕ್ಕೆ ಆದಾಯ ದೊರೆಯುತ್ತದೆ. ವ್ಯಾಪಾರದ ಸುಂಕಗಳು ಆಧುನಿಕ ಸರ್ಕಾರಗಳ ವರಮಾನದ ಮುಖ್ಯ ಮೂಲಗಳಾಗಿವೆ. ಆಮದು ಸುಂಕಗಳು ಮತ್ತು ರಫ್ತು ಸುಂಕಗಳು ಸರ್ಕಾರಕ್ಕೆ ಗಣನೀಯ ಮೊತ್ತದ ವರಮಾನವನ್ನು ಗಳಿಸಿಕೊಡುತ್ತವೆ.

6. ರಾಷ್ಟ್ರೀಯ ಸಂಪನ್ಮೂಲಗಳ ಸಂರಕ್ಷಣೆಯ ವಾದ (Conservation of National Resources Argument) : ಮುಕ್ತ ವ್ಯಾಪಾರದಲ್ಲಿ ಅತ್ಯಮೂಲ್ಯವಾದ ಸಂಪನ್ಮೂಲಗಳನ್ನು ಕಡಿಮೆ ಬೆಲೆಯಲ್ಲಿಯೇ ರಫ್ತು ಮಾಡಲಾಗುತ್ತದೆ. ಬಂಡವಾಳದ ಕೊರತೆ ಇರುವ ಅಲ್ಪಾಭಿವೃದ್ಧಿ ದೇಶಗಳಲ್ಲಿ ಈ ಸಂಗತಿ ಸುಸ್ಪಷ್ಟವಾಗಿ ಕಾಣಿಸುತ್ತದೆ. ರಕ್ಷಣೆಯ ಮೂಲಕ ಸ್ವದೇಶಿ ಉದ್ಯಮಗಳ ಬೆಳವಣಿಗೆಯು ಈ ಸಂಪನ್ಮೂಲಗಳ ಯೋಗ್ಯ ಬಳಕೆಗೆ ಅವಕಾಶ ಮಾಡಿಕೊಡುತ್ತದೆ.

7. ಪಾವತಿ ಶಿಲ್ಕಿನ ವಾದ (Balance of Payments Argument): ಪಾವತಿ ಶಿಲ್ಕಿನಲ್ಲಿ ಅಸಮತೋಲನವನ್ನು ಹೋಗಲಾಡಿಸಲು ಆಮದುಗಳನ್ನು ನಿರ್ಬಂಧಿಸಬೇಕಾಗುತ್ತದೆ. ಪಾವತಿ ಶಿಲ್ಕಿನ ನಿರಂತರ ಕೊರತೆಯನ್ನು ಅನುಭವಿಸುತ್ತಿರುವ ದೇಶಗಳಿಗೆ ರಕ್ಷಣಾ ನೀತಿಯು ಬಹಳ ಪರಿಣಾಮಕಾರಿಯಾದುದಾಗಿದೆ. ಯಾವುದೇ ದೇಶವು ರಫ್ತುಗಳ ಕೊರತೆ ಮತ್ತು ಆಮದುಗಳ ಹೆಚ್ಚಳದ ಸ್ಥಿತಿಯಲ್ಲಿ ನರಳುತ್ತಿದ್ದರೆ, ಅದರ ವಿದೇಶಿ ವಿನಿಮಯ ಗಳಿಕೆಗಳು ಕಡಿಮೆ ಇರುತ್ತವೆ ಮತ್ತು ವಿದೇಶಗಳಿಗೆ ಪಾವತಿಸಬೇಕಾದ ಹಣದ ಪ್ರಮಾಣ ಅಧಿಕವಾಗಿರುತ್ತದೆ. ಈ ರಫ್ತು–ಆಮದು ಅಂತರವು ಪಾವತಿ ಶಿಲ್ಕಿನ ಅಸಮತೋಲನಕ್ಕೆ ಕಾರಣವಾಗುತ್ತದೆ. ರಕ್ಷಣಾ ನೀತಿಯು ಈ ಅಸಮತೋಲನವನ್ನು ಸರಿಪಡಿಸಲು ಸಹಾಯ ಮಾಡುತ್ತದೆ. ಆಮದುಗಳನ್ನು ನಿರ್ಬಂಧಿಸುವ ಮೂಲಕ ವಿದೇಶಗಳಿಗೆ ಪಾವತಿಸಬೇಕಾಗಿರುವ ಹಣವು ಕಡಿಮೆಯಾಗುವುದರಿಂದ ವಿದೇಶಿ ವಿನಿಮಯವು ಉಳಿತಾಯವಾಗುತ್ತದೆ ಮತ್ತು ಪಾವತಿ ಶಿಲ್ಕಿನ ಪರಿಸ್ಥಿತಿಯು ಉತ್ತಮಗೊಳ್ಳುತ್ತದೆ.

8. ದಿವಾಳಿ ಶ್ರಮದ ವಾದ (Pauper Labour Argument): ವಿದೇಶಗಳಿಗಿಂತ ಸ್ವದೇಶದಲ್ಲಿ ವೇತನಗಳ ಮಟ್ಟವು ಅಧಿಕವಾಗಿದ್ದಾಗ ಉತ್ಪಾದನ ವೆಚ್ಚವು ಹೆಚ್ಚಾಗಿ ಸರಕುಗಳ ಬೆಲೆಗಳು ದುಬಾರಿಯಾಗಿರುವುದು ಸಹಜ. ವಿದೇಶಗಳಲ್ಲಿ ವೇತನ ಮಟ್ಟವು ಕಡಿಮೆ ಇರುವುದರಿಂದ ಉತ್ಪಾದನ ವೆಚ್ಚವು ಕಡಿಮೆ ಇರುತ್ತದೆ ಮತ್ತು ಈ ಕಾರಣದಿಂದಾಗಿ ಸರಕುಗಳು ಅಗ್ಗದ ಬೆಲೆಯಲ್ಲಿ ದೊರೆಯುತ್ತಿರುತ್ತವೆ. ಆಗ ವಿದೇಶಿ ಉತ್ಪಾದಕರು ಈ ಸಂದರ್ಭದ ಪ್ರಯೋಜನವನ್ನು ಪಡೆದು ಸ್ವದೇಶದ ಮಾರುಕಟ್ಟೆಯಲ್ಲಿ ಸರಕುಗಳನ್ನು ಮಾರಾಟ ಮಾಡುತ್ತಾರೆ. ಇದರಿಂದಾಗಿ ಸ್ವದೇಶಿ ಸರಕುಗಳಿಗೆ ಬೇಡಿಕೆ ನಶಿಸುತ್ತದೆ ಮತ್ತು ಅವುಗಳ ಉತ್ಪಾದನೆಯು ಅನಗತ್ಯವಾಗಿ ಪರಿಣಮಿಸುತ್ತದೆ. ಈ ಫಲವಾಗಿ ಸ್ವದೇಶೀ ಶ್ರಮಿಕರು ಉದ್ಯೋಗದಿಂದ ಹೊರದೂಡಲ್ಪಟ್ಟು ದಿವಾಳಿಯಾಗುತ್ತಾರೆ. ಕಾರ್ಮಿಕರನ್ನು ಇದರಿಂದ ಪಾರಾಗಿಸಲು ಉತ್ಪಾದನೆಯು ಹೆಚ್ಚಬೇಕು ಮತ್ತು ಉದ್ಯಮವು ಭದ್ರವಾಗಿ ನೆಲೆಯೂರಬೇಕು. ಆ ಪ್ರಕಾರ, ಸ್ವದೇಶಿ ಶ್ರಮಿಕರನ್ನು ದಿವಾಳಿಯ ಅಂಚಿನಿಂದ ಪಾರಾಗಿಸಲು ರಕ್ಷಣಾ ನೀತಿಯು ಆವಶ್ಯಕವೆಂದು ವಾದಿಸಲಾಗಿದೆ.

9. ಉತ್ಪಾದನ ವೆಚ್ಚಗಳನ್ನು ಸಮಾನಗೊಳಿಸುವ ವಾದ (Equalisation of Production Costs Argument): ಕಡಿಮೆ ದರದ ತೆರಿಗೆ, ಅಗ್ಗದ ಶ್ರಮ ಮೊದಲಾದ ಕಾರಣಗಳಿಂದಾಗಿ ಸ್ವದೇಶಿ ಉತ್ಪಾದಕರಿಗಿಂತ ವಿದೇಶಿ ಉತ್ಪಾದಕರಿಗೆ ಅನುಕೂಲತೆಗಳು ಲಭಿಸಬಹುದು. ಅಂದರೆ ಉತ್ಪಾದನ ವೆಚ್ಚವು ವಿದೇಶಿ ಉತ್ಪಾದಕರಿಗೆ ಕಡಿಮೆಯಾಗಿಯೂ, ಸ್ವದೇಶಿ ಉತ್ಪಾದಕರಿಗೆ ಅಧಿಕವಾಗಿಯೂ ಪರಿಣಮಿಸುತ್ತದೆ. ಇದನ್ನು ನಿವಾರಿಸಿ ಉತ್ಪಾದನ ವೆಚ್ಚವನ್ನು ಸ್ವದೇಶಿ ಮತ್ತು ವಿದೇಶೀ ಉತ್ಪಾದಕರ ನಡುವೆ ಸಮಾನಗೊಳಿಸುವ ಉದ್ದೇಶದಿಂದಲೂ ರಕ್ಷಣಾ ನೀತಿಯನ್ನು ಪ್ರತಿಪಾದಿಸಲಾಗಿದೆ. ಆಮದು ಸುಂಕಗಳನ್ನು ವಿಧಿಸುವ ಪರಿಣಾಮವಾಗಿ ಆಮದು ಸರಕುಗಳ ಬೆಲೆಗಳು ಏರುವುದರಿಂದ ಇದು ಸಾಧ್ಯವಾಗುತ್ತದೆ.

10. ರಾಷ್ಟ್ರೀಯ ರಕ್ಷಣೆಯ ವಾದ (National Defence Argument): ಪರಕೀಯ ದಾಳಿಗಳಿಂದ ರಾಷ್ಟ್ರದ ರಕ್ಷಣೆಯ ದೃಷ್ಟಿಯಿಂದ ರಕ್ಷಣಾ ನೀತಿಯನ್ನು ಶಿಫಾರ್ಸು ಮಾಡಲಾಗಿದೆ. ಶಸ್ತ್ರಾಸ್ತ್ರಗಳು, ಯುದ್ಧ ವಿಮಾನಗಳು ಮೊದಲಾದ ರಕ್ಷಣಾ ಸಾಮಗ್ರಿಗಳಲ್ಲಿ ದೇಶವು ಸ್ವಾವಲಂಬಿಯಾಗಿರುವುದು ಆವಶ್ಯಕ. ಈ ಕಾರಣದಿಂದ ಯಾವುದೇ ದೇಶವು ರಕ್ಷಣಾ ಕೈಗಾರಿಕೆಗಳನ್ನು ಬಲಿಷ್ಠವಾಗಿ ಅಭಿವೃದ್ಧಿಪಡಿಸಬೇಕಾದ ಆವಶ್ಯಕತೆ ಉದ್ಭವಿಸುತ್ತದೆ. ರಕ್ಷಣೆಯ ದೃಷ್ಟಿಯಿಂದ ಇಂದು ದೇಶವು ಬಲಿಷ್ಠವಾಗಿದ್ದು ಯುದ್ಧಸನ್ನದ್ಧವಾಗಿರಲೇಬೇಕಾಗಿದೆ.

11. ವಿದೇಶೀ ಸ್ಪರ್ಧೆಯ ನಿಯಂತ್ರಣದ ವಾದ (Control of Foreign Competition Argument): ಮುಕ್ತ ವ್ಯಾಪಾರದಲ್ಲಿ ವಿದೇಶಗಳು ಅತಿ ಕಡಿಮೆ ಬೆಲೆಯಲ್ಲಿ ತಮ್ಮ ಸರಕುಗಳನ್ನು ಸ್ವದೇಶೀ ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಪೈಪೋಟಿ ಪ್ರವೃತ್ತಿ ಹೊಂದಿರುತ್ತವೆ. ಈ ಪರಿಣಾಮವಾಗಿ ಸ್ವದೇಶಿ ಉದ್ಯಮಗಳ ಸರಕುಗಳಿಗೆ ಬೇಡಿಕೆ ಕುಗ್ಗುವುದರಿಂದ ಅವುಗಳು ಹಾನಿಗೊಳಗಾಗಿ ನಿಂತುಹೋಗುವ ಸಂಭವವಿರುತ್ತದೆ. ಇಂತಹ ಹಾನಿಕಾರಕವಾದ ವಿದೇಶಿ ಸ್ಪರ್ಧೆಯನ್ನು ತಪ್ಪಿಸಿ ಸ್ವದೇಶಿ ಸರಕುಗಳಿಗೆ ಸಾಕಷ್ಟು ಬೇಡಿಕೆಯನ್ನು ಒದಗಿಸಲು ಆಮದುಗಳನ್ನು ನಿರ್ಬಂಧಗೊಳಿಸುವಿಕೆ ಅಗತ್ಯವೆನಿಸಿದೆ.

12. ಸ್ವಾವಲಂಬನದ ವಾದ (Self-sufficiency Argument): ರಕ್ಷಣೆಯ ಮೂಲಕ ಸ್ವದೇಶಿ ಉತ್ಪಾದನ ಸಾಮರ್ಥ್ಯ ಹೆಚ್ಚುತ್ತದೆ ಮತ್ತು ಪರಾವಲಂಬನ ತಗ್ಗುತ್ತದೆ. ಆಗ ಸ್ವದೇಶದಲ್ಲಿಯೇ ಉದ್ಯಮಗಳು ಬೆಳೆದು ಸ್ವಾವಲಂಬನೆಯು ಸಾಧನೆಯಾಗುತ್ತದೆ. ವಿದೇಶಗಳ ಮೇಲಿನ ಪರಾವಲಂಬನ ಅಪಾಯಕಾರಿಯಾದುದರಿಂದ ದೀರ್ಘಾವಧಿಯನ್ನು ಗಮನದಲ್ಲಿರಿಸಿಕೊಂಡು ಪ್ರತಿಯೊಂದು ದೇಶವೂ ಸ್ವಾವಲಂಬನದ ಪ್ರಯತ್ನಗಳನ್ನು ಹೆಚ್ಚಿಸಬೇಕಾಗುತ್ತದೆ.

13. ರಾಷ್ಟ್ರ ಪ್ರೇಮದ ವಾದ (Patriotism Argument): ಸಾಧ್ಯವಾದಷ್ಟು ಪ್ರಮಾಣದಲ್ಲಿ ಸ್ವದೇಶಿ ಸರಕುಗಳನ್ನೇ ಬಳಸುವ ಮೂಲಕ ವಿದೇಶೀ ಸರಕುಗಳ ಮೇಲಿನ

ಅವಲಂಬನವನ್ನು ತಗ್ಗಿಸುವುದು ಹಿತಕರ. ಸ್ವದೇಶಿ ಸರಕುಗಳನ್ನೇ ಬಳಸುವುದು ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯವಾಗಬೇಕು. ಕೆಲವು ಸರಕುಗಳನ್ನು ಅನಿವಾರ್ಯ ಸಂದರ್ಭಗಳಲ್ಲಿ ಅಂದರೆ ನಮ್ಮಲ್ಲಿ ಅವುಗಳನ್ನು ಉತ್ಪಾದಿಸಲು ಸಾಧ್ಯವಾಗದಿದ್ದಾಗ ಮಾತ್ರ ಅಂತಹ ವಿದೇಶೀ ಸರಕುಗಳನ್ನು ಆಶ್ರಯಿಸಬೇಕು. ಆದ್ದರಿಂದ ರಾಷ್ಟ್ರ ಪ್ರೇಮದ ಉದ್ದಿಶ್ಯದಿಂದಲೂ ರಕ್ಷಣೆಯ ಪರವಾಗಿ ವಾದಿಸಲಾಗಿದೆ.

14. ಹಾನಿಕಾರಕ ವಸ್ತುಗಳ ಆಮದಿನ ನಿರ್ಬಂಧದ ವಾದ (Restriction of Import of Harmful Commodities Argument): ಸುಂಕಗಳನ್ನು ವಿಧಿಸುವ ಮುಖಾಂತರ ಹಾನಿಕಾರಕ ವಾದ, ದುಬಾರಿಯಾದ ಮತ್ತು ವಿಲಾಸೀ ಸರಕುಗಳ ಆಮದನ್ನು ನಿಯಂತ್ರಿಸಬಹುದು. ಇದರಿಂದ ಅಮೂಲ್ಯವಾದ ವಿದೇಶಿ ವಿನಿಮಯವನ್ನು ಸಂರಕ್ಷಿಸಬಹುದು ಮತ್ತು ಜನರ ಆರೋಗ್ಯವನ್ನೂ ಸಹ ಕಾಪಾಡಬಹುದು.

ರಕ್ಷಣೆಯ ವಿರುದ್ಧ ವಾದಗಳು
(Arguments Against Protection)

ರಕ್ಷಣಾ ನೀತಿಯು ರಾಷ್ಟ್ರಾಭಿವೃದ್ಧಿ ಮತ್ತು ಜನರ ಕಲ್ಯಾಣದ ಹೆಚ್ಚಳಕ್ಕೆ ಮಾರಕವಾಗುತ್ತದೆಂಬ ಅಂಶಗಳ ಮೇಲೆ ಅದರ ವಿರುದ್ಧವಾಗಿ ಸಾಕಷ್ಟು ವಾದಗಳಿವೆ.

1. ವಿದೇಶಿ ಸ್ಪರ್ಧೆಯ ನಾಶ (Ruination of Foreign Competition): ರಕ್ಷಣೆಯ ಮೂಲಕ ವಿದೇಶೀ ಸ್ಪರ್ಧೆಯು ನಶಿಸುತ್ತದೆ. ಆಮದುಗಳನ್ನು ನಿರ್ಬಂಧಿಸಿದಾಗ ಮಾರುಕಟ್ಟೆಯಲ್ಲಿ ಸ್ವದೇಶಿ ವಸ್ತುಗಳು ಮಾತ್ರ ಲಭ್ಯವಿರುತ್ತವೆ. ಉತ್ಪಾದನೆ ಮತ್ತು ಉದ್ಯಮಗಳ ಅಭಿವೃದ್ಧಿಯಲ್ಲಿ ಸ್ವದೇಶಿ ಏಕಸ್ವಾಮ್ಯಗಳು ಬೆಳೆದು ಹಿತಾಸಕ್ತ ಗುಂಪುಗಳ ಪ್ರಭಾವ ಹೆಚ್ಚುತ್ತದೆ.

2. ಅನುಭೋಗಿಗಳ ಶೋಷಣೆ (Exploitation of Consumers): ರಕ್ಷಣೆಯಿಂದ ಅನುಭೋಗಿಗಳ ಶೋಷಣೆಯಾಗುತ್ತದೆ. ಏಕೆಂದರೆ ಸರಕುಗಳಿಗೆ ಅನಗತ್ಯ ಹೆಚ್ಚು ಬೆಲೆ ನೀಡಬೇಕಾಗುತ್ತದೆ. ಇದು ಎರಡು ರೀತಿಗಳಲ್ಲಿ ಸಂಭವಿಸುತ್ತದೆ. ಮೊದಲನೆಯದಾಗಿ, ಆಮದು ಸುಂಕಗಳನ್ನು ವಿಧಿಸುವ ಮೂಲಕ ರಕ್ಷಣೆಯನ್ನು ಅಳವಡಿಸಿದಾಗ ಆಮದು ಸರಕುಗಳ ಬೆಲೆಗಳು ಏರುತ್ತವೆ. ಎರಡನೆಯದಾಗಿ, ರಕ್ಷಣೆಯಿಂದ ವಿದೇಶಿ ಸ್ಪರ್ಧೆ ನಾಶವಾಗುವುದರಿಂದ ಹೆಚ್ಚು ಲಾಭದಾಸೆಗಾಗಿ ಅಧಿಕ ಬೆಲೆಯಲ್ಲಿ ಸರಕುಗಳನ್ನು ಮಾರಲು ಸ್ವದೇಶಿ ಉತ್ಪಾದಕರಿಗೆ ಅವಕಾಶ ಸಿಗುತ್ತದೆ.

3. ಉತ್ಪಾದನ ಅದಕ್ಷತೆ (Inefficiency in Production): ರಕ್ಷಣೆಯು ಸ್ವದೇಶಿ ಉತ್ಪಾದಕರ ಅದಕ್ಷತೆ ಮತ್ತು ಸೋಮಾರಿತನಕ್ಕೆ ಕಾರಣವಾಗುತ್ತದೆ. ವಿದೇಶಿ ಸ್ಪರ್ಧೆಯು ನಿವಾರಿಸಲ್ಪಡುವುದರಿಂದ ಉತ್ಪಾದಕರು ಹೆಚ್ಚು ದಕ್ಷತೆಯಿಂದ ಮತ್ತು ಮುಂದುವರಿದ ತಂತ್ರಜ್ಞಾನದ ಬಳಕೆಯಿಂದ ಉತ್ಪಾದನೆಯನ್ನು ನೆರವೇರಿಸಲು ಅಸಡ್ಡೆ (ಅಲಕ್ಷ್ಯ)

ತೋರುವರು. ಸ್ಪರ್ಧೆ ಇದ್ದಾಗ ದಕ್ಷ ಉತ್ಪಾದಕರಿಗೆ ಮಾತ್ರ ಅವಕಾಶವಿರುತ್ತದೆ.

4. ರಾಜಕೀಯ ಭ್ರಷ್ಟಾಚಾರ (Political Corruption): ರಕ್ಷಣೆಯಿಂದ ರಾಜಕೀಯ ಭ್ರಷ್ಟಾಚಾರ ಬೆಳೆಯುತ್ತದೆ. ರಕ್ಷಣೆಯನ್ನು ತೊಡೆದು ಹಾಕುವುದನ್ನು ತಡೆಯಲು ಉದ್ಯಮಿಗಳು ಅಧಿಕಾರಸ್ಥರನ್ನು ಲಂಚ ರುಸುವತ್ತುಗಳಿಂದ ಒಲಿಸಿಕೊಳ್ಳುವ ಅಪಾಯ ವಿರುತ್ತದೆ.

5. ಸಂಪತ್ತಿನ ವಿತರಣೆಯಲ್ಲಿ ಅಸಮತೆ (Inequality in Distribution of Wealth): ಸಂಪತ್ತಿನ ವಿತರಣೆಯಲ್ಲಿ ಅಸಮತೆ ಹೆಚ್ಚುತ್ತದೆ. ರಕ್ಷಣೆಯಿಂದ ಶ್ರೀಮಂತ ಬಂಡವಾಳ ಶಾಹಿಗಳಿಗೆ ಅನುಕೂಲವಾಗುವುದರಿಂದ ಅವರು ಎಲ್ಲಾ ಉತ್ಪಾದನಾಂಗಗಳನ್ನು ಯಥೇಚ್ಛವಾಗಿ ಬಳಸಿಕೊಂಡು ಇನ್ನೂ ಶ್ರೀಮಂತರಾಗುತ್ತಾರೆ. ಕೆಲವೇ ಉದ್ಯಮಿಗಳ ಕೈಗಾರಿಕೆಗಳಿಗೆ ರಕ್ಷಣೆಯು ದೊರೆಯಬಹುದಾದುದರಿಂದ ಅವರು ಇನ್ನೂ ಬಲಿಷ್ಠ ರಾಗುತ್ತಾರೆ. ಕೆಲವೊಮ್ಮೆ ವಾಮ ಮಾರ್ಗಗಳಿಂದಲೂ ಅವರು ರಕ್ಷಣಾ ಆಶ್ರಯವನ್ನು ಪಡೆದರೆ ಆಶ್ಚರ್ಯವಿರುವುದಿಲ್ಲ. ಇದರಿಂದ ಬಡವರು ಮತ್ತು ಶ್ರೀಮಂತರ ನಡುವೆ ಆರ್ಥಿಕ ಅಂತರ ಉಲ್ಬಣಗೊಳ್ಳುತ್ತದೆ.

6. ಸಂಪನ್ಮೂಲಗಳ ಹಿತಕರ ಬಳಕೆಗೆ ಧಕ್ಕೆ (Impediment to Optimum Utilisation of Resources): ರಕ್ಷಣೆಯು ಸಂಪನ್ಮೂಲಗಳ ಹಿತಕರವಾದ ಬಳಕೆಯನ್ನು ನಿರ್ಬಂಧಿಸುತ್ತದೆ ಎಂದು ವಾದಿಸಲಾಗಿದೆ. ಏಕೆಂದರೆ ರಕ್ಷಣೆಯನ್ನು ಅಳವಡಿಸಿಕೊಂಡಾಗ ಅಂತರರಾಷ್ಟ್ರೀಯ ಶ್ರಮ ವಿಭಜನೆ ಮಾಯವಾಗುವುದರಿಂದ ಶ್ರಮ, ಬಂಡವಾಳ ಮತ್ತಿತರ ಉತ್ಪಾದನಾಂಗಗಳು ಮುಕ್ತವಾಗಿ ಚಲಿಸಲು ಸಾಧ್ಯವಾಗುವುದಿಲ್ಲ. ಈ ಕಾರಣದಿಂದ ಉತ್ಪಾದನಾಂಗಗಳು ಪ್ರತಿಫಲದಾಯಕವಾಗುವ ಉದ್ಯೋಗಗಳಲ್ಲಿ ಬಳಕೆಯಾಗಲು ಅವಕಾಶ ತಪ್ಪಿಹೋಗುತ್ತದೆ.

7. ಅಂತರರಾಷ್ಟ್ರೀಯ ಪ್ರತೀಕಾರ (International Retaliation): ರಕ್ಷಣೆಯು ಅಂತರರಾಷ್ಟ್ರೀಯ ದ್ವೇಷ ಹಾಗೂ ಪ್ರತೀಕಾರಕ್ಕೆ ದಾರಿಯಾಗಬಹುದು. ಪ್ರತೀಕಾರದ ಭಾವನೆಯಿಂದ ವಿದೇಶಗಳೂ ಕೂಡ ರಕ್ಷಣಾ ನೀತಿಯನ್ನು ಅಳವಡಿಸಿಕೊಳ್ಳಬಹುದು. ಬೇರೆ ದೇಶಗಳಿಂದ ಆಮದುಗಳನ್ನು ನಿಯಂತ್ರಿಸುವಿಕೆ, ದೇಯಾಂಶಗಳ ಮೂಲಕ ಆಮದುಗಳನ್ನು ಮಿತಿಗೊಳಿಸುವಿಕೆ, ಪೈಪೋಟಿಯುತವಾಗಿ ನಾಣ್ಯವನ್ನು ಅಪಮೌಲ್ಯ ಗೊಳಿಸುವಿಕೆ ಮುಂತಾದ ಕ್ರಮಗಳನ್ನು ಆಶ್ರಯಿಸಬಹುದು. ಆಗ ಸ್ವದೇಶಿ ಕೈಗಾರಿಕೆಗಳು ತೊಂದರೆಯನ್ನು ಅನುಭವಿಸಬೇಕಾಗುತ್ತದೆ.

ರಕ್ಷಣೆಯಿಂದಾಗುವ ದುಷ್ಪರಿಣಾಮಗಳಿಗಿಂತ ಅದರಿಂದ ಲಭಿಸುವ ಪ್ರಯೋಜನಗಳೇ ಹೆಚ್ಚು ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ದೀರ್ಘಕಾಲದವರೆಗೆ

ರಕ್ಷಣೆಯನ್ನು ನೀಡುವುದು ಹಾನಿಕಾರಕವಾದುದರಿಂದ ಮತ್ತು ಅಂತಹ ನೀತಿಯು ದೇಶದ ಆರ್ಥಿಕ ಸ್ವಾವಲಂಬನದ ಸಾಧನೆಗೆ ಅಡಚಣೆಯೊಡ್ಡುವುದರಿಂದ ಒಂದು ನಿರ್ದಿಷ್ಟ ಅವಧಿಯವರೆಗೆ ಮಾತ್ರ ಸ್ವದೇಶಿ ಉದ್ಯಮಗಳಿಗೆ ರಕ್ಷಣೆಯನ್ನು ಒದಗಿಸುವುದು ಸಮಂಜಸವಾದ ನೀತಿಯಾಗುತ್ತದೆ.

D. ಸುಂಕಗಳು : ವಿಧಗಳು ಮತ್ತು ಪರಿಣಾಮಗಳು
(Tariffs : Types and Effects)

ಸುಂಕ ಎಂದರೆ ಆಮದು ಸರಕುಗಳ ಮೇಲೆ ವಿಧಿಸಲಾಗುವ ತೆರಿಗೆ ಎಂದರ್ಥ. ಆಮದು ಸುಂಕಗಳನ್ನು ಮುಖ್ಯವಾಗಿ ಎರಡು ಉದ್ದೇಶಗಳಿಂದ ವಿಧಿಸಲಾಗುತ್ತದೆ. ಅವುಗಳೆಂದರೆ:

(i) ವರಮಾನದ ಉದ್ದೇಶ, ಮತ್ತು


(ii) ರಕ್ಷಣೆಯ ಉದ್ದೇಶ.

ಆಮದು ಮಾಡಿಕೊಳ್ಳಲಾಗುವ ಸರಕುಗಳ ಮೇಲೆ ಸುಂಕಗಳನ್ನು ವಿಧಿಸಿದಾಗ ಸರಕಾರಕ್ಕೆ ವರಮಾನವು ದೊರೆಯುತ್ತದೆ. ಅಂತೆಯೇ ಸುಂಕಗಳನ್ನು ವಿಧಿಸುವಿಕೆಯಿಂದ ಆಮದು ಸರಕುಗಳ ಬೆಲೆಯು ಏರುವುದರಿಂದ ಆಮದುಗಳ ಗಾತ್ರವನ್ನು ಕಡಿತಗೊಳಿಸಲಾಗುತ್ತದೆ. ಈ ಕಾರಣದಿಂದ ಮೊದಲು ಆಮದು ಮಾಡಿಕೊಳ್ಳುತ್ತಿದ್ದ ಸರಕುಗಳನ್ನು ಈಗ ಸ್ವದೇಶದಲ್ಲಿಯೇ ಉತ್ಪಾದಿಸಲಾಗುತ್ತದೆ. ಇದರ ಪರಿಣಾಮದಿಂದ ಸ್ವದೇಶೀ ಕೈಗಾರಿಕೆಗಳಿಗೆ ಉತ್ತೇಜನ ದೊರೆಯುತ್ತದೆ. ಅಂದರೆ ಆಮದು ಸುಂಕಗಳ ಪರಿಣಾಮವಾಗಿ ಸ್ವದೇಶೀ ಉದ್ಯಮಗಳು ರಕ್ಷಣೆಯನ್ನು ಪಡೆಯುತ್ತವೆ.

ಆಮದು ಸುಂಕಗಳು ಹಲವಾರು ಪರಿಣಾಮಗಳನ್ನು ಉಂಟುಮಾಡುತ್ತವೆ. ಪ್ರಾಧ್ಯಾಪಕ ಕಿಂಡ್ಲಬರ್ಗರ್‌ನ ಅಭಿಪ್ರಾಯದಲ್ಲಿ ಆಮದು ಸುಂಕಗಳಿಂದ ಎಂಟು ಪರಿಣಾಮಗಳಿವೆ. ಅವುಗಳೆಂದರೆ :

i) ರಕ್ಷಣಾತ್ಮಕ ಪರಿಣಾಮ
ii) ಅನುಭೋಗದ ಪರಿಣಾಮ
iii) ರಾಜ್ಯಾದಾಯದ ಪರಿಣಾಮ
iv) ಮರು ಹಂಚಿಕೆಯ ಪರಿಣಾಮ
v) ವ್ಯಾಪಾರದ ಷರತ್ತುಗಳ ಪರಿಣಾಮ
vi) ಸ್ಪರ್ಧಾತ್ಮಕ ಪರಿಣಾಮ
vii) ಆದಾಯದ ಪರಿಣಾಮ
viii) ಪಾವತಿ ಶಿಲ್ಕಿನ ಪರಿಣಾಮ

ಈ ಪರಿಣಾಮಗಳನ್ನು ಕೆಳಗಿನ ರೇಖಾಚಿತ್ರದ ಸಹಾಯದಿಂದ ವಿಶ್ಲೇಷಿಸಬಹುದು.



ರೇಖಾಚಿತ್ರ 2.1

ಮೇಲಿನ ರೇಖಾಚಿತ್ರದ ನೆರವಿನಿಂದ ಆಮದು ಸುಂಕಗಳ ವಿವಿಧ ಪರಿಣಾಮಗಳನ್ನು ಈಗ ಅರ್ಥಮಾಡಿಕೊಳ್ಳೋಣ.

1. ರಕ್ಷಣಾತ್ಮಕ ಪರಿಣಾಮ (Protective Effect): ಆಮದು ಸುಂಕಗಳನ್ನು ವಿಧಿಸಿದ್ದುದರಿಂದ ವಿದೇಶೀ ಸ್ಪರ್ಧೆಯಿಂದ ಸ್ವದೇಶೀ ಕೈಗಾರಿಕೆಗೆ ರಕ್ಷಣೆಯು ದೊರೆಯುವ ವಿಧಾನವನ್ನು ರಕ್ಷಣಾತ್ಮಕ ಪರಿಮಾಣವು ತೋರಿಸುತ್ತದೆ. ಮೇಲಿನ ರೇಖಾ ಚಿತ್ರದಲ್ಲಿ ವ್ಯಕ್ತವಾಗುವಂತೆ ಮುಕ್ತ ವ್ಯಾಪಾರದಲ್ಲಿ QQ_3 ಪ್ರಮಾಣದ ಸರಕುಗಳನ್ನು OP ಬೆಲೆಯಲ್ಲಿ ಆಮದು ಮಾಡಿಕೊಳ್ಳಲಾಗುತ್ತಿದೆ. PP_1 ಪ್ರಮಾಣದ ಆಮದು ಸುಂಕಗಳನ್ನು ಹೇರಿದ ಪರಿಣಾಮದಿಂದ ಬೆಲೆಯು OPಯಿಂದ OP_1 ಗೆ ಏರುತ್ತದೆ. ಬೆಲೆಯ ಹೆಚ್ಚಳದ ಕಾರಣದಿಂದ ಆಮದುಗಳ ಗಾತ್ರವು Q_3ದಿಂದ Q_2ಗೆ ಕುಸಿಯುತ್ತದೆ ಮತ್ತು ಸರಕಿನ ಸ್ವದೇಶೀ ಪೂರೈಕೆಯು OQಯಿಂದ OQ_1ಗೆ ಹೆಚ್ಚುತ್ತದೆ. ಆ ಪ್ರಕಾರ, ಸುಂಕದ ಹೇರಿಕೆಯ ಕಾರಣದಿಂದ ಸ್ವದೇಶೀ ಉತ್ಪಾದನೆಯು QQ_1 ಗಾತ್ರದಷ್ಟು ಹೆಚ್ಚಿರುವಿಕೆಯು ರಕ್ಷಣಾತ್ಮಕ ಪರಿಣಾಮವಾಗಿದೆ.

ಎಲ್ಸ್‌ವರ್ತ್ ರಕ್ಷಣಾತ್ಮಕ ಪರಿಣಾಮದ ವಿಶ್ಲೇಷಣೆಯನ್ನು ಇನ್ನೂ ಮುಂದು ವರೆಸುತ್ತಾ ಇದನ್ನು ಆಮದು ಬದಲಿಕೆಯ ಪರಿಣಾಮ (Import Substitution Effect) ಎಂತಲೂ ಪರಿಗಣಿಸಿದ್ದಾನೆ. ಆಮದು ಸುಂಕಗಳ ಪರಿಣಾಮವಾಗಿ ಬೆಲೆಗಳು OP_1ಗೆ

ಏರಿದುದರಿಂದ ಸ್ವದೇಶೀ ಉತ್ಪಾದಕರಿಗೆ ಹೆಚ್ಚಿನ ಪ್ರಮಾಣದ ಲಾಭಗಳು ದೊರೆಯುತ್ತವೆ. ಹೆಚ್ಚುವರಿ ಉತ್ಪಾದನೆಗೆ ತಗಲುವ ಸೀಮಾಂತ ವೆಚ್ಚವನ್ನು ಭರಿಸಲು ಇದು ಉತ್ಪಾದಕರಿಗೆ ನೆರವಾಗುತ್ತದೆ. ಉತ್ಪಾದನೆಯು OQ_1ಗೆ ವಿಸ್ತರಿಸಲ್ಪಡುತ್ತದೆ. ಆಮದುಗಳಿಗೆ ಬದಲಾಗಿ ಸ್ವದೇಶೀ ಉತ್ಪಾದನೆಯ ವಿಸ್ತರಣೆಯನ್ನು ಆಮದು ಬದಲಿಕೆಯ ಪರಿಣಾಮ ಎಂದು ಕರೆಯಲಾಗಿದೆ.

2. ಅನುಭೋಗದ ಪರಿಣಾಮ (Consumption Effect): ಯಾವ ಸರಕಿನ ಮೇಲೆ ಸುಂಕವನ್ನು ವಿಧಿಸಲಾಗುತ್ತದೆಯೋ ಆ ಸರಕಿನ ಅನುಭೋಗವನ್ನು ತಗ್ಗಿಸುವಿಕೆಯು ಸುಂಕದ ಅನುಭೋಗದ ಪರಿಣಾಮವಾಗಿರುತ್ತದೆ. ರೇಖಾ ಚಿತ್ರದಲ್ಲಿ ತೋರಿಸಿರುವಂತೆ ಸುಂಕವನ್ನು ವಿಧಿಸುವ ಮೊದಲು ಅನುಭೋಗಿಗಳು OP ಬೆಲೆಯಲ್ಲಿ OQ_3 ಪ್ರಮಾಣದ ಸರಕುಗಳನ್ನು ಅನುಭೋಗಿಸು ತ್ತಿದ್ದರು. PP_1 ಪ್ರಮಾಣದ ಆಮದು ಸುಂಕಗಳ ಹೇರಿಕೆಯೊಂದಿಗೆ ಬೆಲೆಯು OP_1ಗೆ ಏರುವುದರಿಂದ ಆಮದುಗಳ ಗಾತ್ರವು Q_3 Q_2 ನಷ್ಟು ಕುಸಿಯುತ್ತದೆ. ಅಂತೆಯೇ ಸರಕಿನ ಒಟ್ಟು ಅನುಭೋಗವು OQ_3 ನಿಂದ OQ_2ಗೆ ಕಡಿಮೆಯಾಗುತ್ತದೆ. ಆ ಮೇರೆಗೆ, Q_3 Q_2 ಸುಂಕದ ಅನುಭೋಗದ ಪರಿಣಾಮವಾಗಿದೆ.

ಅನುಭೋಗದ ಗಾತ್ರದ ಕುಗ್ಗುವಿಕೆಯಿಂದ ಅನುಭೋಗಿಗಳ ನಿವ್ವಳ ಕ್ಷೇಮಾಭ್ಯುದಯ ದಲ್ಲಿಯೂ ಸಹ ನಷ್ಟವು ಸಂಭವಿಸುತ್ತದೆ. ಇದನ್ನು PP_1 NE ಪ್ರದೇಶವು ತೋರಿಸುತ್ತದೆ.

ರಕ್ಷಣಾತ್ಮಕ ಮತ್ತು ಅನುಭೋಗದ ಪರಿಣಾಮಗಳ ಸಂಯೋಜಿತ ಪರಿಣಾಮವನ್ನು **'ವ್ಯಾಪಾರ ಪರಿಣಾಮ'** (Trade Effect) ಎಂದು **ಕಿಂಡ್ಲ್‌ಬರ್ಗರ್** ಕರೆದಿದ್ದಾನೆ. PP_1 ಪ್ರಮಾಣದ ಆಮದು ಸುಂಕಗಳ ಹೇರಿಕೆಯಿಂದ ರಾಷ್ಟ್ರದ ವ್ಯಾಪಾರದ ಗಾತ್ರವು OQ_3 ದಿಂದ OQ_2ಕ್ಕೆ ಕುಗ್ಗುತ್ತದೆ.

3. ರಾಜ್ಯಾದಾಯದ ಪರಿಣಾಮ (Revenue Effect): ಸುಂಕದ ಪರಿಣಾಮವಾಗಿ ಸರ್ಕಾರದ ವರಮಾನದಲ್ಲಿ ಸಂಭವಿಸುವ ಬದಲಾವಣೆಯೇ ರಾಜ್ಯಾದಾಯದ ಪರಿಣಾಮ. ಆಮದು ಸುಂಕವನ್ನು ವಿಧಿಸಿದ ಕಾರಣದಿಂದ ಆ ರಾಷ್ಟ್ರದ ಸರ್ಕಾರವು ಹೆಚ್ಚಿನ ವರಮಾನವನ್ನು ಗಳಿಸುತ್ತದೆ. ರೇಖಾ ಚಿತ್ರದಲ್ಲಿ OP ಬೆಲೆಯಲ್ಲಿ ಸುಂಕವು ಶೂನ್ಯವಾಗಿರುತ್ತದೆ ಎಂದು ಭಾವಿಸಲಾಗಿದೆ. PP_1 ಪ್ರಮಾಣದ ಆಮದು ಸುಂಕಗಳನ್ನು ವಿಧಿಸಿದ ಪರಿಣಾಮವಾಗಿ ಸರ್ಕಾರಕ್ಕೆ ದೊರೆಯುವ ವರಮಾನವು ಎಷ್ಟೆಂಬುದು ಒಟ್ಟು ಆಮದುಗಳ ಗಾತ್ರವನ್ನು ಸುಂಕದೊಡನೆ ಗುಣಿಸಿದಾಗ ದೊರೆಯುತ್ತದೆ. ಆ ಪ್ರಕಾರ $PP_1 \times Q_1Q_2$ ಅಥವಾ ಸಮಕೋನಗಳ R ಪ್ರದೇಶವು ಸರಕಾರಕ್ಕೆ ಲಭಿಸುವ ಒಟ್ಟು ವರಮಾನವನ್ನು ತೋರಿಸುತ್ತದೆ.


4. ಮರು ಹಂಚಿಕೆಯ ಪರಿಣಾಮ (Redistributive Effect): ಸುಂಕವನ್ನು ವಿಧಿಸಿದ ಪರಿಣಾಮದಿಂದಾಗಿ ಉತ್ಪಾದಕರು ತಮ್ಮ ಸರಕುಗಳಿಗೆ ಹೆಚ್ಚಿನ ಬೆಲೆಯನ್ನು

ಪಡೆಯುವಿಕೆಯು ಮರು ಹಂಚಿಕೆಯ ಪರಿಣಾಮವಾಗಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಸುಂಕದ ಪರಿಣಾಮವಾಗಿ ಆದಾಯವು ಉತ್ಪಾದಕರ ಪರವಾಗಿ ಮರುವಿತರಣೆಗೊಳ್ಳುತ್ತದೆ. ರೇಖಾ ಚಿತ್ರದಲ್ಲಿ PP_1 MA ಪ್ರದೇಶವು ಇದನ್ನು ಪ್ರತಿನಿಧಿಸುತ್ತದೆ. ಇದು ಉತ್ಪಾದನ ವೆಚ್ಚವನ್ನು ಮೀರಿದ ಹೆಚ್ಚುವರಿ ಆದಾಯವಾಗಿದ್ದು ಆರ್ಥಿಕ ಬಾಡಿಗೆಯ ರೂಪದಲ್ಲಿ ಉತ್ಪಾದಕರಿಗೆ ಸಂದಾಯವಾಗುತ್ತದೆ.

ಕಿಂಡ್ಲ್‌ಬರ್ಗರ್‌ನ ಅಭಿಪ್ರಾಯದಲ್ಲಿ ಮರುವಿತರಣೆಯ ಪರಿಣಾಮವು ಅನುಭೋಗಿಗಳ ಹೆಚ್ಚುವರಿಯಿಂದ ಕಳೆದಾಗ ದೊರೆಯುವಂತಹ ಉತ್ಪಾದಕರ ಹೆಚ್ಚುವರಿಯಾಗಿರುತ್ತದೆ. ಅನುಭೋಗದ ಪರಿಣಾಮದ ಮೂಲಕ ತಿಳಿದುಬರುವಂತೆ ಅನುಭೋಗಿಗಳ ತೃಪ್ತಿಯಲ್ಲಿ ಸಂಭವಿಸುವ ನಿವ್ವಳ ನಷ್ಟವನ್ನು PP_1 NE ಪ್ರದೇಶವು ತೋರಿಸುತ್ತದೆ. ಇದರಲ್ಲಿ ರಾಜ್ಯಾದಾಯದ ರೂಪದಲ್ಲಿ R ಪ್ರದೇಶವು ತೋರಿಸುವಷ್ಟು ಮೊತ್ತವು ಸರಕಾರಕ್ಕೆ ಸಂದಾಯವಾಗುತ್ತದೆ. ಇದನ್ನು MCE ತ್ರಿಕೋನಗಳ ಪ್ರದೇಶವು ವ್ಯಕ್ತಪಡಿಸುತ್ತದೆ. MCE ತ್ರಿಕೋನಗಳ ಪ್ರದೇಶವು ಪ್ರತಿನಿಧಿಸುವ ಅನುಭೋಗಿಗಳ ಹೆಚ್ಚಳದ ನಷ್ಟವನ್ನು ಉತ್ಪಾದಕರಿಗಾಗಲೀ ಅಥವಾ ಸರಕಾರಕ್ಕಾಗಲೀ ವರ್ಗಾವಣೆ ಮಾಡಲು ಸಾಧ್ಯವಿರುವುದಿಲ್ಲ. ಇದನ್ನು 'ಸುಂಕದ ವೆಚ್ಚ' (Cost of the Tariff) ಎಂದು ಪರಿಗಣಿಸಲಾಗಿದೆ. ಆ ಪ್ರಕಾರ, PP_1 MA ಪ್ರದೇಶವು ಸುಂಕದ ಮರು ಹಂಚಿಕೆಯ ಪರಿಣಾಮವನ್ನು ಪ್ರತಿನಿಧಿಸುತ್ತದೆ. ಇದು ಸುಂಕದ ಪರಿಣಾಮವಾಗಿ ಸ್ವದೇಶೀ ಉತ್ಪಾದಕರಿಗೆ ಅಧಿಕವಾಗಿ ದೊರೆಯುವ ಆದಾಯವಾಗಿರುತ್ತದೆ.

5. ವ್ಯಾಪಾರದ ಷರತ್ತುಗಳ ಪರಿಣಾಮ (Terms of Trade Effect): ಆಮದು ಸುಂಕಗಳನ್ನು ವಿಧಿಸಿದ ಕಾರಣದಿಂದ ರಾಷ್ಟ್ರದ ವ್ಯಾಪಾರ ಷರತ್ತುಗಳು ಉತ್ತಮಗೊಳ್ಳುವಿಕೆಯೇ ವ್ಯಾಪಾರದ ಷರತ್ತುಗಳ ಪರಿಣಾಮ. ಸುಂಕವನ್ನು ಹೇರಿದ ಕಾರಣದಿಂದ ಆ ರಾಷ್ಟ್ರಕ್ಕೆ ಆಮದುಗಳು ಮೊದಲಿಗಿಂತ ಕಡಿಮೆ ಬೆಲೆಯಲ್ಲಿ ದೊರೆಯುವ ವಾತಾವರಣ ನೆಲೆಸುತ್ತದೆ. ಏಕೆಂದರೆ ಸುಂಕದ ಪೂರ್ಣ ಮೊತ್ತವನ್ನು ಅಥವಾ ಸ್ವಲ್ಪ ಭಾಗವನ್ನು ವಿದೇಶೀ ರಫ್ತುದಾರರೇ ಪಾವತಿಸುವಂತೆ ಕಡ್ಡಾಯ ಮಾಡಲಾಗುತ್ತದೆ. ಆದರೆ ಸುಂಕ ವಿಧಿಸುವ ದೇಶದ ವ್ಯಾಪಾರ ಷರತ್ತುಗಳು ಯಾವ ಪ್ರಮಾಣದಲ್ಲಿ ಉತ್ತಮಗೊಳ್ಳುತ್ತವೆ ಎಂಬುದು ಎರಡೂ ವ್ಯಾಪಾರ ನಿರತ ದೇಶಗಳ ಪರಸ್ಪರ ಬೇಡಿಕೆಯನ್ನು ಅವಲಂಬಿಸಿರುತ್ತದೆ. ಜರ್ಮನಿ ಮತ್ತು ಇಂಗ್ಲೆಂಡ್ ಈ ಎರಡು ದೇಶಗಳ ಉದಾಹರಣೆಯನ್ನು ಗಮನಿಸೋಣ. ಜರ್ಮನಿಯು ದಾರವನ್ನು ಮತ್ತು ಇಂಗ್ಲೆಂಡ್ ಬಟ್ಟೆಯನ್ನು ಉತ್ಪಾದಿಸುತ್ತಿವೆ ಎಂದು ತಿಳಿಯೋಣ. ಇಂಗ್ಲೆಂಡಿನ ನಿವೇದನ ರೇಖೆಯು (Offer Curve) ಹೆಚ್ಚು ಸ್ಥಿತಿಸ್ಥಾಪಕತ್ವದಿಂದ ಕೂಡಿದ್ದರೆ ವ್ಯಾಪಾರದ ಷರತ್ತುಗಳು ಜರ್ಮನಿಗಿಂತ ಆ ದೇಶಕ್ಕೆ ಹೆಚ್ಚು ಅನುಕೂಲಕರವಾಗಿರುತ್ತವೆ.

ವ್ಯಾಪಾರದ ಷರತ್ತುಗಳ ಪರಿಣಾಮವನ್ನು ಈ ಕೆಳಗಿನ ರೇಖಾಚಿತ್ರವು ನಿರೂಪಿಸುತ್ತದೆ.



ರೇಖಾಚಿತ್ರ 2.2

ಮೇಲಿನ ರೇಖಾ ಚಿತ್ರದಲ್ಲಿ OE ಇಂಗ್ಲೆಂಡಿನ ನಿವೇದನ ರೇಖೆ ಮತ್ತು OG ಜರ್ಮನಿಯ ನಿವೇದನ ರೇಖೆ ಆಗಿವೆ. ಮುಕ್ತ ವ್ಯಾಪಾರದ ಸಂದರ್ಭದಲ್ಲಿ ವ್ಯಾಪಾರದ ಷರತ್ತುಗಳನ್ನು OT ರೇಖೆಯ ಮೇಲಿರುವ A ಬಿಂದುವು ತೋರಿಸುತ್ತದೆ. ಇದರಲ್ಲಿ ವ್ಯಕ್ತವಾಗುವಂತೆ ಇಂಗ್ಲೆಂಡ್ OC ಪ್ರಮಾಣದ ಬಟ್ಟೆಯನ್ನು ರಫ್ತು ಮಾಡಿ, ಜರ್ಮನಿಯಿಂದ OL ಪ್ರಮಾಣದ ದಾರವನ್ನು ಆಮದು ಮಾಡಿಕೊಳ್ಳುತ್ತಿದೆ. ಈಗ ಜರ್ಮನಿಯಿಂದ ಆಮದಾಗುವ ದಾರದ ಮೇಲೆ ಇಂಗ್ಲೆಂಡ್ ಸುಂಕವನ್ನು ವಿಧಿಸುತ್ತದೆ. ಪರಿಣಾಮವಾಗಿ ಜರ್ಮನಿಯ ದಾರಕ್ಕೆ ಪ್ರತಿಯಾಗಿ ಇಂಗ್ಲೆಂಡ್ ಮೊದಲಿಗಿಂತ ಕಡಿಮೆ ಪ್ರಮಾಣದ ಬಟ್ಟೆಯನ್ನು ಕೊಡುತ್ತದೆ. ಆದ್ದರಿಂದ ಇಂಗ್ಲೆಂಡಿನ ನಿವೇದನ ರೇಖೆಯು OE ಯಿಂದ OE_1 ಗೆ ಬದಲಿಸುತ್ತದೆ. ಇದರಿಂದ ವ್ಯಾಪಾರದ ಷರತ್ತುಗಳು OT ಯಿಂದ OT_1 ಗೆ ಇಂಗ್ಲೆಂಡಿನ ಪರವಾಗಿ ಬದಲಾಗುತ್ತವೆ. ಈಗ ಜರ್ಮನಿಯ OL_1 ಪ್ರಮಾಣದ ದಾರಕ್ಕೆ ಪ್ರತಿಯಾಗಿ ಇಂಗ್ಲೆಂಡ್ OC_1 ಪ್ರಮಾಣದ ಬಟ್ಟೆಯನ್ನು ಕೊಡುತ್ತಿದೆ. ಅಂದರೆ ಇಂಗ್ಲೆಂಡ್ ಈಗ LL_1 ಪ್ರಮಾಣದಷ್ಟು ದಾರವನ್ನು ಕಡಿಮೆಯಾಗಿ ಆಮದುಮಾಡಿಕೊಂಡು CC_1 ಪ್ರಮಾಣದಷ್ಟು ಕಡಿಮೆ ಬಟ್ಟೆಯನ್ನು ರಫ್ತು ಮಾಡುತ್ತಿದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಇಂಗ್ಲೆಂಡ್ ಕಡಿತಗೊಳಿಸಿದ ಆಮದುಗಳ ಪ್ರಮಾಣವು, ಅದರಿಂದ ಜರ್ಮನಿಗೆ ಕಡಿತಗೊಂಡ ರಫ್ತುಗಳ ಗಾತ್ರಕ್ಕಿಂತ ಕಡಿಮೆ ಇದೆ. ಆದ್ದರಿಂದ ಸುಂಕವನ್ನು ವಿಧಿಸುವಿಕೆಯೊಂದಿಗೆ ವ್ಯಾಪಾರದ ಷರತ್ತುಗಳು ಇಂಗ್ಲೆಂಡಿಗೆ ಅನುಕೂಲಕರವಾಗಿ ಪರಿಣಮಿಸಿವೆ.

6. ಸ್ಪರ್ಧಾತ್ಮಕ ಪರಿಣಾಮ (Competitive Effect): ಯಾವ ಸರಕಿನ ಮೇಲೆ ಆಮದು ಸುಂಕವನ್ನು ಹೇರಲಾಗುತ್ತದೆಯೋ ಆ ಸರಕನ್ನು ಸ್ವದೇಶದಲ್ಲಿಯೇ ಉತ್ಪಾದಿಸಲು ಉತ್ತೇಜನ ನೀಡುವ ಮೂಲಕ ಸ್ವದೇಶೀ ಕೈಗಾರಿಕೆಯು ವಿದೇಶೀ ಕೈಗಾರಿಕೆಯೊಡನೆ ಸ್ಪರ್ಧಿಸುವಂತೆ ಅದನ್ನು ಬಲಗೊಳಿಸುವಿಕೆಯೇ ಸ್ಪರ್ಧಾತ್ಮಕ ಪರಿಣಾಮ. ಇದು ಶೈಶವಾವಸ್ಥೆಯ ಕೈಗಾರಿಕೆಯ ವಾದದಂತೆಯೇ ಇದೆ. ಏಕೆಂದರೆ ಶೈಶವಾವಸ್ಥೆಯ ಉದ್ಯಮವನ್ನು ಲಭ್ಯವಿಪಡಿಸುವಿಕೆಯು ಅದಕ್ಕೆ ಅಗತ್ಯ ಸ್ಪರ್ಧಾ ಬಲವನ್ನು ನೀಡಲು ನೆರವಾಗುತ್ತದೆ.

7. ಆದಾಯದ ಪರಿಣಾಮ (Income Effect): ಆದಾಯದ ಪರಿಣಾಮವು ಸುಂಕವನ್ನು ವಿಧಿಸುವ ದೇಶದ ರಾಷ್ಟ್ರೀಯ ಆದಾಯದ ಮೇಲಾಗುವ ಪರಿಣಾಮವನ್ನು ಸೂಚಿಸುತ್ತದೆ. ಸುಂಕವು ಆಮದುಗಳನ್ನು ತಗ್ಗಿಸುವ ಮೂಲಕ ಆಮದು ಸರಕುಗಳ ಮೇಲಿನ ವೆಚ್ಚವನ್ನು ಕಡಿಮೆ ಮಾಡುತ್ತದೆ. ಏಕೆಂದರೆ ಸುಂಕದ ಪರಿಣಾಮವಾಗಿ ಆಮದುಗಳ ಗಾತ್ರವು ಕಡಿಮೆಯಾಗುವುದರಿಂದ ಆಮದು ಸರಕುಗಳ ಮೇಲಿನ ವೆಚ್ಚವು ಸ್ವಾಭಾವಿಕವಾಗಿ ಕುಸಿಯುತ್ತದೆ. ಆಮದು ಸರಕುಗಳ ಮೇಲಿನ ವೆಚ್ಚದ ಕಡಿತದಿಂದಾಗಿ ಉಳಿತಾಯವಾಗುವ ಹಣವನ್ನು ಸ್ವದೇಶದಲ್ಲಿ ಉತ್ಪಾದನೆಯ ಹೆಚ್ಚಳಕ್ಕಾಗಿ ವಿನಿಯೋಗಿಸಲಾಗುತ್ತದೆ. ಈ ಪರಿಣಾಮವಾಗಿ ಆದಾಯ ಮತ್ತು ಉದ್ಯೋಗದ ಮಟ್ಟ ಅಧಿಕಗೊಳ್ಳುತ್ತದೆ. ಈ ಕಾರಣದಿಂದ ಇದು ರಾಷ್ಟ್ರೀಯ ಆದಾಯದ ಏರಿಕೆಗೆ ಎಡೆಮಾಡಿಕೊಡುತ್ತದೆ.

8. ಪಾವತಿ ಶಿಲ್ಕಿನ ಪರಿಣಾಮ (Balance of Payments Effect): ಸುಂಕವನ್ನು ಹೇರುವ ದೇಶದಲ್ಲಿ ಆಮದುಗಳನ್ನು ನಿರ್ಬಂಧಿಸುವ ಮೂಲಕ ಪಾವತಿ ಶಿಲ್ಕಿನ ಪರಿಸ್ಥಿತಿಯನ್ನು ಉತ್ತಮ ಪಡಿಸುವ ಪರಿಣಾಮವನ್ನು ಸುಂಕವು ಹೊಂದಿದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಸುಂಕವು ಆ ದೇಶದ ಅಂತರರಾಷ್ಟ್ರೀಯ ವೆಚ್ಚವನ್ನು ಕಡಿಮೆ ಮಾಡುವ ಮುಖಾಂತರ ಪಾವತಿ ಶಿಲ್ಕಿನಲ್ಲಿ ಸ್ಥಿಮಿತತೆಯ ಸಾಧನೆಗೆ ನೆರವಾಗುತ್ತದೆ. ಸುಂಕದ ರಕ್ಷಣಾತ್ಮಕ, ಅನುಭೋಗದ, ರಾಜ್ಯಾದಾಯದ ಮತ್ತು ಮರುಹಂಚಿಕೆಯ ಪರಿಣಾಮಗಳನ್ನು ನಿರೂಪಿಸಿದ ಈ ಹಿಂದಿನ ರೇಖಾಚಿತ್ರದ ಮೂಲಕವೇ ಪಾವತಿ ಶಿಲ್ಕಿನ ಪರಿಣಾಮವನ್ನು ವಿಶ್ಲೇಷಿಸಬಹುದು.

ಮುಕ್ತ ವ್ಯಾಪಾರದ ಸಂದರ್ಭದಲ್ಲಿ OP ಬೆಲೆಯಲ್ಲಿ QQ_3 ಪ್ರಮಾಣದ ಸರಕುಗಳನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ಆ ಪ್ರಕಾರ, AQQ_3B ಸಮಕೋನ ಪ್ರದೇಶವು ಒಟ್ಟು ಆಮದುಗಳ ಮೌಲ್ಯವನ್ನು ಪ್ರತಿನಿಧಿಸುತ್ತದೆ. ಇದು ಪಾವತಿ ಶಿಲ್ಕಿನ ಕೊರತೆಯ ಪ್ರತೀಕವಾಗಿದೆ. ಏಕೆಂದರೆ ಆಮದುಗಳಿಗಾಗಿ ಯಾವುದೊಂದು ದೇಶವು ಪಾವತಿ ಮಾಡುವ ಹಣವು ಬೇರೊಂದು ದೇಶಕ್ಕೆ ಆದಾಯದ ರೂಪದಲ್ಲಿ ಸಂದಾಯವಾಗುತ್ತದೆ. ಈ ಕೊರತೆಯನ್ನು ನಿವಾರಿಸುವ ಉದ್ದೇಶದಿಂದ ಆಮದುಗಳನ್ನು ನಿರ್ಬಂಧಿಸುವ ಆವಶ್ಯಕತೆ

ಇರುತ್ತದೆ. ಆದಕ್ಕಾಗಿ ಆಮದು ಸರಕುಗಳ ಮೇಲೆ PP_1 ಪ್ರಮಾಣದ ಸುಂಕಗಳನ್ನು ವಿಧಿಸಲಾಗುತ್ತದೆ. ಈ ಪರಿಣಾಮವಾಗಿ ಆಮದುಗಳ ಗಾತ್ರವು QQ_3 ಯಿಂದ Q_3Q_2ಗೆ ಕುಸಿಯುತ್ತದೆ. ಸರ್ಕಾರವು R ಪ್ರದೇಶವು ಪ್ರತಿನಿಧಿಸುವಷ್ಟು ವರಮಾನವನ್ನುಗಳಿಸುತ್ತದೆ. ಅಲ್ಲದೆ ಪಾವತಿ ಶಿಲ್ಕಿನ ಪರಿಸ್ಥಿತಿಯು ಸಹ ಅನುಕೂಲಕರವಾಗಿ ಮಾರ್ಪಡುತ್ತದೆ. ಏಕೆಂದರೆ ಬೇರೆ ದೇಶಕ್ಕೆ ಪಾವತಿ ಮಾಡಲಾಗುವ ಹಣವು OQ_1 Q_2E ಗೆ ಸಮನಾಗಿದ್ದು ಇದು ಮುಕ್ತ ವ್ಯಾಪಾರದ ಸನ್ನಿವೇಶದಲ್ಲಿದ್ದ AQQ_3B ಗಿಂತ ಕಡಿಮೆ ಇರುತ್ತದೆ.

ಸುಂಕಗಳ ವರ್ಗೀಕರಣ

(Classification of Tariffs)

A. ಜನನ ಮತ್ತು ಗುರಿ (Origin and Destination)

ತಮ್ಮ ಜನನ ಮತ್ತು ಸರಕುಗಳು ರಾಷ್ಟ್ರೀಯ ಸರಹದ್ದನ್ನು ದಾಟುವ ಗುರಿಯ ಆಧಾರದಲ್ಲಿ ಸುಂಕಗಳನ್ನು ಕೆಳಗಿನಂತೆ ವರ್ಗೀಕರಿಸಬಹುದು.

1. ರಫ್ತು ಸುಂಕಗಳು (Export Duties): ಸುಂಕವನ್ನು ವಿಧಿಸುವ ದೇಶದಿಂದ ಹುಟ್ಟಿ ಇನ್ನೊಂದು ದೇಶದೆಡೆಗೆ ಗುರಿಮಾಡಿರುವ ಸರಕಿನ ಮೇಲೆ ವಿಧಿಸುವ ತೆರಿಗೆಯನ್ನು ರಫ್ತು ಸುಂಕ ಎಂದು ಕರೆಯಲಾಗುತ್ತದೆ. ಯಾವುದೊಂದು ದೇಶವು ಸರಕನ್ನು ಬೇರೆ ದೇಶಕ್ಕೆ ರಫ್ತು ಮಾಡುವಾಗ ಈ ಸುಂಕವನ್ನು ವಿಧಿಸುತ್ತದೆ.

2. ಆಮದು ಸುಂಕಗಳು (Import Duties): ವಿದೇಶದಲ್ಲಿ ಉದ್ಭವಿಸಿ, ಸುಂಕವನ್ನು ವಿಧಿಸುವ ದೇಶದೆಡೆಗೆ ಗುರಿ ಮಾಡಿರುವ ಸರಕಿನ ಮೇಲೆ ವಿಧಿಸುವ ತೆರಿಗೆಗೆ ಆಮದು ಸುಂಕ ಎಂದು ಹೆಸರು. ಅಂದರೆ ಯಾವುದೊಂದು ದೇಶವು ವಿದೇಶದಿಂದ ಸರಕನ್ನು ಆಮದುಮಾಡಿಕೊಂಡಾಗ ಈ ಸುಂಕವನ್ನು ವಿಧಿಸುತ್ತದೆ.

3. ಹಾಯ್ದುಹೋಗುವ ಸುಂಕಗಳು (Transit Duties): ಬೇರೆ ದೇಶಗಳಲ್ಲಿ ಹುಟ್ಟಿ, ಆ ದೇಶಗಳ ಕಡೆಗೆ ಗುರಿಮಾಡಿದ್ದು, ರಾಷ್ಟ್ರೀಯ ಸರಹದ್ದನ್ನು ದಾಟುವ ಸರಕಿನ ಮೇಲೆ ವಿಧಿಸುವ ತೆರಿಗೆಯನ್ನು ಹಾಯ್ದುಹೋಗುವ ಸುಂಕ ಎಂದು ಕರೆಯಲಾಗುತ್ತದೆ. ಅಂದರೆ ಇಂತಹ ಸುಂಕವನ್ನು ವಿಧಿಸಲ್ಪಡುವ ಸರಕು ಬೇರೊಂದು ದೇಶದಲ್ಲಿ ಉದ್ಭವಿಸುತ್ತದೆ ಮತ್ತು ದೇಶಕ್ಕೆ ರವಾನೆಯಾಗುತ್ತದೆ. ಆದರೆ ಈ ನಡುವೆ ಅದು ಮತ್ತೊಂದು ದೇಶವನ್ನು ಹಾಯ್ದು ಹೋಗುತ್ತದೆ. ಯಾವ ದೇಶದ ಮೂಲಕ ಸರಕು ಹಾಯ್ದುಹೋಗುತ್ತದೆಯೋ ಅದು ಈ ಸುಂಕವನ್ನು ವಿಧಿಸುತ್ತದೆ.

B. ಪರಿಮಾಣೀಕರಣ (Quantification)

ಸುಂಕವನ್ನು ಪರಿಮಾಣೀಕರಿಸುವ ಆಧಾರದಲ್ಲಿ ಅದನ್ನು ಕೆಳಗಿನಂತೆ ವರ್ಗೀಕರಿಸ ಬಹುದು.

1. ನಿರ್ದಿಷ್ಟಪಡಿಸಿದ ಸುಂಕಗಳು (Specifix Duties) : ರಫ್ತು ಮಾಡಲಾದ ಅಥವಾ ಆಮದು ಮಾಡಿಕೊಳ್ಳಲಾದ ಸರಕಿನ ಭೌತಿಕ ಘಟಕದ ಮೇಲೆ ವಿಧಿಸಲಾಗುವ ಏಕರೀತಿಯಾದ ಮೊತ್ತದ (Flat Sum) ಸುಂಕಕ್ಕೆ ನಿರ್ದಿಷ್ಟಪಡಿಸಿದ ಸುಂಕ ಎಂದು ಹೆಸರು. ಆ ಪ್ರಕಾರ, ನಿರ್ದಿಷ್ಟಪಡಿಸಿದ ಆಮದು ಸುಂಕ ಎಂದರೆ ಆಮದು ಮಾಡಿಕೊಳ್ಳಲಾದ ಸರಕಿನ ಪ್ರತಿ ಘಟಕದ ಮೇಲೆ ವಿಧಿಸಲಾದ ನಿಗದಿತ ಮೊತ್ತ ಎಂದರ್ಥ. ಪ್ರತಿ ಘಟಕ ಸರಕಿನ ಮೇಲೆ ಸಮಾನ ದರದಲ್ಲಿ ಸುಂಕವನ್ನು ವಿಧಿಸಲಾಗುತ್ತದೆ.

2. ಬೆಲೆಗೆ ತಕ್ಕ ಸುಂಕಗಳು (Ad-valorem Duties): ಆಮದುಮಾಡಿಕೊಳ್ಳಲಾದ ಅಥವಾ ರಫ್ತು ಮಾಡಲಾದ ಸರಕಿನ ಮೌಲ್ಯದ ಒಂದು ನಿರ್ದಿಷ್ಟ ಶೇಕಡಾವಾರಿನ ಪ್ರಮಾಣದಲ್ಲಿ ವಿಧಿಸಲಾಗುವ ಸುಂಕವನ್ನು ಬೆಲೆಗೆ ತಕ್ಕ ಸುಂಕ ಎಂದು ಕರೆಯಲಾಗುತ್ತದೆ.

ಆ ಪ್ರಕಾರ, ನಿರ್ದಿಷ್ಟಪಡಿಸಿದ ಸುಂಕವನ್ನು ಸರಕಿನ ಪರಿಮಾಣಕ್ಕೆ ತಕ್ಕಂತೆ ವಿಧಿಸಲಾದರೆ, ಬೆಲೆಗೆ ತಕ್ಕ ಸುಂಕವನ್ನು ಸರಕಿನ ಮೌಲ್ಯಕ್ಕೆ ಅನುಗುಣವಾಗಿ ವಿಧಿಸಲಾಗುತ್ತದೆ.

3. ಸಂಯುಕ್ತ ಸುಂಕಗಳು (Compound Duties): ಸರಕಿನ ಮೇಲೆ ನಿರ್ದಿಷ್ಟಪಡಿಸಿದ ಮತ್ತು ಬೆಲೆಗೆ ತಕ್ಕ ಸುಂಕಗಳೆರಡನ್ನೂ ವಿಧಿಸಿದಾಗ ಅದನ್ನು ಸಂಯುಕ್ತ ಸುಂಕ ಎಂಬ ಹೆಸರಿನಿಂದ ಕರೆಯಲಾಗುತ್ತದೆ.

C. ಅನ್ವಯ (Application)

ವಿಭಿನ್ನ ದೇಶಗಳ ನಡುವೆ ಅನ್ವಯವನ್ನು ಆಧರಿಸಿ ಸುಂಕವನ್ನು ಕೆಳಗಿನಂತೆ ವರ್ಗೀಕರಿಸಲಾಗಿದೆ.

1. ಏಕ-ದರ ಸುಂಕ (Single - Column Tariff): ಒಂದೇ ವಿಧದ ಎಲ್ಲಾ ಸರಕುಗಳ ಮೇಲೆ ಒಂದೇ ದರದ ಸುಂಕವನ್ನು ವಿಧಿಸುವಿಕೆಗೆ ಏಕದರ ಸುಂಕ ಎಂದು ಹೆಸರು. ಈ ಸುಂಕದಲ್ಲಿ ವಿವಿಧ ದೇಶಗಳ ನಡುವೆ ಭೇದ ಭಾವವನ್ನು ತೋರಿಸಲಾಗುವುದಿಲ್ಲ.

2. ದ್ವಿ-ದರ ಸುಂಕ (Double - Column Tariff): ಈ ವಿಧದ ಸುಂಕದಲ್ಲಿ ಕೆಲವು ಅಥವಾ ಎಲ್ಲಾ ಸರಕುಗಳ ಮೇಲೆ ಎರಡು ದರಗಳ ಸುಂಕಗಳನ್ನು ವಿಧಿಸಲಾಗುತ್ತದೆ. ಅಂದರೆ ಈ ಸುಂಕವು ವಿಭಿನ್ನ ದೇಶಗಳ ನಡುವೆ ಭೇದಭಾವವನ್ನು ತೋರಿಸುತ್ತದೆ.

3. ತ್ರಿ-ದರ ಸುಂಕ (Triple-Column Tariff): ಈ ವಿಧದ ಸುಂಕದಲ್ಲಿ ಸರಕುಗಳ ಮೇಲೆ ಮೂರು ದರಗಳ ಸುಂಕವನ್ನು ವಿಧಿಸಲಾಗುತ್ತದೆ. ಈ ಮೂರು ದರಗಳು ಯಾವುವೆಂದರೆ : (i) ಕನಿಷ್ಠ ದರ, (ii) ಗರಿಷ್ಠ ದರ, ಮತ್ತು (iii) ಆದ್ಯತೆಯ ದರ.

ಒಪ್ಪಂದದ ಪ್ರಕಾರ ರಿಯಾಯಿತಿಯನ್ನು ಪಡೆದುಕೊಂಡಿರುವ ದೇಶಗಳ ಸರಕಿನ ಮೇಲೆ ಕನಿಷ್ಠ ದರದ ಸುಂಕವನ್ನು ವಿಧಿಸಲಾಗುತ್ತದೆ.

ಇತರ ಎಲ್ಲಾ ದೇಶಗಳ ಸರಕುಗಳ ಮೇಲೆ ಗರಿಷ್ಠ ದರದ ಸುಂಕವನ್ನು ವಿಧಿಸಲಾಗುತ್ತದೆ.

ಮೂಲ ದೇಶ ಮತ್ತು ಅದರ ವಸಾಹತುಗಳ ನಡುವೆ ನಡೆಯುವ ವ್ಯಾಪಾರದಲ್ಲಿ ಆದ್ಯತೆಯ ಸುಂಕವನ್ನು ವಿಧಿಸಲಾಗುತ್ತದೆ.

D. ಉದ್ದೇಶ (Purpose)

ಸುಂಕಗಳು ಹೊಂದಿರುವ ಉದ್ದೇಶಕ್ಕನುಗುಣವಾಗಿ ಅವುಗಳನ್ನು ಕೆಳಗಿನಂತೆ ವರ್ಗೀಕರಿಸಬಹುದು.

1. ವರಮಾನ ಸುಂಕ (Revenue Tariff): ವರಮಾನವನ್ನು ಗಳಿಸುವಿಕೆಯು ಸುಂಕ ವಿಧಿಸುವಿಕೆಯಲ್ಲಿ ಕೆಲವೊಮ್ಮೆ ಸರ್ಕಾರದ ಮುಖ್ಯ ಗುರಿಯಾಗಿರುತ್ತದೆ. ವರಮಾನವನ್ನು ಗಳಿಸುವುದೇ ಮುಖ್ಯ ಗುರಿಯಾಗಿರುವಾಗ ಸುಂಕದ ದರಗಳನ್ನು ಬಹಳ ಕಡಿಮೆಯಾಗಿ ವಿಧಿಸಲಾಗುತ್ತದೆ. ಆಮದುಗಳ ಪ್ರಮಾಣ ಕಡಿಮೆಯಾಗಬಾರದು ಎಂಬುದು ಇಲ್ಲಿನ ಉದ್ದೇಶವಾಗಿರುತ್ತದೆ. ವರಮಾನ ಸುಂಕಗಳನ್ನು ರಾಶಿಗಟ್ಟಲೆ ಅನುಭೋಗದ (Mass Consumption) ಸರಕುಗಳ ಮೇಲೆ ವಿಧಿಸಲಾಗುತ್ತದೆ.

2. ರಕ್ಷಣಾತ್ಮಕ ಸುಂಕ (Protective Tariff): ವಿದೇಶೀ ಸ್ಪರ್ಧೆಯಿಂದ ಸ್ವದೇಶೀ ಕೈಗಾರಿಕೆಗಳಿಗೆ ರಕ್ಷಣೆಯನ್ನು ಒದಗಿಸಲು ಈ ಸುಂಕವನ್ನು ವಿಧಿಸಲಾಗುತ್ತದೆ. ಇಂತಹ ಸಂದರ್ಭದಲ್ಲಿ ಸುಂಕದ ದರಗಳು ವಿರೀತವಾಗಿರುತ್ತವೆ. ಏಕೆಂದರೆ ಅಧಿಕ ದರದ ಸುಂಕಗಳು ಮಾತ್ರ ಆಮದುಗಳನ್ನು ತಗ್ಗಿಸುವ ಮೂಲಕ ಸ್ವದೇಶೀ ಕೈಗಾರಿಕೆಗೆ ರಕ್ಷಣೆಯನ್ನು ಒದಗಿಸಲು ಸಾಧ್ಯ.

3. ಸರಿಗಟ್ಟುವ ಮತ್ತು ಸುರಿ ಮಾರಾಟ ವಿರೋಧಿ ಸುಂಕಗಳು (Countervailing and Anti-Dumping Duties): ವಿದೇಶೀ ಸರ್ಕಾರಗಳು ಸರಕುಗಳಿಗೆ ಸಹಾಯಧನಗಳನ್ನು ನೀಡಿದಾಗ ಅಂತಹ ಸರಕುಗಳ ಮೇಲೆ ಸರಿಗಟ್ಟುವ (ಸಮತೂಕವಾಗಿರುವ) ಸುಂಕಗಳನ್ನು ವಿಧಿಸಲಾಗುತ್ತದೆ. ಸಹಾಯಧನವನ್ನು ಒಳಗೊಂಡಿರುವ ಆ ಸರಕು ತುಂಬಾ ಅಗ್ಗವಾಗಿರುವುದರಿಂದ ಅದನ್ನು ಸ್ವಲ್ಪ ದುಬಾರಿಯಾಗಿ ಮಾಡಲು ಸುಂಕವನ್ನು ವಿಧಿಸಲಾಗುವುದು.

ಉತ್ಪಾದನ ವೆಚ್ಚಕ್ಕಿಂತ ಕಡಿಮೆ ಬೆಲೆಯಲ್ಲಿ ಅಥವಾ ತಮ್ಮ ದೇಶಗಳಲ್ಲಿರುವುದಕ್ಕಿಂತ ಕಡಿಮೆ ಬೆಲೆಯಲ್ಲಿ ಬೇರೆ ದೇಶಕ್ಕೆ ತಂದು ಸರಕುಗಳನ್ನು ಮಾರಾಟ ಮಾಡುವಾಗ (ಸುರಿಯುವ) ಆಮದುದಾರ ದೇಶವು ವಿಧಿಸುವ ಸುಂಕವನ್ನು ಸುರಿ ಮಾರಾಟ ವಿರೋಧಿ ಸುಂಕ ಎಂದು ಕರೆಯಲಾಗುತ್ತದೆ. ಅಂದರೆ ಸ್ವದೇಶೀ ಮಾರುಕಟ್ಟೆಗೆ ಸರಕನ್ನು ಆಮದು ಮಾಡಿಕೊಳ್ಳುವಾಗ ಈ ಸುಂಕವನ್ನು ವಿಧಿಸಲಾಗುತ್ತದೆ.

E. ದೇಯಾಂಶಗಳು
(Quotas)

'ದೇಯಾಂಶ' ಅಥವಾ 'ಕೋಟಾ' ಎಂದರೆ ಸರಕುಗಳನ್ನು ಭೌತಿಕವಾಗಿ ನಿರ್ದಿಷ್ಟಪಡಿಸುವುದು ಅಥವಾ ಮಿತಿಗೊಳಿಸುವುದು ಎಂದರ್ಥ. ದೇಯಾಂಶವನ್ನು ವಿಧಿಸಿದಾಗ

ಯಾವುದೊಂದು ದೇಶವು ಆಮದು ಮಾಡಿಕೊಳ್ಳುವ ಪ್ರಮಾಣದ ಮೇಲೆ ಅಥವಾ ರಫ್ತು ಮಾಡುವ ಪ್ರಮಾಣದ ಮೇಲೆ ಮಿತಿ ಹೇರಲಾಗುತ್ತದೆ. ಇಂತಿಷ್ಟೇ ಪ್ರಮಾಣದ ಸರಕುಗಳನ್ನು ಆಮದು ಮಾಡಿಕೊಳ್ಳಬೇಕು ಅಥವಾ ರಫ್ತು ಮಾಡಬೇಕು ಎಂದು ಮಿತಿಯನ್ನು ಹೇರುವುದರಿಂದ ಇದೂ ಸಹ ಸುಂಕದ ನೀತಿಯಂತೆ ರಕ್ಷಣಾ ನೀತಿಯ ಇನ್ನೊಂದು ಅಂಗವಾಗಿದೆ. ರಕ್ಷಣಾ ನೀತಿಯ ಅಂಗವಾಗಿ ದೇಯಾಂಶದ ಕ್ರಮವು 1870ರ ನಂತರ ಹೆಚ್ಚಾಗಿ ಕಾರ್ಯಾಚರಣೆಗೆ ಬಂದಿತು.

ದೇಯಾಂಶ ಪದ್ಧತಿಯು ಆಮದುಗಳಿಗೆ ಮತ್ತು ರಫ್ತುಗಳಿಗೆ ಎರಡಕ್ಕೂ ಅನ್ವಯಿಸುವುದಾದರೂ ಸಹ ಆಮದು ದೇಯಾಂಶಗಳು ಹೆಚ್ಚು ಜನಪ್ರಿಯವಾಗಿವೆ ಮತ್ತು ರಕ್ಷಣೆಯ ಕ್ರಮವಾಗಿ ಅವುಗಳನ್ನು ಹೆಚ್ಚಾಗಿ ಬಳಸಲಾಗುತ್ತದೆ.

ಆಮದು ದೇಯಾಂಶಗಳು ಸುಂಕಗಳಂತೆಯೇ ಅತಿ ಮುಖ್ಯವಾದ ಒಂದು ರಕ್ಷಣಾ ವಿಧಾನವಾಗಿದೆ. ಒಂದು ನಿರ್ದಿಷ್ಟ ಅವಧಿಯಲ್ಲಿ ನಿಗದಿತ ಪರಿಮಾಣದ ಅಥವಾ ಮೌಲ್ಯದ ಸರಕುಗಳ ಆಮದಿಗೆ ಅನುಮತಿಯನ್ನು ನೀಡಿರುವಂತಹ ವಿಧಾನಕ್ಕೆ ಆಮದು ದೇಯಾಂಶ ಎಂದು ಹೆಸರು. ಈ ನಿಗದಿತ ಪರಿಮಾಣ ಅಥವಾ ಮೌಲ್ಯವನ್ನು ಮೀರಿ ಸರಕುಗಳನ್ನು ಆಮದು ಮಾಡಿಕೊಳ್ಳಲು ನಿರ್ಬಂಧವಿರುತ್ತದೆ. ಉದಾಹರಣೆಗೆ, ಒಂದು ದೇಶವು ಒಂದು ವರ್ಷದ ಅವಧಿಯಲ್ಲಿ ಎಷ್ಟು ಪರಿಮಾಣದ ಅಥವಾ ಮೌಲ್ಯದ ಸರಕುಗಳನ್ನು ಆಮದು ಮಾಡಿಕೊಳ್ಳಬಹುದೆಂದು ಮೊದಲೇ ಕಟ್ಟಪ್ಪಣೆ ಮಾಡಲಾಗಿರುತ್ತದೆಯೋ ಅಷ್ಟನ್ನು ಮಾತ್ರ ಆಮದು ಮಾಡಿಕೊಳ್ಳಲು ಅವಕಾಶವಿರುತ್ತದೆ. ಆಮದು ದೇಯಾಂಶಗಳನ್ನು ಭೌತಿಕ ಗಾತ್ರದ ರೂಪದಲ್ಲಿಯಾದರೂ ನಿಗದಿಗೊಳಿಸಬಹುದು ಅಥವಾ ಹಣದ ಮೌಲ್ಯದ ರೂಪದಲ್ಲಿಯಾದರೂ ನಿಗದಿಗೊಳಿಸಬಹುದು. ಅಲ್ಲದೆ ಆಮದು ದೇಯಾಂಶಗಳು ಅನ್ವಯವಾಗುವ ಅವಧಿಯೂ ಸಹ ದೇಶದಿಂದ ದೇಶಕ್ಕೆ ಭಿನ್ನವಾಗಬಹುದು. ಸಾಮಾನ್ಯವಾಗಿ ಈ ಅವಧಿಯು ಅತ್ಯಂತ ಹೆಚ್ಚು ಎಂದರೆ ಒಂದು ವರ್ಷವಾಗಿದ್ದರೆ, ಅತ್ಯಂತ ಕಡಿಮೆ ಎಂದರೆ ಒಂದು ತಿಂಗಳಾಗಿರುತ್ತದೆ.

ದೇಯಾಂಶಗಳ ಮೂಲಕ ಆಮದುಗಳನ್ನು ಪರಿಮಾಣದಲ್ಲಿ ಅಥವಾ ಮೌಲ್ಯದ ರೂಪದಲ್ಲಿ ನಿರ್ಬಂಧಿಸಿದಾಗ ಅಷ್ಟು ಸರಕುಗಳನ್ನು ಸ್ವದೇಶದಲ್ಲಿಯೇ ಉತ್ಪಾದನೆ ಮಾಡಲು ಅವಕಾಶ ಲಭಿಸುತ್ತದೆ. ಆ ಮೂಲಕ ಸ್ವದೇಶಿ ಉದ್ಯಮಗಳಿಗೆ ರಕ್ಷಣೆ ದೊರೆಯುತ್ತದೆ ಹಾಗೂ ಉತ್ಪಾದನೆಯು ವಿಸ್ತರಿಸುತ್ತದೆ.

ಆಮದು ದೇಯಾಂಶಗಳ ಧ್ಯೇಯೋದ್ದೇಶಗಳು

(Objectives of Import Quotas)

ಮುಂದಿನ ವ್ಯಾಪಕ ಧ್ಯೇಯೋದ್ದೇಶಗಳನ್ನಿಟ್ಟುಕೊಂಡು ಆಮದು ದೇಯಾಂಶ ವಿಧಾನವನ್ನು ಆಚರಣೆಗೆ ತರಲಾಗುತ್ತದೆ.

1. ಪ್ರತಿಕೂಲ ಪಾವತಿ ಶಿಲ್ಕನ್ನು ಸರಿಪಡಿಸುವಿಕೆ (Correction of Disadvantageous Balance of Payments): ಯಾವುದೊಂದು ದೇಶದ ಪಾವತಿ ಶಿಲ್ಕು ಪ್ರತಿಕೂಲಕರವಾಗಿರುವಾಗ ಆಮದು ದೇಯಾಂಶಗಳನ್ನು ವಿಧಿಸಲಾಗುತ್ತದೆ. ವಿಪರೀತ ಪ್ರಮಾಣದ ಆಮದುಗಳ ಕಾರಣದಿಂದ ಹಣವು ವಿದೇಶಗಳಿಗೆ ಸಂದಾಯವಾಗುವಿಕೆಯು ಪಾವತಿ ಶಿಲ್ಕಿನ ಅಸಮತೋಲನಕ್ಕೆ ಪ್ರಮುಖ ಕಾರಣವಾಗಿರುತ್ತದೆ. ಪ್ರತಿಕೂಲ ಪಾವತಿ ಶಿಲ್ಕನ್ನು ಸರಿಪಡಿಸಬೇಕಾದರೆ ಆಮದುಗಳನ್ನು ನಿರ್ಬಂಧಿಸಬೇಕು ಮತ್ತು ರಫ್ತುಗಳನ್ನು ಹೆಚ್ಚಿಸಬೇಕು. ಆಮದು ದೇಯಾಂಶಗಳನ್ನು ವಿಧಿಸಿದಾಗ ಸರಕುಗಳನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳುವುದು ಕಡಿಮೆಯಾಗುತ್ತದೆ.

2. ಸ್ವದೇಶೀ ಕೈಗಾರಿಕೆಗಳ ರಕ್ಷಣೆ (Protection to Domestic Industries): ವಿದೇಶಗಳಿಂದ ಸರಕುಗಳನ್ನು ನಿರ್ಬಂಧವಿಲ್ಲದೆ ಆಮದು ಮಾಡಿಕೊಂಡಾಗ ಸ್ವದೇಶದಲ್ಲಿ ಸರಕುಗಳ ಉತ್ಪಾದನೆಯ ಹೆಚ್ಚಳಕ್ಕೆ ಮತ್ತು ಸ್ವದೇಶಿ ಕೈಗಾರಿಕೆಗಳ ಬೆಳವಣಿಗೆಗೆ ಧಕ್ಕೆಯಾಗುತ್ತದೆ. ವಿದೇಶಿ ಸರಕುಗಳು ಸ್ವದೇಶಿ ಮಾರುಕಟ್ಟೆಯನ್ನು ಯಥೇಚ್ಛವಾಗಿ ಪ್ರವೇಶಿಸಿದಾಗ ಸ್ವದೇಶೀ ಕೈಗಾರಿಕೆಗಳು ಸ್ಪರ್ಧೆಯನ್ನು ತಾಳಲಾರದೆ ನಶಿಸುವ ಸನ್ನಿವೇಶ ಎದುರಾಗುತ್ತದೆ. ಆದ್ದರಿಂದ ಸ್ವದೇಶಿ ಕೈಗಾರಿಕೆಗಳಿಗೆ ರಕ್ಷಣೆಯನ್ನು ಒದಗಿಸಿ ಅವುಗಳನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ದೇಯಾಂಶಗಳ ಮೂಲಕ ಆಮದುಗಳನ್ನು ನಿರ್ಬಂಧಿಸುವ ಆವಶ್ಯಕತೆ ಇರುತ್ತದೆ.

3. ಆಮದುಗಳ ಪರಿಣಾಮಕಾರಿ ನಿರ್ಬಂಧ (Effective Restriction of Imports): ದೇಯಾಂಶಗಳನ್ನು ವಿಧಿಸದೆ ಇತರ ವಿಧಾನಗಳ ಮೂಲಕ ಆಮದುಗಳನ್ನು ನಿಯಂತ್ರಿಸಲು ಪ್ರಯತ್ನಿಸಿದರೆ ಆ ಕ್ರಮವು ಹೆಚ್ಚಿನ ಯಶಸ್ಸನ್ನು ನೀಡಲಾರದು. ಇಂತಹ ಸರಕುಗಳನ್ನು ಇಂತಿಷ್ಟೇ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳಬೇಕೆಂದು ನಿಗದಿಪಡಿಸಿದಾಗ, ಅಂದರೆ ಆಮದುಗಳನ್ನು ಭೌತಿಕವಾಗಿ ನಿರ್ಬಂಧಿಸಿದಾಗ, ಸ್ವದೇಶಿ ಕೈಗಾರಿಕೆಗಳ ಬೆಳವಣಿಗೆ ಮತ್ತು ಉತ್ಪಾದನೆಯ ಹೆಚ್ಚಳ ಸಾಧನೆಯಾಗುತ್ತವೆ. ಆದ್ದರಿಂದ ಆಮದುಗಳನ್ನು ಪರಿಣಾಮಕಾರಿಯಾಗಿ ನಿರ್ಬಂಧಿಸಲು ದೇಯಾಂಶಗಳು ಆವಶ್ಯಕವಾಗಿವೆ.

4. ಸ್ವದೇಶಿ ಬೆಲೆಯ ಮಟ್ಟವನ್ನು ಕಾಪಾಡುವಿಕೆ (Maintenance of Domestic Price Level): ಆಮದು ಸರಕುಗಳು ವಿಪರೀತ ಪ್ರಮಾಣದಲ್ಲಿ ಸ್ವದೇಶಿ ಮಾರುಕಟ್ಟೆಯನ್ನು ಪ್ರವೇಶಿಸಿದಾಗ ಬೆಲೆಯ ಮಟ್ಟದಲ್ಲಿ ಅಸಾಧಾರಣವಾದ ಏರಿಳಿತಗಳು ಸಂಭವಿಸುವ ಅಪಾಯವಿರುತ್ತದೆ. ಸ್ವದೇಶಿ ಸರಕುಗಳು ಪೈಪೋಟಿಯನ್ನು ತಾಳಲಾರದೆ ಮಾರುಕಟ್ಟೆಯಿಂದ ಅದೃಶ್ಯವಾಗುತ್ತಿರುವಾಗ ಮತ್ತು ಸ್ವದೇಶಿ ಉದ್ಯಮಗಳು ನಶಿಸುತ್ತಿರುವಾಗ ವಿದೇಶಗಳಿಂದ ಆಮದು ಮಾಡಿಕೊಳ್ಳಲಾದ ಸರಕುಗಳು ಅಧಿಕ ಬೆಲೆಯಲ್ಲಿ ಮಾರಾಟವಾಗುವ ಪರಿಸ್ಥಿತಿ ಅಸ್ತಿತ್ವದಲ್ಲಿರುತ್ತದೆ. ಆದ್ದರಿಂದ ಆಮದು ಸರಕುಗಳ ಒಳ

ಪ್ರವಹನವನ್ನು ನಿಯಂತ್ರಿಸುವ ಮೂಲಕ ಸ್ವದೇಶೀ ಬೆಲೆಯ ಮಟ್ಟವನ್ನು ಸ್ಥಿಮಿತದಲ್ಲಿಡುವ ಧ್ಯೇಯೋದ್ದೇಶವನ್ನು ಆಮದು ದೇಯಾಂಶಗಳು ಹೊಂದಿರುತ್ತವೆ.

5. ಪ್ರತೀಕಾರ (Retaliation): ವ್ಯಾಪಾರದಲ್ಲಿ ನಿರ್ಬಂಧಾತ್ಮಕ ವಿಧಾನಗಳನ್ನು ಅನುಸರಿಸುವ ಇತರ ದೇಶಗಳ ವಿರುದ್ಧ ಸೇಡು ತೀರಿಸಿಕೊಳ್ಳುವ ಕ್ರಮವಾಗಿಯೂ ಆಮದು ದೇಯಾಂಶ ವಿಧಾನವನ್ನು ಅನುಸರಿಸಲಾಗುತ್ತದೆ. ಇತರ ದೇಶಗಳು ಯಾವುದೊಂದು ದೇಶದ ಆಮದುಗಳನ್ನು ನಿರ್ಬಂಧಿಸುವ ಅಥವಾ ಇತರೇ ರೀತಿಗಳ ವ್ಯಾಪಾರ ನಿಯಂತ್ರಣ ಕ್ರಮಗಳನ್ನು ಅನುಸರಿಸಿದರೆ ಅದಕ್ಕೆ ಪ್ರತೀಕಾರವಾಗಿ ಆ ದೇಶವು ಆಮದು ದೇಯಾಂಶಗಳನ್ನು ವಿಧಿಸಿ ಇತರ ದೇಶಗಳಿಂದ ಆಮದುಗಳನ್ನು ನಿರ್ಬಂಧಿಸುತ್ತದೆ.

6. ಆಮದು ಸರಕುಗಳಿಗೆ ಬೇಡಿಕೆಯನ್ನು ಮಿತಿಗೊಳಿಸುವಿಕೆ (Limiting Demand for Import Commodities): ಯಾವ ನಿರ್ಬಂಧಗಳೂ ಇಲ್ಲದೆ ಆಮದು ಸರಕುಗಳು ಸ್ವದೇಶಿ ಮಾರುಕಟ್ಟೆಯಲ್ಲಿ ಲಭ್ಯವಿರುವುದಾದರೆ ಮತ್ತು ಸ್ವದೇಶಿ ಸರಕುಗಳು ವಿದೇಶಿ ಸರಕುಗಳ ಪೈಪೋಟಿಯನ್ನು ತಾಳಲಾರದಂತಹ ಸ್ಥಿತಿಯಲ್ಲಿದ್ದರೆ ವಿದೇಶೀ ಸರಕುಗಳಿಗೆ ಬೇಡಿಕೆಯು ಅನಾಧಾರಣವಾಗಿ ಹೆಚ್ಚುತ್ತದೆ. ಆಗ ಸ್ವದೇಶಿ ಸರಕುಗಳ ವಿರೀದಿಗೆ ಪ್ರೋತ್ಸಾಹ ಮತ್ತು ರಕ್ಷಣೆ ಇಲ್ಲದೆ ಅವುಗಳನ್ನು ಕೇಳುವವರೇ ಇಲ್ಲದಂತಾಗುತ್ತದೆ. ಇದನ್ನು ತಪ್ಪಿಸಿ ಸ್ವದೇಶಿ ಸರಕುಗಳಿಗೆ ಬೇಡಿಕೆಯನ್ನು ಮತ್ತು ಅವುಗಳ ಪೈಪೋಟಿಯ ಸಾಮರ್ಥ್ಯವನ್ನು ಹೆಚ್ಚಿಸಬೇಕಾದ ಅಗತ್ಯವಿರುತ್ತದೆ. ಆ ಪ್ರಕಾರ ಆಮದು ದೇಯಾಂಶಗಳು ಆಮದು ಸರಕುಗಳಿಗೆ ಬೇಡಿಕೆಯನ್ನು ಮಿತಿಗೊಳಿಸುವ ಮೂಲಕ ಒಂದು ದೇಶದ ಚೌಕಾಯಿಸಿ ಶಕ್ತಿಯನ್ನು (Bargaining Power) ಹೆಚ್ಚಿಸುವ ಧ್ಯೇಯೋದ್ದೇಶವನ್ನು ಹೊಂದಿವೆ.

ಆಮದು ದೇಯಾಂಶಗಳ ವಿಧಗಳು
(Types of Import Quotas)

ಆಮದು ದೇಯಾಂಶಗಳಲ್ಲಿ ಮುಖ್ಯವಾಗಿ ಐದು ವಿಧಗಳಿವೆ. ಅವುಗಳನ್ನು ಕೆಳಗಿನಂತೆ ವಿವರಿಸಿದೆ.

1. ಸುಂಕದ ದೇಯಾಂಶ (Tariff Quota): ಸುಂಕದ ದೇಯಾಂಶವು ಸುಂಕ ಮತ್ತು ದೇಯಾಂಶ ಎರಡರ ಲಕ್ಷಣಗಳನ್ನು ಒಳಗೊಂಡಿರುತ್ತದೆ. ಈ ವಿಧಾನದಲ್ಲಿ ಯಾವುದೇ ಸರಕನ್ನು ಒಂದು ನಿರ್ದಿಷ್ಟ ಗಾತ್ರದವರೆಗೆ ಸುಂಕ ರಹಿತವಾಗಿ ಅಥವಾ ವಿಶೇಷವಾದ ಕಡಿಮೆ ದರದಲ್ಲಿ ಆಮದು ಮಾಡಿಕೊಳ್ಳಲಾಗುತ್ತದೆ. ಆದರೆ ಈ ಮಿತಿಗೆ ಮೀರಿದ ಗಾತ್ರವನ್ನು ಸುಂಕ ಸಹಿತವಾಗಿ ಅಥವಾ ಅಧಿಕ ದರದ ಸುಂಕದೊಡನೆ ಆಮದು ಮಾಡಿಕೊಳ್ಳಲಾಗುತ್ತದೆ. ಆದರೆ ಈ ಮಿತಿಯನ್ನು ಮೀರಿದ ಆಮದುಗಳ ಮೇಲೆ ಅಧಿಕ ದರದ ಸುಂಕವನ್ನು ವಿಧಿಸಲಾಗುತ್ತದೆ.

2. ಏಕಪಕ್ಷೀಯ ದೇಯಾಂಶ (Unilateral Quota): ಸಂಬಂಧಪಟ್ಟ ಸರಕಿನ ಆಮದಿನ ಮೇಲೆ ದೇಶವು ಏಕಪಕ್ಷೀಯವಾಗಿ ದೇಯಾಂಶವನ್ನು ನಿರ್ಧರಿಸುವುದಕ್ಕೆ ಏಕ ಪಕ್ಷೀಯ ದೇಯಾಂಶ ಎಂದು ಹೆಸರು. ಅಂದರೆ ಈ ವಿಧಾನದಲ್ಲಿ ಯಾವುದೊಂದು ದೇಶವು ಆಮದು ಮಾಡಿಕೊಳ್ಳಬೇಕಾಗಿರುವ ಸರಕಿನ ಗಾತ್ರವನ್ನು ತಾನೇ ಏಕಪಕ್ಷೀಯವಾಗಿ ನಿರ್ಧರಿಸುತ್ತದೆ.

3. ದ್ವಿಪಕ್ಷೀಯ ದೇಯಾಂಶ (Bilateral Quota): ಆಮದು ಮಾಡಿಕೊಳ್ಳುವ ದೇಶ ಮತ್ತು ನಿರ್ದಿಷ್ಟ ಪೂರೈಕೆದಾರ ದೇಶ, ಅಥವಾ ಆಮದುದಾರ ದೇಶ ಮತ್ತು ಪೂರೈಕೆದಾರ ದೇಶದ ರಫ್ತು ಗುಂಪುಗಳು ಸಮಾಲೋಚನೆಯ ಮೂಲಕ ನಿಗದಿಪಡಿಸುವ ದೇಯಾಂಶಕ್ಕೆ ದ್ವಿಪಕ್ಷೀಯ ದೇಯಾಂಶ ಎಂದು ಹೆಸರು. ಅಂದರೆ ಆಮದು ಮಾಡಿಕೊಳ್ಳುವ ದೇಶ ಮತ್ತು ರಫ್ತು ಮಾಡುವ ದೇಶಗಳ ನಡುವೆ ಒಂದು ಸಮಾಲೋಚನೆಯ ಮೂಲಕ ನಿಗದಿಗೊಳಿಸುವ ಆಮದಿನ ಗಾತ್ರವು ದ್ವಿಪಕ್ಷೀಯ ದೇಯಾಂಶವಾಗಿರುತ್ತದೆ.

4. ಮಿಶ್ರಣ ದೇಯಾಂಶ (Mixing Quota): ಈ ವಿಧಾನದಲ್ಲಿ ಉತ್ಪಾದಕರು ಸಿದ್ಧಪಡಿಸಿದ ಸರಕಿನ ಉತ್ಪಾದನೆಯಲ್ಲಿ ಒಂದು ನಿರ್ದಿಷ್ಟ ಪ್ರಮಾಣದವರೆಗೆ ಸ್ವದೇಶೀ ಕಚ್ಚಾವಸ್ತುಗಳನ್ನು ಉಪಯೋಗಿಸಲೇಬೇಕಾಗಿರುತ್ತದೆ.

5. ಆಮದು ಪರವಾನಗಿ (Import Licensing): ಈ ವಿಧಾನದಲ್ಲಿ ಆಮದುಗಳಿಗಾಗಿ ಪಾವತಿಸಲು ವಿದೇಶೀ ವಿನಿಮಯವನ್ನು ಪಡೆಯಲು ಅಗತ್ಯವಿರುವ ಆಮದು ಪರವಾನಗಿಯನ್ನು ಭವಿಷ್ಯದ ಆಮದುದಾರರು ಪಡೆದುಕೊಳ್ಳಬೇಕಾಗಿರುತ್ತದೆ. ಆಮದುಗಳನ್ನು ನಿಯಂತ್ರಿಸಲು ಈ ವಿಧಾನವು ಒಂದು ಪ್ರಮುಖ ಸಾಧನವಾಗಿದೆ. ದೇಯಾಂಶಗಳ ವಿವಿಧ ವಿಧಾನಗಳನ್ನು ಕಾರ್ಯರೂಪಕ್ಕೆ ತರಲು ಆಮದು ಪರವಾನಗಿ ನೀತಿಯನ್ನು ವಿಕಾಸಗೊಳಿಸಲಾಗಿದೆ. ಈ ವಿಧಾನದ ಪ್ರಕಾರ, ಆಮದು ಮಾಡಿಕೊಳ್ಳಬೇಕಾಗಿರುವ ಸರಕುಗಳ ಪರಿಮಾಣವನ್ನು ಮೊದಲು ನಿರ್ಧರಿಸಲಾಗುತ್ತದೆ. ಆನಂತರ ಸೂಕ್ತ ಪ್ರಾಧಿಕಾರವು ಸರಕುಗಳನ್ನು ಆಮದು ಮಾಡಿಕೊಳ್ಳಲು ಆಮದುದಾರರಿಗೆ ಪರವಾನಗಿಗಳನ್ನು ನೀಡುತ್ತದೆ.

ದೇಯಾಂಶಗಳ ಪರಿಣಾಮಗಳು
(Effects of Quotas)

ಆಮದು ದೇಯಾಂಶಗಳು ಅನೇಕ ಪರಿಣಾಮಗಳಿಗೆ ಅವಕಾಶ ಕಲ್ಪಿಸುತ್ತವೆ. ಕಿಡ್ಲ್ ಬರ್ಗರ್ ಇಂತಹ ಏಳು ಪರಿಣಾಮಗಳನ್ನು ಗುರುತಿಸಿದ್ದಾನೆ. ಅವುಗಳೆಂದರೆ :


i) ಬೆಲೆಯ ಪರಿಣಾಮ,
ii) ರಕ್ಷಣಾತ್ಮಕ ಪರಿಣಾಮ,
iii) ಅನುಭೋಗದ ಪರಿಣಾಮ,
iv) ವರಮಾನದ ಪರಿಣಾಮ,

v) ಮರುವಿತರಣೆ ಪರಿಣಾಮ,

vi) ಪಾವತಿ ಶಿಲ್ಕಿನ ಪರಿಣಾಮ, ಮತ್ತು

vii) ವ್ಯಾಪಾರದ ಕರಾರುಗಳ ಪರಿಣಾಮ.

ಇವುಗಳಲ್ಲಿ ಬೆಲೆಯ ಪರಿಣಾಮ, ರಕ್ಷಣಾತ್ಮಕ ಪರಿಣಾಮ, ಅನುಭೋಗದ ಪರಿಣಾಮ, ವರಮಾನದ ಪರಿಣಾಮ ಮತ್ತು ಮರುವಿತರಣೆಯ ಪರಿಣಾಮಗಳನ್ನು 5.5ನೇ ರೇಖಾಚಿತ್ರ ನಿರೂಪಿಸುತ್ತದೆ.



ರೇಖಾಚಿತ್ರ 2.3

ದೇಯಾಂಶಗಳ ಪರಿಣಾಮಗಳು

1. ಬೆಲೆಯ ಪರಿಣಾಮ (Price Effect) : ಆಮದು ದೇಯಾಂಶಗಳನ್ನು ವಿಧಿಸಿದಾಗ ಸರಕುಗಳ ಒಟ್ಟು ಪೂರೈಕೆ ಮತ್ತು ಲಭ್ಯತೆ ಕಡಿಮೆಯಾಗುತ್ತದೆ. ಸ್ವದೇಶಿ ಮಾರುಕಟ್ಟೆಯಲ್ಲಿ ಸರಕುಗಳ ಬೇಡಿಕೆಗಳಿಗಿಂತ ಪೂರೈಕೆಯು ಕಡಿಮೆಯಾಗುವುದರಿಂದ ಬೆಲೆಯು ಹೆಚ್ಚುತ್ತದೆ. ರೇಖಾ ಚಿತ್ರ 2.3ರಲ್ಲಿ ದೇಯಾಂಶದ ಬೆಲೆಯ ಪರಿಣಾಮವನ್ನು ವಿವರಿಸಲಾಗಿದೆ.

ಚಿತ್ರದಲ್ಲಿ DD ಸ್ವದೇಶಿ ಬೇಡಿಕೆಯ ಮತ್ತು SS ಸ್ವದೇಶೀ ಪೂರೈಕೆಯ ರೇಖೆಗಳಾಗಿವೆ. PB ಮುಕ್ತ ವ್ಯಾಪಾರ ಪರಿಸ್ಥಿತಿಯಲ್ಲಿ ವಿದೇಶೀ ಪೂರೈಕೆಯ ರೇಖೆಯಾಗಿದೆ. ಈ ರೇಖೆಯು ಸ್ವದೇಶಿ ಬೇಡಿಕೆಯ ರೇಖೆ DDಯನ್ನು B ಬಿಂದುವಿನಲ್ಲಿ ಸ್ಪರ್ಶಿಸಿದೆ. ಆ ಪ್ರಕಾರ, OP ಬೆಲೆಯು ನಿರ್ಧರಿಸಲ್ಪಟ್ಟಿದೆ. ಸರಕಿಗಿರುವ ಒಟ್ಟು ಸ್ವದೇಶಿ ಬೇಡಿಕೆಯು OQ_3 ಆಗಿದೆ. ಆದರೆ ಸ್ವದೇಶಿ ಪೂರೈಕೆಯು OQ ಮಾತ್ರ ಆಗಿದೆ. ಆ ಮೇರೆಗೆ, ಮುಕ್ತ ವ್ಯಾಪಾರದಲ್ಲಿ OP ಬೆಲೆಯಲ್ಲಿ QQ_3 ಪ್ರಮಾಣದ ಸರಕನ್ನು ಆಮದು ಮಾಡಿಕೊಳ್ಳಲಾಗುತ್ತಿದೆ.

ಈಗ ಸರ್ಕಾರವು Q_1Q_2 ಪ್ರಮಾಣದಷ್ಟು ಆಮದು ದೇಯಾಂಶವನ್ನು ನಿಗದಿಗೊಳಿಸಿದೆ ಎಂದು ತಿಳಿಯೋಣ. ಈ ಸಂದರ್ಭದಲ್ಲಿ ಸರಕಿನ ಒಟ್ಟು ಪೂರೈಕೆಯು S + Q ಆಗಿದೆ.

ಇದು ಸ್ವದೇಶಿ ಪೂರೈಕೆ ಮತ್ತು ದೇಯಾಂಶ ಎರಡನ್ನು ಒಳಗೊಂಡಿದೆ. ಈ ರೇಖೆಯು ಸ್ವದೇಶಿ ಬೇಡಿಕೆಯ ರೇಖೆಯನ್ನು N ಬಿಂದುವಿನಲ್ಲಿ ಛೇದಿಸಿದೆ. ದೇಯಾಂಶದ ಪರಿಣಾಮವಾಗಿ ಸರಕಿನ ಆಮದಿನ ಗಾತ್ರವು QQ_3 ನಿಂದ QQ_2 ಗೆ ಇಳಿದಿದೆ. ಸರಕಿನ ಲಭ್ಯತೆಯು ಕಡಿಮೆಯಾದ ಕಾರಣದಿಂದ ಬೆಲೆಯು OP ಯಿಂದ OP_1 ಗೆ ಏರಿದೆ. ಆ ಪ್ರಕಾರ PP_1 ದೇಯಾಂಶದ ಬೆಲೆಯ ಪರಿಣಾಮವಾಗಿದೆ.

2. ರಕ್ಷಣಾತ್ಮಕ ಪರಿಣಾಮ (Protective Effect) : ದೇಯಾಂಶವು ಸರಕಿನ ಆಮದು ಪ್ರಮಾಣವನ್ನು ಕಡಿತಗೊಳಿಸುವ ಮೂಲಕ ಸ್ವದೇಶಿ ಉತ್ಪಾದನೆಯ ಹೆಚ್ಚಳಕ್ಕೆ ಅವಕಾಶ ನೀಡುತ್ತದೆ ಹಾಗೂ ವಿದೇಶಿ ಪೈಪೋಟಿಯಿಂದ ಸ್ವದೇಶಿ ಉದ್ಯಮವನ್ನು ರಕ್ಷಿಸುತ್ತದೆ. ಚಿತ್ರದಲ್ಲಿ ತೋರಿಸಿರುವಂತೆ Q_1Q_2 ಪ್ರಮಾಣದ ಆಮದು ದೇಯಾಂಶವನ್ನು ನಿಗದಿಗೊಳಿಸಿದಾಗ, ಸ್ವದೇಶಿ ಉತ್ಪಾದನೆಯು OQ ನಿಂದ OQ_1 ಗೆ ಹೆಚ್ಚುತ್ತದೆ. ಆ ಮೇರೆಗೆ, QQ_1 ಆಮದು ದೇಯಾಂಶದ ರಕ್ಷಣಾತ್ಮಕ ಪರಿಣಾಮವಾಗಿದೆ.

3. ಅನುಭೋಗ ಪರಿಣಾಮ (Consumption Effect): ಆಮದು ದೇಯಾಂಶವನ್ನು ನಿಗದಿಗೊಳಿಸಿದಾಗ ಸರಕಿನ ಲಭ್ಯತೆಯು ಕಡಿಮೆಯಾಗುತ್ತದೆ. ಈ ಕಾರಣದಿಂದ ಸ್ವದೇಶದಲ್ಲಿ ಸರಕಿನ ಬೆಲೆಯು ಏರಲು ವ್ಯಾಪ್ತಿ ಲಭಿಸುತ್ತದೆ. ಇದರಿಂದಾಗಿ ಸ್ವದೇಶಿ ಅನುಭೋಗವು ಕುಸಿಯುತ್ತದೆ.

ಚಿತ್ರದಲ್ಲಿ ನಿರೂಪಿಸಿರುವಂತೆ ಮುಕ್ತ ವ್ಯಾಪಾರದಲ್ಲಿ ಸರಕಿನ ಒಟ್ಟು ಸ್ವದೇಶಿ ಅನುಭೋಗವು OQ_3 ಆಗಿದೆ. Q_1Q_2 ಪ್ರಮಾಣದ ದೇಯಾಂಶವನ್ನು ನಿಗದಿಗೊಳಿಸಿದಾಗ ಒಟ್ಟು ಸ್ವದೇಶಿ ಅನುಭೋಗವು OQ_2 ಪ್ರಮಾಣಕ್ಕೆ ಇಳಿಯುತ್ತದೆ. ಆ ಪ್ರಕಾರ, OQ_3 ನಿಂದ OQ_2 ಗೆ ಸ್ವದೇಶಿ ಅನುಭೋಗವು ಕಡಿಮೆಯಾಗಿರುವಿಕೆಯು ಆಮದು ದೇಯಾಂಶದ ಅನುಭೋಗದ ಪರಿಣಾಮವಾಗಿದೆ.

4. ವರಮಾನ ಪರಿಣಾಮ (Revenue Effect) : ದೇಯಾಂಶಗಳನ್ನು ಆಮದು ಪರವಾನಗಿ ನೀತಿಯ ಮೂಲಕ ಜಾರಿಗೆ ತರಲಾಗುವುದರಿಂದ ಸರ್ಕಾರವು ಪರವಾನಗಿ ಶುಲ್ಕದ ರೂಪದಲ್ಲಿ ಸ್ವಲ್ಪ ವರಮಾನವನ್ನು ಗಳಿಸುತ್ತದೆ. ಚಿತ್ರದಲ್ಲಿ ತೋರಿಸಿರುವಂತೆ ಸರ್ಕಾರವು $PP_1 \times Q_1Q_2$ ಬೆಲೆಗಳಲ್ಲಿ ಆಮದು ಪರವಾನಗಿಗಳನ್ನು ನೀಡುತ್ತದೆ. ಆ ಪ್ರಕಾರ, ಆಮದು ದೇಯಾಂಶದ ವರಮಾನದ ಪರಿಣಾಮವು aMNb ಆಗಿರುತ್ತದೆ.

5. ಮರುವಿತರಣೆಯ ಪರಿಣಾಮ (Redistributive Effect) : ದೇಯಾಂಶಗಳ ಪರಿಣಾಮವಾಗಿ ಸರಕುಗಳ ಪೂರೈಕೆಯು ಕಡಿಮೆಯಾಗುವುದರಿಂದ ಸ್ವದೇಶಿ ಉತ್ಪಾದಕರು ಬೆಲೆಗಳನ್ನು ಏರಿಸುತ್ತಾರೆ. ಇದರಿಂದ ಉತ್ಪಾದಕರ ಪರವಾಗಿ ಮತ್ತು ಅನುಭೋಗಿಗಳ ವಿರುದ್ಧವಾಗಿ ಆದಾಯವು ಮರುವಿತರಣೆಗೊಳ್ಳುತ್ತದೆ. ಸ್ವದೇಶಿ ಉತ್ಪಾದಕರು ಅಧಿಕ

ಲಾಭ ಸಂಪಾದನೆಯ ಉದ್ದೇಶದಿಂದ ಸರಕಿನ ಬೆಲೆಯನ್ನು ಏರಿಸಿದಾಗ ಅನುಭೋಗಿಯ ಅಧಿಕ ತೃಪ್ತಿಯು ಕಡಿಮೆಯಾಗುತ್ತದೆ.

ರೇಖಾಚಿತ್ರದಲ್ಲಿ PP_1 MA ಪ್ರದೇಶವು ದೇಯಾಂಶದ ಮರುವಿತರಣೆಯ ಪರಿಣಾಮವನ್ನು ಸೂಚಿಸುತ್ತದೆ.

6. ಪಾವತಿ ಶಿಲ್ಕಿನ ಪರಿಣಾಮ (Balance of Payments Effect) : ದೇಯಾಂಶಗಳ ಫಲವಾಗಿ ಒಂದು ದೇಶದ ಆಮದುಗಳ ಗಾತ್ರವನ್ನು ನಿರ್ದಿಷ್ಟ ಮಿತಿಯೊಳಗೆ ಇಡುವುದರಿಂದ ಆ ದೇಶದ ವಿದೇಶೀ ವಿನಿಮಯ ಸಂರಕ್ಷಣೆಯಾಗಿ ಪಾವತಿ ಶಿಲ್ಕಿನ ಪರಿಸ್ಥಿತಿಯು ಉತ್ತಮಗೊಳ್ಳುತ್ತದೆ. ಅಲ್ಲದೆ ದೇಯಾಂಶದ ಮೂಲಕ ಆಮದುಗಳನ್ನು ನಿರ್ಬಂಧಿಸಿದಾಗ ಆಮದುಗಳಿಗಾಗಿ ವೆಚ್ಚ ಮಾಡಬೇಕಾಗಿದ್ದ ರಾಷ್ಟ್ರೀಯ ಆದಾಯವು ಉಳಿಯುತ್ತದೆ. ಈ ಹಣವನ್ನು ಆಮದು ಬದಲಿಕೆಯ ಮತ್ತು ರಫ್ತು ವೃದ್ಧಿ ಕೈಗಾರಿಕೆಗಳ ಮೇಲೆ ಹೂಡಿಕೆ ಮಾಡಲು ಅವಕಾಶ ಸಿಗುತ್ತದೆ. ಈ ಕಾರಣದಿಂದ ವಿದೇಶೀ ವಿನಿಮಯ ಸಂಪನ್ಮೂಲಗಳು ಸಂರಕ್ಷಣೆಯಾಗುವುದಲ್ಲದೆ ವಿದೇಶಗಳಿಂದ ಆದಾಯವು ದೊರೆಯುತ್ತದೆ. ಈ ರೀತಿಯಲ್ಲಿ ಪಾವತಿ ಶಿಲ್ಕಿನ ಪರಿಸ್ಥಿತಿಯು ಉತ್ತಮಗೊಳ್ಳುತ್ತದೆ.

ಚಿತ್ರದಲ್ಲಿ ನಿರೂಪಿಸಿರುವಂತೆ ಮುಕ್ತ ವ್ಯಾಪಾರದ ಸನ್ನಿವೇಶದಲ್ಲಿ OP ಬೆಲೆಯಲ್ಲಿ OQ_3 ಪ್ರಮಾಣದ ಸರಕನ್ನು ಆಮದು ಮಾಡಿಕೊಳ್ಳಲಾಗುತ್ತದೆ. AQQ_3B ಸಮತಲಾಕೃತಿ ಪ್ರದೇಶವು ಆಮದುಗಳ ಒಟ್ಟು ಮೌಲ್ಯವನ್ನು ವ್ಯಕ್ತಪಡಿಸುತ್ತದೆ. ಇದು ಪಾವತಿ ಶಿಲ್ಕಿನ ಕೊರತೆಯನ್ನು ಸೂಚಿಸುತ್ತದೆ. ಏಕೆಂದರೆ ಆಮದುದಾರರು ಪಾವತಿಸಿದ ಹಣವು ಇತರೆ ದೇಶವು ಸ್ವೀಕರಿಸಿದ ಆದಾಯವಾಗಿರುತ್ತದೆ. ಪಾವತಿ ಶಿಲ್ಕಿನ ಈ ಕೊರತೆಯನ್ನು ಸರಿದೂಗಿಸಲು ಆಮದುಗಳನ್ನು ಕಡಿತಗೊಳಿಸಬೇಕಾಗಿರುತ್ತದೆ. ಈ ಕಾರಣದಿಂದ Q_1Q_2 ಪ್ರಮಾಣದ ಆಮದು ದೇಯಾಂಶವನ್ನು ನಿಗದಿಗೊಳಿಸಲಾಗಿದೆ. ದೇಯಾಂಶವನ್ನು ವಿಧಿಸಿದ ದೇಶವು AQ_1Q_2B ಪ್ರದೇಶಕ್ಕೆ ಸಮನಾಗಿರುವಷ್ಟು ಮೊಬಲಗನ್ನು ಆಮದುಗಳಿಗಾಗಿ ಪಾವತಿಸುತ್ತದೆ. ಇದು ಮುಕ್ತ ವ್ಯಾಪಾರದಲ್ಲಿ ಪಾವತಿಸುತ್ತಿದ್ದ AQQ_3B ಪ್ರಮಾಣಕ್ಕಿಂತ ಕಡಿಮೆ ಇದೆ.

7. ವ್ಯಾಪಾರದ ಕರಾರುಗಳ ಪರಿಣಾಮ (Terms of Trade Effect) : ಆಮದು ದೇಯಾಂಶವನ್ನು ನಿಗದಿಗೊಳಿಸಿದ ಕಾರಣದಿಂದ ಸಂಬಂಧಪಟ್ಟ ದೇಶದ ವ್ಯಾಪಾರದ ಕರಾರುಗಳಲ್ಲಿ ಬದಲಾವಣೆಯಾಗುತ್ತದೆ. ದೇಯಾಂಶವನ್ನು ವಿಧಿಸುವ ದೇಶಕ್ಕೆ ವ್ಯಾಪಾರದ ಕರಾರುಗಳು ಸಾಮಾನ್ಯವಾಗಿ ಅನುಕೂಲಕರವಾಗುತ್ತವೆ. ಏಕೆಂದರೆ ದೇಯಾಂಶವನ್ನು ನಿಗದಿಗೊಳಿಸಿದಾಗ ಸ್ವದೇಶೀ ಉತ್ಪಾದನೆಯು ಹೆಚ್ಚುವುದರಿಂದ ಆ ದೇಶವು ವಿದೇಶಗಳೊಡನೆ ಅನುಕೂಲಕರ ವ್ಯಾಪಾರದ ಕರಾರುಗಳನ್ನು ಹೊಂದಲು ಸಾಧ್ಯವಾಗುತ್ತದೆ.

ಸುಂಕಗಳ ಮತ್ತು ದೇಯಾಂಶಗಳ ನಡುವಿನ ವ್ಯತ್ಯಾಸಗಳು
(Differences Between Tariffs and Quotas)

ಸುಂಕಗಳು ಮತ್ತು ಆಮದು ದೇಯಾಂಶಗಳು ಸಾಮಾನ್ಯವಾಗಿ ಒಂದೇ ರೀತಿಯ ಪರಿಣಾಮಗಳನ್ನು ತರುತ್ತವೆ. ಅವುಗಳಿಂದ ಸರಕಿನ ಸ್ವದೇಶೀ ಬೆಲೆಯಲ್ಲಿ ಏರಿಕೆಯಾಗುತ್ತದೆ, ಸ್ವದೇಶೀ ಉದ್ಯಮದ ರಕ್ಷಣೆಯಾಗುತ್ತದೆ, ಸ್ವದೇಶೀ ಅನುಭೋಗವು ಕಡಿಮೆಯಾಗುತ್ತದೆ ಮತ್ತು ಅನುಭೋಗಿಗಳಿಂದ ಉತ್ಪಾದಕರ ಪರವಾಗಿ ಆದಾಯವು ಮರುವಿತರಣೆಗೊಳ್ಳುತ್ತದೆ. ಆದಾಗ್ಯೂ ಸುಂಕಗಳ ಮತ್ತು ದೇಯಾಂಶಗಳ ಪರಿಣಾಮಗಳ ಸ್ವರೂಪ ಮತ್ತು ತೀವ್ರತೆಯಲ್ಲಿ ಕೆಲವು ಮೂಲಭೂತ ವ್ಯತ್ಯಾಸಗಳಿವೆ. ಅವುಗಳನ್ನು ಕೆಳಗಿನಂತೆ ಚರ್ಚಿಸಬಹುದು.

1. ದೇಯಾಂಶಗಳು ತಮ್ಮ ಆಚರಣೆಯಲ್ಲಿ ಬಹಳ ನಿಷ್ಕುರವಾಗಿರುತ್ತವೆ. ಅವು ಆಮದುಗಳ ಪರಿಮಾಣವನ್ನು ಕಟ್ಟುನಿಟ್ಟಿನಿಂದ ನಿಯಂತ್ರಿಸುತ್ತವೆ. ಆದರೆ ಸುಂಕಗಳಲ್ಲಿ ಇಂತಹ ನಿಷ್ಕುರತೆ ಇರುವುದಿಲ್ಲ. ಸುಂಕವು ಮೃಧುವಾದ ಮತ್ತು ನಮ್ಯವಾದ ವಿಧಾನವಾಗಿರುತ್ತದೆ.

2. ದೇಯಾಂಶಗಳು ಸಂಪೂರ್ಣವಾಗಿ ರಕ್ಷಣಾತ್ಮಕ ಪರಿಣಾಮವನ್ನು ಹೊಂದಿವೆ. ಅಂದರೆ ಅವು ಆಮದುಗಳನ್ನು ನಿರ್ಬಂಧಿಸಿ ಸ್ವದೇಶೀ ಕೈಗಾರಿಕೆಗೆ ರಕ್ಷಣೆಯನ್ನು ಒದಗಿಸುತ್ತವೆ. ಆದರೆ ಸುಂಕಗಳು ಸಂಪೂರ್ಣವಾಗಿ ರಕ್ಷಣಾತ್ಮಕವಾಗಿರುವ ಸಂಭವ ಕಡಿಮೆ. ಏಕೆಂದರೆ ಸುಂಕಗಳನ್ನು ಪಾವತಿಸಿದ ನಂತರ ಆ ಸರಕು ದೇಶದೊಳಗೆ ಮುಕ್ತವಾಗಿ ಪ್ರವೇಶಿಸಬಹುದು. ಇದರಿಂದಾಗಿ ಸ್ವದೇಶೀ ಉದ್ಯಮಕ್ಕೆ ಪರಿಣಾಮಕಾರಿಯಾದ ರಕ್ಷಣೆ ದೊರೆಯುವುದಿಲ್ಲ.

3. ದೇಯಾಂಶಗಳ ಪರಿಣಾಮವಾಗಿ ಆಮದುಗಳು ಭೌತಿಕವಾಗಿ ನಿರ್ಬಂಧಿಸಲ್ಪಡುತ್ತವೆ. ಇದು ನಿಶ್ಚಿತ ಪರಿಣಾಮ. ಆದರೆ ಇದು ಬೆಲೆಯ ಮೇಲೆ ಎಷ್ಟು ತೀವ್ರವಾದ ಪರಿಣಾಮ ಉಂಟು ಮಾಡುತ್ತದೆ ಎಂಬುದು ಅನಿಶ್ಚಿತವಾಗಿರುತ್ತದೆ. ಇದಕ್ಕೆ ವಿರುದ್ಧವಾಗಿ, ಸುಂಕದಿಂದ ಬೆಲೆಯ ಮೇಲೆ ಸಂಭವಿಸುವ ಪರಿಣಾಮವು ಸ್ಪಷ್ಟವಾಗಿರುತ್ತದೆ. ಆದರೆ ಆಮದುಗಳ ಭೌತಿಕ ಗಾತ್ರದ ಮೇಲೆ ಅದರ ಪರಿಣಾಮ ಅನಿಶ್ಚಿತವಾಗಿರುತ್ತದೆ. ಆಮದುಗಳ ಗಾತ್ರವನ್ನು ಸಂಪೂರ್ಣವಾಗಿ ನಿರ್ಬಂಧಿಸಲು ಅದಕ್ಕೆ ಸಾಧ್ಯವಾಗಬಹುದು ಅಥವಾ ಸಾಧ್ಯವಾಗದೇ ಇರಬಹುದು.

4. ದೇಯಾಂಶಗಳು ಸರಕಿನ ಪೂರೈಕೆಯ ಮೇಲೆ ಗರಿಷ್ಠ ಮಿತಿಯನ್ನು ವಿಧಿಸುವ ಮೂಲಕ ಮಾರುಕಟ್ಟೆ ಒತ್ತಡಗಳ ಮುಕ್ತ ಕಾರ್ಯಾಚರಣೆಯ ಮೇಲೆ ತಡೆಯೊಡ್ಡುತ್ತವೆ. ಆದರೆ ಸುಂಕಗಳು ಪೂರೈಕೆ ಮತ್ತು ಬೇಡಿಕೆಯ ಮಾರುಕಟ್ಟೆ ಒತ್ತಡಗಳ ಮುಕ್ತ ಕಾರ್ಯಾಚರಣೆಯನ್ನು ನಿರ್ಬಂಧಿಸುವುದಿಲ್ಲ.

5. ದೇಯಾಂಶಗಳನ್ನು ವಿಧಿಸಿದಾಗ ಸರಕಿನ ಸ್ವದೇಶಿ ಬೆಲೆಯು ಸುಂಕಗಳನ್ನು ವಿಧಿಸಿದಾಗ ಏರುವುದಕ್ಕಿಂತ ಅಧಿಕ ದರದಲ್ಲಿ ಏರುತ್ತದೆ. ಏಕೆಂದರೆ ಸುಂಕಗಳನ್ನು ಹೇರಿದಾಗ ಆದರ ಪ್ರಮಾಣದಷ್ಟು ಮಾತ್ರ ಬೆಲೆಯ ಮೇಲೆ ಪರಿಣಾಮವಾಗುತ್ತದೆ. ಆದರೆ ದೇಯಾಂಶಗಳನ್ನು ವಿಧಿಸಿದಾಗ ಸರಕಿನ ಲಭ್ಯತೆಯು ಮಿತಗೊಳ್ಳುವುದರಿಂದ ಮತ್ತು ಅದು ಕೊರತೆಯಲ್ಲಿರುವುದರಿಂದ ಆದರ ಬೆಲೆಯು ವಿಪರೀತವಾಗಿ ಏರುವ ಸಂಭವ ಇದ್ದೇ ಇರುತ್ತದೆ. ಅಲ್ಲದೆ ಸ್ವದೇಶಿ ಮಾರುಕಟ್ಟೆಯಲ್ಲಾಗಲೀ ಅಥವಾ ಜಾಗತಿಕ ಮಾರುಕಟ್ಟೆಯಲ್ಲಾಗಲೀ ಪೂರೈಕೆ ಮತ್ತು ಬೇಡಿಕೆಯಲ್ಲಿನ ಬದಲಾವಣೆಗಳನ್ನು ಬೆಲೆಯ ಮೂಲಕವೇ ಹೊಂದಾಣಿಕೆ ಮಾಡಿಕೊಳ್ಳಬೇಕಾಗಿರುತ್ತದೆ.

6. ದೇಯಾಂಶಗಳು ಒಟ್ಟಾರೆಯಾಗಿ ಆಮದು ಗಾತ್ರವನ್ನು ನಿರ್ಬಂಧಿಸುತ್ತವಾದರೂ ಸಹ ಮೊದಲಿನಿಂದಲೂ ಅಸ್ತಿತ್ವದಲ್ಲಿರುವ ಆಮದುದಾರರು ಆಮದು ಪರವಾನಗಿಗಳನ್ನು ಪಡೆಯಲು ಸಫಲರಾಗಬಹುದು. ಇದರಿಂದಾಗಿ ಅದಕ್ಷವಾದ ಮತ್ತು ಅಸಮರ್ಥವಾದ ಉದ್ಯಮಗಳಿಗೆ ರಕ್ಷಣೆ ದೊರೆತಂತಾಗುತ್ತದೆ. ಆದರೆ ಸುಂಕಗಳು ವಿದೇಶೀ ಸ್ಪರ್ಧೆಯಿಂದ ಸ್ವದೇಶಿ ಮಾರುಕಟ್ಟೆಯನ್ನು ರಕ್ಷಿಸುತ್ತವೆ. ಈ ದೃಷ್ಟಿಯಿಂದ ಗಮನಿಸಿದಾಗ ಸುಂಕಗಳು ದೇಯಾಂಶಗಳಿಗಿಂತ ಉತ್ತಮ ಪರಿಣಾಮಗಳನ್ನು ಹೊಂದಿವೆ.

7. ದೇಯಾಂಶಗಳನ್ನು ವಿಧಿಸಿದಾಗ ಆಮದುದಾರರು ಸರಕಿನ ಬೆಲೆಯನ್ನು ಏರಿಸಲು ಅವಕಾಶ ಲಭಿಸುತ್ತದೆ. ವಿಕಸ್ಯಾಮ್ಯ ಸನ್ನಿವೇಶವನ್ನು ಉಪಯೋಗಿಸಿಕೊಂಡು ಅವರು ಗಣನೀಯ ಮೊತ್ತದ ಲಾಭಗಳನ್ನು ಸಂಪಾದಿಸುವರು. ಇದನ್ನು **'ದೇಯಾಂಶ ಲಾಭಗಳು'** (Quota Profits) ಎಂತಲೇ ಕರೆಯಲಾಗುತ್ತದೆ. ಆದರೆ ಸುಂಕಗಳಿಂದ ಆಮದುದಾರರಿಗೆ ಈ ರೀತಿಯ ಲಾಭಗಳು ದೊರೆಯುವುದಿಲ್ಲ.

8. ದೇಯಾಂಶಗಳು ಸರ್ಕಾರಕ್ಕೆ ಹೆಚ್ಚಿನ ಮೊಬಲಗಿನ ವರಮಾನವನ್ನು ತರಲು ವಿಫಲವಾಗುತ್ತವೆ. ಆದರೆ ಸುಂಕಗಳನ್ನು ವಿಧಿಸಿದಾಗ ಸರ್ಕಾರಕ್ಕೆ ಗಣನೀಯ ಮೊತ್ತದ ವರಮಾನವು ದೊರೆಯುತ್ತದೆ.

ಸುಂಕಗಳ ಮತ್ತು ದೇಯಾಂಶಗಳ ನಡುವಿನ ವ್ಯತ್ಯಾಸಗಳನ್ನು ಕೆಳಗಿನಂತೆ ಪಟ್ಟಿ ಮಾಡಬಹುದು.

ಸುಂಕಗಳು	ದೇಯಾಂಶಗಳು
1. ಮೃದುವಾದ ಮತ್ತು ನಮ್ಯವಾದ ವಿಧಾನ	1. ಆಚರಣೆಯಲ್ಲಿ ಬಹಳ ನಿಷ್ಕುರ
2. ಸಂಪೂರ್ಣ ರಕ್ಷಣಾತ್ಮಕವಾಗಿರುವುದಿಲ್ಲ	2. ಸಂಪೂರ್ಣ ರಕ್ಷಣಾತ್ಮಕ
3. ಆಮದುಗಳ ಸಂಪೂರ್ಣ ನಿರ್ಬಂಧದ ಅನಿಶ್ಚಿತತೆ	3. ಆಮದುಗಳ ಸಂಪೂರ್ಣ ನಿರ್ಬಂಧ ನಿಶ್ಚಿತ
4. ಮಾರುಕಟ್ಟೆ ಒತ್ತಡಗಳ ಮುಕ್ತ ಕಾರ್ಯಾಚರಣೆಯ ನಿರ್ಬಂಧ. ವಿರುವುದಿಲ್ಲ	4. ಮಾರುಕಟ್ಟೆ ಒತ್ತಡಗಳ ಮುಕ್ತ ಕಾರ್ಯಾಚರಣೆಯ ಮೇಲೆ ನಿರ್ಬಂಧ
5. ಸ್ವಲ್ಪ ಬೆಲೆ ಏರಿಕೆ	5. ಸ್ವದೇಶೀ ಬೆಲೆಯ ಅಧಿಕ ದರದ ಏರಿಕೆ
6. ವಿದೇಶೀ ಸ್ಪರ್ಧೆಯಿಂದ ಸ್ವದೇಶೀ ಮಾರುಕಟ್ಟೆಯ ರಕ್ಷಣೆ	6. ಅದಕ್ಷ ಮತ್ತು ಅಸಮರ್ಥ ಉದ್ಯಮಗಳಿಗೆ ಪ್ರೋತ್ಸಾಹ ನೀಡುವ ಮೂಲಕ ಸ್ವದೇಶೀ ಮಾರುಕಟ್ಟೆಗೆ ರಕ್ಷಣೆಯ ಕೊರತೆ
7. ಆಮದುದಾರರಿಗೆ ಲಾಭದ ಅಂಶವಿರುವುದಿಲ್ಲ	7. ಆಮದುದಾರರಿಗೆ ಗಣನೀಯ ಮೊತ್ತದ ಲಾಭ ಸಂಪಾದನೆಗೆ ಅವಕಾಶ
8. ಸರ್ಕಾರಕ್ಕೆ ಗಣನೀಯ ಮೊತ್ತದ ವರಮಾನ ಗಳಿಕೆ	8. ಸರ್ಕಾರಕ್ಕೆ ಹೆಚ್ಚಿನ ಪ್ರಮಾಣದ ವರಮಾನ ತರಲು ವಿಫಲ

F. ಸುರಿ ಮಾರಾಟ

(Dumping)

ಸ್ವದೇಶಿ ಉತ್ಪಾದಕನೊಬ್ಬನು ವಿದೇಶಿ ಮಾರುಕಟ್ಟೆಯಲ್ಲಿ ಸರಕುಗಳನ್ನು ಅಗ್ಗದ ಬೆಲೆಯಲ್ಲಿ ರಾಶಿರಾಶಿಯಾಗಿ ಮಾರಾಟ ಮಾಡುವ ಕ್ರಮಕ್ಕೆ **'ಸುರಿ ಮಾರಾಟ'** ಎಂದು ಹೆಸರು. ಅಂದರೆ, ಸ್ವದೇಶಿ ಮಾರುಕಟ್ಟೆಯಲ್ಲಿ ಮತ್ತು ವಿದೇಶಿ ಮಾರುಕಟ್ಟೆಯಲ್ಲಿ ಬೇರೆ ಬೇರೆ ಬೆಲೆಗಳಲ್ಲಿ ಸರಕುಗಳನ್ನು ಮಾರಾಟ ಮಾಡುವ ವಿಧಾನವನ್ನು **'ಸುರಿ ಮಾರಾಟ'** ಅಥವಾ **'ಡಂಪ್ ಮಾಡುವಿಕೆ'** ಎಂದು ಕರೆಯಲಾಗುತ್ತದೆ. ಅಂದರೆ ಇದು ಬೆಲೆಯ ತಾರತಮ್ಯದ ಒಂದು ರೂಪ. ಸಾಮಾನ್ಯ ಅರ್ಥದಲ್ಲಿ ಡಂಪಿಂಗ್ ಅಥವಾ **'ಸುರಿ ಮಾರಾಟ'** ಎಂದರೆ ಹೊರ ದೇಶದ ವ್ಯಾಪಾರವನ್ನು ಸೆಳೆಯುವುದಕ್ಕಾಗಿ ಬೆಲೆ ಕಡಿಮೆ ಮಾಡಿ ಅಲ್ಲಿಗೆ ಸಾಗಿಸುವುದು ಎಂದು ಹೇಳಬಹುದು. ಈ ವಿಧಾನದಲ್ಲಿ ಸ್ವದೇಶಿ ಮಾರುಕಟ್ಟೆಯಲ್ಲಿ ವಿಕಸ್ಯಾಮ್ಯವನ್ನು ಹೊಂದಿರುವ ಒಬ್ಬ ಉತ್ಪಾದಕನ ಸರಕನ್ನು ಸ್ವದೇಶೀ ಖರೀದಿದಾರರಿಗೆ ಹೆಚ್ಚಿನ ಬೆಲೆಯಲ್ಲಿಯೂ ಮತ್ತು ವಿದೇಶಿ ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಯಲ್ಲಿಯೂ ಮಾರಾಟ ಮಾಡುತ್ತಾನೆ.

ಒಟ್ಟಾರೆಯಾಗಿ ಹೇಳಬೇಕೆಂದರೆ, ಯಾವುದೊಂದು ಸರಕನ್ನು ಸ್ವದೇಶಿ ಮಾರುಕಟ್ಟೆಯಲ್ಲಿ ಮಾರುವ ಬೆಲೆಗಿಂತ ಕಡಿಮೆ ಬೆಲೆಯಲ್ಲಿ ವಿದೇಶೀ ಮಾರುಕಟ್ಟೆಯಲ್ಲಿ ಸಮರ್ಥವಾಗಿ ಮಾರುವ ವ್ಯಾಪಾರವೇ ಡಂಪಿಂಗ್ ಅಥವಾ ಸುರಿ ಮಾರಾಟ. ಡಂಪ್ ಮಾಡುವಿಕೆಯ ಹಿಂದಿನ ಉದ್ದೇಶವೇನೆಂದರೆ ಸರಕುಗಳನ್ನು ಅಗ್ಗದ ಬೆಲೆಯಲ್ಲಿ ಮಾರಾಟ ಮಾಡುವ ಮೂಲಕ ಉತ್ಪಾದಕನು ವಿದೇಶಿ ಮಾರುಕಟ್ಟೆಯಲ್ಲಿ ಪೈಪೋಟಿ ನಡೆಸಲು ಮತ್ತು ಮಾರುಕಟ್ಟೆಯ ಮೇಲೆ ಅವನು ತನ್ನ ಹಿಡಿತವನ್ನು ಸಾಧಿಸಲು ಸಾಧ್ಯತೆ ಲಭಿಸುತ್ತದೆ.

ಡಂಪ್ ಮಾಡುವಿಕೆಯ ವಿಧಾನದಲ್ಲಿ ಕೆಲವೊಮ್ಮೆ ಉತ್ಪಾದನ ವೆಚ್ಚಕ್ಕಿಂತಲೂ ಕಡಿಮೆ ಬೆಲೆಯನ್ನು ವಿಧಿಸಿ ಸರಕನ್ನು ವಿದೇಶೀ ಮಾರುಕಟ್ಟೆಯಲ್ಲಿ ಮಾರಾಟ ಮಾಡಲಾಗುತ್ತದೆ. ಹೀಗೆ ಸಂಭವಿಸುವ ನಷ್ಟವನ್ನು ಸ್ವದೇಶಿ ವಿರೋದಿದಾರರಿಗೆ ಹೆಚ್ಚಿನ ಬೆಲೆಯನ್ನು ವಿಧಿಸುವ ಮೂಲಕ ತುಂಬಿಕೊಳ್ಳಲಾಗುತ್ತದೆ. ಈ ಮೂಲಕ ರಫ್ತು ವೃದ್ಧಿಯನ್ನು ಸಾಧಿಸಲಾಗುತ್ತದೆ. ಹೇರಳ ರಫ್ತುಗಳಿಂದ ದೊರೆತ ಅಗಾಧ ಮೊತ್ತದ ಹಣವನ್ನು ಬಳಸಿಕೊಂಡು ಸ್ವದೇಶಿ ಉದ್ಯಮಗಳನ್ನು ವಿಸ್ತರಿಸಲು ಅವಕಾಶವೂ ದೊರೆಯುತ್ತದೆ.

ಕೆಲವೊಮ್ಮೆ ಕೆಲವು ಸರಕುಗಳು ಸ್ವದೇಶಿ ಮಾರುಕಟ್ಟೆಯಲ್ಲಿ ಮಾರಾಟಗೊಳ್ಳದ ಬಹಳ ಕಾಲ ಉಳಿಯುತ್ತವೆ. ಇವುಗಳನ್ನು ಹಾಗೆಯೇ ಇಟ್ಟುಕೊಂಡು ನಷ್ಟವನ್ನನುಭವಿಸುವುದಕ್ಕಿಂತ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡುವಿಕೆಯು ಒಳ್ಳೆಯ ಉಪಾಯವಾಗಿರುತ್ತದೆ. ಸುರಿ ಮಾರಾಟವು ಇಂತಹ ಒಂದು ಪ್ರಯತ್ನವಾಗಿರುತ್ತದೆ. ವಿದೇಶಿ ಮಾರುಕಟ್ಟೆಯ ಮೇಲೆ ನಿಯಂತ್ರಣ ಸಾಧಿಸುವುದಕ್ಕೂ ಸಹ ಈ ಕ್ರಮವು ನೆರವಾಗುತ್ತದೆ.

ಆವಶ್ಯಕ ಸನ್ನಿವೇಶಗಳು
(Necessary Conditions)

ಸುರಿ ಮಾರಾಟವು ಬೆಲೆಯ ತಾರತಮ್ಯದ ಒಂದು ರೂಪ. ಈ ವಿಧದ ವ್ಯಾಪಾರವನ್ನು ಯಶಸ್ವಿಯುತವಾಗಿ ನೆರವೇರಿಸಲು ಕೆಲವು ಸನ್ನಿವೇಶಗಳು ಆವಶ್ಯಕವಾಗಿದೆ. ಅವು ಕೆಳಗಿನಂತಿವೆ.

1. ಸ್ವದೇಶಿ ಮಾರುಕಟ್ಟೆಯಲ್ಲಿ ಏಕಸ್ವಾಮ್ಯ (Monopoly in the Domestic Market): ಉತ್ಪಾದಕನು ಕನಿಷ್ಠಪಕ್ಷ ಸ್ವದೇಶಿ ಮಾರುಕಟ್ಟೆಯಲ್ಲಿ ಏಕಸ್ವಾಮ್ಯವನ್ನು ಹೊಂದಿರಬೇಕು.

2. ಪ್ರತ್ಯೇಕವಾದ ಮಾರುಕಟ್ಟೆಗಳು (Separate Markets): ಸ್ಪಷ್ಟವಾಗಿ ಪ್ರತ್ಯೇಕವಾದ ಮಾರುಕಟ್ಟೆಗಳು ಅಸ್ತಿತ್ವದಲ್ಲಿರಬೇಕು. ಅಂದರೆ ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಸ್ವದೇಶಿ ಮಾರುಕಟ್ಟೆ ಮತ್ತು ವಿದೇಶೀ ಮಾರುಕಟ್ಟೆ, ಬೇರೆಬೇರೆಯಾಗಿರಬೇಕು. ಆಗ ಮಾತ್ರ ಒಂದು ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಯನ್ನು ಮತ್ತು ಇನ್ನೊಂದು ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆಯನ್ನು ವಿಧಿಸಲು ಸಾಧ್ಯವಾಗುತ್ತದೆ.

3. ಮಾರುಕಟ್ಟೆಗಳನ್ನು ದೂರದಲ್ಲಿ ಇಡುವಿಕೆ (Keeping the Markets Far and Away): ಕಡಿಮೆ ಬೆಲೆ ಇರುವ ಮಾರುಕಟ್ಟೆಯಲ್ಲಿ ಸರಕನ್ನು ವಿರೀದಿಸಿ ಹೆಚ್ಚು ಬೆಲೆ ಇರುವ ಮಾರುಕಟ್ಟೆಯಲ್ಲಿ ಅದನ್ನು ಮಾರುವಂತಿರಬಾರದು. ಮಾರುಕಟ್ಟೆಗಳನ್ನು ಪ್ರತ್ಯೇಕವಾಗಿ ದೂರದಲ್ಲಿ ಇಡಬಹುದಾದರೆ ಮಾತ್ರ ಡಂಪ್ ಮಾಡುವಿಕೆಯು ಸಾಧ್ಯವಾಗುತ್ತದೆ.

4. ವಿಭಿನ್ನ ಬೇಡಿಕೆ ಸ್ಥಿತಿಸ್ಥಾಪಕತ್ವಗಳು (Different Elasticities of Demand): ಎರಡು ಮಾರುಕಟ್ಟೆಗಳೂ ವಿಭಿನ್ನವಾದ ಬೇಡಿಕೆಯ ಸ್ಥಿತಿಸ್ಥಾಪಕತ್ವಗಳನ್ನು ಪಡೆದಿದ್ದರೆ ಸರಿ ಮಾರಾಟವು ಫಲಪ್ರದವಾಗುತ್ತದೆ. ಆಗ ಕಡಿಮೆ ಸ್ಥಿತಿಸ್ಥಾಪಕತ್ವದ ಬೇಡಿಕೆ ಇರುವ ಮಾರುಕಟ್ಟೆಯಲ್ಲಿ ಅಧಿಕ ಬೆಲೆಯನ್ನು ಮತ್ತು ಹೆಚ್ಚು ಸ್ಥಿತಿಸ್ಥಾಪಕತ್ವದ ಬೇಡಿಕೆ ಇರುವ ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಯನ್ನು ನಿಗದಿ ಮಾಡಿ ಸರಕನ್ನು ಮಾರಾಟ ಮಾಡಬಹುದು.

ಸುರಿ ಮಾರಾಟ ವಿರೋಧಿ ಕ್ರಮಗಳು
(Anti-dumping Measures)

ಒಂದು ದೇಶವು ಇನ್ನೊಂದು ದೇಶದಲ್ಲಿ ಸುರಿ ಮಾರಾಟವನ್ನು ನಡೆಸಿದರೆ, ಯಾವ ದೇಶದಲ್ಲಿ ಸುರಿ ಮಾರಾಟವನ್ನು ನಡೆಸಲಾಗುತ್ತಿರುತ್ತದೆಯೋ ಆ ದೇಶಕ್ಕೆ ಬಹಳ ಅನಾನುಕೂಲತೆಗಳಾಗುವ ಸಾಧ್ಯತೆ ಇರುತ್ತದೆ. ಆ ದೇಶದ ಸರಕುಗಳು ಮಾರಾಟವಾಗದೆ ಉಳಿಯಬಹುದು, ಉತ್ಪಾದನೆ ಕುಸಿಯುವುದರಿಂದಾಗಿ ನಿರುದ್ಯೋಗದ ಪ್ರಮಾಣ ಹೆಚ್ಚಬಹುದು, ಉತ್ಪಾದನೆಗಾಗಿ ಸಂಪನ್ಮೂಲಗಳ ಪೂರ್ಣ ಬಳಕೆಗೆ ವ್ಯಾಪ್ತಿ ಸಿಗದಿರಬಹುದು, ಅನುಭೋಗಿಗಳು ವಿದೇಶಿ ವಸ್ತುಗಳಿಗಾಗಿಯೇ ಹಾತೊರೆಯಬಹುದು, ಇತ್ಯಾದಿ. ತದ್ವಿರುದ್ಧವಾಗಿ, ಸುರಿ ಮಾರಾಟವನ್ನು ನಡೆಸುವ ದೇಶದ ಸರಕುಗಳು ಸುಲಭವಾಗಿ ಮಾರಾಟಗೊಂಡು ಅದು ಲಾಭವನ್ನು ಸಂಪಾದಿಸುವ ಮತ್ತು ಮಾರಾಟವಾಗದೆ ಉಳಿದಿದ್ದ ಎಲ್ಲಾ ಸರಕುಗಳನ್ನು ವಿಕ್ರಯಿಸುವ ಅನುಕೂಲತೆಯನ್ನು ಪಡೆಯುತ್ತದೆ.

ಆದ್ದರಿಂದ ಸುರಿ ಮಾರಾಟಕ್ಕೆ ಒಳಗಾಗುವ ದೇಶವು ತನ್ನ ಅರ್ಥವ್ಯವಸ್ಥೆಯನ್ನು ಹಾಗೂ ಅನುಭೋಗ ವ್ಯವಸ್ಥೆಯನ್ನು ರಕ್ಷಿಸುವ ಉದ್ದೇಶದಿಂದ ಕೆಲವು ನಿರ್ದಿಷ್ಟ ಕ್ರಮಗಳನ್ನು ಜಾರಿಗೊಳಿಸಬಹುದು. ಇವುಗಳನ್ನು ಸುರಿ ಮಾರಾಟ ವಿರೋಧಿ ಕ್ರಮಗಳು ಎಂದು ಪರಿಗಣಿಸಲಾಗುತ್ತದೆ.

1. ಆಮದು ಸುಂಕಗಳ ಏರಿಕೆ (Rise in Import Duties): ಆಮದು ಸರಕುಗಳ ಮೇಲೆ, ಅದರಲ್ಲಿಯೂ ನಿರ್ದಿಷ್ಟವಾಗಿ ಸುರಿ ಮಾರಾಟಗೊಳ್ಳುತ್ತಿರುವ ಸರಕುಗಳ ಮೇಲೆ ಸುಂಕಗಳನ್ನು ಹೆಚ್ಚಿಸಿದಾಗ ಆ ಸರಕುಗಳ ಬೆಲೆ ಜಾಸ್ತಿಯಾಗುತ್ತದೆ ಮತ್ತು ಸರಕುಗಳು ಸ್ವಲ್ಪ ದುಬಾರಿಯಾಗಿ ಪರಿವರ್ತನೆಗೊಳ್ಳುತ್ತವೆ. ಪರಿಣಾಮವಾಗಿ, ಅವುಗಳ ಖರೀದಿ ಹಾಗೂ ಸುರಿ ಮಾರಾಟಗೊಳ್ಳುವಿಕೆಯ ಆವಶ್ಯಕತೆ ಕಡಿಮೆಯಾಗುತ್ತದೆ.

2. ಆಮದು ದೇಯಾಂಶಗಳು (Import Duties): ಆಮದು ದೇಯಾಂಶಗಳನ್ನು ವಿಧಿಸುವ ಮುಖಾಂತರ, ಅಂದರೆ ಇಷ್ಟೇ ಪರಿಮಾಣದ ಸರಕುಗಳನ್ನು ಆಮದು ಮಾಡಿಕೊಳ್ಳಬೇಕೆಂದು ನಿಗದಿಗೊಳಿಸುವ ಮೂಲಕ ಸುರಿ ಮಾರಾಟವನ್ನು ನಿಯಂತ್ರಿಸಲು ಸಾಧ್ಯವಿರುತ್ತದೆ. ಏಕೆಂದರೆ ದೇಯಾಂಶದಲ್ಲಿ ನಿರ್ದಿಷ್ಟಪಡಿಸಲಾಗಿರುವ ಪರಿಮಾಣವನ್ನು ಮೀರಿ ಸರಕುಗಳ ಆಮದಿಗೆ ಅವಕಾಶ ಕೊಡಲಾಗುವುದಿಲ್ಲ.

3. ವಿನಿಮಯ ನಿರ್ಬಂಧಗಳು (Exchange Restrictions): ಸುರಿ ಮಾರಾಟ ದಲ್ಲಿಯಾವರೂ ಸಹ ಸರಕುಗಳ ಆಮದಿಗೆ ವಿದೇಶಿ ವಿನಿಮಯದ ಆವಶ್ಯಕತೆ ಇರುತ್ತದೆ. ಸುರಿ ಮಾರಾಟಕ್ಕೆ ಒಳಗಾಗುವ ದೇಶದ ಸರ್ಕಾರವು ವಿನಿಮಯ ನಿರ್ಬಂಧವನ್ನು ವಿಧಿಸುವ ಮೂಲಕ, ಅಂದರೆ ವಿದೇಶಿ ವಿನಿಮಯವು ತಕ್ಕಷ್ಟು ಪ್ರಮಾಣದಲ್ಲಿ ದೊರೆಯದಂತ ಮಾಡುವ ಮುಖಾಂತರ, ಸುರಿ ಮಾರಾಟವನ್ನು ನಿಯಂತ್ರಣಕ್ಕೆ ಒಳಪಡಿಸಲು ಸಾಧ್ಯತ ಇರುತ್ತದೆ.

4. ಇತರೆ ವಿಧಾನಗಳು (Other Methods):

i) ಬಹುಮುಖಿ ವಿನಿಮಯ ದರಗಳ ಪ್ರಯೋಗ.

ii) ಆರೋಗ್ಯ ಮತ್ತು ಯೋಗಕ್ಷೇಮ ಕಾಪಾಡುವ ನೆಪದಲ್ಲಿ ಕೆಲವು ನಿರ್ದಿಷ್ಟ ಸರಕುಗಳ ಆಮದುಗಳನ್ನು ಪ್ರತಿಬಂಧಿಸುವಿಕೆ.

iii) ಆಮದುಗಳ ಮೇಲೆ ಉಪಕರಗಳನ್ನು (Surcharge) ವಿಧಿಸುವಿಕೆ, ಮತ್ತು

iv) ಆಮದು ಮಾಡಿಕೊಂಡ ಪ್ರತಿ ವಸ್ತುವಿಗೂ ಅಷ್ಟೇ ಪ್ರಮಾಣದ ಸ್ವದೇಶೀ ವಸ್ತುಗಳನ್ನು ಖರೀದಿಸಬೇಕೆಂದು ಆಯಾತದಾರರ ಮೇಲೆ ಷರತ್ತುಗಳನ್ನು ಹೇರುವಿಕೆ.

G. ಆರ್ಥಿಕ ಸಂಯೋಜನೆ : ಅರ್ಥ ಮತ್ತು ಹಂತಗಳು
(Economic Integration : Meaning and Stages)

ಪೀಠಿಕೆ

ಜಗತ್ತಿನ ವಿವಿಧ ರಾಷ್ಟ್ರಗಳ ನಡುವೆ ಆರ್ಥಿಕ ಸಹಕಾರ ಮತ್ತು ಸಂಯೋಜನೆಯು ಎರಡನೆಯ ಮಹಾಯುದ್ಧೋತ್ತರ ಅವಧಿಯ ಒಂದು ಪ್ರಮುಖ ಬೆಳವಣಿಗೆಯಾಗಿದೆ. ಅಂತರರಾಷ್ಟ್ರೀಯ ಆರ್ಥಿಕ ರಂಗದಲ್ಲಿ ಸಹಕಾರ, ಸಮನ್ವಯ ಮತ್ತು ಸಹಬಾಳ್ವೆ ಪರಸ್ಪರ ಹಲವಾರು ಪ್ರಯೋಜನಗಳನ್ನು ದೊರಕಿಸಿಕೊಡುತ್ತವೆಂದು ರಾಷ್ಟ್ರಗಳು ಮನಗಂಡಿವೆ. ಈ ದಿಸೆಯಲ್ಲಿ ವಿವಿಧ ದೇಶಗಳ ನಡುವೆ ನಿರ್ಬಂಧರಹಿತ ಅಂತರರಾಷ್ಟ್ರೀಯ ಆರ್ಥಿಕ ಸಂಬಂಧಗಳ ಅಭಿವೃದ್ಧಿಯು ಮೂಲಭೂತ ಅಗತ್ಯತೆಯಾಗಿದೆ. ವಿಭಿನ್ನ ದೇಶಗಳ ನಡುವೆ ವ್ಯಾಪಾರ ಸುಂಕಗಳಂತಹ ಕೃತಕ ವ್ಯಾಪಾರ ನಿರ್ಬಂಧಗಳಿಲ್ಲದಿರುವಂತಹ ಒಂದು ವ್ಯವಸ್ಥೆಯನ್ನು "ಆರ್ಥಿಕ ಸಂಯೋಜನೆ" ಎಂದು ಕರೆಯಲಾಗುತ್ತದೆ. ಕೆಲವು ದೇಶಗಳು ತಮ್ಮತಮ್ಮೊಳಗೆ ದೇಯಾಂಶ (Quota), ಸುಂಕ ಮೊದಲಾದವುಗಳನ್ನು ವಿಧಿಸದೆ ಮುಕ್ತ ವ್ಯಾಪಾರದಲ್ಲಿ ತೊಡಗಿದಾಗ ವ್ಯಾಪಾರದ ಪೂರ್ಣ ಪ್ರಯೋಜನಗಳನ್ನು ದಕ್ಕಿಸಿಕೊಳ್ಳಬಹುದೆಂಬುದು ಅಂತರರಾಷ್ಟ್ರೀಯ ಆರ್ಥಿಕ ಸಂಯೋಜನೆಯ ಹಿಂದಿನ ಧ್ಯೇಯ ವಾಗಿರುತ್ತದೆ. ಆ ಮೇರೆಗೆ, ಆರ್ಥಿಕ ಸಂಯೋಜನೆಯು ಎರಡು ಅಥವಾ ಅದಕ್ಕಿಂತ ಹೆಚ್ಚಿನ

ಸಂಖ್ಯೆಯ ರಾಷ್ಟ್ರಗಳು ತಮ್ಮ ಆರ್ಥವ್ಯವಸ್ಥೆಗಳ ನಡುವೆ ನಿಕಟಸಂಬಂಧವನ್ನೇರ್ಪಡಿಸಿ ಕೊಳ್ಳುವ ಒಂದು ವಿಧಾನವಾಗಿದೆ.

ಪ್ರಪಂಚದ ಅನೇಕ ದೇಶಗಳು ಬಹಳ ಸಣ್ಣದಾದ ಆಂತರಿಕ ಭೌಗೋಳಿಕ ಮಾರುಕಟ್ಟೆಯನ್ನು ಹೊಂದಿವೆ. ಇದರಿಂದಾಗಿ ಅವು ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳಲು ಅಸಮರ್ಥವಾಗಿವೆ. ದೇಶದಲ್ಲಿರುವ ಉತ್ಪಾದನ ಸಾಮರ್ಥ್ಯವನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕಾದರೆ ಸರಕುಗಳಿಗೆ ಮಾರುಕಟ್ಟೆಯು ವಿಸ್ತರಿಸಬೇಕು, ರಫ್ತುಗಳ ಹೆಚ್ಚಳಕ್ಕೆ ಅವಕಾಶವಾಗಬೇಕು ಮತ್ತು ಜನರ ಬಳಿ ಕೊಳ್ಳುವ ಶಕ್ತಿ ಹೆಚ್ಚಬೇಕು. ಈ ಕಾರಣದಿಂದಾಗಿ ಹಲವು ದೇಶಗಳು ಪ್ರಾದೇಶಿಕ ಗುಂಪುಗಳನ್ನು ರಚಿಸಿಕೊಳ್ಳಲು ಪ್ರಯತ್ನಿಸಿದವು. ವಿಶಾಲ ಅರ್ಥದಲ್ಲಿ ಆರ್ಥಿಕ ಸಂಯೋಜನೆ ಎಂದರೆ ಬಹು ದೂರದ ಅನೇಕ ಅರ್ಥವ್ಯವಸ್ಥೆಗಳನ್ನು ಒಂದು ದೊಡ್ಡ ಆರ್ಥಿಕತೆಯಾಗಿ ಐಕ್ಯಗೊಳಿಸುವುದು ಎಂದರ್ಥ.

ವಿವಿಧ ದೇಶಗಳು ವ್ಯಾಪಾರದಲ್ಲಿ ಸುಂಕಗಳು ಮತ್ತಿತರ ವಿಧಗಳ ನಿರ್ಬಂಧಗಳನ್ನು ಭೇದವೆಣಿಸದ ರೀತಿಯಲ್ಲಿ ಪ್ರಯೋಗಿಸುತ್ತವೆ. ಇದರಿಂದಾಗಿ ವ್ಯಾಪಾರಕ್ಕೆ ತಡೆಯುಂಟಾಗುತ್ತದೆ. ಈ ನಿರ್ಬಂಧಗಳನ್ನು ತೆಗೆದುಹಾಕಿ ಸಂಬಂಧಿಸಿದ ದೇಶಗಳು ತಮ್ಮ ತಮ್ಮೊಳಗೆ ವ್ಯಾಪಾರವನ್ನು ಹೆಚ್ಚಿಸಿಕೊಳ್ಳುವುದು ಆರ್ಥಿಕ ಸಂಯೋಜನೆಯ ಉದ್ದೇಶವಾಗಿರುತ್ತದೆ. ಡೊಮಿನಿಕ್ ಸಾಲ್ವಟೋರ್‌ರವರ ಅಭಿಪ್ರಾಯದಲ್ಲಿ "ಆರ್ಥಿಕ ಸಂಯೋಜನೆಯ ಸಿದ್ಧಾಂತ ಎಂದರೆ ಒಟ್ಟಿಗೆ ಸೇರುವ ರಾಷ್ಟ್ರಗಳ ನಡುವೆ ಮಾತ್ರ ಭೇದವೆಣಿಸುವ ರೀತಿಯಲ್ಲಿ ವ್ಯಾಪಾರ ಪ್ರತಿಬಂಧಕಗಳನ್ನು ಕಡಿಮೆ ಮಾಡುವ ಅಥವಾ ನಿರ್ಮೂಲನ ಮಾಡುವ ವಾಣಿಜ್ಯ ನೀತಿಯಾಗಿರುತ್ತದೆ." ಆ ಪ್ರಕಾರ, ಆರ್ಥಿಕ ಸಂಯೋಜನೆಯು ಎರಡು ಅಥವಾ ಅದಕ್ಕಿಂತ ಹೆಚ್ಚಿನ ಸಂಖ್ಯೆಯ ದೇಶಗಳು ತಮ್ಮ ನಡುವಿನ ವ್ಯಾಪಾರ ನಿರ್ಬಂಧಗಳನ್ನು ನಿವಾರಿಸಿಕೊಳ್ಳುವ ಮೂಲಕ ಒಂದು ದೊಡ್ಡ ಆರ್ಥಿಕ ಪ್ರದೇಶವಾಗಿ ರೂಪುಗೊಳ್ಳುವ, ಹಾಗೂ ಈ ಗುಂಪಿನ ಹೊರಗಡೆಯ ದೇಶಗಳಿಗೆ ಅನ್ವಯಿಸುವಂತೆ ಒಂದು ಸರ್ವಸಮವಾದ ಸುಂಕದ ಮತ್ತು ವ್ಯಾಪಾರ ನೀತಿಯನ್ನು ಅನುಸರಿಸುವ ಪ್ರಕ್ರಿಯೆಯಾಗಿರುತ್ತದೆ.

ಆ ಪ್ರಕಾರ, ಅಂತರರಾಷ್ಟ್ರೀಯ ಆರ್ಥಿಕ ಸಂಯೋಜನೆಯು ವಿವಿಧ ರಾಷ್ಟ್ರಗಳ ನಡುವೆ ಆರ್ಥಿಕ ಸಹಕಾರ, ಸಮನ್ವಯ ಮತ್ತು ಸಹಬಾಳ್ವೆಯನ್ನು ರೂಢಿಸುವ ಒಂದು ಕ್ರಮವಾಗಿದೆ. ಆರ್ಥಿಕ ಸಂಯೋಜನೆಯ ಮೂಲಕ ವಿಭಿನ್ನ ರಾಷ್ಟ್ರಗಳು ನಿಕಟಸಂಬಂಧಗಳನ್ನು ಬೆಳೆಸಿ ಕೊಂಡು ವ್ಯಾಪಾರದ ಪೂರ್ಣ ಪ್ರಯೋಜನಗಳನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ.

ಬೇಲಾ ಬಲಸ್ಸಾನ ಅಭಿಪ್ರಾಯದಲ್ಲಿ "ಆರ್ಥಿಕ ಸಂಯೋಜನೆಯು ಒಂದು ಪ್ರಕ್ರಿಯೆ (Process) ಮತ್ತು ಒಂದು ವ್ಯವಹಾರಗಳ ಸ್ಥಿತಿ (State of affairs)ಯಾಗಿದೆ. ಒಂದು ಪ್ರಕ್ರಿಯೆಯಾಗಿ ಪರಿಗಣಿಸಿದಾಗ ಅದು ವಿಭಿನ್ನ ರಾಷ್ಟ್ರಗಳಿಗೆ ಸೇರಿದ ಆರ್ಥಿಕ ಘಟಕಗಳ

ನಡುವೆ ಭೇದಗಳನ್ನು ನಿರ್ಮೂಲ ಮಾಡಲು ಅಳವಡಿಸಿಕೊಂಡ ಕ್ರಮಗಳನ್ನು ಒಳಗೊಳ್ಳುತ್ತದೆ. ವ್ಯವಹಾರಗಳ ಸ್ಥಿತಿಯಾಗಿ ದೃಷ್ಟಿಸಿದಾಗ, ರಾಷ್ಟ್ರೀಯ ಅರ್ಥವ್ಯವಸ್ಥೆಗಳ ನಡುವೆ ವಿವಿಧ ರೀತಿಗಳ ಭೇದವಿಲ್ಲದಿರುವಿಕೆಯನ್ನು ಅದು ಪ್ರತಿನಿಧಿಸುತ್ತದೆ."[2]

ಬಲಸ್ಸಾ ತನ್ನ ವ್ಯಾಖ್ಯೆಯನ್ನು ವಿವರಿಸುತ್ತಾ ಆರ್ಥಿಕ ಸಹಕಾರ ಮತ್ತು ಸಂಯೋಜನೆಯ ನಡುವೆ ವ್ಯತ್ಯಾಸವನ್ನು ಗುರುತಿಸುತ್ತಾನೆ. ಸಹಕಾರವು ವಿವಿಧ ರಾಷ್ಟ್ರಗಳ ನಡುವೆ ಭೇದಗಳನ್ನು ಕಡಿಮೆ ಮಾಡುವ ಗುರಿಯನ್ನುಳ್ಳ ಕ್ರಮಗಳನ್ನು ಒಳಗೊಳ್ಳುತ್ತದೆ. ಆದರೆ ಆರ್ಥಿಕ ಸಂಯೋಜನೆಯ ವಿಧಾನವು ಕೆಲವು ವಿಧಗಳ ಭೇದವನ್ನು ದಮನ ಮಾಡುವಂತಹ ಕ್ರಮಗಳನ್ನು ಉಳ್ಳದ್ದಾಗಿರುತ್ತದೆ. ಉದಾಹರಣೆಗೆ, ವ್ಯಾಪಾರ ನೀತಿಗಳ ಮೇಲಿನ ಅಂತರರಾಷ್ಟ್ರೀಯ ಒಪ್ಪಂದಗಳು ಆರ್ಥಿಕ ಸಹಕಾರದ ಗುಂಪಿಗೆ ಸೇರುತ್ತವೆ. ಆದರೆ ವ್ಯಾಪಾರ ನಿರ್ಬಂಧಗಳ ನಿರ್ಮೂಲನವು ಆರ್ಥಿಕ ಸಂಯೋಜನೆಯ ಕ್ರಮವಾಗುತ್ತದೆ. ಆ ಪ್ರಕಾರ, ಕೆಲವು ನಿರ್ದಿಷ್ಟ ದೇಶಗಳ ನಡುವೆ ಆರ್ಥಿಕ ಸಂಬಂಧದಲ್ಲಿ ಭೇದವನ್ನು ನಿವಾರಿಸುವುದೇ ಆರ್ಥಿಕ ಸಹಕಾರದ ಲಕ್ಷಣವಾಗಿದೆ.

ಪ್ರಾದೇಶಿಕ ಆರ್ಥಿಕ ಸಹಕಾರದ ಕಲ್ಪನೆಯು ಚಿಗುರೊಡೆಯಲು ಸ್ಪಷ್ಟವಾದ ಅನೇಕ ಕಾರಣಗಳಿವೆ. ಇಪ್ಪತ್ತನೆಯ ಶತಮಾನದ ಪ್ರಥಮಾರ್ಧದಲ್ಲಿ ಘಟಿಸಿದ ಎರಡು ಜಾಗತಿಕ ಯುದ್ಧಗಳು ತೀವ್ರ ಅನಾಹುತಕಾರಿಯಾಗಿದ್ದವು. ರಾಷ್ಟ್ರಗಳ ನಡುವೆ ನಿಕಟ ಆರ್ಥಿಕ ಸಹಕಾರ ಮತ್ತು ಪರಸ್ಪರ ಅವಲಂಬನೆ ಆತ್ಯಾವಶ್ಯಕ ಎಂಬ ಪಾಠವನ್ನು ಈ ಯುದ್ಧಗಳ ಭೀಕರ ಪರಿಣಾಮಗಳು ಮನದಟ್ಟು ಮಾಡಿಕೊಟ್ಟವು. ಸಂಘಟಿತ ಯುರೋಪಿನ ಸ್ಥಾಪನೆಯ ಬಗೆಗೆ ಪಶ್ಚಿಮ ಯುರೋಪಿನ ಕೆಲವು ಧುರೀಣರು ಚಿಂತಿಸತೊಡಗಿದರು.

ಸಮತಾವಾದಿ ರಷ್ಯಾ ದೇಶವು ಪ್ರಬಲ ರಾಷ್ಟ್ರವಾಗಿ ಬೆಳೆಯುತ್ತಾ ಅಮೇರಿಕಾದ ನೇತೃತ್ವದ ಬಂಡವಾಳಶಾಹಿ ದೇಶಗಳ ಬಣಕ್ಕೆ ಪ್ರಬಲ ಸವಾಲನ್ನು ಒಡ್ಡುತ್ತಿದ್ದಿತು. ಜಾಗತಿಕ ಆಧಿಪತ್ಯಕ್ಕೆ ರಷ್ಯಾ ಹಂಬಲಿಸುತ್ತಿತ್ತು. ಆದ್ದರಿಂದ ಸಮತಾವಾದಿ ಬಣದ ಪ್ರಾಬಲ್ಯವನ್ನು ನಿಯಂತ್ರಿಸಲು ಪಶ್ಚಿಮ ಯುರೋಪಿನ ರಾಷ್ಟ್ರಗಳು ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಸದೃಢವಾಗಿ ಬೆಳೆಯಬೇಕಾದ ಅನಿವಾರ್ಯತೆ ಒದಗಿಬಂದಿತು. ಈ ದೃಷ್ಟಿಯಿಂದ ಪ್ರಾದೇಶಿಕ ಆರ್ಥಿಕ ಸಹಕಾರದ ಕಲ್ಪನೆಯು ಪಶ್ಚಿಮ ಯುರೋಪಿನ ರಾಷ್ಟ್ರಗಳಲ್ಲಿ ಮೊದಲು ಮೊಳಕೆಯೊಡೆಯಿತು.

ಬೃಹತ್ ಪ್ರಮಾಣದ ಉತ್ಪಾದನೆ, ನವೀನ ತಂತ್ರಜ್ಞಾನದ ಪ್ರಯೋಗ ಮತ್ತು ಮಾರುಕಟ್ಟೆಗಳ ಭೌಗೋಳಿಕ ವಿಸ್ತರಣೆಯು ಆಧುನಿಕ ಉತ್ಪಾದನ ಪದ್ಧತಿಯ ಬಹು ಮುಖ್ಯ ಅಂಶಗಳಾಗಿವೆ. ವಿವಿಧ ದೇಶಗಳು ತಮ್ಮೊಳಗೆ ಪ್ರಾದೇಶಿಕ ಆರ್ಥಿಕ ಸಹಕಾರವನ್ನು ಹೆಚ್ಚಿಸಿಕೊಂಡರೆ ಹೊಸ ಮಾರುಕಟ್ಟೆಯನ್ನು ಕಂಡುಕೊಳ್ಳಲು ಮತ್ತು ಉತ್ಪಾದನೆಯನ್ನು

ವಿಸ್ತರಿಸಲು ಸಾಧ್ಯವಾಗುತ್ತದೆ ಎಂದು ನಂಬಲಾಯಿತು. ಈ ಆರ್ಥಿಕ ಕಾರಣವು ಪ್ರಾದೇಶಿಕ ಸಹಕಾರದ ಕಲ್ಪನೆಯ ವಿಕಾಸಕ್ಕೆ ಪ್ರಬಲ ಕಾರಣವಾಯಿತೆನ್ನಬಹುದು.

ಪ್ರಮುಖ ಲಕ್ಷಣಗಳು
(Essential Factors)

ಆರ್ಥಿಕ ಸಂಯೋಜನೆಯು ಎರಡು ಮುಖ್ಯ ಲಕ್ಷಣಗಳನ್ನು ಹೊಂದಿದೆ.

1. ಸದಸ್ಯ ದೇಶಗಳ ನಡುವೆ ಮುಕ್ತ ವ್ಯಾಪಾರದ ಪುನರಾರಂಭ.
2. ಸದಸ್ಯೇತರ ದೇಶಗಳ ಮೇಲೆ ಏಕರೂಪದ ಬಾಹ್ಯ ಸುಂಕಗಳನ್ನು ವಿಧಿಸುವಿಕೆ.

ಆರ್ಥಿಕ ಸಂಯೋಜನೆಯ ವಿಧಗಳು
(Types of Economic Integration)

ಆರ್ಥಿಕ ಸಂಯೋಜನೆಯಲ್ಲಿ ವಿವಿಧ ವಿಧಗಳಿವೆ ಮತ್ತು ಹಂತಗಳಿವೆ. ಕೆಲವು ಮುಖ್ಯ ವಿಧಗಳ ಆರ್ಥಿಕ ಸಂಯೋಜನೆಯನ್ನು ಈಗ ಗಮನಿಸೋಣ.

1. ಮುಕ್ತ ವ್ಯಾಪಾರ ಪ್ರದೇಶ (Free Trade Area) : ತಮ್ಮ ನಡುವೆ ಮುಕ್ತ ವ್ಯಾಪಾರವನ್ನು ಅಭಿವೃದ್ಧಿಪಡಿಸಿಕೊಳ್ಳಲು ಕೆಲವು ದೇಶಗಳು ಗುಂಪನ್ನು ರಚಿಸಿಕೊಳ್ಳುವಿಕೆಯೇ ಮುಕ್ತ ವ್ಯಾಪಾರ ಪ್ರದೇಶ. ಸದಸ್ಯ ರಾಷ್ಟ್ರಗಳ ನಡುವೆ ಎಲ್ಲಾ ವಿಧಗಳ ವ್ಯಾಪಾರ ನಿರ್ಬಂಧಗಳನ್ನು ನಿರ್ಮೂಲ ಮಾಡುವುದು ಮುಕ್ತ ವ್ಯಾಪಾರ ಪ್ರದೇಶದ ಲಕ್ಷಣವಾಗಿದೆ. ಆದರೆ ಪ್ರತಿಯೊಂದು ಸದಸ್ಯ ರಾಷ್ಟ್ರವೂ ಸದಸ್ಯೇತರ ರಾಷ್ಟ್ರಗಳೊಂದಿಗೆ ತನ್ನದೇ ಆದ ವಾಣಿಜ್ಯ ನೀತಿಯನ್ನು ರೂಪಿಸಿಕೊಳ್ಳಲು ಸ್ವತಂತ್ರವಾಗಿರುತ್ತದೆ.

2. ವ್ಯಾಪಾರ ಒಕ್ಕೂಟ (Customs Union) : ವ್ಯಾಪಾರ ಒಕ್ಕೂಟವು ಸದಸ್ಯ ರಾಷ್ಟ್ರಗಳ ನಡುವೆ ವ್ಯಾಪಾರ ನಿರ್ಬಂಧಗಳನ್ನು ನಿರ್ಮೂಲನ ಮಾಡುವುದು ಮಾತ್ರವಲ್ಲದೆ, ಸದಸ್ಯೇತರ ರಾಷ್ಟ್ರಗಳ ಬಗೆಗೆ ಎಲ್ಲಾ ಸದಸ್ಯ ರಾಷ್ಟ್ರಗಳು ಏಕರೂಪದ ವಾಣಿಜ್ಯ ನೀತಿಯನ್ನು ಅಳವಡಿಸಿಕೊಳ್ಳುವ ಲಕ್ಷಣವನ್ನು ಪಡೆದಿದೆ. ಅಂದರೆ ವ್ಯಾಪಾರ ಒಕ್ಕೂಟವು ಮುಕ್ತ ವ್ಯಾಪಾರ ಪ್ರದೇಶಕ್ಕಿಂತ ಸ್ವಲ್ಪ ಮುಂದುವರೆದ ಮಟ್ಟದ ಆರ್ಥಿಕ ಸಂಯೋಜನೆಯಾಗಿದೆ.

3. ಸಾಮಾನ್ಯ ಮಾರುಕಟ್ಟೆ (Common Market) : ಸಾಮಾನ್ಯ ಮಾರುಕಟ್ಟೆಯು ವ್ಯಾಪಾರ ಒಕ್ಕೂಟಕ್ಕಿಂತಲೂ ಮುಂದುವರೆದ ಆರ್ಥಿಕ ಸಂಯೋಜನೆಯ ವಿಧಾನವಾಗಿದೆ. ಸಾಮಾನ್ಯ ಮಾರುಕಟ್ಟೆಯು ವ್ಯಾಪಾರ ಒಕ್ಕೂಟದ ಎರಡು ಲಕ್ಷಣಗಳಾದ ಸದಸ್ಯ ರಾಷ್ಟ್ರಗಳ ನಡುವೆ ಮುಕ್ತ ವ್ಯಾಪಾರ ಮತ್ತು ಸದಸ್ಯೇತರ ರಾಷ್ಟ್ರಗಳ ಬಗೆಗೆ ಏಕರೂಪದ ವಾಣಿಜ್ಯ ನೀತಿಯ ಜೊತೆಗೆ ಸದಸ್ಯ ರಾಷ್ಟ್ರಗಳ ನಡುವೆ ಶ್ರಮ ಮತ್ತು ಬಂಡವಾಳದ ಮುಕ್ತ ಚಲನೆಯನ್ನು ಒಳಗೊಂಡಿರುತ್ತದೆ.

4. ಆರ್ಥಿಕ ಒಕ್ಕೂಟ (Economic Union): ಆರ್ಥಿಕ ಒಕ್ಕೂಟವು ಇನ್ನೂ ಒಂದು

ಹೆಚ್ಚೆ ಮುಂದಿರುವ ಆರ್ಥಿಕ ಸಂಯೋಜನೆಯ ವಿಧಾನವಾಗಿದೆ. ಇದರಲ್ಲಿ ಸದಸ್ಯ ರಾಷ್ಟ್ರಗಳ ನಡುವೆ ಮುಕ್ತ ವ್ಯಾಪಾರ, ಸದಸ್ಯೇತರ ರಾಷ್ಟ್ರಗಳ ಬಗೆಗೆ ಏಕರೂಪದ ವಾಣಿಜ್ಯ ನೀತಿ ಮತ್ತು ಸದಸ್ಯ ರಾಷ್ಟ್ರಗಳ ಜೊತೆಗೆ ಶ್ರಮ ಮತ್ತು ಬಂಡವಾಳದ ಮುಕ್ತ ಚಲನೆಯ ಜೊತೆಗೆ ಸದಸ್ಯ ರಾಷ್ಟ್ರಗಳ ಆರ್ಥಿಕ ನೀತಿಗಳಲ್ಲಿ ಒಂದು ವಿಧದ ಸಾಮರಸ್ಯವಿರುತ್ತದೆ.

ಆರ್ಥಿಕ ಸಂಯೋಜನೆಯ ಪ್ರಯೋಜನಗಳು

(Benefits of Economic Integration)

ಎರಡು ಅಥವಾ ಅದಕ್ಕಿಂತ ಹೆಚ್ಚಿನ ಸಂಖ್ಯೆಯ ದೇಶಗಳ ನಡುವೆ ಆರ್ಥಿಕ ಸಂಯೋಜನೆಯು ಕೆಳಗಿನ ಪ್ರಯೋಜನಗಳನ್ನು ಒದಗಿಸುತ್ತದೆ.

1. ಉತ್ಪಾದನೆಯ ವಿಸ್ತರಣೆ (Expansion of Output): ಒಂದೊಂದೇ ದೇಶವು ಚಿಕ್ಕದಾದ ಆಂತರಿಕ ಮಾರುಕಟ್ಟೆಯನ್ನು ಹೊಂದಿರುವುದರಿಂದ ಉತ್ಪಾದನೆಯನ್ನು ವಿಸ್ತರಿಸಲು ಸಾಕಷ್ಟು ಸಾಮರ್ಥ್ಯವನ್ನು ಪಡೆದಿರುವುದಿಲ್ಲ. ಆರ್ಥಿಕ ಸಂಯೋಜನೆಯು ಯಾವುದೇ ಸದಸ್ಯ ದೇಶವು ಉತ್ಪಾದಿಸಿದ ಸರಕುಗಳ ಖರೀದಿಗೆ ಪೂರ್ಣ ಅವಕಾಶವನ್ನು ಒದಗಿಸುತ್ತದೆ. ಇದರಿಂದಾಗಿ ಸಂಪನ್ಮೂಲಗಳನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳಲು ಮತ್ತು ಉತ್ಪಾದನೆಯನ್ನು ವಿಸ್ತರಿಸಲು ಸಾಧ್ಯವಾಗುತ್ತದೆ.

2. ಅಂತರರಾಷ್ಟ್ರೀಯ ವೈಶಿಷ್ಟ್ಯತೆ (International Specialisation): ಸದಸ್ಯ ದೇಶಗಳು ಸರಕುಗಳಲ್ಲಿ ಮತ್ತು ಉತ್ಪಾದನೆಯ ವಿಧಾನಗಳಲ್ಲಿ ಅಧಿಕ ಮಟ್ಟದ ವಿಶೇಷತೆಯನ್ನು ಸಾಧಿಸಲು ಆರ್ಥಿಕ ಸಂಯೋಜನೆಯು ನೆರವಾಗುತ್ತದೆ.

3. ಉತ್ಪನ್ನದಲ್ಲಿ ಗುಣಾತ್ಮಕ ಸುಧಾರಣೆ (Qualitative Improvement in output): ಅನೇಕ ದೇಶಗಳ ನಡುವೆ ಪ್ರಾದೇಶಿಕ ಆರ್ಥಿಕ ಸಹಕಾರವು ಶೀಘ್ರಗತಿಯ ತಾಂತ್ರಿಕ ಬದಲಾವಣೆಗಳಿಗೆ ಮತ್ತು ಸುಗಮವಾದ ಬಂಡವಾಳ ಚಲನೆಗಳಿಗೆ ಅವಕಾಶ ಕಲ್ಪಿಸುತ್ತದೆ. ಇಂತಹ ಸಂದರ್ಭದಲ್ಲಿ ಸದಸ್ಯ ದೇಶಗಳು ಉತ್ಪಾದನೆಯಲ್ಲಿ ಗುಣಾತ್ಮಕ ಸುಧಾರಣೆಗಳನ್ನು ತರಲು ಸಾಧ್ಯವಾಗುತ್ತದೆ.

4. ಉದ್ಯೋಗದ ವಿಸ್ತರಣೆ (Expansion of Employment): ಕೆಲವು ದೇಶಗಳು ಪ್ರಾದೇಶಿಕ ಆರ್ಥಿಕ ಗುಂಪುಗಳಾಗಿ ರಚನೆಗೊಂಡು, ಆ ಪ್ರದೇಶದೊಳಗಡೆ ಶ್ರಮದ ಅನಿರ್ಬಂಧಿತ ಚಲನೆಗೆ ಅವಕಾಶ ನೀಡಿದಾಗ ಉದ್ಯೋಗ ಮತ್ತು ಆದಾಯ ಹೆಚ್ಚುತ್ತವೆ. ಶ್ರಮ, ಬಂಡವಾಳ ಮುಂತಾದ ಉತ್ಪಾದನಾಂಗಗಳು ಪ್ರದೇಶದೊಳಗೆ, ಅಂದರೆ ಸದಸ್ಯ ದೇಶಗಳ ನಡುವೆ, ಮುಕ್ತವಾಗಿ ಚಲಿಸುವ ಕಾರಣದಿಂದ ಪೂರ್ಣೋದ್ಯೋಗ ಮತ್ತು ಸಂಪನ್ಮೂಲಗಳ ಪೂರ್ಣ ಬಳಕೆಗೆ ವ್ಯಾಪ್ತಿ ಲಭಿಸುತ್ತದೆ.

5. ವ್ಯಾಪಾರದ ಷರತ್ತುಗಳಲ್ಲಿ ಸುಧಾರಣೆ (Improvement in Terms of Trade): ಸದಸ್ಯ ದೇಶಗಳು ಪ್ರಪಂಚದ ಇತರ ದೇಶಗಳೊಡನೆ ಚೌಕಾಯಿಸಿ ಮಾಡುವ ಸಾಮರ್ಥ್ಯವನ್ನು (Bargaining Power) ಆರ್ಥಿಕ ಸಂಯೋಜನೆಯು ಹೆಚ್ಚಿಸುತ್ತದೆ. ಸದಸ್ಯ ದೇಶಗಳೆಲ್ಲವೂ ಸೇರಿ ಒಂದು ದೊಡ್ಡ ಭೌಗೋಳಿಕ ಪ್ರದೇಶ ಅಥವಾ ವಿಸ್ತರಿಸಿದ ಮಾರುಕಟ್ಟೆಯಾಗುವುದರಿಂದ ಜಗತ್ತಿನ ಉಳಿದ ದೇಶಗಳೊಡನೆ ವ್ಯಾಪಾರದಲ್ಲಿ ಚೌಕಾಯಿಸಿಯ ಸಾಮರ್ಥ್ಯವು ಸಹಜವಾಗಿ ಹೆಚ್ಚುತ್ತದೆ. ಇದರಿಂದಾಗಿ ಸದಸ್ಯ ದೇಶಗಳ ವ್ಯಾಪಾರದ ಕರಾರುಗಳು ಗಣನೀಯವಾಗಿ ಉತ್ತಮಗೊಳ್ಳುತ್ತವೆ.

6. ಆರ್ಥಿಕ ದಕ್ಷತೆಯಲ್ಲಿ ಹೆಚ್ಚಳ (Increase in Economic Efficiency): ಆರ್ಥಿಕ ಸಂಯೋಜನೆಯು ಪ್ರದೇಶದೊಳಗಡೆ ಸ್ಪರ್ಧೆಯನ್ನು ಹೆಚ್ಚಿಸುತ್ತದೆ. ವ್ಯಾಪಾರವು ಅನಿರ್ಬಂಧಿತವಾಗಿ ಹಾಗೂ ಮುಕ್ತ ವಾತಾವರಣದಲ್ಲಿ ಜರುಗುತ್ತಿರುವಾಗ ಪ್ರತಿಯೊಂದು ದೇಶವೂ ಸ್ಪರ್ಧಾತ್ಮಕತೆಯನ್ನು ರೂಢಿಸಿಕೊಂಡು ಉತ್ತಮ ಗುಣಮಟ್ಟದ ಸರಕುಗಳನ್ನು ಮತ್ತು ಸೇವೆಗಳನ್ನು ಉತ್ಪಾದಿಸಲು ತನ್ನ ಪ್ರಯತ್ನಗಳನ್ನು ಕೇಂದ್ರೀಕರಿಸುತ್ತದೆ. ಈ ಕಾರಣದಿಂದ ಸದಸ್ಯ ದೇಶಗಳಲ್ಲಿ ಆರ್ಥಿಕ ದಕ್ಷತೆಯು ಉನ್ನತಮಟ್ಟಕ್ಕೆ ಏರುತ್ತದೆ.

7. ಜೀವನಮಟ್ಟದಲ್ಲಿ ಸುಧಾರಣೆ (Improvement in Living Standard): ಕೆಲವು ದೇಶಗಳು ಪ್ರಾದೇಶಿಕ ಗುಂಪುಗಳಾಗಿ ಸಂಘಟನೆಗೊಳ್ಳುವುದರಿಂದ ಅವುಗಳಿಗೆ ಸ್ಪರ್ಧಾತ್ಮಕ ಬೆಲೆಗಳಲ್ಲಿ ಉತ್ತಮ ಗುಣಮಟ್ಟದ ಸರಕುಗಳು ದೊರೆಯುತ್ತವೆ. ಉದ್ಯೋಗಾವಕಾಶಗಳ ಮತ್ತು ಕೊಳ್ಳುವ ಶಕ್ತಿಯ ಏರಿಕೆಯಿಂದಾಗಿಯೂ ಜನರ ಜೀವನಮಟ್ಟ ಉತ್ತಮಗೊಳ್ಳುತ್ತದೆ.

ಅಧ್ಯಾಯ - III

ಪಾವತಿ ಶಿಲ್ಕು (ಸಂದಾಯ ಶಿಲ್ಕು) ಮತ್ತು ಬಂಡವಾಳ ಪ್ರವಹನ

(Balance of Payments and Capital Flow)

ಚರ್ಚಿಸಲಾಗಿರುವ ವಿಷಯಗಳು

A. ಪಾವತಿ ಶಿಲ್ಕು : ಪರಿಕಲ್ಪನೆ ಮತ್ತು ಸಂಯೋಜನಾಂಶಗಳು
B. ಪಾವತಿ ಶಿಲ್ಕಿನಲ್ಲಿ ಅಸಮತೋಲನ
C. ವಿದೇಶಿ ವಿನಿಮಯ ದರ : ಅರ್ಥ ಮತ್ತು ವಿಧಗಳು
D. ವಿನಿಮಯ ದರದ ನಿರ್ಧಾರ
E. ಕೊಳ್ಳುವ ಶಕ್ತಿಯ ಸರಿಸಮಾನತೆಯ ಸಿದ್ಧಾಂತ
F. ಬಂಡವಾಳ ಪ್ರವಹನ : ವಿದೇಶಿ ಹೂಡಿಕೆಯ ಅರ್ಥ ಮತ್ತು ಪರಿಕಲ್ಪನೆ
G. ವಿದೇಶಿ ಹೂಡಿಕೆಯ ರೂಪಗಳು
H. ವಿದೇಶಿ ನೇರ ಹೂಡಿಕೆಯ ಅನುಕೂಲತೆಗಳು ಮತ್ತು ಅನಾನುಕೂಲತೆಗಳು

A. ಪಾವತಿ ಶಿಲ್ಕು : ಪರಿಕಲ್ಪನೆ ಮತ್ತು ಸಂಯೋಜನಾಂಶಗಳು
(Balance of Payments : Concept and Components)

ಪೀಠಿಕೆ

ಒಂದು ದೇಶವು ಒಂದು ನಿರ್ದಿಷ್ಟ ಅವಧಿಯಲ್ಲಿ ಜಗತ್ತಿನ ಇತರ ದೇಶಗಳೊಡನೆ ನಡೆಸಿದ ಎಲ್ಲಾ ಆರ್ಥಿಕ ವ್ಯವಹಾರಗಳನ್ನು ಕುರಿತು ಸವಿಸ್ತಾರವಾದ ದಾಖಲೆಗಳನ್ನು ತೋರಿಸುವ ಪಟ್ಟಿಯನ್ನು "ಪಾವತಿ ಶಿಲ್ಕು" ಅಥವಾ "ಸಂದಾಯ ಶಿಲ್ಕು" ಎಂದು ಕರೆಯಲಾಗುತ್ತದೆ. ಅಂದರೆ ಅದರಲ್ಲಿ ಒಂದು ದೇಶವು ನಿರ್ದಿಷ್ಟ ಅವಧಿಯಲ್ಲಿ ಇತರ ದೇಶಗಳೊಂದಿಗೆ ಕೈಕೊಂಡ ಸರಕುಗಳ ಮತ್ತು ಸೇವೆಗಳ ಆಮದುಗಳ ಹಾಗೂ ರಫ್ತುಗಳ ಮೌಲ್ಯವನ್ನು ಮತ್ತು ಬಂಡವಾಳ ವ್ಯವಹಾರಗಳನ್ನು ನಮೂದಿಸಲಾಗುತ್ತದೆ. ಒಂದು ದೇಶದ ಹಣಕಾಸಿನ ಪರಿಸ್ಥಿತಿ, ಅದು ಸಾಲಿಗ ರಾಷ್ಟ್ರವೇ ಅಥವಾ ಸಾಲಗಾರ ರಾಷ್ಟ್ರವೇ ಎಂಬ ಸಂಗತಿ, ಆ ದೇಶವು ಆರ್ಥಿಕವಾಗಿ ಪ್ರಬಲವಾಗುತ್ತಿದೆಯೇ ಅಥವಾ ದುರ್ಬಲವಾಗುತ್ತಿದೆಯೇ ಎಂಬ ಹಲವಾರು ವಿಚಾರಗಳು ಪಾವತಿ ಶಿಲ್ಕಿನಿಂದ ತಿಳಿದು ಬರುತ್ತವೆ.

ಅಂತರ ರಾಷ್ಟ್ರೀಯ ಹಣಕಾಸಿನ ನಿಧಿಯ ಭಾಷೆಯಲ್ಲಿ "ಒಂದು ನಿರ್ದಿಷ್ಟ ಅವಧಿಗೆ

ಪಾವತಿ ಶಿಲ್ಕುಗಳು ಎಂದರೆ ವರದಿ ಮಾಡುವ ದೇಶಗಳ ನಿವಾಸಿಗಳ ನಡುವೆ ಆ ಅವಧಿಯಲ್ಲಿ ನಡೆದ ಎಲ್ಲಾ ಆರ್ಥಿಕ ವ್ಯವಹಾರಗಳ ಒಂದು ವ್ಯವಸ್ಥಿತ ದಾಖಲೆ ಎಂದು ವ್ಯಾಖ್ಯಾನಿಸಬಹುದು".

ಅಮೆರಿಕ ಸಂಯುಕ್ತ ಸಂಸ್ಥಾನಗಳ ವಾಣಿಜ್ಯ ಇಲಾಖೆಯ ಪ್ರಕಾರ "ಯಾವುದೊಂದು ದೇಶದ ಪಾವತಿ ಶಿಲ್ಕುಗಳು ಎಂದರೆ ಆ ದೇಶದ ನಿವಾಸಿಗಳ ಮತ್ತು ವಿದೇಶಗಳ ನಿವಾಸಿಗಳ ನಡುವೆ ಪರಿಗಣಿಸಲಾದ ನಿಗದಿತ ಅವಧಿಯಲ್ಲಿ ಮಾಡಲಾದ ಸಂದಾಯಗಳನ್ನು ಒಳಗೊಂಡಿರುತ್ತವೆ".

ಕಿಂಡ್ಲ್ ಬರ್ಗರ್‌ರವರ ಅಭಿಪ್ರಾಯದಲ್ಲಿ "ಯಾವುದೊಂದು ದೇಶದ ಪಾವತಿ ಶಿಲ್ಕುಗಳು ವರದಿ ಮಾಡುವ ದೇಶದ ನಿವಾಸಿಗಳ ಮತ್ತು ವಿದೇಶಗಳ ನಿವಾಸಿಗಳ ನಡುವೆ ಒಂದು ನಿಗದಿತ ಅವಧಿಯಲ್ಲಿ ನಡೆದ ಎಲ್ಲಾ ಆರ್ಥಿಕ ವ್ಯವಹಾರಗಳ ಒಂದು ಕ್ರಮಬದ್ಧ ದಾಖಲೆಯಾಗಿರುತ್ತದೆ".

ಆ ಪ್ರಕಾರ ಪಾವತಿ ಶಿಲ್ಕು ಒಂದು ದೇಶವು ಮಾಡುವ ಹಣ ಪಾವತಿಗಳು ಮತ್ತು ಬೇರೆ ದೇಶಗಳಿಂದ ಅದಕ್ಕೆ ದೊರೆಯುವ ಹಣ ಸ್ವೀಕಾರಗಳನ್ನು ಒಳಗೊಂಡಿರುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಪಾವತಿ ಶಿಲ್ಕನ್ನು ಒಂದು ಕಡೆ, ವಿದೇಶಿಯರಿಂದ ಸ್ವೀಕರಿಸಿದ ಹಣದ ಮತ್ತು ಇನ್ನೊಂದು ಕಡೆ, ವಿದೇಶಿಯರಿಗೆ ಮಾಡಿದ ಹಣ ಪಾವತಿಗಳ ವ್ಯವಹಾರಗಳ ಒಂದು ಬಾಬುವಾರು (Itemised) ಲೆಕ್ಕ ಎಂದು ವ್ಯಾಖ್ಯಾನಿಸಬಹುದು. ಹಣ ಸ್ವೀಕೃತಿಗಳು ದೇಶದ ಅಂತರ ರಾಷ್ಟ್ರೀಯ ಆದಾಯವನ್ನು ಪ್ರತಿನಿಧಿಸುವುದರಿಂದ ಅವುಗಳನ್ನು 'ಜಮೆಗಳು' (Credits) ಎಂದು ಪರಿಗಣಿಸಲಾಗುತ್ತದೆ. ಹಣಪಾವತಿಗಳು ಅಂತರ ರಾಷ್ಟ್ರೀಯ ಹೊರ ಪ್ರವಹನಗಳನ್ನು ಪ್ರತಿನಿಧಿಸುವುದರಿಂದ ಅವುಗಳನ್ನು 'ಖರ್ಚುಗಳು' (Debits) ಎಂದು ಕರೆಯಲಾಗುತ್ತದೆ.

ವ್ಯಾಪಾರ ಶಿಲ್ಕು
(Balance of Trade)

ಪಾವತಿ ಶಿಲ್ಕನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವ್ಯಾಪಾರ ಶಿಲ್ಕು ಎಂದರೆ ಏನೆಂಬುದನ್ನು ಮೊದಲು ತಿಳಿಯುವುದು ಅವಶ್ಯಕ. ಪಾವತಿ ಶಿಲ್ಕು ವ್ಯಾಪಕವಾದ ಭಾವನೆಯಾಗಿದ್ದರೆ ವ್ಯಾಪಾರ ಶಿಲ್ಕು ಸಂಕುಚಿತ ಭಾವನೆಯಾಗಿದ್ದು, ಪಾವತಿ ಶಿಲ್ಕಿನ ಒಂದು ಭಾಗ ಮಾತ್ರವಾಗಿರುತ್ತದೆ. ಅದು ಸರಕುಗಳ ಮತ್ತು ಸೇವೆಗಳ ರಫ್ತು ಮತ್ತು ಆಮದುಗಳಿಗೆ ಮಾತ್ರ ಸಂಬಂಧಿಸಿದ್ದುದಾಗಿರುತ್ತದೆ. ಅಂದರೆ ಅದು ಗೋಚರವಾಗುವ ಸಂಗತಿಗಳನ್ನು (Visible Items) ಅಂದರೆ, ದೃಗ್ಗೋಚರಗಳನ್ನು ಅಥವಾ ಕಣ್ಣಿಗೆ ಕಾಣುವ ಸರಕುಗಳನ್ನು ಮಾತ್ರ ಒಳಗೊಂಡಿರುತ್ತದೆ. ಆದ್ದರಿಂದ ವ್ಯಾಪಾರ ಶಿಲ್ಕು ಎಂಬುದು ಒಂದು ವರ್ಷದ ಅವಧಿಯಲ್ಲಿ ಒಂದು ದೇಶದ ರಫ್ತುಗಳ ಮೌಲ್ಯ ಮತ್ತು ಆಮದುಗಳ ಮೌಲ್ಯವನ್ನು ನಮೂದಿಸಿರುವ ಪಟ್ಟಿಯಾಗಿರುತ್ತದೆ. ಆಮದುಗಳ ಮೌಲ್ಯಕ್ಕಿಂತ ರಫ್ತುಗಳ ಮೌಲ್ಯವು

ಹೆಚ್ಚಿದ್ದಾಗ ಆ ದೇಶದ ಸ್ವೀಕಾರಗಳು ಜಾಸ್ತಿ ಇರುತ್ತವೆ. ಇಂತಹ ಸಂದರ್ಭದಲ್ಲಿ ವ್ಯಾಪಾರ ಶಿಲ್ಕು ಆ ದೇಶಕ್ಕೆ ಅನುಕೂಲಕರವಾಗಿರುತ್ತದೆ. ತದ್ವಿರುದ್ಧವಾಗಿ ರಫ್ತುಗಳ ಮೌಲ್ಯಕ್ಕಿಂತ ಆಮದುಗಳ ಮೌಲ್ಯವು ಹೆಚ್ಚಿದಾಗ ಆ ದೇಶವು ವಿದೇಶಗಳಿಗೆ ಮಾಡ ಬೇಕಿರುವ ಸಂದಾಯಗಳು ಜಾಸ್ತಿ ಇರುತ್ತವೆ. ಆಗ ವ್ಯಾಪಾರ ಶಿಲ್ಕು ಆ ದೇಶಕ್ಕೆ ಪ್ರತಿಕೂಲಕರವಾಗಿರುತ್ತದೆ.

ದೃಗ್ಗೋಚರಗಳಾಗಿರುವ ರಫ್ತು ಮತ್ತು ಆಮದು ಅಂತರರಾಷ್ಟ್ರೀಯ ಪಾವತಿಯ ಒಂದು ಭಾಗ ಮಾತ್ರ. ಇನ್ನೂ ಹಲವಾರು ಸಂಗತಿಗಳಿಂದಾಗಿ ಈ ಪಾವತಿಗಳು ನೆರವೇರುತ್ತವೆ. ಈ ಸಂಗತಿಗಳೆಂದರೆ, ಬ್ಯಾಂಕುಗಳ, ಸಾರಿಗೆ ಸಂಸ್ಥೆಗಳ ಮತ್ತು ವಿಮಾ ಸಂಸ್ಥೆಗಳ ಸೇವೆಗಳು, ಸಾಲ ಮರುಪಾವತಿ ಮತ್ತು ಬಡ್ಡಿಯ ಪಾವತಿ, ರಾಯಭಾರ ಸಿಬ್ಬಂದಿಗೆ ವೇತನ ನೀಡಿಕೆ, ವಿದೇಶಿ ಹೂಡಿಕೆಯ ಮೇಲಿನ ಲಾಭಗಳು, ಅಂತರರಾಷ್ಟ್ರೀಯ ಪ್ರವಾಸೋದ್ಯಮ ವೆಚ್ಚ, ಯುದ್ಧ ಪರಿಹಾರಗಳು ಇತ್ಯಾದಿ. ಇವುಗಳನ್ನು **'ಅಗೋಚರಗಳು' ಅಥವಾ 'ಅದೃಶ್ಯಗಳು'** (Invisibles) ಎಂದು ಕರೆಯಲಾಗುತ್ತದೆ. ಏಕೆಂದರೆ ಇವುಗಳ ಚಲನವಲನ ಕಣ್ಣಿಗೆ ಗೋಚರಿಸುವುದಿಲ್ಲ. ಆದ್ದರಿಂದ ಪಾವತಿ ಶಿಲ್ಕು ಸವಿಸ್ತಾರವಾದ ಭಾವನೆಯಾಗಿದ್ದು ಎಲ್ಲಾ ವಿಧಗಳ ಅಂತರರಾಷ್ಟ್ರೀಯ ಪಾವತಿಗಳನ್ನು ಒಳಗೊಳ್ಳುತ್ತದೆ.

ಈ ಕೆಳಗಿನ ಸಂದರ್ಭಗಳಲ್ಲಿ ಯಾವುದೇ ಒಂದು ದೇಶಕ್ಕೆ ವಿದೇಶಗಳಿಂದ ಹಣವು ದೊರೆಯುತ್ತದೆ.

i) ಸರಕುಗಳನ್ನು ರಫ್ತು ಮಾಡಿದಾಗ,
ii) ಒಂದು ದೇಶವು ವಿದೇಶಗಳಿಗೆ ಬ್ಯಾಂಕುಗಳ, ವಿಮೆಯ ಮತ್ತು ಸಾರಿಗೆ ಸೇವೆಗಳನ್ನು ಒದಗಿಸಿದಾಗ,
iii) ವಿದೇಶಗಳಿಗೆ ನೀಡಿದ ಸಾಲದ ಮೇಲೆ ಬಡ್ಡಿಯನ್ನು ಪಡೆದಾಗ,
iv) ವಿದೇಶಿ ಹೂಡಿಕೆಯ ಮೇಲೆ ಲಾಭಗಳು ದೊರೆತಾಗ,
v) ವಿದೇಶಿ ಪ್ರವಾಸಿಗರ ವೆಚ್ಚದಿಂದ ಹಣವನ್ನು ಗಳಿಸಿದಾಗ,
vi) ವಿದೇಶಗಳಿಂದ ದಾನಗಳು ಮತ್ತು ಕೊಡುಗೆಗಳನ್ನು ಪಡೆದಾಗ, ಮತ್ತು
vii) ಯುದ್ಧ ಪರಿಹಾರಗಳನ್ನು ಪಡೆದಾಗ.

ಇದಕ್ಕೆ ವಿರುದ್ಧವಾಗಿ, ಈ ಕೆಳಗಿನ ಸಂದರ್ಭಗಳಲ್ಲಿ ಯಾವುದೇ ದೇಶದಿಂದ ವಿದೇಶಗಳಿಗೆ ಹಣವು ಸಂದಾಯವಾಗುತ್ತದೆ.

i) ಸರಕುಗಳನ್ನು ಆಮದು ಮಾಡಿಕೊಂಡಾಗ,
ii) ವಿದೇಶಗಳಿಂದ ಬ್ಯಾಂಕೋದ್ಯಮದ, ವಿಮೆಯ ಮತ್ತು ಸಾರಿಗೆ ಸೇವೆಗಳನ್ನು ಪಡೆದಾಗ,
iii) ವಿದೇಶಿ ಸಾಲಗಳ ಮೇಲೆ ಬಡ್ಡಿಯನ್ನು ಪಾವತಿಸಿದಾಗ,
iv) ಪ್ರವಾಸಕ್ಕಾಗಿ ವಿದೇಶಗಳಲ್ಲಿ ಹಣವನ್ನು ಖರ್ಚು ಮಾಡಿದಾಗ,
v) ವಿದೇಶಗಳಿಗೆ ದಾನಗಳನ್ನು ಮತ್ತು ಕೊಡುಗೆಗಳನ್ನು ನೀಡಿದಾಗ,

vi) ವಿದೇಶಿಯರು ಕೈಗೊಳ್ಳುವ ಹೂಡಿಕೆಗಳ ಮೇಲೆ ಅವರು ಲಾಭಗಳನ್ನು ಸಂಪಾದಿಸಿದಾಗ, ಮತ್ತು
vii) ವಿದೇಶಗಳಿಗೆ ಯುದ್ಧ ಪರಿಹಾರ ನೀಡಿದಾಗ.

ಪಾವತಿ ಶಿಲ್ಕಿನ ಭಾಗಗಳು (ಪಾವತಿ ಶಿಲ್ಕಿನ ಲೆಕ್ಕಗಳು)
(Accounts in the Balance of Payments)

ಸಂದಾಯ ಶಿಲ್ಕು ಎರಡು ಭಾಗಗಳನ್ನು ಒಳಗೊಂಡಿರುತ್ತದೆ. ಅವುಗಳು ಯಾವುವೆಂದರೆ:

i) ಚಾಲ್ತಿ ಲೆಕ್ಕ, ಮತ್ತು
ii) ಬಂಡವಾಳ ಲೆಕ್ಕ.

1. ಚಾಲ್ತಿ ಲೆಕ್ಕ (Current Account) : ಪಾವತಿ ಶಿಲ್ಕಿನ ಚಾಲ್ತಿ ಲೆಕ್ಕವು ಪ್ರಸ್ತುತದಲ್ಲಿ ನಡೆದ ಸರಕುಗಳ ಮತ್ತು ಸೇವೆಗಳ ಆಮದುಗಳ ಮತ್ತು ರಫ್ತುಗಳ ವ್ಯವಹಾರಗಳಿಗೆ ಸಂಬಂಧಿಸಿದ್ದುದಾಗಿರುತ್ತದೆ. ಚಾಲ್ತಿ ಲೆಕ್ಕದಲ್ಲಿ, ಈ ಕೆಳಗಿನ ಅಂಶಗಳಿರುತ್ತವೆ.

(a) ಸರಕುಗಳು (Goods): ಪಾವತಿ ಶಿಲ್ಕಿನ ಚಾಲ್ತಿ ಲೆಕ್ಕದಲ್ಲಿ ಸರಕುಗಳ ವಿನಿಮಯವು ಪ್ರಮುಖ ಅಂಶವಾಗಿದೆ. ವಿದೇಶಗಳಿಗೆ ಸರಕುಗಳನ್ನು ರಫ್ತು ಮಾಡಿದಾಗ ನಮಗೆ ಹಣದ ಸ್ವೀಕಾರವಾಗಿರುತ್ತದೆ. ಇದನ್ನು ಜಮೆಯ ಭಾಗದಲ್ಲಿ (Credit Side) ನಮೂದಿಸಲಾಗುವುದು. ವಿದೇಶಗಳಿಂದ ಸರಕುಗಳನ್ನು ಆಮದು ಮಾಡಿಕೊಂಡಾಗ ನಾವು ಹಣವನ್ನು ಸಂದಾಯ ಮಾಡಬೇಕಾಗುತ್ತದೆ. ಇದನ್ನು ಖರ್ಚಿನ ಭಾಗದಲ್ಲಿ (Debit Side) ನಮೂದಿಸಲಾಗುವುದು.

(b) ಸೇವೆಗಳು (Services): ನಮ್ಮ ದೇಶವು ವಿದೇಶಗಳಿಗೆ ಸಲ್ಲಿಸುವ ಬ್ಯಾಂಕೋದ್ಯಮದ, ಸಾರಿಗೆಯ ಮತ್ತು ವಿಮಾ ಸೇವೆಗಳು ನಮಗೆ ಹಣ ತರುತ್ತವೆ. ಆದ್ದರಿಂದ ಇವು ಜಮೆಯ ಭಾಗದಲ್ಲಿ ಬರುತ್ತವೆ. ವಿದೇಶಗಳಿಂದ ನಾವು ಈ ಸೇವೆಗಳನ್ನು ಪಡೆದಾಗ ವಿದೇಶಗಳಿಗೆ ಹಣ ಸಂದಾಯ ಮಾಡಬೇಕಾಗುತ್ತದೆ. ಆದ್ದರಿಂದ ನಾವು ಪಡೆದ ಇಂತಹ ಸೇವೆಗಳು ಖರ್ಚಿನ ಭಾಗದಲ್ಲಿ ಬರುತ್ತವೆ.

(c) ಬಡ್ಡಿಗಳು ಮತ್ತು ಲಾಭಗಳು (Interests and Profits): ವಿದೇಶಗಳಿಗೆ ನೀಡಿದ ಸಾಲದ ಮೇಲೆ ನಾವು ಪಡೆಯುವ ಬಡ್ಡಿ ಮತ್ತು ವಿದೇಶಗಳಲ್ಲಿ ಮಾಡಿದ ಹೂಡಿಕೆಗೆ ನಮಗೆ ದೊರೆಯುವ ಲಾಭಗಳನ್ನು ಜಮೆಯ ಭಾಗದಲ್ಲಿ ನಮೂದಿಸಲಾಗುತ್ತದೆ. ವಿದೇಶಿ ಸಾಲಗಳ ಮೇಲೆ ನಾವು ನೀಡುವ ಬಡ್ಡಿ ಮತ್ತು ವಿದೇಶಿಯರು ನಮ್ಮ ದೇಶದಲ್ಲಿ ಮಾಡಿದ ಹೂಡಿಕೆಯಿಂದ ಗಳಿಸುವ ಲಾಭಗಳನ್ನು ಖರ್ಚಿನ ಭಾಗದಲ್ಲಿ ಸೂಚಿಸಲಾಗುತ್ತದೆ.

(d) ವಿಕಮುಖ ವರ್ಗಾವಣೆಗಳು (Unilateral Transfers) : ಪ್ರತಿಫಲಾಪೇಕ್ಷೆಯಿಲ್ಲದೆ ಒಂದು ದೇಶವು ಇತರ ದೇಶಗಳಿಗೆ ನೀಡಿದ ದಾನಗಳು ಮತ್ತು ಕೊಡುಗೆಗಳು, ರಾಯಭಾರಿ

ಸಿಬ್ಬಂದಿಗೆ ನೀಡುವ ವೇತನಗಳು, ಯುದ್ಧ ಪರಿಹಾರಗಳು ಇತ್ಯಾದಿಗಳಿಗೆ ವಿಕಮುಖ ವರ್ಗಾವಣೆ ಗಳೆಂದು ಹೆಸರು. ಈ ಬಾಬ್ತುಗಳಿಂದ ನಾವು ಸ್ವೀಕರಿಸುವ ಹಣವನ್ನು ಜಮೆಯ ಭಾಗದಲ್ಲಿ ಮತ್ತು ನಾವು ಸಂದಾಯ ಮಾಡುವ ಹಣವನ್ನು ವಿರ್ಚನ ಭಾಗದಲ್ಲಿ ನಮೂದಿಸಲಾಗುತ್ತದೆ.

2. ಬಂಡವಾಳ ಲೆಕ್ಕ (Capital Account): ಅಲ್ಪಾವಧಿಯ ಹಾಗೂ ದೀರ್ಘಾವಧಿಯ ಸಾಲಗಳು, ಚಿನ್ನದ ವ್ಯವಹಾರಗಳು ಮತ್ತು ಬಂಡವಾಳ ಸ್ವತ್ತುಗಳ ಕೊಳ್ಳುವಿಕೆ ಹಾಗೂ ಮಾರಾಟ ಬಂಡವಾಳ ಲೆಕ್ಕದ ವ್ಯಾಪ್ತಿಗೆ ಬರುತ್ತವೆ. ಸಾಲಗಳು ಅಧಿಕೃತವಾಗಿ ಸರ್ಕಾರದ ಸಾಲಗಳಾಗಿರಬಹುದು ಅಥವಾ ಖಾಸಗಿ ಸಾಲಗಳಾಗಿರಬಹುದು. ವಿದೇಶಗಳಿಂದ ನಾವು ಪಡೆಯುವ ಸಾಲಗಳು ಮತ್ತು ಚಿನ್ನ ಹಾಗೂ ಬಂಡವಾಳ ಸ್ವತ್ತುಗಳನ್ನು ಮಾರಿಮದರಿಂದ ನಾವು ಗಳಿಸುವ ಹಣವನ್ನು ಜಮೆಯ ಭಾಗದಲ್ಲಿ ಸೇರಿಸಲಾಗುತ್ತದೆ. ನಾವು ವಿದೇಶಗಳಿಗೆ ನೀಡುವ ಸಾಲಗಳು ಮತ್ತು ಚಿನ್ನ ಹಾಗೂ ಬಂಡವಾಳ ಸ್ವತ್ತುಗಳನ್ನು ಕೊಳ್ಳುವುದರಿಂದ ನಾವು ನೀಡಬೇಕಾದ ಹಣವನ್ನು ವಿರ್ಚನ ಭಾಗದಲ್ಲಿ ಸೇರಿಸಲಾಗುತ್ತದೆ.

ಪಾವತಿ ಶಿಲ್ಕಿನಲ್ಲಿ ವಿರ್ಚಗಿಂತ ಜಮೆಯು ಜಾಸ್ತಿ ಮೌಲ್ಕದ್ದಾಗಿದ್ದರೆ ಆ ದೇಶದ ಸ್ವೀಕಾರಗಳು ಹೆಚ್ಚಿರುತ್ತವೆ ಎಂದು ಅರ್ಥ. ಪರಿಣಾಮವಾಗಿ ಆ ದೇಶದ ಪಾವತಿ ಶಿಲ್ಕು ಅನುಕೂಲಕರ ಪರಿಸ್ಥಿತಿಯಲ್ಲಿರುತ್ತದೆ. ತದ್ವಿರುದ್ಧವಾಗಿ, ಜಮೆಗಿಂತ ವಿರ್ಚು ಜಾಸ್ತಿ ಮೌಲ್ಕದ್ದಾಗಿದ್ದರೆ ಸ್ವೀಕಾರಗಳಿಗಿಂತ ಸಂದಾಯಗಳು ಹೆಚ್ಚಾಗಿರುತ್ತವೆ ಎಂದು ಸೂಚಿತವಾಗುತ್ತದೆ. ಈ ಕಾರಣದಿಂದ ಪಾವತಿ ಶಿಲ್ಕು ಆ ದೇಶಕ್ಕೆ ಪ್ರತಿಕೂಲವಾಗಿರುತ್ತದೆ. ಪಾವತಿ ಶಿಲ್ಕಿನ ಪ್ರತಿಕೂಲಕರ ಪರಿಸ್ಥಿತಿಯನ್ನು **"ಪಾವತಿ ಶಿಲ್ಕಿನ ಅಸಮತೋಲನ"** (Disequilibrium in the Balance of Payments) ಎಂದು ಕರೆಯಲಾಗುತ್ತದೆ.

ಪಾವತಿ ಶಿಲ್ಕಿನ ಸಂಯೋಜನಾಂಶಗಳು
(Components of Balance of Payments)

ಕೆಳಗಿನ ಪಟ್ಟಿಯು ಯಾವುದೊಂದು ದೇಶದ ಅಂತರ ರಾಷ್ಟ್ರೀಯ ಪಾವತಿ ಶಿಲ್ಕುಗಳು ಒಳಗೊಂಡಿರುವ ಭಿನ್ನ ಅಂಶಗಳ (ಬಾಬುಗಳ) ವಿವಿಧ ಉಪಲೆಕ್ಕಗಳನ್ನು (Sub-heads) ತೋರಿಸುತ್ತದೆ.

ಪಾವತಿ ಶಿಲ್ಕಿನ ಸಂಯೋಜನಾಂಶಗಳು

ಸ್ವೀಕೃತಿಗಳು (ಜಮೆಗಳು)	ಸಂದಾಯಗಳು (ವಿರ್ಚುಗಳು)
1. ಸರಕುಗಳ ಮತ್ತು ಸೇವೆಗಳ ರಫ್ತುಗಳು	1. ಸರಕುಗಳ ಮತ್ತು ಸೇವೆಗಳ ಆಮದುಗಳು
i) ವ್ಯಾಪಾರದ ಸರಕುಗಳು	i) ವ್ಯಾಪಾರದ ಸರಕುಗಳು
ii) ಸೇವೆಗಳು	ii) ಸೇವೆಗಳು
iii) ವಿದೇಶಿ ಹೂಡಿಕೆಗಳಿಂದ ಆದಾಯ	iii) ಸ್ವದೇಶದಲ್ಲಿ ಮಾಡಿದ ಹೂಡಿಕೆಗಳಿಂದ ವಿದೇಶಿ ಆದಾಯ
2. ದೀರ್ಘಾವಧಿಯ ಹಕ್ಕುಗಳ ಮಾರಾಟಗಳು	2. ದೀರ್ಘಾವಧಿಯ ಹಕ್ಕುಗಳ ವಿರೀದಿಗಳು
i) ಸಮಪಾಲು ಬಂಡವಾಳದ ಹಕ್ಕುಗಳು (Equity Claims)	i) ಸಮಪಾಲು ಬಂಡವಾಳದ ಹಕ್ಕುಗಳು (Equity Claims)
ii) ಸಾಲದ ಹಕ್ಕುಗಳು (Debt Claims)	ii) ಸಾಲದ ಹಕ್ಕುಗಳು (Debt Claims)
3. ಅಲ್ಪಾವಧಿಯ ಮಾರಾಟಗಳು	3. ಅಲ್ಪಾವಧಿಯ ವಿರೀದಿಗಳು
i) ಠೇವಣಿಗಳಿಗೆ ಎದುರಾಗಿ	i) ಠೇವಣಿಗಳ ಎದುರಾಗಿ
ii) ಇತರೆ	ii) ಇತರೆ
4. ಚಿನ್ನದ ಮಾರಾಟಗಳು	4. ಚಿನ್ನದ ವಿರೀದಿಗಳು
5. ವಿಕ ಮುಖಿ ಸ್ವೀಕೃತಿಗಳು	5. ವಿಕ ಮುಖಿ ಪಾವತಿಗಳು
6. ತಪ್ಪುಗಳು ಮತ್ತು ಸೇರಿಸದಿರುವವುಗಳು (Errors and Omissions)	6. ತಪ್ಪುಗಳು ಮತ್ತು ಸೇರಿಸದಿರುವವುಗಳು (Errors and Omissions)

B. ಪಾವತಿ ಶಿಲ್ಕಿನಲ್ಲಿ ಅಸಮತೋಲನ
(Disequilibrium in Balance of Payments)

ಪಾವತಿ ಶಿಲ್ಕು ಆರ್ಥಿಕ ವ್ಯವಹಾರಗಳ ಒಂದು ವಾರ್ಷಿಕ ದಾಖಲೆಯಾಗಿರುವುದರಿಂದ ಅದು ಸಮಗ್ರವಾಗಿ ಸಮತೋಲನದಲ್ಲಿರುವಂತೆ ತೋರಿಸಬೇಕಾಗುತ್ತದೆ. ಪಾವತಿ ಶಿಲ್ಕಿನ ಚಾಲ್ತಿ ಖಾತೆಯಲ್ಲಿ ಹೆಚ್ಚಳವಿರಬಹುದು ಅಥವಾ ಕೊರತೆಯಿರಬಹುದು. ಈ ಕೊರತೆ ಅಥವಾ ಹೆಚ್ಚಳವನ್ನು ಹೇಗೆ ಸಮತೋಲನಗೊಳಿಸಬಹುದೆಂಬುದನ್ನು ಬಂಡವಾಳ ಖಾತೆಯು ತೋರಿಸುತ್ತದೆ. ಆದ್ದರಿಂದ ಚಾಲ್ತಿ ಖಾತೆ ಮತ್ತು ಬಂಡವಾಳ ಖಾತೆಗಳೆರಡೂ ಸಮವಾಗುತ್ತವೆ. ಅಂದರೆ ಚಾಲ್ತಿ ಲೆಕ್ಕದಲ್ಲಿರುವ ಹೆಚ್ಚಳವು ಬಂಡವಾಳ ಲೆಕ್ಕದ ಕೊರತೆಗೆ ಸಮನಾಗಿರುತ್ತದೆ ಮತ್ತು ಚಾಲ್ತಿ ಲೆಕ್ಕದ ಕೊರತೆಯು ಬಂಡವಾಳ ಲೆಕ್ಕದ ಹೆಚ್ಚುವರಿಗೆ ಸಮನಾಗಿರುತ್ತದೆ.

ಉದಾಹರಣೆಗೆ, ಭಾರತದ ಚಾಲ್ತಿ ಲೆಕ್ಕದಲ್ಲಿ ಹೆಚ್ಚಳ ಇದೆಯೆಂದು ಭಾವಿಸೋಣ. ಅಂದರೆ ಭಾರತವು ರಫ್ತು ಮಾಡುತ್ತಿರುವ ಸರಕುಗಳು ಮತ್ತು ಸೇವೆಗಳು ಅದರ ಆಮದುಗಳಿಗಿಂತ ಹೆಚ್ಚಾಗಿದೆ. ಬಂಡವಾಳ ಲೆಕ್ಕದಲ್ಲಿ ಕೊರತೆಯುಂಟು ಮಾಡುವ ಮೂಲಕ ಈ ಹೆಚ್ಚಳವನ್ನು ಸರಿದೂಗಿಸಲಾಗುತ್ತದೆ. ಅದಕ್ಕಾಗಿ ಭಾರತ ಸರ್ಕಾರವು ವಿದೇಶಗಳಿಂದ ಚಿನ್ನ ಮತ್ತು ಬಂಡವಾಳ ಸ್ವತ್ತುಗಳನ್ನು ಕೊಳ್ಳಬಹುದು ಅಥವಾ ವಿದೇಶಗಳಿಗೆ ಸಾಲ ನೀಡಬಹುದು. ಇವು ಬಂಡವಾಳ ಲೆಕ್ಕದ ವಿರ್ಚನ ಭಾಗದಲ್ಲಿ ಬರುತ್ತವೆ. ಆದ್ದರಿಂದ

ಚಾಲ್ತಿ ಲೆಕ್ಕದ ಹೆಚ್ಚಳವು ಬಂಡವಾಳ ಲೆಕ್ಕದ ಕೊರತೆಗೆ ಸಮನಾಗುತ್ತದೆ.

ಈಗ ಭಾರತದ ಚಾಲ್ತಿ ಲೆಕ್ಕದಲ್ಲಿ ಕೊರತೆಯಿದೆಯೆಂದು ಭಾವಿಸೋಣ. ಅಂದರೆ ಭಾರತದ ಸರಕುಗಳ ಮತ್ತು ಸೇವೆಗಳ ರಫ್ತುಗಳು ಆಮದುಗಳಿಗಿಂತ ಕಡಿಮೆ ಇವೆ. ಬಂಡವಾಳ ಲೆಕ್ಕದಲ್ಲಿ ಹೆಚ್ಚಳ ತೋರಿಸುವ ಮೂಲಕ ಚಾಲ್ತಿ ಲೆಕ್ಕದ ಈ ಕೊರತೆಯನ್ನು ತುಂಬಲಾಗುವುದು. ಬಂಡವಾಳ ಲೆಕ್ಕದಲ್ಲಿ ಹೆಚ್ಚಳವನ್ನು ಸೃಷ್ಟಿಸಲು ಮೂರು ವಿಧಾನಗಳಿವೆ. ಅವೆಂದರೆ:

1. ಹಿಂದಿನ ಅವಧಿಯಲ್ಲಿ ಗಳಿಸಿ ವಿದೇಶಗಳಲ್ಲಿ ನಿಧಿಯಾಗಿ ಇಟ್ಟಿರುವ ಹಣವನ್ನು ಬಳಸಿಕೊಳ್ಳ ಬಹುದು.
2. ಚಿನ್ನವನ್ನು ರಫ್ತು ಮಾಡಬಹುದು ಅಥವಾ ಬಂಡವಾಳ ಸ್ವತ್ತುಗಳನ್ನು ಮಾರ ಬಹುದು.
3. ವಿದೇಶಗಳಿಂದ ಸಾಲಗಳನ್ನು ಪಡೆಯಬಹುದು.

ಇವೆಲ್ಲವೂ ಬಂಡವಾಳ ಲೆಕ್ಕದ ಜಮೆಯ ಭಾಗದಲ್ಲಿ ಬರುತ್ತವೆ. ಆದ್ದರಿಂದ ಚಾಲ್ತಿ ಲೆಕ್ಕದ ಕೊರತೆ ಮತ್ತು ಬಂಡವಾಳ ಲೆಕ್ಕದ ಹೆಚ್ಚಳ ಸಮನಾಗುತ್ತವೆ.

ಪಾವತಿ ಶಿಲ್ಕಿನ ಅಸಮತೋಲನಕ್ಕೆ ಕಾರಣಗಳು

(Reasons for Disequilibrium in the Balance of Payments)

ಲೆಕ್ಕಾಚಾರದ ದೃಷ್ಟಿಯಿಂದ ಪಾವತಿ ಶಿಲ್ಕು ಸಮತೋಲನದಲ್ಲಿರುತ್ತದೆ. ಅಂದರೆ ಚಾಲ್ತಿ ಲೆಕ್ಕವು ಬಂಡವಾಳ ಲೆಕ್ಕಕ್ಕೆ ಸಮನಾಗಿರುತ್ತದೆ ಎಂದು ಹೇಳುತ್ತೇವೆ. ಆದರೆ ಆರ್ಥಿಕ ದೃಷ್ಟಿಯಿಂದ ಪಾವತಿ ಶಿಲ್ಕು ಅಸಮತೋಲನದಲ್ಲಿರಬಹುದು. ರಫ್ತುಗಳ ಮೌಲ್ಯಕ್ಕಿಂತ ಆಮದುಗಳ ಮೌಲ್ಯವು ಹೆಚ್ಚಿದಾಗ ಚಾಲ್ತಿ ಲೆಕ್ಕದಲ್ಲಿ ಅಸಮತೋಲನ ಸಂಭವಿಸುತ್ತದೆ. ಈ ಕೊರತೆಯನ್ನು ತುಂಬಲು ಬಂಡವಾಳ ಲೆಕ್ಕದಲ್ಲಿ ಹೆಚ್ಚಳ ತೋರಿಸಬಹುದು ಅಷ್ಟೆ. ಆದರೆ ದೇಶದ ಆರ್ಥಿಕ ಪರಿಸ್ಥಿತಿಯ ದೃಷ್ಟಿಯಿಂದ ಈ ಕೊರತೆಯು ಕೊರತೆಯಾಗಿಯೇ ಉಳಿದು, ಪಾವತಿ ಶಿಲ್ಕಿನಲ್ಲಿ ಅಸಮತೋಲನವನ್ನು ಸೂಚಿಸುತ್ತದೆ. ಇದಕ್ಕೆ ಹಲವಾರು ಕಾರಣಗಳಿವೆ. ಅವುಗಳನ್ನು ಕೆಳಗೆ ವಿವರಿಸಿದೆ.

1. ವಿಪರೀತ ಅಭಿವೃದ್ಧಿ ಆಮದುಗಳು (Excessive Developmental Imports) ಅಭಿವೃದ್ಧಿಯ ಪ್ರಾರಂಭಾವಸ್ಥೆಯಲ್ಲಿರುವ ದೇಶದಲ್ಲಿ ಆಮದುಗಳ ಗಾತ್ರ ಮತ್ತು ಮೌಲ್ಯ ವಿಪರೀತವಾಗಿರುತ್ತವೆ. ವಿವಿಧ ರೀತಿಗಳ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳುವುದಕ್ಕೆ ಮತ್ತು ಬಂಡವಾಳ ಸಂಚಯನದ ಕಾರ್ಯಕ್ಕಾಗಿ ಅಸಾಧಾರಣ ಮೌಲ್ಯದ ಯಂತ್ರಗಳು, ಯಂತ್ರೋಪಕರಣಗಳು ಮೊದಲಾದವು ಆವಶ್ಯಕ ವಾಗಿರುತ್ತವೆ. ಜೊತೆಗೆ ಕಚ್ಚಾವಸ್ತುಗಳು, ಸಿದ್ಧಪಡಿಸಿದ ಸರಕುಗಳು ಮತ್ತು ಆಹಾರಧಾನ್ಯಗಳನ್ನು ಆಮದು ಮಾಡಿಕೊಳ್ಳುವ ಅಗತ್ಯವಿರುತ್ತದೆ. ಆದರೆ ಅಭಿವೃದ್ಧಿ ಹೊಂದುತ್ತಿರುವ ದೇಶದ ರಫ್ತುಗಳು ತೀರಾ ಕಡಿಮೆ ಇರುತ್ತವೆ ಮತ್ತು ಅವು ರಫ್ತು ಮಾಡುವ ಸರಕುಗಳು ಪ್ರಾಥಮಿಕ ಸರಕುಗಳಾಗಿರುವುದರಿಂದ ಅವುಗಳಿಗೆ ದೊರೆಯುವ ಬೆಲೆ ಬಹಳ ಕಡಿಮೆ ಇರುತ್ತದೆ. ಈ

ಪರಿಣಾಮವಾಗಿ ಭಾರತದಂತಹ ಅಭಿವೃದ್ಧಿಶೀಲ ದೇಶದ ಸಂದಾಯ ಶಿಲ್ಕಿನಲ್ಲಿ ಅಸಮತೋಲನ ಸಂಭವಿಸುವುದು ಸ್ವಾಭಾವಿಕ.

2. ಅತಿ ಪ್ರಸರಣ (Inflation): ಅತಿ ಪ್ರಸರಣವು ದೇಶದ ಪಾವತಿ ಶಿಲ್ಕಿನ ಅಸಮತೋಲನಕ್ಕೆ ಇನ್ನೊಂದು ಪ್ರಮುಖ ಕಾರಣವಾಗಿದೆ. ಅತಿ ಪ್ರಸರಣದ ಸಮಯದಲ್ಲಿ ಸ್ವದೇಶೀ ಸರಕುಗಳ ಬೆಲೆಗಳು ಏರಿರುವುದರಿಂದ ವಿದೇಶಗಳಲ್ಲಿ ಆ ಸರಕುಗಳಿಗೆ ಬೇಡಿಕೆ ಕುಸಿಯುತ್ತದೆ. ಇದರಿಂದಾಗಿ ರಫ್ತುಗಳು ಕಡಿಮೆಯಾಗುತ್ತವೆ. ತದ್ವಿರುದ್ಧವಾಗಿ, ಆಮದುಗಳು ಹೆಚ್ಚುತ್ತವೆ. ಏಕೆಂದರೆ ಅತಿ ಪ್ರಸರಣದ ಕಾಲದಲ್ಲಿ ಜನರಲ್ಲಿ ಖರ್ಚು ಮಾಡಬಹುದಾದ ಹಣದ ಪ್ರಮಾಣ ಹೆಚ್ಚಾಗುವುದರಿಂದ ಸರಕುಗಳಿಗೆ ಸ್ವದೇಶೀ ಬೇಡಿಕೆ ಹೆಚ್ಚುತ್ತದೆ. ಆದರೆ ವಿದೇಶಿ ಸರಕುಗಳು ಸ್ವದೇಶೀ ಸರಕುಗಳಿಗಿಂತ ಕಡಿಮೆ ಬೆಲೆಯಲ್ಲಿ ದೊರೆಯುವುದರಿಂದ ಆಮದುಗಳು ಅನಿವಾರ್ಯವಾಗಿ ಹೆಚ್ಚುತ್ತವೆ.

3. ನೈಸರ್ಗಿಕ ವಿಪತ್ತುಗಳು (Natural Calamities) ಅನಾವೃಷ್ಟಿ, ಭೂಕಂಪಗಳು, ಕ್ಷಾಮ, ಬೆಳೆಯ ನಷ್ಟ ಇತ್ಯಾದಿ ನೈಸರ್ಗಿಕ ವಿಪತ್ತುಗಳ ಪರಿಣಾಮವಾಗಿ ಉತ್ಪಾದನೆಯ ನಷ್ಟವಾಗುತ್ತದೆ ಮತ್ತು ಸರಕುಗಳ ಕೊರತೆ ಸಂಭವಿಸುತ್ತದೆ. ನೈಸರ್ಗಿಕ ವಿಪತ್ತುಗಳ ದುಷ್ಪರಿಣಾಮಗಳನ್ನು ನಿಭಾಯಿಸಲು ಹೆಚ್ಚಿನ ಪ್ರಮಾಣದ ಆಮದುಗಳನ್ನು ಮಾಡಿಕೊಳ್ಳ ಬೇಕಾಗುತ್ತದೆ. ಈ ಕಾರಣದಿಂದ ಪಾವತಿ ಶಿಲ್ಕಿನಲ್ಲಿ ಅಸಮತೋಲನ ಉಂಟಾಗುತ್ತದೆ.

4. ಸಂಪನ್ಮೂಲಗಳ ಬರಿದಾಗುವಿಕೆ (Exhaustion of Resources): ರಫ್ತು ಗಳಿಗೆ ಮತ್ತು ಕೈಗಾರೀಕರಣಕ್ಕೆ ನೆರವಾಗುವಂತಹ ನೈಸರ್ಗಿಕ ಸಂಪನ್ಮೂಲಗಳು ಕಾಲಕ್ರಮೇಣ ಕೊರತೆಯಾಗಬಹುದು ಅಥವಾ ಬರಿದಾಗಬಹುದು. ಆಗ ಉತ್ಪಾದನ ವ್ಯವಸ್ಥೆಯ ಮೇಲೆ ಮಾರಕವಾದ ಪರಿಣಾಮ ಸಂಭವಿಸುತ್ತದೆ. ಸೂಕ್ತ ಸಂಪನ್ಮೂಲಗಳ ಲಭ್ಯತೆ ಇಲ್ಲದೆ ಸರಕುಗಳ ಉತ್ಪಾದನೆಯನ್ನು ಕೈಗೊಳ್ಳಲು ಸಾಧ್ಯವೇ ಆಗುವುದಿಲ್ಲ. ಅಂತಹ ಸಂದರ್ಭದಲ್ಲಿ ಸರಕುಗಳನ್ನು ಮಾತ್ರವಲ್ಲದೆ ಕೆಲವು ಕಚ್ಚಾವಸ್ತುಗಳನ್ನೂ ಸಹ ಅನಿವಾರ್ಯವಾಗಿ ಆಮದು ಮಾಡಿಕೊಳ್ಳಬೇಕಾಗುವುದರಿಂದ ಪಾವತಿ ಶಿಲ್ಕಿನಲ್ಲಿ ಅಸಮತೋಲನ ಆಗುತ್ತದೆ.

5. ಉದ್ಯಮ ಚಕ್ರಗಳು (Business Cycles): ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಉದ್ಯಮ ಚಕ್ರಗಳ ಸಂಭವಿಸುವಿಕೆಯು ಪಾವತಿ ಶಿಲ್ಕಿನಲ್ಲಿ ಅಸಮತೋಲನಕ್ಕೆ ಒಂದು ಮುಖ್ಯ ಸಂಗತಿಯಾಗಿದೆ. ಉದಾಹರಣೆಗೆ, ಒಂದು ದೇಶದಲ್ಲಿ ಮುಗ್ಗಟ್ಟು ಇರುತ್ತದೆ ಎಂದು ಭಾವಿಸೋಣ. ಆಗ ಅಲ್ಲಿ ಉದ್ಯೋಗ, ಬೆಲೆಗಳು ಮತ್ತು ಆದಾಯ ಕೆಳಮಟ್ಟದಲ್ಲಿರುವುದರಿಂದ ನಮ್ಮ ದೇಶದ ರಫ್ತುಗಳಿಗೆ ಬೇಡಿಕೆ ಇರುವುದಿಲ್ಲ. ಬದಲಾಗಿ ನಮ್ಮ ದೇಶದಲ್ಲಿ ಸಮೃದ್ಧಿ ಇದ್ದರೆ ಜನರಲ್ಲಿ ಖರ್ಚು ಮಾಡಬಹುದಾದ ಹಣ ಹೆಚ್ಚಾಗಿರುವುದರಿಂದ ಮತ್ತು ಸ್ವದೇಶೀ ಸರಕುಗಳಿಗಿಂತ ವಿದೇಶಿ ಸರಕುಗಳ ಬೆಲೆಗಳು ಕಡಿಮೆ ಇರುವುದರಿಂದ ಆಮದುಗಳು ಜಾಸ್ತಿಯಾಗುತ್ತವೆ. ರಫ್ತುಗಳ ಕುಗ್ಗುವಿಕೆ ಮತ್ತು ಆಮದುಗಳ ಹೆಚ್ಚಳದ ಪರಿಣಾಮವಾಗಿ ಪಾವತಿ ಶಿಲ್ಕಿನಲ್ಲಿ ತೀವ್ರ ಅಸಮತೋಲನ ಪರಿಣಮಿಸಬಹುದು.

6. ರಚನಾತ್ಮಕ ಬದಲಾವಣೆಗಳು (Structural Changes): ವಿವಿಧ ದೇಶಗಳ ಆರ್ಥಿಕ ಸ್ಥಿತಿಗತಿಗಳಲ್ಲಿ ಸಂಭವಿಸುವ ರಚನಾತ್ಮಕ ಬದಲಾವಣೆಗಳು ವ್ಯಾಪಾರದ ದಿಕ್ಕು ಮತ್ತು ಸಂಯೋಜನೆಯನ್ನೇ ಬದಲಾಯಿಸುವ ಮೂಲಕ ಪಾವತಿ ಶಿಲ್ಕಿನ ಅಸಮತೋಲನಕ್ಕೆ ಕಾರಣವಾಗಬಹುದು. ನಮ್ಮ ದೇಶದ ಸರಕುಗಳಿಗೆ ವಿದೇಶಿ ಅನುಭೋಗಿಗಳ ಒಲವು ಮತ್ತು ಅಭಿರುಚಿಗಳಲ್ಲಾಗುವ ಬದಲಾವಣೆಗಳು, ಬದಲಿ ವಸ್ತುಗಳ ಲಭ್ಯತೆ, ಪೂರೈಕೆಯ ಬದಲಿ ಮೂಲಗಳನ್ನು ಕಂಡುಹಿಡಿಯುವಿಕೆ ಮೊದಲಾದ ಸಂಗತಿಗಳಿಂದಾಗಿ ನಮ್ಮ ದೇಶದ ರಫ್ತು ಸರಕುಗಳಿಗೆ ಬೇಡಿಕೆ ತಗ್ಗುವುದು ಸಹಜ. ಉದಾಹರಣೆಗೆ, ಭಾರತದ ಕಾಫಿಗೆ ವಿದೇಶಗಳಲ್ಲಿ ಮೊದಲು ಬಹಳ ಬೇಡಿಕೆ ಇತ್ತೆಂದು ತಿಳಿಯೋಣ. ಈಗ ವಿದೇಶಗಳಲ್ಲಿ ಕಾಫಿಯ ಸೇವನೆ ಕಡಿಮೆಯಾದುದರಿಂದ, ಅಥವಾ ಕಾಫಿಗೆ ಬದಲಾಗಿ ಬೇರೆ ಪೇಯದ ಸೇವನೆ ಹೆಚ್ಚಿದುದರಿಂದ, ಅಥವಾ ನಮ್ಮ ದೇಶದ ಕಾಫಿಗಿಂತ ಉತ್ತಮ ಗುಣಮಟ್ಟದ ಕಾಫಿಯನ್ನು ಬೇರೆ ದೇಶಗಳು ಉತ್ಪಾದಿಸಿ ಪೂರೈಸುವಂತಿದ್ದರೆ ಆಗ ನಮ್ಮ ದೇಶದ ಕಾಫಿಗೆ ವಿದೇಶಗಳಲ್ಲಿ ಬೇಡಿಕೆ ತಗ್ಗುವುದು ಸ್ವಾಭಾವಿಕ. ಇದರಿಂದ ಕೂಡಲೇ ಭಾರತದಲ್ಲಿ ಪಾವತಿ ಶಿಲ್ಕಿನ ಬಿಕ್ಕಟ್ಟು ತಲೆದೋರುತ್ತದೆ.

7. ತಾಂತ್ರಿಕ ಬದಲಾವಣೆ (Technical Change): ವಿವಿಧ ದೇಶಗಳ ನಡುವೆ ತಾಂತ್ರಿಕ ಬೆಳವಣಿಗೆಯ ದರದಲ್ಲಿ ಭಿನ್ನತೆ ಇರುವಿಕೆಯು ಪಾವತಿ ಶಿಲ್ಕಿನ ಅಸಮತೋಲನಕ್ಕೆ ಇನ್ನೊಂದು ಕಾರಣವಾಗಿದೆ. ಉದಾಹರಣೆಗೆ, ನಮ್ಮ ದೇಶದಲ್ಲಿರುವುದಕ್ಕಿಂತಲೂ ವಿದೇಶಗಳಲ್ಲಿರುವ ತಂತ್ರಜ್ಞಾನವು ಉತ್ತಮ ಗುಣಮಟ್ಟದ್ದೆಂದು ಊಹಿಸೋಣ. ವಿದೇಶಗಳಲ್ಲಿ ಕಡಿಮೆ ಉತ್ಪಾದನ ವೆಚ್ಚದಲ್ಲಿ ಶ್ರೇಷ್ಠ ಗುಣಮಟ್ಟದ ಸರಕುಗಳನ್ನು ಉತ್ಪಾದಿಸಲು ಇದರಿಂದ ಸಾಧ್ಯವಿರುತ್ತದೆ. ಕೆಳಮಟ್ಟದ ತಂತ್ರಜ್ಞಾನದ ಅಸ್ತಿತ್ವದಿಂದಾಗಿ ನಮ್ಮ ದೇಶದಲ್ಲಿ ಉತ್ಪಾದನ ವೆಚ್ಚ ಸಾಪೇಕ್ಷವಾಗಿ ಹೆಚ್ಚಿರುತ್ತದೆ. ಆದುದರಿಂದ ಸರಕುಗಳ ಬೆಲೆ ಅಧಿಕ ಹಾಗೂ ಗುಣಮಟ್ಟ ಕಡಿಮೆ ಇರುತ್ತದೆ. ಈ ಪರಿಣಾಮವಾಗಿ ನಮ್ಮ ರಫ್ತುಗಳಿಗೆ ಮಾರುಕಟ್ಟೆ ಕುಸಿಯುತ್ತದೆ, ಆದರೆ ನಮ್ಮ ಆಮದುಗಳು ಏರುತ್ತವೆ.

8. ಉತ್ಪಾದನೆಯ ನಷ್ಟ (Loss of Production): ರಾಜಕೀಯ ಅಸ್ಥಿರತೆ, ಕೈಗಾರಿಕೆಗಳಲ್ಲಿ ಮುಷ್ಕರ, ಬೀಗಮುದ್ರೆ (Lockout) ಮೊದಲಾದ ಕಾರಣಗಳಿಂದಾಗಿ ಉತ್ಪಾದನೆಯು ನಷ್ಟವಾಗಬಹುದು. ಇದರ ಪರಿಣಾಮವೆಂದರೆ ಆಮದುಗಳ ಹೆಚ್ಚಳ ಮತ್ತು ರಫ್ತುಗಳ ಕುಸಿತ.

9. ಕೆಳಮಟ್ಟದ ಸಾಂಸ್ಥಿಕ ಪ್ರಗತಿ (Low Level Institutional Progress): ಸಾಗಣೆ, ಬ್ಯಾಂಕೋದ್ಯಮ, ವಿಮೆ ಮೊದಲಾದ ಕ್ಷೇತ್ರಗಳಲ್ಲಿ ಒಂದು ದೇಶವು ಮುನ್ನಡೆ ಸಾಧಿಸಿರದಿದ್ದರೆ ಚಾಲ್ತಿ ಲೆಕ್ಕದಲ್ಲಿ ಆದರ ಜಮೆ ಕಡಿಮೆಯಾಗುತ್ತದೆ. ಬದಲಾಗಿ, ಈ ಮೇಲೆ ತಿಳಿಸಿದ ಸೇವೆಗಳಿಗೆ ಅದು ವಿದೇಶಗಳನ್ನು ಅವಲಂಬಿಸುವುದರಿಂದ ಆ ದೇಶದ ವಿರ್ಜಗಳು ಹೆಚ್ಚುತ್ತವೆ. ಇದರಿಂದ ಪಾವತಿ ಶಿಲ್ಕಿನ ಅಸಮತೋಲನವೇರ್ಪಡುತ್ತದೆ.

ಪಾವತಿ ಶಿಲ್ಕಿನ ಅಸಮತೋಲನದ ವಿವಿಧ ವಿಧಗಳು

(Different Types of Balance of Payments Disequilibrium)

ಪಾವತಿ ಶಿಲ್ಕಿನಲ್ಲಿ ಸಂಭವಿಸುವ ಅಸಮತೋಲನದಲ್ಲಿ ಅನೇಕ ವಿಧಗಳಿರುತ್ತವೆ. ಅವುಗಳಲ್ಲಿ ಮುಖ್ಯವಾದ ವಿಧಗಳನ್ನು ಕೆಳಗಿನಂತೆ ವಿವರಿಸಬಹುದು.

1. ತಾತ್ಕಾಲಿಕ ಅಸಮತೋಲನ (Temporary Disequilibrium) : ದೇಶದಲ್ಲಿ ತಾತ್ಕಾಲಿಕ ವಾಗಿ ಸಂಭವಿಸುವ, ಆದರೆ ಕ್ರಮಬದ್ಧವಾಗಿ ಮರುಕಳಿಸದ, ಕೆಲವು ಘಟನೆಗಳ ಕಾರಣದಿಂದ ಪಾವತಿ ಶಿಲ್ಕಿನಲ್ಲಿ ತಾತ್ಕಾಲಿಕ ಅಸಮತೋಲನವು ಕಾಣಿಸಿಕೊಳ್ಳಬಹುದು. ಇಂತಹ ಪ್ರಮುಖ ಘಟನೆಗಳೆಂದರೆ, ಬೆಳೆಯ ನಾಶಕ್ಕೆ ಕಾರಣವಾಗುವ ಕೀಟಬಾಧೆ, ಭೂಕಂಪಗಳು, ಅನಾವೃಷ್ಟಿ, ಕಾರ್ಮಿಕರ ದೀರ್ಘಾವಧಿಯ ಮುಷ್ಕರ ಇತ್ಯಾದಿ. ಇಂತಹ ಘಟನೆಗಳ ಕಾರಣದಿಂದ ಉತ್ಪಾದನೆಯು ಕಡಿಮೆಯಾಗುತ್ತದೆ, ಸರಕುಗಳ ಕೊರತೆಯು ಸಂಭವಿಸುತ್ತದೆ, ರಫ್ತುಗಳು ಕಡಿಮೆಯಾಗುತ್ತವೆ ಮತ್ತು ಆಮದುಗಳು ಹೆಚ್ಚುತ್ತವೆ. ಇದರ ಪರಿಣಾಮವಾಗಿ ಪಾವತಿ ಶಿಲ್ಕಿನಲ್ಲಿ ಅಸಮತೋಲನವೇರ್ಪಡುತ್ತದೆ.

2. ಚಕ್ರೀಯ ಅಸಮತೋಲನ (Cyclical Disequilibrium) : ಒಂದು ದೇಶದ ಪಾವತಿ ಶಿಲ್ಕಿನ ಕೊರತೆ ಅಥವಾ ಹೆಚ್ಚುವರಿಯು ಚಕ್ರೀಯ ರೂಪದಲ್ಲಿ ಮರುಕಳಿಸುವ ಪರಿಸ್ಥಿತಿಗೆ ಚಕ್ರೀಯ ಅಸಮತೋಲನ ಎಂದು ಹೆಸರು. ಇಂತಹ ಅಸಮತೋಲನದಲ್ಲಿ ಪಾವತಿ ಶಿಲ್ಕಿನ ಕೊರತೆ ಮತ್ತು ಹೆಚ್ಚುವರಿ ಪರ್ಯಾಯವಾಗಿ, ಅಂದರೆ ಒಂದರ ನಂತರ ಇನ್ನೊಂದು ಸಂಭವಿಸುತ್ತವೆ. ಉದಾಹರಣೆಗೆ, ಒಂದು ದೇಶದಲ್ಲಿ ಈ ವರ್ಷ ಅನುಕೂಲಕರವಾದ ಅಥವಾ ಹೆಚ್ಚುವರಿ ಪಾವತಿ ಶಿಲ್ಕು ಅಸ್ತಿತ್ವದಲ್ಲಿದ್ದರೆ ಮುಂದಿನ ವರ್ಷ ಕೊರತೆಯ ಅಥವಾ ಅನಾನುಕೂಲಕರ ಪಾವತಿ ಶಿಲ್ಕಿನ ಪರಿಸ್ಥಿತಿಯು ಹಿಂಬಾಲಿಸುತ್ತದೆ. ಪಾವತಿ ಶಿಲ್ಕಿನ ಚಕ್ರೀಯ ಅಸಮತೋಲನವು ಉದ್ಯಮ ಚಕ್ರಗಳಂತೆ ಕ್ರಮಬದ್ಧವಾಗಿ ಸಂಭವಿಸುತ್ತದೆ. ಇಂತಹ ಅಸಮತೋಲನವು ಉದ್ಯಮ ಚಕ್ರಗಳೊಂದಿಗೆ ನಿಕಟವಾಗಿ ಹೊಂದಿಕೊಂಡಿರುತ್ತದೆ.

3. ಸಂರಚನ ಸಂಬಂಧಿ ಅಸಮತೋಲನ (Structural Disequilibrium) : ದೇಶದ ಅರ್ಥವ್ಯವಸ್ಥೆಯ ಸಂರಚನೆಗೆ ಸಂಬಂಧಿಸಿದ ವಿಷಯಗಳಲ್ಲಿ ಬದಲಾವಣೆಗಳು ಸಂಭವಿಸಿದಾಗ ಇಂತಹ ಅಸಮತೋಲನವು ಏರ್ಪಡುತ್ತದೆ. ಜನರ ಅಭಿರುಚಿಗಳು, ಶೈಲಿಗಳು, ತಂತ್ರಜ್ಞಾನ ಮೊದಲಾದವುಗಳಲ್ಲಿ ಬದಲಾವಣೆಗಳು ಸಂಭವಿಸಿದಾಗ ಸಂರಚನ ಸಂಬಂಧಿ ಬದಲಾವಣೆಗಳು ಜರುಗುತ್ತವೆ. ಅಂತಹ ಸಂದರ್ಭಗಳಲ್ಲಿ ಜನರು ಸ್ವದೇಶೀ ಸರಕುಗಳಿಗೆ ಮತ್ತು ಸೇವೆಗಳಿಗೆ ಬದಲಾಗಿ ವಿದೇಶಿ ಸರಕುಗಳ ಮತ್ತು ಸೇವೆಗಳ ಬಗೆಗೆ ಒಲವನ್ನು ವ್ಯಕ್ತಪಡಿಸುತ್ತಾರೆ. ಸಂರಚನ ಸಂಬಂಧಿ ಬದಲಾವಣೆಗಳ ಕಾರಣದಿಂದ ದೇಶದ ಪಾವತಿ ಶಿಲ್ಕಿನಲ್ಲಿ ಕೊರತೆ ಅಥವಾ ಹೆಚ್ಚುವರಿ ಕಾಣಿಸಿಕೊಳ್ಳಬಹುದು.

ಪಾವತಿ ಶಿಲ್ಕಿನಲ್ಲಿ ಸಂರಚನ ಸಂಬಂಧಿ ಅಸಮತೋಲನಕ್ಕೆ ಕೆಲವು ಉದಾಹರಣೆಗಳನ್ನು ನೀಡಬಹುದು.

ವಿದೇಶಿಯರ ಅಭಿರುಚಿಗಳ ಬದಲಾವಣೆಯಿಂದಾಗಿ ಭಾರತದ ಬಟ್ಟೆಗೆ ವಿದೇಶಿ ಬೇಡಿಕೆ ಕಡಿಮೆಯಾಗುತ್ತದೆ ಎಂದು ಭಾವಿಸೋಣ. ಇದು ಭಾರತದಲ್ಲಿ ಬಟ್ಟೆಯ ಉತ್ಪಾದನೆಯ ಮೇಲೆ ದುಷ್ಪರಿಣಾಮಗಳನ್ನು ಬೀರುತ್ತದೆ. ಹತ್ತಿಯ ಮತ್ತು ಬಟ್ಟೆಯ ಉತ್ಪಾದನೆ ಕಡಿಮೆಯಾಗುತ್ತದೆ, ಹತ್ತಿಯ ಸಾಗುವಳಿಯಲ್ಲಿ ಮತ್ತು ಹತ್ತಿ ಜವಳಿ ಕೈಗಾರಿಕೆಯಲ್ಲಿ ಹೂಡಿಕೆಯು ಕುಸಿಯುತ್ತದೆ, ಉದ್ಯೋಗಾವಕಾಶಗಳು ಕಡಿಮೆಯಾಗುತ್ತವೆ ಮತ್ತು ಬಟ್ಟೆಯ ಉತ್ಪಾದನೆಗೆ ಸಂಬಂಧಿಸಿದ ಇತರ ಕೈಗಾರಿಕೆಗಳಲ್ಲಿಯೂ ಹೂಡಿಕೆಯ ಪ್ರಮಾಣ ಮತ್ತು ಉದ್ಯೋಗಾವಕಾಶಗಳು ಇಳಿಯುತ್ತವೆ. ಹತ್ತಿಯ ಬಟ್ಟೆ ಮತ್ತು ಅದಕ್ಕೆ ಸಂಬಂಧಿಸಿದ ಇತರ ಸರಕುಗಳ ಉತ್ಪಾದನೆಗೆ ಬಳಸಲಾಗುತ್ತಿದ್ದ ಸಂಪನ್ಮೂಲಗಳನ್ನು, ವಿದೇಶಿಯರ ಅಭಿರುಚಿಗಳ ಬದಲಾವಣೆಯಿಂದ ಯಾವ ಸರಕಿಗೆ ಬೇಡಿಕೆಗೆ ಹೆಚ್ಚಿದೆಯೋ ಆ ಸರಕಿನ ಉತ್ಪಾದನೆಗೆ ವರ್ಗಾಯಿಸಬೇಕಾಗುತ್ತದೆ. ಭಾರತದ ಬಟ್ಟೆಯ ರಫ್ತುಗಳು ಕುಸಿದರೆ ಮತ್ತು ಅದರ ಆಮದುಗಳು ಮೊದಲಿನಂತೆಯೇ ಇದ್ದರೆ ಅಥವಾ ಇನ್ನೂ ಹೆಚ್ಚಿದರೆ ಅದರ ಪಾವತಿ ಶಿಲ್ಕಿನಲ್ಲಿ ಅಸಮತೋಲನ ಏರ್ಪಡುತ್ತದೆ.

ಪೂರ್ಣಕೆಯ ಭಾಗದಲ್ಲಿಯೂ ಸಹ ಸಂರಚನ ಸಂಬಂಧಿ ಬದಲಾವಣೆಗಳು ಸಂಭವಿಸಬಹುದು. ಉದಾಹರಣೆಗೆ, ಒಂದು ದೇಶದಲ್ಲಿ ಹೊಸ ಎಣ್ಣೆ ಭಾವಿಗಳ ಶೋಧ ದೊಂದಿಗೆ ಕಚ್ಚಾ ತೈಲದ ಉತ್ಪಾದನೆ ಮತ್ತು ರಫ್ತುಗಳು ಹೆಚ್ಚುತ್ತವೆ ಎಂದು ಭಾವಿಸೋಣ. ಇದರಿಂದಾಗಿ ದೇಶದ ಪಾವತಿ ಶಿಲ್ಕಿನಲ್ಲಿ ಅನುಕೂಲಕರವಾದ ಪರಿಸ್ಥಿತಿ ಏರ್ಪಡುತ್ತದೆ.

4. ಮೂಲಭೂತ ಅಸಮತೋಲನ (Fundamental Disequilibrium) : ಯಾವುದೇ ಒಂದು ದೇಶದ ಪಾವತಿ ಶಿಲ್ಕಿನಲ್ಲಿ ನಿರಂತರವಾದ ಮತ್ತು ನಿತ್ಯವಾಗಿರುವ ಅಸಮತೋಲನವು ಉದ್ಭವಿಸಿದರೆ ಅದನ್ನು ಮೂಲಭೂತ ಅಸಮತೋಲನ ಎಂದು ಕರೆಯಲಾಗುತ್ತದೆ. ದೇಶದ ಅರ್ಥವ್ಯವಸ್ಥೆಯ ಸಂರಚನೆಯಲ್ಲಿ ಸಂಭವಿಸುವ ಕ್ಷಿಪ್ರಗತಿಯ ಮತ್ತು ಗಮನಾರ್ಹವಾದ ಬದಲಾವಣೆಗಳ ಕಾರಣದಿಂದ ಮೂಲಭೂತ ಅಸಮತೋಲನವು ಉದ್ಭವಿಸಬಹುದು. ಏಕೆಂದರೆ ಇಂತಹ ಬದಲಾವಣೆಗಳು ರಫ್ತುಗಳ ಮತ್ತು ಆಮದುಗಳ ಸಂಯೋಜನೆಯ ಮೇಲೆ ಪ್ರಭಾವವನ್ನು ಬೀರುವ ಕಾರಣದಿಂದ ಈ ಅಸಮತೋಲನವು ಏರ್ಪಡುತ್ತದೆ. ಅಂತೆಯೇ ಇತರ ದೇಶಗಳಲ್ಲಿ ತೀವ್ರಗಾಮಿಯಾದ ಬದಲಾವಣೆಗಳು ಸಂಭವಿಸಿದಾಗ ಅವುಗಳು ಬೀರುವ ಪ್ರಭಾವದಿಂದಲೂ ಒಂದು ದೇಶದ ಪಾವತಿ ಶಿಲ್ಕು ಅಸಮತೋಲನಕ್ಕೆ ಒಳಗಾಗಬಹುದು. ಅಲ್ಲದೆ ಆ ದೇಶದ ಮತ್ತು ಇತರ ದೇಶಗಳ ಹಣಸಂಬಂಧಿ ನೀತಿ ಮತ್ತು ಕೋಶೀಯ ನೀತಿಗಳೂ ಸಹ ಯಾವುದೊಂದು ದೇಶದ ಪಾವತಿ ಶಿಲ್ಕಿನ ಅಸಮತೋಲನಕ್ಕೆ ಕಾರಣವಾಗಬಹುದು.

ಮೂಲಭೂತ ಅಸಮತೋಲನದ ಸ್ಥಿತಿಯಲ್ಲಿ ಪಾವತಿ ಶಿಲ್ಕಿನಲ್ಲಿ ನಿರಂತರವಾದ ಕೊರತೆ ಕಾಣಿಸಿಕೊಳ್ಳುವುದರಿಂದ ಆ ದೇಶವು ಸತತವಾಗಿ ಚಿನ್ನವನ್ನು ಕಳೆದುಕೊಳ್ಳುತ್ತಿದೆ

ಅಥವಾ ಸಂಚಿತ ವಿದೇಶಿ ವಿನಿಮಯದಲ್ಲಿ ಸತತವಾದ ಕುಸಿತವನ್ನು ಅನುಭವಿಸುತ್ತಿದೆ ಎಂದರ್ಥ. ಆದರೆ ಲೆಕ್ಕಾಚಾರದ ಉದ್ದೇಶದಿಂದ ಮೇಲ್ನೋಟಕ್ಕೆ ಪಾವತಿ ಶಿಲ್ಕು ಸಮತೋಲನದಲ್ಲಿದೆ ಎಂದು ತೋರಿಸಲಾದರೂ ಸಹ ದೇಶದ ಪಾವತಿ ಶಿಲ್ಕಿನಲ್ಲಿ ಮೂಲಭೂತವಾದ ಅಸಮತೋಲನವಿರುತ್ತದೆ.

5. ದೀರ್ಘಕಾಲೀನ ಅಸಮತೋಲನ (Secular Disequilibrium) : ದೇಶದಲ್ಲಿ ನಿರಂತರವಾದ ಮತ್ತು ಮಿತಿಮೀರಿದ ಜನಸಂಖ್ಯಾ ಏರಿಕೆ, ಸಂಪನ್ಮೂಲಗಳು ಬರಿದಾಗುವಿಕೆ, ಬಂಡವಾಳದ ಅಭಾವದ ಕಾರಣದಿಂದ ಉತ್ಪಾದನೆಯ ಕುಸಿತ ಮೊದಲಾದವುಗಳ ಪರಿಣಾಮದಿಂದ ಪಾವತಿ ಶಿಲ್ಕಿನಲ್ಲಿ ದೀರ್ಘಕಾಲೀನ ಅಸಮತೋಲನವೇರ್ಪಡ ಬಹುದು. ಭಾರತದಲ್ಲಿ ಇಂತಹ ಸ್ಥಿತಿಯನ್ನು ಗಮನಿಸಬಹುದಾಗಿದೆ. ಇದಕ್ಕೆ ವಿರುದ್ಧವಾಗಿ, ಪಾವತಿ ಶಿಲ್ಕಿನಲ್ಲಿ ದೀರ್ಘಾವಧಿಯ ಹೆಚ್ಚುವರಿಯೂ ಸಂಭವಿಸಬಹುದು. ಆರ್ಥಿಕಾಭಿವೃದ್ಧಿಯ ಯೋಜಿತ ಪ್ರಯತ್ನಗಳ ಮತ್ತು ನಿರಂತರ ಕಾರ್ಯಕ್ರಮಗಳ ಫಲವಾಗಿ ಒಂದು ದೇಶದ ಅರ್ಥವ್ಯವಸ್ಥೆಯು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಕೆಳಮಟ್ಟದಿಂದ ಮೇಲ್ಮಟ್ಟಕ್ಕೆ ಅಥವಾ ಒಂದು ಹಂತದಿಂದ ಮೇಲಿನ ಹಂತಕ್ಕೆ ಚಲಿಸುವ ಸಮಯದಲ್ಲಿ ದೀರ್ಘ ಕಾಲೀನ ಅಸಮತೋಲನವು ಉದ್ಭವಿಸುತ್ತದೆ. ಬಂಡವಾಳ ಸಂಚಯನದಲ್ಲಿ ಹೆಚ್ಚಳ, ತಂತ್ರಜ್ಞಾನ ಕ್ಷೇತ್ರದಲ್ಲಿ ಮುನ್ನಡೆ, ಪೂರ್ಣಕೆಯ ಹೊಸ ಮೂಲಗಳ ಅನ್ವೇಷಣೆ ಮೊದಲಾದ ಕಾರಣಗಳಿಂದ ಅರ್ಥವ್ಯವಸ್ಥೆಯಲ್ಲಿ ಈ ರೀತಿಯ ಅಭಿವೃದ್ಧಿ ಅಥವಾ ಪರಿವರ್ತನೆ ಸಂಭವಿಸಬಹುದು. ಈ ಕಾರಣಗಳಿಂದ ಪಾವತಿ ಶಿಲ್ಕಿನಲ್ಲಿ ನಿರಂತರವಾದ ಹೆಚ್ಚುವರಿಯು ಕಾಣಿಸಿಕೊಳ್ಳುತ್ತದೆ. ಪಶ್ಚಿಮ ಜರ್ಮನಿ ಮತ್ತು ಜಪಾನಿನಲ್ಲಿ ಕಳೆದ ಸುಮಾರು ಮೂರು ದಶಕಗಳಿಂದ ಈ ವಿಧದ ಹೆಚ್ಚುವರಿಯನ್ನು ಮತ್ತು ಅನುಕೂಲಕರ ಪಾವತಿಶಿಲ್ಕನ್ನು ಗಮನಿಸಬಹುದಾಗಿದೆ.

ಅಸಮತೋಲನವನ್ನು ಸರಿಪಡಿಸುವ ವಿಧಾನಗಳು
(Methods of Correcting Disequilibrium)

ಸಂದಾಯ ಶಿಲ್ಕಿನ ಅಸಮತೋಲನವನ್ನು ಈ ಕೆಳಗಿನ ಯಾವುದಾದರೂ ವಿಧಾನದ ಅಥವಾ ಎಲ್ಲಾ ವಿಧಾನಗಳ ಮೂಲಕ ಸರಿಪಡಿಸಲು ಕ್ರಮಗಳನ್ನು ಕೈಗೊಳ್ಳಬಹುದು.

1. ಕುಗ್ಗು ಪ್ರಸರಣ (Deflation) : ಅತಿ ಪ್ರಸರಣವು ಪಾವತಿ ಶಿಲ್ಕಿನ ಅಸಮತೋಲನಕ್ಕೆ ಒಂದು ಪ್ರಮುಖ ಕಾರಣವಾಗುತ್ತದೆಂದು ಮೊದಲೇ ತಿಳಿದಿದ್ದೇವೆ. ಆದ್ದರಿಂದ ಸರಕುಗಳ ಬೆಲೆಗಳನ್ನು ಇಳಿಸುವ ಮೂಲಕ ರಫ್ತುಗಳನ್ನು ಹೆಚ್ಚಿಸಿ, ಆಮದುಗಳನ್ನು ತಗ್ಗಿಸಿ ಸಂದಾಯ ಶಿಲ್ಕಿನ ಅಸಮತೋಲನವನ್ನು ಸರಿಪಡಿಸಬೇಕಾಗುತ್ತದೆ. ಅದಕ್ಕಾಗಿ ಚಲಾವಣೆಯಲ್ಲಿರುವ ಹಣದ ಪ್ರಮಾಣವನ್ನು ಕಡಿಮೆ ಮಾಡಬೇಕು. ಇದೇ ಕುಗ್ಗು ಪ್ರಸರಣದ ವಿಧಾನ. ಕೇಂದ್ರ ಬ್ಯಾಂಕು ಹೊಸ ಹಣದ ಮುದ್ರಣವನ್ನು ನಿಲ್ಲಿಸುವ ಮೂಲಕ, ಮುಕ್ತ ಮಾರುಕಟ್ಟೆಯಲ್ಲಿ ವಿನಿಯೋಜಕಗಳನ್ನು ಮಾರುವ ಮೂಲಕ, ವಾಣಿಜ್ಯ ಬ್ಯಾಂಕುಗಳು ನಗದು ಆಪದ್ಧನ

ಪ್ರಮಾಣವನ್ನು ಏರಿಸುವ ಮೂಲಕ ಅಥವಾ ಬ್ಯಾಂಕು ದರವನ್ನು ಏರಿಸುವ ಮೂಲಕ ಹಣದ ಪೂರೈಕೆಯನ್ನು ಕಡಿತಗೊಳಿಸಬಹುದು. ಕುಗ್ಗು ಪ್ರಸರಣದಿಂದ ಉತ್ಪಾದನ ವೆಚ್ಚವು ಇಳಿಯುತ್ತದೆ. ಉತ್ಪಾದನ ವೆಚ್ಚವು ಕಡಿಮೆಯಾಗುವುದರಿಂದ ಸ್ವದೇಶೀ ಸರಕುಗಳ ಬೆಲೆಗಳು ಕುಸಿಯುತ್ತವೆ. ಆದ್ದರಿಂದ ಈ ಸರಕುಗಳಿಗೆ ವಿದೇಶಗಳಲ್ಲಿ ಬೇಡಿಕೆಯು ಏರುತ್ತದೆ. ಇದರಿಂದಾಗಿ ರಫ್ತುಗಳ ಹೆಚ್ಚಳಕ್ಕೆ ಅವಕಾಶ ಲಭಿಸುತ್ತದೆ. ಅಲ್ಲದೆ ಸ್ವದೇಶೀ ಸರಕುಗಳು ಕಡಿಮೆ ಬೆಲೆಯಲ್ಲಿ ದೊರೆಯುವುದರಿಂದ ಆಮದುಗಳನ್ನು ಕಡಿತಗೊಳಿಸಲಾಗುತ್ತದೆ.

ಆದರೆ ಕುಗ್ಗು ಪ್ರಸರಣದ ವಿಧಾನವು ಕೆಲವು ಮಿತಿಗಳಿಂದ ಕೂಡಿದೆ ಎಂಬುದನ್ನು ನೆನಪಿನಲ್ಲಿಡಬೇಕಾಗಿದೆ. ಕುಗ್ಗು ಪ್ರಸರಣ ಮತ್ತು ಬೆಲೆಗಳ ಇಳಿತದಿಂದ ಉದ್ಯಮ ಲಾಭಗಳು ಕಡಿಮೆಯಾಗುತ್ತವೆ. ಇದರಿಂದ ಉದ್ಯಮ ನಿರೀಕ್ಷೆಗಳು ಅಸ್ತವ್ಯಸ್ತವಾಗಿ ನಿರುದ್ಯೋಗ, ಆದಾಯದ ಇಳಿತ ಮತ್ತು ಜೀವನ ಮಟ್ಟದ ಕುಗ್ಗುವಿಕೆ ಪರಿಣಮಿಸುತ್ತವೆ. ಆದ್ದರಿಂದ ಸ್ವದೇಶೀ ಆರ್ಥಿಕತೆಯ ಸ್ಥಿಮಿತತೆ ಮತ್ತು ಜನರ ಕ್ಷೇಮಾಭ್ಯುದಯ ದೃಷ್ಟಿಯಿಂದ ಕುಗ್ಗು ಪ್ರಸರಣವು ಯೋಗ್ಯವಾದ ಕ್ರಮವಲ್ಲವೆಂದು ಪರಿಗಣಿಸಲಾಗಿದೆ.

2. ಅಪಮೌಲ್ಯೀಕರಣ (Devaluation): ಅಪಮೌಲ್ಯೀಕರಣ ಎಂದರೆ ನಮ್ಮ ದೇಶದ ನಾಣ್ಯದ ಬಾಹ್ಯ ಮೌಲ್ಯವನ್ನು ತಗ್ಗಿಸುವುದು ಎಂದರ್ಥ. ಅಂದರೆ ಸ್ವದೇಶೀ ನಾಣ್ಯದ ಮೌಲ್ಯವನ್ನು ವಿದೇಶಿ ನಾಣ್ಯದ ಮೌಲ್ಯಕ್ಕೆ ವಿರುದ್ಧವಾಗಿ ಇಳಿಸುವ ಕ್ರಮವೇ ಹಣದ ಅಪಮೌಲ್ಯೀಕರಣ. ಅಪಮೌಲ್ಯೀಕರಣವು ಸಂದಾಯ ಶಿಲ್ಕಿನ ಅಸಮತೋಲನದ ನಿವಾರಣೆಗೆ ಅತ್ಯಂತ ಮಹತ್ವದ ಕ್ರಮವೆಂದು ಪರಿಗಣಿಸಲಾಗಿದೆ. ಈ ಕ್ರಮದಿಂದ ರಫ್ತುಗಳು ಹೆಚ್ಚುತ್ತವೆ, ಮತ್ತು ಆಮದುಗಳು ಕಡಿಮೆಯಾಗುತ್ತವೆ. ಇದು ಹೇಗೆ ಸಂಭವಿಸುತ್ತದೆ ಎಂಬುದನ್ನು ಈಗ ತಿಳಿಯೋಣ.

ಅಮೆರಿಕದ ಡಾಲರ್ ಮತ್ತು ಭಾರತದ ರೂಪಾಯಿ ನಡುವೆ ವಿನಿಮಯ ದರ ಡಾಲರ್ 1 = 70 ರೂಪಾಯಿಗಳು ಆಗಿದೆ ಎಂದು ಭಾವಿಸೋಣ. ಭಾರತವು ರೂಪಾಯಿಯನ್ನು ಅಪಮೌಲ್ಯಗೊಳಿಸಿ ಡಾಲರ್ 1 = 80 ರೂಪಾಯಿಗಳಿಗೆ ಸಮವಾಗಿ ಮಾಡುತ್ತದೆ ಎಂದು ಕಲ್ಪಿಸಿ ಕೊಳ್ಳೋಣ. ಆಗ ಭಾರತದ ರೂಪಾಯಿಯ ವಿಧದಲ್ಲಿ ಅಮೆರಿಕದ ಸರಕುಗಳು ದುಬಾರಿಯಾಗುತ್ತವೆ. ಏಕೆಂದರೆ ಒಂದು ಡಾಲರ್ ಮೌಲ್ಯದ ಸರಕುಗಳನ್ನು ಆಮದು ಮಾಡಿಕೊಳ್ಳಲು ಭಾರತವು ಆಗ 70 ರೂಪಾಯಿಗಳಿಗೆ ಬದಲಾಗಿ 80 ರೂಪಾಯಿಗಳನ್ನು ತೆರಬೇಕಾಗಿದೆ. ಈ ಪರಿಣಾಮವಾಗಿ ಭಾರತದ ಆಮದುಗಳು ತಗ್ಗುತ್ತವೆ. ಇದಕ್ಕೆ ವಿರುದ್ಧವಾಗಿ ಡಾಲರ್ ವಿಧದಲ್ಲಿ ಭಾರತದ ಸರಕುಗಳು ಅಗ್ಗವಾಗುತ್ತವೆ. ಏಕೆಂದರೆ ಈಗ ಒಂದು ಡಾಲರ್‌ಗೆ 70 ರೂಪಾಯಿಗಳ ಸರಕುಗಳಿಗೆ ಬದಲಾಗಿ 60 ರೂಪಾಯಿಗಳ ಸರಕುಗಳು ದೊರೆಯುತ್ತವೆ.

ಹೀಗೆ ಅಪಮೌಲ್ಯೀಕರಣದ ಪರಿಣಾಮವಾಗಿ ಸ್ವದೇಶಿ ಸರಕುಗಳು ವಿದೇಶಿಯರಿಗೆ ಸುಲಭ ಬೆಲೆಯಲ್ಲಿ ದೊರೆಯುವುದರಿಂದ ಮತ್ತು ವಿದೇಶಿ ಸರಕುಗಳು ನಮಗೆ ದುಬಾರಿಯಾಗುವುದರಿಂದ ರಫ್ತುಗಳು ಹೆಚ್ಚಿ, ಆಮದುಗಳು ಕಡಿಮೆಯಾಗಿ, ಪಾವತಿ ಶಿಲ್ಕಿನ

ಅಸಮತೋಲನವೇರ್ಪಡುತ್ತದೆ.

ಅಪಮೌಲ್ಯೀಕರಣವೂ ಸಹ ಮಿತಿಗಳಿಂದ ಕೂಡಿದ ವಿಧಾನವಾಗಿದೆ. ಇದೊಂದು ತಾತ್ಕಾಲಿಕ ಕ್ರಮವಾಗಬಹುದೇ ಹೊರತು ಶಾಶ್ವತ ಕ್ರಮವಾಗಲು ಸಾಧ್ಯವಿರುವುದಿಲ್ಲ. ಹಣದ ಅಪಮೌಲ್ಯದಿಂದ ಉತ್ಪಾದನ ವೆಚ್ಚ ಏರತೊಡಗುತ್ತದೆ. ಇದರಿಂದ ಸರಕುಗಳು ದುಬಾರಿಯಾಗಿ ಕ್ರಮೇಣ ರಫ್ತುಗಳಿಗೆ ಬೇಡಿಕೆ ಕುಸಿಯಬಹುದು. ಇದನ್ನು ಶಾಶ್ವತ ಕ್ರಮವಾಗಿ ಅನುಸರಿಸಿದರೆ ನಾಣ್ಯದ ತಗ್ಗಿದ ಮೌಲ್ಯದಿಂದಾಗಿ ನಿರಂತರವಾಗಿ ಅಗ್ಗದ ಬೆಲೆಗಳಲ್ಲಿಯೇ ಸರಕುಗಳನ್ನು ರಫ್ತು ಮಾಡಬೇಕಾಗುತ್ತದೆ. ಇದರಿಂದ ಆರ್ಥಿಕತೆಗೆ ನಷ್ಟವುಂಟಾಗುತ್ತದೆ. ಅಲ್ಲದೆ ಇತರ ದೇಶಗಳು ಪ್ರತೀಕಾರ ಭಾವನೆಯಿಂದ ತಮ್ಮ ನಾಣ್ಯಗಳನ್ನು ಅಪಮೌಲ್ಯಗೊಳಿಸಬಹುದು. ಆಗ ನಮ್ಮ ದೇಶದ ಸರಕುಗಳಿಗೆ ಬೇಡಿಕೆ ಕಡಿಮೆಯಾಗಿ ರಫ್ತುಗಳು ಇಳಿಯುತ್ತವೆ ಹಾಗೂ ಆಮದುಗಳು ಹೆಚ್ಚಬೇಕಾಗುವ ಅನಿವಾರ್ಯ ಪರಿಸ್ಥಿತಿ ತಲೆದೋರುತ್ತದೆ.

ಈ ಮಿತಿಗಳಿರುವುದರಿಂದ ಅಪಮೌಲ್ಯೀಕರಣವನ್ನು ತಾತ್ಕಾಲಿಕ ವಿಧಾನವಾಗಿ ಮಾತ್ರ ಅನುಸರಿಸಬಹುದು. ಇದು ಸಾಮಾನ್ಯವಾಗಿ ಎಲ್ಲಾ ದೇಶಗಳಲ್ಲಿಯೂ ಜನಪ್ರಿಯವಾಗಿರುವ ಮತ್ತು ಸುಲಭವಾದ ಕ್ರಮವಾಗಿದೆ.

3. ವಿನಿಮಯ ದರವನ್ನು ತಗ್ಗಿಸುವಿಕೆ (Exchange Depriciation) : ಒಂದು ದೇಶದ ನಾಣ್ಯದ ಮೌಲ್ಯಕ್ಕೆ ವಿರುದ್ಧವಾಗಿ ಇನ್ನೊಂದು ದೇಶದ ನಾಣ್ಯದ ಮೌಲ್ಯವನ್ನು ಕಡಿಮೆ ಮಾಡುವುದಕ್ಕೆ ವಿನಿಮಯ ದರ ತಗ್ಗಿಸುವಿಕೆ ಎಂದು ಹೆಸರು. ಇದನ್ನು ಅಪಮೌಲ್ಯೀಕರಣದ ಕ್ರಮವೆಂದು ತಪ್ಪಾಗಿ ತಿಳಿಯಬಾರದು. ವಿನಿಮಯ ದರ ತಗ್ಗಿಸುವಿಕೆ ಮತ್ತು ಅಪಮೌಲ್ಯೀಕರಣ ಈ ಎರಡೂ ವಿಧಾನಗಳೂ ನಾಣ್ಯದ ಬಾಹ್ಯ ಮೌಲ್ಯವನ್ನು ಕಡಿಮೆ ಮಾಡುವ ಕ್ರಮಗಳಾದರೂ ಇವುಗಳ ನಡುವೆ ವ್ಯತ್ಯಾಸವಿದೆ. ಅಪಮೌಲ್ಯೀಕರಣವು ಸರ್ಕಾರದಿಂದ ನೆರವೇರುತ್ತದೆ. ಅಂದರೆ ಸರ್ಕಾರವೇ ಉದ್ದೇಶಪೂರ್ವಕವಾಗಿ ನಾಣ್ಯದ ಬಾಹ್ಯ ಮೌಲ್ಯವನ್ನು ತಗ್ಗಿಸುತ್ತದೆ. ಆದರೆ ವಿನಿಮಯ ದರ ತಗ್ಗುವಿಕೆಯು ಸ್ವಯಂಚಾಲಿತವಾಗಿ ಆಗುತ್ತದೆ. ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ಸ್ವದೇಶೀ ಹಣಕ್ಕೆ ಬೇಡಿಕೆ ಕಡಿಮೆಯಾಗಿ ವಿದೇಶಗಳ ಹಣಕ್ಕೆ ಬೇಡಿಕೆ ಹೆಚ್ಚಿದಾಗ ಸ್ವದೇಶೀ ನಾಣ್ಯದ ವಿನಿಮಯ ದರ ತಾನಾಗಿಯೇ ತಗ್ಗುತ್ತದೆ.

ಅಮೆರಿಕದೊಡನೆ ವ್ಯಾಪಾರ ಸಂಪರ್ಕ ಹೊಂದಿರುವ ಭಾರತದ ಪಾವತಿ ಶಿಲ್ಕು ಅಸಮತೋಲನದಲ್ಲಿದೆ ಎಂದು ಭಾವಿಸೋಣ. ಈಗ ಅಮೇರಿಕಾದ ಡಾಲರಿಗೆ ಭಾರತದ ಬೇಡಿಕೆ ಹೆಚ್ಚುತ್ತದೆ ಮತ್ತು ರೂಪಾಯಿಯ ವಿಧದಲ್ಲಿ ಡಾಲರಿನ ಮೌಲ್ಯ ಏರುತ್ತದೆ. ಅಂದರೆ ರೂಪಾಯಿಯ ಮೌಲ್ಯ ಮತ್ತು ಡಾಲರಿಗೆ ಹೋಲಿಸಿದಂತೆ ಅದರ ವಿನಿಮಯ ದರ ಕುಸಿಯುತ್ತದೆ. ಈಗ ಎರಡು ಸಂಗತಿಗಳು ಪರಿಣಮಿಸುತ್ತವೆ.

i) ಮೊದಲನೆಯದಾಗಿ, ಡಾಲರಿನ ಬಾಹ್ಯ ಮೌಲ್ಯವು ಹೆಚ್ಚಾದುದರಿಂದ ಅಮೇರಿಕಾದ ಸರಕುಗಳ ಬೆಲೆಗಳು ಏರುತ್ತವೆ. ಆದ್ದರಿಂದ ಆ ಸರಕುಗಳಿಗೆ ಭಾರತದ

ಬೇಡಿಕೆ ಕಡಿಮೆಯಾಗಿ ಆಮದುಗಳು ಕುಸಿಯುತ್ತವೆ.

ii) ಎರಡನೆಯದಾಗಿ, ರೂಪಾಯಿಯ ಮೌಲ್ಯದ ಕುಸಿತ ದಿಂದ ಭಾರತದ ಸರಕುಗಳು ಅಗ್ಗದ ಬೆಲೆಯಲ್ಲಿ ದೊರೆಯುತ್ತವೆ. ಆದ್ದರಿಂದ ಭಾರತದ ಸರಕುಗಳಿಗೆ ಅಮೇರಿಕಾದ ಬೇಡಿಕೆಯಲ್ಲಿ ಹೆಚ್ಚಳವುಂಟಾಗುತ್ತದೆ ಮತ್ತು ಭಾರತದ ರಫ್ತುಗಳು ಸಹಜವಾಗಿ ಅಧಿಕಗೊಳ್ಳುತ್ತವೆ. ಈ ಮುಖಾಂತರ ಪಾವತಿ ಶಿಲ್ಕಿನ ಬಿಕ್ಕಟ್ಟು ನಿವಾರಣೆಯಾಗಲು ಮಾರ್ಗ ಮೊರೆಯುತ್ತದೆ.

4. ವಿನಿಮಯ ನಿಯಂತ್ರಣ (Exchange Control) : ವಿದೇಶಿ ವಿನಿಮಯ ಸಂಪನ್ಮೂಲಗಳ ಚಲನೆ ಮತ್ತು ಉಪಯೋಗವನ್ನು ನಿಯಂತ್ರಿಸುವ ವಿಧಾನಕ್ಕೆ ವಿನಿಮಯ ನಿಯಂತ್ರಣ ಎಂದು ಹೆಸರು. ಆಮದುಗಳನ್ನು ಕಡಿಮೆ ಮಾಡಲು ಈ ಕ್ರಮವನ್ನು ಅನುಸರಿಸಲಾಗುತ್ತದೆ. ವಿದೇಶಿ ವಿನಿಮಯವು ಜನರ ಬಳಿ ಹೆಚ್ಚಾಗಿದ್ದಾಗ ಸರಕುಗಳನ್ನು ವಿಪರೀತವಾಗಿ ಆಮದು ಮಾಡಿಕೊಳ್ಳಲು ಅವಕಾಶವಿರುತ್ತದೆ. ಇದನ್ನು ತಪ್ಪಿಸಲು ಎಲ್ಲಾ ಸಾರ್ವಜನಿಕರಿಗೆ ತಮ್ಮಲ್ಲಿರುವ ವಿದೇಶಿ ವಿನಿಮಯವನ್ನು ತನ್ನ ವಶಕ್ಕೆ ಒಪ್ಪಿಸಬೇಕೆಂದು ಕೇಂದ್ರ ಬ್ಯಾಂಕು ಆಜ್ಞೆ ಮಾಡಬಹುದು ಮತ್ತು ಆಮದು ಮಾಡಿಕೊಳ್ಳಲು ವಿದೇಶಿ ವಿನಿಮಯವನ್ನು ಬಳಸಲು ತನ್ನ ಅನುಮತಿ ಪಡೆಯಬೇಕೆಂತಲೂ ಶಾಸನವನ್ನು ಜಾರಿಗೊಳಿಸ ಬಹುದು. ವಿದೇಶಿ ವಿನಿಮಯದ ನಿಯಂತ್ರಣದಿಂದ ಆಮದುಗಳು ಸ್ವಾಭಾವಿಕವಾಗಿ ಕಡಿಮೆಯಾಗುತ್ತವೆ.

5. ಆಮದು ಸುಂಕಗಳು ಮತ್ತು ದೇಯಾಂಶಗಳು (Import Duties and Quotas): ಆಮದು ಸುಂಕಗಳನ್ನು ವಿಧಿಸುವುದರಿಂದ ಆಮದು ಸರಕುಗಳ ಬೆಲೆಯು ಏರುತ್ತದೆ ಮತ್ತು ಆ ಸರಕುಗಳ ಆಮದಿನ ಪ್ರಮಾಣ ಕಡಿಮೆಯಾಗುತ್ತದೆ. ಆಮದು ದೇಯಾಂಶಗಳನ್ನು ನಿರ್ಧರಿಸುವುದರಿಂದ ಆಮದುಗಳನ್ನು ಪರಿಮಾಣದಲ್ಲಿ ನಿರ್ಬಂಧಿಸಿದಂತಾಗುತ್ತದೆ. ಈ ಎರಡೂ ಕ್ರಮಗಳಿಂದಲೂ ಆಮದುಗಳನ್ನು ಕಡಿತಗೊಳಿಸುವುದರ ಜೊತೆಗೆ ಆಮದು ಬದಲಿ ಸರಕುಗಳನ್ನು (Import Substitutes) ಹೆಚ್ಚಾಗಿ ಉತ್ಪಾದಿಸಲು ಸಾಧ್ಯವಾಗುತ್ತದೆ. ಸಂದಾಯ ಶಿಲ್ಕಿನ ಅಸಮತೋಲನದ ನಿವಾರಣೆಗೆ ಈ ಕ್ರಮಗಳು ಗಣನೀಯ ವಾಗಿ ಸಹಾಯ ಮಾಡುತ್ತವೆ.

6. ರಫ್ತು ವೃದ್ಧಿ (Export Promotion) : ರಫ್ತು ಕೈಗಾರಿಕೆಗಳಿಗೆ ಧನಸಹಾಯ ನೀಡಿಕೆ, ರಫ್ತು ಸರಕುಗಳ ಗುಣಮಟ್ಟ ಹೆಚ್ಚಿಸುವಿಕೆ, ರಫ್ತುದಾರರಿಗೆ ಸಾಲ, ಕಚ್ಚಾವಸ್ತುಗಳ ಪೂರೈಕೆ ಮೊದಲಾದ ವಿಶೇಷ ಸೌಲಭ್ಯಗಳನ್ನು ಒದಗಿಸುವಿಕೆ, ರಫ್ತುಗಳನ್ನು ಕುದುರಿಸಲು ವಿದೇಶಗಳಿಗೆ ವ್ಯಾಪಾರ ನಿಯೋಗಗಳನ್ನು ಕಳುಹಿಸುವಿಕೆ ಇತ್ಯಾದಿ ಕ್ರಮಗಳು ರಫ್ತುಗಳನ್ನು ಹೆಚ್ಚಿಸಲು ನೆರವಾಗುತ್ತವೆ. ರಫ್ತು ಉತ್ತೇಜನ ಕಾರ್ಯಕ್ರಮಗಳು ಸಂದಾಯ ಶಿಲ್ಕಿನ ಅಸಮತೋಲನ ನಿವಾರಣೆಯಲ್ಲಿ ಗಣನೀಯವಾದ ಪಾತ್ರವನ್ನು ನಿರ್ವಹಿಸುತ್ತವೆ.

C. ವಿದೇಶಿ ವಿನಿಮಯ ದರ : ಅರ್ಥ ಮತ್ತು ವಿಧಗಳು
(Foreign Exchange Rate : Meaning and Types)

ವಿದೇಶಿ ವಿನಿಮಯ ಎಂದರೆ ವಿದೇಶಿ ಹಣ ಎಂದು ಅರ್ಥ. ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ವಿದೇಶಿ ವಿನಿಮಯವು ಅತ್ಯಂತ ಮಹತ್ವದ ಸಂಗತಿಯಾಗಿದೆ. ಜಗತ್ತಿನ ಎಲ್ಲಾ ದೇಶಗಳಲ್ಲಿಯೂ ಒಂದೇ ನಾಣ್ಯ ಪದ್ಧತಿ ಅಸ್ತಿತ್ವದಲ್ಲಿಲ್ಲ. ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಒಂದು ದೇಶವು ಇನ್ನೊಂದು ದೇಶದ ನಾಣ್ಯವನ್ನು ಸ್ವೀಕರಿಸುವುದಿಲ್ಲ. ಆದ್ದರಿಂದ ನಾಣ್ಯಗಳ ಪರಿವರ್ತನೆ ಆವಶ್ಯಕವಾಗಿದೆ. ಉದಾಹರಣೆಗೆ, ಭಾರತವು ಅಮೇರಿಕಾದಿಂದ ವಸ್ತುಗಳನ್ನು ಆಮದು ಮಾಡಿಕೊಳ್ಳಬೇಕಾಗಿದೆ ಎಂದು ಭಾವಿಸೋಣ. ಈಗ ಅಮೆರಿಕದ ರಫ್ತುದಾರರು ಭಾರತದ ರೂಪಾಯಿಯನ್ನು ಸ್ವೀಕರಿಸುವುದಿಲ್ಲ. ಏಕೆಂದರೆ ರೂಪಾಯಿಗೆ ಅಮೆರಿಕದಲ್ಲಿ ಯಾವ ಮೌಲ್ಯವೂ ಇರುವುದಿಲ್ಲ. ಅಮೆರಿಕ ದಿಂದ ವಸ್ತುಗಳನ್ನು ಆಮದು ಮಾಡಿಕೊಳ್ಳಲು ಅಮೇರಿಕಾದ ಡಾಲರುಗಳೇ ಬೇಕಾಗುತ್ತವೆ. ಆದ್ದರಿಂದ ರೂಪಾಯಿಯನ್ನು ಡಾಲರಿಗೆ ಪರಿವರ್ತಿಸುವ ಮೂಲಕ ಅಗತ್ಯವಾದ ಡಾಲರುಗಳನ್ನು ಪಡೆದುಕೊಂಡು ಅಮೆರಿಕದಿಂದ ವಸ್ತುಗಳನ್ನು ಆಮದು ಮಾಡಿಕೊಳ್ಳ ಬೇಕಾಗಿದೆ. ನಾಣ್ಯದ ಪರಿವರ್ತನೆಗೆ ವಿದೇಶಿ ವಿನಿಮಯ ಬ್ಯಾಂಕುಗಳು ಸಹಾಯಮಾಡುತ್ತವೆ. **ಆದ್ದರಿಂದ ಯಾವುದೇ ಒಂದು ದೇಶದ ವಸ್ತುಗಳನ್ನು ಆಮದು ಮಾಡಿಕೊಳ್ಳಲು ಅಗತ್ಯವಾಗಿರುವ ಆ ದೇಶದ ಹಣವೇ ವಿದೇಶಿ ವಿನಿಮಯ.**

ವಿದೇಶಿ ವಿನಿಮಯದ ನೆರವಿನಿಂದ ವಿದೇಶಗಳಿಂದ ಅಗತ್ಯವಾದ ವಸ್ತುಗಳನ್ನು ಪಡೆಯಬಹುದು. ಸ್ವದೇಶೀ ಹಣವು ವಿದೇಶಿ ಸರಕುಗಳನ್ನು ಪಡೆಯಬಲ್ಲುದಾಗಿರುತ್ತದೆ. ಆದರೆ ನೇರವಾಗಿ ಪಡೆಯಲು ಸಮರ್ಥವಾಗಿರುವುದಿಲ್ಲ. ವಿದೇಶಿ ನಾಣ್ಯದ ಮೂಲಕ ಪರೋಕ್ಷವಾಗಿ ಪಡೆಯಲು ಮಾತ್ರ ಸಮರ್ಥವಾಗಿರುತ್ತದೆ.

ವಿದೇಶಿ ವಿನಿಮಯ ದರ
(Rate of Foreign Exchange)

ಒಂದು ದೇಶದ ನಾಣ್ಯವು ಮತ್ತೊಂದು ದೇಶದ ನಾಣ್ಯದೊಡನೆ ಯಾವ ದರದಲ್ಲಿ ವಿನಿಮಯವಾಗುತ್ತದೆಯೋ ಅದಕ್ಕೆ 'ವಿನಿಮಯ ದರ' (Rate of Exchange) ಎಂದು ಹೆಸರು. ಆದ್ದರಿಂದ ವಿನಿಮಯ ದರವು ಇನ್ನೊಂದು ದೇಶದ ನಾಣ್ಯಕ್ಕೆ ಸಂಬಂಧಿಸಿದಂತೆ ಒಂದು ದೇಶದ ನಾಣ್ಯದ ಕೊಳ್ಳುವ ಶಕ್ತಿ ಅಥವಾ ಬಾಹ್ಯ ಮೌಲ್ಯವನ್ನು ಸೂಚಿಸುತ್ತದೆ. ಉದಾಹರಣೆಗೆ, ಭಾರತದ ರೂಪಾಯಿ ಮತ್ತು ಅಮೆರಿಕದ ಡಾಲರ್ ನಡುವಿನ ವಿನಿಮಯ ದರ ಡಾಲರ್ 1 = ರೂ. 80 ಎಂದು ತಿಳಿಯೋಣ. ಅಂದರೆ ಭಾರತದಲ್ಲಿ ಅರವತ್ತು ರೂಪಾಯಿಗಳು ಏನನ್ನು ಕೊಳ್ಳಲು ಶಕ್ತವಾಗಿವೆಯೋ ಅದನ್ನು ಅಮೆರಿಕದಲ್ಲಿ ಒಂದು ಡಾಲರ್ ಕೊಳ್ಳಲು ಶಕ್ತವಾಗಿದೆ ಎಂದರ್ಥ. ಭಾರತವು ಅಮೆರಿಕದಿಂದ ವಸ್ತುಗಳನ್ನು ತರಿಸಿಕೊಳ್ಳಬೇಕಾದರೆ ರೂಪಾಯಿಯನ್ನು ಡಾಲರಿಗೆ ಪರಿವರ್ತಿಸಬೇಕು, ಮತ್ತು ಅಮೆರಿಕವು

ಭಾರತದಿಂದ ವಸ್ತುಗಳನ್ನು ತರಿಸಿಕೊಳ್ಳಬೇಕಾದರೆ ಡಾಲರನ್ನು ರೂಪಾಯಿಗೆ ಪರಿವರ್ತಿಸಬೇಕು. ಆದ್ದರಿಂದ ನಾಣ್ಯಗಳ ಪರಿವರ್ತನೆಗೆ ವಿನಿಮಯ ದರವು ಅತ್ಯಾವಶ್ಯಕವಾದುದು. ಒಟ್ಟಿನಲ್ಲಿ ಹೇಳುವುದಾದರೆ, ಒಂದು ದೇಶದ ನಾಣ್ಯಕ್ಕೆ ಸಂಬಂಧಿಸಿದಂತೆ ಇನ್ನೊಂದು ದೇಶದ ನಾಣ್ಯಕ್ಕೆ ಪರಿವರ್ತಿಸುವ ದರವೇ 'ವಿನಿಮಯ ದರ'ವಾಗಿರುತ್ತದೆ.

ವಿದೇಶಿ ವಿನಿಮಯ ಮಾರುಕಟ್ಟೆ
(Foreign Exchange Market)

ಸ್ವದೇಶಿ ಹಣಕ್ಕೆ ಬದಲಾಗಿ ವಿದೇಶಿ ಹಣವನ್ನು ಕೊಳ್ಳುವ ಮತ್ತು ಮಾರುವ ಸ್ಥಳಕ್ಕೆ ವಿದೇಶಿ ವಿನಿಮಯ ಮಾರುಕಟ್ಟೆ (Foreign Exchange Market) ಎಂದು ಹೆಸರು. ಈ ಮಾರುಕಟ್ಟೆಯು ವಿದೇಶಿ ವಿನಿಮಯವನ್ನು ಕೊಳ್ಳುವವರು ಮತ್ತು ಮಾರುವವರಿಂದ ಕೂಡಿರುತ್ತದೆ. ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿರುವ ವ್ಯಾಪಾರಿಗಳು ಯಾರೆಂದರೆ, ಆಯಾತದಾರರು ಮತ್ತು ನಿರ್ಯಾತದಾರರು, ವಿನಿಮಯ ಬ್ಯಾಂಕುಗಳು, ಕೇಂದ್ರ ಬ್ಯಾಂಕು, ದಳ್ಳಾಳಿಗಳು ಮತ್ತು ಹಣಕಾಸಿನ ಇಲಾಖೆಯ ಅಧಿಕಾರಿಗಳು ಹಾಗೂ ವಿವಿಧ ದೇಶಗಳ ಪ್ರತಿನಿಧಿಗಳು. ಆದರೆ ವಿದೇಶಿ ವಿನಿಮಯ ನಿಯಂತ್ರಣಗಳು ಆಚರಣೆಯಲ್ಲಿರುವ ರಾಷ್ಟ್ರಗಳಲ್ಲಿ ಸ್ವತಃ ಸರಕಾರವೇ ವಿದೇಶಿ ವಿನಿಮಯ ದರವನ್ನು ನಿಗದಿಗೊಳಿಸುತ್ತದೆ ಹಾಗೂ ವಿದೇಶಿ ವಿನಿಮಯ ವ್ಯವಹಾರಗಳನ್ನು ನಿಯಂತ್ರಿಸುತ್ತದೆ. ಆದರೆ ವಿದೇಶಿ ವಿನಿಮಯ ದರವು ಮುಕ್ತಮಾರುಕಟ್ಟೆಯಲ್ಲಿ ವಿದೇಶಿ ಹಣದ ಬೇಡಿಕೆ ಮತ್ತು ಪೂರೈಕೆಗಳಿಂದ ನಿಗದಿಗೊಳ್ಳುತ್ತದೆ.

ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ವಿನಿಮಯ ಬ್ಯಾಂಕುಗಳು ಮಧ್ಯಸ್ಥದಾರರಂತೆ ಕಾರ್ಯ ನಿರ್ವಹಿಸುತ್ತವೆ. ಒಂದು ದೇಶದ ಹಣವನ್ನು ಇನ್ನೊಂದು ದೇಶದ ನಾಣ್ಯಕ್ಕೆ ಪರಿವರ್ತಿಸಿ, ಅವನ್ನು ಸಂಬಂಧಪಟ್ಟ ದೇಶಕ್ಕೆ ರವಾನಿಸುವ ಕಾರ್ಯ ಈ ಬ್ಯಾಂಕುಗಳದಾಗಿದೆ. ಇವು ಕೇಂದ್ರ ಬ್ಯಾಂಕಿನ ನಿರ್ದೇಶನದಲ್ಲಿ ಕೆಲಸ ಮಾಡುತ್ತವೆ. ವಿದೇಶಿ ವಿನಿಮಯ ಮಾರುಕಟ್ಟೆಯು ಕೆಲವು ಮುಖ್ಯ ಕಾರ್ಯಗಳನ್ನು ನಿರ್ವಹಿಸುತ್ತದೆ. ಅವುಗಳನ್ನು ಮುಂದೆ ವಿವರಿಸಿದೆ.

ಕಾರ್ಯಗಳು
(Functions)

ವಿದೇಶಿ ವಿನಿಮಯ ಮಾರುಕಟ್ಟೆಯ ಕಾರ್ಯಗಳನ್ನು ಮುಂದಿನಂತೆ ವಿವರಿಸಬಹುದು.

1. ಹಣದ ವರ್ಗಾವಣೆ (Transfer of Money): ವಿದೇಶಿ ವಿನಿಮಯ ಮಾರುಕಟ್ಟೆಯ ಪ್ರಮುಖ ಕರ್ತವ್ಯವೆಂದರೆ ಹಣವನ್ನು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ವರ್ಗಾಯಿಸುವುದು. ಈ ಕಾರ್ಯಕ್ಕೆ ವಿನಿಮಯ ಹುಂಡಿಯನ್ನು ಬಳಸಲಾಗುವುದು. ಈ ಹುಂಡಿಯು ಮೂರು ತಿಂಗಳ ವಾಯ್ದೆಯ ಹುಂಡಿಯಾಗಿರಬಹುದು, ತಕ್ಷಣ ವಟ್ಟಾ ಕೊಡುವ ಹುಂಡಿಯಾಗಿರಬಹುದು, ಅಥವಾ ಬ್ಯಾಂಕಿನ ಡ್ರಾಫ್ಟ್ ಆಗಿರಬಹುದು. ಆದರೆ

ಇತ್ತೀಚಿನ ದಿನಗಳಲ್ಲಿ ಅಧಿಕವಾಗಿ ಬಳಕೆಯಲ್ಲಿರುವ ವಿಧಾನವೆಂದರೆ ತಂತಿ ಮೂಲಕ ವರ್ಗಾವಣೆ. ಈ ವಿಧಾನದಲ್ಲಿ ಸಂಬಂಧಪಟ್ಟ ವ್ಯಕ್ತಿಗೆ ನಿರ್ದಿಷ್ಟ ಮೊತ್ತದ ಹಣವನ್ನು ನೀಡಬೇಕೆಂದು ಒಂದು ಬ್ಯಾಂಕು ತನ್ನೊಡನೆ ವ್ಯವಹಾರ ಹೊಂದಿರುವ ಇನ್ನೊಂದು ವಿದೇಶಿ ಬ್ಯಾಂಕಿಗೆ ತಂತಿಯ ಮೂಲಕ ತಿಳಿಸುತ್ತದೆ. ಆದ್ದರಿಂದ ತಕ್ಷಣವೇ ಹಣವನ್ನು ಪಾವತಿ ಮಾಡಲು ಸಾಧ್ಯವಾಗುತ್ತದೆ.

2. ಸಾಲ ನೀಡಿಕೆ (Lending): ವಿದೇಶಿ ವಿನಿಮಯ ಮಾರುಕಟ್ಟೆಯ ಎರಡನೆಯ ಕಾರ್ಯವೆಂದರೆ ಸಾಲವನ್ನು ನೀಡುವುದು. ವ್ಯಾಪಾರದಲ್ಲಿ ಸ್ವೀಕರಿಸಿದ ಹುಂಡಿಗಳನ್ನು ಮುರಿಸಿ ನಗದು ಹಣ ಪಡೆಯಲು ಮೂರು ತಿಂಗಳು ವಾಯ್ದೆ ಇರುತ್ತದೆ. ಆದರೆ ರಫ್ತುದಾರರಿಗೆ ಕೂಡಲೇ ಹಣದ ಆವಶ್ಯಕತೆ ಇರಬಹುದು. ಆದ್ದರಿಂದ ಹುಂಡಿಯನ್ನು ವಟ್ಟಾ ಕೊಡುವವರೆಗೆ ವಿದೇಶಿ ವಿನಿಮಯ ಮಾರುಕಟ್ಟೆಯು ರಫ್ತುದಾರರಿಗೆ ಸಾಲವನ್ನು ಒದಗಿಸುತ್ತದೆ.

3. ರಕ್ಷಣೋಪಾಯ ಕಾರ್ಯಗಳ ನಿರ್ವಹಣೆ (Hedging Activities): ವಿನಿಮಯ ದರವು ಬದಲಾಗುವುದರಿಂದ ವ್ಯಾಪಾರದಲ್ಲಿ ನಷ್ಟವುಂಟಾಗುವುದನ್ನು ತಪ್ಪಿಸಲು ವಿದೇಶಿ ವಿನಿಮಯ ಮಾರುಕಟ್ಟೆಯು ರಕ್ಷಣೋಪಾಯ ಕಾರ್ಯಗಳನ್ನು ನಿರ್ವಹಿಸುತ್ತದೆ. ವಿನಿಮಯ ದರವು ಬದಲಾಗುತ್ತಿರುವಾಗ ರಫ್ತು ದಾರರಿಗೆ ಲಾಭವಾಗಬಹುದು ಅಥವಾ ನಷ್ಟವಾಗಬಹುದು. ಉದಾಹರಣೆಗೆ, ವಿದೇಶಿ ಹಣಕ್ಕೆ ಹೋಲಿಸಿದಂತೆ ಸ್ವದೇಶಿ ಹಣದ ಮೌಲ್ಯ ಇಳಿಯಿತೆಂದು ಭಾವಿಸೋಣ. ಆಗ ಸ್ವದೇಶಿ ರಫ್ತುದಾರರು ನಷ್ಟವನ್ನು ಅನುಭವಿಸ ಬೇಕಾಗುತ್ತದೆ. ಇಂತಹ ಸಮಯದಲ್ಲಿ ವಿನಿಮಯದಲ್ಲಿ ಒದಗುವ ಗಂಡಾಂತರವನ್ನು ನಿವಾರಿಸಲು ವಿದೇಶಿ ವಿನಿಮಯ ಮಾರುಕಟ್ಟೆಯು ಸಹಾಯ ಮಾಡುತ್ತದೆ. ಈ ಕಾರ್ಯಕ್ಕೆ ರಕ್ಷಣೋಪಾಯ ಎಂದು ಹೆಸರು.

ವಿನಿಮಯ ದರದ ಕೆಲವು ಪರಿಭಾವನೆಗಳು
(Some Concepts of Exchange Rate)

ವಿನಿಮಯ ದರಕ್ಕೆ ಸಂಬಂಧಿಸಿದ ಕೆಲವು ಭಾವನೆಗಳನ್ನು ಈಗ ಪರಿಚಯ ಮಾಡಿಕೊಳ್ಳೋಣ.

1. ಸದ್ಯದ ದರ ಮತ್ತು ಮುಂಗಡ ದರ (Spot Rate and Forward Rate) : ಕೂಡಲೇ ವಿದೇಶಿ ವಿನಿಮಯವನ್ನು ಒದಗಿಸಬೇಕಾಗುವ ದರಕ್ಕೆ ಸದ್ಯದ ವಿನಿಮಯ ದರವೆಂದು ಹೆಸರು. ಎರಡು ದೇಶಗಳ ನಾಣ್ಯಗಳ ನಡುವೆ ನಿರ್ಧರಿಸಲಾದ ವಿನಿಮಯ ದರಕ್ಕೆ ಬದ್ಧವಾಗಿ ಆ ಕೂಡಲೇ ವಿದೇಶಿ ವಿನಿಮಯವನ್ನು ಒದಗಿಸಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ ವಿದೇಶಿ ವಿನಿಮಯವನ್ನು ಕೊಳ್ಳಲು ಅಥವಾ ಮಾರಲು ಮುಂಚಿತವಾಗಿಯೇ ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ. ಇಂತಹ ವಿನಿಮಯ ದರಕ್ಕೆ ಮುಂಗಡ

ವಿನಿಮಯ ದರವೆಂದು ಹೆಸರು. ಮುಂಗಡ ವಿನಿಮಯ ದರದಲ್ಲಿ ಭವಿಷ್ಯದಲ್ಲಿ ಮಾರುವ ಅಥವಾ ಕೊಳ್ಳುವ ವಿದೇಶಿ ವಿನಿಮಯಕ್ಕೆ ಈಗಲೇ ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ.

2. ಸ್ಥಿರ, ನಮ್ಯ ಮತ್ತು ಬದಲಾಗುತ್ತಿರುವ ದರ (Fixed, Flexible and Floating Rate): ಚಲಾವಣೆಯಲ್ಲಿರುವ ಹಣವನ್ನು ನಿರ್ದಿಷ್ಟವಾದ ಚಿನ್ನದ ರೂಪದಲ್ಲಿ ಅಥವಾ ನಿರ್ದಿಷ್ಟ ದರದ ವಿದೇಶಿ ಹಣದಲ್ಲಿ ವ್ಯಕ್ತಪಡಿಸುವುದಕ್ಕೆ ಸ್ಥಿರ ವಿನಿಮಯ ದರವೆಂದು ಹೆಸರು. ಇಲ್ಲಿ ವಿನಿಮಯ ದರವು ಬದಲಾಗದೆ ಸ್ಥಿರವಾಗಿರುತ್ತದೆ.

ಸ್ಥಿರ ವಿನಿಮಯ ದರದಲ್ಲಿ ಪ್ರಾಧಿಕಾರಿಗಳು ವಿದೇಶಿ ನಾಣ್ಯಕ್ಕೆ ಪ್ರತಿಯಾಗಿ ಸ್ವದೇಶೀ ನಾಣ್ಯವನ್ನು ಕೊಳ್ಳುವ ಮತ್ತು ಮಾರುವ ದರವನ್ನು ಘೋಷಿಸುತ್ತಾರೆ. ಆದರೆ ಕೊಳ್ಳುವ ದರ ಮತ್ತು ಮಾರುವ ದರ ಬದಲಾಗಬಹುದು. ಆದರೆ ಈ ದರಗಳಲ್ಲಿಯೇ ಸ್ವದೇಶೀ ನಾಣ್ಯವನ್ನು ಕೊಳ್ಳಲು ಮತ್ತು ಮಾರಲು ಬದ್ಧರಾಗಿರುತ್ತಾರೆ.

ಕೆಲವು ಅವಧಿಯವರೆಗೆ ಮಾತ್ರ ಸ್ಥಿರವಾಗಿದ್ದು, ಸನ್ನಿವೇಶಗಳಿಗೆ ತಕ್ಕಂತೆ ಬದಲಾಯಿಸಲಾಗುವ ವಿನಿಮಯ ದರವನ್ನು ನಮ್ಯ ಅಥವಾ ಹೊಂದಾಣಿಕೆಯ ದರವೆಂದು ಕರೆಯಲಾಗುತ್ತದೆ. ಇಲ್ಲಿ ಆವಶ್ಯಕತೆಗಳಿಗನುಗುಣವಾಗಿ ಹೊಸ ವಿನಿಮಯ ದರವನ್ನು ನಿರ್ಧರಿಸಲಾಗುತ್ತದೆ.

ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ವಿದೇಶಿ ವಿನಿಮಯದ ಬೇಡಿಕೆ ಮತ್ತು ಪೂರೈಕೆಯ ಅಂಶಗಳಿಗೆ ಬದ್ಧವಾಗಿ ತಾನಾಗಿಯೇ ನಿರ್ಧಾರವಾಗುವ ವಿನಿಮಯ ದರಕ್ಕೆ ಬದಲಾಗುವ ದರವೆಂದು ಹೆಸರು. ಇದು ಸದಾ ಬದಲಾಗುತ್ತಿರುವ ದರವಾಗಿದೆ.

3. ಬಹುಮುಖಿ ದರ (Multiple Rate) : ಒಂದು ದೇಶವು ತನ್ನ ಹಣವನ್ನು ಒಂದಕ್ಕಿಂತ ಹೆಚ್ಚು ವಿನಿಮಯ ದರಗಳಲ್ಲಿ ವ್ಯಕ್ತಪಡಿಸಿದರೆ ಅದನ್ನು ಬಹುಮುಖಿ ವಿದೇಶಿ ವಿನಿಮಯ ದರವೆಂದು ಕರೆಯಲಾಗುವುದು. ಇಂತಹ ವಿನಿಮಯ ದರದಲ್ಲಿ ವಿವಿಧ ವಸ್ತುಗಳಿಗೆ ವಿವಿಧ ವಿನಿಮಯ ದರವನ್ನು ನಿರ್ಧರಿಸಲಾಗುತ್ತದೆ ಅಥವಾ ಆಮದು ಮತ್ತು ರಫ್ತಿಗೆ ಬೇರೆ ಬೇರೆ ವಿನಿಮಯ ದರಗಳನ್ನು ನಿರ್ಧರಿಸಬಹುದು.

4. ಎರಡು ಹಂತಗಳ ವಿನಿಮಯ ದರ ಪದ್ಧತಿ (Two-tier Exchange Rate System): ಒಂದು ದೇಶವು ತನ್ನ ವ್ಯವಹಾರಗಳಲ್ಲಿ ಎರಡು ವಿಭಿನ್ನ ವಿನಿಮಯ ದರಗಳನ್ನು ನಿರ್ಧರಿಸಬಹುದು. ಉದಾಹರಣೆಗೆ, ಅದು ವಾಣಿಜ್ಯದ ವ್ಯವಹಾರಗಳಿಗಾಗಿ ಒಂದು ದರವನ್ನು, ಬಂಡವಾಳದ ವ್ಯವಹಾರಗಳಿಗಾಗಿ ಇನ್ನೊಂದು ದರವನ್ನು ನಿರ್ಧರಿಸುತ್ತದೆ. ಹೀಗೆ ವಿಭಿನ್ನ ಉದ್ದೇಶಗಳಿಗಾಗಿ ಬೇರೆ ಬೇರೆ ವಿನಿಮಯ ದರಗಳು ಅಸ್ತಿತ್ವದಲ್ಲಿದ್ದರೆ ಅದನ್ನು ಎರಡು ಹಂತಗಳ ವಿನಿಮಯ ದರ ಪದ್ಧತಿ ಎನ್ನಲಾಗುತ್ತದೆ. ಸಾಮಾನ್ಯವಾಗಿ ವಾಣಿಜ್ಯ ವ್ಯವಹಾರಗಳಿಗೆ ಹೆಚ್ಚಿನ ದರವನ್ನು, ಬಂಡವಾಳ ವ್ಯವಹಾರಗಳಿಗೆ ಕಡಿಮೆ ದರವನ್ನು ನಿಗದಿ ಮಾಡಲಾಗುತ್ತದೆ.

5. ನಾಮಮಾತ್ರ ಮತ್ತು ನೈಜ ವಿನಿಮಯ ದರ
(Nominal Versus Real Exchange Rate):

ನಾಮಮಾತ್ರ ವಿನಿಮಯ ದರ ಎಂದರೆ ವಿದೇಶಿ ನಾಣ್ಯ ಅಥವಾ ವಿದೇಶಿ ವಿನಿಮಯವನ್ನು ಖರೀದಿಸುವ ಸ್ವದೇಶೀ ಬೆಲೆ ಎಂದರ್ಥ. ಉದಾಹರಣೆಗೆ, ಭಾರತದ ದೃಷ್ಟಿಯಲ್ಲಿ ಅಮೆರಿಕದ ಒಂದು ಡಾಲರನ್ನು ಖರೀದಿಸುವಿಕೆಗೆ 80 ರೂಪಾಯಿಗಳು ತಗಲುತ್ತದೆ ಎಂದು ಭಾವಿಸೋಣ. ಈಗ ನಾಮಮಾತ್ರ ವಿನಿಮಯ ದರವು

1 ಅಮೆರಿಕದ ಡಾಲರ್ = 80 ರೂಪಾಯಿಗಳು ಆಗಿರುತ್ತದೆ.

ಆ ಪ್ರಕಾರ, ನಾಮಮಾತ್ರ ವಿನಿಮಯ ದರವನ್ನು ನಾಣ್ಯಕ್ಕೆ ಪ್ರತಿಯಾಗಿ ಒಂದು ನಾಣ್ಯದ ಬೆಲೆಯ ಪ್ರಮಾಣ ಎಂದು ವ್ಯಾಖ್ಯಾನಿಸಬಹುದು.

ಬದಲಾಗಿ, ನೈಜ ವಿನಿಮಯ ದರವನ್ನು ಸಂಬಂಧಿಸಿದ ಎರಡು ದೇಶಗಳಲ್ಲಿ ಸರಕುಗಳ ಬೆಲೆಗಳ ಮಟ್ಟ (ಹಣದುಬ್ಬರ ದರಗಳು) ಮತ್ತು ನಾಮಮಾತ್ರ ವಿನಿಮಯ ದರವನ್ನು ಗಣನೆಗೆ ತೆಗೆದುಕೊಂಡು ಅಳತೆ ಮಾಡಲಾಗುತ್ತದೆ. ಆ ಪ್ರಕಾರ,

$$RER = \frac{ER.P^*}{P}$$

ಈ ಸೂತ್ರದಲ್ಲಿ :

RER = ನೈಜ ವಿನಿಮಯ ದರ

P* = ವಿದೇಶದಲ್ಲಿ ಬೆಲೆಯ ಮಟ್ಟ (ವಿದೇಶದಲ್ಲಿ ಹಣ ದುಬ್ಬರ)

P = ಸ್ವದೇಶಿ ಬೆಲೆಯ ಮಟ್ಟ (ಸ್ವದೇಶದಲ್ಲಿ ಹಣದುಬ್ಬರ)

(1) ವಿದೇಶಿ ಹಣದುಬ್ಬರದ ದರ ಮತ್ತು ಸ್ವದೇಶಿ ಹಣದುಬ್ಬರದ ದರ ಒಂದೇ ಆಗಿರುವಾಗ ವಿನಿಮಯ ದರವು ಸರಿಸಮಾನವಾಗಿರುತ್ತದೆ, ಅಂದರೆ ನೈಜ ವಿನಿಮಯ ದರ ಮತ್ತು ನಾಮಮಾತ್ರ ವಿನಿಮಯ ದರ ಒಂದೇ ಆಗಿರುತ್ತವೆ.

P*=P ಆದರೆ,

RER = ER"

(2) ವಿದೇಶಿ ಹಣದುಬ್ಬರ ದರವು ಸ್ವದೇಶಿ ಹಣದುಬ್ಬರ ದರವನ್ನು ಮೀರಿದಾಗ ದೇಶದ ನೈಜ ವಿನಿಮಯ ದರವು ನಾಮಮಾತ್ರ ವಿನಿಮಯ ದರಕ್ಕಿಂತ ಜಾಸ್ತಿ ಇರುತ್ತದೆ.

P* > P ಆಗ,

RER > ER ***

(3) ವಿದೇಶಿ ಹಣಮಬ್ಬರ ದರವು ಸ್ವದೇಶೀ ಹಣಮಬ್ಬರ ದರಕ್ಕಿಂತ ಕೆಳಮಟ್ಟದಲ್ಲಿ ಇರುವಾಗ ದೇಶದ ನೈಜ ವಿನಿಮಯ ದರವು ನಾಮಮಾತ್ರ ವಿನಿಮಯ ದರಕ್ಕಿಂತ ಕಡಿಮೆ ಇರುತ್ತದೆ.

$P^* < P$ ಆಗ,

$RER < ER^{***}$

6. ನೈಜ ಪರಿಣಾಮಕಾರಿ ವಿನಿಮಯ ದರ

(Real Effective Exchange Rate):

ಸಂಬಂಧಪಟ್ಟ ದೇಶ ಮತ್ತು ಅದರ ಪ್ರತಿಯೊಂದು ವ್ಯಾಪಾರ ಸಂಗಾತಿಯ ನಡುವಿನ ದ್ವಿಪಕ್ಷೀಯ ನೈಜ ವಿನಿಮಯ ದರಗಳ (Bilateral Real Exchange Rates) ತೂಕಾಂಕಿತ ಸರಾಸರಿ (Weighted Average) ಯಿಂದ ನೈಜ ಪರಿಣಾಮಕಾರಿ ವಿನಿಮಯ ದರವು ದೊರಕುತ್ತದೆ. ಪ್ರತಿಯೊಂದು ವ್ಯಾಪಾರ ಸಂಗಾತಿಯ ಸಂಬಂಧಪಟ್ಟ ವ್ಯಾಪಾರ ಪಾಲುಗಳನ್ನು ಆಧರಿಸಿ ತೂಕಾಂಕಗಳನ್ನು ನಿಗದಿಪಡಿಸಲಾಗುತ್ತದೆ.

ಉದಾಹರಣೆಗೆ, ಒಂದು ದೇಶವು A, B, C ಮತ್ತು D ಎಂಬ ನಾಲ್ಕು ಪ್ರಮುಖ ವ್ಯಾಪಾರ ಸಂಗಾತಿಗಳನ್ನು ಹೊಂದಿದೆ ಎಂದು ಭಾವಿಸೋಣ. ಈ ಸಂದರ್ಭದಲ್ಲಿ ಆ ದೇಶದ ನೈಜ ಪರಿಣಾಮಕಾರಿ ವಿನಿಮಯ ದರವನ್ನು ಮುಂದಿನಂತೆ ಮಾಪನ ಮಾಡಲಾಗುತ್ತದೆ.

$$REERx = [(RERa.Sa)+(RERc.Sc)+(RERd.Sd)]$$

ಈ ಸೂತ್ರದಲ್ಲಿ :

REER = ನೈಜ ಪರಿಣಾಮಕಾರಿ ವಿನಿಮಯ ದರ

x = ಸಂಬಂಧಪಟ್ಟ (ಪರಿಗಣಿತ) ದೇಶ

a, b, c, d = ವ್ಯಾಪಾರ ಸಂಗಾತಿ ದೇಶಗಳು

S = ಪ್ರತಿಯೊಂದು ವ್ಯಾಪಾರ ಸಂಗಾತಿಯ ವ್ಯಾಪಾರ ಪಾಲು

ಆ ಪ್ರಕಾರ,

RERa ಎಂಬುದು A ದೇಶಕ್ಕೆ ಅನ್ವಯಿಸಿದಂತೆ ಸಂಬಂಧಪಟ್ಟ ದೇಶದ (x) ನೈಜ ವಿನಿಮಯ ದರವಾಗಿರುತ್ತದೆ. RERb ಎಂಬುದು B ದೇಶಕ್ಕೆ ಅನ್ವಯಿಸಿದಂತೆ, RERc ಎಂಬುದು C ದೇಶಕ್ಕೆ ಅನ್ವಯಿಸಿದಂತೆ ಮತ್ತು RERd ಎಂಬುದು D ದೇಶಕ್ಕೆ ಅನ್ವಯಿಸಿದಂತೆ ಸಂಬಂಧಪಟ್ಟ ದೇಶದ ನೈಜ ವಿನಿಮಯ ದರವಾಗಿರುತ್ತದೆ.

ಈ ಸೂತ್ರವನ್ನು ಎಷ್ಟು ಸಂಖ್ಯೆಯ ವ್ಯಾಪಾರ ಸಂಗಾತಿಗಳಿಗಾದರೂ ಅನ್ವಯಿಸಿ ವಿಸ್ತರಿಸಲು ಸಾಧ್ಯವಿರುತ್ತದೆ.

ಆ ಪ್ರಕಾರ,

$$REERx = \sum REERn / N$$

ಈ ಸೂತ್ರದಲ್ಲಿ

$\sum$ ಎಂದರೆ ಒಟ್ಟು ಮೊತ್ತ

N ಎಂದರೆ ವ್ಯಾಪಾರ ಸಂಗಾತಿಗಳ ಸಂಖ್ಯೆ

n = 1, 2, 3,..... n

7. ತೆವಳುವಂತೆ ಸ್ಥಿರಗೊಳಿಸಿದ ವಿನಿಮಯ ದರಗಳು
(Crawling Peg Exchange Rates)

ವಿದೇಶಿ ವಿನಿಮಯ ದರಗಳ ಬದಲಾವಣೆಗಳನ್ನು ಬಹಳ ಮಿತವಾದ ಪ್ರಮಾಣದಲ್ಲಿಡಲು ಸರ್ಕಾರವು ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ಅಧಿಕೃತವಾಗಿ ಪ್ರವೇಶಿಸಬಹುದು. ಹೆಸರೇ ಸೂಚಿಸುವಂತೆ ಈ ಪದ್ಧತಿಯಲ್ಲಿ ವಿನಿಮಯ ದರವು ಸ್ಥಿರಗೊಳಿಸಲ್ಪಟ್ಟ ರೀತಿಯಲ್ಲಿ ಕೇವಲ ಸಣ್ಣ ಪ್ರಮಾಣದಲ್ಲಿ ಬದಲಾಗುತ್ತದೆ. ಅದು ಕೇವಲ ಶೇಕಡ $^1/_2$ ದಷ್ಟು ಪ್ರಮಾಣದಲ್ಲಿ ಬದಲಾಗುತ್ತಿದ್ದರೆ ತೆವಳುತ್ತಿರುವಂತೆ ಗೋಚರಿಸುತ್ತದೆ. ಆ ಪ್ರಕಾರ, ತೆವಳುವಂತೆ ಸ್ಥಿರಗೊಳಿಸಿದ ಪದ್ಧತಿಯಲ್ಲಿ ವಿನಿಮಯ ದರಗಳನ್ನು ಯಾವುದೋ ಒಂದು ನಿರ್ದಿಷ್ಟ ಮಟ್ಟದಲ್ಲಿ ನಿಗದಿಗೊಳಿಸಲಾಗುವುದಿಲ್ಲ. ಬದಲಾಗಿ, ಚಿಕ್ಕ ಪ್ರಮಾಣದ ಬದಲಾವಣೆಗಳಿಗೆ ಮಾತ್ರ ಅವಕಾಶ ಮಾಡಿಕೊಡಲಾಗುತ್ತದೆ.

ವಿಧಗಳು
(Forms)

ತೆವಳುವಂತೆ ಸ್ಥಿರಗೊಳಿಸಿದ ವಿನಿಮಯ ದರಗಳು ಅನೇಕ ರೂಪಗಳನ್ನು ಪಡೆಯಬಹುದು. ಅವುಗಳಲ್ಲಿ ಮುಖ್ಯವಾದವುಗಳು ಕೆಳಗಿನಂತಿವೆ.

1. ವಿನಿಮಯ ದರಗಳು ಒಂದೇ ದಿಕ್ಕಿನಲ್ಲಿ ಚಿಕ್ಕ ಪ್ರಮಾಣದಲ್ಲಿ ಕ್ರಮಬದ್ಧವಾಗಿ ಚಲಿಸುವಂತೆ ನಿರ್ಧರಿಸಿ, ಆ ಪ್ರವೃತ್ತಿಯ ದರವನ್ನು ಪ್ರಾಧಿಕಾರಿಗಳು ಮೊದಲೇ ಘೋಷಿಸಬಹುದು. ಉದಾಹರಣೆಗೆ, ತಿಂಗಳಿಗೆ ಶೇಕಡ $^1/_2$ ದಷ್ಟು ದರದಲ್ಲಿ ಅದು ಚಲಿಸಬಹುದು.
2. ವಿನಿಮಯ ದರಗಳನ್ನು ಯಾವುದೇ ದಿಕ್ಕಿನಲ್ಲಿ ಬದಲಾಯಿಸಲು ಪ್ರಾಧಿಕಾರಿಗಳು ವಿವೇಚನೆಯನ್ನು ಉಳಿಸಿಕೊಳ್ಳಬಹುದು. ಉದಾಹರಣೆಗೆ, ತಿಂಗಳಿಗೆ ಶೇಕಡ 1 ರಷ್ಟು ವಿನಿಮಯ ದರದ ವ್ಯತ್ಯಾಸವನ್ನು ಮಾಡಬಹುದು.

3. ಕಳೆದ ಒಂದು ವರ್ಷದ ಅವಧಿಯಲ್ಲಿ ಮಾರುಕಟ್ಟೆ ದರಗಳ ಸರಾಸರಿಗೆ ಸಮನಾಗಿರುವ ರೀತಿಯಲ್ಲಿ ನಿರಂತರವಾಗಿ ಹೊಂದಾಣಿಕೆ ಮಾಡುವಂತ ವಿನಿಮಯ ದರಗಳ ನಿರ್ಧಾರವನ್ನು ಘೋಷಿಸಬಹುದು.

ಮೇಲೆ ವಿವರಿಸಲಾದ ಯಾವುದೇ ಸಂದರ್ಭದಲ್ಲಿ ಮಾರುಕಟ್ಟೆ ದರಗಳು ಪ್ರಾಧಿಕಾರದ ಮಧ್ಯಪ್ರವೇಶದಿಂದ, ಸ್ಥಿರಗೊಳಿಸಲಾದ ದರಗಳ ಮಿತಿಯಲ್ಲಿಯೇ ಉಳಿಯುತ್ತವೆ ಎಂದು ಭಾವಿಸಲಾಗುತ್ತದೆ.

ಪ್ರಯೋಜನಗಳು
(Merits)

1. ವಿನಿಮಯ ದರದಲ್ಲಿ ವಿಕಾಪಿಕಯಾಗಿ ಉದ್ಭವಿಸುವ ಏರಿಳಿತಗಳನ್ನು ಈ ಪದ್ಧತಿಯು ನಿವಾರಿಸುತ್ತದೆ.
2. ಸಟ್ಟಾ ವ್ಯಾಪಾರದಿಂದ ವಿಪರೀತ ಪ್ರಮಾಣದ ಲಾಭವನ್ನು ಸಂಪಾದಿಸುವಿಕೆಯನ್ನು ಅದು ತಡೆಯುತ್ತದೆ.

ದುಷ್ಪ್ರಯೋಜನಗಳು
(Demerits)

1. ವಿನಿಮಯ ದರಗಳು ಸಮತೋಲನ ಮಟ್ಟದಿಂದ ದೂರ ಸರಿದರೆ, ಮಿತವಾದ ಪ್ರಮಾಣದ (ತೆವಳುವ) ಹೊಂದಾಣಿಕೆಯ ದರಗಳು ಮಾರುಕಟ್ಟೆಯ ದರಗಳನ್ನು ಸಮತೋಲನದೆಡೆಗೆ ತರಲು ಅಸಮರ್ಥವಾಗುತ್ತವೆ.
2. ವಿನಿಮಯ ದರಗಳು ಸಮತೋಲನ ಮಟ್ಟದಿಂದ ದೂರ ಕದಲಿದರೆ, ಮತ್ತು ಅವು ಸಮತೋಲನಕ್ಕೆ ಬರಲು ವಿಫಲವಾದರೆ ವಿದೇಶಿ ವಿನಿಮಯ ನಿಧಿಗಳೇ ಮುಗಿದುಹೋಗುವ ಅಪಾಯವಿರುತ್ತದೆ.

ಸ್ಥಿರ ಮತ್ತು ನಮ್ಯ ವಿನಿಮಯ ದರಗಳ ಪರವಾದ ಮತ್ತು ವಿರುದ್ಧದ ವಾದಗಳು

ವಿನಿಮಯ ದರವು ಸ್ಥಿರವಾಗಿರಬೇಕೇ ಅಥವಾ ಬದಲಾಗುತ್ತಿರಬೇಕೇ ಎಂಬ ಬಗ್ಗೆ ಅರ್ಥಶಾಸ್ತ್ರಜ್ಞರಲ್ಲಿ ಜಿಜ್ಞಾಸೆಯಿದೆ. ಸ್ಥಿರವಾದ ವಿನಿಮಯ ದರದಿಂದ ಹಣದ ಆಂತರಿಕ ಮತ್ತು ಬಾಹ್ಯ ಮೌಲ್ಯವನ್ನು ಕಾಪಾಡಿಕೊಳ್ಳಬಹುದೆಂಬುದು ಕೆಲವರ ಅಭಿಪ್ರಾಯವಾಗಿದೆ. ಇದಕ್ಕೆ ವಿರುದ್ಧವಾಗಿ, ವಿನಿಮಯ ದರವು ನಮ್ಯವಾಗಿದ್ದು ಆಗಾಗ್ಗೆ ಬದಲಾಗುತ್ತಿದ್ದರೆ ಹಣದ ಮೌಲ್ಯವನ್ನು ಕಾಯ್ದುಕೊಳ್ಳುವುದು ಸುಲಭ ಎಂಬುದು ಇನ್ನು ಕೆಲವರ ವಾದವಾಗಿದೆ. ಇವೆರಡೂ ವಿನಿಮಯ ದರಗಳ ಪರವಾಗಿರುವ ವಾದಗಳನ್ನು ಗಮನಿಸಿದರೆ ಅವುಗಳ ಆವಶ್ಯಕತೆ ತಿಳಿಯುತ್ತದೆ.

ಸ್ಥಿರ ವಿನಿಮಯ ದರದ ಪರವಾಗಿ ವಾದಗಳು
(Arguments for Fixed Exchange Rates)

ಸ್ಥಿರ ವಿನಿಮಯ ದರವೆಂದರೆ ಯಾವಾಗಲೂ ಬದಲಾಗದೆ ಒಂದೇ ರೀತಿ ಇರುವ ದರವೆಂದು ತಪ್ಪು ಅರ್ಥಮಾಡಿಕೊಳ್ಳಬಾರದು. ಇದು ಆಗಾಗ್ಗೆ ಬದಲಾಗದೆ ಬಹಳ ಕಾಲದವರೆಗೆ ಸ್ಥಿರವಾಗಿರುತ್ತದೆ ಅಷ್ಟೆ. ಆದರೆ ಆವಶ್ಯಕತೆಗಳಿಗೆ ಅನುಗುಣವಾಗಿ ದೀರ್ಘಾವಧಿಯಲ್ಲಿ ಈ ದರವನ್ನು ಬದಲಿಸಬಹುದು.

1. ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಪ್ರೇರಣೆ (Stimulus to International Trade): ವಿನಿಮಯ ದರವು ಸ್ಥಿರವಾಗಿದ್ದರೆ ಅಂತರ ರಾಷ್ಟ್ರೀಯ ವ್ಯಾಪಾರವು ಸುಗಮವಾಗಿ ಸಾಗುತ್ತದೆ. ಭವಿಷ್ಯದಲ್ಲಿಯೂ ಸಹ ಇದೇ ವಿನಿಮಯ ದರವು ಅಸ್ತಿತ್ವದಲ್ಲಿರುತ್ತದೆಂದು ನಂಬಿ ಆಯಾತದಾರರು ಮತ್ತು ನಿರ್ಯಾತದಾರರು ಯಾವುದೇ ಚಿಂತೆಯಿಲ್ಲದೆ ವ್ಯಾಪಾರದಲ್ಲಿ ನಿರತರಾಗುತ್ತಾರೆ. ಇದರಿಂದ ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಪ್ರೇರಣೆ ದೊರೆತು ಉತ್ಪಾದನೆಯು ಅಧಿಕಗೊಳ್ಳುತ್ತದೆ.

2. ಅಂತರರಾಷ್ಟ್ರೀಯ ಬಂಡವಾಳ ಹೂಡಿಕೆಗೆ ಉತ್ತೇಜನ (Encouragement to Investment of International Capital): ವಿನಿಮಯ ದರವು ಬದಲಾಗುತ್ತಿದ್ದರೆ ಬಂಡವಾಳದಾರರು ಹೂಡಿಕೆಯನ್ನು ಕೈಗೊಳ್ಳಲು ಧೈರ್ಯಗೊಳ್ಳುವುದಿಲ್ಲ. ಸ್ಥಿರವಾದ ವಿನಿಮಯ ದರವು ಅಂತರರಾಷ್ಟ್ರೀಯ ಬಂಡವಾಳ ಹೂಡಿಕೆಗೆ ಉತ್ತೇಜನ ನೀಡುತ್ತದೆ.

3. ಪ್ರಾದೇಶಿಕ ನಾಣ್ಯ ವ್ಯವಸ್ಥೆಗೆ ಅಗತ್ಯ(Necessary for Regional Currency System): ಹಲವು ರಾಷ್ಟ್ರಗಳು ತಮ್ಮೊಳಗೆ ವ್ಯಾಪಾರವನ್ನು ಕೈಗೊಂಡು ವ್ಯವಹಾರಗಳನ್ನು ಬಗೆಹರಿಸಿಕೊಳ್ಳಲು ಒಂದು ನಿರ್ದಿಷ್ಟ ನಾಣ್ಯವನ್ನು ಮಾಧ್ಯಮವೆಂದು ಒಪ್ಪಿಕೊಂಡಿರುತ್ತವೆ. ಇಂತಹ ಪದ್ಧತಿಗೆ ಪ್ರಾದೇಶಿಕ ನಾಣ್ಯ ವ್ಯವಸ್ಥೆ (Currency Area) ಎಂದು ಹೆಸರು. ಅಂತರರಾಷ್ಟ್ರೀಯ ವಾಣಿಜ್ಯದಲ್ಲಿ ಪ್ರಮುಖ ಸ್ಥಾನ ಪಡೆದಿರುವ ಎರಡು ಪ್ರಾದೇಶಿಕ ನಾಣ್ಯ ವ್ಯವಸ್ಥೆಗಳೆಂದರೆ "ಸ್ಟರ್ಲಿಂಗ್ ವಲಯ" ಮತ್ತು "ಡಾಲರ್ ವಲಯ". ಸ್ಥಿರವಾದ ವಿನಿಮಯ ದರವು ಅಸ್ತಿತ್ವದಲ್ಲಿದ್ದಾಗ ವಿವಿಧ ದೇಶಗಳು ಯಾವುದೇ ತಕರಾರಿಲ್ಲದೆ ತಮ್ಮ ವ್ಯವಹಾರಗಳನ್ನು ಬಗೆಹರಿಸಿಕೊಳ್ಳಲು ಸಾಧ್ಯವಾಗುತ್ತದೆ.

4. ಸಟ್ಟಾ ವ್ಯಾಪಾರದ ನಿರ್ಮೂಲನ (Eradication of Speculative Trade): ಸ್ಥಿರವಾದ ವಿನಿಮಯ ದರವು ಸಟ್ಟಾ ವ್ಯಾಪಾರವನ್ನು ನಿರ್ಮೂಲನ ಮಾಡುತ್ತದೆ. ಸಟ್ಟಾ ವ್ಯಾಪಾರದಿಂದ ಹಣದ ಮೌಲ್ಯವು ಏರುಪೇರಾಗಿ ವಿನಿಮಯ ದರವು ವ್ಯತ್ಯಾಸಗೊಳ್ಳುತ್ತದೆ. ಇದರಿಂದ ಬಂಡವಾಳ ಹೂಡಿಕೆ, ವ್ಯಾಪಾರ, ಉದ್ಯಮ ಮೊದಲಾದವುಗಳ ಮೇಲೆ ಪರಿಣಾಮ ಉಂಟಾಗಿ ಆರ್ಥಿಕ ಅಸ್ಥಿರತೆ ತಲೆದೋರುತ್ತದೆ. ಸಟ್ಟಾ ವ್ಯಾಪಾರದ ಅನಿಷ್ಟಗಳ ನಿವಾರಣೆಯೂ ಸಹ ಸ್ಥಿರವಾದ ವಿನಿಮಯ ದರದಿಂದ ಮಾತ್ರ ಸಾಧ್ಯ.

5. ಅಂತರರಾಷ್ಟ್ರೀಯ ಶ್ರಮ ವಿಭಜನೆ ಮತ್ತು ವೈಶಿಷ್ಟ್ಯತೆ (International Division of Labour and Specialisation): ಸ್ಥಿರ ವಿನಿಮಯ ದರಗಳಿಂದ ಅಂತರರಾಷ್ಟ್ರೀಯ ಶ್ರಮ ವಿಭಜನೆ ಮತ್ತು ವೈಶಿಷ್ಟ್ಯತೆ ಸಾಧನೆಯಾಗಿ ಉತ್ಪಾದನೆಯು ಹೆಚ್ಚುತ್ತದೆ.

6. ದೀರ್ಘಾವಧಿಯ ಬಂಡವಾಳ ಹೂಡಿಕೆಗಳು (Long-term Capital Investments): ಸ್ಥಿರ ವಿನಿಮಯ ದರಗಳಿದ್ದಾಗ ಅನಿಶ್ಚತತೆ ಮತ್ತು ಗಂಡಾಂತರ ಕಡಿಮೆ ಇರುತ್ತವೆ. ಆದ್ದರಿಂದ ಹೂಡಿಕೆದಾರರು ದೀರ್ಘಾವಧಿಯ ಅಂತರರಾಷ್ಟ್ರೀಯ ಹೂಡಿಕೆಗ ಯೋಜನೆಗಳನ್ನು ರೂಪಿಸಿಕೊಳ್ಳಬಹುದು. ಇದರಿಂದಾಗಿ ವಿದೇಶಿ ಬಂಡವಾಳ ಪ್ರವಹನವು ಹೆಚ್ಚುತ್ತದೆ ಮತ್ತು ಆರ್ಥಿಕಾಭಿವೃದ್ಧಿ ಸಾಧನೆಯಾಗುತ್ತದೆ.

7. ಆರ್ಥಿಕ ಸಂಯೋಜನೆಯ ವೃದ್ಧಿ (Promotion of Economic Integration): ಸ್ಥಿರ ವಿನಿಮಯ ದರವು ಎಲ್ಲಾ ದೇಶಗಳಿಗೆ ಒಪ್ಪುವಂತಹ ಸರ್ವಸಮ ನಾಣ್ಯ (Common Currency) ದಂತಿರುತ್ತದೆ. ಈ ವ್ಯವಸ್ಥೆಯಲ್ಲಿ ಯಾವುದೇ ಒಂದು ದೇಶದ ನಾಣ್ಯದ ಮೌಲ್ಯವು ವಿದೇಶಿ ನಾಣ್ಯಕ್ಕೆ ಹೋಲಿಸಿದಂತೆ ಸ್ಥಿರವಾಗಿರುತ್ತದೆ. ಆದ್ದರಿಂದ ಸ್ಥಿರ ವಿನಿಮಯ ದರವು ವಿವಿಧ ದೇಶಗಳ ನಡುವೆ ಹೆಚ್ಚಿನ ಪ್ರಮಾಣದ ಆರ್ಥಿಕ ಸಂಯೋಜನೆಗೆ ನೆರವಾಗುತ್ತದೆ. ಎಚ್.ಜಿ. ಜಾನ್‌ಸನ್‌ರವರ ಪ್ರಕಾರ ಸ್ಥಿರ ವಿನಿಮಯ ದರಗಳಿಂದ ಅಂತರರಾಷ್ಟ್ರೀಯ ಆರ್ಥಿಕ ಸಂಯೋಜನೆಯು ವೃದ್ಧಿಯಾಗುತ್ತದೆ.

8. ನಾಣ್ಯದ ಬಲದಲ್ಲಿ ಭರವಸೆ (Confidence in the Strength of the Currency): ಸ್ಥಿರ ವಿನಿಮಯ ದರದಲ್ಲಿ ನಾಣ್ಯದ ಮೌಲ್ಯದಲ್ಲಿ ಏರಿಕೆ ಅಥವಾ ಕುಸಿತ ಇರುವುದಿಲ್ಲ. ಆದ್ದರಿಂದ ನಾಣ್ಯವನ್ನು ಹೆಚ್ಚಾಗಿ ಸಂಗ್ರಹಿಸಿಟ್ಟರೂ ಸಹ ಯಾವುದೇ ಗಂಡಾಂತರವಿರುವುದಿಲ್ಲ. ಈ ಕಾರಣದಿಂದ ನಾಣ್ಯದ ಬಲದಲ್ಲಿ ವಿಶ್ವಾಸ ಮೂಡುತ್ತದೆ.

9. ಹಣದ ಮತ್ತು ಬಂಡವಾಳ ಮಾರುಕಟ್ಟೆಗಳ ಬೆಳವಣಿಗೆ (Growth of Money and Capital Markets): ಸ್ಥಿರ ವಿನಿಮಯ ದರಗಳು ವ್ಯಾಪಾರದ ವಿಸ್ತರಣೆ ಮತ್ತು ಅಂತರರಾಷ್ಟ್ರೀಯ ಬಂಡವಾಳ ಪ್ರವಹನದ ಮೂಲಕ ಹಣದ ಮತ್ತು ಬಂಡವಾಳ ಮಾರುಕಟ್ಟೆಗಳ ಬೆಳವಣಿಗೆಗೆ ನೆರವಾಗುತ್ತವೆ. ಚಿನ್ನದ ಪ್ರಮಿತಿಯಲ್ಲಿ ಸ್ಥಿರ ವಿನಿಮಯ ದರಗಳು ಅಸ್ತಿತ್ವದಲ್ಲಿದ್ದಾಗ ಅಂತರರಾಷ್ಟ್ರೀಯ ಬಂಡವಾಳ ಚಲನೆಯು ಸುಗಮವಾಗಿದ್ದುದರಿಂದ ಅಂತರರಾಷ್ಟ್ರೀಯ ಹಣದ ಮಾರುಕಟ್ಟೆಗಳ ನಿರಂತರ ವಿಸ್ತರಣೆಯಾಯಿತು.

10. ಬೆಲೆಯ ಶಿಸ್ತು (Price Discipline): ಸ್ಥಿರ ವಿನಿಮಯ ದರದಲ್ಲಿ ಯಾವುದೇ ದೇಶವು ಹಣದುಬ್ಬರ ನಿಯಂತ್ರಣಕ್ಕೆ ನಿರ್ದಿಷ್ಟ ಕ್ರಮಗಳನ್ನು ಅನುಸರಿಸಬೇಕಾಗಿರುತ್ತದೆ. ಆದ್ದರಿಂದ ಪಾವತಿ ಶಿಲ್ಕಿನ ಕೊರತೆಯು ನಿವಾರಣೆಯಾಗುತ್ತದೆ ಮತ್ತು ಬೆಲೆಯ ವಿಷಯದಲ್ಲಿ ಶಿಸ್ತು ಮೂಡುತ್ತದೆ.

ಸ್ಥಿರ ವಿನಿಮಯ ದರದ ವಿರುದ್ಧ ವಾದಗಳು
(Arguments against Fixed Exchange Rates)

ಸ್ಥಿರ ವಿನಿಮಯ ದರದ ವಿರುದ್ಧ ವಾದಗಳು ಕೆಳಗಿನಂತಿವೆ.

1. ವಿನಿಮಯ ದರದ ಸ್ಥಿಮಿತತೆಗೆ ಮಿತಿಮೀರಿದ ಪ್ರಾಮುಖ್ಯ (Primacy to Exchange Rate Stability): ಒಂದು ಅಧಿಕೃತ ಮಟ್ಟದಲ್ಲಿ ವಿನಿಮಯ ದರವನ್ನು ಕಾಪಾಡಿಕೊಳ್ಳಲು ಪ್ರಾಮುಖ್ಯತೆ ನೀಡುವುದು ಸ್ಥಿರ ವಿನಿಮಯ ದರದ ಒಂದು ಪ್ರಮುಖ ದೋಷವಾಗಿದೆ. ಈ ಗುರಿ ಸಾಧನೆಯ ಕಾರಣದಿಂದ ಕೆಲವು ಸಂದರ್ಭಗಳಲ್ಲಿ ಬೆಲೆಯ ಸ್ಥಿಮಿತತೆ ಮತ್ತು ಪೂರ್ಣೋದ್ಯೋಗ ಸ್ಥಾಪನೆಯ ಧ್ಯೇಯಗಳನ್ನು ಸಹ ತ್ಯಜಿಸಬೇಕಾಗುತ್ತದೆ. ಸ್ಥಿರ ವಿನಿಮಯ ದರವನ್ನು ಪಾಲಿಸುತ್ತಿರುವ ದೇಶದಲ್ಲಿ ಪಾವತಿ ಶಿಲ್ಕಿನ ಕೊರತೆಯನ್ನು ನಿವಾರಿಸಲು ಕುಗ್ಗು ಪ್ರಸರಣದ (Deflationary) ನೀತಿಗಳನ್ನು ಅನುಸರಿಸಲಾಗುತ್ತದೆ. ಇದರಿಂದಾಗಿ ಬೆಲೆಗಳು ಕುಸಿಯುತ್ತವೆ ಹಾಗೂ ಆರ್ಥಿಕ ಹಿಂಜರಿತ ಮತ್ತು ನಿರುದ್ಯೋಗ ಪರಿಣಮಿಸುತ್ತವೆ. ಅಂತೆಯೇ ಪಾವತಿ ಶಿಲ್ಕಿನ ಹೆಚ್ಚಳವನ್ನು ಸರಿಪಡಿಸಲು ಹಣದುಬ್ಬರಕಾರಿ (Inflationary) ನೀತಿಗಳನ್ನು ಅನುಸರಿಸಲಾಗುತ್ತದೆ. ಇದರಿಂದಾಗಿ ಜನರು ತೀವ್ರವಾದ ಸಂಕಷ್ಟಕ್ಕೀಡಾಗುತ್ತಾರೆ.

2. ಆರ್ಥಿಕ ಸಮಸ್ಯೆಗಳ ಅಂತರರಾಷ್ಟ್ರೀಯ ರವಾನೆ (International Transmission of Economic Problems): ಸ್ಥಿರ ವಿನಿಮಯ ದರವು ಆರ್ಥಿಕ ಸಮಸ್ಯೆಗಳನ್ನು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ವರ್ಗಾಯಿಸುತ್ತದೆ. ಒಂದು ದೇಶದಲ್ಲಿ ಕುಗ್ಗು ಪ್ರಸರಣದ ಸನ್ನಿವೇಶ ಇದೆ ಎಂದು ಭಾವಿಸೋಣ. ಆಗ ಅದು ಕಡಿಮೆ ಬೆಲೆಯ ತನ್ನ ಸರಕುಗಳನ್ನು ಇತರ ದೇಶಗಳಿಗೆ ರಫ್ತು ಮಾಡುತ್ತದೆ. ಈ ಸರಕುಗಳನ್ನು ಆಮದು ಮಾಡಿಕೊಂಡ ದೇಶವು ಕಡಿಮೆ ಬೆಲೆಯ ವಿದೇಶಿ ಸರಕುಗಳಿಂದ ಸ್ಪರ್ಧೆಯನ್ನು ತಾಳಲಾರದೆ ತನ್ನ ಸರಕುಗಳ ಬೆಲೆಗಳನ್ನು ಅನಿವಾರ್ಯವಾಗಿ ಕಡಿಮೆ ಮಾಡಬೇಕಾಗುತ್ತದೆ ಅಥವಾ ಸ್ವದೇಶೀ ಉತ್ಪಾದನೆಗೆ ಅವಕಾಶ ಸಿಗದೆ ಉತ್ಪಾದನೆಯನ್ನು ತಗ್ಗಿಸಬೇಕಾಗುತ್ತದೆ. ಅದೇ ರೀತಿಯಲ್ಲಿ ಹಣದುಬ್ಬರಕಾರಿ ಪ್ರವೃತ್ತಿಗಳು ಸಹ ಒಂದು ದೇಶದಿಂದ ಇನ್ನೊಂದು ದೇಶಕ್ಕೆ ವರ್ಗಾವಣೆಯಾಗುತ್ತವೆ.

3. ವಿನಿಮಯ ಆಪದ್ಧನವನ್ನು ಇಟ್ಟುಕೊಳ್ಳಬೇಕಾದ ಆವಶ್ಯಕತೆ (Need to Build Exchange Reserves): ವಿನಿಮಯ ದರವನ್ನು ಅಧಿಕೃತ ಮಟ್ಟದಲ್ಲಿ ಕಾಪಾಡಲು ಅದನ್ನು ಬದಲಾಗದ ರೀತಿಯಲ್ಲಿ ನಿಗದಿಪಡಿಸಬೇಕಾಗುತ್ತದೆ. ಈ ಕಾರಣದಿಂದ ಸಾಕಷ್ಟು ಪ್ರಮಾಣದ ವಿದೇಶಿ ಹಣವನ್ನು ಆಪದ್ಧನವಾಗಿ (ಮೀಸಲು ಹಣವಾಗಿ) ಇಟ್ಟುಕೊಳ್ಳ ಬೇಕಾದ ಆವಶ್ಯಕತೆ ಉದ್ಭವಿಸುತ್ತದೆ. ಈ ರೀತಿಯ ಮೀಸಲು ಹಣವನ್ನು ಇಟ್ಟುಕೊಳ್ಳ ದಿದ್ದರೆ ಪಾವತಿ ಶಿಲ್ಕಿನ ಕೊರತೆಯನ್ನು ನಿವಾರಿಸಲು ನಾಣ್ಯದ ಅಪಮೌಲ್ಯೀಕರಣದ

ಕ್ರಮವನ್ನು ಅನುಸರಿಸಬೇಕಾಗುತ್ತದೆ. ದೊಡ್ಡ ಪ್ರಮಾಣದಲ್ಲಿ ವಿದೇಶಿ ಹಣದ ಆಪದ್ಧನವನ್ನು ಜಡ ರೂಪದಲ್ಲಿ ಇಟ್ಟುಕೊಳ್ಳುವುದು ತುಂಬಾ ದುಬಾರಿ ಮತ್ತು ಅವ್ಯಯಕಾರಿಯಾಗಿರುತ್ತದೆ.

4. ಅಪಮೌಲ್ಯೀಕರಣದ ಆವಶ್ಯಕತೆ (Necessity of Devaluation): ಒಂದು ದೇಶವು ನಿರಂತರವಾಗಿ ಪಾವತಿ ಶಿಲ್ಕಿನ ಕೊರತೆಯನ್ನು ಅನುಭವಿಸುತ್ತಿದ್ದರೆ ಸ್ಥಿರ ವಿನಿಮಯ ದರ ಪದ್ಧತಿಯಲ್ಲಿ ಸ್ವದೇಶೀ ನಾಣ್ಯವನ್ನು ಅಪಮೌಲ್ಯಗೊಳಿಸಬೇಕಾಗುತ್ತದೆ. ಕೆಲವು ಸಾರಿ ಈ ಕ್ರಮವನ್ನು ಆಗಾಗ್ಗೆ ಅನುಸರಿಸಬೇಕಾಗುತ್ತದೆ. ಇದರಿಂದಾಗಿ ಸ್ವದೇಶಿ ನಾಣ್ಯದ ಬಲವು ಕ್ಷೀಣಿಸುತ್ತದೆ ಮತ್ತು ಅದು ವಿಶ್ವಾಸವನ್ನು ಕಳೆದುಕೊಳ್ಳುತ್ತದೆ.

5. ಸಟ್ಟಾ ವ್ಯಾಪಾರದ ಸಾಧ್ಯತೆ (Possibility of Speculation): ಸ್ಥಿರ ವಿನಿಮಯ ದರಗಳಲ್ಲಿ ಸಟ್ಟಾ ವ್ಯಾಪಾರದ ಸಾಧ್ಯತೆ ಇಲ್ಲವೆಂದು ಭಾವಿಸಲಾಗಿದ್ದರೂ ಸಹ ಅದಕ್ಕೆ ಅವಕಾಶಗಳು ಇದ್ದೇ ಇರುತ್ತವೆ. ವಿನಿಮಯ ದರವನ್ನು ಗಟ್ಟಿಯಾಗಿ ನಿಗದಿಗೊಳಿಸುವ ಅಥವಾ ನಾಣ್ಯದ ಅಪಮೌಲ್ಯೀಕರಣ ಮಾಡುವ ಸಂದರ್ಭಗಳನ್ನು ಸಟ್ಟಾ ವ್ಯಾಪಾರದಾರರು ಮೊದಲೇ ಊಹಿಸಬಲ್ಲರು. ಈ ರೀತಿ ಊಹಿಸಿದಾಗ ಅವರು ಅಪಮೌಲ್ಯೀಕರಣಕ್ಕೆ ಮುಂಚೆಯೇ ತಮ್ಮಲ್ಲಿರುವ ಎಲ್ಲಾ ಹಣವನ್ನು ಮಾರಾಟ ಮಾಡಿ ಅಪಾರ ಲಾಭವನ್ನು ಗಳಿಸಬಲ್ಲರು.

6. ಸಂಕೀರ್ಣವಾದ ವಿನಿಮಯ ನಿಯಂತ್ರಣ ವ್ಯವಸ್ಥೆ (Complicated Exchange Control Mechanism): ಸ್ಥಿರ ವಿನಿಮಯ ದರ ಪದ್ಧತಿಯ ಪಾಲನೆಯು ಸಂಕೀರ್ಣವಾದ ವಿನಿಮಯ ನಿಯಂತ್ರಣ ವ್ಯವಸ್ಥೆಯನ್ನು ಅಪೇಕ್ಷಿಸುತ್ತದೆ. ಇದರಿಂದಾಗಿ ಆರ್ಥಿಕ ಸಂಪನ್ಮೂಲಗಳ ತಪ್ಪು ಹಂಚಿಕೆ, ನೌಕರಶಾಹಿಯ ಅದಕ್ಷತೆ ಮತ್ತು ಭ್ರಷ್ಟಾಚಾರ ಪರಿಣಮಿಸುತ್ತವೆ.

7. ಪಾವತಿ ಶಿಲ್ಕಿನ ಸಮಸ್ಯೆಗೆ ಪರಿಹಾರೋಪಾಯವಿರುವುದಿಲ್ಲ (No Solution to Balance of Payments Problem): ಸ್ಥಿರ ವಿನಿಮಯ ದರ ವ್ಯವಸ್ಥೆಯು ಪಾವತಿ ಶಿಲ್ಕಿನ ಕೊರತೆಯ ಸಮಸ್ಯೆಗೆ ಪರಿಹಾರೋಪಾಯವನ್ನು ಒದಗಿಸುವುದಿಲ್ಲ. ಪಾವತಿ ಶಿಲ್ಕಿನ ಕೊರತೆಯನ್ನು ಅದು ತಾತ್ಕಾಲಿಕವಾಗಿ ಕಡಿಮೆ ಮಾಡಬಹುದು ಅಷ್ಟೇ. ಈ ಪದ್ಧತಿಯ ದೋಷವೇನೆಂದರೆ ವಿನಿಮಯ ದರವನ್ನು ಸ್ಥಿರವಾಗಿಡುವುದೇ ಏಕಮಾತ್ರ ಹಾಗೂ ಅಂತಿಮ ಗುರಿಯಾಗಿ ಉಳಿಯುವುದರಿಂದ ಪಾವತಿ ಶಿಲ್ಕಿನ ಕೊರತೆಯನ್ನು ನಿವಾರಿಸುವ ಪ್ರಯತ್ನಗಳು ಆದ್ಯತೆಯನ್ನು ಪಡೆದುಕೊಳ್ಳುವುದಿಲ್ಲ.

8. ಅಲ್ಪಾವಧಿಗೆ ಮಾತ್ರ ಸೂಕ್ತ (Suited only for Short Period): ಸ್ಥಿರ ವಿನಿಮಯ ದರ ನೀತಿಯನ್ನು ಬಹಳ ದೀರ್ಘಕಾಲದವರೆಗೆ ಅನುಸರಿಸಲು ಸಾಧ್ಯವಿರುವುದಿಲ್ಲ. ತಾಂತ್ರಿಕ ಮತ್ತು ರಚನಾತ್ಮಕ ಬದಲಾವಣೆಗಳು ಸಂಭವಿಸಿದಂತೆ ಅಧಿಕೃತ ವಿನಿಮಯ ದರವು ಅವಾಸ್ತವಿಕವಾಗುತ್ತದೆ. ಪಾವತಿ ಶಿಲ್ಕಿನಲ್ಲಿನ ಸಮಸ್ಯೆಗಳು ಮತ್ತು ಅಂತರರಾಷ್ಟ್ರೀಯ

ಸರಕು ಬೆಲೆಗಳಲ್ಲಿನ ಏರಿಳಿತಗಳಿಂದಾಗಿ ವಿವಿಧ ದೇಶಗಳು ವಿನಿಮಯ ದರವನ್ನು ಬದಲಾಯಿಸಲೇಬೇಕಾಗುತ್ತದೆ. ಆದ್ದರಿಂದ ಸ್ಥಿರ ವಿನಿಮಯ ದರಗಳನ್ನು ಅಲ್ಪಾವಧಿಯಲ್ಲಿ ಮಾತ್ರ ಅನುಸರಿಸಬಹುದಾಗಿರುತ್ತದೆ. ದೀರ್ಘಾವಧಿಯಲ್ಲಿ ಸ್ಥಿರ ವಿನಿಮಯ ದರಗಳು ಪ್ರಾಯೋಗಿಕವಾಗಿ ಅಸಾಧ್ಯವಾಗಿರುತ್ತವೆ ಮತ್ತು ಆರ್ಥಿಕವಾಗಿ ಅದಕ್ಷವಾಗಿರುತ್ತವೆ.

9. ಸಾಂಸ್ಥಿಕ ಏರ್ಪಾಡುಗಳ ಹೆಚ್ಚಿನ ಅವಶ್ಯಕತೆ (Greater need for Institutional Arrangements): ಸ್ಥಿರ ವಿನಿಮಯ ದರ ಪದ್ಧತಿಯಲ್ಲಿ ಪಾವತಿ ಶಿಲ್ಕನ್ನು ಸರಿಪಡಿಸಲು ವ್ಯವಹಾರಗಳಲ್ಲಿ ಹೆಚ್ಚಿನ ಹೊಂದಾಣಿಕೆ ಮಾಡಿಕೊಳ್ಳಬೇಕಾಗಿರುತ್ತದೆ. ಸ್ಥಿರ ವಿನಿಮಯ ದರವನ್ನು ಅನುಸರಿಸುತ್ತಿರುವ ದೇಶಗಳು ದ್ರವ್ಯತೆಯ (ಹಣದ) ಆವಶ್ಯಕತೆಗಳನ್ನು ಪೂರೈಸಿಕೊಳ್ಳಲು ಅಂತರರಾಷ್ಟ್ರೀಯ ಸಾಲ ನೀಡಿಕೆಯ ಸಂಸ್ಥೆಗಳನ್ನು ಅವಲಂಬಿಸಬೇಕಾದ ಸ್ಥಿತಿ ಉದ್ಭವಿಸುತ್ತದೆ.

10. ವಿನಿಮಯ ನಿಧಿಗಳನ್ನು ನಿರ್ಮಿಸುವುದರಲ್ಲಿ ಕಷ್ಟ (Difficulty in Building up of Exchange Reserves): ಸ್ಥಿರ ವಿನಿಮಯ ಪದ್ಧತಿಯಲ್ಲಿ ಪ್ರತಿಯೊಂದು ದೇಶವು ಸಹ ವಿದೇಶಿ ಹಣದ ಜಡ ಸಂಗ್ರಹವನ್ನು ಸಾಕಷ್ಟು ಪ್ರಮಾಣದಲ್ಲಿ ಇಟ್ಟುಕೊಳ್ಳಬೇಕಾಗಿರುತ್ತದೆ. ಇದಕ್ಕಾಗಿ ಕೆಲವು ವರ್ಷಗಳ ಅವಧಿಗಾದರೂ ಪಾವತಿ ಶಿಲ್ಕಿನಲ್ಲಿ ಹೆಚ್ಚಳವನ್ನು ಸಾಧಿಸುವುದು ಅಗತ್ಯವಾಗಿರುತ್ತದೆ. ಅಲ್ಪಾಬಿವೃದ್ಧಿ ದೇಶಗಳಿಗೆ ಇದು ಬಹಳ ಕಷ್ಟದ ಕೆಲಸವಾಗಿರುತ್ತದೆ.

ನಮ್ಯ (ಹೊಂದಿಕೊಳ್ಳುತ್ತಿರುವ) ವಿನಿಮಯ ದರದ ಲಕ್ಷಣಗಳು
(Features of Flexible Exchange Rates)

ನಮ್ಯ ವಿನಿಮಯ ದರವು ಕೆಳಗಿನ ಲಕ್ಷಣಗಳನ್ನು ಪಡೆದಿರುತ್ತದೆ.

1. ಪ್ರಾಧಿಕಾರಿಗಳು ಯಾವುದೇ ಪೂರ್ವನಿರ್ಧರಿತ ವಿನಿಮಯ ದರಕ್ಕೆ ಬದ್ಧರಾಗಿರುವುದಿಲ್ಲ. ಮಾರುಕಟ್ಟೆಯ ಒತ್ತಡಗಳಿಗೆ ತಕ್ಕಂತೆ ಪ್ರತಿಕ್ರಿಯಿಸಲು ಅದನ್ನು ಬಿಟ್ಟುಬಿಡಲಾಗಿರುತ್ತದೆ.
2. ವಿನಿಮಯ ದರದ ನಮ್ಯತೆಯೊಡನೆ ನಾಣ್ಯದ ಪೂರ್ಣಪ್ರಮಾಣದ ಅಥವಾ ಪಾರ್ಶ್ವವಾದ ಪರಿವರ್ತನೆ ಇರಬಹುದು ಅಥವಾ ಇಲ್ಲದಿರಬಹುದು.
3. ವಿದೇಶಿ ವಿನಿಮಯ ದರದಲ್ಲಿ ಸ್ಥಿರತೆಯನ್ನು ಸಾಧಿಸುವುದು ಇಲ್ಲಿ ಮುಖ್ಯ ಉದ್ದೇಶವಾಗಿರುತ್ತದೆ.
4. ವಿನಿಮಯ ದರದ ಚಲನೆಯನ್ನು ಪ್ರಾಧಿಕಾರಿಗಳು ಗಮನಿಸುತ್ತಿರುತ್ತಾರೆ. ಅದರ ಚಲನೆಯಲ್ಲಿ ವಿಪರೀತ ಏರುಪೇರುಗಳಾದರೆ, ಸಟ್ಟಾ ವ್ಯಾಪಾರದ ಉದ್ದೇಶದಿಂದ ಹಣವು ಚಲಿಸುತ್ತಿದ್ದರೆ ಮತ್ತು ಹಣಕಾಸಿನ ಬಿಕ್ಕಟ್ಟು ಸೃಷ್ಟಿಯಾಗುವಂತಿದ್ದರೆ ಇವುಗಳನ್ನು ನಿಯಂತ್ರಣಕ್ಕೆ ತರಲು ಪ್ರಾಧಿಕಾರಿಗಳು ಕೂಡಲೇ ಮಧ್ಯಪ್ರವೇಶ ಮಾಡುತ್ತಾರೆ.

ನಮ್ಯ ವಿನಿಮಯ ದರದ ಪರವಾದ ವಾದಗಳು
(Arguments for Flexible Exchange Rates)

ನಮ್ಯ ವಿನಿಮಯ ದರದ ಪರವಾಗಿ ಕೆಲವು ವಾದಗಳಿವೆ.

1. ಸರಳ ವ್ಯವಸ್ಥೆ (Simple Mechanism): ಬದಲಾಗುತ್ತಿರುವ ವಿನಿಮಯ ದರ ಪದ್ಧತಿಯು ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ಬಹಳ ಸುಲಭ, ಶೀಘ್ರ ಮತ್ತು ದಕ್ಷ ರೀತಿಯಲ್ಲಿ ಕಾರ್ಯಾಚರಣೆಗೊಳ್ಳುತ್ತದೆ. ಇದು ಬೇಡಿಕೆ ಮತ್ತು ಪೂರೈಕೆಯ ಒತ್ತಡಗಳ ನಡುವೆ ಸ್ವಯಂಚಾಲಿತ ಹೊಂದಾಣಿಕೆಯನ್ನು ತರುತ್ತದೆ. ಇದು ಸರಳವಾದ ವ್ಯವಸ್ಥೆಯಾಗಿರುತ್ತದೆ. ಏಕೆಂದರೆ ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ಹಣಕಾಸಿನ ಅಥವಾ ಕೋಶೀಯ ಅಧಿಕಾರಿಗಳ ಮಧ್ಯಪ್ರವೇಶವನ್ನು ಒಳಗೊಳ್ಳದೆ ಇದು ದಕ್ಷವಾಗಿ ಕಾರ್ಯಾಚರಣೆ ಮಾಡಬಲ್ಲದು.

2. ನಿರಂತರ ಹೊಂದಾಣಿಕೆಗಳು (Continuous Adjustments): ಸ್ಥಿರ ವಿನಿಮಯದರ ಪದ್ಧತಿಯಲ್ಲಿ ಆಗಾಗ್ಗೆ ಗಂಡಾಂತರಗಳು ಮತ್ತು ಪಾವತಿ ಶಿಲ್ಕಿನ ಬಿಕ್ಕಟ್ಟುಗಳು ಉದ್ಭವಿಸುತ್ತವೆ. ಇವುಗಳನ್ನು ಸರಿಪಡಿಸಲು ತಿದ್ದುಪಡಿಯ ಕ್ರಮಗಳನ್ನು ಆಗಿಂದಾಗ್ಗೆ ತೆಗೆದುಕೊಳ್ಳಬೇಕಾಗಿರುತ್ತದೆ. ಆದರೆ ಈ ಕ್ರಮಗಳು ಕೆಲವು ಸಂದರ್ಭಗಳಲ್ಲಿ ಸರಿಯಾದ ಯಶಸ್ಸನ್ನು ಹೊಂದುವುದಿಲ್ಲ. ಆದರೆ ಬದಲಾಗುತ್ತಿರುವ ವಿನಿಮಯ ದರಗಳಲ್ಲಿ ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ಸುಗಮವಾದ ಮತ್ತು ನಿರಂತರವಾದ ಹೊಂದಾಣಿಕೆಗಳು ಜರುಗುತ್ತವೆ.

3. ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಉತ್ತೇಜನ (Stimulus to International Trade): ನಮ್ಯವಾದ ಅಥವಾ ಹೊಂದಿಕೊಳ್ಳುತ್ತಿರುವ ವಿನಿಮಯ ದರದಲ್ಲಿ ವಿದೇಶಿ ವಿನಿಮಯ ದರದ ಪ್ರವೃತ್ತಿಯನ್ನು ಸುಲಭವಾಗಿ ಅಂದಾಜು ಮಾಡಲು ಸಾಧ್ಯವಿರುವುದರಿಂದ ಇದು ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಉತ್ತೇಜನ ನೀಡುತ್ತದೆ. ಆಯಾತದಾರ ಅಥವಾ ನಿರ್ಯಾತದಾರನು ಮುಂಗಡ ವಿನಿಮಯ ದರದ ಮೂಲಕ ಯಾವುದೇ ಭಯವಿಲ್ಲದೆ ವ್ಯಾಪಾರವನ್ನು ಕೈಗೊಳ್ಳಬಹುದು. ಉದಾಹರಣೆಗೆ, ಒಬ್ಬ ಆಯಾತದಾರನು ಪ್ರಸ್ತುತ ವಿನಿಮಯ ದರದಲ್ಲಿಯೇ ಮುಂಗಡವಾಗಿ ವಿದೇಶಿ ವಿನಿಮಯವನ್ನು ಪಡೆದು ಸರಕುಗಳನ್ನು ಆಮದು ಮಾಡಿಕೊಳ್ಳಬಹುದು. ಈ ಮೂಲಕ ಆವನು ಭವಿಷ್ಯದಲ್ಲಾಗುವ ವಿನಿಮಯ ದರದ ಏರಿಳಿತಗಳ ಅಪಾಯದಿಂದ ತಪ್ಪಿಸಿಕೊಳ್ಳಬಹುದು.

ಇದಕ್ಕೆ ವಿರುದ್ಧವಾಗಿ, ಸ್ಥಿರ ವಿನಿಮಯ ದರದಲ್ಲಿ ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಉತ್ತೇಜನ ದೊರೆಯುವುದಿಲ್ಲ. ಒಂದೇ ವಿನಿಮಯ ದರವು ಬಹಳ ಕಾಲದವರೆಗೆ ಮುಂದುವರಿದರೆ ಆ ದೇಶದಲ್ಲಿ ಸಂದಾಯ ಶಿಲ್ಕಿನ ಅಸಮತೋಲನ ಏರ್ಪಡಬಹುದು. ಏಕೆಂದರೆ ಸ್ಥಿರ ವಿನಿಮಯ ದರವು ದೀರ್ಘಾವಧಿಯಲ್ಲಿ ದೇಶಕ್ಕೆ ಪ್ರತಿಕೂಲಕರವಾಗಬಹುದು.

4. ದೀರ್ಘಾವಧಿಯಲ್ಲಿ ನೆಲೆಸುವ ದರ (Rate Established in the Long Run): ಸ್ಥಿರ ವಿನಿಮಯ ದರದಿಂದ ಮಾತ್ರ ಅಂತರರಾಷ್ಟ್ರೀಯ ವ್ಯಾಪಾರ ಉತ್ತೇಜನಗೊಳ್ಳುತ್ತದೆಂಬುದು ಸುಳ್ಳು ಎಂದು ವಾದಿಸಲಾಗಿದೆ. ಏಕೆಂದರೆ ದೀರ್ಘಕಾಲದವರೆಗೆ ವಿನಿಮಯ ದರವು ಬದಲಾಗದೆ ಸ್ಥಿರವಾಗಿ ಉಳಿಯಲು ಸಾಧ್ಯವೇ ಇರುವುದಿಲ್ಲ.

5. ಪ್ರಾದೇಶಿಕ ನಾಣ್ಯ ವ್ಯವಸ್ಥೆಗೆ (For Regional Currency System) : ಪ್ರಾದೇಶಿಕ ನಾಣ್ಯ ವ್ಯವಸ್ಥೆಗೂ ಸಹ ಸ್ಥಿರ ವಿನಿಮಯ ದರವು ಅವಶ್ಯಕವಾಗಿರುವುದಿಲ್ಲ. ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಕಾರಣಗಳಿಂದ ಪ್ರಾದೇಶಿಕ ನಾಣ್ಯ ವ್ಯವಸ್ಥೆಯು ಅಸ್ತಿತ್ವದಲ್ಲಿರುತ್ತದೆಯೇ ಹೊರತು ಸ್ಥಿರ ವಿನಿಮಯ ದರದಿಂದಾಗಿ ಅಲ್ಲ ಎಂದು ವಾದಿಸಲಾಗಿದೆ. ನಮ್ಯ ವಿನಿಮಯ ದರದಿಂದ ಪ್ರಾದೇಶಿಕ ನಾಣ್ಯ ವ್ಯವಸ್ಥೆಗೆ ಯಾವ ತೊಂದರೆಯೂ ಸಂಭವಿಸುವುದಿಲ್ಲ.

6. ಸಟ್ಟಾ ವ್ಯಾಪಾರದ ನಿರ್ಮೂಲನ (Eradication of Speculative Trade): ಸ್ಥಿರ ವಿನಿಮಯ ದರದಿಂದ ಸಟ್ಟಾ ವ್ಯಾಪಾರವು ನಿರ್ಮೂಲನವಾಗುವ ಬದಲು ಹೆಚ್ಚುತ್ತದೆಂದು ಅಭಿಪ್ರಾಯಪಡಲಾಗಿದೆ. ದೀರ್ಘಕಾಲದ ನಂತರ ವಿನಿಮಯ ದರವು ಬದಲಾಗುತ್ತದೆಂಬ ಭಾವನೆ ಬೆಳೆದರೆ ಮೌಲ್ಯದಲ್ಲಿ ಅಸ್ಥಿರತೆ ತಲೆದೋರುತ್ತದೆ. ಆದರೆ ನಮ್ಯ ವಿನಿಮಯ ದರದಲ್ಲಿ ಈ ರೀತಿಯ ಪ್ರವೃತ್ತಿಗಳಿಗೆ ಅವಕಾಶವಿರುವುದಿಲ್ಲ.

7. ಆರ್ಥಿಕ ಪ್ರಗತಿಗೆ ಪೂರಕ (Conducive to Economic Progress): ನಮ್ಯ ವಿನಿಮಯ ದರವು ಬದಲಾಗುತ್ತಿರುವ ಸನ್ನಿವೇಶಗಳಿಗೆ ಸುಲಭವಾಗಿ ಹೊಂದಿಕೊಳ್ಳುವುದರಿಂದ ಅದು ಆರ್ಥಿಕ ಪ್ರಗತಿಗೆ ಪೂರಕವಾಗಿರುತ್ತದೆ. ಸ್ಥಿರ ವಿನಿಮಯ ದರದಲ್ಲಿ ಈ ಅನುಕೂಲತೆ ಇರುವುದಿಲ್ಲ.

8. ಆರ್ಥಿಕ ಸಮಸ್ಯೆಗಳು ಹರಡುವ ಅಪಾಯವಿರುವುದಿಲ್ಲ (No Danger of Spread of Economic Problems): ಸ್ಥಿರ ವಿನಿಮಯ ದರದಲ್ಲಿ ಒಂದು ದೇಶದ ಆರ್ಥಿಕ ಸಮಸ್ಯೆಗಳು ಬೇರೆ ದೇಶಗಳಿಗೆ ಸುಲಭವಾಗಿ ಹರಡುತ್ತವೆ. ನಮ್ಯ ವಿನಿಮಯ ದರವು ಈ ಅಪಾಯವನ್ನು ತೊಡೆದು ಹಾಕುತ್ತದೆ.

9. ಸ್ವತಂತ್ರ ಆರ್ಥಿಕ ನೀತಿ (Independent Economic Policy): ನಮ್ಯ ವಿನಿಮಯ ದರದಲ್ಲಿ ಒಂದು ದೇಶವು ಸ್ವತಂತ್ರವಾದ ಆರ್ಥಿಕ ನೀತಿಯನ್ನು ಅನುಸರಿಸಲು ಅವಕಾಶವಿರುತ್ತದೆ. ಸ್ಥಿರ ವಿನಿಮಯ ದರದಲ್ಲಿ ಈ ಅನುಕೂಲತೆ ಇರುವುದಿಲ್ಲ.

10. ಮಿತವ್ಯಯಕಾರಿ (Economical): ಬದಲಾಗುತ್ತಿರುವ ವಿನಿಮಯ ದರವು ಬಹಳ ಮಿತವ್ಯಯಕಾರಿಯಾದುದು. ಸ್ಥಿರ ವಿನಿಮಯ ದರ ಪದ್ಧತಿಯಂತೆ ಇದರಲ್ಲಿ ಅಂತರ ರಾಷ್ಟ್ರೀಯ ಹಣವನ್ನು ಜಡ ರೂಪದಲ್ಲಿ ಇಟ್ಟುಕೊಳ್ಳಬೇಕಾದ ಆವಶ್ಯಕತೆ ಇರುವುದಿಲ್ಲ. ಬದಲಾಗುತ್ತಿರುವ ವಿನಿಮಯ ದರವನ್ನು ಅಳವಡಿಸಿಕೊಂಡಿರುವ ದೇಶಗಳು ತಮ್ಮ ವಿದೇಶಿ ವಿನಿಮಯ ಸಂಪನ್ಮೂಲಗಳನ್ನು ಹಿತಕರವಾಗಿ ಬಳಸಿಕೊಳ್ಳಲು ಅವಕಾಶ ಲಭಿಸುತ್ತದೆ.

11. ಅಂತರರಾಷ್ಟ್ರೀಯ ದ್ರವ್ಯತೆಯ ಸಮಸ್ಯೆಯ ನಿವಾರಣೆ (Removal of the problem of International Liquidity): ಬದಲಾಗುತ್ತಿರುವ ವಿನಿಮಯ ದರವನ್ನು ಅಳವಡಿಸಿಕೊಂಡಿರುವ ದೇಶವು ಪಾವತಿ ಶಿಲ್ಕಿನ ಕೊರತೆಯನ್ನು ಅನುಭವಿಸುತ್ತಿದ್ದರೆ ತನ್ನ ನಾಣ್ಯವನ್ನು ಅಪಮೌಲ್ಯಗೊಳಿಸುವ ಮೂಲಕ ಪಾವತಿ ಶಿಲ್ಕಿನಲ್ಲಿ ಸಮತೋಲನವನ್ನು ಸಾಧಿಸಬಹುದು. ಈ ವಿನಿಮಯ ದರದಲ್ಲಿ ಅಂತರರಾಷ್ಟ್ರೀಯ ದ್ರವ್ಯತೆಯ ಸಮಸ್ಯೆಯು ಸುಲಭವಾಗಿ ನಿವಾರಣೆಯಾಗುತ್ತದೆ.

12. ನಿಯಂತ್ರಣಗಳ ಆವಶ್ಯಕತೆ ಇರುವುದಿಲ್ಲ (No Necessity of Controls): ನಮ್ಯ ವಿನಿಮಯ ವ್ಯವಸ್ಥೆಯು ಮಾರುಕಟ್ಟೆ ಹೊಂದಾಣಿಕೆಗಳ ಮೂಲಕ ವಿವಿಧ ದೇಶಗಳ ನಾಣ್ಯಗಳ ವಿನಿಮಯ ಮೌಲ್ಯಗಳನ್ನು ಅವುಗಳ ಸಹಜ ದರದಲ್ಲಿ ಕಾಪಾಡುತ್ತದೆ. ಆದ್ದರಿಂದ ಈ ವಿನಿಮಯ ದರ ಪದ್ಧತಿಯಲ್ಲಿ ರಫ್ತುಗಳು, ಆಮದುಗಳು, ಬಂಡವಾಳ ಚಲನೆಗಳು ಮುಂತಾದವುಗಳ ಮೇಲೆ ಯಾವುದೇ ನಿಯಂತ್ರಣಗಳನ್ನು ವಿಧಿಸುವ ಆವಶ್ಯಕತೆ ಇರುವುದಿಲ್ಲ.

13. ಪ್ರತೀಕಾರವಿರುವುದಿಲ್ಲ (No Retaliation): ಸ್ಥಿರ ವಿನಿಮಯ ದರದಲ್ಲಿ ದೇಶಗಳು ಸ್ಪರ್ಧಾತ್ಮಕವಾಗಿ ಮತ್ತು ಪ್ರತೀಕಾರ ರೂಪವಾಗಿ ನಾಣ್ಯವನ್ನು ಅಪಮೌಲ್ಯಗೊಳಿಸುವ ಅಪಾಯವಿರುತ್ತದೆ. ಹಿಂದೆ ಅನೇಕ ಸಂದರ್ಭಗಳಲ್ಲಿ ಇದು ನಡೆದಿದೆ. ಆದರೆ ನಮ್ಯ ವಿನಿಮಯ ದರದಲ್ಲಿ ಈ ಅಪಾಯವಿರುವುದಿಲ್ಲ.

ಬಹಳ ದೀರ್ಘಕಾಲದವರೆಗೆ ಸ್ಥಿರವಾಗುವ ಮತ್ತು ಸದಾ ಹೊಂದಿಕೊಳ್ಳುತ್ತಿರುವ ವಿನಿಮಯ ದರಗಳೆರಡೂ ಯೋಗ್ಯವಾದವುಗಳಲ್ಲ ಎನ್ನಬಹುದು. ಕೆಲವು ಕಾಲದವರೆಗೆ ಸ್ಥಿರವಾಗಿದ್ದು ಸನ್ನಿವೇಶಗಳಿಗೆ ತಕ್ಕಂತೆ ಬದಲಾಗಿ ಹೊಂದಿಕೊಳ್ಳುವಂತಹ ವಿನಿಮಯ ದರವು ಅತ್ಯುತ್ತಮವಾದುದೆಂದು ಪರಿಗಣಿಸಲಾಗಿದೆ.

ನಮ್ಯ ವಿನಿಮಯ ದರದ ವಿರುದ್ಧ ವಾದಗಳು
(Arguments Against Flexible Exchange Rates)

ನಮ್ಯ ವಿನಿಮಯ ದರದ ವಿರುದ್ಧದ ವಾದಗಳು ಕೆಳಗಿನಂತಿವೆ.

1. ಅರ್ಥವ್ಯವಸ್ಥೆಗೆ ಗಂಡಾಂತರ (Risk to the Economy): ಮಾರುಕಟ್ಟೆ ಒತ್ತಡಗಳ ಮುಕ್ತ ಕಾರ್ಯಾಚರಣೆಯಿಂದ ನಿರ್ಧಾರವಾದ ವಿನಿಮಯ ದರವು ಅರ್ಥವ್ಯವಸ್ಥೆಯಲ್ಲಿ ಹಲವು ಗಂಡಾಂತರಗಳನ್ನು ಸೃಷ್ಟಿಸುತ್ತದೆ. ಅದು ವಿಪರೀತ ಪ್ರಮಾಣದಲ್ಲಿ ಏರಿಳಿಯುತ್ತಿದ್ದರೆ ಸ್ವದೇಶೀ ಅರ್ಥವ್ಯವಸ್ಥೆಯು ಕಾರ್ಯನಿರ್ವಹಣೆಗೆ ಅಡಚಣೆಯುಂಟಾಗುತ್ತದೆ. ನಮ್ಯ ವಿನಿಮಯ ದರವು ಅಸ್ಥಿರತೆ, ಅನಿಶ್ಚಿತತೆ ಮತ್ತು ಗೊಂದಲವನ್ನು ಸೃಷ್ಟಿಸುತ್ತದೆ.

2. ಬೆಲೆಯ ಅನಿಶ್ಚಿತತೆ (Price Uncertainty): ನಮ್ಯ ವಿನಿಮಯ ದರಗಳಲ್ಲಿ ಬೆಲೆಗಳು ಏರುಪೇರಾಗುತ್ತಿರುವುದರಿಂದ ವಿದೇಶಿ ವಿನಿಮಯಕ್ಕಾಗಿ ತಾವು

ಪಾವತಿಸಬೇಕಾಗಿರುವ ಅಥವಾ ಸ್ವೀಕರಿಸಬೇಕಾಗಿರುವ ಬೆಲೆಯ ಬಗ್ಗೆ ರಫ್ತುದಾರರು ಮತ್ತು ಆಮದುದಾರರು ನಿಶ್ಚಿತತೆಯನ್ನು ಹೊಂದಿರಲು ಸಾಧ್ಯವಾಗುವುದಿಲ್ಲ. ಇದು ವಿದೇಶಿ ವ್ಯಾಪಾರದ ಮೇಲೆ ದುಷ್ಪರಿಣಾಮವನ್ನು ಬೀರುತ್ತದೆ.

3. ಸಟ್ಟಾ ವ್ಯಾಪಾರದ ಅಪಾಯ (Danger of Speculation): ನಮ್ಯ ವಿನಿಮಯ ದರ ವ್ಯವಸ್ಥೆಯಲ್ಲಿ ವಿನಿಮಯ ದರಗಳು ಅಗಾಧವಾದ ಏರಿಳಿತಗಳಿಗೆ ಒಳಗಾಗುವುದರಿಂದ ವಿದೇಶಿ ವಿನಿಮಯದ ಬೆಲೆ ಬಹಳ ಕಡಿಮೆ ಇರುವಾಗ ಖರೀದಿಸಿ, ಅದರ ಬೆಲೆ ಏರಿದಾಗ ಮಾರಾಟ ಮಾಡುವ ಪ್ರವೃತ್ತಿ ಬೆಳೆಯುತ್ತದೆ. ಈ ರೀತಿಯ ಸಟ್ಟಾ ವ್ಯಾಪಾರವು ಅಂತರರಾಷ್ಟ್ರೀಯ ವ್ಯಾಪಾರ ಮತ್ತು ವಿದೇಶಿ ಬಂಡವಾಳ ಚಲನೆಯ ಮೇಲೆ ಮಾರಕ ಪರಿಣಾಮಗಳನ್ನು ಬೀರುತ್ತದೆ.

4. ಹಣದುಬ್ಬರ (Inflation): ನಮ್ಯ ವಿನಿಮಯ ದರಗಳ ಪದ್ಧತಿಯು ಅರ್ಥವ್ಯವಸ್ಥೆಯಲ್ಲಿ ಹಣದುಬ್ಬರಕ್ಕೆ ಕಾರಣವಾಗುತ್ತದೆ. ಹಣಪಾವತಿಗಳ ಕೊರತೆಯ ಕಾರಣದಿಂದ ನಾಣ್ಯವು ಅಪಮೌಲ್ಯಗೊಂಡಾಗ ಆಮದುಗಳು ದುಬಾರಿಯಾಗುತ್ತವೆ. ದುಬಾರಿ ಬೆಲೆಯ ಆಮದು ಸರಕುಗಳಿಂದಾಗಿ ಸ್ವದೇಶೀ ಮಾರುಕಟ್ಟೆಯಲ್ಲಿ ಬೆಲೆಗಳು ವಿಪರೀತವಾಗಿ ಹೆಚ್ಚುತ್ತವೆ.

D. ವಿನಿಮಯ ದರದ ನಿರ್ಧಾರ
(Determination of the Rate of Exchange)

ವಿನಿಮಯ ದರವು ಒಂದು ನಾಣ್ಯಕ್ಕೆ ಹೋಲಿಸಿದಂತೆ ಇನ್ನೊಂದು ನಾಣ್ಯಕ್ಕೆ ಪರಿವರ್ತಿಸುವ ದರವಾಗಿರುವುದರಿಂದ ಅದು ಪೂರೈಕೆ ಮತ್ತು ಬೇಡಿಕೆಯ ಸಂಗತಿಗಳಿಂದ ನಿರ್ಧಾರವಾಗುತ್ತದೆ. ಅಂದರೆ ಒಂದು ನಾಣ್ಯದ ಪೂರೈಕೆ ಮತ್ತು ಬೇಡಿಕೆಗೆ ಹೋಲಿಸಿದಂತೆ ಇನ್ನೊಂದು ನಾಣ್ಯದ ಪೂರೈಕೆ ಮತ್ತು ಬೇಡಿಕೆಗಳು ವಿನಿಮಯ ದರವನ್ನು ನಿರ್ಧರಿಸುತ್ತವೆ. ಒಂದು ಹಣದ ಪೂರೈಕೆಯು ಅದಕ್ಕಿರುವ ಬೇಡಿಕೆಗೆ ಸಮನಾಗಿದ್ದಾಗ ವಿನಿಮಯ ದರವು ಸರಿಸಮ (at par) ಇದೆಯೆಂದು ಹೇಳಲಾಗುತ್ತದೆ. ಸರಿಸಮ ವಿನಿಮಯ ದರವನ್ನು 'ಸಮತೋಲನದ ವಿನಿಮಯ ದರ' (Equilibrium Rate of Exchange) ಎಂತಲೂ ಕರೆಯಲಾಗುವುದು. ಒಂದು ಹಣದ ಪೂರೈಕೆಯು ಅದಕ್ಕಿರುವ ಬೇಡಿಕೆಗಿಂತ ಹೆಚ್ಚಾಗಿದ್ದರೆ ಆಗ ಆ ಹಣದ ಮೌಲ್ಯವು ಇಳಿದು ವಿನಿಮಯ ದರವು ಸಮತೋಲನದ ದರಕ್ಕಿಂತ ಕಡಿಮೆಯಾಗುತ್ತದೆ. ಬದಲಾಗಿ ಒಂದು ಹಣಕ್ಕಿರುವ ಬೇಡಿಕೆಯು ಅದರ ಪೂರೈಕೆಗಿಂತ ಹೆಚ್ಚಾಗಿದ್ದರೆ ಆಗ ಆ ಹಣದ ಮೌಲ್ಯವು ಜಾಸ್ತಿಯಾಗಿ ವಿನಿಮಯ ದರವು ಸಮತೋಲನ ದರಕ್ಕಿಂತ ಅಧಿಕವಾಗುತ್ತದೆ.

ಸಮತೋಲನದ ವಿನಿಮಯ ದರದ ನಿರ್ಧಾರವನ್ನು ಪರಿಶೀಲಿಸಲು ವಿದೇಶಿ ವಿನಿಮಯಕ್ಕಿರುವ ಬೇಡಿಕೆ ಮತ್ತು ಅದರ ಪೂರೈಕೆ (ನೀಡಿಕೆ) ಎರಡೂ ಸಂಗತಿಗಳನ್ನು ಅಭ್ಯಸಿಸಬೇಕಾಗಿರುತ್ತದೆ.

1. ವಿದೇಶಿ ವಿನಿಮಯಕ್ಕೆ ಬೇಡಿಕೆ

(Demand for Foreign Exchange)

ಒಂದು ದೇಶವು ಇನ್ನೊಂದು ದೇಶದಿಂದ ಸರಕುಗಳನ್ನು ಆಮದು ಮಾಡಿಕೊಳ್ಳಲು ವಿದೇಶಿ ವಿನಿಮಯವು ಅಗತ್ಯವಾಗುತ್ತದೆ. ಅಂದರೆ ಬೇರೊಂದು ದೇಶದಿಂದ ಸರಕುಗಳನ್ನು ತರಿಸಿಕೊಳ್ಳಲು ಆ ದೇಶದ ಹಣವನ್ನು ನೀಡಬೇಕಾಗಿರುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಸರಕುಗಳನ್ನು ಆಮದು ಮಾಡಿಕೊಂಡ ದೇಶಕ್ಕೆ ಸರಕುಗಳನ್ನು ರಫ್ತು ಮಾಡಿದ ದೇಶದ ಹಣವು ಆವಶ್ಯಕವಾಗಿರುತ್ತದೆ. ಭಾರತ ಮತ್ತು ಅಮೆರಿಕ ಈ ಎರಡು ದೇಶಗಳ ಉದಾಹರಣೆಯನ್ನು ತೆಗೆದುಕೊಳ್ಳೋಣ. ಭಾರತವು ಅಮೆರಿಕದಿಂದ ಸರಕುಗಳನ್ನು ಆಮದು ಮಾಡಿಕೊಳ್ಳಬೇಕಾದರೆ, ಅಮೆರಿಕದ ಡಾಲರಿಗೆ ಭಾರತದಿಂದ ಬೇಡಿಕೆ ಇದೆ ಎಂದರ್ಥ.

ಅಂತೆಯೇ ವಿದೇಶಿ ಬಂಡವಾಳದ ಚಲನೆಯ ಕಾರಣದಿಂದಲೂ ವಿದೇಶಿ ವಿನಿಮಯಕ್ಕೆ ಬೇಡಿಕೆ ಬರುತ್ತದೆ. ಒಂದು ದೇಶವು ಇನ್ನೊಂದು ದೇಶದಿಂದ ಪಡೆದಿರುವ ಸಾಲಗಳನ್ನು ಮತ್ತು ಸಾಲದ ಮೇಲೆ ಬಡ್ಡಿಯನ್ನು ಪಾವತಿಸಲು ವಿದೇಶಿ ವಿನಿಮಯವು ಅಗತ್ಯವಾಗಿರುತ್ತದೆ. ಉದಾಹರಣೆಗೆ, ಭಾರತವು ಅಮೆರಿಕದಿಂದ ಸಾಲಗಳನ್ನು ಪಡೆದಿದ್ದರೆ, ಈಗ ಆ ಸಾಲದ ಮರುಪಾವತಿ ಮತ್ತು ಬಡ್ಡಿಯ ಪಾವತಿಯನ್ನು ಅಮೆರಿಕದ ಡಾಲರಿನಲ್ಲಿಯೇ ಮಾಡಬೇಕಾಗಿರುತ್ತದೆ. ಭಾರತದ ರೂಪಾಯಿಯನ್ನು ಡಾಲರಿಗೆ ಪರಿವರ್ತಿಸಿ, ಡಾಲರನ್ನು ಪಡೆದುಕೊಳ್ಳುವ ಆವಶ್ಯಕತೆ ಇರುತ್ತದೆ.

ಯಾವುದೊಂದು ದೇಶದಿಂದ ವಿದೇಶಿ ವಿನಿಮಯಕ್ಕೆ ಯಾವ ಪ್ರಮಾಣದಲ್ಲಿ ಬೇಡಿಕೆ ಇದೆ ಎಂಬುದು ಅದರ ಆಮದುಗಳ ಗಾತ್ರ ಮತ್ತು ಬಂಡವಾಳ ಚಲನೆಯ ಪ್ರಮಾಣವನ್ನು ಅವಲಂಬಿಸಿದೆ. ಸರಕುಗಳನ್ನು ಅಧಿಕ ಪ್ರಮಾಣದಲ್ಲಿ ಆಮದು ಮಾಡಿಕೊಂಡರೆ ಹಾಗೂ ಸಾಲ ಮರುಪಾವತಿ ಮತ್ತು ಬಡ್ಡಿಯ ಪಾವತಿಗೆ ಅಗಾಧ ವೊತ್ತದ ಹಣವು ಆವಶ್ಯಕವಾಗಿದ್ದರೆ ವಿದೇಶಿ ವಿನಿಮಯಕ್ಕೆ ಬೇಡಿಕೆ ಸಹಜವಾಗಿ ಹೆಚ್ಚಾಗಿರುತ್ತದೆ. ತದ್ವಿರುದ್ಧವಾಗಿ, ಆಮದುಗಳ ಗಾತ್ರ ಕಡಿಮೆ ಇದ್ದರೆ ಹಾಗೂ ಸಾಲದ ಮರುಪಾವತಿ ಮತ್ತು ಬಡ್ಡಿಯ ಪಾವತಿ ಅಲ್ಪ ಮೊತ್ತದ್ದಾಗಿದ್ದರೆ ವಿದೇಶಿ ವಿನಿಮಯಕ್ಕೆ ಬೇಡಿಕೆ ಸಹಜವಾಗಿ ತಗ್ಗಿದ ಮಟ್ಟದಲ್ಲಿರುತ್ತದೆ.

2. ವಿದೇಶಿ ವಿನಿಮಯದ ಪೂರೈಕೆ


(Supply of Foreign Exchange)

ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ವಿದೇಶಿ ವಿನಿಮಯಕ್ಕೆ ಬೇಡಿಕೆ ಇರುವಂತೆ ಅದರ ಪೂರೈಕೆಯೂ ಇರುತ್ತದೆ. ವಿದೇಶಿ ಹಣದ ಪೂರೈಕೆಯು ಅನೇಕ ಕಾರಣಗಳಿಂದ ಆಗುತ್ತದೆ. ಭಾರತ ಮತ್ತು ಅಮೆರಿಕ ಈ ಎರಡು ದೇಶಗಳ ಉದಾಹರಣೆಯನ್ನು ತೆಗೆದುಕೊಳ್ಳೋಣ. ಈಗ ಭಾರತಕ್ಕೆ ಸಂಬಂಧಿಸಿದಂತೆ ಡಾಲರುಗಳ ಪೂರೈಕೆ ಎಂದರೆ

ಭಾರತದಿಂದ ಅಮೆರಿಕಕ್ಕೆ ರಫ್ತು ಮಾಡಲಾಗುವ ಸರಕುಗಳಿಗೆ ಪಾವತಿ, ಭಾರತೀಯ ಸಂಸ್ಥೆಗಳು ಮತ್ತು ವ್ಯಕ್ತಿಗಳು ಅಮೆರಿಕದವರಿಗೆ ಸಲ್ಲಿಸಿದ ಸೇವೆಗಳಿಗೆ ಹಣ ಸಂದಾಯ ಮತ್ತು ಅನೇಕ ಕಾರಣಗಳಿಂದಾಗಿ ಅಮೆರಿಕದಿಂದ ಭಾರತಕ್ಕೆ ಹರಿದು ಬರುವ ಹಣವಾಗಿರುತ್ತದೆ. ಅಮೆರಿಕದ ಆಯಾತದಾರರು ಮತ್ತು ಭಾರತದಿಂದ ಸೇವೆಯನ್ನು ಪಡೆದವರು ಡಾಲರುಗಳನ್ನು ರೂಪಾಯಿಗೆ ವಿನಿಮಯ ಮಾಡಿಕೊಂಡು ಭಾರತೀಯರಿಗೆ ಪಾವತಿ ಮಾಡುವರು. ಈ ಕಾರಣದಿಂದ ಡಾಲರಿನ ಪೂರೈಕೆಯಾಗುತ್ತದೆ.

ಅಮೆರಿಕದ ಆಮದುಗಳ ಪ್ರಮಾಣ, ಅಮೆರಿಕದವರು ಭಾರತೀಯರಿಂದ ಪಡೆಯುವ ಸೇವೆಗಳ ಗಾತ್ರ ಮೊದಲಾದವು ಅಧಿಕವಾಗಿದ್ದರೆ ಭಾರತಕ್ಕೆ ಡಾಲರಿನ ಪೂರೈಕೆ ಹೆಚ್ಚಾಗಿರುತ್ತದೆ. ಇದಕ್ಕೆ ವಿರುದ್ಧವಾಗಿ, ಅಮೆರಿಕದ ಆಮದುಗಳ ಪ್ರಮಾಣ ಮತ್ತು ಭಾರತೀಯರಿಂದ ಅಮೆರಿಕದವರು ಪಡೆದ ಸೇವೆಗಳ ಗಾತ್ರ ಕಡಿಮೆ ಇದ್ದರೆ ಡಾಲರಿನ ಪೂರೈಕೆಯೂ ಕಡಿಮೆ ಇರುತ್ತದೆ.

3.1ನೇ ರೇಖಾಚಿತ್ರ ಸಮತೋಲನ ವಿನಿಮಯ ದರದ ನಿರ್ಧಾರವನ್ನು ತೋರಿಸುತ್ತದೆ.



ರೇಖಾಚಿತ್ರ 3.1

ರೇಖಾ ಚಿತ್ರ 3.1ರಲ್ಲಿ OX ತಲಾಕ್ಷದಲ್ಲಿ ವಿದೇಶಿ ವಿನಿಮಯ ಪ್ರಮಾಣವನ್ನು ಮತ್ತು OY ಲಂಬಾಕ್ಷದಲ್ಲಿ ವಿನಿಮಯ ದರವನ್ನು ವ್ಯಕ್ತಪಡಿಸಲಾಗಿದೆ. SS ರೇಖೆಯು ವಿದೇಶಿ ವಿನಿಮಯದ ಪೂರೈಕೆಯನ್ನು ಮತ್ತು DD ರೇಖೆಯು ವಿದೇಶಿ ವಿನಿಮಯದ ಬೇಡಿಕೆಯನ್ನು ಪ್ರತಿನಿಧಿಸುತ್ತವೆ.

ವಿದೇಶಿ ವಿನಿಮಯದ ಪೂರೈಕೆಯ ಮತ್ತು ಬೇಡಿಕೆಯ ರೇಖೆಗಳು ಸಂಧಿಸುವ ಸ್ಥಳದಲ್ಲಿ ಸಮತೋಲನದ ವಿನಿಮಯ ದರವು ನಿರ್ಧಾರವಾಗುತ್ತದೆ. ಇವೆರಡೂ E ಬಿಂದುವಿನಲ್ಲಿ ಸಂಧಿಸುವುದರಿಂದ OR ಸಮತೋಲನದ ವಿನಿಮಯ ದರದಲ್ಲಿ OQ ಪ್ರಮಾಣದ ವಿದೇಶಿ ವಿನಿಮಯವು ಬೇಡಿಕೆಯಲ್ಲಿದೆ ಮತ್ತು ಪೂರೈಕೆಯಾಗುತ್ತದೆ. OR ವಿನಿಮಯ ದರದಲ್ಲಿ ಡಾಲರಿಗೆ ಭಾರತದ ಬೇಡಿಕೆ ಮತ್ತು ಡಾಲರುಗಳ ಅಮೆರಿಕದ

ಪೂರ್ಕೆ ಸಮನಾಗಿವೆ. ಇದಕ್ಕಿಂತ ಉನ್ನತವಾದ ವಿನಿಮಯ ದರದಲ್ಲಿ ಡಾಲರಿನ ಪೂರ್ಕೆಯು ಅದಕ್ಕಿರುವ ಬೇಡಿಕೆಗಿಂತ ಅಧಿಕವಾಗಿರುತ್ತದೆ. ಚಿತ್ರದಲ್ಲಿ ವ್ಯಕ್ತವಾಗುವಂತೆ ವಿನಿಮಯ ದರವು ORನಿಂದ OR_1ಗೆ ಏರಿದಾಗ ಡಾಲರುಗಳ ಪೂರ್ಕೆಯು R_1B ಆಗಿದೆ ಮತ್ತು ಡಾಲರುಗಳಿಗೆ ಬೇಡಿಕೆಯು R_1A ಆಗಿದೆ. ಅಂದರೆ ವಿನಿಮಯ ದರದ ಏರಿಕೆಯ ಪರಿಣಾಮವಾಗಿ ಡಾಲರುಗಳ ಪೂರ್ಕೆಯು ಬೇಡಿಕೆಗಿಂತ AB ಪ್ರಮಾಣದಷ್ಟು ಜಾಸ್ತಿಯಾಗಿದೆ. ಡಾಲರಿನ ಪೂರ್ಕೆಯ ಹೆಚ್ಚಳದ ಫಲವಾಗಿ ಅದರ ಬೆಲೆಯು ಕುಸಿಯುತ್ತವೆ. ಮತ್ತು ಹೊಸ ವಿನಿಮಯ ದರವು ನೆಲೆಗೊಳ್ಳುತ್ತದೆ. ಡಾಲರಿನ ಬೆಲೆಯ ಇಳಿತದೊಂದಿಗೆ ಪುನಃ OR ಮಟ್ಟದ ವಿನಿಮಯ ದರವು ಸ್ಥಾಪನೆಗೊಂಡಿದೆ. ತದ್ವಿರುದ್ಧವಾಗಿ, ಇದಕ್ಕಿಂತ ಕೆಳಗಿನ ಮಟ್ಟದ ವಿನಿಮಯ ದರದಲ್ಲಿ ಡಾಲರುಗಳಿಗೆ ಬೇಡಿಕೆಯು ಅದರ ಪೂರ್ಕೆಯನ್ನು ಮೀರಿರುತ್ತದೆ. ಚಿತ್ರದಲ್ಲಿ ಗೊತ್ತಾಗುವಂತೆ ವಿನಿಮಯ ದರವು OR_2ಗೆ ಕುಸಿದಾಗ ಡಾಲರುಗಳ ಪೂರ್ಕೆಯು R_2G ಮತ್ತು ಬೇಡಿಕೆಯು R_2H ಆಗಿದೆ. ಡಾಲರುಗಳ ಪೂರ್ಕೆಯು ಬೇಡಿಕೆಗಿಂತ GH ಪ್ರಮಾಣ ದಷ್ಟು ಅಧಿಕವಾಗಿರುವುದು ಇದರಿಂದ ತಿಳಿಯುತ್ತದೆ. ಬೇಡಿಕೆಯ ಏರಿಕೆ ಕಾರಣದಿಂದ ಡಾಲರಿನ ಬೆಲೆಯೂ ಅಧಿಕಗೊಳ್ಳುತ್ತದೆ. ಬೆಲೆಯ ಏರಿಕೆಯೊಂದಿಗೆ ಡಾಲರುಗಳಿಗೆ ಬೇಡಿಕೆಯು ಕಡಿಮೆಯಾಗುತ್ತದೆ ಮತ್ತು ಪೂರ್ಕೆಯು ವೃದ್ಧಿಯಾಗುತ್ತದೆ. ಇದರಿಂದಾಗಿ ವಿನಿಮಯ ದರವು ಪುನಃ OR ಮಟ್ಟದಲ್ಲಿ ಸ್ಥಾಪನೆಯಾಗುತ್ತದೆ. ಆದ್ದರಿಂದ OQ ಸಮತೋಲನದ ವಿದೇಶಿ ವಿನಿಮಯ ಪ್ರಮಾಣವಾಗಿದೆ.

ಸಮತೋಲನದ ವಿನಿಮಯದ ದರವು ಬೇರೆ ಬೇರೆ ನಾಣ್ಯ ಪದ್ಧತಿಗಳಲ್ಲಿ ವಿಭಿನ್ನ ವಿಧಗಳಲ್ಲಿ ನಿರ್ಧಾರವಾಗುತ್ತದೆ. ಎರಡೂ ದೇಶಗಳೂ ಚಿನ್ನದ ಪ್ರಮಿತಿಯನ್ನು ಹೊಂದಿದ್ದರೆ, ಎರಡೂ ನಾಣ್ಯಗಳ ವಿನಿಮಯದ ದರವು ಅವು ಒಳಗೊಂಡಿರುವ ಚಿನ್ನದ ಪ್ರಮಾಣದ ಮೂಲಕ ನಿರ್ಧಾರವಾಗುತ್ತದೆ. ಇದನ್ನು **ಟಂಕಸಾಲೆಯ ವಿನಿಮಯ ದರ** (Mint Parity of Exchange) ಎಂದು ಕರೆಯಲಾಗಿದೆ. ಎರಡೂ ದೇಶಗಳು ವಿವಿಧ ಲೋಹ ಪ್ರಮಿತಿಗಳನ್ನು ಅನುಸರಿಸುತ್ತಿದ್ದರೆ, ಆಯಾ ನಾಣ್ಯಗಳಲ್ಲಿರುವ ಲೋಹದ ಪ್ರಮಾಣಕ್ಕೆ ತಕ್ಕಂತೆ ವಿನಿಮಯ ದರವು ನಿರ್ಧಾರವಾಗುತ್ತದೆ. **ಉದಾಹರಣೆಗೆ,** ಒಂದು ದೇಶವು ಚಿನ್ನದ ಪ್ರಮಿತಿಯನ್ನು ಮತ್ತು ಇನ್ನೊಂದು ದೇಶವು ಬೆಳ್ಳಿಯ ಪ್ರಮಿತಿಯನ್ನು ಅನುಸರಿಸುತ್ತಿದ್ದರೆ ಆಗ ಚಿನ್ನದ ನಾಣ್ಯದಲ್ಲಿರುವ ಲೋಹಗಳ ಮೌಲ್ಯವನ್ನು ಬೆಳ್ಳಿಯ ನಾಣ್ಯದಲ್ಲಿರುವ ಬೆಳ್ಳಿಯ ಪ್ರಮಾಣ ಹಾಗೂ ಅವೆರಡೂ ಲೋಹಗಳ ಮೌಲ್ಯವನ್ನು ಗಣನೆಗೆ ತೆಗೆದುಕೊಂಡು ವಿನಿಮಯ ದರವನ್ನು ನಿರ್ಧಾರ ಮಾಡಲಾಗುತ್ತದೆ. ಆದರೆ ಈ ಎರಡೂ ಲೋಹಗಳ ಮಾರುಕಟ್ಟೆ ದರವು ಬದಲಾದರೆ ವಿನಿಮಯ ದರವು ಬದಲಾಗುತ್ತದೆ. ಎರಡು ದೇಶಗಳೂ ಅಪರಿವರ್ತನೀಯ ಕಾಗದದ ಹಣದ ಪದ್ಧತಿಯನ್ನು ಹೊಂದಿದ್ದಾಗ

ಎರಡು ಹಣಗಳ ಕೊಳ್ಳುವ ಶಕ್ತಿಯ ಆಧಾರದ ಮೇಲೆ ವಿನಿಮಯ ದರವು ನಿರ್ಧರಿಸಲ್ಪಡುತ್ತದೆ.

ಈಗ ಚಿನ್ನದ ಪ್ರಮಿತಿ ಮತ್ತು ಕಾಗದದ ಪ್ರಮಿತಿಯಲ್ಲಿ ವಿನಿಮಯ ದರವು ನಿರ್ಧಾರವಾಗುವ ವಿಧಾನವನ್ನು ಸ್ವಲ್ಪ ವಿವರಣಾತ್ಮಕವಾಗಿ ಗಮನಿಸೋಣ.

ಚಿನ್ನದ ಪ್ರಮಿತಿಯಲ್ಲಿ
(In Gold Standard)

ಎರಡೂ ದೇಶಗಳು ಚಿನ್ನದ ಪ್ರಮಿತಿಯನ್ನು ಹೊಂದಿದ್ದಾಗ ವಿನಿಮಯ ದರವು ಎರಡೂ ನಾಣ್ಯಗಳಲ್ಲಿರುವ ಚಿನ್ನದ ಪ್ರಮಾಣಕ್ಕನುಗುಣವಾಗಿ ನಿಗದಿಯಾಗುತ್ತದೆ. ಉದಾಹರಣೆಗೆ, ಭಾರತ ಮತ್ತು ಅಮೆರಿಕ ಎರಡೂ ದೇಶಗಳು ಚಿನ್ನದ ಪ್ರಮಿತಿಯನ್ನು ಅನುಸರಿಸುತ್ತಿವೆ ಎಂದು ಭಾವಿಸೋಣ. ಈಗ ಒಂದು ರೂಪಾಯಿ ನಾಣ್ಯದಲ್ಲಿ 5 ಗ್ರಾಂ ಚಿನ್ನ ಮತ್ತು ಒಂದು ಡಾಲರಿನಲ್ಲಿ 25 ಗ್ರಾಂ ಚಿನ್ನ ಅಡಕವಾಗಿದೆ ಎಂದು ತಿಳಿದರೆ ವಿನಿಮಯ ದರವು ಈ ಕೆಳಗಿನಂತಿರುತ್ತದೆ.

$$\text{ಡಾಲರ್ } 1 = \frac{25}{5} = \text{ರೂ. } 5$$

$$1 \text{ ರೂಪಾಯಿ } = \frac{5}{25} = \frac{1}{5} \text{ ಅಥವಾ } 20 \text{ ಸೇಂಟುಗಳು.}$$

ಟಂಕಸಾಲೆಯಲ್ಲಿ ನಾಣ್ಯಗಳು ಮುದ್ರಣವಾಗುವಾಗ ನಾಣ್ಯಗಳಲ್ಲಿರುವ ಚಿನ್ನದ ಪ್ರಮಾಣವನ್ನೇ ವಿನಿಮಯ ದರದ ನಿರ್ಧಾರದಲ್ಲಿ ಗಣನೆಗೆ ತೆಗೆದುಕೊಳ್ಳುವುದರಿಂದ ಇದಕ್ಕೆ ಟಂಕಸಾಲೆಯ ವಿನಿಮಯ ದರವೆಂದು ಹೆಸರು. ಟಂಕಸಾಲೆಯ ವಿನಿಮಯ ದರದ ಮೇರೆಗೆ 5 ರೂಪಾಯಿಗಳು ಒಂದು ಡಾಲರಿಗೆ ಸಮನಾಗಿರುತ್ತದೆ ಎಂಬುದು ತಿಳಿಯಿತು. ಇದು ಸಮತೋಲನದ ವಿನಿಮಯ ದರವಾಗಿರುತ್ತದೆ. ಆದರೆ ಮಾರುಕಟ್ಟೆ ವಿನಿಮಯ ದರವು ಇದಕ್ಕಿಂತ ಸ್ವಲ್ಪ ಬೇರೆಯಾಗಿರಬಹುದು. ಚಿನ್ನವನ್ನು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಸಾಗಿಸಲು ಬ್ಯಾಂಕುಗಳು ವಸೂಲು ಮಾಡುವ ಸೇವಾ ವೆಚ್ಚ, ಸಾಗಣೆ ವೆಚ್ಚ ಮತ್ತು ವಿಮಾ ವೆಚ್ಚದಿಂದ ವಿನಿಮಯ ದರವು ಬದಲಾಗುತ್ತದೆ.

ಅಪರಿವರ್ತನೀಯ ಕಾಗದದ ಪ್ರಮಿತಿಯಲ್ಲಿ
(In Inconvertible Paper Standard)

ಎರಡೂ ದೇಶಗಳು ಅಪರಿವರ್ತನೀಯ ಕಾಗದದ ಪ್ರಮಿತಿಯನ್ನು ಅನುಸರಿಸುತ್ತಿದ್ದರೆ ಎರಡು ನಾಣ್ಯಗಳ ನಡುವಿನ ವಿನಿಮಯ ದರವು ಅವುಗಳ ಕೊಳ್ಳುವ ಶಕ್ತಿಯಿಂದ ನಿರ್ಧಾರವಾಗುತ್ತದೆ. ಇದನ್ನು ಕುರಿತಂತೆ ಒಂದು ಸಿದ್ಧಾಂತವೇ ಇದೆ. ಇದನ್ನು ಕೊಳ್ಳುವ ಶಕ್ತಿಯ ಸರಿಸಮಾನತೆಯ ಸಿದ್ಧಾಂತ ಎಂದು ಕರೆಯಲಾಗಿದೆ.

E. ಕೊಳ್ಳುವ ಶಕ್ತಿಯ ಸರಿಸಮಾನತೆಯ ಸಿದ್ಧಾಂತ
(Purchasing Power Parity Theory)

ಎರಡು ದೇಶಗಳಲ್ಲಿ ಅಪರಿವರ್ತನೀಯ ಕಾಗದದ ಪ್ರಮಿತಿ ಆಚರಣೆಯಲ್ಲಿರುವಾಗ ವಿನಿಮಯ ದರವು ನಿರ್ಧಾರವಾಗುವ ವಿಧಾನವನ್ನು ಈ ಸಿದ್ಧಾಂತವು ವಿವರಿಸುತ್ತದೆ. ವ್ಹೀಟ್ಲಿ ಮತ್ತು ರಿಕಾರ್ಡೊ ಈ ಸಿದ್ಧಾಂತವನ್ನು ಪ್ರತಿಪಾದಿಸಿದ್ದರೂ ಸಹ ಇದನ್ನು ವ್ಯವಸ್ಥಿತವಾಗಿ ಅಭಿವೃದ್ಧಿ ಪಡಿಸಿದ ಕೀರ್ತಿ ಗಸ್ಟಾವ್ ಕ್ಯಾಸಲ್ ಎಂಬ ಸ್ವೀಡನ್ನಿನ ಅರ್ಥಶಾಸ್ತ್ರಜ್ಞನಿಗೆ ಸಲ್ಲುತ್ತದೆ. ಪ್ರಥಮ ಮಹಾಯುದ್ಧದ ನಂತರದ ಅವಧಿಯಲ್ಲಿ ಈ ಸಿದ್ಧಾಂತವು ಬೆಳವಣಿಗೆ ಕಂಡಿತು.

ಎರಡೂ ದೇಶಗಳಲ್ಲಿ ಅಪರಿವರ್ತನೀಯ ಕಾಗದದ ಹಣದ ಪದ್ಧತಿಯನ್ನು ಅನುಸರಿಸುತ್ತಿರುವಾಗ ಎರಡೂ ದೇಶಗಳ ಹಣಗಳ ಕೊಳ್ಳುವ ಶಕ್ತಿಯ ಆಧಾರದ ಮೇಲೆ ವಿನಿಮಯ ದರ ನಿರ್ಧಾರವಾಗುತ್ತದೆ. ಉದಾಹರಣೆಗೆ, ಅಮೆರಿಕ ಮತ್ತು ಭಾರತ ಈ ಎರಡೂ ದೇಶಗಳ ನಡುವೆ ವ್ಯಾಪಾರ ಸಂಪರ್ಕವಿದೆ ಮತ್ತು ಎರಡು ದೇಶಗಳಲ್ಲಿ ಕಾಗದದ ಹಣದ ಪ್ರಮಿತಿ ಅಸ್ತಿತ್ವದಲ್ಲಿದೆ ಎಂದು ಭಾವಿಸೋಣ. ಈಗ ಅಮೆರಿಕನ್ನರಿಗೆ ಭಾರತದ ರೂಪಾಯಿ ಬೇಕಿರುತ್ತದೆ. ಏಕೆಂದರೆ ಭಾರತದಿಂದ ವಸ್ತುಗಳನ್ನು ಆಮದು ಮಾಡಿಕೊಂಡಾಗ ರೂಪಾಯಿಯ ಮೂಲಕ ಪಾವತಿ ಮಾಡಬೇಕಾಗುತ್ತದೆ. ಅಂತೆಯೇ ಭಾರತೀಯರಿಗೆ ಅಮೆರಿಕದ ಡಾಲರುಗಳು ಅಗತ್ಯವಾಗಿರುತ್ತವೆ. ಏಕೆಂದರೆ ಅಮೆರಿಕದಿಂದ ವಸ್ತುಗಳನ್ನು ಆಮದು ಮಾಡಿಕೊಂಡಾಗ ಡಾಲರುಗಳಲ್ಲಿ ಪಾವತಿ ಮಾಡಬೇಕಾಗಿರುತ್ತದೆ. ಆದ್ದರಿಂದ ಭಾರತೀಯರು ಅಮೆರಿಕದಲ್ಲಿ ಡಾಲರಿನಲ್ಲಿ ಕೊಳ್ಳುವ ಶಕ್ತಿಯನ್ನು ಮತ್ತು ಅಮೆರಿಕನ್ನರು ಭಾರತದಲ್ಲಿ ರೂಪಾಯಿಯಲ್ಲಿ ಕೊಳ್ಳುವ ಶಕ್ತಿಯನ್ನು ಗಣನೆಗೆ ತೆಗೆದುಕೊಳ್ಳುತ್ತಾರೆ. ಆಗ ಡಾಲರ್ ಮತ್ತು ರೂಪಾಯಿಯ ಕೊಳ್ಳುವ ಶಕ್ತಿಯನ್ನು ಅವಲಂಬಿಸಿ ವಿನಿಮಯ ದರವು ನಿರ್ಧರಿಸಲ್ಪಡುತ್ತದೆ. ಆದ್ದರಿಂದ ಈ ಸಿದ್ಧಾಂತವನ್ನು **"ಕೊಳ್ಳುವ ಶಕ್ತಿಯ ಸರಿಸಮಾನತೆಯ ಸಿದ್ಧಾಂತ"** ಎಂಬ ಹೆಸರಿನಿಂದ ಕರೆಯಲಾಗಿದೆ.

ಈ ಸಿದ್ಧಾಂತದ ಮೇರೆಗೆ ಎರಡೂ ನಾಣ್ಯಗಳ ನಡುವಿನ ವಿನಿಮಯ ದರವು ಅವುಗಳ ಕೊಳ್ಳುವ ಶಕ್ತಿಯ ಪ್ರಮಾಣವನ್ನು ಅವಲಂಬಿಸಿರುತ್ತದೆ. ಆದರೆ ನಾಣ್ಯದ ಕೊಳ್ಳುವ ಶಕ್ತಿಯು ದೇಶದ ಆಂತರಿಕ ಬೆಲೆಗಳನ್ನು ಆಶ್ರಯಿಸಿರುತ್ತದೆ. ರೂಪಾಯಿಯ ಕೊಳ್ಳುವ ಶಕ್ತಿಯು ಭಾರತದಲ್ಲಿ ಚಾಲ್ತಿಯಲ್ಲಿರುವ ಬೆಲೆಗಳಿಂದ ಮತ್ತು ಡಾಲರಿನ ಕೊಳ್ಳುವ ಶಕ್ತಿ ಅಮೇರಿಕಾದಲ್ಲಿ ಚಾಲ್ತಿಯಲ್ಲಿರುವ ಬೆಲೆಗಳಿಂದ ನಿರ್ಧಾರವಾಗುತ್ತದೆ. ಬೆಲೆಗಳ ಮಟ್ಟವು ಅಧಿಕವಾಗಿದ್ದಾಗ ಹಣದ ಕೊಳ್ಳುವ ಶಕ್ತಿ ಕಡಿಮೆಯಾಗಿ ವಿನಿಮಯ ದರವು ಇಳಿಯುತ್ತದೆ. ಮತ್ತು ಬೆಲೆಗಳ ಮಟ್ಟ ಕಡಿಮೆಯಿದ್ದಾಗ ಹಣದ ಕೊಳ್ಳುವ ಶಕ್ತಿ ಜಾಸ್ತಿಯಾಗಿ ವಿನಿಮಯ ದರವು ಹೆಚ್ಚುತ್ತದೆ. ಉದಾಹರಣೆಗೆ, ಭಾರತದಲ್ಲಿ ಬೆಲೆಗಳು ಏರಿದರೆ ರೂಪಾಯಿಯ ಕೊಳ್ಳುವ ಶಕ್ತಿ ಕಡಿಮೆಯಾಗುವುದರೊಂದಿಗೆ ಅದರ ಮೌಲ್ಯವು ಕಡಿಮೆಯಾಗಿ, ಡಾಲರಿಗೆ ಸಂಬಂಧಿಸಿದಂತೆ ಅದರ ವಿನಿಮಯ ದರವು ತಗ್ಗುತ್ತದೆ. ತದ್ವಿರುದ್ಧವಾಗಿ ಭಾರತದಲ್ಲಿ

ಬೆಲೆಗಳು ಇಳಿದರೆ ರೂಪಾಯಿಯ ಕೊಳ್ಳುವ ಶಕ್ತಿಯು ಹೆಚ್ಚಾಗಿ, ಅದರ ಮೌಲ್ಯದಲ್ಲಿ ಏರಿಕೆಯಾಗುವುದರಿಂದ ಡಾಲರಿಗೆ ಸಂಬಂಧಿಸಿದಂತೆ ಅದರ ವಿನಿಮಯ ದರವು ಏರುತ್ತದೆ. ಆದ್ದರಿಂದ ಕ್ಯಾಸಲ್‌ನ ಪ್ರಕಾರ ಆಂತರಿಕ ಬೆಲೆಗಳ ಮಟ್ಟವು ನಾಣ್ಯದ ಬಾಹ್ಯ ಕೊಳ್ಳುವ ಶಕ್ತಿ ಮತ್ತು ವಿನಿಮಯ ದರವನ್ನು ನಿರ್ಧರಿಸುತ್ತದೆ.

ಕೊಳ್ಳುವ ಶಕ್ತಿಯ ಸಮಾನತೆಯನ್ನು ವ್ಯಕ್ತಪಡಿಸಲು ಒಂದು ಉದಾಹರಣೆಯನ್ನು ತೆಗೆದುಕೊಳ್ಳೋಣ. ಒಂದು ಬೇಲು ಹತ್ತಿಯ ಬೆಲೆ ಭಾರತದಲ್ಲಿ 3000 ರೂಪಾಯಿಗಳಾಗಿದೆ ಮತ್ತು ಅಮೆರಿಕದಲ್ಲಿ 100 ಡಾಲರ್‌ಗಳಾಗಿದೆ ಎಂದು ಭಾವಿಸೋಣ. ಸಾಗಣೆ ವೆಚ್ಚವನ್ನು ನಿರ್ಲಕ್ಷಿಸಿದರೆ ಈ ವಿನಿಮಯ ದರವು ಕೆಳಕಂಡಂತಿರುತ್ತದೆ.

ಡಾಲರ್ 100 = ರೂ. 3000

ಡಾಲರ್ 1 = ರೂ. 30

ಈ ಮೂಲಕ ವಿನಿಮಯ ದರವನ್ನು ಕಂಡುಹಿಡಿಯಬಹುದಾದರೂ ಈ ವಿಧಾನವು ಎಲ್ಲಾ ವಸ್ತುಗಳ ಬೆಲೆಗಳನ್ನು ಒಟ್ಟಾರೆಯಾಗಿ ಗಣನೆಗೆ ತೆಗೆದುಕೊಳ್ಳುವುದಿಲ್ಲ ಮತ್ತು ಬೆಲೆಗಳ ಮಟ್ಟದಲ್ಲಿ ಆಗಿಂದಾಗ್ಗೆ ತಲೆದೋರುವ ವ್ಯತ್ಯಾಸಗಳನ್ನು ಪರಿಗಣಿಸುವುದಿಲ್ಲ. ಪರಿಣಾಮವಾಗಿ ಎರಡೂ ನಾಣ್ಯಗಳ ನಡುವಣ ಕೊಳ್ಳುವ ಶಕ್ತಿಯನ್ನು ಸಮರ್ಪಕವಾಗಿ ಹೋಲಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಸಾರ್ವತ್ರಿಕ ಬೆಲೆಗಳ ಸೂಚ್ಯಂಕವನ್ನು ಗಣನೆಗೆ ತೆಗೆದುಕೊಳ್ಳುವುದು ಸೂಕ್ತವಾಗಿದೆ. ಇದಕ್ಕಾಗಿ ಒಂದು ಮೂಲ ವರ್ಷವನ್ನು ತೆಗೆದುಕೊಂಡು ಪ್ರಸ್ತುತ ಬೆಲೆಗಳನ್ನು ಆ ವರ್ಷದ ಬೆಲೆಗಳೊಡನೆ ಹೋಲಿಸಿ ವಿನಿಮಯ ದರದ ಬದಲಾವಣೆಯನ್ನು ಕಂಡುಹಿಡಿಯಬೇಕಾಗುತ್ತದೆ. ಈಗ ಕೆಳಗೆ ಕೊಟ್ಟ ಉದಾಹರಣೆಯನ್ನು ಗಮನಿಸೋಣ.

2010ರಲ್ಲಿ ಅಮೆರಿಕ ಮತ್ತು ಭಾರತ ಎರಡೂ ದೇಶಗಳಲ್ಲಿ ಸಾರ್ವತ್ರಿಕ ಬೆಲೆಗಳ ಸೂಚ್ಯಂಕವು 100 ಇದ್ದಿತು ಮತ್ತು ವಿನಿಮಯ ದರವು ಡಾಲರ್ 1 = ರೂ. 10 ಆಗಿತ್ತೆಂದು ಊಹಿಸಿಕೊಳ್ಳೋಣ. 2015ರಲ್ಲಿ ಭಾರತದಲ್ಲಿ ಬೆಲೆಗಳು ಎರಡರಷ್ಟು ಹೆಚ್ಚಿವೆ ಮತ್ತು ಅಮೆರಿಕದಲ್ಲಿ ಹಳೆಯ ಮಟ್ಟದಲ್ಲಿಯೇ ಇವೆಯೆಂದು ಭಾವಿಸೋಣ. ಆದ್ದರಿಂದ ಹಳೆಯ ವಿನಿಮಯ ದರವನ್ನು ಬದಲಾದ ಬೆಲೆಯಿಂದ ಗುಣಿಸಿದಾಗ 2015ರ ವಿನಿಮಯ ದರವು ದೊರೆಯುತ್ತದೆ. 2010 ಮತ್ತು 2015ರ ನಡುವೆ ಭಾರತದಲ್ಲಿ ಬೆಲೆಗಳು ಎರಡರಷ್ಟಾಗಿದ್ದು ಅಮೆರಿಕದಲ್ಲಿ ಬೆಲೆಗಳು ಒಂದೇ ಮಟ್ಟದಲ್ಲಿರುವುದರಿಂದ ವಿನಿಮಯ ದರವು ಈ ಕೆಳಗಿನಂತಿರುತ್ತದೆ.

$$\text{2010ರಲ್ಲಿ ಡಾಲರ್ } 1 = \frac{200}{100} \times \text{ರೂ. } 10 = \text{ರೂ. } 20$$

$$\text{2015ರಲ್ಲಿ ರೂ. } 1 = \frac{200}{100} \times 10 \text{ ಸೇಂಟುಗಳು} = 5 \text{ ಸೇಂಟುಗಳು}$$

2010ರಲ್ಲಿ ಹತ್ತು ರೂಪಾಯಿಗಳು ಒಂದು ಡಾಲರಿಗೆ ಸಮನಾಗಿದ್ದರೆ, 2015ರಲ್ಲಿ ಇಪ್ಪತ್ತು ರೂಪಾಯಿಗಳು ಒಂದು ಡಾಲರಿಗೆ ಸಮನಾಗಿವೆ. ಅಂತೆಯೇ 2010ರಲ್ಲಿ ಒಂದು ರೂಪಾಯಿಯು 10 ಸೆಂಟುಗಳಿಗೆ ಸಮನಾಗಿದ್ದರೆ 2015ರಲ್ಲಿ 5 ಸೆಂಟುಗಳಿಗೆ ಮಾತ್ರ ಸಮನಾಗಿದೆ. ಭಾರತದಲ್ಲಿ ಬೆಲೆಗಳು ಎರಡರಷ್ಟು ಹೆಚ್ಚಿರುವುದರಿಂದ ರೂಪಾಯಿಯ ಮೌಲ್ಯ ಅರ್ಧದಷ್ಟಾಗಿದೆ. ಆದ್ದರಿಂದ ಹೊಸ ವಿನಿಮಯ ದರವು ಬದಲಾದ ಆಂತರಿಕ ಬೆಲೆಯ ಮಟ್ಟ ಮತ್ತು ಆ ಮೂಲಕ ಬದಲಾದ ಬಾಹ್ಯಕೊಳ್ಳುವ ಶಕ್ತಿಯಿಂದ ನಿರ್ಧಾರವಾಗುತ್ತದೆ.

ಎರಡು ನಿರೂಪಣೆಗಳು
(Two Versions)

ಕೊಳ್ಳುವ ಶಕ್ತಿಯ ಸರಿಸಮಾನತೆಯ ಸಿದ್ಧಾಂತವು ಎರಡು ನಿರೂಪಣೆಗಳನ್ನು ಹೊಂದಿದೆ. ಅವುಗಳೆಂದರೆ:

i) ನಿರಪೇಕ್ಷ ಅಥವಾ ಧನಾತ್ಮಕ ನಿರೂಪಣೆ, ಮತ್ತು

ii) ಸಾಪೇಕ್ಷ ನಿರೂಪಣೆ

1. ನಿರಪೇಕ್ಷ ಅಥವಾ ಧನಾತ್ಮಕ ನಿರೂಪಣೆ
(Absolute or Positive Version)

ಈ ನಿರೂಪಣೆಯಲ್ಲಿ ಪರಿಗಣನೆಯಲ್ಲಿರುವ ಅವಧಿಗೆ, ಸರಕುಗಳ ಮತ್ತು ಸೇವೆಗಳ ಒಂದೇ ರೂಪದ ಒಂದು ಕಂತೆ (Bundle)ಯನ್ನು ಆಯ್ಕೆ ಮಾಡಲಾಗುತ್ತದೆ ಮತ್ತು ಎರಡೂ ದೇಶಗಳಲ್ಲಿ, ಅವುಗಳ ನಾಣ್ಯಗಳಲ್ಲಿ ಈ ಸರಕುಗಳ ಮತ್ತು ಸೇವೆಗಳ ಬೆಲೆಯನ್ನು ಕಂಡುಹಿಡಿಯಲಾಗುತ್ತದೆ. ಆಗ ಸಮಗ್ರ ಬೆಲೆಗಳ ಪ್ರಮಾಣವು (Ratio) ಎರಡೂ ನಾಣ್ಯಗಳ ನಡುವಿನ ವಿನಿಮಯ ದರದ ಸಮತೋಲನಕ್ಕೆ ಸಮನಾಗುತ್ತದೆ.

ಉದಾಹರಣೆಗೆ, ಸರಕುಗಳ ಮತ್ತುಸೇವೆಗಳ ಆಯ್ಕೆ ಮಾಡಲಾದ ಕಂತೆಯ ಬೆಲೆಯು ಅಮೆರಿಕದಲ್ಲಿ $ 10 ಮತ್ತು ಭಾರತದಲ್ಲಿ 800 ರೂಪಾಯಿಗಳು ಎಂದು ಭಾವಿಸೋಣ. ಈಗ ಈ ನಿರೂಪಣೆಯ ಪ್ರಕಾರ, ಸಮತೋಲನದ ವಿನಿಮಯ ದರವು $ 10 = ರೂ. 800 ಅಥವಾ 1 ಡಾಲರ್ = 80 ರೂಪಾಯಿಗಳು ಆಗಿರುತ್ತದೆ.

ಮಿತಿಗಳು
(Limitations)

ಕೊಳ್ಳುವ ಶಕ್ತಿಯ ಸರಿಸಮಾನತೆಯ ಸಿದ್ಧಾಂತದ ಈ ನಿರೂಪಣೆಯು ಕೆಲವು ಮಿತಿಗಳನ್ನು ಹೊಂದಿದೆ.

1. **ಎರಡೂ ದೇಶಗಳಲ್ಲಿ ಪ್ರತಿಯೊಂದು ಸರಕಿನ ಉತ್ಪಾದನೆ ಅಸಂಭವ** (Production of Every Commodity in Both the Countries is an Impossibility): ಆಯ್ಕೆ ಮಾಡಲಾದ ಸರಕುಗಳನ್ನು ಎರಡೂ ದೇಶಗಳಲ್ಲಿ ಉತ್ಪಾದಿಸುವಂತಿರಬೇಕು ಮತ್ತು ನಿಜವಾಗಿ ಉತ್ಪಾದಿಸುತ್ತಿರಬೇಕು. ಆದರೆ ಈ ಷರತ್ತನ್ನು ಈಡೇರಿಸುವುದು ಕಷ್ಟಕರವಾಗುತ್ತದೆ. ಏಕೆಂದರೆ, ಎರಡೂ ನಾಣ್ಯಗಳ ಕೊಳ್ಳುವ ಶಕ್ತಿಯ ಸರಿಸಮಾನತೆಯನ್ನು ಅಂದಾಜು ಮಾಡುವ ಉದ್ದೇಶವೇನೆಂದರೆ ಎರಡೂ ದೇಶಗಳ ನಡುವೆ ವ್ಯಾಪಾರಕ್ಕೆ ಒಳಪಟ್ಟಿರುವ ಸರಕುಗಳನ್ನು ಪರಿಗಣಿಸುವುದಾಗಿರುತ್ತದೆ. ಆದರೆ ವ್ಯಾಪಾರಕ್ಕೊಳಪಟ್ಟಿರುವ ಪ್ರತಿಯೊಂದು ಸರಕನ್ನು ಎರಡೂ ದೇಶಗಳಲ್ಲಿ ಉತ್ಪಾದಿಸುವುದು ಅಸಂಭವವಾಗಿರಬಹುದು.
2. **ವಸ್ತುನಿಷ್ಠಾತ್ಮಕ ಮಾನದಂಡದ ಕೊರತೆ** (Absence of Objective Criterion): ಎರಡೂ ನಾಣ್ಯಗಳ ಕೊಳ್ಳುವ ಶಕ್ತಿಯನ್ನು ಅಂದಾಜು ಮಾಡುವ ಉದ್ದೇಶದಿಂದ ಸರಕುಗಳ ಕಂತೆಯನ್ನು ಆಯ್ಕೆ ಮಾಡಲು ವಸ್ತುನಿಷ್ಠಾತ್ಮಕ ಮಾನದಂಡ ಗಳಿರುವುದಿಲ್ಲ.
3. **ಬೆಲೆ ಸೂಚ್ಯಂಕಗಳ ಸಂಕಲನದಲ್ಲಿ ಅಡಚಣೆಗಳು** (Obstacles in the Calculation of Price Indices): ವಿವಿಧ ಶ್ರೇಣಿಗಳ ಬೆಲೆ ಸೂಚ್ಯಂಕಗಳ ಸಂಕಲನವು ಅನೇಕ ಅಡಚಣೆಗಳಿಂದ ಬರುತ್ತದೆ.

2. ಸಾಪೇಕ್ಷ ನಿರೂಪಣೆ
(Comparative Version)

ವಿನಿಮಯದ ಪ್ರಚಲಿತ ಸಮತೋಲನ ದರವನ್ನು ಕಂಡುಹಿಡಿಯುವ ವಿಧಾನದಲ್ಲಿ ಈ ನಿರೂಪಣೆಯು ನಿರಪೇಕ್ಷ ನಿರೂಪಣೆಗಿಂತ ಭಿನ್ನವಾದುದಾಗಿದೆ. ಈ ನಿರೂಪಣೆಯಲ್ಲಿ ಮೂಲ ಅವಧಿಯನ್ನು ತೆಗೆದುಕೊಂಡು, ಎರಡೂ ನಾಣ್ಯಗಳ ನಡುವಿನ ವಿನಿಮಯ ದರವು ಸಮತೋಲನದಲ್ಲಿತ್ತು ಎಂದು ಊಹಿಸಿಕೊಳ್ಳಲಾಗುತ್ತದೆ. ಈ ಆಧಾರದಲ್ಲಿ, ಎರಡೂ ದೇಶಗಳಲ್ಲಿ ಬೆಲೆಯ ಮಟ್ಟಗಳಲ್ಲಿ ಬದಲಾವಣೆಗಳನ್ನು ಗಣನೆಗೆ ತೆಗೆದುಕೊಳ್ಳುವ ಮೂಲಕ ಪ್ರಚಲಿತ ಸಮತೋಲನ ದರವನ್ನು ಕಂಡುಹಿಡಿಯಲಾಗುತ್ತದೆ.

ಇದನ್ನು ಸಂಕೇತದ ಮೂಲಕ ಮುಂದಿನಂತೆ ವಿವರಿಸಬಹುದು.

P_h ಸ್ವದೇಶದಲ್ಲಿ ಬೆಲೆಯ ಪ್ರಮಾಣವನ್ನು (ಪ್ರಚಲಿತ ಅವಧಿಯಲ್ಲಿ ಬೆಲೆ ಸೂಚ್ಯಂಕ/ಮೂಲ ಅವಧಿಯಲ್ಲಿ ಬೆಲೆ ಸೂಚ್ಯಂಕ) ಪ್ರತಿನಿಧಿಸುತ್ತದೆ.

P_f ವಿದೇಶದಲ್ಲಿ ಬೆಲೆಯ ಪ್ರಮಾಣವನ್ನು (ಪ್ರಚಲಿತ ಅವಧಿಯಲ್ಲಿ ಬೆಲೆಯ ಸೂಚ್ಯಂಕ/ಮೂಲ ಅವಧಿಯಲ್ಲಿ ಬೆಲೆ ಸೂಚ್ಯಂಕ/ಪ್ರತಿನಿಧಿಸುತ್ತದೆ.

ಈಗ ವಿದೇಶಿ ನಾಣ್ಯಕ್ಕೆ ಪ್ರತಿಯಾಗಿ ಸ್ವದೇಶಿ ನಾಣ್ಯದ ಸಮತೋಲನ ವಿನಿಮಯ ದರವು:

ಮೂಲ ಅವಧಿಯ ವಿನಿಮಯ ದರ $\times (P_f/P_h)$ ಆಗಿರುತ್ತದೆ.

ಅಂತೆಯೇ ಸ್ವದೇಶಿ ನಾಣ್ಯಕ್ಕೆ ಪ್ರತಿಯಾಗಿ ವಿದೇಶಿ ನಾಣ್ಯದ ಸಮತೋಲನ ವಿನಿಮಯ ದರವು:

ಮೂಲ ಅವಧಿಯ ವಿನಿಮಯ ದರ x (P_h/P_f) ಆಗಿರುತ್ತದೆ.

ಉದಾಹರಣೆಗೆ, ಮೂಲ ಅವಧಿಯಲ್ಲಿ ಒಂದು ಡಾಲರ್ 60 ರೂಪಾಯಿಗಳಿಗೆ ಸಮನಾಗಿದ್ದರೆ ಅದನ್ನು ಮೂಲ ಅವಧಿಯ ಸಮತೋಲನದ ದರ ಎಂದು ಭಾವಿಸಲಾಗುತ್ತದೆ. ಅಲ್ಲದೆ, ಮೂಲ ಅವಧಿಯ ದರದೊಡನೆ ಹೋಲಿಸಿದಂತೆ, ಪ್ರಚಲಿತ ಅವಧಿಯಲ್ಲಿ ಸಮತೋಲನ ವಿನಿಮಯ ದರವು ಅಮೆರಿಕದಲ್ಲಿ ಬೆಲೆಗಳ ಹೆಚ್ಚಳದೊಡನೆ ಮತ್ತು ಭಾರತದಲ್ಲಿ ಬೆಲೆಗಳ ಕುಸಿತದೊಡನೆ ಡಾಲರಿಗೆ ವಿರುದ್ಧವಾಗಿ ಚಲಿಸುತ್ತದೆ.

ಅಂತೆಯೇ, ಪ್ರಚಲಿತ ಅವಧಿಯಲ್ಲಿ ಸಮತೋಲನ ವಿನಿಮಯ ದರವು ಭಾರತದಲ್ಲಿ ಬೆಲೆಗಳ ಹೆಚ್ಚಳದೊಡನೆ ಮತ್ತು ಅಮೆರಿಕದಲ್ಲಿ ಬೆಲೆಗಳ ಕುಸಿತದೊಡನೆ ರೂಪಾಯಿಗೆ ವಿರುದ್ಧವಾಗಿ ಚಲಿಸುತ್ತದೆ.

ಟೀಕೆಗಳು

(Criticisms)

ಕೊಳ್ಳುವ ಶಕ್ತಿಯ ಸರಿಸಮಾನತೆಯ ಸಿದ್ಧಾಂತವು ದೋಷಯುಕ್ತವಾದುದೆಂದು ಹಲವಾರು ಬರಹಗಾರರ ಟೀಕೆಗಳಿಗೆ ಒಳಗಾಗಿದೆ.

1. ನಾಣ್ಯಗಳ ಕೊಳ್ಳುವ ಶಕ್ತಿ ಮತ್ತು ವಿನಿಮಯ ದರದ ನಡುವಿನ ಸಂಬಂಧದ ಆಧಾರರಹಿತ ಕಲ್ಪನೆ (Baseless Assumption of Relationship Between Purchasing Power of Currencies and the Rate of Exchange): ನಾಣ್ಯಗಳ ಕೊಳ್ಳುವ ಶಕ್ತಿ ಮತ್ತು ವಿನಿಮಯ ದರದ ನಡುವೆ ನೇರವಾದ ಸಂಬಂಧವಿದೆ ಎಂಬ ಕಲ್ಪನೆಯ ಆಧಾರದ ಮೇಲೆ ಈ ಸಿದ್ಧಾಂತವು ನಿಂತಿದೆ. ಆದರೆ ಅಂತಹ ನೇರ ಸಂಬಂಧ ಕಂಡುಬರುವುದಿಲ್ಲ. ಏಕೆಂದರೆ ವಿನಿಮಯ ದರವು ಸುಂಕಗಳು, ಸಟ್ಟಾವ್ಯಾಪಾರ, ಬಂಡವಾಳ ಚಲನೆ ಮೊದಲಾದ ಹಲವಾರು ಸಂಗತಿಗಳಿಂದ ಪ್ರಭಾವಗೊಳ್ಳುತ್ತದೆ.

2. ಬಾಹ್ಯ ಕೊಳ್ಳುವ ಶಕ್ತಿಯ ನಿರ್ಧಾರಕ್ಕೆ ಸಾರ್ವತ್ರಿಕ ಬೆಲೆಗಳ ಮಟ್ಟದ ಗಣನೆ (Consideration of General Price Level for Determination of External Purchasing Power): ಈ ಸಿದ್ಧಾಂತವು ನಾಣ್ಯಗಳ ಬಾಹ್ಯ ಕೊಳ್ಳುವ ಶಕ್ತಿಯನ್ನು ನಿರ್ಧರಿಸಲು ಸಾರ್ವತ್ರಿಕ ಬೆಲೆಗಳ ಮಟ್ಟವನ್ನು ಗಣನೆಗೆ ತೆಗೆದುಕೊಳ್ಳುತ್ತದೆ. ಸಾರ್ವತ್ರಿಕ ಬೆಲೆಗಳ ಮಟ್ಟವು ಎಲ್ಲಾ ವಸ್ತುಗಳ ಬೆಲೆಗಳನ್ನು ಒಳಗೊಂಡಿರುತ್ತದೆ. ಆದರೆ ಇದರಲ್ಲಿ ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಸೇರುವ ಮತ್ತು ಸೇರದಿರುವ ಎರಡೂ ವಸ್ತುಗಳಿರುತ್ತವೆ. ಆದ್ದರಿಂದ ಎಲ್ಲಾ ವಸ್ತುಗಳ ಆಂತರಿಕ ಬೆಲೆಗಳ ಮಟ್ಟದ ಮೂಲಕ ನಾಣ್ಯದ ಬಾಹ್ಯ ಕೊಳ್ಳುವ ಶಕ್ತಿಯನ್ನು ನಿರ್ಧರಿಸುವಿಕೆಯು ಮಹಾ ದೋಷಪೂರಿತವಾದ ವಿಧಾನವಾಗಿದೆ.

3. ಸೂಚ್ಯಂಕದ ರಚನೆ ಕಷ್ಟಕರವಾದುದು (Construction of Index Number is Difficult): ಈ ಸಿದ್ಧಾಂತದ ಪ್ರಕಾರ ವಿನಿಮಯ ದರದ ನಿರ್ಧಾರಕ್ಕೆ ಬೆಲೆಗಳ

ಸೂಚ್ಯಂಕವನ್ನು ಆಧಾರವಾಗಿಟ್ಟುಕೊಳ್ಳಬೇಕಾಗಿದೆ. ಆದರೆ ಸೂಚ್ಯಂಕದ ರಚನೆಯು ಬಹಳ ಕಷ್ಟಕರವಾದುದು ಮತ್ತು ಅನೇಕ ನ್ಯೂನತೆಗಳಿಂದಾಗಿ ಸೂಚ್ಯಂಕವು ಬೆಲೆಯ ಮಟ್ಟವನ್ನು ಸರಿಯಾಗಿ ಪ್ರತಿಬಿಂಬಿಸದಿರಬಹುದು.

4. ಬೆಲೆಯ ಮೂಲಕ ನಾಣ್ಯದ ಮೌಲ್ಯದ ಅಂದಾಜಿನ ಕಷ್ಟಸಾಧ್ಯತೆ (Difficulty in Estimation of Value of Currency through Price): ಸಾಗಣೆ ವೆಚ್ಚದ ಪರಿಣಾಮವಾಗಿ ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಸೇರುವ ಸರಕುಗಳ ಬೆಲೆಯು ವಿವಿಧ ದೇಶಗಳ ನಡುವೆ ಮತ್ತು ಒಂದೇ ದೇಶದಲ್ಲಿ ವಿವಿಧ ಮಾರುಕಟ್ಟೆಗಳ ನಡುವೆ ಭಿನ್ನವಾಗಿರುತ್ತದೆ. ಆದ್ದರಿಂದ ಬೆಲೆಯ ಮೂಲಕ ನಾಣ್ಯದ ಮೌಲ್ಯವನ್ನು ಅಂದಾಜು ಮಾಡುವಿಕೆಯು ಕಷ್ಟಕರವಾಗಿರುತ್ತದೆ.

5. ಸೂಚ್ಯಂಕದ ವಿಧದ ಬಗೆಗೆ ಸ್ಪಷ್ಟತೆಯ ಕೊರತೆ (Lack of Clarity with regard to the Type of Index Number): ವಿನಿಮಯ ನಿರ್ಧಾರಕ್ಕೆ ಬೆಲೆಗಳಲ್ಲಿ ಸೂಚ್ಯಂಕಗಳನ್ನು ಗಣನೆಗೆ ತೆಗೆದುಕೊಳ್ಳಬೇಕೆಂಬುದು ಈ ಸಿದ್ಧಾಂತದ ನಿಲುವಾಗಿದೆ. ಆದರೆ ಯಾವ ಬೆಲೆಗಳ ಸೂಚ್ಯಂಕಗಳನ್ನು ಪರಿಗಣಿಸಬೇಕೆಂಬುದನ್ನು ಇದು ಸ್ಪಷ್ಟಪಡಿಸಿರುವುದಿಲ್ಲ. ಸಗಟು ಬೆಲೆಗಳ ಅಥವಾ ಜೀವನ ವೆಚ್ಚದ ಸೂಚ್ಯಂಕಗಳಲ್ಲಿ ಯಾವುದಾದರೂ ಒಂದನ್ನು ಗಣನೆಗೆ ತೆಗೆದುಕೊಳ್ಳಬೇಕೆ ಎಂಬ ಸಮಸ್ಯೆ ಉದ್ಭವಿಸುವುದು ಸಹಜ. ಸಗಟು ಬೆಲೆಗಳ ಸೂಚ್ಯಂಕಗಳನ್ನು ಆಧಾರವಾಗಿಟ್ಟುಕೊಂಡರೆ ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಸೇರುವ ಅನೇಕ ಸರಕುಗಳನ್ನು ಮತ್ತು ಸೇವೆಗಳನ್ನು ಹೊರತುಪಡಿಸಿದಂತಾಗುತ್ತದೆ. ಜೀವನ ವೆಚ್ಚದ ಸೂಚ್ಯಂಕಗಳನ್ನು ಗಣನೆಗೆ ತೆಗೆದುಕೊಂಡರೆ ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಸೇರದ ಕೆಲವು ಸೇವೆಗಳನ್ನು ಮತ್ತು ಸರಕುಗಳನ್ನೂ ಲೆಕ್ಕಹಾಕಿದಂತಾಗುತ್ತದೆ. ಕೃಷಿ ವಸ್ತುಗಳ ಅಥವಾ ಕೈಗಾರಿಕಾ ವಸ್ತುಗಳ ಸೂಚ್ಯಂಕಗಳನ್ನು ತೆಗೆದು ಕೊಂಡರೆ ವಿಶ್ಲೇಷಣೆಯು ಪಾರ್ಶ್ವವಾಗುತ್ತದೆಯೇ ಹೊರತು ಪೂರ್ಣವಾಗುವುದಿಲ್ಲ.

6. ಆಂತರಿಕ ಬೆಲೆಗಳ ಚಲನೆಯ ಮೇಲೆ ವಿನಿಮಯ ದರದ ವ್ಯತ್ಯಾಸದ ಪರಿಣಾಮದ ನಿರ್ಲಕ್ಷ್ಯ (Neglect of Effect of Change in Exchange Rate on the Movement of Internal Prices): ಕೊಳ್ಳುವ ಶಕ್ತಿಯ ಸರಿಸಮಾನತೆಯ ಸಿದ್ಧಾಂತದ ಪ್ರಕಾರ ಆಂತರಿಕ ಬೆಲೆಗಳಲ್ಲಿ ಉಂಟಾಗುವ ಬದಲಾವಣೆಗಳಿಂದ ವಿದೇಶಿ ವಿನಿಮಯ ದರವು ಬದಲಾಗುತ್ತದೆಯೇ ಹೊರತು ವಿದೇಶಿ ವಿನಿಮಯ ದರದ ಬದಲಾವಣೆಯು ಆಂತರಿಕ ಬೆಲೆಗಳ ಮೇಲೆ ಯಾವ ಪರಿಣಾಮವನ್ನೂ ಬೀರುವುದಿಲ್ಲ. ಆದರೆ ಈ ಭಾವನೆ ತಪ್ಪಾದುದು. ವಾಸ್ತವವಾಗಿ ವಿನಿಮಯದ ದರದ ಬದಲಾವಣೆಯ ಪರಿಣಾಮದಿಂದ ಆಂತರಿಕ ಬೆಲೆಗಳು ಬದಲಾಗುತ್ತವೆ. ಉದಾಹರಣೆಗೆ, ಡಾಲರ್ ಮತ್ತು ರೂಪಾಯಿಯ ನಡುವಿನ ವಿನಿಮಯ ದರ ರೂ. 1 = 10 ಸೆಂಟುಗಳಾಗಿವೆ ಎಂದು ಭಾವಿಸೋಣ. ಈಗ ಅಮೆರಿಕದಿಂದ ಭಾರತಕ್ಕೆ ಬೃಹತ್ ಪ್ರಮಾಣದಲ್ಲಿ ಬಂಡವಾಳ ಹರಿದು ಬರುತ್ತದೆ ಎಂದು ತಿಳಿಯೋಣ. ಪರಿಣಾಮವಾಗಿ ಭಾರತದ ರೂಪಾಯಿಗೆ ಬೇಡಿಕೆ ಹೆಚ್ಚುವುದರೊಂದಿಗೆ ಅದರ ಬೆಲೆ

ಮತ್ತು ವಿನಿಮಯದ ದರ ಏರುತ್ತವೆ. ರೂಪಾಯಿಗೆ ಹೋಲಿಸಿದಂತೆ ಡಾಲರಿನ ಮೌಲ್ಯ ಕಡಿಮೆಯಾಗಿರುವುದರಿಂದ ಹೊಸ ವಿನಿಮಯ ದರದಲ್ಲಿ ರೂ. 1 = 15 ಸೆಂಟುಗಳಾಗಿದೆ ಎಂದು ತಿಳಿದರೆ ಈಗ ರೂಪಾಯಿ ಮತ್ತು ಭಾರತದ ವಸ್ತುಗಳು ಅಮೆರಿಕನ್ನರಿಗೆ ದುಬಾರಿಯಾಗುತ್ತವೆ. ಪರಿಣಾಮವಾಗಿ ಭಾರತದ ವಸ್ತುಗಳಿಗೆ ಅಮೆರಿಕದಲ್ಲಿ ಬೇಡಿಕೆ ತಗ್ಗುವುದರಿಂದ ರಫ್ತುಗಳು ಕಡಿಮೆಯಾಗುತ್ತವೆ. ಇದರಿಂದ ಭಾರತದಲ್ಲಿ ಬೆಲೆಗಳು ಇಳಿಯತೊಡಗುತ್ತವೆ. ಬದಲಾಗಿ ಈಗ ಅಮೆರಿಕದ ಡಾಲರ್ ಮತ್ತು ಅಲ್ಲಿನ ಸರಕುಗಳು ಅಗ್ಗದ ಬೆಲೆಯಲ್ಲಿ ದೊರೆಯುವುದರಿಂದ ಭಾರತದಲ್ಲಿ ಅವುಗಳಿಗೆ ಬೇಡಿಕೆ ಹೆಚ್ಚುತ್ತದೆ. ಅಮೇರಿಕಾದ ರಫ್ತುಗಳು ಅಧಿಕವಾಗು ತ್ತವೆ, ಮತ್ತು ಈ ಕಾರಣದಿಂದ ಅಲ್ಲಿ ಬೆಲೆಗಳು ಏರತೊಡಗುತ್ತವೆ. ಹೀಗೆ ವಿನಿಮಯ ದರದ ವ್ಯತ್ಯಾಸವು ಆಂತರಿಕ ಬೆಲೆಗಳ ಚಲನೆಯ ಮೇಲೆ ಅಗಾಧವಾದ ಪರಿಣಾಮ ಬೀರುತ್ತದೆ ಎಂಬ ಸಂಗತಿಯನ್ನು ನಿರ್ಲಕ್ಷಿಸಿರುವುದು ಈ ಸಿದ್ಧಾಂತದ ದೊಡ್ಡ ನ್ಯೂನತೆಯಾಗಿದೆ.

7. ವಿನಿಮಯ ದರದಲ್ಲಿ ಬದಲಾವಣೆಗೆ ಕಾರಣವಾಗುವ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳದಿರುವಿಕೆ (Not Taking into Account the Factors Responsible for Change in Exchange Rate): ಕೊಳ್ಳುವ ಶಕ್ತಿಯ ಸರಿಸಮಾನತೆಯಿಂದ ವಿನಿಮಯ ದರದಲ್ಲಿ ಏರಿಳಿತಗಳುಂಟಾಗಲು ಕಾರಣವಾಗುವ ಹಲವಾರು ಅಂಶಗಳನ್ನು ಈ ಸಿದ್ಧಾಂತವು ಗಣನೆಗೆ ತೆಗೆದುಕೊಂಡಿಲ್ಲ. ಉದಾಹರಣೆಗೆ, ಬಂಡವಾಳ ಚಲನೆ, ಸುಂಕಗಳು, ಸಾರಿಗೆ ವೆಚ್ಚ, ಉತ್ಪಾದನ ವೆಚ್ಚ, ಸರಕುಗಳ ಬೇಡಿಕೆ ಮತ್ತು ಪೂರೈಕೆ ಮೊದಲಾದ ಅನೇಕ ಅಂಶಗಳು ವಿನಿಮಯ ದರದ ಮೇಲೆ ಪರಿಣಾಮ ಬೀರುತ್ತವೆ.

8. ರಚನಾತ್ಮಕ ಬದಲಾವಣೆಗಳಿರುವುದಿಲ್ಲ ಎಂಬ ತಪ್ಪು ಕಲ್ಪನೆ (Wrong Assumption of No Structural Changes): ಮೂಲ ಅವಧಿಯಲ್ಲಿ ಸಮತೋಲನಕ್ಕೆ ಕಾರಣವಾಗುವ ಅಂಶಗಳಲ್ಲಿ ರಚನಾತ್ಮಕ ಬದಲಾವಣೆಗಳು ಆಗುವುದಿಲ್ಲವೆಂದು ಈ ಸಿದ್ಧಾಂತವು ಭಾವಿಸಿದೆ. ಅಂದರೆ ಅಭಿರುಚಿಗಳು, ಒಲವುಗಳು, ಉತ್ಪಾದಕ ಸಂಪನ್ಮೂಲಗಳು, ತಂತ್ರಜ್ಞಾನ ಮೊದಲಾದ ಅಂಶಗಳು ಬದಲಾಗದೆ ಸ್ಥಿರವಾಗಿ ಉಳಿಯುತ್ತವೆ ಎಂಬುದು ಇದರ ಕಲ್ಪನೆಯಾಗಿದೆ. ಆದರೆ ವಾಸ್ತವವಾಗಿ ಈ ಅಂಶಗಳು ಬದಲಾಗುತ್ತವೆ ಮತ್ತು ಅವುಗಳ ಬದಲಾವಣೆಯು ವಿನಿಮಯ ದರದ ಮೇಲೆ ಆಳವಾದ ಪರಿಣಾಮಗಳನ್ನು ಬೀರುತ್ತದೆ. ಆದ್ದರಿಂದ ಈ ಸಿದ್ಧಾಂತವು ಅವಾಸ್ತವಿಕವಾದುದಾಗಿದೆ.

9. ಬಂಡವಾಳ ಲೆಕ್ಕದ ನಿರ್ಲಕ್ಷ್ಯ (Neglect of Capital Account): ಈ ಸಿದ್ಧಾಂತವು ಬಂಡವಾಳ ವ್ಯವಹಾರಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸುತ್ತದೆ. ಆದ್ದರಿಂದ ಬಂಡವಾಳ ಲೆಕ್ಕವು ಪ್ರಮುಖ ಪಾತ್ರವನ್ನು ನಿರ್ವಹಿಸುವ ದೇಶಗಳಿಗೆ ಇದು ಸಮಂಜಸವಾಗುವುದಿಲ್ಲ. ಕೇವಲ ಸರಕುಗಳ ಮಾರಾಟದ ವ್ಯಾಪಾರ ಖಾತೆಯನ್ನು ಹೊಂದಿರುವ ದೇಶಗಳಿಗೆ ಮಾತ್ರ ಈ ಸಿದ್ಧಾಂತವು ಸುಸಂಬದ್ಧವಾಗುತ್ತದೆ. ಕಿಂಡ್ಲ್ ಬರ್ಗರ್‌ರವರ ಪ್ರಕಾರ ಕೊಳ್ಳುವ ಶಕ್ತಿಯ

ಸರಿಸಮಾನತೆಯ ಸಿದ್ಧಾಂತವು ವ್ಯಾಪಾರದ ದೇಶಗಳಿಗಾಗಿ ಮಾತ್ರ ವಿನ್ಯಾಸಗೊಂಡಿದ್ದು, ವ್ಯಾಪಾರ ಮತ್ತು ಬ್ಯಾಂಕೋದ್ಯಮ ವ್ಯವಹಾರ ಎರಡನ್ನೂ ಒಳಗೊಂಡಿರುವ ದೇಶಗಳಿಗೆ ಮಾರ್ಗದರ್ಶನ ನೀಡಲು ಇದು ವಿಫಲವಾಗಿದೆ.

10. ಬಂಡವಾಳ ಚಲನೆಗಳು ಇರುವುದಿಲ್ಲ ಎಂಬ ಅನುಚಿತ ಕಲ್ಪನೆ (Invalid Assumption of Absence of Capital Movements): ಎರಡು ದೇಶಗಳ ನಡುವೆ ಬಂಡವಾಳ ಚಲನೆ ಇರುವುದಿಲ್ಲ ಎಂಬುದು ಈ ಸಿದ್ಧಾಂತದ ಒಂದು ಕಲ್ಪನೆಯಾಗಿದೆ. ಎರಡು ದೇಶಗಳಲ್ಲಿ ವಿನಿಮಯ ದರವು ಆಂತರಿಕ ಬೆಲೆಗಳೊಡನೆ ಮಾತ್ರ ಸಂಬಂಧ ಹೊಂದಿದೆ ಎಂದು ಇದು ಭಾವಿಸಿದೆ. ಅಂತರರಾಷ್ಟ್ರೀಯ ಬಂಡವಾಳ ಚಲನೆಗಳು ಶೂನ್ಯವಾಗಿರುತ್ತವೆ ಎಂಬ ಈ ಸಿದ್ಧಾಂತದ ಕಲ್ಪನೆಯು ಔಚಿತ್ಯದಿಂದ ಕೂಡಿರುವುದಿಲ್ಲ. ಬಂಡವಾಳ ಚಲನೆಗಳು ಸ್ವದೇಶಿ ಮತ್ತು ವಿದೇಶಿ ಹಣದ ಬೇಡಿಕೆ ಮತ್ತು ಪೂರೈಕೆಯ ಮೇಲೆ ಪ್ರಭಾವ ಬೀರುವ ಮೂಲಕ ವಿನಿಮಯ ದರದ ವ್ಯತ್ಯಾಸಗಳಿಗೆ ಕಾರಣವಾಗುತ್ತವೆ. ಆ ಪ್ರಕಾರ, ವಿನಿಮಯ ದರದ ಮೇಲೆ ಬಂಡವಾಳ ಚಲನೆಗಳ ಪರಿಣಾಮವನ್ನು ಈ ಸಿದ್ಧಾಂತವು ನಿರ್ಲಕ್ಷಿಸಿರುವುದು ಅದರ ಬಹು ದೊಡ್ಡ ದೋಷವಾಗಿದೆ.

11. ಪರಸ್ಪರ ಬೇಡಿಕೆಯ ಸ್ಥಿತಿಸ್ಥಾಪಕತೆಯ ನಿರ್ಲಕ್ಷ್ಯ (Neglect of Elasticity of Reciprocal Demand): ಪರಸ್ಪರ ಬೇಡಿಕೆಯ ಸ್ಥಿತಿ ಸ್ಥಾಪಕತೆಯನ್ನು ಗಣನೆಗೆ ತೆಗೆದುಕೊಳ್ಳಲು ಈ ಸಿದ್ಧಾಂತವು ವಿಫಲವಾಗಿದೆ ಎಂದು ಕೇನ್ಸ್ ಟೀಕಿಸಿದ್ದಾನೆ. ಎರಡು ದೇಶಗಳ ನಾಣ್ಯಗಳ ನಡುವಿನ ವಿನಿಮಯ ದರವು ತುಲನಾತ್ಮಕ ಬೆಲೆಗಳ ಬದಲಾವಣೆಗಳಿಂದ ಮಾತ್ರವಲ್ಲದೆ ಪರಸ್ಪರ ಬೇಡಿಕೆಯ ಸ್ಥಿತಿಸ್ಥಾಪಕತೆಗಳಿಂದಲೂ ನಿರ್ಧರಿಸಲ್ಪಡುತ್ತದೆ ಎಂಬ ಸಂಗತಿಯನ್ನು ಈ ಸಿದ್ಧಾಂತವು ನಿರ್ಲಕ್ಷಿಸಿದೆ.

12. ಸಮಗ್ರ ಆದಾಯ ಮತ್ತು ವೆಚ್ಚದ ಆವಗಣನೆ (Neglect of Aggregate Income and Expenditure): ಬೆಲೆಯ ಚಲನೆಯು ಮಾತ್ರ ವಿನಿಮಯ ದರದ ನಿರ್ಧಾರಕವಾಗಿದೆ ಎಂಬ ಈ ಸಿದ್ಧಾಂತದ ಕಲ್ಪನೆಯು ದೋಷಪೂರಿತ ಎಂದು ರಾಗ್ನಾರ್ ನರ್ಕ್ಸ್ ಟೀಕಿಸಿದ್ದಾನೆ. ಸಮಗ್ರ ಆದಾಯ ಮತ್ತು ವೆಚ್ಚದ ಬದಲಾವಣೆಗಳು ವಿದೇಶಿ ವ್ಯಾಪಾರದ ಗಾತ್ರದ ಮೇಲೆ ಪರಿಣಾಮವನ್ನು ಬೀರುವ ಮೂಲಕ ವಿದೇಶಿ ವಿನಿಮಯ ದರದ ಬದಲಾವಣೆಗೆ ಕಾರಣವಾಗುತ್ತವೆ ಎಂಬ ವಿಷಯವನ್ನು ಈ ಸಿದ್ಧಾಂತವು ನಿರ್ಲಕ್ಷಿಸಿದೆ.

13. ನಿಶ್ಚಲ ಸಿದ್ಧಾಂತ (Static Theory): ಕೊಳ್ಳುವ ಶಕ್ತಿಯ ಸರಿಸಮಾನತೆಯ ಸಿದ್ಧಾಂತವು ನಿಶ್ಚಲ ಸ್ಥಿತಿಗತಿಗಳಲ್ಲಿ ಸಮತೋಲನ ವಿನಿಮಯ ದರದ ನಿರ್ಧಾರಕ್ಕೆ ಪ್ರಯತ್ನಿಸುತ್ತದೆ. ಅಭಿರುಚಿಗಳ ಮತ್ತು ಒಲವುಗಳ ಸ್ಥಿರತೆ, ಬಂಡವಾಳ ಚಲನೆಗಳು ಮತ್ತು ಸಾಗಣೆ ವೆಚ್ಚಗಳು ಇಲ್ಲದಿರುವಿಕೆ, ಸುಂಕದಲ್ಲಿ ಬದಲಾವಣೆ ಇಲ್ಲದ ಸ್ಥಿತಿ, ಸ್ಥಿರ ತಂತ್ರಜ್ಞಾನ, ಸಟ್ಟಾ ವ್ಯಾಪಾರ ಇಲ್ಲದಿರುವಿಕೆ ಮುಂತಾದ ಸನ್ನಿವೇಶಗಳಲ್ಲಿ ವಿನಿಮಯ ದರದ ನಿರ್ಧಾರವನ್ನು ಅದು ವಿವರಿಸುತ್ತದೆ. ಆದ್ದರಿಂದ ಇದು ಕ್ರಿಯಾತ್ಮಕವಾದ ಮತ್ತು

ವಾಸ್ತವಿಕವಾದ ಸಿದ್ಧಾಂತವಾಗಿಲ್ಲ.

14. ಮುಕ್ತ ವ್ಯಾಪಾರ ಮತ್ತು ತಟಸ್ಥ ನೀತಿಯ ಅವಾಸ್ತವಿಕ ಕಲ್ಪನೆ (Unrealistic Assumption of Free Trade and Laissez faire): ಈ ಸಿದ್ಧಾಂತವು ಮುಕ್ತ ವ್ಯಾಪಾರ ಮತ್ತು ಸರ್ಕಾರದ ಮಧ್ಯಪ್ರವೇಶ ರಹಿತ ನೀತಿಯ ಕಲ್ಪನೆಯನ್ನು ಅವಲಂಬಿಸಿದೆ. ಅಂದರೆ ಸರ್ಕಾರವು ವ್ಯಾಪಾರದಲ್ಲಿ ಸುಂಕದ ಮತ್ತು ಸುಂಕೇತರ ನಿರ್ಬಂಧಗಳನ್ನು ವಿಧಿಸುವುದಿಲ್ಲ ಎಂದು ಭಾವಿಸುತ್ತದೆ. ಆದರೆ ವಾಸ್ತವ ಪ್ರಪಂಚದಲ್ಲಿ ಇದು ಸರಿಯಾದ ಕಲ್ಪನೆಯಾಗಿರುವುದಿಲ್ಲ. ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿಶೀಲ ದೇಶಗಳೆರಡರಲ್ಲಿಯೂ ಸರ್ಕಾರಗಳು ಸುಂಕಗಳನ್ನು ಮತ್ತು ದೇಯಾಂಶಗಳನ್ನು ವಿಧಿಸುವುದು, ಆಮದು ನಿರ್ಬಂಧಗಳನ್ನು ಹೇರುವಿಕೆ, ಆಮದು ಪರವಾನಗಿಗಳನ್ನು ನೀಡದಿರುವಿಕೆ ಮುಂತಾದ ನಿರ್ಬಂಧಗಳು ರೂಢಿಯಲ್ಲಿವೆ. ವ್ಯಾಪಾರದ ಮೇಲಿನ ನಿರ್ಬಂಧಗಳಿಂದ ವಿದೇಶಿ ನಾಣ್ಯಕ್ಕೆ ಬೇಡಿಕೆ ಕಡಿಮೆಯಾಗಿ ವಿನಿಮಯ ದರವು ಬದಲಾಗುತ್ತದೆ.

15.ಅನಿಶ್ಚಿತ ಸಿದ್ಧಾಂತ (Inexact Theory): ಈ ಸಿದ್ಧಾಂತವು ಬಹಳ ಸರಳಗೊಂಡ ಕಲ್ಪನೆಗಳನ್ನು ಮಾಡಿಕೊಳ್ಳುವುದರಿಂದ ಅದು ವಿನಿಮಯದರವನ್ನು ಕರಾರುವಕ್ಕಾಗಿ ಅಳತ ಮಾಡಲಾರದು ಹಾಗೂ ಭವಿಷ್ಯದ ಅವಧಿಗೆ ನಿಶ್ಚಿತವಾದ ಮುನ್ ಅಂದಾಜನ್ನು (Fore cast) ಮಾಡಲಾರದು. ವಾನ್ ಹೇಯಕ್ ರವರ ಅಭಿಪ್ರಾಯದಲ್ಲಿ ಕೊಳ್ಳುವ ಶಕ್ತಿಯ ಸರಿ ಸಮಾನತೆಯ ಸಿದ್ಧಾಂತವು ಸಮತೋಲನ ವಿನಿಮಯ ದರವ ಒಟ್ಟು ಸಾಧಾರಣ ಅಂದಾಜು ಮಾಡಲು ನೆರವಾಗಬಹುದೇ ಹೊರತು ಅದರಲ್ಲಿ ನಿಖರತೆ ಇರುವುದಿಲ್ಲ.

16. ಅಂತರ ರಾಷ್ಟ್ರೀಯ ಆರ್ಥಿಕ ಸಂಬಂಧಗಳಲ್ಲಿ ಬದಲಾವಣೆಗಳನ್ನು ಗಣನೆಗೆ ತೆಗೆದುಕೊಳ್ಳಲು ವಿಫಲ (Failure to take into Consideration Changes in International Economic Relations): ಈ ಸಿದ್ಧಾಂತವು ಅಂತರ ರಾಷ್ಟ್ರೀಯ ಆರ್ಥಿಕ ಸಂಬಂಧಗಳಲ್ಲಿ ಬದಲಾವಣೆಗಳನ್ನು ಗಣನೆಗೆ ತೆಗೆದುಕೊಳ್ಳಲು ವಿಫಲವಾಗಿದೆ. ಪ್ರಾರಂಭದಲ್ಲಿ ಎರಡು ದೇಶಗಳ ನಡುವೆ ವ್ಯಾಪಾರವು ನಡೆಯುತ್ತಿದ್ದು, ಮೂರನೆಯ ದೇಶವು ಒಂದು ನಿರ್ದಿಷ್ಟ ಸರಕಿನ ಆಮದುದಾರ ಅಥವಾ ರಫ್ತುದಾರನಾಗಿ ಪ್ರವೇಶಿಸಿದರೆ ವಿದೇಶಿ ವ್ಯಾಪಾರದ ಗಾತ್ರ ಮತ್ತು ದಿಕ್ಕಿನ ಮೇಲೆ ಗಣನೀಯವಾದ ಪರಿಣಾಮಗಳಾಗುತ್ತವೆ. ಅಲ್ಲದೆ ಇದು ವಿದೇಶಿ ವಿನಿಮಯದ ಬೇಡಿಕೆ ಮತ್ತು ಪೂರೈಕೆಯ ಅಂಶಗಳ ಮೇಲೆಯೂ ಪ್ರಭಾವ ಬೀರುತ್ತದೆ. ಆದ್ದರಿಂದ ಅನೇಕ ದೇಶಗಳು ವ್ಯಾಪಾರದಲ್ಲಿ ತೊಡಗಿರುವಾಗ ವಿದೇಶಿ ವಿನಿಮಯ ದರದ ನಿರ್ಧಾರವನ್ನು ವಿವರಿಸಲು ಈ ಸಿದ್ಧಾಂತವು ಅಶಕ್ತವಾಗಿದೆ.

17. ದೀರ್ಘಾವಧಿಗೆ ಮಾತ್ರ ಸುಸಂಗತ (Relevant only for Long Period): ವಿದೇಶಿ ವ್ಯಾಪಾರದಲ್ಲಿ ಸಂಭವಿಸುವ ಅಡಚಣೆಗಳು ಸಂಪೂರ್ಣವಾಗಿ ಹಣಸಂಬಂಧಿ ಸ್ವರೂಪದವು ಗಳಾಗಿರುವಂತಹ ಸಂದರ್ಭದಲ್ಲಿ ದೀರ್ಘಾವಧಿಗೆ ಮಾತ್ರ ಈ ಸಿದ್ಧಾಂತವು ಅನ್ವಯಿಸುತ್ತದೆ.

ಈ ಎಲ್ಲಾ ದೋಷಗಳ ನಡುವೆಯೂ ಈ ಸಿದ್ಧಾಂತವು ಅಪರಿವರ್ತನೀಯ ಕಾಗದದ ಪ್ರಮಿತಿಯಲ್ಲಿ ವಿದೇಶಿ ವಿನಿಮಯ ದರದ ನಿರ್ಧಾರಕ್ಕೆ ಉತ್ಕೃಷ್ಟವಾದುದಾಗಿದೆ.

ಬದಲಾಗುತ್ತಿರುವ ಮತ್ತು ಅಸ್ಥಿರ ವಿನಿಮಯ ದರಗಳಲ್ಲಿ ಕೊಳ್ಳುವ ಶಕ್ತಿಯ ಸರಿಸಮಾನತೆಯು ಹೇಗೆ ನಿರ್ಧಾರವಾಗಬಹುದೆಂಬುದರ ಬಗ್ಗೆ ಮಾಹಿತಿಯನ್ನು ಒದಗಿಸುವ ಕಾರ್ಯದಲ್ಲಿ ಇದು ಸಫಲವಾಗಿದೆ. ನಾಣ್ಯಗಳ ನಡುವಣ ವಿನಿಮಯ ದರದ ಬದಲಾವಣೆ, ಆಂತರಿಕ ಬೆಲೆಗಳ ಏರಿಳಿತಗಳ ಕಾರಣದಿಂದ ನಾಣ್ಯದ ಬಾಹ್ಯ ಮೌಲ್ಯದ ವ್ಯತ್ಯಾಸ ಮೊದಲಾದ ವಾಸ್ತವ ಸಂಗತಿಗಳನ್ನು ಈ ಸಿದ್ಧಾಂತವು ಸ್ಪಷ್ಟಪಡಿಸಿದೆ.

F. ಬಂಡವಾಳ ಪ್ರವಹನ : ವಿದೇಶಿ ಹೂಡಿಕೆಯ ಅರ್ಥ ಮತ್ತು ಪರಿಕಲ್ಪನೆ (Capital Flow : Meaning and Concept of Foreign Investment)

ಪೀಠಿಕೆ

ಸಂಪನ್ಮೂಲಗಳ ಅಂತರರಾಷ್ಟ್ರೀಯ ಚಲನೆಗಳು ಅಂತರರಾಷ್ಟ್ರೀಯ ವ್ಯಾಪಾರದ ಒಂದು ಪ್ರಮುಖ ವಿಷಯವಾಗಿದೆ. ಬಂಡವಾಳ, ತಂತ್ರಜ್ಞಾನ, ಶ್ರಮ, ಸರಕುಗಳು ಮೊದಲಾದ ಸಂಪನ್ಮೂಲಗಳು ಜಗತ್ತಿನ ವಿವಿಧ ದೇಶಗಳ ನಡುವೆ ಚಲಿಸುವಿಕೆಯನ್ನು ಅಂದರೆ ಒಂದು ದೇಶದಿಂದ ಇನ್ನೊಂದು ದೇಶಕ್ಕೆ ವರ್ಗಾವಣೆಗೊಳ್ಳುವಿಕೆಯನ್ನು ಸಂಪನ್ಮೂಲಗಳ ಅಂತರರಾಷ್ಟ್ರೀಯ ಚಲನೆ ಎಂದು ಕರೆಯಲಾಗುತ್ತದೆ. ಯಾವುದೇ ದೇಶವು ತನ್ನ ಅಭಿವೃದ್ಧಿ ಸಾಧನೆಗಾಗಿ ಆವಶ್ಯಕವಿರುವ ಸಂಪನ್ಮೂಲಗಳನ್ನು ಅಂದರೆ ಬಂಡವಾಳ, ತಂತ್ರಜ್ಞಾನ, ಶ್ರಮ, ಪರಿಣತಿ, ಕೊರತೆಯ ಸರಕುಗಳು ಮೊದಲಾದವುಗಳನ್ನು ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳಬಹುದಾಗಿರುತ್ತದೆ.

ಸಂಪನ್ಮೂಲಗಳ ಅಂತರರಾಷ್ಟ್ರೀಯ ಚಲನೆಯು ಶ್ರೀಮಂತ ದೇಶಗಳಿಂದ ಅಲ್ಪಾಭಿವೃದ್ಧ ದೇಶಗಳಿಗೆ ಹೆಚ್ಚಿನ ಪ್ರಮಾಣದಲ್ಲಿದೆ ಮತ್ತು ಅದು ಹಾಗೆ ಇರಬೇಕಾದುದು ಆವಶ್ಯಕವೂ ಆಗಿದೆ ಎಂಬುದು ಬಹುಮುಖ್ಯವಾದ ವಿಷಯ. ಬಹುತೇಕ ಅನಭಿವೃದ್ಧ ದೇಶಗಳು ಸಾಮ್ರಾಜ್ಯಶಾಹಿ ಮತ್ತು ವಸಾಹತುಶಾಹಿ ಆಡಳಿತಕ್ಕೆ ಒಳಪಟ್ಟಿದ್ದು ಇತ್ತೀಚೆಗಷ್ಟೇ ಸ್ವಾತಂತ್ರ್ಯವನ್ನು ಗಳಿಸಿವೆ. ಒಂದು ಕಡೆ ಅವುಗಳಲ್ಲಿರುವ ಅಸ್ತಿಗತ ಸಮಸ್ಯೆಗಳು ಮತ್ತು ಇನ್ನೊಂದು ಕಡೆ ಶ್ರೀಮಂತ ದೇಶಗಳಿಂದ ಶೋಷಣೆ ಇವು ಬಡ ದೇಶಗಳ ನಿರಂತರ ಅನಭಿವೃದ್ಧಿಗೆ ಪ್ರಮುಖ ಕಾರಣವಾಗಿವೆ. ಪ್ರಪಂಚದ ಒಟ್ಟು ರಾಷ್ಟ್ರೀಯ ಉತ್ಪನ್ನದ ಶೇಕಡ 8 ರಷ್ಟು ಮಾತ್ರ ಅನಭಿವೃದ್ಧ ದೇಶಗಳ ಸಂಪತ್ಸಾಧನಗಳಾಗಿವೆ. ಅಂತರರಾಷ್ಟ್ರೀಯ ಆರ್ಥಿಕ ಅಸಮತೆಯ ಸಮಸ್ಯೆ ಎಷ್ಟು ತೀಕ್ಷ್ಣವಾದುದೆಂಬುದು ಈ ಅಂಶದಿಂದ ಸ್ಪುಟವಾಗಿ ವ್ಯಕ್ತವಾಗುತ್ತದೆ. ಈ ಅಸಮತೆಯ ಕಾರಣದಿಂದಾಗಿ ಸಂಪನ್ಮೂಲಗಳು ಶ್ರೀಮಂತ ದೇಶಗಳಿಂದ ಬಡದೇಶಗಳಿಗೆ ಪ್ರವಹಿಸುವುದು ಅಗತ್ಯವಾಗಿದೆ.

ಆದರೆ ಸಂನ್ಮೂಲಗಳು ಬಡ ದೇಶಗಳಿಂದ ಶ್ರೀಮಂತ ದೇಶಗಳಿಗೆ ಪ್ರವಹಿಸಬಾರದು ಎಂಬುದು ಇದರ ಅರ್ಥವಲ್ಲ. ಬಡ ದೇಶಗಳಲ್ಲಿ ಹೆಚ್ಚುವರಿಯಾಗಿರುವ ಸಂಪನ್ಮೂಲಗಳನ್ನು ಶ್ರೀಮಂತ ದೇಶಗಳಿಗೆ ರಫ್ತು ಮಾಡಬಹುದು ಮತ್ತು ಆ ಮೂಲಕ

ಅವು ಅಮೂಲ್ಯವಾದ ವಿದೇಶಿ ವಿನಿಮಯ ಸಂಪನ್ಮೂಲಗಳನ್ನು ಸಂಪಾದಿಸಬಹುದು. ಸಾಮಾನ್ಯವಾಗಿ ಶ್ರಮ ಮತ್ತು ಕೆಲವು ಸರಕುಗಳು ಶ್ರೀಮಂತ ದೇಶಗಳಲ್ಲಿ ಕೊರತೆಯಿಂದಿದ್ದು ಅವುಗಳನ್ನು ಇತರ ದೇಶಗಳಿಂದ ಆಮದು ಮಾಡಿಕೊಳ್ಳುವ ಆವಶ್ಯಕತೆ ಉದ್ಭವಿಸುತ್ತದೆ.

ಒಟ್ಟಿನಲ್ಲಿ ಸಂಪನ್ಮೂಲಗಳ ಅಂತರರಾಷ್ಟ್ರೀಯ ಚಲನೆಯ ಫಲವಾಗಿ ವಿವಿಧ ಸಂಪನ್ಮೂಲಗಳು ಜಗತ್ತಿನ ವಿಭಿನ್ನ ರಾಷ್ಟ್ರಗಳ ನಡುವೆ ಸಾಧ್ಯವಾದಷ್ಟು ಸಮವಾಗಿ ಹಂಚಿಕೆಯಾಗುತ್ತವೆ. ಆರ್ಥಿಕಾಭಿವೃದ್ಧಿಯ ಸಾಧನೆಗೆ ಸರಿಯಾದ ದಿಕ್ಕು ಲಭಿಸುತ್ತದೆ ಮತ್ತು ಯಾವುದೇ ದೇಶವು ಕೊರತೆಯ ಸಂಪತ್ಸಾಧನವನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ.

ಉತ್ಪಾದನಾಂಗಗಳು ವಿವಿಧ ರಾಷ್ಟ್ರಗಳ ನಡುವೆ ಚಲನಶೀಲತೆಯನ್ನು ಪಡೆದಿರುವುದಿಲ್ಲವೆಂದು ಸಂಪ್ರದಾಯ ಪಂಥದ ಅರ್ಥಶಾಸ್ತ್ರಜ್ಞರು ಭಾವಿಸಿದ್ದರಾದರೂ ಸಹ ಸಂಪನ್ಮೂಲಗಳ ಅಂತರರಾಷ್ಟ್ರೀಯ ಚಲನೆಯು ಅನೇಕ ರಾಷ್ಟ್ರಗಳ ಆರ್ಥಿಕಾಭಿವೃದ್ಧಿಗೆ ಗಣನೀಯವಾದ ಕೊಡುಗೆಯನ್ನು ನೀಡಿರುವುದನ್ನು ಗಮನಿಸಬಹುದು. ಇಂದು ಉನ್ನತ ಮಟ್ಟದ ಅಭಿವೃದ್ಧಿಯನ್ನು ಸಾಧಿಸಿರುವ ಅನೇಕ ರಾಷ್ಟ್ರಗಳ ಆರ್ಥಿಕಾಭಿವೃದ್ಧಿಯಲ್ಲಿ ಬಂಡವಾಳ, ಶ್ರಮ, ಕಚ್ಚಾ ವಸ್ತುಗಳು ಮೊದಲಾದ ಸಂಪನ್ಮೂಲಗಳ ಅಂತರರಾಷ್ಟ್ರೀಯ ಚಲನೆಯು ಗಮನಾರ್ಹವಾದ ಪಾತ್ರವನ್ನು ವಹಿಸಿತು.

ವಿದೇಶಿ ಬಂಡವಾಳ

(Foreign Capital)

ಅಲ್ಪಾಭಿವೃದ್ಧ ದೇಶಗಳು ಬಂಡವಾಳ ಕೊರತೆಯ ಅಥವಾ ಕಡಿಮೆ ಉಳಿತಾಯ ಮತ್ತು ಹೂಡಿಕೆ ಸಾಮರ್ಥ್ಯದ ಆರ್ಥಿಕತೆಗಳಾಗಿವೆ. ಅಭಿವೃದ್ಧಿ ಸಾಧನೆಯನ್ನಿಚ್ಛಿಸುವ ಅಲ್ಪಾಭಿವೃದ್ಧ ರಾಷ್ಟ್ರದಲ್ಲಿ ವಿದೇಶಿ ಬಂಡವಾಳವು ಅಲ್ಪಸ್ವಲ್ಪವಿರುವ ಸ್ವದೇಶಿ ಬಂಡವಾಳಕ್ಕೆ ಪೂರಕವಾಗಿ ವರ್ತಿಸಿ ಅಭಿವೃದ್ಧಿ ಪ್ರಕ್ರಿಯೆಯನ್ನು ಸುಗಮಗೊಳಿಸುತ್ತದೆ.

ದ್ವಿತೀಯ ಜಾಗತಿಕ ಯುದ್ಧಾನಂತರದ ಅವಧಿಯಲ್ಲಿ ವಿದೇಶಿ ಬಂಡವಾಳವು ಹಿಂದುಳಿದ ದೇಶಗಳ ಅಭಿವೃದ್ಧಿಗೆ ಮಹತ್ವಪೂರ್ಣವಾಗಿ ಸಹಾಯ ಮಾಡಿದೆ. ವಿದೇಶಿ ಬಂಡವಾಳದ ಮೇಲಿನ ಬಡ್ಡಿಯು ಆಂತರರಾಷ್ಟ್ರೀಯ ಬಂಡವಾಳ ಮಾರುಕಟ್ಟೆಯಲ್ಲಿ ಪ್ರಚಲಿತವಿರುವ ಬಡ್ಡಿಯ ದರಕ್ಕಿಂತ ಕಡಿಮೆ ಇರುವುದರಿಂದಲೂ, ಬಂಡವಾಳ ಹಣದ ಜೊತೆಗೆ ಸಾಲಿಗರಾಷ್ಟ್ರಗಳು (Creditor Countries) ಯಂತ್ರಗಳು, ತಂತ್ರಜ್ಞಾನ, ಸಿಬ್ಬಂದಿ, ಉತ್ಪಾದನಾ ಅನುಭವ ಇತ್ಯಾದಿಗಳನ್ನು ಒದಗಿಸುತ್ತಿರುವುದರಿಂದಲೂ ವಿದೇಶಿ ಬಂಡವಾಳ ಅಥವಾ ಸಾಲವನ್ನು ಸೌಮ್ಯೋಕ್ತಿಯಲ್ಲಿ "ವಿದೇಶಿ ನೆರವು" (Foreign Aid) ಎಂದೇ ಕರೆಯಲಾಗುತ್ತಿದೆ. ಆದ್ದರಿಂದ ವಿದೇಶಿ ನೆರವನ್ನು ಕುರಿತ ವಿಶ್ಲೇಷಣೆಯಲ್ಲಿ ವಿದೇಶಿ ಬಂಡವಾಳ, ವಿದೇಶಿ ಸಾಲಗಳು, ವಿದೇಶಿ ಹೂಡಿಕೆ ಮುಂತಾದ ಪಾರಿಭಾಷಿಕಗಳೆಲ್ಲವೂ ವಿಶಾಲ ದೃಷ್ಟಿಯಿಂದ ಒಂದೇ ಭಾವರೂಪ ಎಂಬುದನ್ನು ಗಮನದಲ್ಲಿಟ್ಟುಕೊಳ್ಳ

ಬೇಕಾಗುತ್ತದೆ.

ಆರ್ಥಿಕಾಭಿವೃದ್ಧಿಗೆ ವಿದೇಶಿ ಬಂಡವಾಳವನ್ನು ಬಳಸಿಕೊಳ್ಳುವ ಪರಿಕಲ್ಪನೆ ಅನಭಿವೃದ್ಧ ದೇಶಗಳಿಗೆ ಹೊಸತೇನಲ್ಲ. ಅಭಿವೃದ್ಧಿಯ ಪ್ರಾರಂಭದ ಹಂತಗಳಲ್ಲಿ ವಿದೇಶಿ ಬಂಡವಾಳವು ಗಮನಾರ್ಹವಾದ ಪಾತ್ರವಹಿಸಿರುವುದಕ್ಕೆ ಅಭಿವೃದ್ಧ ರಾಷ್ಟ್ರಗಳ ಅನುಭವವೇ ಸಾಕ್ಷಿಯಾಗಿದೆ. ಆಮದು ಮಾಡಿಕೊಂಡ ಬಂಡವಾಳವು ಆರ್ಥಿಕಾಭಿವೃದ್ಧಿಗೆ ಬಂಡವಾಳವನ್ನೊದಗಿಸುವ ಪ್ರಮುಖ ಮೂಲವಾಗಿತ್ತೆಂಬುದು ಚರಿತ್ರೆಯ ವಿವಿಧ ಅವಧಿಗಳಲ್ಲಿ ಗಮನಕ್ಕೆ ಬರುತ್ತದೆ. ಪದಿನೇಳನೆಯ ಮತ್ತು ಹದಿನೆಂಟನೆಯ ಶತಮಾನಗಳಲ್ಲಿ ತನ್ನ ಕೈಗಾರಿಕಾ ಕ್ರಾಂತಿಯ ಅವಧಿಯಲ್ಲಿ ಇಂಗ್ಲೆಂಡ್ ಹಾಲೆಂಡಿನಿಂದ ಬೃಹತ್ ಮೊತ್ತದ ಸಾಲವನ್ನು ಪಡೆಯಿತು. ಪದಿನೆಂಟನೆಯ ಶತಮಾನದಲ್ಲಿ ಅಮೆರಿಕವು ತನ್ನ ಆರ್ಥಿಕಾಭಿವೃದ್ಧಿಯ ನಿರ್ಣಾಯಕ ಅವಧಿಯಲ್ಲಿ ಯುರೋಪಿನಿಂದ ಭಾರೀ ಪ್ರಮಾಣದ ಹಣ ಮತ್ತು ಶ್ರಮಬಲವನ್ನು ಎರವಲು ಪಡೆಯಿತು. ರಷ್ಯಾವು ತನ್ನ ಅಭಿವೃದ್ಧಿ ಸಾಧನೆಯ ಕಾಲದಲ್ಲಿ ಪಶ್ಚಿಮ ಯುರೋಪಿನಿಂದ ಅಧಿಕ ಗಾತ್ರದ ಬಂಡವಾಳವನ್ನು ಆಮದು ಮಾಡಿಕೊಂಡಿತು. 1917ರ ಬೊಲ್ಶೆವಿಕ್ ಕ್ರಾಂತಿಯ ಸಮಯದಲ್ಲಿ ರಷ್ಯಾವು ಹೊಂದಿದ್ದ ಒಟ್ಟು ರಾಷ್ಟ್ರೀಯ ಸಾಲದಲ್ಲಿ ಸುಮಾರು ಅರ್ಧದಷ್ಟು ವಿದೇಶಿ ಬಂಡವಾಳದ ರೂಪದಲ್ಲಿತ್ತೆಂದು ಹೇಳಲಾಗಿದೆ.

ಅಭಿವೃದ್ಧಿ ಕಾರ್ಯಸಾಧನೆಗೆ ಉಳಿತಾಯಗಳು ಮತ್ತು ಸ್ವದೇಶಿ ಬಂಡವಾಳ ಸಾಲದಿದ್ದುದೇ ಈ ದೇಶಗಳು ವಿದೇಶಿ ಬಂಡವಾಳವನ್ನು ಅವಲಂಬಿಸಲು ಕಾರಣವಾಗಿದೆ. ಅಂದು ಸಾಲಗಾರ ರಾಷ್ಟ್ರ (Debtor Countries) ಗಳೆನಿಸಿದ್ದ ಈ ಪಾಶ್ಚಿಮಾತ್ಯ ದೇಶಗಳು ವಿದೇಶಿ ಬಂಡವಾಳದ ಸಹಾಯದಿಂದ ತಮ್ಮ ಆರ್ಥಿಕಾಭಿವೃದ್ಧಿಯನ್ನು ಸಾಧಿಸಿ, ಇಂದು ಇತರ ರಾಷ್ಟ್ರಗಳಿಗೆ ಸಾಲವನ್ನು ಒದಗಿಸುವಂತಾಗಿರುವುದು ಅಂತರರಾಷ್ಟ್ರೀಯ ವಲಯದಲ್ಲಿ ಒಂದು ಅಪೂರ್ವ ಬೆಳವಣಿಗೆಯಾಗಿದೆ. ಹದಿನೇಳನೆಯ ಮತ್ತು ಹದಿನೆಂಟನೆಯ ಶತಮಾನಗಳಲ್ಲಿ ವಿದೇಶಿ ಸಾಲವನ್ನು ಪಡೆದ ಇಂಗ್ಲೆಂಡ್ ಹತ್ತೊಂಬತ್ತನೆಯ ಮತ್ತು ಇಪ್ಪತ್ತನೆಯ ಶತಮಾನಗಳಲ್ಲಿ ಪ್ರತಿಯೊಂದು ದೇಶಕ್ಕೂ ಸಾಲವನ್ನು ನೀಡುವ ಸಾಮರ್ಥ್ಯ ಪಡೆಯಿತು. ಪ್ರಪಂಚದಲ್ಲಿಯೇ ಅತ್ಯಂತ ಶ್ರೀಮಂತ ದೇಶವಾಗಿರುವ ಅಮೆರಿಕ ಹತ್ತೊಂಬತ್ತನೆಯ ಶತಮಾನದಲ್ಲಿ ಸಾಲಗಾರವಾಗಿದ್ದುದು ಇಪ್ಪತ್ತನೆಯ ಶತಮಾನದಲ್ಲಿ ಸಾಲಿಗ ರಾಷ್ಟ್ರವಾಗಿ ಪರಿವರ್ತನೆ ಹೊಂದಿತು. ಸಾಲಗಾರ ರಾಷ್ಟ್ರವು ಸಾಲಿಗ ರಾಷ್ಟ್ರವಾಗಿ ಪರಿವರ್ತನೆ ಹೊಂದುವಿಕೆಯ ಪ್ರಕ್ರಿಯೆಯು ಆರ್ಥಿಕತೆಯು ಪುರಾತನ ವಲಯದಿಂದ ಆಧುನಿಕ ವಲಯವಾಗಿ ರೂಪಾಂತರಗೊಳ್ಳುವಂತೆಯೇ ಭಾವಗರ್ಭಿತವಾಗಿದೆ. ವಿದೇಶಿ ನೆರವು ಬಂಡವಾಳದ ರೂಪದಲ್ಲಿ ಮಾತ್ರವಲ್ಲದೆ ತಾಂತ್ರಿಕ ನಿಪುಣತೆ, ಮುಂದುವರಿದ ದೇಶಗಳ ಉತ್ಪಾದನಾ ಅನುಭವ ಇತ್ಯಾದಿಗಳ ರೂಪದಲ್ಲಿಯೂ ದೊರೆಯುವುದರಿಂದ ಅನಭಿವೃದ್ಧ ರಾಷ್ಟ್ರಗಳು ವಿದೇಶಿ ಹಣವನ್ನು ಸಮರ್ಪಕವಾಗಿ ಬಳಸಿಕೊಂಡು ಆರ್ಥಿಕಾಭಿವೃದ್ಧಿ ಸಾಧಿಸಲು ಸಾಧ್ಯವಾಗುತ್ತದೆ.

ವಿದೇಶಿ ಬಂಡವಾಳ ಚಲನೆಗಳ ಮೇಲೆ ಪ್ರಭಾವ ಬೀರುವ ಅಂಶಗಳು (Factors Affecting International Capital Movements)

ಬಂಡವಾಳದ ಅಂತರರಾಷ್ಟ್ರೀಯ ಚಲನೆಗಳ ಮೇಲೆ ಪ್ರಭಾವ ಬೀರುವ ಮುಖ್ಯ ಅಂಶಗಳನ್ನು ಕೆಳಗಿನಂತೆ ವಿವರಿಸಬಹುದು.

1. ಬಡ್ಡಿಯ ದರ (Rate of Interest): ಬಡ್ಡಿಯ ದರದಲ್ಲಿನ ವ್ಯತ್ಯಾಸವು ಬಂಡವಾಳದ ಅಂತರರಾಷ್ಟ್ರೀಯ ಚಲನೆಗೆ ಪ್ರಮುಖವಾದ ಪ್ರೇರಕ ಶಕ್ತಿಯಾಗಿದೆ. ಬಂಡವಾಳವು ಕಡಿಮೆ ಬಡ್ಡಿ ದರವನ್ನು ಹೊಂದಿರುವ ದೇಶದಿಂದ ಉನ್ನತ ಬಡ್ಡಿ ದರದ ದೇಶಕ್ಕೆ ಚಲಿಸುವ ಗುಣವನ್ನು ಪಡೆದಿದೆ.

2. ಸಟ್ಟಾ ವ್ಯಾಪಾರ (Speculation): ಸಟ್ಟಾ ವ್ಯಾಪಾರವೂ ಸಹ ಬಂಡವಾಳದ ಅಂತರರಾಷ್ಟ್ರೀಯ ಚಲನೆಯನ್ನು ಬಾಧಿಸುವ ಒಂದು ಅಂಶವಾಗಿದೆ. ಬಡ್ಡಿಯ ದರಗಳಲ್ಲಿ ಅಥವಾ ವಿದೇಶಿ ವಿನಿಮಯ ದರಗಳಲ್ಲಿ ನಿರೀಕ್ಷಿತ ಬದಲಾವಣೆಗಳನ್ನು ಆಧರಿಸಿ ಅಲ್ಪಕಾಲೀನ ಬಂಡವಾಳವು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಚಲಿಸುವ ಪ್ರವೃತ್ತಿಯನ್ನು ಹೊಂದಿರುತ್ತದೆ.

3. ಲಾಭದಾಯಕತೆ (Profitability): ವಿದೇಶಿ ಖಾಸಗಿ ಬಂಡವಾಳದ ಚಲನೆಯು ಲಾಭದ ಉದ್ದೇಶದಿಂದ ಪ್ರಭಾವಗೊಳ್ಳುತ್ತದೆ. ಹೂಡಿಕೆಯ ಮೇಲೆ ಸಾಪೇಕ್ಷವಾಗಿ ಹೆಚ್ಚಿನ ದರದ ಪ್ರತಿಫಲವು ಲಭಿಸುವ ದೇಶಕ್ಕೆ ವಿದೇಶಿ ಬಂಡವಾಳವು ಆಕರ್ಷಿಸಲ್ಪಡುತ್ತದೆ.

4. ಉತ್ಪಾದನ ವೆಚ್ಚಗಳು (Costs of Production): ಯಾವ ದೇಶದಲ್ಲಿ ಉತ್ಪಾದನ ವೆಚ್ಚ ಕಡಿಮೆ ಇದೆಯೋ ಅಲ್ಲಿಗೆ ಬಂಡವಾಳವು ಚಲಿಸುವ ಪ್ರವೃತ್ತಿಯನ್ನು ಹೊಂದಿದೆ. ಕಚ್ಚಾ ವಸ್ತುಗಳು, ಶ್ರಮ ಮೊದಲಾದವುಗಳು ಒಳಗೊಳ್ಳುವ ವೆಚ್ಚವು ಕಡಿಮೆ ಇದ್ದರೆ ಉತ್ಪಾದನ ವೆಚ್ಚವು ತಗ್ಗಿದ ಮಟ್ಟದಲ್ಲಿರುತ್ತದೆ. ಉತ್ಪಾದನ ವೆಚ್ಚವು ಕಡಿಮೆ ಇರುವ ದೇಶದಲ್ಲಿ ಹೆಚ್ಚಿನ ದರದ ಲಾಭಗಳನ್ನು ಗಳಿಸಲು ಅವಕಾಶವಿರುವುದರಿಂದ ಬಂಡವಾಳವು ಅಂತಹ ದೇಶಗಳಿಗೆ ಚಲಿಸುತ್ತದೆ.

5. ಆರ್ಥಿಕ ಸ್ಥಿತಿಗತಿಗಳು (Economic Conditions): ಮಾರುಕಟ್ಟೆ ಸಾಮರ್ಥ್ಯ, ಮೂಲಭೂತ ಸೌಲಭ್ಯಗಳು ಮೊದಲಾದ ಆರ್ಥಿಕ ಸ್ಥಿತಿಗತಿಗಳು ವಿದೇಶಿ ಖಾಸಗಿ ಬಂಡವಾಳ ಚಲನೆಯ ಮೇಲೆ ಪ್ರಭಾವ ಬೀರುತ್ತವೆ. ಈ ಸ್ಥಿತಿಗತಿಗಳು ಉತ್ತಮವಾಗಿರುವ ದೇಶಗಳು ಬಂಡವಾಳವನ್ನು ಆಕರ್ಷಿಸುವುದು ಸ್ವಾಭಾವಿಕ. ಜನಸಂಖ್ಯೆಯ ಗಾತ್ರ ಮತ್ತು ಆದಾಯದ ಮಟ್ಟ ಮಾರುಕಟ್ಟೆ ಸಾಮರ್ಥ್ಯದ ಮೇಲೆ ಪ್ರಭಾವ ಬೀರುವ ಪ್ರಮುಖ ಅಂಶಗಳಾಗಿವೆ.

6. ಸರ್ಕಾರದ ನೀತಿ ಧೋರಣೆಗಳು (Government Policies): ವಿದೇಶಿ ಹೂಡಿಕೆ, ವಿದೇಶಿ ಸಹೋದ್ಯಮ, ಬಂಡವಾಳ ರವಾನೆಗಳು, ಲಾಭಗಳು, ತೆರಿಗೆ, ವಿದೇಶಿ ವಿನಿಮಯ ನಿಯಂತ್ರಣ, ಸುಂಕ, ಕೋಶೀಯ ಮತ್ತಿತರ ಪ್ರೇರಕಗಳು ಮುಂತಾದವುಗಳಿಗೆ ಸಂಬಂಧಿಸಿ

ದಂತೆ ಸರಕಾರದ ನೀತಿ ಧೋರಣೆಗಳು ಬಂಡವಾಳದ ಅಂತರರಾಷ್ಟ್ರೀಯ ಚಲನೆಯ ಮೇಲೆ ಪ್ರಭಾವ ಬೀರುತ್ತವೆ.

7. ರಾಜಕೀಯ ಅಂಶಗಳು (Political Factors): ರಾಜಕೀಯ ಸ್ಥಿರತೆ, ಪ್ರಮುಖ ರಾಜಕೀಯ ಪಕ್ಷಗಳ ಸ್ವರೂಪ, ಇತರ ದೇಶಗಳೊಡನೆಯ ಸಂಬಂಧ ಮೊದಲಾದ ರಾಜಕೀಯ ಅಂಶಗಳು ವಿದೇಶಿ ಬಂಡವಾಳ ಚಲನೆಯ ಮೇಲೆ ಗಾಢವಾದ ಪ್ರಭಾವವನ್ನು ಉಂಟುಮಾಡುತ್ತವೆ.

ಏಷ್ಯಾ ಮತ್ತು ದೂರ ಪ್ರಾಚ್ಯದ ದೇಶಗಳಿಗಿರುವ ವಿಶ್ವಸಂಸ್ಥೆಯ ಆರ್ಥಿಕ ಆಯೋಗದ (United Nations Economic Commission for Asia and Far East) ಅಭಿಪ್ರಾಯದಲ್ಲಿ ಅನಭಿವೃದ್ಧ ದೇಶಗಳು ವಿದೇಶಿ ಬಂಡವಾಳವನ್ನು ಆಕರ್ಷಿಸಲು ಆವಶ್ಯಕವಾದ ಸಂಗತಿಗಳು ಕೆಳಗಿನಂತಿವೆ.

1. ರಾಜಕೀಯ ಸ್ಥಿರತೆ ಮತ್ತು ಬಾಹ್ಯ ಆಕ್ರಮಗಳಿಂದ ಸ್ವಾತಂತ್ರ್ಯ.
2. ಜೀವನದ ಮತ್ತು ಆಸ್ತಿಯ ಸುರಕ್ಷತೆ.
3. ಲಾಭಗಳ ಸಂಪಾದನೆಗೆ ನ್ಯಾಯಬದ್ಧವಾದ ಅವಕಾಶಗಳು
4. ವಿದೇಶಿ ಒಡೆತನದ ಉದ್ಯಮಗಳ ರಾಷ್ಟ್ರೀಕರಣದ ಸಂದರ್ಭದಲ್ಲಿ ನ್ಯಾಯಸಮ್ಮತವಾದ ಮತ್ತು ವರ್ಗಾವಣೆ ಯೋಗ್ಯ ಪರಿಹಾರದ ಚುರುಕಾದ ಪಾವತಿ.
5. ವಿದೇಶಿ ಹೂಡಿಕೆಯ ಮೇಲೆ ಲಾಭಗಳು, ಲಾಭಾಂಶಗಳು, ಬಡ್ಡಿ ಹಾಗೂ ನ್ಯಾಯಬದ್ಧವಾದ ಸವಕಳಿ ಭತ್ಯೆಯ ರವಾನೆಯ ಖಾತರಿ.
6. ವಿದೇಶಿ ತಾಂತ್ರಿಕ ಮತ್ತು ಆಡಳಿತಾತ್ಮಕ ಸಿಬ್ಬಂದಿಯ ಒಳವಲಸೆ ಮತ್ತು ನೇಮಕಾತಿಗೆ ಸೌಲಭ್ಯಗಳು.
7. ವಿದೇಶಿ ಉದ್ಯಮದ ಮೇಲೆ ಅಸಾಧಾರಣ ಹೊರೆಯನ್ನು ವಿಧಿಸದಂತಹ ತೆರಿಗೆ ವ್ಯವಸ್ಥೆ.
8. ಇಮ್ಮಡಿ ತೆರಿಗೆಯು (Double Taxation) ಇಲ್ಲದಿರುವಿಕೆ.
9. ತೊಂದರೆದಾಯಕ ನಿಯಂತ್ರಣಗಳಿಲ್ಲದಿರುವಿಕೆ.
10. ಅಸ್ತಿತ್ವದಲ್ಲಿರುವ ನಿಯಂತ್ರಣಗಳ ಆಡಳಿತದಲ್ಲಿ ವಿದೇಶಿಯರ ಬಗೆಗೆ ಭೇದವೆಣಿಸದಂತಹ ವರ್ತನೆ.
11. ಸರಕಾರದ ಒಡೆತನದ ಉದ್ಯಮಗಳ ಮತ್ತು ವಿದೇಶಿ ಖಾಸಗಿ ಬಂಡವಾಳದ ನಡುವೆ ಸ್ಪರ್ಧೆ ಇಲ್ಲದಿರುವಿಕೆ.
12. ವಿದೇಶಿ ಹೂಡಿಕೆದಾರರ ಬಗೆಗೆ ಸ್ನೇಹ ಭಾವನೆ.

G. ವಿದೇಶಿ ಹೂಡಿಕೆಯ ರೂಪಗಳ
(Forms of Foreign Investment)

ವಿದೇಶಿ ಬಂಡವಾಳದ ಚಲನೆಯು ಮುಖ್ಯವಾಗಿ ಎರಡು ವಿಧಗಳನ್ನು ಪಡೆದಿರುತ್ತದೆ. ಅವುಗಳೆಂದರೆ :

i) ವಿದೇಶಿ ಖಾಸಗಿ ಬಂಡವಾಳ, ಮತ್ತು

ii) ವಿದೇಶಿ ಸಾರ್ವಜನಿಕ ಬಂಡವಾಳ.

ವಿದೇಶಗಳ ಖಾಸಗಿ ಸಂಸ್ಥೆಗಳು ಮತ್ತು ವ್ಯಕ್ತಿಗಳು ಬೇರೆ ದೇಶಗಳಲ್ಲಿ ಬಂಡವಾಳವನ್ನು ತೊಡಗಿಸಿದರೆ ಅದು ವಿದೇಶಿ ಖಾಸಗೀ ಬಂಡವಾಳ ಚಲನೆಯಾಗುತ್ತದೆ. ವಿದೇಶಗಳ ಸರ್ಕಾರಗಳು ಮತ್ತು ಅಂತರರಾಷ್ಟ್ರೀಯ ಹಣಕಾಸಿನ ಸಂಸ್ಥೆಗಳು ನೀಡುವ ನೆರವು ವಿದೇಶಿ ಸಾರ್ವಜನಿಕ ಬಂಡವಾಳದ ಚಲನೆಗೆ ಉದಾಹರಣೆಯಾಗಿದೆ. ಖಾಸಗಿ ಮತ್ತು ಸಾರ್ವಜನಿಕ ವಿದೇಶಿ ಬಂಡವಾಳ ಈ ಕೆಳಕಾಣಿಸಿದ ಏಳು ರೂಪಗಳನ್ನು ಹೊಂದಿರುತ್ತದೆ.

i) ನೇರ ಹೂಡಿಕೆ,

ii) ಪರೋಕ್ಷ ಅಥವಾ ವಿಭಾಗೀಯ ಹೂಡಿಕೆ,

iii) ದ್ವಿಪಕ್ಷೀಯ ನೆರವು,

iv) ಬಹು ಪಕ್ಷೀಯ ನೆರವು,

v) ವಿದೇಶಿ ಸಹೋದ್ಯಮ,

vi) ದಾನ ಹಣ, ಮತ್ತು

vii) ರಫ್ತು ಸಾಲ.

ಈ ಮೇಲಿನವುಗಳಲ್ಲಿ ನೇರ ಹೂಡಿಕೆ ಮತ್ತು ಪರೋಕ್ಷ ಹೂಡಿಕೆ ವಿದೇಶಿ ಖಾಸಗಿ ಬಂಡವಾಳದ ವ್ಯಾಪ್ತಿಗೆ ಬರುತ್ತವೆ. ವಿದೇಶಿ ಸಹೋದ್ಯಮವು ವಿದೇಶಿ ಖಾಸಗಿ ಮತ್ತು ಸಾರ್ವಜನಿಕ ಬಂಡವಾಳಗಳೆರಡಕ್ಕೂ ಸೇರಬಹುದು. ದ್ವಿಪಕ್ಷೀಯ ನೆರವು, ಬಹುಪಕ್ಷೀಯ ನೆರವು, ದಾನ ಹಣ ಮತ್ತು ರಫ್ತು ಸಾಲ ವಿದೇಶಿ ಸಾರ್ವಜನಿಕ ಬಂಡವಾಳದ ಗುಂಪಿಗೆ ಬರುತ್ತವೆ.

1. ನೇರ ಹೂಡಿಕೆ (Direct Investment)

ನೇರ ಹೂಡಿಕೆಯು ವಿದೇಶಿ ಖಾಸಗಿ ಬಂಡವಾಳದ ರೂಪದಲ್ಲಿರುತ್ತದೆ. ವಿದೇಶಿ ಬಂಡವಾಳಗಾರರು ಒಂದು ರಾಷ್ಟ್ರದಲ್ಲಿರುವ ವಿದೇಶಿ ಕಂಪನಿಗಳ ಶಾಖೆಗಳಲ್ಲಿ ಹೂಡುವ ಬಂಡವಾಳ ಮತ್ತು ಒಂದು ರಾಷ್ಟ್ರದಲ್ಲಿ ವಿದೇಶಿ ಹತೋಟಿಗೆ ಒಳಪಟ್ಟ ಕಂಪನಿಗಳಲ್ಲಿ ವಿದೇಶಿಯರು ಹಾಕಿರುವ ಷೇರು ಬಂಡವಾಳ 'ನೇರ ಹೂಡಿಕೆ' ಎನಿಸಿಕೊಳ್ಳುತ್ತದೆ. ಪ್ರಥಮ ಮಹಾಯುದ್ಧ ಪೂರ್ವದ ಅವಧಿಯಲ್ಲಿ ನೇರ ಹೂಡಿಕೆಯು ವಿದೇಶಿ ಬಂಡವಾಳ ಚಲನೆಯ ಪ್ರಧಾನ ರೂಪವಾಗಿದ್ದಿತು. ಆದರೆ ನಂತರದ ಅವಧಿಯಲ್ಲಿ ಅದರ ಪ್ರಾಮುಖ್ಯವು ಸಾಪೇಕ್ಷವಾಗಿ ಕಡಿಮೆಯಾಗುತ್ತಾ ಬಂದಿತು. ಅದರಲ್ಲಿಯೂ 1929ರ ಮಹಾ ಆರ್ಥಿಕ

ಮುಗ್ಗಟ್ಟಿನ ತರುವಾಯ ಹೆಚ್ಚುಕಡಿಮೆ ಸ್ಥಗಿತವಾಗಿದೆ ಎನ್ನುವಷ್ಟರಮಟ್ಟಿಗೆ ಅದರ ಮಹತ್ವವು ಕುಸಿಯಿತು. ಆದರೆ 1960ರ ದಶಕದ ನಂತರದಲ್ಲಿ ಅನಭಿವೃದ್ಧಿಶೀಲ ರಾಷ್ಟ್ರಗಳು ಆರ್ಥಿಕಾಭಿವೃದ್ಧಿ ಸಾಧನೆಗಾಗಿ ಹಾತೊರೆಯುತ್ತಿರುವುದರಿಂದ ಮತ್ತು ತಮ್ಮ ಆರ್ಥಿಕತೆಗಳೊಳಗೆ ವಿದೇಶಿ ಬಂಡವಾಳ ಪ್ರವಹನವನ್ನು ಹೆಚ್ಚಿಸಲು ಉತ್ಸುಕವಾಗಿರುವು ದರಿಂದ ವಿದೇಶಿ ನೇರ ಹೂಡಿಕೆಯು ಗಮನಾರ್ಹವಾಗಿ ಹೆಚ್ಚುತ್ತಿದೆ.

ವಿದೇಶಿ ಬಂಡವಾಳಗಾರರು ಒಂದು ಉದ್ಯಮದಲ್ಲಿ ಬಂಡವಾಳ ಹೂಡಿದಾಗ ಅದರ ಜೊತೆಯಲ್ಲಿಯೇ ಯಂತ್ರೋಪಕರಣಗಳು, ತಂತ್ರಜ್ಞಾನ, ಉದ್ಯಮ ಚತುರತೆ ಮೊದಲಾದವುಗಳನ್ನು ಪ್ರಯೋಗಿಸುವುದರಿಂದ ಅನಭಿವೃದ್ಧಿ ರಾಷ್ಟ್ರಗಳಿಗೆ ಇದು ಅನೇಕ ಪ್ರಯೋಜನಗಳನ್ನೊದಗಿಸುತ್ತದೆ. ವಿದೇಶಿ ಖಾಸಗಿ ಬಂಡವಾಳಗಾರರು ವಿದೇಶದ ಉದ್ಯಮದಲ್ಲಿ ತಾವು ಮಾಡಿದ ಹೂಡಿಕೆಗೆ ಉತ್ತಮ ಪ್ರತಿಫಲ ದೊರೆಯಬೇಕೆಂದು ಬಯಸಿ ಉತ್ಪಾದನ ವ್ಯವಸ್ಥೆಯನ್ನು ದಕ್ಷವಾಗಿ ನಿರ್ವಹಿಸುವುದರಿಂದ ಅನಭಿವೃದ್ಧಿ ರಾಷ್ಟ್ರಗಳಲ್ಲಿ ಉತ್ಪನ್ನದ ಹೆಚ್ಚಳಕ್ಕೆ ಪ್ರೋತ್ಸಾಹ ನೀಡಿದಂತಾಗುತ್ತದೆ. ಹೊಸ ಕೈಗಾರಿಕೆಗಳ ಸ್ಥಾಪನೆಯ ಫಲವಾಗಿ ಅತಿಥೇಯ ದೇಶಗಳಲ್ಲಿ ಉದ್ಯೋಗಗಳು ಹೆಚ್ಚುತ್ತವೆ. ಕಾರ್ಮಿಕರಿಗೆ ವಿಶೇಷ ತಾಂತ್ರಿಕ ತರಬೇತಿಯು ದೊರೆಯುತ್ತದೆ. ವಿದೇಶಿ ಬಂಡವಾಳವು ರಫ್ತು ಕೈಗಾರಿಕೆಗಳ ಸ್ಥಾಪನೆಗೆ ಹೂಡಲ್ಪಟ್ಟರೆ ವಿದೇಶಿ ವಿನಿಮಯ ಗಳಿಕೆ ಹೆಚ್ಚುತ್ತದೆ.

ಈ ಅಮೂಲ್ಯ ಪ್ರಯೋಜನಗಳನ್ನು ಪಡೆಯುವ ಅವಕಾಶಗಳಿದ್ದುದರಿಂದ ಒಂದು ಕಾಲದಲ್ಲಿ ಅನಭಿವೃದ್ಧ ರಾಷ್ಟ್ರಗಳು ಹೂಡಿಕೆಯ ಕೊರತೆಯನ್ನು ತುಂಬಲು ವಿದೇಶಿ ಖಾಸಗಿ ಬಂಡವಾಳವನ್ನು ಅತ್ಯಧಿಕವಾಗಿ ಅವಲಂಬಿಸಿದ್ದವು. ಅನೇಕ ಅನಭಿವೃದ್ಧ ರಾಷ್ಟ್ರಗಳಲ್ಲಿ ಪ್ರಮುಖ ಹಾಗೂ ದೊಡ್ಡ ಪ್ರಮಾಣದ ಕೈಗಾರಿಕೆಗಳು ವಿದೇಶಿ ಬಂಡವಾಳದ ಸಹಾಯದಿಂದ ಸ್ಥಾಪಿಸಲ್ಪಟ್ಟಿರುವುದೇ ಇದಕ್ಕೆ ನಿದರ್ಶನ. ಉದಾಹರಣೆಗೆ, ಮಧ್ಯಪ್ರಾಚ್ಯ, ಮತ್ತು ವನೆಜೂಲಾದ ತೈಲ ಕೈಗಾರಿಕೆಗಳು, ಮಲಯಾ ಮತ್ತು ಇಂಡೋನೇಷಿಯಾದ ರಬ್ಬರ್ ತೋಟಗಳು, ಭಾರತ ಮತ್ತು ಶ್ರೀಲಂಕಾದ ಚಹಾ ತೋಟಗಳು, ಕ್ಯೂಬಾ ಮತ್ತು ವೆಸ್ಟ್‌ಇಂಡೀಸ್‌ನ ಕಬ್ಬಿನ ತೋಟಗಳು, ಮಧ್ಯ ಅಮೇರಿಕಾದ ಬಾಳೆತೋಟಗಳು, ಚಿಲಿ ಮತ್ತು ಉತ್ತರ ರೋಡೀಷಿಯಾದ ತಾಮ್ರದ ಗಣಗಳು ವಿದೇಶಿ ಬಂಡವಾಳ ಹೂಡಿಕೆಯಿಂದಲೇ ಬೆಳೆದು ಅಧಿಕ ಉತ್ಪನ್ನ ಮತ್ತು ಅಭಿವೃದ್ಧಿ ಸಾಧಿಸಿವೆ.[1]

ವಿದೇಶಿ ಖಾಸಗಿ ಬಂಡವಾಳವು ಹಿಂದುಳಿದ ದೇಶಗಳ ಅಭಿವೃದ್ಧಿಯ ದೃಷ್ಟಿಯಿಂದ ಅತ್ಯಮೂಲ್ಯ ಅಂಶವೆಂಬುದು ಸಾಬೀತಾಗಿರುವುದಾದರೂ ಅದರಿಂದ ದುಷ್ಪರಿಣಾಮಗಳಿಲ್ಲ ದಿಲ್ಲ. ವಿದೇಶಿ ಹೂಡಿಕೆದಾರರು ಅತಿಥೇಯ ದೇಶದ ಆರ್ಥಿಕತೆಯ ಮೇಲೆ ತಮ್ಮ ನಿಯಂತ್ರಣ ಸಾಧಿಸಬಯಸಬಹುದು. ವಿದೇಶಿ ಕಂಪನಿಗಳು ಅನಭಿವೃದ್ಧ ರಾಷ್ಟ್ರಗಳಲ್ಲಿ ಆರ್ಥಿಕ ಮತ್ತು ರಾಜಕೀಯ ಪ್ರಭುತ್ವ ಪ್ರತಿಷ್ಠಾಪಿಸಿದುದಕ್ಕೆ ಸಾಕ್ಷ್ಯಗಳಿವೆ. ಈ

1. Frederic Benham, Economic Aid to Underdeveloped Countries, p.68

ಪರಿಣಾಮವಾಗಿ ಅನೇಕ ಅನಭಿವೃದ್ಧ ರಾಷ್ಟ್ರಗಳು ವಿದೇಶಿ ಬಾಸಗಿ ಬಂಡವಾಳವನ್ನು ಶೋಷಣೆಯ ಒಂದು ಮಾರ್ಗವೆಂದು ಬಗೆದಿವೆ. ಇತ್ತೀಚಿನ ದಶಕಗಳಲ್ಲಿ ಈ ಬಂಡವಾಳದ ಪ್ರಾಮುಖ್ಯತೆ ಕಡಿಮೆಯಾಗಲು ಈ ಭಾವನೆಯೇ ಕಾರಣವೆನ್ನಬಹುದು. ವಿದೇಶಿ ಕಂಪನಿಗಳು ತಾವು ಉತ್ಪಾದಿಸುವ ಸರಕುಗಳಿಗೆ ಅತಿ ಹೆಚ್ಚಿನ ಬೆಲೆ ನಿರ್ಧರಿಸಬಹುದು. ಅಧಿಕ ಲಾಭ ಗಳಿಕೆಯ ಉದ್ದೇಶದಿಂದ ಅನುಸರಿಸಲ್ಪಡುವ ಈ ಕ್ರಮವು ಅತಿಥೇಯ ದೇಶದಲ್ಲಿ ಅನುಭೋಗ ಮಟ್ಟದ ತೀವ್ರ ಕುಸಿತಕ್ಕೆ ಕಾರಣವಾಗುತ್ತದೆ. ಯಥೇಚ್ಛ ಶ್ರಮ ಪೂರೈಕೆಯಿರುವ ಹಿಂದುಳಿದ ದೇಶಗಳಲ್ಲಿ ವಿದೇಶಿ ಕಂಪನಿಗಳು ಕಡಿಮೆ ವೇತನವನ್ನು ಪಾವತಿಸುವ ಮೂಲಕ ಕಾರ್ಮಿಕರನ್ನು ಶೋಷಿಸಬಹುದು.

ವಿದೇಶಿ ಬಂಡವಾಳದ ಪ್ರವಹಿಸುವಿಕೆಯು ಬಂಡವಾಳ ಹೂಡುವ ಮತ್ತು ಬಂಡವಾಳ ಸ್ವೀಕರಿಸುವ ದೇಶಗಳಿಗೆ ಸಂಬಂಧಿಸಿದಂತೆ ಕೆಲವು ಕರಾರುಗಳನ್ನವಲಂಬಿಸಿರುತ್ತದೆ. ಬಂಡವಾಳ ಹೂಡುವ ದೇಶಗಳು ಬಯಸುವ ಸ್ಥಿತಿಗತಿಗಳು ಮುಂದಿನಂತಿವೆ.

1) ತಮ್ಮ ಬಂಡವಾಳದ ಸುರಕ್ಷತೆ ಮತ್ತು ಲಾಭದಾಯಕತೆ.
2) ಅವು ಗಳಿಸುವ ಲಾಭದ ವರ್ಗಾವಣೆಗೆ ಅವಶ್ಯಕವಾದ ವಿದೇಶಿ ವಿನಿಮಯ ಸೌಲಭ್ಯಗಳು.
3) ತಮ್ಮ ಬಂಡವಾಳ ಹೂಡಿಕೆಯಿಂದ ಸ್ಥಾಪಿಸಿದ ಉದ್ಯಮಗಳನ್ನು ಅತಿಥೇಯ ದೇಶಗಳ ಸರ್ಕಾರಗಳು ಸಾಕಷ್ಟು ಪರಿಹಾರ ನೀಡದೆ ವಶಪಡಿಸಿಕೊಳ್ಳುವುದಿಲ್ಲವೆಂಬ ಭರವಸೆ.
4) ಬಂಡವಾಳ ಪಡೆಯುವ ರಾಷ್ಟ್ರದ ಜನರಿಗೆ ತಾಂತ್ರಿಕ ಶಿಕ್ಷಣ ನೀಡಬೇಕೆಂಬ ಕರಾರಿಲ್ಲದಿರುವಿಕೆ.
5) ಉದ್ಯಮಗಳ ನೀತಿ ನಿರ್ಣಾಯಕ ಸಮಿತಿಗಳಲ್ಲಿ ಭಾಗವಹಿಸಲು ಅವಕಾಶಗಳು.
6) ಉದ್ಯಮಗಳ ಮೇಲೆ ವಿಧಿಸುವ ತೆರಿಗೆ ವಿಷಯದಲ್ಲಿ ಸರ್ಕಾರವು ತಾರತಮ್ಯ ಧೋರಣೆ ಹೊಂದಿಲ್ಲದಿರುವಿಕೆ.
7) ಉದ್ಯಮದಲ್ಲಿ ಗಳಿಸಿದ ಲಾಭಗಳ ಪೂರ್ಣ ಮೊತ್ತವನ್ನು ಆ ದೇಶದಲ್ಲಿ ಮರುಹೂಡಿಕೆ ಮಾಡಬೇಕೆಂಬ ಷರತ್ತಿಲ್ಲದಿರುವಿಕೆ.

ಇವುಗಳಿಗೆ ಎದುರಾಗಿ ವಿದೇಶಿ ಬಂಡವಾಳ ಪಡೆಯುವ ರಾಷ್ಟ್ರಗಳು ಬಯಸುವ ಅಂಶಗಳು ಕೆಳಕಂಡಂತಿವೆ.

1) ವಿದೇಶಿ ಬಂಡವಾಳವು ಯಾವುದೇ ವಿಧದಲ್ಲಿ ತಮ್ಮ ಶೋಷಣೆಗೆ ಸಾಧನವಾಗುವುದಿಲ್ಲ ವೆಂಬ ಭರವಸೆ.
2) ಯಾವ ಉದ್ಯಮ ಕ್ಷೇತ್ರದಲ್ಲಿ ಸ್ವದೇಶಿ ಹೂಡಿಕೆ ಆಕರ್ಷಣೀಯವಾಗಿ ಕಂಡು ಬರುವುದೋ ಆ ಕ್ಷೇತ್ರಗಳಲ್ಲಿ ಮಾತ್ರವೇ ವಿದೇಶಿ ಬಂಡವಾಳದ ಹೂಡಿಕೆಯಾಗಬೇಕು.
3) ವಿದೇಶಿ ಬಂಡವಾಳವು ದೇಶದ ಉದ್ಯಮಗಳ ಉತ್ಪನ್ನತೆಯನ್ನು ಹೆಚ್ಚಿಸುವುದೆಂಬ ಆಕಾಂಕ್ಷೆ.

4) ಬಂಡವಾಳ ಹೂಡಿಕೆಯ ಜೊತೆಗೆ ಆ ದೇಶದ ಜನತೆಗೆ ತಾಂತ್ರಿಕ ಶಿಕ್ಷಣ ದೊರೆಯುವುದೆಂಬ ಆಸೆ.
5) ಹೊಸದಾಗಿ ಸ್ಥಾಪಿಸಲ್ಪಡುವ ಉದ್ಯಮಗಳಲ್ಲಿ ಸ್ಥಳೀಯರಿಗೆ ಸಾಕಷ್ಟು ಉದ್ಯೋಗಾವಕಾಶಗಳು ಒದಗುತ್ತವೆಂಬ ನಿರೀಕ್ಷೆ.
6) ದೇಶದ ರಫ್ತುಗಳನ್ನು ಹೆಚ್ಚಿಸಲು ಹಾಗೂ ಆಮದುಗಳನ್ನು ಕಡಿಮೆ ಮಾಡಲು ವಿದೇಶಿ ಹೂಡಿಕೆಯು ನೆರವಾಗುವದೆಂಬ ಭಾವನೆ.

2. ಪರೋಕ್ಷ ಅಥವಾ ವಿಭಾಗೀಯ ಹೂಡಿಕೆ
(Indirect or Portfolio Investment)

ಬಂಡವಾಳದ ನೆರವು ಪಡೆಯುವ ದೇಶವು ಷೇರುಗಳು, ಸಾಲಪತ್ರಗಳು, ಋಣಪತ್ರಗಳು (ಬಾಂಡುಗಳು), ಮೊದಲಾದ ವರ್ಗಾಯಿಸಬಹುದಾದ ವಿನಿಯೋಜಕಗಳು ಮತ್ತು ಸಾಲ ಪತ್ರಗಳನ್ನು ಹೊರಡಿಸುವ ಮೂಲಕ ಸಾಲಗಳನ್ನು ಎತ್ತುತ್ತದೆ. ಇಂತಹ ವಿನಿಯೋಜಕಗಳನ್ನು ಪಡೆದ ಬೇರೊಂದು ರಾಷ್ಟ್ರದ ಪ್ರಜೆಗಳು ಅಥವಾ ಬಂಡವಾಳ ಹೂಡಿಕೆ ಸಂಸ್ಥೆಗಳು ಅದರಲ್ಲಿ ನಮೂದಿಸಲ್ಪಟ್ಟಿರುವಷ್ಟು ಮೊತ್ತದ ಹಣವನ್ನು ವಿನಿಯೋಜಕಗಳನ್ನು ಹೊರಡಿಸಿದ ದೇಶಕ್ಕೆ ನೀಡಬೇಕಾಗುತ್ತದೆ. ಷೇರುಗಳು, ಸಾಲಪತ್ರಗಳು (Debentures) ಮತ್ತು ಋಣಪತ್ರಗಳನ್ನು ಕೊಂಡುಕೊಂಡು ಸಾಲ ನೀಡಿರುವವರು ಅದಕ್ಕೆ ಬಡ್ಡಿಯನ್ನು ಪಡೆಯಲು ಅರ್ಹರಾಗಿರುವರು. ವಿನಿಯೋಜಕಗಳು ಮತ್ತು ಸಾಲ ಪತ್ರಗಳನ್ನು ಮಾರುವ ಮೂಲಕ ಸಾಲ ಪಡೆದ ದೇಶವು ಮೊದಲೇ ನಮೂದಿಸಿರುವಂತೆ ನಿರ್ದಿಷ್ಟ ಅವಧಿಯಲ್ಲಿ ಸಾಲದ ಮೊತ್ತವನ್ನು ಬಡ್ಡಿ ಸಮೇತ ಮರುಪಾವತಿ ಮಾಡಬೇಕಾಗುತ್ತದೆ. ವಿನಿಯೋಜಕಗಳು ಮತ್ತು ಸಾಲ ಪತ್ರಗಳನ್ನು ಹೊರಡಿಸುವ (ಮಾರುವ) ಮೂಲಕವಾಗಿ ಪಡೆದ ಬಂಡವಾಳವನ್ನು ಸಾಲಗಾರ ರಾಷ್ಟ್ರವು ತನ್ನ ಆವಶ್ಯಕತೆಗಳ ಈಡೇರಿಕೆಗೆ ಹೂಡಿಕೆ ಮಾಡುತ್ತದೆ. ವಿನಿಯೋಜಕಗಳು ಮತ್ತು ಸಾಲ ಪತ್ರಗಳನ್ನು ಹೊರಡಿಸುವ ವಿಧಾನದಿಂದ ಬಂಡವಾಳ ಪಡೆದು ಹೂಡಿಕೆ ಮಾಡುವುದರಿಂದ ಇದನ್ನು ಪರೋಕ್ಷ ಅಥವಾ ವಿಭಾಗೀಯ ಹೂಡಿಕೆ ಎಂದು ಕರೆಯಲಾಗಿದೆ.

ವಿಭಾಗೀಯ ಹೂಡಿಕೆಯು ಹಿಂದೆ ಬಹಳ ಪ್ರಾಶಸ್ತ್ಯ ಪಡೆದಿದ್ದಿತ್ತಾದರೂ ಇತ್ತೀಚೆಗೆ ಅದರ ಪ್ರಾಮುಖ್ಯ ತಗ್ಗಿದೆ. ಇದಕ್ಕೆ ಹಲವು ಕಾರಣಗಳಿವೆ. ಅನಭಿವೃದ್ಧ ರಾಷ್ಟ್ರಗಳ ಸಾಲ ಮರುಪಾವತಿಯ ಸಾಮರ್ಥ್ಯದ ಬಗ್ಗೆ ವಿದೇಶಿಯರಲ್ಲಿ ವಿಶ್ವಾಸ ಕಡಿಮೆಯಾಗಿರುವುದು ಸಾಲ ಪತ್ರಗಳನ್ನು ಹೊರಡಿಸುವ ಮೂಲಕ ಬಂಡವಾಳವನ್ನು ಎತ್ತಲು ಅಡಚಣೆಯಾಗಿದೆ. ಅಲ್ಲದೆ ತಮ್ಮ ದೇಶದ ಬಂಡವಾಳ ಹೂಡಿಕೆ ಸಂಸ್ಥೆಗಳು ವಿದೇಶಿ ವಿನಿಯೋಜಕಗಳಲ್ಲಿ ಮತ್ತು ಸಾಲ ಪತ್ರಗಳಲ್ಲಿ ಹೂಡಬಹುದಾದ ಮೊತ್ತದ ಮೇಲೆ ಅಭಿವೃದ್ಧ ರಾಷ್ಟ್ರಗಳು ಮಿತಿ ಹೇರಿವೆ. ತಮ್ಮ ಬಂಡವಾಳ ಪೇಟೆಗೆ ಇತರ ರಾಷ್ಟ್ರಗಳು ಪ್ರವೇಶಿಸಿ ಸಾಲ ಪತ್ರಗಳನ್ನು ಹೊರಡಿಸುವುದನ್ನು ಅನೇಕ ರಾಷ್ಟ್ರಗಳು ನಿರ್ಬಂಧಿಸಿವೆ. ಇವೇ ಮೊದಲಾದ ಕಾರಣಗಳಿಂದಾಗಿ

ಅನಭಿವೃದ್ಧ ರಾಷ್ಟ್ರಗಳು ಅಂತರರಾಷ್ಟ್ರೀಯ ಬಂಡವಾಳ ಪೇಟೆಯಲ್ಲಿ ವಿನಿಯೋಜಕಗಳನ್ನು ಮತ್ತು ಸಾಲ ಪತ್ರಗಳನ್ನು ಮಾರುವ ಶಕ್ತಿಯನ್ನು ಕಳೆದುಕೊಂಡಿವೆ.

ವಿಭಾಗೀಯ ಹೂಡಿಕೆಯ ಪ್ರಾಮುಖ್ಯತೆ ಅಗಾಧವಾಗಿ ಇಳಿದಿರುವುದಾದರೂ ಬಹುಪಕ್ಷೀಯ ಪರೋಕ್ಷ ಹೂಡಿಕೆ (Multilateral Indirect Investment) ಸ್ವಲ್ಪ ಮಟ್ಟಿಗೆ ಪ್ರಚಲಿತವಿದೆ. ಅನಭಿವೃದ್ಧ ದೇಶಗಳಿಗೆ ನೆರವು ಒದಗಿಸಲು ಅಂತರರಾಷ್ಟ್ರೀಯ ಹಣಕಾಸಿನ ಸಂಸ್ಥೆಗಳು ಹೊರಡಿಸುವ ಋಣಪತ್ರ (ಬಾಂಡು)ಗಳನ್ನು ವಿದೇಶಿಯರು ಕೊಂಡು ಬಂಡವಾಳ ಒದಗಿಸಿದಾಗ ಅದು ಬಹು ಪಕ್ಷೀಯ ಪರೋಕ್ಷ ಹೂಡಿಕೆ ಎನಿಸಿಕೊಳ್ಳುವುದು. ಈ ವಿಧಾನದಲ್ಲಿ ಅಂತರರಾಷ್ಟ್ರೀಯ ಹಣಕಾಸಿನ ಸಂಸ್ಥೆಯೊಂದರ ಮಧ್ಯವರ್ತಿತ್ವದಲ್ಲಿ ಅಭಿವೃದ್ಧ ರಾಷ್ಟ್ರದಿಂದ ಅನಭಿವೃದ್ಧ ರಾಷ್ಟ್ರಕ್ಕೆ ಬಂಡವಾಳ ಪ್ರವಹಿಸುತ್ತದೆ.

3. ದ್ವಿಪಕ್ಷೀಯ ನೆರವು (Bilateral Aid)

ಒಂದು ದೇಶದ ಸರ್ಕಾರವು ಮತ್ತೊಂದು ದೇಶದ ಸರ್ಕಾರಕ್ಕೆ ನೀಡುವ ಸಾಲ ಅಥವಾ ನೆರವು ಅಂತರರಾಷ್ಟ್ರೀಯ ಬಂಡವಾಳ ಚಲನೆಯ ಒಂದು ಮುಖ್ಯ ವಿಧವಾಗಿದೆ. ಸಾಲಿಗ ಮತ್ತು ಸಾಲಗಾರ ರಾಷ್ಟ್ರಗಳೆರಡರ ಒಪ್ಪಂಬಡಿಕೆಯಿಂದ ಸಿದ್ಧಿಗೊಳ್ಳುವ ಈ ವಿಧದ ನೆರವನ್ನು "ದ್ವಿಪಕ್ಷೀಯ ನೆರವು" ಎಂದು ಕರೆಯಲಾಗುತ್ತದೆ. ಇದಕ್ಕೆ **'ಅಂತರ ಸರ್ಕಾರಗಳ ಸಾಲ'** (Inter-Governmental Loans) ಎಂಬ ಹೆಸರೂ ಇದೆ. ಎರಡನೆಯ ಜಾಗತಿಕ ಯುದ್ಧಾನಂತರದ ಅವಧಿಯಲ್ಲಿ ಈ ವಿಧದ ನೆರವಿನ ಮಹತ್ವ ಬಹುವಾಗಿ ಬೆಳೆಯುತ್ತಿದೆ.

4. ಬಹುಪಕ್ಷೀಯ ನೆರವು (Multilateral Aid)

ದ್ವಿತೀಯ ಜಾಗತಿಕ ಸಮರದ ಬಳಿಕ ಸ್ಥಾಪನೆಗೊಂಡ ವಿವಿಧ ಅಂತರರಾಷ್ಟ್ರೀಯ ಹಣಕಾಸಿನ ಸಂಸ್ಥೆಗಳು ಹಿಂದುಳಿದ ದೇಶಗಳ ಪ್ರಗತಿಗೆ ವಿಶೇಷ ನೆರವು ನೀಡುತ್ತಿರುವುದು ಅಂತರರಾಷ್ಟ್ರೀಯ ಆರ್ಥಿಕತೆಯಲ್ಲಿ ಒಂದು ವೈಶಿಷ್ಟ್ಯದ ಬೆಳವಣಿಗೆಯಾಗಿದೆ. ಅಂತರರಾಷ್ಟ್ರೀಯ ಹಣ ನಿಧಿ, ಅಂತರರಾಷ್ಟ್ರೀಯ ಪುನರ್ನಿರ್ಮಾಣ ಮತ್ತು ಅಭಿವೃದ್ಧಿ ಬ್ಯಾಂಕು (ವಿಶ್ವಬ್ಯಾಂಕು) ಹಾಗೂ ಅದರ ಅಂಗ ಸಂಸ್ಥೆಗಳಾದ ಅಂತರರಾಷ್ಟ್ರೀಯ ಅಭಿವೃದ್ಧಿ ಸಂಘ ಮತ್ತು ಅಂತರರಾಷ್ಟ್ರೀಯ ಹಣಕಾಸಿನ ನಿಗಮ ಇವು ಅನಭಿವೃದ್ಧ ರಾಷ್ಟ್ರಗಳಿಗೆ ನೆರವು ಒದಗಿಸುತ್ತಿರುವ ಮುಖ್ಯ ಸಂಸ್ಥೆಗಳಾಗಿವೆ. ಭೀಕರ ಯುದ್ಧದ ಪೆಟ್ಟಿಗೆ ತುತ್ತಾದ ರಾಷ್ಟ್ರಗಳ ಆರ್ಥಿಕತೆಯ ಪುನರ್ನಿರ್ಮಾಣ ಮತ್ತು ಅನಭಿವೃದ್ಧ ರಾಷ್ಟ್ರಗಳ ಅಭಿವೃದ್ಧಿಗಾಗಿ ಅನೇಕ ರಾಷ್ಟ್ರಗಳು ಸೇರಿ ಸ್ಥಾಪಿಸಿದ ಈ ಸಂಸ್ಥೆಗಳು ವಿವಿಧ ದೇಶಗಳಿಂದ ಬಹು ಮುಖ್ಯವಾಗಿ ಅಭಿವೃದ್ಧ ದೇಶಗಳಿಂದ ನಿಧಿಗಳನ್ನು ಕೂಡಿಸಿ ಅಭಿವೃದ್ಧಿಶೀಲ ದೇಶಗಳಿಗೆ ನೆರವು ನೀಡುತ್ತಿರುವುದರಿಂದ ಈ ವಿಧದ ಬಂಡವಾಳ ಚಲನೆಯನ್ನು **'ಬಹು ಪಕ್ಷೀಯ ನೆರವು'** ಎನ್ನಲಾಗುತ್ತದೆ. ಏಕೆಂದರೆ ಇಲ್ಲಿ ನಿಧಿಯನ್ನು ಒದಗಿಸುವ ಶ್ರೀಮಂತ ದೇಶ, ನಿಧಿಯನ್ನು ಕೂಡಿಸಿ ಬಡ ದೇಶಕ್ಕೆ ನೆರವು ನೀಡುವ ಹಣಕಾಸಿನ ಸಂಸ್ಥೆ ಮತ್ತು ನೆರವು ಪಡೆಯುವ ದೇಶ - ಹೀಗೆ ಬಹು ಪಕ್ಷಗಳಿವೆ. ಈ ವಿಧದ ಬಂಡವಾಳ ಚಲನೆಯನ್ನು

'ಅಂತರ ರಾಷ್ಟ್ರೀಯ ಹಣಕಾಸಿನ ಸಂಸ್ಥೆಗಳಿಂದ ಸಾಲ' (Loans from International Monetary Institutions) ಎಂತಲೂ ಕರೆಯಲಾಗುತ್ತದೆ.

ಸಾಪೇಕ್ಷವಾಗಿ ಕಡಿಮೆ ದರದ ಬಡ್ಡಿಯಲ್ಲಿ ಸಾಲಗಾರ ದೇಶದ ಒಳಿತನ್ನೇ ಧ್ಯೇಯವಾಗಿಟ್ಟುಕೊಂಡು ಒದಗಿಸಲಾಗುತ್ತಿರುವ ಈ ವಿಧದ ನೆರವು ದ್ವಿಪಕ್ಷೀಯ ನೆರವಿಗಿಂತಲೂ ಉಪಯುಕ್ತ ವಾಗಿದೆ. ಪರಿಣಾಮವಾಗಿ ಬಹುಪಕ್ಷೀಯ ನೆರವಿನ ಮಹತ್ವವೂ ಗಣನೀಯವಾಗಿ ಹೆಚ್ಚಿದೆ.

5. ವಿದೇಶಿ ಸಹೋದ್ಯಮ (Foreign Collaboration)

ವಿದೇಶಿ ಸಹೋದ್ಯಮವು ಇತ್ತೀಚಿನ ವರ್ಷಗಳಲ್ಲಿ ಹೆಚ್ಚು ಪ್ರಾಶಸ್ತ್ಯ ಪಡೆಯುತ್ತಿರುವ ವಿದೇಶಿ ಬಂಡವಾಳ ಹೂಡಿಕೆಯ ಒಂದು ಮುಖ್ಯ ವಿಧವಾಗಿದೆ. ಯಾವುದೇ ಒಂದು ಯೋಜನೆಯ ಅಥವಾ ಪರಿಯೋಜನೆಯ (Project) ನಿರ್ಮಾಣದಲ್ಲಿ ಸ್ವದೇಶಿ ಮತ್ತು ವಿದೇಶಿ ಬಂಡವಾಳಗಳೆರಡರ ಹೂಡುವಿಕೆಯನ್ನು 'ವಿದೇಶಿ ಸಹೋದ್ಯಮ' ಎಂದು ಹೆಸರಿಸಲಾಗಿದೆ. ತಂತ್ರಜ್ಞಾನ, ಭಾರೀ ಯಂತ್ರಗಳು, ಯಂತ್ರೋಪಕರಣಗಳು ಮೊದಲಾದ ಉತ್ಪಾದನ ಸಾಮಾಗ್ರಿಗಳ ಕೊರತೆಯಿರುವಾಗ ಅಭಿವೃದ್ಧಿಶೀಲ ದೇಶವೊಂದು ತನ್ನ ಪರಿಯೋಜನೆಯಲ್ಲಿ ಸ್ವದೇಶಿ ಬಂಡವಾಳ ಮತ್ತು ವಿದೇಶಿ ತಂತ್ರಕಲೆ ಹಾಗೂ ಯಂತ್ರಗಳನ್ನು ಪ್ರಯೋಗಿಸಬಹುದು ಅಥವಾ ಬಂಡವಾಳದ ಕೊರತೆಯಿರುವಾಗ ಯಾವುದೇ ಯೋಜನೆಯಲ್ಲಿ ಸ್ವದೇಶಿ ಬಂಡವಾಳದ ಜೊತೆಯಲ್ಲಿ ವಿದೇಶಿ ಬಂಡವಾಳದಾರರಿಗೆ ಹೂಡಿಕೆಗೆ ಅವಕಾಶ ಕಲ್ಪಿಸುವ ಸಹ ಉದ್ಯಮವನ್ನು ಕೈಕೊಳ್ಳಬಹುದು.

ವಿದೇಶಿ ಸಹೋದ್ಯಮವು ಮೂರು ಬಗೆಯಲ್ಲಿರುತ್ತದೆ.

i) ಎರಡು ದೇಶಗಳ ಸರ್ಕಾರಗಳ ಸಹಭಾಗಿತ್ವ,

ii) ಎರಡು ದೇಶಗಳ ಖಾಸಗಿ ವ್ಯಕ್ತಿಗಳ ಸಹಭಾಗಿತ್ವ, ಮತ್ತು

iii) ವಿದೇಶಿ ಕೈಗಾರಿಕಾ ಸಂಸ್ಥೆಗಳು ಹಾಗೂ ಸ್ವದೇಶೀ ಸರ್ಕಾರದ ಸಹ ಭಾಗಿತ್ವ.

ಕೊರತೆಯಿರುವ ಸ್ವದೇಶಿ ಬಂಡವಾಳಕ್ಕೆ ಪೂರಕವಾಗಿ ಹಣಕಾಸಿನ ಸಂಪನ್ಮೂಲಗಳಲ್ಲದೆ, ವಿದೇಶಿ ತಂತ್ರಕಲೆ, ಉದ್ಯಮ ಪರಿಣತಿ, ಕಾರ್ಮಿಕರಿಗೆ ತರಬೇತಿ ಮತ್ತು ಉತ್ಪಾದನಾ ಕುಶಲತೆ ವಿದೇಶಿ ಸಹೋದ್ಯಮದಲ್ಲಿ ದೊರೆಯುತ್ತವೆ. ಆದ್ದರಿಂದ ಅನಭಿವೃದ್ಧ ರಾಷ್ಟ್ರಗಳ ಆರ್ಥಿಕ ಪ್ರಗತಿಯ ದೃಷ್ಟಿಯಿಂದ ಇದು ಅತ್ಯುಪಯುಕ್ತವಾದ ವಿದೇಶಿ ಬಂಡವಾಳ ಚಲನೆಯ ಮಾಧ್ಯಮವಾಗಿದೆ.

6. ದಾನ ಹಣ (Grants)

ಅಭಿವೃದ್ಧ ರಾಷ್ಟ್ರಗಳು ಅನಭಿವೃದ್ಧ ರಾಷ್ಟ್ರಗಳ ಆರ್ಥಿಕ ಪುನರ್ರಚನೆ ಮತ್ತು ಅಭಿವೃದ್ಧಿಗಾಗಿ ನೀಡುತ್ತಿರುವ ದಾನ ಹಣವು ಇನ್ನೊಂದು ಬಗೆಯ ದ್ವಿಪಕ್ಷೀಯ ನೆರವಾಗಿದೆ. ದ್ವಿತೀಯ ಮಹಾ ಸಮರದಲ್ಲಿ ಹಾಳಾಗಿದ್ದ ಐರೋಪ್ಯ ರಾಷ್ಟ್ರಗಳ ಆರ್ಥಿಕತೆಗಳನ್ನು ಪುನರ್ರಚಿಸಲು ಅಮೆರಿಕ ಸರ್ಕಾರವು ಯುದ್ಧೋತ್ತರ ಅವಧಿಯಲ್ಲಿ ಮಾರ್ಷಲ್

ಯೋಜನೆಯ (Marshal Plan) ಮೂಲಕ ನೀಡಿದ ನೆರವು ದಾನ ಹಣಕ್ಕೊಂದು ಮುಖ್ಯ ಉದಾಹರಣೆಯಾಗಿದೆ. ಅಮೆರಿಕದ ವಿದೇಶಾಂಗ ಖಾತೆಯ ಕಾರ್ಯದರ್ಶಿಯಾಗಿದ್ದ ಜಾರ್ಜ್ ಸಿ. ಮಾರ್ಷಲ್ 1948ರಲ್ಲಿ ರೂಪಿಸಿದ ಈ ಯೋಜನೆಯ ಮೇರೆಗೆ 1948-52 ರ ಅವಧಿಯಲ್ಲಿ ಅಮೆರಿಕವು ಪಶ್ಚಿಮ ಯುರೋಪಿನ ರಾಷ್ಟ್ರಗಳಿಗೆ ಸುಮಾರು 2200 ಕೋಟಿ ಡಾಲರುಗಳ ನೆರವು ನೀಡಿತು. ಈ ನೆರವಿನ ಮೂಲಕ 16 ಐರೋಪ್ಯ ರಾಷ್ಟ್ರಗಳು ಯುದ್ಧದಿಂದ ಛಿದ್ರವಾಗಿದ್ದ ತಮ್ಮ ಆರ್ಥಿಕತೆಗಳನ್ನು ಪುನರ್ರಚಿಸಿಕೊಳ್ಳಲು ಸಾಧ್ಯವಾಯಿತು. ಹಿಂದುಳಿದ ದೇಶಗಳ ಪ್ರಗತಿಗೆ ನಿಸ್ವಾರ್ಥತೆಯಿಂದ ನೆರವು ನೀಡುವುದು ತಮ್ಮ ಕರ್ತವ್ಯವೆಂದು ಬಗೆದು ಕೆಲವು ಸಿರಿವಂತ ರಾಷ್ಟ್ರಗಳು ಸಾಲಕ್ಕೆ ಬದಲಾಗಿ ದಾನ ರೂಪದಲ್ಲಿ ಬಂಡವಾಳವನ್ನು ಒದಗಿಸಿವೆ.

ದಾನದ ರೂಪದಲ್ಲಿ ಪಡೆದ ಬಂಡವಾಳವನ್ನು ಮರುಪಾವತಿ ಮಾಡುವ ಪ್ರಮೇಯವೇ ಇಲ್ಲದಿರುವುದರಿಂದ ತಮ್ಮ ಆರ್ಥಿಕತೆಗಳ ಸರ್ವತೋಮುಖ ಬೆಳವಣಿಗೆಗೆ ಈ ವಿಧದ ನೆರವು ಅತ್ಯಮೂಲ್ಯವೆಂದು ಬಗೆದು ಅನಭಿವೃದ್ಧ ರಾಷ್ಟ್ರಗಳು ಯುದ್ಧೋತ್ತರ ಅವಧಿಯಲ್ಲಿ ಹಲವು ರಾಷ್ಟ್ರಗಳಿಂದ ದಾನ ಹಣವನ್ನು ಪಡೆದು ಆರ್ಥಿಕಾಭಿವೃದ್ಧಿ ಕಾರ್ಯದಲ್ಲಿ ಬಳಸಿಕೊಂಡಿವೆ. ಆದರೆ ಈಚೆಗೆ ದಾನ ಹಣದ ಪ್ರಾಮುಖ್ಯತೆ ಕಡಿಮೆಯಾಗಿರುವುದರ ಜೊತೆಗೆ ಶ್ರೀಮಂತ ರಾಷ್ಟ್ರಗಳೂ ಸಹ ಈ ವಿಧದಲ್ಲಿ ನೆರವು ನೀಡಲು ಇಚ್ಛಿಸುತ್ತಿಲ್ಲ. ಎಲ್ಲಾ ಕ್ಷೇತ್ರಗಳಲ್ಲಿಯೂ ಅಂತರರಾಷ್ಟ್ರೀಯ ಪೈಪೋಟಿ ಹೆಚ್ಚುತ್ತಿರುವ ಈ ದಿನಗಳಲ್ಲಿ ತನಗೆ ಮರುಪಾವತಿಯಾಗದಿರುವ ದಾನ ರೂಪದ ಹಣವನ್ನು ನೀಡಲು ಯಾವ ಶ್ರೀಮಂತ ದೇಶವೂ ಮುಂದಾಗದಿರುವುದರಲ್ಲಿ ಸೋಜಿಗವಿಲ್ಲ. ಸಾಲವಾಗಿ ನೀಡಿದ ಹಣ ಬಡ್ಡಿ ಸಮೇತ ಮರುಪಾವತಿಗೊಳ್ಳುವುದೂ ಮತ್ತು ಅದರ ಮೂಲಕವೇ ಮುಂದೆ ಸಾಲ ನೀಡಲು ಸಾಧ್ಯವಿದ್ದು; ದಾನ ಹಣದಲ್ಲಿ ಈ ಅವಕಾಶವಿಲ್ಲದಿರುವುದರಿಂದ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ದಾನ ರೂಪದಲ್ಲಿ ನೆರವು ನೀಡಲು ಬಯಸದಿರುವುದಕ್ಕೆ ಮುಖ್ಯ ಕಾರಣವಾಗಿದೆ.

ದಾನ ನೀಡುವ ರಾಷ್ಟ್ರಗಳಲ್ಲದೆ ದಾನ ಪಡೆಯು ರಾಷ್ಟ್ರಗಳೂ ಸಹ ಇದರಲ್ಲಿ ವಿಶ್ವಾಸ ತಗ್ಗಿಸಿವೆ. ದಾನಿ ರಾಷ್ಟ್ರವು ಸಲಿಗೆಯಿಂದ ತನ್ನ ಆಂತರಿಕ ವ್ಯವಹಾರಗಳಲ್ಲಿ ಮಧ್ಯ ಪ್ರವೇಶಿಸ ಬಹುದೆಂಬ ಭೀತಿಯಿಂದ ಅನಭಿವೃದ್ಧ ರಾಷ್ಟ್ರಗಳು ದಾನ ಹಣವನ್ನು ಪಡೆಯಲು ಆಸಕ್ತಿಯನ್ನು ಕುಗ್ಗಿಸಿವೆ. ಅಲ್ಲದೆ, ಉಚಿತವಾಗಿ ದೊರೆಯುವ ದಾನ ರೂಪದ ಹಣವನ್ನು ಅಭಿವೃದ್ಧಿ ಕಾರ್ಯಗಳಿಗಲ್ಲದೆ ಅನಾವಶ್ಯಕವಾಗಿ, ಮನಸ್ಸೋಚ್ಛೆಯಾಗಿ ಉಪಯೋಗಿಸ ಬಹುದಾದ ಅಪಾಯವಿರುವುದರಿಂದ ಯಾವುದೇ ಸಾರ್ಥಕತೆಯೂ ದೊರೆಯುವುದಿಲ್ಲ ವೆಂದೂ ದಾನ ಪಡೆಯುವ ರಾಷ್ಟ್ರಗಳಿಗೂ ಮನವರಿಕೆಯಾಗಿದೆ.

7. ರಫ್ತು ಸಾಲ (Export Credit)

ಅನಭಿವೃದ್ಧ ರಾಷ್ಟ್ರಗಳು ಆಮದು–ರಫ್ತು ಅಂತರದಿಂದ ನರಳುತ್ತಿವೆ ಎಂಬುದು ಸರ್ವವೇದ್ಯವಾದ ಸಂಗತಿ. ತಮ್ಮ ಅಭಿವೃದ್ಧಿ ಕಾರ್ಯಗಳ ಅನುಷ್ಠಾನಕ್ಕೆ ಹಾಗೂ

ಹೆಚ್ಚುತ್ತಿರುವ ಜನಸಂಖ್ಯೆಗೆ ಆಹಾರ ಮತ್ತು ವಸತಿ ಸೌಲಭ್ಯಗಳನ್ನೊದಗಿಸಲು ಈ ರಾಷ್ಟ್ರಗಳು ಬಂಡವಾಳ, ಯಂತ್ರೋಪಕರಣಗಳು, ಆಹಾರ ಮತ್ತು ಆಹಾರ ಸಾಮಗ್ರಿಗಳನ್ನು ಆಮದು ಮಾಡಿಕೊಳ್ಳಬೇಕಾಗಿದೆ. ಅನಭಿವೃದ್ಧ ರಾಷ್ಟ್ರಗಳು ತಮಗೆ ಅವಶ್ಯವಿರುವ ಸರಕುಗಳನ್ನು ಆಮದು ಮಾಡಿಕೊಳ್ಳುವ ಉದ್ದೇಶಕ್ಕೆ ಶ್ರೀಮಂತ ದೇಶಗಳು ನೀಡುವ ಸಾಲವು **''ರಫ್ತು ಸಾಲ''** ಎನಿಸಿಕೊಳ್ಳುತ್ತದೆ.

ರಫ್ತು ಸಾಲವು ಆಮದು–ರಫ್ತು ಅಂತರವನ್ನು ತುಂಬಿ ಹಿಂದುಳಿದ ರಾಷ್ಟ್ರದ ಬೆಳವಣಿಗೆಗೆ ಪ್ರಯೋಜನಕಾರಿಯಾಗಿರುವುದಾದರೂ ಬಹುತೇಕ ಸಮಯಗಳಲ್ಲಿ ಅದು ಅಪಾಯಕಾರಿ ಎಂಬ ವಿಷಯ ಈ ದೇಶಗಳ ಗಮನಕ್ಕೆ ಬಂದಿದೆ. ಏಕೆಂದರೆ, ಸಾಲವಾಗಿ ಪಡೆದ ಹಣವನ್ನು ಸಾಲಗಾರ ರಾಷ್ಟ್ರವು ಸಾಲಿಗ ರಾಷ್ಟ್ರದಲ್ಲಿಯೇ ವೆಚ್ಚ ಮಾಡಿ ಅದೇ ರಾಷ್ಟ್ರದ ಸರಕುಗಳನ್ನು ಆಮದು ಮಾಡಿಕೊಳ್ಳಬೇಕೆಂಬ ಷರತ್ತು ಹೇರುವ ಸಂಭವವಿದೆ. ಇಂತಹ ಸಮಯದಲ್ಲಿ ಸಾಲಗಾರ ರಾಷ್ಟ್ರವು ಪೈಪೋಟಿಯುತ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಯಲ್ಲಿ ತನಗೆ ಇಷ್ಟವೆಂದು ತೋರುವ ಸರಕುಗಳನ್ನು ಕೊಳ್ಳುವ ಅವಕಾಶ ತಪ್ಪುವುದು. ತಾನು ನೀಡುವ ಸಾಲದ ಹಣವನ್ನು ತನ್ನಲ್ಲಿಯೇ ವೆಚ್ಚ ಮಾಡಬೇಕೆಂಬ ಕರಾರಿನ ಮೇಲೆ ನೀಡುವ ಸಾಲವನ್ನು **'ರಾಷ್ಟ್ರ ಬಂಧಿತ ಸಾಲ'** ಎಂಬ ಹೆಸರಿನಿಂದ ಕರೆಯಲಾಗಿದೆ. ಈ ಬಗೆಯ ಕರಾರಿಲ್ಲದಿದ್ದರೆ ಮಾತ್ರ ರಫ್ತು ಸಾಲವು ಅನಭಿವೃದ್ಧ ದೇಶಗಳ ಬೆಳವಣಿಗೆಗೆ ನೆರವಾಗಬಲ್ಲದು. ಇಲ್ಲದಿದ್ದರೆ ಅದು ಸಾಲಿಗ ರಾಷ್ಟ್ರಕ್ಕೆ ಪ್ರಯೋಜನಕಾರಿ ಯಾಗಿ ಸಾಲಗಾರ ರಾಷ್ಟ್ರದ ಸುಲಿಗೆಗೆ ದಾರಿಯಾಗುತ್ತದೆ.

ಬಂಧಿತ ನೆರವು
(Tied Aid)

ನೆರವನ್ನು **'ಬಂಧಿತ ನೆರವು'** ಮತ್ತು **'ಬಂಧಿತವಲ್ಲದ ನೆರವು'** ಎಂಬುದಾಗಿಯೂ ವರ್ಗೀಕರಿಸಲಾಗಿದೆ. ಬಂಧಿತ ನೆರವು ಎಂದರೇನೆಂಬುದನ್ನು ಮೊದಲು ತಿಳಿದುಕೊಳ್ಳೋಣ.

ನೆರವು ನೀಡುವ ದೇಶವು ತಾನು ಒದಗಿಸಿದ ಬಂಡವಾಳವನ್ನು ನಿರ್ದಿಷ್ಟ ಉದ್ದೇಶ ಅಥವಾ ಯೋಜನೆಗೆ ಬಂಧಿಸಿದರೆ, ಅಂದರೆ ಕಟ್ಟಿಹಾಕಿದರೆ, ಅದು ಬಂಧಿತ ನೆರವಾಗುತ್ತದೆ. ನೆರವು ಪಡೆದ ದೇಶವು ಆ ನಿರ್ದಿಷ್ಟ ಉದ್ದೇಶಕ್ಕೆ ಅಥವಾ ಪರಿಯೋಜನೆಗೆ (Project) ನೆರವಿನ ಮೊತ್ತವನ್ನು ಉಪಯೋಗಿಸಿಕೊಳ್ಳಬೇಕಾಗುತ್ತದೆ. ನೆರವನ್ನು ಬೇರೆ ಕಾಮಗಾರಿಗಳ ಮೇಲೆ ವೆಚ್ಚ ಮಾಡಲು ಸಾಲಗಾರ ರಾಷ್ಟ್ರವು ಸ್ವತಂತ್ರವಾಗಿರುವುದಿಲ್ಲ. ಬಂಧಿತ ನೆರವಿನಲ್ಲಿ ಎರಡು ವಿಧಗಳಿವೆ. ಅವುಗಳೆಂದರೆ: i) ರಾಷ್ಟ್ರ ಬಂಧಿತ ನೆರವು, ಮತ್ತು ii)ಪರಿಯೋಜನೆ ಬಂಧಿತ ನೆರವು.

1. ರಾಷ್ಟ್ರ ಬಂಧಿತ ನೆರವು (Country-tied Aid): ಈ ರೀತಿಯ ನೆರವಿನಲ್ಲಿ ನೆರವು ನೀಡಿದ ರಾಷ್ಟ್ರವು ನೆರವಿನ ಮೊತ್ತವನ್ನು ತನ್ನ ದೇಶದ ಸರಕುಗಳಿಗೆ ಬಂಧಿಸುತ್ತದೆ. ನೆರವನ್ನು

ಪಡೆದ ದೇಶವು ನೆರವು ನೀಡಿದ ದೇಶದ ಸರಕುಗಳನ್ನೇ ಆಮದು ಮಾಡಿಕೊಳ್ಳಬೇಕೆಂಬ ಷರತ್ತನ್ನು ರಾಷ್ಟ್ರಬಂಧಿತ ನೆರವಿನಲ್ಲಿ ವಿಧಿಸಲಾಗುತ್ತದೆ. ಅನಭಿವೃದ್ಧ ದೇಶವು ತನ್ನ ಆರ್ಥಿಕಾಭಿವೃದ್ಧಿಗೆ ಅಗತ್ಯವಾಗಿರುವ ಸರಕುಗಳನ್ನು ಕೊಳ್ಳಲೋಸುಗವೇ ನೆರವು ಸ್ವೀಕರಿಸುವುದರಿಂದ ನೆರವು ನೀಡುವ ದೇಶವು ಈ ಪರಿಸ್ಥಿತಿಯನ್ನು ವ್ಯವಸ್ಥಿತವಾಗಿ ಬಳಸಿಕೊಳ್ಳುತ್ತದೆ. ಇಂತಹ ನೆರವಿನಲ್ಲಿ ಸಾಲಗಾರ ರಾಷ್ಟ್ರವು ಸಾಲಿಗ ರಾಷ್ಟ್ರದಿಂದಲೇ ಅಗತ್ಯವಾದ ವಸ್ತುಗಳನ್ನು, ಅಂದರೆ ಯಂತ್ರಗಳು, ಬಿಡಿಭಾಗಗಳು, ಕಚ್ಚಾವಸ್ತುಗಳು, ಆಹಾರ ಧಾನ್ಯಗಳು, ಇತ್ಯಾದಿ – ಆಮದು ಮಾಡಿಕೊಳ್ಳಬೇಕೆಂಬ ಕರಾರಿರುತ್ತದೆ.

ರಾಷ್ಟ್ರಬಂಧಿತ ನೆರವು ದುಷ್ಪಯೋಜನಕಾರಿಯಾಗಿರುತ್ತದೆ. ಏಕೆಂದರೆ ಸಾಲಗಾರ ರಾಷ್ಟ್ರವು ಅನಿವಾರ್ಯವಾಗಿ ದುಬಾರಿ ಬೆಲೆಯಲ್ಲಿ ಕಡಿಮೆ ಗುಣದರ್ಜೆಯ ವಸ್ತುಗಳನ್ನು ಸಾಲಿಗ ರಾಷ್ಟ್ರದಿಂದ ಕೊಳ್ಳಬೇಕಾಗುತ್ತದೆ. ಈ ಷರತ್ತಿಗೆ ಒಮ್ಮು ಒಪ್ಪದಿದ್ದರೆ ನೆರವು ದೊರೆಯುವುದೇ ಇಲ್ಲ. ನೆರವು ನೀಡಿದ ದೇಶದಲ್ಲಿ ಬೆಲೆಗಳು ಸಾಮಾನ್ಯವಾಗಿ ಪೈಪೋಟಿಯುತ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿರುವುದಕ್ಕಿಂತ ಅಧಿಕವಾಗಿರುತ್ತವೆ. ಇತರ ದೇಶಗಳಲ್ಲಿ ಕಡಿಮೆ ಬೆಲೆಯಲ್ಲಿ, ಉತ್ತಮ ಗುಣಮಟ್ಟದ ಸರಕುಗಳು ದೊರೆಯುವಂತಿದ್ದರೂ ಅವುಗಳನ್ನು ಆಮದು ಮಾಡಿಕೊಳ್ಳಲು ಸಾಲಗಾರ ರಾಷ್ಟ್ರಕ್ಕೆ ಅವಕಾಶ ತಪ್ಪಿಹೋಗಿರುತ್ತದೆ. ಆದ್ದರಿಂದ ರಾಷ್ಟ್ರಬಂಧಿತ ನೆರವಿನಲ್ಲಿ ನೆರವು ಪಡೆದ ದೇಶವು ಹಣಕಾಸಿನ ನಷ್ಟವನ್ನು ಅನುಭವಿಸಬೇಕಾಗುತ್ತದೆ.

2. ಪರಿಯೋಜನೆ ಬಂಧಿತ ನೆರವು (Project-tied Aid) : ಇಂತಹ ನೆರವಿನಲ್ಲಿ ಸಾಲಿಗ ರಾಷ್ಟ್ರವು ನಿರ್ದಿಷ್ಟ ಪರಿಯೋಜನೆಗೆ ನೀಡಿದ ಹಣವನ್ನು ಪೂರ್ಣವಾಗಿ ಅದಕ್ಕೆ ಬಳಸಿಕೊಳ್ಳಬೇಕೆಂಬ ಕರಾರನ್ನು ಸಾಲಗಾರ ರಾಷ್ಟ್ರದ ಮೇಲೆ ವಿಧಿಸುತ್ತದೆ. ನೆರವಿನ ಸ್ವಲ್ಪ ಮೊತ್ತವನ್ನೂ ಸಹ ವೇರಾವುದಾದರೂ ಅಗತ್ಯ ಯೋಜನೆಗೆ ಬಳಸಿಕೊಳ್ಳಲು ಅವಕಾಶವಿರುವು ದಿಲ್ಲ. ಉದಾಹರಣೆಗೆ, ಒಮ್ಮು ಉಕ್ಕಿನ ಸ್ಥಾವರ ಸ್ಥಾಪನೆಗಾಗಿ ಸಾಲಿಗ ರಾಷ್ಟ್ರವು ನೆರವು ಒದಗಿಸಿದರೆ ಪೂರ್ತಿ ಮೊತ್ತವನ್ನು ಆ ಪರಿಯೋಜನೆಗೆ ಹೂಡಿಕೆ ಮಾಡಬೇಕು. ಅಂದರೆ ನೆರವಿನ ಮೊತ್ತವನ್ನು ನಿರ್ದಿಷ್ಟ ಯೋಜನೆಗೆ ಬಂಧಿಸಿರುವುದು ಈ ರೀತಿಯ ನೆರವಿನ ವೈಶಿಷ್ಟ್ಯ. ಉಕ್ಕಿನ ಉದ್ಯಮವು ಬೆಳೆಯಲು ಗಣಿಗಾರಿಕೆ, ಸಾರಿಗೆ ಸೌಕರ್ಯಗಳು, ವಿದ್ಯುಚ್ಛಕ್ತಿ ಪೂರೈಕೆ, ವಸತಿ ಸೌಲಭ್ಯಗಳು ಮೊದಲಾದುವೆಲ್ಲವೂ ಆವಶ್ಯಕವಾಗಿವೆ. ಇವುಗಳಿಗೆ ಮೂಲಭೂತ ಸೌಲಭ್ಯ (Infrastructure) ಗಳು ಎಂದು ಹೆಸರು. ಆದರೆ ಪರಿಯೋಜನೆ ಬಂಧಿತ ನೆರವಿನಲ್ಲಿ ಮೂಲಭೂತ ಸೌಲಭ್ಯಗಳಿಗೆ ಬಂಡವಾಳವನ್ನು ಬಳಸಿಕೊಳ್ಳಲು ಅವಕಾಶವಿರುವುದಿಲ್ಲ.

ಪರಿಯೋಜನೆ ಬಂಧಿತ ನೆರವಿನಲ್ಲಿ ಯೋಜನೆಯು ಸಂಪೂರ್ಣಗೊಳ್ಳುವವರೆಗೂ ಸಾಲಿಗ ರಾಷ್ಟ್ರವು ಅನಿರ್ಬಂಧಿತವಾಗಿ ಬಂಡವಾಳ ಒದಗಿಸುವುದೆಂಬ ಭರವಸೆ ಇರುವುದಾದರೂ ಅದು ಕಳಕಂಡ ದೋಷಗಳನ್ನೊಳಗೊಂಡಿದೆ.

1. ನೆರವಿನ ಮೊತ್ತವನ್ನು ನಿರ್ದಿಷ್ಟ ಪರಿಯೋಜನೆಗೆ ಬಂಧಿಸಿದಾಗ ಅತ್ಯಗತ್ಯವಾದ ಮೂಲ ಸೌಲಭ್ಯಗಳ ಬೆಳವಣಿಗೆಗೆ ಅಡ್ಡಿಯಾಗುತ್ತದೆ.
2. ನೆರವು ನೀಡಿದ ದೇಶವು ಪರಿಯೋಜನೆಯ ಉಸ್ತುವಾರಿಯ ನೆಪದಲ್ಲಿ ಸಾಲಗಾರ ರಾಷ್ಟ್ರದ ಆಂತರಿಕ ವ್ಯವಹಾರದಲ್ಲಿ ಹಸ್ತಕ್ಷೇಪ ನಡೆಸಬಹುದು.
3. ನಿಗದಿತ ವೇಳೆಯಲ್ಲಿಯೇ ಪರಿಯೋಜನೆಯನ್ನು ಪೂರ್ಣಗೊಳಿಸುವ ಸಲುವಾಗಿ ಬಂಡವಾಳ, ತಂತ್ರಕಲೆ, ಶ್ರಮ, ಇತ್ಯಾದಿಯೆಲ್ಲವನ್ನೂ ಅದಕ್ಕೆ ಮೀಸಲಿಡಬೇಕಾದುದರಿಂದ ಅಷ್ಟೇ ಪ್ರಮುಖವಾದ ಇತರ ಯೋಜನೆಗಳ ಅನುಷ್ಠಾನವನ್ನು ಮುಂದೂಡಬೇಕಾಗುತ್ತದೆ.

ಬಂಧಿತವಲ್ಲದ ನೆರವು

(Untied Aid)

ನೆರವಿನ ಮೊತ್ತವನ್ನು ನಿರ್ದಿಷ್ಟ ಪರಿಯೋಜನೆಗೆ ಅಥವಾ ಸಾಲಿಗ ರಾಷ್ಟ್ರದ ಸರಕುಗಳಿಗೆ ಬಂಧಿಸದಿದ್ದರೆ ಅದನ್ನು "ಬಂಧಿತವಲ್ಲದ ನೆರವು" ಎಂಬುದಾಗಿ ಕರೆಯಲಾಗುತ್ತದೆ. ಇಂತಹ ನೆರವು ಅಭಿವೃದ್ಧಿಶೀಲ ದೇಶಗಳ ಆರ್ಥಿಕಾಭಿವೃದ್ಧಿಗೆ ಪೂರಕವಾಗಿರುತ್ತದೆ. ಏಕೆಂದರೆ, ನೆರವಿನ ಮೊತ್ತವನ್ನು ಅಭಿವೃದ್ಧಿಯ ಆವಶ್ಯಕತೆಗಳಿಗೆ ತಕ್ಕಂತೆ ವಿವಿಧ ಕಾರ್ಯಕ್ರಮಗಳ ಮೇಲೆ ವಿನಿಯೋಗಿಸಲು ಸಾಲಗಾರ ರಾಷ್ಟ್ರಗಳು ಸ್ವತಂತ್ರವಾಗಿರುತ್ತವೆ. ಅಂದರೆ ನೆರವನ್ನು ಸಾಲಿಗ ದೇಶಕ್ಕೆ ಬಂಧಿಸಿಲ್ಲದಿರುವುದರಿಂದ ಆ ದೇಶದ ಸರಕುಗಳನ್ನೇ ಖರೀದಿಸಬೇಕೆಂಬ ಒತ್ತಾಯವಿರುವುದಿಲ್ಲ. ನೆರವು ಸ್ವೀಕರಿಸಿದ ದೇಶವು ಆ ಹಣದಿಂದ ಜಗತ್ತಿನ ಯಾವುದೇ ದೇಶದಿಂದ ಸರಕುಗಳನ್ನು ಆಮದು ಮಾಡಿಕೊಳ್ಳಬಹುದು. ಅಲ್ಲದೆ ಸ್ಪರ್ಧಾತ್ಮಕ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಯಲ್ಲಿ ಉತ್ತಮ ಗುಣದರ್ಜೆಯ ವಸ್ತುಗಳನ್ನು ಖರೀದಿಸುವುದಕ್ಕೂ ಅವಕಾಶವಿರುತ್ತದೆ

H. ವಿದೇಶಿ ನೇರ ಹೂಡಿಕೆಯ ಅನುಕೂಲತೆಗಳು ಮತ್ತು ಅನಾನುಕೂಲತೆಗಳು
(Advantages and Disadvantages of Foreign Direct Investment)

ವಿದೇಶಿ ಖಾಸಗಿ ಬಂಡವಾಳದ ಮುಖ್ಯ ರೂಪಗಳನ್ನು ಕೆಳಗಿನಂತೆ ವಿವರಿಸಬಹುದು.

ನೇರ ಹೂಡಿಕೆಯು ವಿದೇಶಿ ಖಾಸಗಿ ಬಂಡವಾಳದ ರೂಪದಲ್ಲಿರುತ್ತದೆ. ವಿದೇಶಿ ಬಂಡವಾಳಗಾರರು ಒಂದು ರಾಷ್ಟ್ರದಲ್ಲಿರುವ ವಿದೇಶಿ ಕಂಪನಿಗಳ ಶಾಖೆಗಳಲ್ಲಿ ಹೂಡುವ ಬಂಡವಾಳ ಮತ್ತು ಒಂದು ರಾಷ್ಟ್ರದಲ್ಲಿ ವಿದೇಶಿ ಹತೋಟಿಗೆ ಒಳಪಟ್ಟ ಕಂಪನಿಗಳಲ್ಲಿ ವಿದೇಶಿಯರು ಹಾಕಿರುವ ಷೇರು ಬಂಡವಾಳ 'ನೇರ ಹೂಡಿಕೆ' ಎನಿಸಿ ಕೊಳ್ಳುತ್ತದೆ.

ವಿದೇಶಿ ಹೂಡಿಕೆದಾರರು ಸ್ವತ್ತುಗಳ ಮೇಲೆ ಒಡೆತನವನ್ನು ಹೊಂದಿರುವುದು ಮಾತ್ರವಲ್ಲದೆ ಅತಿಥೇಯ ದೇಶದಲ್ಲಿ ಆದಾಯ ಸೃಷ್ಟಿಯ ಚಟುವಟಿಕೆಗಳ ಮೇಲೆಯೂ ನಿಯಂತ್ರಣವನ್ನು ಹೊಂದಿರುವಂತಹ ರೂಪದ ಹೂಡಿಕೆಯೇ ವಿದೇಶಿ ನೇರ ಹೂಡಿಕೆ.

ಆದ್ದರಿಂದ ಇಂತಹ ಹೂಡಿಕೆಯಲ್ಲಿ ಬಂಡವಾಳದ ವರ್ಗಾವಣೆ ಮಾತ್ರವಲ್ಲದೆ ನಿರ್ವಹಣಾ ಕುಶಲತೆ ಮತ್ತು ತಂತ್ರಜ್ಞಾನದ ವರ್ಗಾವಣೆಯೂ ಇರುತ್ತದೆ. ಅಂತರರಾಷ್ಟ್ರೀಯ ಖಾಸಗಿ ಬಂಡವಾಳ ಚಲನೆಯು ಈಗ ಮುಖ್ಯವಾಗಿ ನೇರ ಹೂಡಿಕೆಯ ರೂಪದಲ್ಲಿದೆ.

ವಿದೇಶಿ ಬಂಡವಾಳಗಾರರು ಒಂದು ಉದ್ಯಮದಲ್ಲಿ ಬಂಡವಾಳ ಹೂಡಿದಾಗ ಅದರ ಜೊತೆಯಲ್ಲಿಯೇ ಯಂತ್ರೋಪಕರಣಗಳು, ತಂತ್ರಜ್ಞಾನ, ಉದ್ಯಮ ಚತುರತೆ ಮೊದಲಾದವುಗಳನ್ನು ಪ್ರಯೋಗಿಸುವುದರಿಂದ ಅನಭಿವೃದ್ಧ ರಾಷ್ಟ್ರಗಳಿಗೆ ಇದು ಅನೇಕ ಪ್ರಯೋಜನಗಳನ್ನೊದಗಿಸುತ್ತದೆ. ವಿದೇಶಿ ಖಾಸಗಿ ಬಂಡವಾಳದಾರರು ವಿದೇಶದ ಉದ್ಯಮದಲ್ಲಿ ತಾವು ಮಾಡಿದ ಹೂಡಿಕೆಗೆ ಉತ್ತಮ ಪ್ರತಿಫಲ ದೊರೆಯಬೇಕೆಂದು ಬಯಸಿ ಉತ್ಪಾದನ ವ್ಯವಸ್ಥೆಯನ್ನು ದಕ್ಷವಾಗಿ ನಿರ್ವಹಿಸುವುದರಿಂದ ಅನಭಿವೃದ್ಧ ರಾಷ್ಟ್ರಗಳಲ್ಲಿ ಉತ್ಪನ್ನದ ಹೆಚ್ಚಳಕ್ಕೆ ಪ್ರೋತ್ಸಾಹ ನೀಡಿದಂತಾಗುತ್ತದೆ. ಹೊಸ ಕೈಗಾರಿಕೆಗಳ ಸ್ಥಾಪನೆಯ ಫಲವಾಗಿ ಅತಿಥೇಯ ದೇಶಗಳಲ್ಲಿ ಉದ್ಯೋಗಗಳು ಹೆಚ್ಚುತ್ತವೆ ಮತ್ತು ಕಾರ್ಮಿಕರಿಗೆ ವಿಶೇಷ ತಾಂತ್ರಿಕ ತರಬೇತಿಯು ದೊರೆಯುತ್ತದೆ. ವಿದೇಶಿ ಬಂಡವಾಳವು ರಫ್ತು ಕೈಗಾರಿಕೆಗಳ ಸ್ಥಾಪನೆಗೆ ಹೂಡಲ್ಪಟ್ಟರೆ ವಿದೇಶಿ ವಿನಿಮಯ ಗಳಿಕೆ ಹೆಚ್ಚುತ್ತದೆ.

ಈ ಅಮೂಲ್ಯ ಪ್ರಯೋಜನಗಳನ್ನು ಪಡೆಯುವ ಅವಕಾಶಗಳಿದ್ದುದರಿಂದ ಒಂದು ಕಾಲದಲ್ಲಿ ಅನಭಿವೃದ್ಧ ರಾಷ್ಟ್ರಗಳು ಹೂಡಿಕೆಯ ಕೊರತೆಯನ್ನು ತುಂಬಲು ವಿದೇಶಿ ಬಂಡವಾಳವನ್ನು ಅತ್ಯಧಿಕವಾಗಿ ಅವಲಂಬಿಸಿದ್ದವು. ಅನೇಕ ಅನಭಿವೃದ್ಧ ರಾಷ್ಟ್ರಗಳಲ್ಲಿ ಪ್ರಮುಖ ಹಾಗೂ ದೊಡ್ಡ ಪ್ರಮಾಣದ ಕೈಗಾರಿಕೆಗಳು ವಿದೇಶಿ ಬಂಡವಾಳದ ಸಹಾಯದಿಂದ ಸ್ಥಾಪಿಸಲ್ಪಟ್ಟಿರುವುದೇ ಇದಕ್ಕೆ ನಿದರ್ಶನ. ಉದಾಹರಣೆಗೆ, ಮಧ್ಯಪ್ರಾಚ್ಯ ಮತ್ತು ವೆನೆಜೂಲಾದ ತೈಲ ಕೈಗಾರಿಕೆಗಳು, ಮಲೇಷಿಯಾ ಮತ್ತು ಇಂಡೋನೇಷಿಯಾದ ರಬ್ಬರ್ ತೋಟಗಳು, ಭಾರತ ಮತ್ತು ಶ್ರೀಲಂಕಾದ ಚಹಾ ತೋಟಗಳು, ಕ್ಯೂಬಾ ಮತ್ತು ವೆಸ್ಟ್‌ಇಂಡೀಸ್‌ನ ಕಬ್ಬಿನ ತೋಟಗಳು, ಮಧ್ಯ ಅಮೆರಿಕದ ಬಾಳೆತೋಟಗಳು, ಚಿಲಿ ಮತ್ತು ಉತ್ತರ ರೋಡೀಷಿಯಾದ ತಾಮ್ರದ ಗಣಿಗಳು ವಿದೇಶಿ ಬಂಡವಾಳ ಹೂಡಿಕೆ ಯಿಂದಲೇ ಬೆಳೆದು ಅಧಿಕ ಉತ್ಪನ್ನ ಮತ್ತು ಅಭಿವೃದ್ಧಿ ಸಾಧಿಸಿವೆ.

ವಿದೇಶಿ ನೇರ ಹೂಡಿಕೆಯ ಪರ ವಾದಗಳು
(Arguments for Foreign Direct Investment)

ವಿದೇಶಿ ನೇರ ಹೂಡಿಕೆಯು ಆವಶ್ಯಕವಿದೆಯೇ ಇಲ್ಲವೇ ಎಂಬ ಬಗ್ಗೆ ಇನ್ನೂ ಜಿಜ್ಞಾಸೆ ಇದೆ. ಅದರ ಪರವಾಗಿರುವ ವಾದಗಳು ಕೆಳಗಿನಂತಿವೆ.

1. ದಕ್ಷ ನಿಯಂತ್ರಣ ಮತ್ತು ನಿರ್ವಹಣೆ (Efficient Control and Management): ವಿದೇಶಿ ನೇರ ಹೂಡಿಕೆಯಲ್ಲಿ ನಿಯಂತ್ರಣ ಮತ್ತು ನಿರ್ವಹಣೆ ವಿದೇಶಿ ಹೂಡಿಕೆದಾರರ ಬಳಿ ಇರುತ್ತವೆ. ಅವರ ಅಡಳಿತ ಅನುಭವ ಮತ್ತು ಕುಶಲತೆಯು ಬಂಡವಾಳ ಹೂಡಿಕೆಯಾದ ದೇಶದಲ್ಲಿ ಉದ್ಯಮದ ಅಭಿವೃದ್ಧಿಗೆ ಮತ್ತು ದಕ್ಷ ಉತ್ಪಾದನ ವ್ಯವಸ್ಥೆಯ ವಿಕಾಸಕ್ಕೆ ಸಹಾಯ ಮಾಡುತ್ತವೆ.

2. ಮುಂದುವರೆದ ತಂತ್ರಜ್ಞಾನದ ಲಭ್ಯತೆ (Availability of Advanced Know-how): ವಿದೇಶಿ ನೇರ ಹೂಡಿಕೆಯು ಬಂಡವಾಳ ಸಂಪನ್ಮೂಲಗಳನ್ನು ಮಾತ್ರವಲ್ಲದೆ ವೈಜ್ಞಾನಿಕ, ತಾಂತ್ರಿಕ, ನಿರ್ವಹಣಾತ್ಮಕ ಮತ್ತು ಆಡಳಿತಾತ್ಮಕ ಪರಿಣತಿಯನ್ನೂ ತರುತ್ತದೆ. ಉತ್ಪಾದನೆಯಲ್ಲಿ ಮುಂದುವರೆದ ತಂತ್ರಗಳು ಬಳಕೆಯಾಗಲು ಅವಕಾಶ ಲಭಿಸುತ್ತದೆ. ಮುಂದುವರೆದ ಕುಶಲತೆಗಳ ಮತ್ತು ತಂತ್ರಗಳ ಪರಿಣಾಮವಾಗಿ ಬಂಡವಾಳವನ್ನು ಪಡೆಯುವ ದೇಶಗಳಲ್ಲಿ ಶೀಘ್ರಗತಿಯ ಆರ್ಥಿಕಾಭಿವೃದ್ಧಿ ಸಾಧನೆಯಾಗುತ್ತದೆ.

3. ಬಂಡವಾಳದ ನಿರಂತರ ಪ್ರವಹನ (Continuous Flow of Capital) : ವಿದೇಶಿ ಸಾಲಗಳಲ್ಲಿ ಕೆಲವು ಸಾರಿ ಮಾತ್ರ ಬಂಡವಾಳವು ದೊರೆಯಬಹುದು. ಇದಕ್ಕೆ ವಿರುದ್ಧವಾಗಿ, ವಿದೇಶಿ ನೇರ ಹೂಡಿಕೆಯಲ್ಲಿ ನಿರಂತರವಾದ ಬಂಡವಾಳ ಚಲನೆ ಇರುತ್ತದೆ. ವಿದೇಶಿ ಹೂಡಿಕೆದಾರರಿಗೆ ಉದ್ಯಮದ ನಿಯಂತ್ರಣ, ನಿರ್ವಹಣೆ ಮತ್ತು ಲಾಭ ಗಳಿಕೆಯ ಬಗ್ಗೆ ಬದ್ಧತೆ ಇರುವುದರಿಂದ ಅವರು ನಿರಂತರವಾಗಿ ಬಂಡವಾಳವನ್ನು ಹೂಡಿಕೆ ಮಾಡುತ್ತಾರೆ. ಇದರಿಂದಾಗಿ ಅನಭಿವೃದ್ಧ ದೇಶಗಳಲ್ಲಿ ಉದ್ಯಮಗಳ ಸ್ಥಾಪನೆ, ವಿಸ್ತರಣೆ ಮತ್ತು ಆಧುನೀಕರಣ ನಿರಂತರವಾಗಿ ನಡೆಯುತ್ತವೆ.

4. ದೇಶೀಯ ಉದ್ಯಮದ ಬೆಳವಣಿಗೆ (Growth of Indigenous Enterprise): ವಿದೇಶಿ ನೇರ ಹೂಡಿಕೆಯಿಂದ ದೇಶೀಯ ಉದ್ಯಮವು ಬೆಳೆಯುತ್ತದೆ. ವಿದೇಶಿ ಹೂಡಿಕೆದಾರರು ಸಣ್ಣ ಪ್ರಮಾಣದ ಸಹಾಯಕ ಉದ್ಯಮಗಳನ್ನು ಸ್ಥಾಪಿಸಲು ಸ್ಥಳೀಯ ಉದ್ಯಮಿಗಳಿಗೆ ಅವಕಾಶ ನೀಡುತ್ತಾರೆ. ಅಂತಹ ಸಹಾಯಕ ಉದ್ಯಮಗಳಿಂದ ವಿದೇಶಿ ಹೂಡಿಕೆದಾರರು ತಮ್ಮ ಉದ್ಯಮಗಳಿಗೆ ಅವಶ್ಯಕವಿರುವ ಸರಕುಗಳನ್ನು ಖರೀದಿಸುತ್ತಾರೆ.

5. ಉಳಿತಾಯ ಅಂತರ ಮತ್ತು ವಿದೇಶಿ ವಿನಿಮಯ ಅಂತರವನ್ನು ತುಂಬುವಿಕೆ (Filling up of Savings Gap and Foreign Exchange Gap): ಅನಭಿವೃದ್ಧ ದೇಶಗಳಲ್ಲಿ ಕಡಿಮೆ ಉಳಿತಾಯಗಳ ಕಾರಣದಿಂದ ಹೂಡಿಕೆ - ಉಳಿತಾಯದ ಅಂತರವಿದೆ. ಅಂತೆಯೇ ವಿದೇಶಿ ವಿನಿಮಯದ ಕೊರತೆ ಇರುತ್ತದೆ. ಇದರಿಂದಾಗಿ ಅಭಿವೃದ್ಧಿ ಸಾಧನೆಗೆ ಬಂಡವಾಳದ ಲಭ್ಯತೆ ಕಷ್ಟಕರವಾಗಿರುತ್ತದೆ. ವಿದೇಶಿ ನೇರ ಹೂಡಿಕೆಯು ಉಳಿತಾಯ ಅಂತರ ಮತ್ತು ವಿದೇಶಿ ವಿನಿಮಯ ಅಂತರವನ್ನು ತುಂಬುವ ಮೂಲಕ ಅಭಿವೃದ್ಧಿಗೆ ಬಂಡವಾಳವನ್ನು ದೊರಕಿಸಿಕೊಡುತ್ತದೆ.

6. ಲಾಭಗಳ ಮರು ಹೂಡಿಕೆ (Reinvestment of Profits): ವಿದೇಶಿ ಹೂಡಿಕೆದಾರರು ಗಳಿಸಿದ ಲಾಭಗಳಲ್ಲಿ ಸ್ವಲ್ಪ ಭಾಗವನ್ನು ಅತಿಥೇಯ ದೇಶದಲ್ಲಿ ಮರುಹೂಡಿಕೆ ಮಾಡುತ್ತಾರೆ. ಇದರಿಂದಾಗಿ ಆ ದೇಶದಲ್ಲಿ ಹೂಡಿಕೆಯ ದರವು ಹೆಚ್ಚುತ್ತದೆ ಮತ್ತು ಉದ್ಯಮ ವಿಸ್ತರಣೆ ಮತ್ತು ಆಧುನೀಕರಣ ಜರುಗುತ್ತವೆ.

7. ಉದ್ಯೋಗ ಸೃಷ್ಟಿ (Creation of Employment): ಹೊಸ ಉದ್ಯಮಗಳ ಸ್ಥಾಪನೆ ಮತ್ತು ಚಟುವಟಿಕೆಗಳ ವಿಸ್ತರಣೆಯ ಕಾರಣದಿಂದ ಅನಭಿವೃದ್ಧ ದೇಶಗಳಲ್ಲಿ ಉದ್ಯೋಗಗಳು ಸೃಷ್ಟಿಯಾಗುತ್ತವೆ. ಇದು ಆದಾಯದ ಹೆಚ್ಚಳಕ್ಕೆ ಮತ್ತು ಬಡತನ ನಿವಾರಣೆಗೆ ನೆರವಾಗುತ್ತದೆ.

8. ಮಾರುಕಟ್ಟೆಯ ವಿಸ್ತರಣೆ (Expansion of Market): ಕಿರಿದಾದ ಮಾರುಕಟ್ಟೆಯು ಅನಭಿವೃದ್ಧ ದೇಶಗಳ ಒಂದು ದೊಡ್ಡ ಸಮಸ್ಯೆಯಾಗಿದೆ. ವಿದೇಶಿ ಹೂಡಿಕೆದಾರರು ತಮ್ಮ ಉತ್ಪನ್ನಗಳ ಮಾರಾಟಕ್ಕಾಗಿ ವಿವಿಧ ಪ್ರಯತ್ನಗಳನ್ನು ಕೈಗೊಳ್ಳುವುದರಿಂದ ಆ ದೇಶಗಳಲ್ಲಿ ಮಾರುಕಟ್ಟೆಯು ಬೆಳೆಯುತ್ತದೆ. ಮಾರುಕಟ್ಟೆಯ ವಿಸ್ತರಣೆಯು ಸರಕುಗಳಿಗೆ ಬೇಡಿಕೆಯನ್ನು ಹೆಚ್ಚಿಸುವ ಮೂಲಕ ಆರ್ಥಿಕಾಭಿವೃದ್ಧಿಗೆ ಸಹಾಯ ಮಾಡುತ್ತದೆ.

9. ವೇತನಗಳ ಹೆಚ್ಚಳ (Increase in Wages): ವಿದೇಶಿ ನೇರ ಹೂಡಿಕೆಯಿಂದ ಉದ್ಯಮಗಳು ಬೆಳೆಯುವುದರಿಂದ ಹಾಗೂ ಆರ್ಥಿಕ ಚಟುವಟಿಕೆಗಳು ವಿಸ್ತರಿಸುವುದರಿಂದ ಕೆಲಸಗಾರರ ವೇತನಗಳು ಹೆಚ್ಚುತ್ತವೆ. ಇದರಿಂದಾಗಿ ಅವರ ಕೊಳ್ಳುವ ಶಕ್ತಿ ಮತ್ತು ಜೀವನಮಟ್ಟ ಉತ್ತಮಗೊಳ್ಳುತ್ತವೆ.

10. ಹೆಚ್ಚಿನ ತೆರಿಗೆ ವರಮಾನಗಳು (Larger Tax Revenues): ವಿದೇಶಿ ಹೂಡಿಕೆಯಿಂದ ಉತ್ಪಾದನೆಯಾಗುವ ಸರಕುಗಳು, ರಫ್ತುಗಳು ಮತ್ತು ಲಾಭಗಳ ಮೇಲೆ ಸರ್ಕಾರವು ತೆರಿಗೆಗಳನ್ನು ವಿಧಿಸುತ್ತದೆ. ಇದರಿಂದ ಸರ್ಕಾರಕ್ಕೆ ಹೆಚ್ಚಿನ ಮೊತ್ತದ ವರಮಾನವು ದೊರಕುತ್ತದೆ.

11. ಉದ್ಯಮಶೀಲತೆಯ ಬೆಳವಣಿಗೆ (Growth of Entrepreneurship): ವಿದೇಶಿ ಹೂಡಿಕೆದಾರರನ್ನು ನೋಡಿ ಸ್ವದೇಶಿ ಉದ್ಯಮಿಗಳು ಗಂಡಾಂತರವನ್ನು ಎದುರಿಸಿ ಉತ್ಪಾದನೆಯನ್ನು ಮಾಡುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳುತ್ತಾರೆ. ಇದರಿಂದಾಗಿ ಅನಭಿವೃದ್ಧ ದೇಶಗಳಲ್ಲಿ ಉದ್ಯಮಶೀಲತೆಯ ಬೆಳವಣಿಗೆಯಾಗುತ್ತದೆ.

12. ಪಾವತಿ ಶಿಲ್ಕಿನ ಮೇಲೆ ಅನುಕೂಲಕರ ಪರಿಣಾಮ (Beneficial Effect on Balance of Payments): ವಿದೇಶಿ ನೇರ ಹೂಡಿಕೆಯಿಂದ ಉತ್ಪಾದನೆ ಮತ್ತು ರಫ್ತುಗಳು ಹೆಚ್ಚುವುದರಿಂದ ವಿದೇಶಿ ವಿನಿಮಯ ಸಂಪಾದನೆಯಾಗುತ್ತದೆ. ಇದರಿಂದಾಗಿ ಅನಭಿವೃದ್ಧ ದೇಶಗಳ ಪಾವತಿ ಶಿಲ್ಕಿನಲ್ಲಿ ಕೊರತೆಯು ಕಡಿಮೆಯಾಗುತ್ತದೆ.

ವಿದೇಶಿ ನೇರ ಹೂಡಿಕೆಯ ವಿರುದ್ಧ ವಾದಗಳು
(Arguments Against Foreign Direct Investment)

ವಿದೇಶಿ ಬಾಸಗಿ ಬಂಡವಾಳವು ಹಿಂದುಳಿದ ದೇಶಗಳ ಅಭಿವೃದ್ಧಿಯ ದೃಷ್ಟಿಯಿಂದ ಅತ್ಯಮೂಲ್ಯ ಅಂಶವೆಂಬುದು ಸಾಬೀತಾಗಿರುವುದಾದರೂ ಅದರಿಂದ ದುಷ್ಪರಿಣಾಮಗಳಿಲ್ಲದಿಲ್ಲ. ವಿದೇಶಿ ಹೂಡಿಕೆದಾರರು ಅತಿಥೇಯ ದೇಶದ ಆರ್ಥಿಕತೆಯ ಮೇಲೆ ತಮ್ಮ ನಿಯಂತ್ರಣ ಸಾಧಿಸಬಯಸಬಹುದು. ವಿದೇಶಿ ಕಂಪನಿಗಳು ಅನಭಿವೃದ್ಧ ರಾಷ್ಟ್ರಗಳಲ್ಲಿ ಆರ್ಥಿಕ ಮತ್ತು ರಾಜಕೀಯ ಪ್ರಭುತ್ವ ಪ್ರತಿಷ್ಠಾಪಿಸಿದುದಕ್ಕೆ ಸಾಕ್ಷ್ಯಗಳಿವೆ. ಈ ಪರಿಣಾಮವಾಗಿ ಅನೇಕ ಅನಭಿವೃದ್ಧ ರಾಷ್ಟ್ರಗಳು ವಿದೇಶಿ ಖಾಸಗಿ ಬಂಡವಾಳವನ್ನು ಶೋಷಣೆಯ ಒಂದು ಮಾರ್ಗವೆಂದು ಬಗೆದಿವೆ. ಇತ್ತೀಚಿನ ದಶಕಗಳಲ್ಲಿ ಈ ಬಂಡವಾಳದ ಪ್ರಾಮುಖ್ಯತೆ ಕಡಿಮೆಯಾಗಲು ಈ ಭಾವನೆಯೇ ಕಾರಣವೆನ್ನಬಹುದು. ವಿದೇಶಿ ಕಂಪನಿಗಳು ತಾವು ಉತ್ಪಾದಿಸುವ ಸರಕುಗಳಿಗೆ ಅತಿ ಹೆಚ್ಚಿನ ಬೆಲೆ ನಿರ್ಧರಿಸಬಹುದು. ಅಧಿಕ ಲಾಭ

ಗಳಿಕೆಯ ಉದ್ದೇಶದಿಂದ ಅನುಸರಿಸಲ್ಪಡುವ ಈ ಕ್ರಮವು ಅತಿಥೇಯ ದೇಶದಲ್ಲಿ ಅನುಭೋಗ ಮಟ್ಟದ ತೀವ್ರ ಕುಸಿತಕ್ಕೆ ಕಾರಣವಾಗುತ್ತದೆ. ಯಥೇಚ್ಛ ಶ್ರಮ ಪೂರೈಕೆಯಿರುವ ಹಿಂದುಳಿದ ದೇಶಗಳಲ್ಲಿ ವಿದೇಶಿ ಕಂಪನಿಗಳು ಕಡಿಮೆ ವೇತನ ನೀಡಿ ಕಾರ್ಮಿಕರನ್ನು ಶೋಷಿಸಬಹುದು.

1. ಅಧಿಕ ವೆಚ್ಚ (Heavy Cost): ವಿದೇಶಿಯರು ಬಂಡವಾಳ ಹೂಡಿಕೆ ಮಾಡುವಂತೆ ಮನವೊಲಿಸಲು ಅತಿಥೇಯ ದೇಶವು ಹೆಚ್ಚಿನ ವೆಚ್ಚವನ್ನು ಭರಿಸಬೇಕಾಗುತ್ತದೆ. ಅದು ಭೂಮಿ, ನೀರು, ವಿದ್ಯುಚ್ಛಕ್ತಿ, ಸಾಗಾಣಿಕೆ ಮತ್ತು ಸಂಪರ್ಕ ಮುಂತಾದ ಸೌಲಭ್ಯಗಳನ್ನು ಒದಗಿಸಬೇಕಾಗುತ್ತದೆ.

2. ಆರ್ಥಿಕ ಶೋಷಣೆ (Economic Exploitation) : ವಿದೇಶಿ ಹೂಡಿಕೆದಾರರು ಅನಭಿವೃದ್ಧ ದೇಶಗಳಲ್ಲಿ ಮಾನವ ಸಂಪನ್ಮೂಲಗಳ ಮತ್ತು ನೈಸರ್ಗಿಕ ಸಂಪನ್ಮೂಲಗಳ ಶೋಷಣೆಗೆ ಕಾರಣವಾಗುತ್ತದೆ ಎಂದು ಆರೋಪಿಸಲಾಗಿದೆ. ಉತ್ಪಾದಿಸಲಾದ ಸರಕುಗಳನ್ನು ವಿದೇಶಿ ಹೂಡಿಕೆದಾರರು ಕಡಿಮೆ ಬೆಲೆಯಲ್ಲಿ ತಮ್ಮ ದೇಶಕ್ಕೆ ಸಾಗಿಸಬಹುದು. ಅಲ್ಲದೆ ಅವರು ಬಹಳ ಕಡಿಮೆ ಕೂಲಿಯನ್ನು ನೀಡುವ ಮೂಲಕ ಅತಿಥೇಯ ದೇಶದ ಕೆಲಸಗಾರರ ಶೋಷಣೆ ಮಾಡಲು ಅವಕಾಶವಿರುತ್ತದೆ.

3. ಅಸಮಗ್ರ ಅಭಿವೃದ್ಧಿ (Lop-sided Development): ವಿದೇಶಿ ನೇರ ಹೂಡಿಕೆಯು ಅನಭಿವೃದ್ಧ ದೇಶಗಳ ಸಮಗ್ರ ಅಭಿವೃದ್ಧಿಗೆ ನೆರವಾಗುವುದಿಲ್ಲ. ಇದುವರೆಗಿನ ಅನುಭವದಿಂದ ತಿಳಿದುಬಂದಿರುವಂತೆ ವಿದೇಶಿ ನೇರ ಹೂಡಿಕೆಯು ಮುಖ್ಯವಾಗಿ ಬಂಡವಾಳ ಸಾಂದ್ರ ಸರಕುಗಳ ಕೈಗಾರಿಕೆ ಮತ್ತು ಸಾರ್ವಜನಿಕ ಉಪಯುಕ್ತತಾ ಚಟುವಟಿಕೆಗಳಲ್ಲಿ ಮಾತ್ರ ಕೇಂದ್ರೀಕರಣಗೊಂಡಿದೆ. ಅನಭಿವೃದ್ಧ ದೇಶಗಳಲ್ಲಿ ಇತರ ಉದ್ಯಮಗಳು ಅಭಿವೃದ್ಧಿ ಹೊಂದಲು ಸಾಧ್ಯವಾಗುವುದಿಲ್ಲ.

4. ಕೈಗಾರಿಕೆಗಳ ಕೇಂದ್ರೀಕರಣ (Concentration of Industries): ವಿದೇಶಿ ನೇರ ಹೂಡಿಕೆಯಿಂದ ಕೈಗಾರಿಕೆಗಳು ಕೆಲವೇ ಪ್ರದೇಶಗಳಲ್ಲಿ ಮಾತ್ರ ಅಭಿವೃದ್ಧಿಯಾಗುವ ಅಪಾಯವಿರುತ್ತದೆ. ಖನಿಜಗಳು, ಕಚ್ಚಾ ವಸ್ತುಗಳು, ಮಾನವ ಸಂಪನ್ಮೂಲಗಳು ಮುಂತಾದುವು ಹೆಚ್ಚಾಗಿ ದೊರೆಯುವ ಪ್ರದೇಶಗಳಲ್ಲಿ ವಿದೇಶಿ ಹೂಡಿಕೆದಾರರು ಉದ್ಯಮಗಳನ್ನು ಸ್ಥಾಪಿಸುವ ಪ್ರವೃತ್ತಿ ಹೊಂದಿರುತ್ತಾರೆ. ಇದರಿಂದಾಗಿ ದೇಶದ ಇತರ ಪ್ರದೇಶಗಳು ಹಿಂದುಳಿಯುತ್ತವೆ ಮತ್ತು ಪ್ರಾದೇಶಿಕ ಅಸಮತೋಲನವು ಹೆಚ್ಚುತ್ತದೆ.

5. ಏಕಸ್ವಾಮ್ಯಗಳ ಉದ್ಭವ (Emergence of Monopolies) : ವಿದೇಶಿ ಹೂಡಿಕೆದಾರರು ಸ್ಥಾಪಿಸಿದ ಉದ್ಯಮಗಳು ಸ್ಥಳೀಯ ಉದ್ಯಮಗಳನ್ನು ಮೂಲೆಗುಂಪಾಗಿಸುತ್ತವೆ. ಈ ಕಾರಣದಿಂದ ಏಕಸ್ವಾಮ್ಯವು ಬೆಳೆಯುತ್ತದೆ ಮತ್ತು ವಿದೇಶಿ ಹೂಡಿಕೆದಾರರಲ್ಲಿ ಆರ್ಥಿಕ ಶಕ್ತಿಯು ಕೇಂದ್ರೀಕರಣಗೊಳ್ಳುತ್ತದೆ.

6. ಉದ್ಯೋಗದಲ್ಲಿ ಕಡಿಮೆ ಹೆಚ್ಚಳ (Little Increase in Employment): ತಮ್ಮ ದೇಶದಲ್ಲಿ ಉದ್ಯೋಗಾವಕಾಶಗಳು ಹೆಚ್ಚುತ್ತವೆ ಎಂಬ ಆಸೆಯಿಂದ ಅನಭಿವೃದ್ಧ ದೇಶಗಳು ವಿದೇಶಿ ನೇರ ಹೂಡಿಕೆಯನ್ನು ಆಕರ್ಷಿಸುತ್ತವೆ. ಆದರೆ ವಿದೇಶಿ ಹೂಡಿಕೆದಾರರು ಶ್ರಮವನ್ನು

ಉಳಿಸುವಂತಹ ಮತ್ತು ಬಂಡವಾಳವನ್ನು ಅಧಿಕವಾಗಿ ಕೋರುವಂತಹ ಉತ್ಪಾದನ ವಿಧಾನವನ್ನು ಆಳವಡಿಸಬಹುದು. ಆಲ್ಲದೆ ಅವರು ತಮ್ಮ ದೇಶದಿಂದಲೇ ಕೆಲಸಗಾರರನ್ನು ತಂದು ಉತ್ಪಾದನೆಯನ್ನು ಮಾಡುವ ಸಂಭವವೂ ಇರುತ್ತದೆ. ಆದ್ದರಿಂದ ಅನಭಿವೃದ್ಧ ದೇಶಗಳಲ್ಲಿ ಉದ್ಯೋಗಾವಕಾಶಗಳು ಹೆಚ್ಚಲಾರವು.

7. ತಂತ್ರಜ್ಞಾನ ವರ್ಗಾವಣೆ ಅಸಂಭವ (No Transfer of Technology): ವಿದೇಶಿ ಹೂಡಿಕೆಯು ಅತ್ಯಂತ ಇತ್ತೀಚಿನ ಉತ್ಪಾದನ ತಂತ್ರವನ್ನು ಮತ್ತು ತಂತ್ರಜ್ಞಾನವನ್ನು ಅತಿಥೇಯ ದೇಶಗಳಿಗೆ ವರ್ಗಾಯಿಸುತ್ತದೆ ಎಂದು ಅಲ್ಪಾಭಿವೃದ್ಧ ದೇಶಗಳು ನಿರೀಕ್ಷಿಸುತ್ತವೆ. ಆದರೆ ವಿದೇಶಿ ಹೂಡಿಕೆದಾರರು ಬಳಸುವ ಉತ್ಪಾದನ ವಿಧಾನ ಮತ್ತು ತಂತ್ರಜ್ಞಾನ ರಹಸ್ಯವಾಗಿಯೇ ಉಳಿದಿರುತ್ತದೆ. ಬಹುತೇಕ ವೇಳೆ ಅವರು ಬಳಕೆ ತಪ್ಪಿದ ಮತ್ತು ಬಹಳ ಹಳೆಯದಾದ ಯಂತ್ರಗಳನ್ನು ಮತ್ತು ಸಾಮಗ್ರಿಗಳನ್ನೇ ಉಪಯೋಗಿಸುತ್ತಾರೆ.

8. ಸ್ವದೇಶೀ ಬಂಡವಾಳ ಮತ್ತು ಉದ್ಯಮಶೀಲತೆಗೆ ಪ್ರೋತ್ಸಾಹವಿಲ್ಲದಿರುವಿಕೆ (Discouragement to Domestic Capital and Enterprise): ವಿದೇಶಿ ನೇರ ಹೂಡಿಕೆಯು ಸ್ವದೇಶೀ ಬಂಡವಾಳ ಮತ್ತು ಉದ್ಯಮಶೀಲತೆಯ ಉತ್ಸಾಹವನ್ನು ಕುಂದಿಸುತ್ತದೆ. ಬಹಳ ಲಾಭದಾಯಕವಾದ ಹೂಡಿಕೆಯ ಅವಕಾಶಗಳನ್ನು ವಿದೇಶಿ ಹೂಡಿಕೆದಾರರೇ ಬಾಚಿಕೊಳ್ಳುತ್ತಾರೆ. ಸ್ವದೇಶಿ ಉದ್ದಿಮೆದಾರರು ಅವಕಾಶ ವಂಚಿತರಾಗುತ್ತಾರೆ.

9. ಅನಿಶ್ಚಿತ (Uncertain) : ವಿದೇಶಿ ಹೂಡಿಕೆದಾರರು ಪ್ರಮುಖವಾಗಿ ಲಾಭದ ಆಸೆಯಿಂದ ಹೂಡಿಕೆಯನ್ನು ಕೈಗೊಳ್ಳುವುದರಿಂದ ಆ ಹೂಡಿಕೆಯು ಅನಿಶ್ಚಿತವಾಗಿರುತ್ತದೆ. ಉದ್ಯಮವು ಹೆಚ್ಚು ಪ್ರತಿಫಲದಾಯಕವಾಗಿಲ್ಲ ಎಂದು ಕಂಡುಬಂದಾಗ ವಿದೇಶಿ ಹೂಡಿಕೆದಾರರು ಹೂಡಿಕೆಯನ್ನೇ ಕೈಗೊಳ್ಳುವುದಿಲ್ಲ. ಸಾಮಾನ್ಯವಾಗಿ ಉದ್ಯಮ ವಿಸ್ತರಣೆಯ ಸಮಯದಲ್ಲಿ ವಿದೇಶಿ ಹೂಡಿಕೆಯು ಹೆಚ್ಚಾಗಿರುತ್ತದೆ. ಆದರೆ ಆರ್ಥಿಕ ಹಿಂಜರಿತ ಮತ್ತು ಮುಗ್ಗಟ್ಟಿನ ಸಮಯಗಳಲ್ಲಿ ವಿದೇಶಿ ಹೂಡಿಕೆಯು ಜರುಗುವುದಿಲ್ಲ. ಆದ್ದರಿಂದ ಅರ್ಥವ್ಯವಸ್ಥೆಯ ದೀರ್ಘಾವಧಿಯ ಅಭಿವೃದ್ಧಿಗೆ ವಿದೇಶಿ ನೇರ ಹೂಡಿಕೆಯು ನಂಲಬರ್ಹ ಮೂಲವಾಗಿರುವುದಿಲ್ಲ.

10. ರಾಜಕೀಯ ಪ್ರಾಬಲ್ಯ ಸ್ಥಾಪನೆ (Political Domination): ವಿದೇಶಿ ಹೂಡಿಕೆದಾರರು ಅಲ್ಪಾಭಿವೃದ್ಧ ದೇಶಗಳಲ್ಲಿ ಕೆಲವು ಪ್ರಮುಖ ವಲಯಗಳಲ್ಲಿ ತಮ್ಮ ನಿಯಂತ್ರಣವನ್ನು ಸಾಧಿಸಬಹುದು ಮತ್ತು ಆ ದೇಶಗಳ ರಾಜಕೀಯ ಹಾಗೂ ಆರ್ಥಿಕ ನೀತಿ ನಿರ್ಣಯಗಳಲ್ಲಿ ಹಸ್ತಕ್ಷೇಪ ನಡೆಸಬಹುದು. ಇದು ಅಲ್ಪಾಭಿವೃದ್ಧ ದೇಶಗಳ ಹಿತಾಸಕ್ತಿಗಳಿಗೆ ಮಾರಕವಾಗುತ್ತದೆ.

ಅಧ್ಯಾಯ - IV

ಅಂತರರಾಷ್ಟ್ರೀಯ ಹಣಕಾಸು ಮತ್ತು ವ್ಯಾಪಾರ ಸಂಸ್ಥೆಗಳು

(International Finance and Trade Institutions)

ಚರ್ಚಿಸಲಾಗಿರುವ ವಿಷಯಗಳು

A. ಅಂತರರಾಷ್ಟ್ರೀಯ ಹಣ ನಿಧಿ
B. ವಿಶ್ವ ಬ್ಯಾಂಕ್ ಅಥವಾ ಪುನನಿರ್ಮಾಣ ಮತ್ತು ಅಭಿವೃದ್ಧಿಯ ಅಂತರರಾಷ್ಟ್ರೀಯ ಬ್ಯಾಂಕ್
C. ಅಂತರರಾಷ್ಟ್ರೀಯ ಅಭಿವೃದ್ಧಿ ಸಂಘ (ಕೂಟ)
D. ಅಂತರರಾಷ್ಟ್ರೀಯ ಹಣಕಾಸು ನಿಗಮ
E. ಸುಂಕಗಳ ಮತ್ತು ವ್ಯಾಪಾರದ ಮೇಲಿನ ಸಾಮಾನ್ಯ ಒಪ್ಪಂದ
F. ವಿಶ್ವ ವ್ಯಾಪಾರ ಸಂಘಟನೆ
G. ವಿಶ್ವವ್ಯಾಪಾರ ಸಂಘಟನೆ ಮತ್ತು ಅಭಿವೃದ್ಧಿಶೀಲ ದೇಶಗಳು

ಪೀಠಿಕೆ

ಅಂತರರಾಷ್ಟ್ರೀಯ ವ್ಯಾಪ್ತಿಯನ್ನು ಹೊಂದಿದ್ದು ವಿಶ್ವದಾದ್ಯಂತ ಸದಸ್ಯ ರಾಷ್ಟ್ರಗಳಿಗೆ ವಿವಿಧ ರೀತಿಗಳ ಹಣಕಾಸಿನ ನೆರವು ಒದಗಿಸುತ್ತಿರುವ ಹಲವು ಹಣಕಾಸಿನ ಸಂಸ್ಥೆಗಳು ಅಸ್ತಿತ್ವದಲ್ಲಿವೆ. ಅನಭಿವೃದ್ಧ ದೇಶಗಳ ಆರ್ಥಿಕಾಭಿವೃದ್ಧಿ, ಸುಗಮವಾದ ಅಂತರರಾಷ್ಟ್ರೀಯ ವ್ಯಾಪಾರ ಮತ್ತು ಶ್ರೀಮಂತ ದೇಶಗಳಿಂದ ಬಡದೇಶಗಳಿಗೆ ಸಂಪನ್ಮೂಲಗಳ ವರ್ಗಾವಣೆಯಲ್ಲಿ ಈ ಸಂಸ್ಥೆಗಳು ವಿಶಿಷ್ಟವಾದ ಪಾತ್ರವನ್ನು ವಹಿಸುತ್ತಾ ಬಂದಿವೆ. ಆದ್ದರಿಂದ ಇವುಗಳನ್ನು ಕುರಿತು ಅಧ್ಯಯನ ಮಾಡುವುದು ಸಮಂಜಸವೂ, ಅತ್ಯಗತ್ಯವೂ ಆಗಿದೆ.

1929-32ರ ಮಹಾ ಆರ್ಥಿಕ ಮುಗ್ಗಟ್ಟಿನಿಂದ ಪ್ರಪಂಚದ ಆರ್ಥಿಕ ಪರಿಸ್ಥಿತಿ ಅಲ್ಲೋಲ ಕಲ್ಲೋಲವಾಯಿತು. ಎಲ್ಲಾ ದೇಶಗಳಲ್ಲಿ ಉದ್ಯೋಗಾವಕಾಶಗಳು, ಉತ್ಪಾದನೆ, ಬೆಲೆಗಳು, ಬಂಡವಾಳ ಹೂಡಿಕೆ, ಲಾಭಗಳು ಮತ್ತು ಆದಾಯ ಕುಸಿಯತೊಡಗಿದವು. ಇಂತಹ ಸಂದರ್ಭದಲ್ಲಿ ಪ್ರತಿಯೊಂದು ದೇಶವೂ ತನ್ನ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳಲು

ಮುಂದಾಯಿತು. ಪರರಾಷ್ಟ್ರಗಳಿಂದ ಆಮದುಗಳನ್ನು ನಿರ್ಬಂಧಿಸಲು ವಿನಿಮಯ ನಿಯಂತ್ರಣ, ಸ್ಪರ್ಧಾತ್ಮಕ ವಾಗಿ ಮತ್ತು ಪ್ರತೀಕಾರಕವಾಗಿ ನಾಣ್ಯಗಳ ಮೌಲ್ಯವನ್ನು ಏರಿಸುವುದು ಅಥವಾ ಇಳಿಸುವುದು ಮುಂತಾದ ಚಟುವಟಿಕೆಗಳಲ್ಲಿ ಎಲ್ಲಾ ದೇಶಗಳು ತೊಡಗಿದ್ದವು. ಪರರಾಷ್ಟ್ರಗಳಿಗೆ ತೊಂದರೆಯಾದರೂ ತನ್ನ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಬೇಕೆಂಬುದು ಈ ಎಲ್ಲಾ ಕ್ರಮಗಳ ಹಿಂದಿನ ಧ್ಯೇಯವಾಗಿದ್ದಿತು.

ಇದೇ ಸಮಯದಲ್ಲಿ ಎಲ್ಲಾ ದೇಶಗಳು ಸುವರ್ಣ ಪ್ರಮಿತಿಯನ್ನು ತೊರೆದವು. ಇದರಿಂದ ವಿನಿಮಯ ದರದಲ್ಲಿ ತೀವ್ರ ಏರಿಳಿತಗಳಾಗಲು ಪ್ರಾರಂಭವಾದವು. ವಿನಿಮಯ ದರದ ಏರಿಳಿತ, ವಿನಿಮಯ ನಿಯಂತ್ರಣ ಮತ್ತು ಆಮದು ನಿಯಂತ್ರಣ ಇತ್ಯಾದಿ ಹಲವಾರು ಕ್ರಮಗಳಿಂದಾಗಿ ಅಂತರರಾಷ್ಟ್ರೀಯ ವ್ಯಾಪಾರ ಮತ್ತು ಬಂಡವಾಳ ಹೂಡಿಕೆಯ ಮೇಲೆ ತೀವ್ರ ದುಷ್ಪರಿಣಾಮಗಳಾದವು. 1939ರಲ್ಲಿ ಪ್ರಾರಂಭವಾದ ಎರಡನೆಯ ಮಹಾಯುದ್ಧವು ಈ ಅರಾಜಕತೆಯನ್ನು ಮತ್ತಷ್ಟು ಉಲ್ಬಣಗೊಳಿಸಿತು. ಈ ಅರಾಜಕತೆಯನ್ನು ಹೋಗಲಾಡಿಸಿ, ಭದ್ರವಾದ ಜಾಗತಿಕ ಆರ್ಥಿಕ ವ್ಯವಸ್ಥೆಯನ್ನು ರೂಪಿಸಲು ವಿವಿಧ ರಾಷ್ಟ್ರಗಳ ನಡುವೆ ಪರಸ್ಪರ ಸಹಕಾರ, ಸಹಬಾಳ್ವೆ ಮತ್ತು ಸಮನ್ವಯ ಅತ್ಯಗತ್ಯವೆಂಬುದನ್ನು ಮನಗಾಣಲಾಯಿತು. ಎರಡನೆಯ ಮಹಾಯುದ್ಧವು ಕೊನೆಗಾಣುವುದಕ್ಕೆ ಮೊದಲೇ ಹಲವು ದೇಶಗಳು ಈ ದಿಸೆಯಲ್ಲಿ ಪರಸ್ಪರ ಒಪ್ಪಂದಕ್ಕೆ ಪ್ರಾರಂಭಿಸಿದವು.

ಜುಲೈ 1944ರಲ್ಲಿ ಅಮೆರಿಕದ ಬ್ರೆಟ್ಟನ್ ವುಡ್ಸ್ ಎಂಬಲ್ಲಿ ಜಗತ್ತಿನ 44 ದೇಶಗಳು ಒಟ್ಟಿಗೆ ಕಲೆತು, ಸಮ್ಮೇಳನವನ್ನು ನಡೆಸಿ, ಆರ್ಥಿಕ ಅರಾಜಕತೆಯ ನಿವಾರಣೆಗೆ ನೆರವಾಗಲು ಕೆಲವು ಅಂತರರಾಷ್ಟ್ರೀಯ ವ್ಯಾಪ್ತಿಯ ಹಣಕಾಸಿನ ಸಂಸ್ಥೆಗಳನ್ನು ಸ್ಥಾಪಿಸಬೇಕೆಂಬ ಒಪ್ಪಂದಕ್ಕೆ ಬಂದವು. ಆ ಒಪ್ಪಂದದಂತೆ ಅಲ್ಪಾವಧಿಯ ಬಂಡವಾಳ ಮತ್ತು ವಿನಿಮಯ ಸ್ಥಿಮಿತತೆಯನ್ನು ಒದಗಿಸಲು ಅಂತರರಾಷ್ಟ್ರೀಯ ಹಣ ನಿಧಿಯನ್ನು ಹಾಗೂ ದೀರ್ಘಾವಧಿಯ ಬಂಡವಾಳವನ್ನು ಮತ್ತು ಯುದ್ಧದಿಂದ ಅಸ್ತವ್ಯಸ್ತವಾದ ಆರ್ಥಿಕತೆಗಳ ಪುನರ್‌ನಿರ್ಮಾಣಕ್ಕೆ ನೆರವು ನೀಡಲು ಅಂತರರಾಷ್ಟ್ರೀಯ ಬ್ಯಾಂಕನ್ನು ಸ್ಥಾಪಿಸಲಾಯಿತು. ಇವೆರಡೂ ಸಹೋದರ ಸಂಸ್ಥೆಗಳಾಗಿ ಅಸ್ತಿತ್ವಕ್ಕೆ ಬಂದವು.

A. ಅಂತರರಾಷ್ಟ್ರೀಯ ಹಣ ನಿಧಿ
(International Monetary Fund - IMF)

ಜುಲೈ 1944ರ ಬ್ರೆಟ್ಟನ್ ಸಮಾವೇಶದ (ಸಮ್ಮೇಳನದ) ನಿರ್ಣಯದ ಫಲವಾಗಿ ಡಿಸೆಂಬರ್ 1945ರಲ್ಲಿ ಅಂತರರಾಷ್ಟ್ರೀಯ ಹಣ ನಿಧಿಯು ಅಸ್ತಿತ್ವಕ್ಕೆ ಬಂದಿತು. ಆದರೆ ನಿಧಿಯು ಮಾರ್ಚ್ 1947ರಲ್ಲಿ ತನ್ನ ವಿನಿಮಯ ಕಾರ್ಯಕಲಾಪಗಳನ್ನು ಪ್ರಾರಂಭಿಸಿತು. ಇದರ ಕೇಂದ್ರ ಕಛೇರಿಯು ವಾಷಿಂಗ್ಟನ್ನಿನಲ್ಲಿದೆ. ಪ್ರಾರಂಭದಲ್ಲಿ ನಿಧಿಯು 44 ಸದಸ್ಯ

ರಾಷ್ಟ್ರಗಳನ್ನು ಹೊಂದಿದ್ದಿತು. 1948 ಏಪ್ರಿಲ್ 30ರಂದು ಇದರ ಸದಸ್ಯತ್ವ ರಾಷ್ಟ್ರಗಳ ಸಂಖ್ಯೆ 138ಕ್ಕೆ, 1981 ಸೆಪ್ಟೆಂಬರ್ 30 ರಂದು 141ಕ್ಕೆ, 1996ರಲ್ಲಿ 181 ಕ್ಕೆ ಮತ್ತು 2008 ರಲ್ಲಿ 185 ಕ್ಕೆ ಏರಿದೆ.

ಧ್ಯೇಯೋದ್ದೇಶಗಳು
(Objectives)

ಅಂತರರಾಷ್ಟ್ರೀಯ ಹಣ ನಿಧಿಯು ಈ ಕೆಳಕಂಡ ಧ್ಯೇಯೋದ್ದೇಶಗಳನ್ನಿರಿಸಿಕೊಂಡು ಅಸ್ತಿತ್ವಕ್ಕೆ ಬಂದಿತು.

1. **ಅಂತರರಾಷ್ಟ್ರೀಯ ಹಣಕಾಸಿನ ಸಹಕಾರವನ್ನು ಹೆಚ್ಚಿಸುವುದು** (Increasing International Financial Co-operation): ಅಂತರರಾಷ್ಟ್ರೀಯ ಹಣಕಾಸಿನ ಸಮಸ್ಯೆಗಳ ಬಗ್ಗೆ ಪರಸ್ಪರ ವಿಚಾರ ವಿನಿಮಯ, ಸಹಕಾರ, ಸೌಹಾರ್ದತೆ ಮತ್ತು ಸಹಬಾಳ್ವೆಗೆ ಒಂದು ಶಾಶ್ವತ ಸಂಸ್ಥೆಯನ್ನು ಹೊಂದಿ, ಅದರ ಮೂಲಕ ಅಂತರರಾಷ್ಟ್ರೀಯ ಹಣಕಾಸಿನ ಸಹಕಾರವನ್ನು ಹೆಚ್ಚಿಸುವುದು.
2. **ಅಂತರ ರಾಷ್ಟ್ರೀಯ ವ್ಯಾಪಾರದ ವಿಸ್ತರಣೆ** (Expansion of International Trade): ಅಂತರರಾಷ್ಟ್ರೀಯ ವ್ಯಾಪಾರದ ವಿಸ್ತರಣೆ ಮತ್ತು ಸಮತೋಲನದ ಪ್ರಗತಿಗೆ ಸೂಕ್ತ ವಾತಾವರಣವನ್ನು ನಿರ್ಮಿಸುವ ಮೂಲಕ ಸದಸ್ಯ ರಾಷ್ಟ್ರಗಳಲ್ಲಿ ಉದ್ಯೋಗದ ಮಟ್ಟ ಮತ್ತು ನೈಜ ಆದಾಯವನ್ನು ಹೆಚ್ಚಿಸುವುದು.
3. **ವಿನಿಮಯ ದರದ ಸ್ಥಿರತೆಯನ್ನು ಕಾಪಾಡಲು ನೆರವು ನೀಡುವುದು** (Providing Assistance to Maintain Exchange Rate Stability): ವಿನಿಮಯ ದರದ ಸ್ಥಿರತೆಯನ್ನು ಕಾಪಾಡಲು ನೆರವಾಗುವುದು ಮತ್ತು ಪೈಪೋಟಿಯುತ ವಿನಿಮಯ ದರದ ಅಪಮೌಲ್ಯವನ್ನು ತಪ್ಪಿಸುವುದು.
4. **ನಾಣ್ಯಗಳ ಬಹುಪಾರ್ಶ್ವ ಪರಿವರ್ತನೆ** (Multiple Convertibility of Currencies): ನಾಣ್ಯಗಳ ಬಹುಪಾರ್ಶ್ವ ಪರಿವರ್ತನೆಗೆ ಮತ್ತು ಎಲ್ಲಾ ವಿಧಗಳ ವಿನಿಮಯ ನಿಯಂತ್ರಣ ಹಾಗೂ ನಿರ್ಬಂಧಗಳ ನಿರ್ಮೂಲನಕ್ಕೆ ಸಹಾಯ ಮಾಡುವುದು.
5. **ಸದಸ್ಯ ರಾಷ್ಟ್ರಗಳ ಸಂದಾಯ ಶಿಲ್ಕಿನ ಕೊರತೆಯನ್ನು ಹೋಗಲಾಡಿಸುವುದು** (Removing Balance of Payments Deficit of Member Countries): ಸದಸ್ಯ ರಾಷ್ಟ್ರಗಳ ಸಂದಾಯ ಶಿಲ್ಕಿನ ಕೊರತೆಯನ್ನು ಹೋಗಲಾಡಿಸಲು ಅವುಗಳಿಗೆ ಸಂಪನ್ಮೂಲಗಳನ್ನು ಒದಗಿಸುವುದು ಮತ್ತು ಆ ಮೂಲಕ ಅವು ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ಪ್ರಗತಿಗೆ ಮಾರಕವಾದ ಕ್ರಮಗಳನ್ನು ಅನುಸರಿಸದಂತೆ ತಡೆಗಟ್ಟುವುದು.

6. ಸದಸ್ಯ ರಾಷ್ಟ್ರಗಳ ಸಂದಾಯ ಶಿಲ್ಕಿನ ಅಸಮತೋಲನದ ಅವಧಿ ಮತ್ತು ಪ್ರಮಾಣವನ್ನು ಕಡಿಮೆ ಮಾಡುವುದು (To Reduce the Period and Degree of Disequlibrium in the Balance the Payments of Member Countries): ಮೇಲಿನ ಧ್ಯೇಯೋದ್ದೇಶಗಳ ಸಾಧನೆಗಾಗಿ ಸದಸ್ಯ ರಾಷ್ಟ್ರಗಳ ಸಂದಾಯ ಶಿಲ್ಕಿನ ಅಸಮತೋಲನದ ಅವಧಿ ಮತ್ತು ಪ್ರಮಾಣವನ್ನು ಕಡಿಮೆ ಮಾಡುವುದು. ಈ ಧ್ಯೇಯ ಸಾಧನೆಯಲ್ಲಿ ಸದಸ್ಯ ದೇಶಗಳಿಗೆ ಹೆಚ್ಚು ಉತ್ಪಾದಕವಾದ ಮತ್ತು ಅಭಿವೃದ್ಧಿಗೆ ಪೂರಕವಾದ ಸಾಲಗಳನ್ನು ಒದಗಿಸುವುದು ಅವಶ್ಯಕವಾಗಿರುತ್ತದೆ.

ಅಂತರರಾಷ್ಟ್ರೀಯ ಹಣನಿಧಿಯ ಕಾರ್ಯಗಳು
(Functions of IMF)

ತನ್ನ ಧ್ಯೇಯೋದ್ದೇಶಗಳನ್ನು ಈಡೇರಿಸುವ ನಿಟ್ಟಿನಲ್ಲಿ ಅಂತರರಾಷ್ಟ್ರೀಯ ಹಣ ನಿಧಿಯು ಕಾರ್ಯ ನಿರ್ವಹಿಸುತ್ತದೆ.

1. ಸದಸ್ಯ ದೇಶಗಳು ಕರಾರಿನ ಅಂಶಗಳನ್ನು ಪಾಲಿಸುವಂತೆ ಮಾಡುವುದು (Making the Member Countries Follow the Provisions of Agreement): ಸದಸ್ಯ ದೇಶಗಳು ಒಪ್ಪಿಕೊಂಡಿರುವ ಕರಾರಿನ ಅಂಗಳನ್ನು ಪಾಲಿಸುವಂತೆ ನೋಡಿಕೊಳ್ಳುವುದು ನಿಧಿಯ ಪ್ರಮುಖ ಕಾರ್ಯವಾಗಿರುತ್ತದೆ. ವಿನಿಮಯ ದರಗಳಿಗೆ ಸಂಬಂಧಿಸಿದ ಕೆಲವು ಅಂಶಗಳು ಬದಲಾಗುತ್ತಿರುವ ಅಂತರರಾಷ್ಟ್ರೀಯ ಹಣಸಂಬಂಧಿ ಘಟನೆಗಳ ಕಾರಣದಿಂದ ಬಹಳ ಹಳೆಯವಾಗಿದ್ದು, ಪ್ರಸ್ತುತ ವಿದ್ಯಮಾನಗಳಿಗೆ ಹೊಂದಾಣಿಕೆಯಾಗುವಂತೆ ನಿಧಿಯು ಆ ಅಂಶಗಳನ್ನು ತಿದ್ದುಪಡಿಮಾಡಿಕೊಂಡಿರುತ್ತದೆ.

2. ಅಲ್ಪಾವಧಿ ಸಾಲಗಳು (Short-term Loans): ಸದಸ್ಯ ರಾಷ್ಟ್ರಗಳ ಪಾವತಿ ಶಿಲ್ಕಿನ ತಾತ್ಕಾಲಿಕ ಅಸಮತೋಲನವನ್ನು ಸರಿಪಡಿಸಲು ನಿಧಿಯು ಅವುಗಳಿಗೆ ಅಲ್ಪಾವಧಿ ಸಾಲಗಳನ್ನು ಒದಗಿಸುತ್ತದೆ.

3. ವ್ಯಾಪಾರ ನಿರ್ಬಂಧಗಳನ್ನು ಕಡಿಮೆ ಮಾಡುವಿಕೆ (Reducing Trade Restrictions): ಸದಸ್ಯ ರಾಷ್ಟ್ರಗಳು ಸುಂಕಗಳನ್ನು ಮತ್ತಿತರ ವ್ಯಾಪಾರ ನಿರ್ಬಂಧಗಳನ್ನು ಕಡಿಮೆ ಮಾಡುವಂತೆ ನಿಧಿಯು ತಿಳಿಸುತ್ತದೆ. ಕರಾರಿನ ಅಂಶಗಳ ಪ್ರಕಾರ ಯಾವುದೇ ಸದಸ್ಯ ರಾಷ್ಟ್ರವು ನಿಧಿಯ ಅನುಮೋದನೆ ಇಲ್ಲದೆ ನಿರ್ಬಂಧಗಳನ್ನು ವಿಧಿಸುವಂತಿರುವುದಿಲ್ಲ ಮತ್ತು ಭೇದವೆಣಿಸುವಂತಹ ನಾಣ್ಯ ವಿನಿಮಯ ವ್ಯವಹಾರಗಳಲ್ಲಿ ತೊಡಗುವಂತಿರುವುದಿಲ್ಲ. ಸದಸ್ಯ ರಾಷ್ಟ್ರಗಳು ಅನುಸರಿಸುವ ಕಾರ್ಯನೀತಿಗಳ ಮೇಲೆ ನಿಧಿಯು ಕಣ್ಗಾವಲನ್ನು ಇಡುತ್ತದೆ.

4. ತಾಂತ್ರಿಕ ಸಲಹೆ (Technical Advice): ಹಣಸಂಬಂಧಿ ನೀತಿ ಹಾಗೂ ಕೋಶೀಯ ನೀತಿಯ ಬಗೆಗೆ ನಿಧಿಯು ಸದಸ್ಯ ರಾಷ್ಟ್ರಗಳಿಗೆ ತಾಂತ್ರಿಕ ಸಲಹೆಯನ್ನು ಒದಗಿಸುತ್ತದೆ.

5. ಸಂಶೋಧನಾ ಅಧ್ಯಯನಗಳು (Research Studies): ನಿಧಿಯು ಸಂಶೋಧನಾ ಅಧ್ಯಯನಗಳನ್ನು ನಡೆಸಿ ಅವುಗಳನ್ನು ಪ್ರಕಟಪಡಿಸುತ್ತದೆ.

6. ತಾಂತ್ರಿಕ ತಜ್ಞರ ನೆರವು (Assistance of Technical Experts): ಪಾವತಿ ಶಿಲ್ಕಿನ ಮತ್ತು ಇತರ ಸಮಸ್ಯೆಗಳನ್ನು ಎದುರಿಸುತ್ತಿರುವ ಸದಸ್ಯ ದೇಶಗಳಿಗೆ ನಿಧಿಯು ತಾಂತ್ರಿಕ ತಜ್ಞರ ನೆರವನ್ನು ಒದಗಿಸುವ ಮೂಲಕ ಆ ಸಮಸ್ಯೆಗಳ ನಿವಾರಣೆಗೆ ಪ್ರಯತ್ನಿಸುತ್ತದೆ.

7. ತರಬೇತಿ ಕಾರ್ಯಕ್ರಮಗಳು (Training Programmes): ನಿಧಿಯು ಕೋಶೀಯ, ಹಣಸಂಬಂಧಿ ಮತ್ತು ಪಾವತಿ ಶಿಲ್ಕಿನ ವಿಷಯಗಳನ್ನು ಕುರಿತಂತೆ ಸದಸ್ಯ ರಾಷ್ಟ್ರಗಳ ಸಿಬ್ಬಂದಿಗೆ ತನ್ನ ವಿಭಾಗಗಳ ಮೂಲಕ ತರಬೇತಿಯನ್ನು ಒದಗಿಸುತ್ತದೆ. ನಿಧಿಯ ಕೇಂದ್ರೀಯ ಬ್ಯಾಂಕೋದ್ಯಮ ಸೇವಾ ಇಲಾಖೆ, ಕೋಶೀಯ ವ್ಯವಹಾರಗಳ ಇಲಾಖೆ ಮತ್ತು ಅಂಕಿಸಂಖ್ಯೆಗಳ ಸಂಸ್ಥೆ (Bureau of Statistics) ಈ ತರಬೇತಿಯನ್ನು ನೀಡುತ್ತವೆ.

ರಚನೆ
(Structure)

ನಿಧಿಯ ಆಡಳಿತವನ್ನು ನಿರ್ವಹಿಸಲು ಎರಡು ಮಂಡಳಿಗಳಿವೆ. ಅವುಗಳೆಂದರೆ :

(i) ಕಾರ್ಯ ಪಾಲರ ಮಂಡಳಿ (Board of Governors), ಮತ್ತು

(ii) ಕಾರ್ಯನಿರ್ವಾಹಕ ನಿರ್ದೇಶಕರ ಮಂಡಳಿ (Board of Executive Directors).

ಕಾರ್ಯಪಾಲರ ಮಂಡಳಿಯು ಹಿರಿದಾದ ಸಂಸ್ಥೆಯಾಗಿದ್ದು ಅದರ ನಿರ್ದೇಶನ ಮತ್ತು ನಿಯಂತ್ರಣದಲ್ಲಿ ನಿಧಿಯು ಕೆಲಸ ಮಾಡುತ್ತದೆ. ಈ ಮಂಡಳಿಯಲ್ಲಿ ಪ್ರತಿಯೊಂದು ಸದಸ್ಯ ರಾಷ್ಟ್ರದಿಂದ ನೇಮಕವಾದ ಒಬ್ಬೊಬ್ಬ ಕಾರ್ಯಪಾಲರಿರುತ್ತಾರೆ. ಈ ಮಂಡಳಿಯು ವರ್ಷಕ್ಕೊಮ್ಮೆ ಸಭೆ ಸೇರುತ್ತದೆ.

ಕಾರ್ಯಪಾಲರ ಮಂಡಳಿಯು ತನ್ನ ಅನೇಕ ಕಾರ್ಯಗಳನ್ನು ಕಾರ್ಯನಿರ್ವಾಹಕ ನಿರ್ದೇಶಕರ ಮಂಡಳಿಗೆ ನಿಯೋಜಿಸಿದೆ. ಆದ್ದರಿಂದ ನಿಧಿಯ ದಿನನಿತ್ಯದ ಕಾರ್ಯಕಲಾಪಗಳ ಜವಾಬ್ದಾರಿಯು ಈ ಮಂಡಳಿಗೆ ಸೇರಿದೆ. ಇದರಲ್ಲಿ ಒಟ್ಟು 24 ಮಂದಿ ನಿರ್ದೇಶಕರಿರುತ್ತಾರೆ. ಇದರಲ್ಲಿ 5 ಜನ ನಿರ್ದೇಶಕರು ಶಾಶ್ವತ ಸದಸ್ಯರಾಗಿದ್ದಾರೆ. ಅವರು ಅತೀ ಹೆಚ್ಚು ವಂತಿಗೆಯನ್ನು (Quota) ಹೊಂದಿರುವ ಆರು ರಾಷ್ಟ್ರಗಳ ಪ್ರತಿನಿಧಿಗಳಾಗಿರುತ್ತಾರೆ. ಪ್ರಸ್ತುತದಲ್ಲಿ ಅಮೇರಿಕಾ, ಇಂಗ್ಲೆಂಡ್, ಪಶ್ಚಿಮ ಜರ್ಮನಿ, ಫ್ರಾನ್ಸ್ ಮತ್ತು ಜಪಾನ್ ಅತಿ ಹೆಚ್ಚು ವಂತಿಗೆಯನ್ನು ಹೊಂದಿರುವ ಆರು ರಾಷ್ಟ್ರಗಳಾಗಿವೆ. ಇನ್ನುಳಿದ 19 ಜನ ನಿರ್ದೇಶಕರು ಇತರ ಸದಸ್ಯ ರಾಷ್ಟ್ರಗಳಿಂದ ಚುನಾಯಿತರಾಗಬೇಕಿರುತ್ತದೆ. ಪ್ರಸ್ತುತದಲ್ಲಿ ಭಾರತವು ಅತಿ ಹೆಚ್ಚು ವಂತಿಗೆಯನ್ನು ಹೊಂದಿರುವ ಎಂಟನೆಯ ರಾಷ್ಟ್ರವಾಗಿದೆ. ಏಳನೆಯ ಸ್ಥಾನ ಇಟಲಿಗೆ ಲಭಿಸಿದೆ.

24 ಜನ ನಿರ್ದೇಶಕರಲ್ಲಿ ಒಬ್ಬರನ್ನು ವ್ಯವಸ್ಥಾಪಕ ನಿರ್ದೇಶಕರನ್ನಾಗಿ (Managing Director) ನೇಮಿಸಲಾಗಿರುತ್ತದೆ. ವ್ಯವಸ್ಥಾಪಕ ನಿರ್ದೇಶಕರು ಕಾರ್ಯನಿರ್ವಾಹಕ ನಿರ್ದೇಶಕರ ಮಂಡಳಿಯ ಅಧ್ಯಕ್ಷರಾಗಿಯೂ ಮತ್ತು ನಿಧಿಯ ಪ್ರಧಾನ ಕಾರ್ಯನಿರ್ವಾಹಕರಾಗಿಯೂ ಕೆಲಸ ಮಾಡುತ್ತಾರೆ. ಕಾರ್ಯನಿರ್ವಾಹಕ ನಿರ್ದೇಶಕರ ಮಂಡಳಿಯು ಪ್ರತಿದಿನವೂ ಸಭೆ ಸೇರುತ್ತದೆ.

ಸಂಪನ್ಮೂಲಗಳು
(Resources)

ಯಾವುದೇ ಹಣಕಾಸಿನ ಸಂಸ್ಥೆಗೆ ಸಾಲ ನೀಡಿಕೆಯ ಉದ್ದೇಶದಿಂದ ಸಂಪನ್ಮೂಲಗಳು ಆವಶ್ಯಕವಾಗಿರುವಂತೆ ಅಂತರರಾಷ್ಟ್ರೀಯ ಹಣ ನಿಧಿಗೂ ಸಹ ಸಂಪನ್ಮೂಲಗಳು ಆವಶ್ಯಕವಾಗಿವೆ. 'ನಿಧಿ'ಯ ಸಂಪನ್ಮೂಲಗಳನ್ನು ಎರಡು ವರ್ಗಗಳಾಗಿ ವಿಂಗಡಿಸಬಹುದು. ಅವುಗಳೆಂದರೆ :

i) ವಂತಿಗೆಗಳು, ಮತ್ತು

ii) ಶ್ರೀಮಂತ ರಾಷ್ಟ್ರಗಳಿಂದ ಪಡೆಯುವ ಸಾಲಗಳು.

1. ವಂತಿಗೆಗಳು (Subscriptions) : ಪ್ರತಿಯೊಂದು ಸದಸ್ಯ ರಾಷ್ಟ್ರವು ನೀಡುವ ವಂತಿಗೆಯೇ ನಿಧಿಯ ಮುಖ್ಯ ಸಂಪನ್ಮೂಲಗಳಾಗಿರುತ್ತವೆ. ಅದರ ರಾಷ್ಟ್ರೀಯ ಆದಾಯ, ಚಿನ್ನದ ದಾಸ್ತಾನು, ಅದರ ವಿದೇಶೀ ವ್ಯಾಪಾರದ ಗಾತ್ರ ಮತ್ತು ಅದರ ಆರ್ಥಿಕ ಪ್ರಾಮುಖ್ಯತೆಗೆ ತಕ್ಕಂತೆ ಪ್ರತಿಯೊಂದು ದೇಶವೂ ನಿರ್ದಿಷ್ಟ ವಂತಿಗೆಯನ್ನು ನೀಡಬೇಕೆಂದು ನಿರ್ಧರಿಸಲಾಗಿರುತ್ತದೆ. ಪ್ರಾರಂಭದಲ್ಲಿ ವಂತಿಗೆಯಲ್ಲಿ ಶೇಕಡ25ರಷ್ಟನ್ನು ಚಿನ್ನ ಅಥವಾ ಅಮೇರಿಕಾದ ಡಾಲರಿನ ರೂಪದಲ್ಲಿ ಮತ್ತು ಇನ್ನುಳಿದ ಶೇಕಡ75ರಷ್ಟನ್ನು ಸ್ವದೇಶೀ ಹಣದಲ್ಲಿ ನೀಡಬೇಕಾಗಿದ್ದಿತು. ಆದರೆ 1978ರ ನಂತರ ವಂತಿಗೆ ನೀಡಿಕೆಯ ವ್ಯವಸ್ಥೆಯಲ್ಲಿ ಬದಲಾವಣೆಯನ್ನು ಮಾಡಲಾಗಿದೆ. ಆ ಪ್ರಕಾರ ಸದಸ್ಯ ರಾಷ್ಟ್ರಗಳು ಚಿನ್ನದ ರೂಪದಲ್ಲಿ ವಂತಿಗೆಯನ್ನು ನೀಡುವುದನ್ನು ಕೈಬಿಡಲಾಗಿದೆ. ಈಗ ಪ್ರಚಲಿತವಿರುವ ವ್ಯವಸ್ಥೆಯ ಪ್ರಕಾರ ಶೇಕಡ25ರಷ್ಟು ವಂತಿಗೆಯನ್ನು **'ವಿಶೇಷ ಹಣ ಪಡೆಯುವ ಹಕ್ಕುಗಳು'** (Special Drawing Rights) ಅಥವಾ ನಿಧಿಯು ಆಯ್ಕೆ ಮಾಡಿದ ನಾಣ್ಯದಲ್ಲಿ ನೀಡಬೇಕು. ವಿಶೇಷ ಹಣ ಪಡೆಯುವ ಹಕ್ಕುಗಳು (SDRs) ಎಂದರೆ ಆಯ್ದ ಕೆಲವು ಪ್ರಮುಖ ದೇಶಗಳ ನಾಣ್ಯಗಳನ್ನು ಒಟ್ಟುಗೂಡಿಸಿ ನಿರ್ಣಯ ಮಾಡಿದ ಮೌಲ್ಯ, ಎಸ್.ಡಿ.ಆರ್ಸ್ ಅಥವಾ ಆಯ್ಕೆ ಮಾಡಿದ ದೇಶಗಳ ನಾಣ್ಯದ ರೂಪದಲ್ಲಿನ ವಂತಿಗೆಯನ್ನು ನಿಧಿಗೆ ನೇರವಾಗಿ ನೀಡಬೇಕಾಗಿರುತ್ತದೆ. ಆದರೆ ಸ್ವದೇಶೀ ನಾಣ್ಯವನ್ನು ನಿಧಿಯ ಪರವಾಗಿ ಆಯಾ ದೇಶದ ಕೇಂದ್ರ ಬ್ಯಾಂಕಿನಲ್ಲಿ ಇರಿಸಲಾಗಿರುತ್ತದೆ. ನಿಧಿಯು ಆವಶ್ಯಕವಿದ್ದಾಗ ಆ ಹಣವನ್ನು ತೆಗೆದುಕೊಳ್ಳುತ್ತದೆ. ಈ ವಂತಿಗೆಯ ಹಣವನ್ನು ಬಳಸಿಕೊಂಡು ನಿಧಿಯು ಸದಸ್ಯ ರಾಷ್ಟ್ರಗಳಿಗೆ ಸಾಲ ನೀಡುತ್ತದೆ.

ನಿಧಿಯ ಪ್ರಾರಂಭದ ಬಂಡವಾಳವು 880 ಕೋಟಿ ಡಾಲರುಗಳಷ್ಟಿತ್ತು. ಸದಸ್ಯ ರಾಷ್ಟ್ರಗಳ ಸಾಲದ ಬೇಡಿಕೆಯನ್ನು ಈಡೇರಿಸಲು ವಂತಿಗೆಯನ್ನು ಆಗಿಂದಾಗ್ಗೆ ಹೆಚ್ಚಿಸುತ್ತಾ ಬರಲಾಗಿದೆ. 1978ರಲ್ಲಿ ಒಂದೇ ಬಾರಿಗೆ ವಂತಿಗೆಯ ಪ್ರಮಾಣವನ್ನು ಶೇಕಡ50ರಷ್ಟು ವಿರಿಸಲಾಯಿತು. ಪ್ರಸ್ತುತದಲ್ಲಿ ಅದರ ಒಟ್ಟು ವಂತಿಗೆಯ ಬಂಡವಾಳವು 13,500 ಕೋಟಿ ಡಾಲರುಗಳಷ್ಟಿದೆ. ಇದರಲ್ಲಿ 7,500 ಕೋಟಿ ಡಾಲರುಗಳ ಬಂಡವಾಳ ಡಾಲರಿನ ರೂಪದಲ್ಲಿ ಮತ್ತು 6,000 ಕೋಟಿ ಡಾಲರುಗಳ ಬಂಡವಾಳ ಚಿನ್ನದ ರೂಪದಲ್ಲಿ ಇದೆ.

ವಂತಿಗೆಯ ಮಹತ್ವ
(Importance of Subscription)

ಪ್ರತಿಯೊಂದು ಸದಸ್ಯ ದೇಶದ ವಂತಿಗೆಯನ್ನು ನಿಗದಿಪಡಿಸಲಾಗಿದೆ. ಈ ವಂತಿಗೆಯು ಅನೇಕ ದೃಷ್ಟಿಗಳಿಂದ ಹೆಚ್ಚು ಉಪಯುಕ್ತವಿದೆ. ವಂತಿಗೆಯಿಂದ ಬಂಡವಾಳವನ್ನು ಗಣನೆಯಲು ನಿಧಿಗೆ ಸಾಧ್ಯವಾಗುತ್ತದೆ. ವಂತಿಗೆಯ ಪ್ರಮಾಣದ ಆಧಾರದ ಮೇಲೆ ಯಾವುದೇ ಸದಸ್ಯ ರಾಷ್ಟ್ರಕ್ಕೆ ನಿಧಿಯಿಂದ ಒಂದು ವರ್ಷದ ಅವಧಿಯಲ್ಲಿ ಅತಿ ಹೆಚ್ಚು ಸಾಲವನ್ನು ಹಾಗೂ ಒಟ್ಟಾರೆಯಾಗಿ ಗರಿಷ್ಠ ಸಾಲವನ್ನು ಎಷ್ಟು ನೀಡಬೇಕೆಂಬುದನ್ನು ನಿರ್ಧರಿಸಲಾಗುತ್ತದೆ. ಅಂದರೆ ವಂತಿಗೆಯು ಸದಸ್ಯ ದೇಶದ ಆರ್ಥಿಕತೆಯ ಪ್ರಮುಖತೆಯನ್ನು ಸೂಚಿಸುತ್ತದೆ. ಅಲ್ಲದೆ ಒಂದು ಸದಸ್ಯ ದೇಶದ ಮತದಾನದ ಹಕ್ಕನ್ನು ನಿರ್ಣಯಿಸುವಾಗ ಅಂದರೆ ಆ ದೇಶದ ಮತಗಳು ಎಷ್ಟು ಇವೆ ಎಂಬುದನ್ನು ನಿರ್ಣಯಿಸುವಾಗ ಆ ದೇಶದ ವಂತಿಗೆಯ ಪ್ರಮಾಣವನ್ನು ಗಮನಿಸಬೇಕಾಗುತ್ತದೆ. ಆದ್ದರಿಂದ ಸದಸ್ಯ ದೇಶಗಳು ಸಲ್ಲಿಸಿದ ವಂತಿಗೆಯು ಅತಿ ಮಹತ್ವವನ್ನು ಹೊಂದಿರುತ್ತದೆ.

2. ಸಾಲಗಳನ್ನು ಎತ್ತುವಿಕೆ (Borrowings) : ನಿಧಿಯು ವಿವಿಧ ದೇಶಗಳಿಂದ ಸಾಲವನ್ನು ಪಡೆದುಕೊಳ್ಳುತ್ತದೆ. ಸಾಮಾನ್ಯವಾಗಿ ಶ್ರೀಮಂತ ದೇಶಗಳು ಇದಕ್ಕೆ ಸಾಲವನ್ನು ನೀಡುತ್ತವೆ. ಹೀಗೆ ಸಾಲದ ಮೂಲಕ ಪಡೆದ ಸಂಪನ್ಮೂಲಗಳ ಸಹಾಯದಿಂದ ನಿಧಿಯು ಇತರ ಸದಸ್ಯ ರಾಷ್ಟ್ರಗಳಿಗೆ ಸಾಲವನ್ನು ಒದಗಿಸುತ್ತದೆ.

ಕಾರ್ಯವಿಧಾನ
(Method of Working)

ಪಾವತಿ ಶಿಲ್ಕಿನ ಅಸಮತೋಲನವನ್ನು ಸರಿಪಡಿಸಲು ನಿಧಿಯು ಸದಸ್ಯ ರಾಷ್ಟ್ರಗಳಿಗೆ ಸಾಲಗಳನ್ನು ನೀಡುತ್ತದೆ. ಸದಸ್ಯ ರಾಷ್ಟ್ರಗಳ ನಾಣ್ಯಗಳ ಬಾಹ್ಯ ಮೌಲ್ಯವನ್ನು ಸಮಾಡುವುದಕ್ಕೂ ನಿಧಿಯು ಸಾಲವನ್ನು ಒದಗಿಸುತ್ತದೆ. ಅಂದರೆ ಅಗತ್ಯವಾದ ವಿದೇಶೀ ಸರಕುಗಳು ಮತ್ತು ಸೇವೆ ಗಳನ್ನು ಪಡೆಯಲು ಆ ದೇಶದ ನಾಣ್ಯವನ್ನು ಒದಗಿಸುತ್ತದೆ. ಪ್ರಾರಂಭದಲ್ಲಿ ಪ್ರತಿಯೊಂದು ಸದಸ್ಯ ರಾಷ್ಟ್ರ ಪ್ರತಿ ವರ್ಷ ತನ್ನ ವಂತಿಗೆಯ ಶೇಕಡ25ರಷ್ಟು ಮೊತ್ತವನ್ನು ಮತ್ತು ಐದು ವರ್ಷಗಳಲ್ಲಿ ಒಟ್ಟಾರೆಯಾಗಿ ಶೇಕಡ125ರಷ್ಟು ಮೊತ್ತವನ್ನು ಸಾಲ ಪಡೆಯಲು ಅರ್ಹವಾಗಿದ್ದಿತು. ಸೆಪ್ಟೆಂಬರ್ 1983ರಲ್ಲಿ ನಡೆದ ನಿಧಿಯ ಸಭೆಯಲ್ಲಿ ಸದಸ್ಯ ರಾಷ್ಟ್ರಗಳು ಸಾಲ ಪಡೆಯಬಹುದಾದ ಗರಿಷ್ಠ ಮಿತಿಯನ್ನು ಹೆಚ್ಚಿಸಲಾಗಿದೆ. ಆ ಪ್ರಕಾರ ಸದಸ್ಯ ರಾಷ್ಟ್ರಗಳು ಸಾಮಾನ್ಯವಾಗಿ ಪ್ರತಿ ವರ್ಷ ತಮ್ಮ ವಂತಿಗೆಯ ಶೇಕಡ102ರಷ್ಟು ಮೊತ್ತವನ್ನು ಮತ್ತು ಮೂರು ವರ್ಷಗಳಲ್ಲಿ ಒಟ್ಟು ಶೇಕಡ306ರಷ್ಟು ಮೊತ್ತವನ್ನು ಸಾಲ ಪಡೆದುಕೊಳ್ಳಬಹುದಾಗಿದೆ. ಆದರೆ ಅತ್ಯಂತ ಗಂಭೀರವಾದ ಆರ್ಥಿಕ ಬಿಕ್ಕಟ್ಟು ಮತ್ತು ವಿದೇಶೀ ವಿನಿಮಯ ಸಮಸ್ಯೆಗೆ ಸಿಕ್ಕಿರುವ ದೇಶವು ಒಂದು ವರ್ಷದಲ್ಲಿ ಶೇಕಡ125ರಷ್ಟು ಮತ್ತು ಮೂರು ವರ್ಷಗಳ ಅವಧಿಯಲ್ಲಿ ಶೇಕಡ375ರಷ್ಟು ಮೊತ್ತವನ್ನು ಸಾಲವಾಗಿ

ಪಡೆಯಲು ಅರ್ಹವಾಗಿದೆ.

ಸಾಲಗಾರ ರಾಷ್ಟ್ರವು ಸಾಲದ ಅವಧಿಗೆ ಅನುಗುಣವಾಗಿ ವಿವಿಧ ದರಗಳ ಬಡ್ಡಿ ಮತ್ತು ಸೇವಾ ವೆಚ್ಚಗಳನ್ನು ಪಾವತಿ ಮಾಡಬೇಕಾಗುತ್ತದೆ.

ಯಾವುದೇ ದೇಶವ ನಾಣ್ಯಕ್ಕೆ ಅತ್ಯಧಿಕ ಬೇಡಿಕೆ ಇದ್ದು, ಆ ಬೇಡಿಕೆಯನ್ನು ಈಡೇರಿಸಲು ನಿಧಿಗೆ ಸಾಧ್ಯವಾಗದಿದ್ದರೆ, ಆಗ ಅದು ಅದನ್ನು "ವಿರಳ ನಾಣ್ಯ" (Scarce Currency) ಎಂದು ಘೋಷಿಸುತ್ತದೆ. ನಂತರ ಪಡಿತರ ಪದ್ಧತಿಯ ಮೂಲಕ ಅಂತಹ ನಾಣ್ಯವನ್ನು ಅಪೇಕ್ಷಿಸುವ ಎಲ್ಲ ದೇಶಗಳಿಗೂ ಹಂಚುತ್ತದೆ. ಚಿನ್ನವನ್ನು ಮಾರಿ ಅಂತಹ ವಿರಳ ನಾಣ್ಯವನ್ನು ಕೊಳ್ಳುವ ಮೂಲಕವೂ ಅದರ ಪೂರೈಕೆಯನ್ನು ಹೆಚ್ಚಿಸಲು ನಿಧಿಯು ಶಕ್ತವಾಗಿದೆ.

ಅಲ್ಪಾಭಿವೃದ್ಧಿ ದೇಶಗಳ ಪ್ರಗತಿಯಲ್ಲಿ ನಿಧಿಯ ಪಾತ್ರ

(The Role of IMF in the Progress of Less - Developed Countries)

ಅಲ್ಪ ಅಭಿವೃದ್ಧಿಯನ್ನು ಹೊಂದಿದ ದೇಶಗಳ ಹಿತಾಸಕ್ತಿಗಳನ್ನು ರಕ್ಷಿಸಲು ನಿಧಿಯು ವಿಶೇಷ ಆಸಕ್ತಿ ವಹಿಸಿದೆ ಮತ್ತು ಅವುಗಳಿಗೆ ಆಂತರಿಕವಾಗಿ ಹಣಕಾಸಿನ ಸ್ಥಿರತೆಯನ್ನು ಕಾಯ್ದುಕೊಳ್ಳಲು ಹಾಗೂ ಹಿತಕರವಾದ ಸಂದಾಯ ಶಿಲ್ಕನ್ನು ಹೊಂದಲು ಸಾಧ್ಯವಾಗುವಂತೆ ನಿಧಿಯು ನೆರವನ್ನು ನೀಡುತ್ತದೆ. ನಿಧಿಯು ಅಲ್ಪ ಅಭಿವೃದ್ಧಿ ಹೊಂದಿದ ದೇಶಗಳು ಪ್ರತಿಕೂಲ ಸಂದಾಯ ಶಿಲ್ಕಿನಿಂದ ತೊಂದರೆಗೊಳಗಾದಾಗ ಸಾಮಾನ್ಯವಾಗಿ ಅವುಗಳಿಗೆ ನೆರವು ನೀಡಿದೆ.

ಇತ್ತೀಚೆಗೆ ಅಲ್ಪ ಅಭಿವೃದ್ಧಿ ಹೊಂದಿರುವ ಹಲವು ದೇಶಗಳು ತಮ್ಮ ಆರ್ಥಿಕ ಅಭಿವೃದ್ಧಿಗಾಗಿ ಅವು ನಿಧಿಯಿಂದ ಹಣಕಾಸಿನ ನೆರವು ಕೇಳುತ್ತಿವೆ. ತಮ್ಮ ರಫ್ತುಗಳನ್ನು ಹೆಚ್ಚಿಸಿ, ಅನುಕೂಲ ಸಂದಾಯ ಶಿಲ್ಕನ್ನು ಹೊಂದಿ, ಆ ಮೂಲಕ ಆರ್ಥಿಕಾಭಿವೃದ್ಧಿಗೆ ಬೇಕಾಗುವ ಸರಕುಗಳನ್ನು ಆಮದು ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಅವು ನಿಧಿಯು ತಮಗೆ ಹೆಚ್ಚು ನೆರವನ್ನು ನೀಡಬೇಕೆಂದು ಕೇಳಿಕೊಳ್ಳುತ್ತಿವೆ. ಇದಕ್ಕಾಗಿ ತಜ್ಞರು ಅನೇಕ ಯೋಜನೆಗಳನ್ನು ಮಾಡಿದ್ದಾರೆ.

ಸದಸ್ಯ ದೇಶಗಳಿಗೆ ಮತ್ತು ನಿರ್ದಿಷ್ಟವಾಗಿ ಅಲ್ಪಾಭಿವೃದ್ಧಿ ದೇಶಗಳಿಗೆ ಸಾಲ ಸೌಲಭ್ಯಗಳನ್ನು ವಿಸ್ತರಿಸಲು ನಿಧಿಯು ಅನೇಕ ಯೋಜನೆಗಳನ್ನು ಜಾರಿಯಲ್ಲಿ ತಂದಿದೆ. ಇವುಗಳನ್ನು ಮುಂದಿನಂತೆ ವಿವರಿಸಬಹುದು.

1. ಕಾಪು ದಾಸ್ತಾನು ಧನವಿನಿಯೋಗ ಸೌಲಭ್ಯ (Buffer Stock Financing Facility): ಸದಸ್ಯ ರಾಷ್ಟ್ರಗಳು ಸರಕುಗಳ ಕಾಪು ದಾಸ್ತಾನನ್ನು ನಿರ್ಮಾಣ ಮಾಡಲು ಹಣಕಾಸಿನ ನೆರವನ್ನು ಒದಗಿಸುವ ಉದ್ದೇಶದಿಂದ ಈ ಸೌಲಭ್ಯವನ್ನು ಸೃಷ್ಟಿಸಲಾಗಿದೆ. ಇದನ್ನು 1969 ರಲ್ಲಿ ಸೃಷ್ಟಿಸಲಾಯಿತು. ಸದಸ್ಯ ದೇಶವು ಸಾಲವನ್ನು ಪಡೆಯಲು ತನ್ನ ಹಕ್ಕಿನಲ್ಲಿರುವ ದೇಯಾಂಶದ (Quata) ಶೇಕಡ 30 ರಷ್ಟಕ್ಕೆ ಸಮನಾದಷ್ಟು ಹಣವನ್ನು ಈ ಸೌಲಭ್ಯದಲ್ಲಿ

ಪಡೆಯಲು ಅವಕಾಶವಿರುತ್ತದೆ. ಆದರೆ ಸದಸ್ಯ ದೇಶವು ತನ್ನ ದೇಶದಲ್ಲಿ ಸರಕುಗಳ ಬೆಲೆಯನ್ನು ಸ್ಥಿರತೆಯಲ್ಲಿಡಲು ನಿಧಿಯೊಡನೆ ಸಹಕರಿಸಬೇಕು ಎಂಬುದು ಈ ಸಾಲ ನೀಡಿಕೆಗೆ ಇರುವ ಷರತ್ತಾಗಿರುತ್ತದೆ.

2. ವಿಸ್ತರಿಸಿದ ನಿಧಿ ಸೌಲಭ್ಯ (Extended Fund Facility): ಈ ಸೌಲ್ಯವನ್ನು 1974 ರಲ್ಲಿ ಸೃಷ್ಟಿಸಲಾಯಿತು. ದೀರ್ಘಾವಧಿಗಳಲ್ಲಿ ತಮ್ಮ ಪಾವತಿ ಶಿಲ್ಕಿನ ಸಮಸ್ಯೆಗಳನ್ನು ನೀಗಿಸಿಕೊಳ್ಳಲು ಸದಸ್ಯ ರಾಷ್ಟ್ರಗಳಿಗೆ ನಿಧಿಯು ಈ ಸೌಲಭ್ಯವನ್ನು ಒದಗಿಸುತ್ತದೆ. ಸಾಧಾರಣ ಉದ್ಧರಿ ಸೌಲಭ್ಯಗಳಲ್ಲಿ ಸದಸ್ಯ ರಾಷ್ಟ್ರಗಳು ಪಡೆಯಬಹುದಾದ ಪ್ರಮಾಣಕ್ಕಿಂತ ಹೆಚ್ಚಿನ ಸಾಲವನ್ನು ಇದರಲ್ಲಿ ಒದಗಿಸಲಾಗುತ್ತದೆ. ಈ ಸೌಲಭ್ಯದಲ್ಲಿ ಉದ್ಧರಿಯನ್ನು 10 ವರ್ಷಗಳ ವರೆಗಿನ ಅವಧಿಗೆ ಮತ್ತು ಸದಸ್ಯ ರಾಷ್ಟ್ರಗಳ ದೇಯಾಂಶದ ಶೇಕಡ 300 ರಷ್ಟನ್ನು ನೀಡಲಾಗುತ್ತದೆ. ಮುಖ್ಯವಾಗಿ ಹಿಂದುಳಿದ ದೇಶಗಳಿಗೆ ಈ ಸೌಲಭ್ಯವನ್ನು ಒದಗಿಸಲಾಗುತ್ತದೆ.

3. ಪೂರಕ ಧನ ವಿನಿಯೋಗ ಸೌಲಭ್ಯ (Supplementary Financing Facility): ಪಾವತಿ ಶಿಲ್ಕಿನ ಗಂಭೀರ ಕೊರತೆಯನ್ನು ಎದುರಿಸುತ್ತಿರುವ ಸದಸ್ಯ ರಾಷ್ಟ್ರಗಳಿಗೆ ವಿಸ್ತರಿಸಿದ ವರ್ಷಾಡುಗಳ ಆಶ್ರಯದಲ್ಲಿ ಪೂರಕ ಹಣಕಾಸನ್ನು ಒದಗಿಸಲು ಈ ಸೌಲಭ್ಯವನ್ನು 1977 ರಲ್ಲಿ ಸ್ಥಾಪಿಸಲಾಗಿರುತ್ತದೆ. ಈ ಸೌಲಭ್ಯವನ್ನು ಈಗ ಅತ್ಯಲ್ಪ ಆದಾಯದ ಅಭಿವೃದ್ಧಿಶೀಲ ಸದಸ್ಯ ದೇಶಗಳಿಗೂ ವಿಸ್ತರಿಸಲಾಗಿರುತ್ತದೆ.

4. ಸಂರಚನಾತ್ಮಕ ಹೊಂದಾಣಿಕೆ ಸೌಲಭ್ಯ (Structural Adjustment Facility): ಕಡು ಬಡ ದೇಶಗಳಿಗೆ ರಿಯಾಯಿತಿಯ ಆಧಾರದಲ್ಲಿ ಹಣಕಾಸನ್ನು ಒದಗಿಸಲು ಈ ಸೌಲಭ್ಯವನ್ನು 1986 ರಲ್ಲಿ ಅಂತರರಾಷ್ಟ್ರೀಯ ಹಣನಿಧಿಯು ಸ್ಥಾಪಿಸಿತು. ಈ ಸೌಲಭ್ಯದಲ್ಲಿ, ಪಾವತಿಶಿಲ್ಕಿನ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಮತ್ತು ಮಧ್ಯಮಾವಧಿಯ ಸಮಗ್ರ ಆರ್ಥಿಕ ಹಾಗೂ ಸಂರಚನಾತ್ಮಕ ಹೊಂದಾಣಿಕೆಯ ಕಾರ್ಯಕ್ರಮಗಳಿಗಾಗಿ ಸಾಲಗಳನ್ನು ನೀಡಲಾಗುತ್ತದೆ. ಈ ಸೌಲಭ್ಯವನ್ನು 2.7 ಶತಕೋಟಿ ವಿಶೇಷ ಹಣ ಪಡೆಯುವ ಹಕ್ಕುಗಳ (SDR) ಸಂಪನ್ಮೂಲಗಳ ಸಹಾಯದಿಂದ ಸೃಷ್ಟಿಸಲಾಗಿರುತ್ತದೆ. ಕಡುಬಡ ದೇಶಗಳಿಗೆ ಅತಿ ಹೆಚ್ಚಿನ ರಿಯಾಯಿತಿ ದರದಲ್ಲಿ, ಅಂದರೆ ಶೇಕಡ 0.5 ರಿಂದ ಶೇಕಡ 1 ರ ಬಡ್ಡಿ ದರದಲ್ಲಿ ಸಾಲಗಳನ್ನು ಒದಗಿಸುವಿಕೆಯು ಈ ಸೌಲಭ್ಯದ ವೈಶಿಷ್ಟ್ಯವಾಗಿರುತ್ತದೆ. ಅಸಲನ್ನು ಐದೂವರೆ ವರ್ಷಗಳಿಂದ 10 ವರ್ಷಗಳವರೆಗಿನ ಅವಧಿಯಲ್ಲಿ ಮರುಪಾವತಿಸಬೇಕಾಗಿರುತ್ತದೆ ಮತ್ತು ಮರುಪಾವತಿಯ ಅವಧಿಯು ಐದು ವರ್ಷಗಳಿಗೆ ಪ್ರಾರಂಭವಾಗುತ್ತದೆ.

5. ಹೆಚ್ಚಿಸಿದ ಸಂರಚನಾತ್ಮಕ ಹೊಂದಾಣಿಕೆ ಸೌಲಭ್ಯ (Enhanced Stuctural Adjustment Facility): ಅತ್ಯಲ್ಪ ಆದಾಯದ ದೇಶಗಳಿಗೆ ಮಧ್ಯಮಾವಧಿಯ

ಹಣಕಾಸನ್ನು ಒದಗಿಸಲು ಈ ಸೌಲಭ್ಯವನ್ನು 1987 ರಲ್ಲಿ ಆರು ಶತಕೋಟಿ ವಿಶೇಷ ಹಣ ಪಡೆಯುವ ಹಕ್ಕುಗಳ ನೆರವಿನಿಂದ ಸ್ಥಾಪಿಸಲಾಯಿತು. ಈ ಸೌಲಭ್ಯದ ಧ್ಯೇಯೋದ್ದೇಶಗಳು, ಇದರಲ್ಲಿ ಸಾಲವನ್ನು ಪಡೆಯಲು ಅರ್ಹತೆ ಮತ್ತು ಮೂಲ ಕಾರ್ಯಕ್ರಮ ಲಕ್ಷಣಗಳು ಸಂರಚನಾತ್ಮಕ ಹೊಂದಾಣಿಕೆ ಸೌಲಭ್ಯದಲ್ಲಿ ಇರುವಂತೆಯೇ ಇರುತ್ತವೆ. ಆದರೆ ಇದರಲ್ಲಿ ಸಂರಚನಾತ್ಮಕ ಹೊಂದಾಣಿಕೆ ಸೌಲಭ್ಯಕ್ಕಿಂತ ಹೆಚ್ಚಿನ ಮೊತ್ತದ, ಅಂದರೆ ಮೂರು ವರ್ಷಗಳ ಅವಧಿಯಲ್ಲಿ ಸದಸ್ಯ ದೇಶದ ದೇಯಾಂಶದ ಶೇಕಡ 100 ರಷ್ಟು ಸಾಲಗಳನ್ನು ಪಡೆದುಕೊಳ್ಳಲು, ಇದರಲ್ಲಿ ಅವಕಾಶವಿರುತ್ತದೆ.

6. ಪರಿಹಾರಾತ್ಮಕ ಮತ್ತು ಸಾದಿಲ್ವಾರು (ಸಂಭವಾವಲಂಬಿ) ಧನವಿನಿಯೋಗ ಸೌಲಭ್ಯ (Compensatory and Contingency Financing Facility): ಈ ಸೌಲಭ್ಯವನ್ನು ಆಗಸ್ಟ್ 1988 ರಲ್ಲಿ ಪರಿಚಯಿಸಲಾಯಿತು. ಸದಸ್ಯ ದೇಶಗಳಿಗೆ ಏಕದರ ಆಮದಿಗೆ ಹಣದ ತಾತ್ಕಾಲಿಕ ಕೊರತೆ ಸಂಭವಿಸಿದರೆ ಅದಕ್ಕೆ ಪರಿಹಾರರೂಪವಾಗಿ ಮತ್ತು ಸದಸ್ಯ ದೇಶದ ನಿಯಂತ್ರಣಕ್ಕೆ ಮೀರಿ ಬಾಹ್ಯ ತೊಂದರೆಯ ಎದುರಿನಲ್ಲಿಯೂ ನಿಧಿ-ಬೆಂಬಲಿತ ಹೊಂದಾಣಿಕೆಯ ಕಾರ್ಯಕ್ರಮಗಳನ್ನು ಮುನ್ನಡೆಸಿಕೊಂಡು ಹೋಗಲು ಸಾದಿಲ್ವಾರು (ಸಂಭವಾವಲಂಬಿ) ಹಣಕಾಸನ್ನು ಒದಗಿಸುವುದು ಈ ಸೌಲಭ್ಯದ ಧ್ಯೇಯೋದ್ದೇಶವಾಗಿರುತ್ತದೆ.

7. ವ್ಯವಸ್ಥಿತ ಪರಿವರ್ತನಾ ಸೌಲಭ್ಯ (Systematic Transformation Facility): ಪಾವತಿ ಶಿಲ್ಕಿನ ಗಂಡಾಂತರವನ್ನು ಎದುರಿಸಲು ರಷ್ಯಾ ಮತ್ತಿತರ ಕೇಂದ್ರ ಏಷ್ಯಾ ಗಣರಾಜ್ಯಗಳಿಗೆ ಸಹಾಯ ಮಾಡಲು ಈ ಸೌಲಭ್ಯವನ್ನು ಏಪ್ರಿಲ್ 1993 ರಲ್ಲಿ ಆರು ಶತಕೋಟಿ ವಿಶೇಷ ಹಣ ಪಡೆಯುವ ಹಕ್ಕುಗಳ ನೆರವಿನಿಂದ ಸ್ಥಾಪಿಸಲಾಯಿತು.

8. ತುರ್ತು ಪರಿಸ್ಥಿತಿ ಸಂರಚನಾತ್ಮಕ ಹೊಂದಾಣಿಕೆ ಸಾಲಗಳು (Emergency Structural Adjustment Loans): ಹಣಕಾಸಿನ ಬಿಕ್ಕಟ್ಟನ್ನು ಎದುರಿಸುತ್ತಿರುವ ವಿಪರೀತವಾದ ಮತ್ತು ಲ್ಯಾಟಿನ್ ಅಮೆರಿಕದ ದೇಶಗಳಿಗೆ ನೆರವು ನೀಡಲು ಈ ಸೌಲಭ್ಯವನ್ನು 1999 ರಲ್ಲಿ ಸ್ಥಾಪಿಸಲಾಗಿರುತ್ತದೆ. ಈ ಸೌಲಭ್ಯದಲ್ಲಿ ಸಂಬಂಧಪಟ್ಟ ದೇಶಗಳಿಗೆ ನಿಧಿಯ ಸಾಮಾನ್ಯ ಬಡ್ಡಿ ದರಕ್ಕಿಂತ ಸುಮಾರು ಶೇಕಡ 3 ರಷ್ಟು ಹೆಚ್ಚಿನ ಬಡ್ಡಿ ದರದಲ್ಲಿ ಅಲ್ಪಾವಧಿ ಸಾಲಗಳನ್ನು ಒದಗಿಸಲಾಗುತ್ತದೆ. ಈ ಸಾಲಗಳನ್ನು ಅಲ್ಪಾವಧಿಯಲ್ಲಿ ಮರುಪಾವತಿಸಬೇಕಾಗಿರುತ್ತದೆ.

9. ಸಾದಿಲ್ವಾರು ಉದ್ಭರಿ ಸಾಲ (Contingency Credit Line): ಇತರ ದೇಶಗಳಲ್ಲಿ ಉದ್ಭವಿಸುವ ಹಣಕಾಸಿನ ಗಂಡಾಂತರದ ಪಿಡುಗು ಆರ್ಥಿಕವಾಗಿ ಉತ್ತಮವಾಗಿರುವ ದೇಶಗಳಿಗೂ ಹಬ್ಬದಂತೆ ಅವುಗಳನ್ನು ರಕ್ಷಿಸುವ ಉದ್ದೇಶದಿಂದ ಈ ಸೌಲಭ್ಯವನ್ನು ಏಪ್ರಿಲ್ 1999 ರಲ್ಲಿ ಸೃಷ್ಟಿಸಲಾಗಿರುತ್ತದೆ. ಆರೋಗ್ಯಕರವಾದ ಹಣಕಾಸಿನ ವಲಯಗಳನ್ನು ಮತ್ತು ಪ್ರಬಲವಾದ ಸಾಲಗಾರ - ಸಾಲಿಗ ಸಂಬಂಧಗಳನ್ನು ಹೊಂದಿರುವ ದೇಶಗಳಿಗೆ ಇದರಲ್ಲಿ ಸೌಲಭ್ಯವನ್ನು ಒದಗಿಸಲಾಗುತ್ತದೆ. ಆದರೆ ಇದುವರೆಗೆ ಯಾವ ದೇಶವೂ ಈ ಸೌಲಭ್ಯವನ್ನು

ಉಪಯೋಗಿಸಿಕೊಂಡಿರುವುದಿಲ್ಲ.

10. ರಾಜ್ಯಾದಾಯ ವ್ಯವಹಾರ ಶಾಖೆ (Revenue Affairs Division): ನಿಧಿಯು 1964ರಲ್ಲಿ "ರಾಜ್ಯಾದಾಯ ವ್ಯವಹಾರ ಶಾಖೆ"ಯನ್ನು ಸ್ಥಾಪಿಸಿತು. ಈ ಶಾಖೆಯು ಹಿಂದುಳಿದ ದೇಶಗಳಿಗೆ ತೆರಿಗೆ ನೀತಿ, ತೆರಿಗೆ ಪದ್ಧತಿ, ತೆರಿಗೆ ಆಡಳಿತ, ಅಂದಾಜು ಪತ್ರಿಕೆಯನ್ನು ತಯಾರಿಸುವ ವಿಧಾನ ಇತ್ಯಾದಿ ರಾಜ್ಯಾದಾಯಕ್ಕೆ ಸಂಬಂಧಿಸಿದ ವಿಷಯಗಳ ಬಗೆಗೆ ಸಲಹೆ ಮತ್ತು ಸೂಚನೆಗಳನ್ನು ನೀಡುತ್ತದೆ.

11. ಕೇಂದ್ರ ಬ್ಯಾಂಕಿನ ಸೇವೆಗಳು (Central Banking Services): ನಿಧಿಯು ಕೇಂದ್ರ ಬ್ಯಾಂಕಿನ ಸೇವೆಗಳನ್ನು ಒದಗಿಸಲು ಆರಂಭಿಸಿದೆ ಮತ್ತು ಹಿಂದುಳಿದ ದೇಶಗಳಿಗೆ, ಅವು ತಮ್ಮ ಕೇಂದ್ರ ಬ್ಯಾಂಕನ್ನು ಯಾವ ವಿಧವಾಗಿ ನಡೆಸಿಕೊಂಡು ಹೋಗಬೇಕು ಎಂಬ ಬಗೆಗೆ ಅದು ತರಬೇತಿಯನ್ನು ನೀಡತೊಡಗಿದೆ.

ನಿಧಿಯು ಮೇ 1975ರಲ್ಲಿ "ವಿಶ್ವಸ್ಥ ನಿಧಿ"ಯೊಂದನ್ನು ಆರಂಭಿಸಿತು. ಅಂದಾಜು ಹಿಂದುಳಿದ 61 ಸದಸ್ಯ ದೇಶಗಳಿಗೆ ಸಂದಾಯ ಶಿಲ್ಕಿನ ಕೊರತೆಯನ್ನು ನೀಗಿಸಿಕೊಳ್ಳಲು ಈ ನಿಧಿಯಿಂದ ಸಹಾಯ ನೀಡಲಾಗುತ್ತಿದೆ. 2001 ಜುಲೈ ತಿಂಗಳವರೆಗೆ 94 ಸದಸ್ಯ ದೇಶಗಳು ಈ ನಿಧಿಯಿಂದ ಸಹಾಯವನ್ನು ಪಡೆದುಕೊಂಡಿದ್ದವು.

ಈ ರೀತಿಯಾಗಿ ನಿಧಿಯು ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಹಲವಾರು ವಿಧಗಳಿಂದ ಸಹಾಯವನ್ನು ನೀಡುತ್ತಲಿದೆ.

ನಿಧಿಯ ಸಾಧನೆಗಳು

(Achievements of IMF)

ಅಂತರರಾಷ್ಟ್ರೀಯ ಹಣ ನಿಧಿಯು ಅನೇಕ ವಿಶಿಷ್ಟ ಸಾಧನೆಗಳಿಗೆ ಪಾತ್ರವಾಗಿದೆ. ಅವುಗಳನ್ನು ಕೆಳಗೆ ವಿವರಿಸಿದೆ.

1. ಅಂತರರಾಷ್ಟ್ರೀಯ ಆರ್ಥಿಕ ವೇದಿಕೆ (International Economic Forum) ಅಂತರರಾಷ್ಟ್ರೀಯ ಆರ್ಥಿಕ ಮತ್ತು ಹಣಕಾಸಿನ ಸಮಸ್ಯೆಗಳ ಬಗೆಗೆ ಚರ್ಚೆಗೆ ಮತ್ತು ಅವುಗಳ ನಿವಾರಣೆಗೆ ನಿಧಿಯು ಅತ್ಯುಪಯುಕ್ತ ವೇದಿಕೆಯಾಗಿ ಕಾರ್ಯ ನಿರ್ವಹಿಸುತ್ತಿದೆ.

2. ಅಂತರರಾಷ್ಟ್ರೀಯ ವ್ಯಾಪಾರದ ವಿಸ್ತರಣೆ (Expansion of International Trade): ಅಂತರರಾಷ್ಟ್ರೀಯ ಹಣ ನಿಧಿಯು ಸದಸ್ಯ ರಾಷ್ಟ್ರಗಳ ನಡುವೆ ವ್ಯಾಪಾರದ ವಿಸ್ತರಣೆಗೆ ಹಲವಾರು ವಿಧಗಳಲ್ಲಿ ಸಹಾಯ ಮಾಡಿದೆ. ಸದಸ್ಯ ರಾಷ್ಟ್ರಗಳಿಗೆ ಪರಸ್ಪರ ಅನುಕೂಲಕರವಾಗುವಂತೆ ಅಂತರರಾಷ್ಟ್ರೀಯ ವ್ಯಾಪಾರವನ್ನು ವಿಸ್ತರಿಸುವ ದಿಸೆಯಲ್ಲಿ ನಿಧಿಯು ಕೆಲಸ ಮಾಡುತ್ತಿದೆ. ಯಾವುದೇ ಒಂದು ದೇಶಕ್ಕೆ ಇತರ ದೇಶಗಳ ನಾಣ್ಯಗಳನ್ನು ದೊರಕಿಸಿಕೊಡುವುದು, ಅಂತರರಾಷ್ಟ್ರೀಯ ಆರ್ಥಿಕ ವಿಷಯಗಳನ್ನು ಕುರಿತಂತೆ ಮಾಹಿತಿ ನೀಡುವುದು ಮುಂತಾದ ಅಮೂಲ್ಯ ಕಾರ್ಯಗಳನ್ನು ನಿಧಿಯು ನಿರ್ವಹಿಸುತ್ತಿದೆ.

3. ಅಂತರರಾಷ್ಟ್ರೀಯ ದ್ರವ್ಯತೆಯ ಕೊರತೆಯ ನಿವಾರಣೆ (Removal of Scarcity of International Liquidity): ಅಂತರರಾಷ್ಟ್ರೀಯ ದ್ರವ್ಯತೆಯ ಕೊರತೆಯನ್ನು ನಿವಾರಿಸಲು ನಿಧಿಯು ಹಲವು ಕಾರ್ಯಕ್ರಮಗಳನ್ನು ಆಚರಣೆಗೆ ತಂದಿದೆ. ಇವುಗಳಲ್ಲಿ "ವಿಶೇಷ ಪಣಪಡೆಯುವ ಹಕ್ಕುಗಳು" (Special Drawing Rights) ಮತ್ತು "ಸಾಲವ ಭರವಸೆಗಳು" (Standby Credits) ಪ್ರಮುಖ ವಿಧಾನಗಳಾಗಿವೆ. ಈ ವಿಧಾನಗಳ ಮೂಲಕ ನಿಧಿಯು ಅಭಿವೃದ್ಧಿಶೀಲ ಸದಸ್ಯ ರಾಷ್ಟ್ರಗಳಿಗೆ ವಿಶೇಷ ನೆರವು ನೀಡುತ್ತಿದೆ.

4. ವಿನಿಮಯ ದರದ ಸ್ಥಿರತೆ (Exchange Rate Stability): ವಿನಿಮಯ ದರದ ಸ್ಥಿರತೆಯನ್ನು ಕಾಪಾಡುವ ಕಾರ್ಯ ದಲ್ಲಿ ನಿಧಿಯು ಬಹಳ ಮಟ್ಟಿಗೆ ಸಫಲವಾಗಿದೆ. ವಿವಿಧ ದೇಶಗಳು ಪೈಪೋಟಿಯುತವಾಗಿ ತಮ್ಮ ನಾಣ್ಯಗಳ ಮೌಲ್ಯವನ್ನು ಏರಿಸುವುದು ಅಥವಾ ಇಳಿಸುವುದು ಮುಂತಾದ ಕ್ರಮಗಳು ನಿಧಿಯು ಅಸ್ತಿತ್ವಕ್ಕೆ ಬಂದ ತರುವಾಯ ಬಹುಮಟ್ಟಿಗೆ ಕಡಿಮೆಯಾಗಿದೆ.

5. ಆರ್ಥಿಕ ಸ್ಥಿಮಿತತೆಯ ಸಾಧನೆ (Achievement of Economic Stabilitiy) ಸದಸ್ಯ ರಾಷ್ಟ್ರಗಳಲ್ಲಿ ಆರ್ಥಿಕ ಸ್ಥಿಮಿತತೆಯನ್ನು ಕಾಪಾಡಲು ನೆರವಾಗುವ ಮೂಲಕ ನಿಧಿಯು ಅಭಿವೃದ್ಧಿಶೀಲ ದೇಶಗಳ ಆರ್ಥಿಕಾಭಿವೃದ್ಧಿಗೆ ಪ್ರಚೋದನೆ ನೀಡಿದೆ. ಆರ್ಥಿಕ ಸ್ಥಿಮಿತತೆಯ ಸಾಧನೆಯಾದಾಗ ಮಾತ್ರ ಆರ್ಥಿಕಾಭಿವೃದ್ಧಿಯ ಮುಂದುವರಿಕೆಗೆ ಸೂಕ್ತ ತಳಪಾಯ ದೊರೆಯಲು ಸಾಧ್ಯ.

6. ಅಂತರರಾಷ್ಟ್ರೀಯ ಆರ್ಥಿಕ ಸಹಕಾರದ ವೃದ್ಧಿ (Promotion of International Economic Co-operation): ಅಂತರರಾಷ್ಟ್ರೀಯ ಮಟ್ಟದಲ್ಲಿ ಆರ್ಥಿಕ ಸಹಕಾರವನ್ನು ವೃದ್ಧಿಸುವ ಕಾರ್ಯದಲ್ಲಿ ನಿಧಿಯ ಕೊಡುಗೆ ಅಪಾರವಾದುದು. ನಿಧಿಯ ಕಾರ್ಯವ್ಯಾಪ್ತಿಯನ್ನು ಅನುಸರಿಸಿ ಸದಸ್ಯ ರಾಷ್ಟ್ರಗಳು ತಮ್ಮೊಳಗೆ ಸಮನ್ವಯ ಮತ್ತು ಸಹಬಾಳ್ವೆಯ ಅಂಶಗಳನ್ನು ಹೆಚ್ಚಿಸಿಕೊಂಡಿವೆ.

ನಿಧಿಯ ವೈಫಲ್ಯಗಳು
(Failures of IMF)

ನಿಧಿಯ ಕಾರ್ಯದಲ್ಲಿ ಅನೇಕ ವಿಫಲತೆಗಳು ಸ್ಪಷ್ಟವಾಗಿ ಕಾಣುತ್ತವೆ. ಈ ವಿಫಲತೆಗಳನ್ನು ತಿಳಿಯದೆ ನಿಧಿಯು ತನ್ನ ಕಾರ್ಯವಿಧಾನದಲ್ಲಿ ಪೂರ್ಣ ಯಶಸ್ಸನ್ನು ಸಾಧಿಸಿದೆ ಎಂದು ನಿರ್ಣಯಿಸಿದರೆ ಅಸಮಂಜಸವಾಗುತ್ತದೆ. ಇದರ ಪ್ರಮುಖ ವಿಫಲತೆಗಳು ಕೆಳಕಂಡಂತಿವೆ.

1. ವಿನಿಮಯ ದರದ ಸ್ಥಿರತೆ ಕಾಪಾಡಲು ವೈಫಲ್ಯ (Failure in Maintaining Exchange Rate Stability): ವಿನಿಮಯ ದರದ ಸ್ಥಿರತೆಯನ್ನು ಕಾಪಾಡುವ ಕಾರ್ಯದಲ್ಲಿ ನಿಧಿಯು ಪೂರ್ಣ ಯಶಸ್ಸನ್ನು ಸಾಧಿಸಿರುವುದಿಲ್ಲ. ಸದಸ್ಯ ರಾಷ್ಟ್ರಗಳು ವಿನಿಮಯ ದರವನ್ನು ಬದಲಾಯಿಸುವುದನ್ನು ನಿಧಿಯು ಆಕ್ಷೇಪಿಸಬಹುದು ಅಷ್ಟೇ. ಆದರೆ

ಅದನ್ನು ತಡೆಯಲು ಅದಕ್ಕೆ ಅಧಿಕಾರವಿರುವುದಿಲ್ಲ. ವಿನಿಮಯ ದರದ ಬದಲಾವಣೆಗೆ ನಾಣ್ಯದ ಅಪಮೌಲ್ಯೀಕರಣವು ಪ್ರಮುಖ ಸಾಧನವಾಗಿದೆ. ಉದಾಹರಣೆಗೆ, 1948ರಲ್ಲಿ ಫ್ರಾನ್ಸ್ ಶೇಕಡ 44ರಷ್ಟು, ಭಾರತವು 1966ರಲ್ಲಿ ಶೇಕಡ 36.5ರಷ್ಟು, 1991ರಲ್ಲಿ ಸುಮಾರು ಶೇಕಡ35ರಷ್ಟು ಮತ್ತು 1967ರಲ್ಲಿ ಇಂಗ್ಲೆಂಡ್ ಶೇಕಡ14.3 ಮತ್ತು 1971ರಲ್ಲಿ ಅಮೇರಿಕೆಯು ಶೇಕಡ10ರಷ್ಟು ತಮ್ಮ ನಾಣ್ಯಗಳನ್ನು ಅಪಮೌಲ್ಯಗೊಳಿಸಿದವು. ಇದನ್ನು ತಡೆಯಲು ನಿಧಿಯು ಅಶಕ್ತವಾಯಿತು.

2. ವಿರಳ ನಾಣ್ಯದ ಕೊರತೆ (Paucity of Scarce Currency): ಅಮೇರಿಕಾದ ಡಾಲರಿಗೆ ಅತ್ಯಧಿಕ ಬೇಡಿಕೆ ಇದ್ದು ಅದರ ಕೊರತೆ ಸಂಭವಿಸುತ್ತಿದೆ. 1950ರ ದಶಕದ ಕೊನೆಯ ಭಾಗದಲ್ಲಿ ಇದು ತೀವ್ರವಾಗಿತ್ತು. ಆದಾಗ್ಯೂ ಡಾಲರನ್ನು ವಿರಳ ನಾಣ್ಯವೆಂದು ಘೋಷಿಸಲು ನಿಧಿಯು ಅಶಕ್ತವಾಗಿದೆ. ಡಾಲರಿನ ಬಾಹ್ಯ ಮೌಲ್ಯವನ್ನು ಹೆಚ್ಚಿಸಲು ಕ್ರಮಗಳನ್ನು ತೆಗೆದುಕೊಳ್ಳುವ ಮೂಲಕ ಅದರ ಕೊರತೆಯನ್ನು ಹೋಗಲಾಡಿಸಲು ಪ್ರಯತ್ನಿಸಬಹುದಿತ್ತು. ಆದರೆ ನಿಧಿಯು ಆ ಕಾರ್ಯವನ್ನು ಮಾಡಲು ವಿಫಲವಾಗಿದೆ. ಈಗಲೂ ಸಹ ಅಮೇರಿಕಾದ ಡಾಲರ್‌ನಂತಹ ಸದೃಢ ನಾಣ್ಯಕ್ಕೆ (Hard Currency) ಜಗತ್ತಿನಾದ್ಯಂತ ವ್ಯಾಪಕವಾದ ಬೇಡಿಕೆ ಇದೆ. ಆದರೆ ಈ ನಾಣ್ಯವನ್ನು ಅಗತ್ಯವಿರುವ ದೇಶಗಳಿಗೆ ಒದಗಿಸಲು ನಿಧಿಯು ವಿಫಲಗೊಂಡಿದೆ.

3. ಆರ್ಥಿಕ ಸ್ಥಿಮಿತತೆ ಕಾಪಾಡಲು ವಿಫಲತೆ (Failure in Maintaining Exchange Rate Stability): ಆರ್ಥಿಕ ಸ್ಥಿಮಿತತೆಯನ್ನು ಕಾಪಾಡುವ ಕಾರ್ಯದಲ್ಲಿಯೂ ನಿಧಿಯು ಸೋಲನ್ನನುಭವಿಸಿದೆ. ಸದಸ್ಯ ರಾಷ್ಟ್ರಗಳ ಆಂತರಿಕ ವ್ಯವಹಾರಗಳಲ್ಲಿ ಮಧ್ಯಪ್ರವೇಶಿಸಲು ನಿಧಿಗೆ ಅಧಿಕಾರವಿಲ್ಲದಿರುವುದರಿಂದ ಅವು ನಾಣ್ಯಗಳ ಪೈಪೋಟಿಯುತ ಅಪಮೌಲ್ಯೀಕರಣ ಮೊದಲಾದ ಕಾರ್ಯಗಳಲ್ಲಿ ತೊಡಗಿವೆ. ಸದಸ್ಯ ರಾಷ್ಟ್ರಗಳಲ್ಲಿರುವ ಅತಿ ಪ್ರಸರಣವನ್ನು ತಡೆಯಲೂ ನಿಧಿಯು ವಿಫಲವಾಗಿದೆ.

4. ಸಂಪನ್ಮೂಲಗಳ ಕೊರತೆ (Lack of Resources): ನಿಧಿಯು ಪ್ರಾರಂಭದಿಂದಲೂ ಸಂಪನ್ಮೂಲಗಳ ಕೊರತೆಯನ್ನು ಅನುಭವಿಸುತ್ತಿದೆ. ದ್ರವತ್ವದ ಕೊರತೆಯನ್ನು ಹೋಗಲಾಡಿಸಲು ಅದು ಕೈಗೊಂಡ ಕ್ರಮಗಳು ಸಂಪೂರ್ಣ ಫಲ ನೀಡಲಿಲ್ಲ. ಕಚ್ಚಾ ತೈಲದ ಬೆಲೆ ಗಗನಚುಂಬಿಯಾಗಿ ಏರುತ್ತಿರುವ ಇತ್ತೀಚಿನ ದಿನಗಳಲ್ಲಿ ಸಂಪನ್ಮೂಲಗಳ ಕೊರತೆ ಇನ್ನೂ ಬಿಗಡಾಯಿಸಿದೆ. ಹಣಕಾಸು ಅತ್ಯಗತ್ಯವಾಗಿ ಬೇಕಿರುವ ಸದಸ್ಯ ರಾಷ್ಟ್ರಗಳಿಗೆ ಇದರ ನೆರವು ಸರಿಯಾಗಿ ದೊರೆಯುತ್ತಿಲ್ಲ.

5. ಸಿರಿವಂತ ದೇಶಗಳ ಕೈಗೊಂಬೆ (Plaything in the hands of Rich Countries): ನಿಧಿಯು ಸಿರಿವಂತ ದೇಶಗಳ, ಪ್ರಮುಖವಾಗಿ ಅಮೇರಿಕಾದ ಪ್ರಭಾವಕ್ಕೆ ಒಳಪಟ್ಟಿದ್ದು, ಅವುಗಳ ಕೈಗೊಂಬೆಯಾಗಿದೆ.. ಆ ದೇಶದ ಹಿತಾಸಕ್ತಿಗಳನ್ನು ಕಾಪಾಡಲು ಅದು ಶ್ರಮಿಸಬೇಕಾಗಿದೆ ಮತ್ತು ಅದು ಅನುಸರಿಸುವ ಕ್ರಮಗಳು ಆ ದೇಶಗಳನ್ನು ಬಾಧಿಸಬಾರದಾಗಿದೆ. ಈ ಮೂಲಕ ಸಿರಿವಂತ ದೇಶಗಳು ಬಡದೇಶಗಳನ್ನು

ಹತೋಟಿಯಲ್ಲಿಡಲು ನಿಧಿಯು ಒಂದು ವೇದಿಕೆಯಾಗಿರುವುದು ಮರವೈಷ್ಟಕರ ಸಂಗತಿ. ನಿಧಿಯು ಭೇದವೆಣಿಸುವಂತಹ ರಾಜಕೀಯದಲ್ಲಿ ನಿರತವಾಗಿದೆ ಎಂದು ಅದನ್ನು ಕಟುವಾಗಿ ಟೀಕಿಸಲಾಗಿರುತ್ತದೆ. ಅದನ್ನು "ಸಿರಿವಂತ ದೇಶಗಳ ಕೂಟ" (Rich Countries Club) ಎಂದು ಹೀಗಳೆಯಲಾಗಿದೆ.

6. ಅಭಿವೃದ್ಧಿಶೀಲ ದೇಶಗಳ ಹಿತಾಸಕ್ತಿಗಳ ನಿರ್ಲಕ್ಷ್ಯ (Neglect of the Interests of Developing Countries): ಸ್ವದೇಶೀ ಹಿತಾಸಕ್ತಿಗಳನ್ನು ಕಾಪಾಡಲು ವಿವಿಧ ದೇಶಗಳು ರಕ್ಷಣಾ ನೀತಿಯನ್ನು ಅನುಸರಿಸುತ್ತಿವೆ. ಅಮೇರಿಕಾ ಸೇರಿದಂತೆ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಇದು ವ್ಯಾಪಕವಾಗಿದೆ. ಪರಿಣಾಮವಾಗಿ ಅಭಿವೃದ್ಧಿಶೀಲ ದೇಶಗಳ ಸರಕುಗಳಿಗೆ ಮಾರುಕಟ್ಟೆ ಸಂಕುಚಿತಗೊಂಡಿದೆ. ರಕ್ಷಣಾ ನೀತಿಯ ಬಳಕೆಯನ್ನು ತಡೆಗಟ್ಟುವಲ್ಲಿ ನಿಧಿಯು ತನ್ನ ಅಸಹಾಯಕತೆಯನ್ನು ಪ್ರದರ್ಶಿಸಿದೆ.

7. ಅಧಿಕ ಬಡ್ಡಿ ದರಗಳು (High Interest Rates): ವಿಭಿನ್ನ ವಿಧಗಳ ಸಾಲಗಳ ಮೇಲೆ ನಿಧಿಯು ವಿಧಿಸುತ್ತಿರುವ ಬಡ್ಡಿ ದರವು ಅಧಿಕವಾದುದಾಗಿದೆ. ಇದು ಅಲ್ಪಾಭಿವೃದ್ಧ ಮತ್ತು ಅಭಿವೃದ್ಧಿಶೀಲ ದೇಶಗಳ ಮೇಲೆ ಅಪಾರವಾದ ಹೊರೆಯನ್ನು ಹೇರುತ್ತದೆ. ಇದರಿಂದಾಗಿ ಭಾರತದಂತಹ ಅನೇಕ ದೇಶಗಳು ಬಡ್ಡಿಯ ಹೊರೆಯಿಂದ ಸಾಲವನ್ನು ಮರುಪಾವತಿಸಲು ಸಾಧ್ಯವಾಗದಂತಹ ಪರಿಸ್ಥಿತಿಯಲ್ಲಿವೆ.

8. ಸಹಾಯಕ ಪಾತ್ರ (Secondary Role): ಅಂತರರಾಷ್ಟ್ರೀಯ ಹಣಸಂಬಂಧಿ ವಿಷಯಗಳಲ್ಲಿ ನಿಧಿಯು ಕೇಂದ್ರ ಪಾತ್ರವನ್ನು ನಿರ್ವಹಿಸುವ ಬದಲು ಕೇವಲ ಸಹಾಯಕ ಪಾತ್ರವನ್ನು ನಿರ್ವಹಿಸುತ್ತಿದೆ. ಅದು ಅಲ್ಪಾವಧಿ ಉದ್ದರಿ ವಿಪ್ಪಾಡಿನ ಸೌಲಭ್ಯಗಳನ್ನು ಒದಗಿಸುತ್ತಿರುವುದಿಲ್ಲ. ಈ ಕಾರಣದಿಂದಾಗಿ ಸದಸ್ಯ ದೇಶಗಳು ತಮ್ಮ ನಡುವೆಯೇ ನಾಣ್ಯಗಳನ್ನು ಪರಿವರ್ತಿಸಿಕೊಳ್ಳುವಂತಹ ಮತ್ತು ಅಲ್ಪಾವಧಿಗಾಗಿ ತಮ್ಮೊಳಗೆಯೇ ಸಾಲವನ್ನು ಕೊಡುವ ಮತ್ತು ತೆಗೆದುಕೊಳ್ಳುವ ಕಾರ್ಯಗಳನ್ನು ನಿರ್ವಹಿಸುತ್ತಿವೆ. ಇದರಿಂದಾಗಿ ನಿಧಿಯ ಪ್ರಾಮುಖ್ಯ ಕಡಿಮೆಯಾಗಿದೆ.

9. ಕಠಿಣ ಷರತ್ತುಗಳು (Harsh Conditions): ಸಾಲವನ್ನು ನೀಡುವಾಗ ಅಂತರರಾಷ್ಟ್ರೀಯ ಹಣನಿಧಿಯು ವಿಧಿಸುವ ಷರತ್ತುಗಳು ಬಹಳ ಕಠಿಣವಾಗಿವೆ. 1970 ಕ್ಕೆ ಮೊದಲು ಸದಸ್ಯ ರಾಷ್ಟ್ರಗಳು ಪಾವತಿಶಿಲ್ಕಿನ ಅಸಮತೋಲನವನ್ನು ಸರಿಪಡಿಸುವ ದಿಸೆಯಲ್ಲಿ ವೆಚ್ಚವನ್ನು ತಗ್ಗಿಸುವಿಕೆಯ ಷರತ್ತಿಗೆ ಒಪ್ಪಬೇಕಾಗಿತ್ತು. 1970 ರ ನಂತರದ ಅವಧಿಯಲ್ಲಿ ಸಾಲ ಪಡೆಯುವ ರಾಷ್ಟ್ರಗಳು ತಮ್ಮ ವಿದೇಶೀ ಪಾವತಿ ಶಿಲ್ಕಿನ ತೊಂದರೆಗೆ ಕಾರಣಗಳನ್ನು, ತಮ್ಮ ಆರ್ಥಿಕ ಆದ್ಯತೆಗಳು ಮತ್ತು ಸಾಮಾಜಿಕ ಹಾಗೂ ರಾಜಕೀಯ ಕೋರಿಕೆಗಳನ್ನು ಗಣನೆಗೆ ತೆಗೆದುಕೊಳ್ಳುವಂತಹ ಷರತ್ತುಗಳನ್ನು ಸೇರಿಸಲಾಯಿತು. ಮಾರ್ಚಿ 12, 1979 ರಿಂದ ಹೊಸ ಮಾರ್ಗದರ್ಶಿ ಸೂತ್ರಗಳನ್ವಯ ಷರತ್ತುಗಳನ್ನು ವಿಸ್ತರಿಸಲಾಗಿರುತ್ತದೆ.

10. ಏಷಿಯಾದ ಬಿಕ್ಕಟ್ಟಿಗೆ ಹೊಣೆ (Responsible for Asian Crisis): ಫಿಲಿಪೀನ್ಸ್, ದಕ್ಷಿಣ ಕೋರಿಯಾ, ಥಾಯ್‌ಲೆಂಡ್, ಇಂಡೋನೇಷಿಯಾ ಮತ್ತು ಮಲೇಷಿಯಾ ದೇಶಗಳಲ್ಲಿ ಏಕಾಏಕಿಯಾಗಿ ಮತ್ತು ಅನಿರೀಕ್ಷಿತವಾಗಿ ಸಂಭವಿಸಿದ ಪೂರ್ವ ಏಷಿಯಾ ಬಿಕ್ಕಟ್ಟು ನಿಧಿಯ ಕಾರ್ಯವಿಧಾನದ ದಕ್ಷತೆಯನ್ನು ಪ್ರಶ್ನೆಗೀಡುಮಾಡಿತು. ಅಂತರರಾಷ್ಟ್ರೀಯವಾಗಿ ವಿವಿಧ ದೇಶಗಳು ಸಾಲಗಳ, ಸಹಾಯಧನಗಳ ಅಥವಾ ತೆರಿಗೆಗಳ ಮೂಲಕ ನಿಧಿಯ ಮುಖಾಂತರ ಮಾರುಕಟ್ಟೆಗೆ ಮಧ್ಯಪ್ರವೇಶ ಮಾಡಿದುದು ಈ ಬಿಕ್ಕಟ್ಟಿನ ಸೃಷ್ಟಿಗೆ ಕಾರಣ ಎಂದು ಆಪಾದಿಸಲಾಗಿದೆ.

ಇಷ್ಟೆಲ್ಲಾ ವಿಫಲತೆಗಳು ಮತ್ತು ದೋಷಗಳ ನಡುವೆಯೂ ಅಂತರರಾಷ್ಟ್ರೀಯ ಹಣ ನಿಧಿಯು ಉತ್ತಮ ಕಾರ್ಯಗಳನ್ನು ಮಾಡಿದೆ ಎಂಬುದರಲ್ಲಿ ಸಂಶಯವಿಲ್ಲ. ಅಂತರರಾಷ್ಟ್ರೀಯ ಆರ್ಥಿಕ ಸಮಸ್ಯೆಗಳನ್ನು ಕುರಿತಂತೆ ಹಲವು ಸಮಸ್ಯೆಗಳನ್ನು ಅದು ಬಹಳ ಪರಿಣಾಮಕಾರಿಯಾಗಿ ಬಗೆಹರಿಸಿದೆ. ವಿನಿಮಯ ನಿಯಂತ್ರಣಗಳು ಮತ್ತು ದ್ವಿಪಾರ್ಶ್ವ ವ್ಯಾಪಾರದ ಒಪ್ಪಂದಗಳನ್ನು ಕಡಿಮೆ ಮಾಡುವ ಕಾರ್ಯದಲ್ಲಿ ಅದು ಗಮನಾರ್ಹವಾದ ಸೇವೆ ಸಲ್ಲಿಸಿದೆ. ಅನಭಿವೃದ್ಧ ದೇಶಗಳ ಸಂದಾಯ ಶಿಲ್ಕಿನ ಕೊರತೆಯ ನಿವಾರಣೆಗೆ ಅದು ನೀಡುತ್ತಿರುವ ನೆರವು ಸ್ತುತ್ಯಾರ್ಹವಾದುದು. ನಿಧಿಯು ತನ್ನ ಕಾರ್ಯವೈಖರಿಯನ್ನು ಇನ್ನಷ್ಟು ಪ್ರಗತಿಪರವಾಗಿ ಅಭಿವೃದ್ಧಿಶೀಲ ದೇಶಗಳ ಹಿತಾಸಕ್ತಿಗಳಿಗೆ ಪೂರಕವಾಗುವಂತೆ ಮಾಡಿಕೊಂಡಿದ್ದರೆ ಅದರ ಸಾಧನೆ ಇನ್ನೂ ಗಣನೀಯವಾಗುತ್ತಿತ್ತು. ಆದರೆ ನಿಧಿಯು ಅಸ್ತಿತ್ವಕ್ಕೆ ಬರದಿದ್ದರೆ ಅಂತರರಾಷ್ಟ್ರೀಯ ಆರ್ಥಿಕ ಸಮಸ್ಯೆಗಳ ಪರಿಹಾರಕ್ಕೆ ಒಂದು ವೇದಿಕೆಯೇ ಇಲ್ಲದಂತಾಗಿ ಅರಾಜಕತೆ ಇನ್ನೂ ತೀವ್ರವಾಗಿ ಮುಂದುವರೆಯುತ್ತಿತ್ತು ಎಂಬ ಸಂಗತಿಯನ್ನು ಮರೆಯುವಂತಿಲ್ಲ.

ಬಡ ಸದಸ್ಯ ರಾಷ್ಟ್ರಗಳಿಗೆ ಅಧಿಕ ಮೊತ್ತದ ಸಾಲ ನೀಡುವ ಮೂಲಕ ಅಂತರರಾಷ್ಟ್ರೀಯ ದ್ರವತ್ವದ ಸಮಸ್ಯೆಯನ್ನು ಹೋಗಲಾಡಿಸಲು ನಿಧಿಯು ತನ್ನಲ್ಲಿರುವ ಸ್ವಲ್ಪ ಚಿನ್ನದ ಸಂಗ್ರಹವನ್ನೂ ಮಾರಾಟ ಮಾಡಿ ವಿರಳ ನಾಣ್ಯವನ್ನು ಪಡೆಯುವ ತುರ್ತು ಕ್ರಮಗಳನ್ನು ಅನುಸರಿಸಬೇಕೆಂದು ವಿಶ್ವಸಂಸ್ಥೆಯ ವ್ಯಾಪಾರ ಮತ್ತು ಅಭಿವೃದ್ಧಿಯ ಸಮಾವೇಶವು ಸಲಹೆ ಮಾಡಿದೆ. ಈ ಕ್ರಮದ ಮೂಲಕ ನಿಧಿಯ ಸಂಪನ್ಮೂಲಗಳು 7,000 ಕೋಟಿ ಡಾಲರುಗಳಿಗೆ ಹೆಚ್ಚಬಹುದೆಂದು ಅಂದಾಜು ಮಾಡಲಾಗಿದೆ. ಜಾಗ್ರತೆಯಾಗಿ ಈ ಕ್ರಮವನ್ನು ಕೈಗೊಂಡಪ್ಪೂ ನಿಧಿಯ ಪ್ರಗತಿಪರ ಕಾರ್ಯಾಚರಣೆಗೆ ಒಳ್ಳೆಯದು.

ಭಾರತ ಮತ್ತು ಅಂತರರಾಷ್ಟ್ರೀಯ ಹಣ ನಿಧಿ
(India and I.M.F)

ಅಂತರರಾಷ್ಟ್ರೀಯ ಹಣ ನಿಧಿ (I.M.F.)ಯನ್ನು ಸ್ಥಾಪಿಸಿದ ದೇಶಗಳಲ್ಲಿ ಭಾರತವೂ ಒಂದು. ಭಾರತವು ಅಧಿಕ ವಂತಿಗೆಯನ್ನು ಕೊಟ್ಟಿರುವುದರಿಂದ ಅದು ಇತ್ತೀಚೆಗೆ ಕಾರ್ಯಕಾರಿ ಮಂಡಳಿಯಲ್ಲಿ ಖಾಯಂ ಸ್ಥಾನವನ್ನು ಹೊಂದಿದೆ. ಅಂತರರಾಷ್ಟ್ರೀಯ ಹಣದ ರೂಪದಲ್ಲಿ

940 ದಶಲಕ್ಷ ಡಾಲರುಗಳಿದ್ದ ಭಾರತದ ವಂತಿಗೆಯನ್ನು ಈಗ 1617.50 ದಶಲಕ್ಷ ಎಸ್.ಡಿ.ಆರ್ಸ್.ಗೆ ಹೆಚ್ಚಿಸಲಾಗಿದೆ. ಭಾರತವು ನಿಧಿಯು ಅನುಸರಿಸುವ ಹಣಕಾಸಿನ ಹಾಗೂ ಸಾಲ ನೀತಿಗಳ ಮೇಲೆ ತನ್ನ ವಿಶೇಷ ಪ್ರಭಾವವನ್ನು ಬೀರಿದೆ. ಭಾರತವು ನಿಧಿಯ ಉದಾರವಾದ ಸಾಲದ ನೀತಿಯನ್ನು ಅನುಸರಿಸುವಂತೆ ಮಾಡಲು ಬಹಳ ಶ್ರಮಿಸಿರುತ್ತದೆ. ಭಾರತವು 1946ರಲ್ಲಿ ನಿಧಿಯ ಸದಸ್ಯತ್ವವನ್ನು ಪಡೆದ ನಂತರ ಅಮೇರಿಕೆಯ ಒಂದು ಡಾಲರಿಗೆ ಭಾರತದ 3.309 ರೂ.ಗಳೆಂದು ನಿಗದಿಯಾಯಿತು. ಜುಲೈ 1997ರಲ್ಲಿ 1 ಡಾಲರಿಗೆ ರೂ. 35.9. ಆಗಿತ್ತು. 2005ರಲ್ಲಿ ಅದು 1 ಡಾಲರಿಗೆ ರೂ. 45.7 ಆಗಿತ್ತು. ಜೂನ್ 2016ರಲ್ಲಿ ಅದು 1 ಡಾಲರಿಗೆ ರೂ. 67.07 ಆಗಿರುತ್ತದೆ.

ಭಾರತವು ಸಂದಾಯ ಶಿಲ್ಕಿನ ಕೊರತೆಯನ್ನು ನೀಗಿಸಿಕೊಳ್ಳಲು 1948-49ರಲ್ಲಿ ನಿಧಿಯಿಂದ 100 ದಶಲಕ್ಷ ಡಾಲರ್ ಸಾಲ ಪಡೆದುಕೊಂಡಿತು. ಈ ಸಾಲವನ್ನು 1956-57ರಲ್ಲಿ ಅದು ಮರುಪಾವತಿ ಮಾಡಿತು. ಭಾರತವು ಆರ್ಥಿಕ ಅಭಿವೃದ್ಧಿಯ ಮೂಲಕ ತನ್ನ ಸಂದಾಯ ಶಿಲ್ಕಿನಲ್ಲಿನ ಕೊರತೆಯನ್ನು ನೀಗಿಸಿಕೊಳ್ಳಲು ನಿಧಿಯೊಂದಿಗೆ 200 ದಶಲಕ್ಷ ಡಾಲರ್ ಸಾಲಕ್ಕಾಗಿ ಒಂದು ಒಪ್ಪಂದ ಮಾಡಿಕೊಂಡಿತು. ಭಾರತವು ನಿಧಿಯಿಂದ 1961ರಲ್ಲಿ 250 ದಶಲಕ್ಷ ಡಾಲರ್ ಮೌಲ್ಯದ ಸಾಲವನ್ನು 6 ವಿವಿಧ ಚಲಾವಣೆಯ ಹಣಗಳಲ್ಲಿ (ಕರೆನ್ಸಿಯಲ್ಲಿ) ಪಡೆದುಕೊಂಡಿತು. ಈ ಸಾಲವು ಭಾರತಕ್ಕೆ ವರದಾನವಾಯಿತು. ಭಾರತದ ಸಂದಾಯ ಶಿಲ್ಕಿನ ಕೊರತೆಯು 1965-66ರಲ್ಲಿ ತ್ವರಿತವಾಗಿ ಕಳವಳವನ್ನುಂಟು ಮಾಡುವಂತಾಯಿತು. ಭಾರತಕ್ಕೆ ಈ ಅವಧಿಯಲ್ಲಿ ತನ್ನ ಒಟ್ಟು ವಿದೇಶೀ ಸಾಲದ ಅಲ್ಪ ಭಾಗವನ್ನು ಮಾತ್ರ ಮರುಪಾವತಿ ಮಾಡಲು ಸಾಧ್ಯವಾಗುವ ಪ್ರಸಂಗ ಒದಗಿಬಂದಿತು. ಭಾರತದ ಈ ಪರಿಸ್ಥಿತಿಯನ್ನು ಅರಿತು ನಿಧಿಯು ಆಗ 300 ದಶಲಕ್ಷ ಡಾಲರ್ ಸಾಲವನ್ನು ನೀಡಿತು. ಈ ಮೊತ್ತವು ಭಾರತದ ಸಾಲಗಳಲ್ಲಿಯೇ ಅತ್ಯಂತ ಅಧಿಕವಾದುದಾಗಿತ್ತು.

"ವಿಶೇಷ ಹಣ ಪಡೆಯುವ ಹಕ್ಕು"ಗಳ ಮೂಲಕ ಭಾರತವು ನಿಧಿಯಿಂದ ಹಲವು ವಿಶೇಷ ಸವಲತ್ತುಗಳನ್ನು ಪಡೆದುಕೊಂಡಿರುತ್ತದೆ. ನಿಧಿಯು 326 ದಶಲಕ್ಷ ಮೌಲ್ಯದ ಎಸ್.ಡಿ.ಆರ್ಸ್. ಹಣ ಪಡೆಯುವ ಹಕ್ಕುಗಳನ್ನು ಭಾರತಕ್ಕೆ ಒದಗಿಸಿದೆ. ಭಾರತವು ಇದರೊಳಗಿಂದ ಕೆಲವೊಂದು ಭಾಗ ಹಣವನ್ನು ನಿಧಿಗೆ ಬಡ್ಡಿಯನ್ನು ಪಾವತಿಸಲು ಮತ್ತು ಹಲವು ಸಾಲಗಳನ್ನು ಮರುಪಾವತಿ ಮಾಡಲು ಉಪಯೋಗಿಸಿಕೊಂಡಿದೆ. ಭಾರತವು 1977ರಲ್ಲಿ 173 ದಶಲಕ್ಷ ಡಾಲರ್ ಮೌಲ್ಯದ ಎಸ್.ಡಿ.ಆರ್ಸ್.ಗಳನ್ನು ಹೊಂದಿತ್ತು.

ಇತ್ತೀಚೆಗೆ ಅತ್ಯಂತ ಅಧಿಕ ಪ್ರಮಾಣದ ಸಾಲವನ್ನು ಭಾರತವು ನಿಧಿಯಿಂದ ಪಡೆದಿರುತ್ತದೆ. ಭಾರತಕ್ಕೆ 1981ರಲ್ಲಿ ಅಂತರರಾಷ್ಟ್ರೀಯ ಹಣಕಾಸಿನ ನಿಧಿಯು ಸುಮಾರು 5.7 ಶತಕೋಟಿ ಡಾಲರುಗಳ ಅಂದರೆ ಸುಮಾರು 5,200 ಕೋಟಿ ರೂ.ಗಳ ಬೃಹತ್ತಮಾಣದ ಸಾಲವನ್ನು ನೀಡಿತ್ತು. ಇಷ್ಟು ಅತ್ಯಂತ ಅಧಿಕ ಮೊತ್ತದ ಸಾಲವನ್ನು ಭಾರತವು ತನ್ನ

ಅಮದು-ರಫ್ತುಗಳ ನಡುವಿನ ಬಾಕಿ ಕೊರತೆಯನ್ನು ಸರಿದೂಗಿಸಿಕೊಳ್ಳಲು ಕೇಳಿತ್ತು. ಈ ಸಾಲ ಸೌಲಭ್ಯದಿಂದ ಭಾರತದ ವಿದೇಶೀ ವಿನಿಮಯ ಪರಿಸ್ಥಿತಿಯು ಗಣನೀಯವಾಗಿ ಸುಧಾರಿಸಿತು.

ತಾನು ಸಾಲವಾಗಿ ಪಡೆದುಕೊಂಡಿರುವ ಹಣವನ್ನು ಭಾರತವು ನಿಯಮಗಳ ಅನ್ವಯ ಮರುಪಾವತಿ ಮಾಡಿತು. ನಿಧಿಯಿಂದ ಅತಿಹೆಚ್ಚು ಸಾಲ ಪಡೆದ ದೇಶಗಳಲ್ಲಿ ಭಾರತ ಮೂರನೆಯ ಸ್ಥಾನದಲ್ಲಿದೆ. ಪ್ರಥಮ ಹಾಗೂ ದ್ವಿತೀಯ ಸ್ಥಾನಗಳನ್ನು ಅಮೆರಿಕ ಹಾಗೂ ಇಂಗ್ಲೆಂಡ್ ಪಡೆದಿವೆ. ನಿಧಿಯು ಒದಗಿಸಿದ ಸಾಲದಿಂದ ಭಾರತಕ್ಕೆ ತನ್ನ ಅಭಿವೃದ್ಧಿ ಕಾರ್ಯಚಟುವಟಿಕೆಗಳನ್ನು ಮುನ್ನಡೆಸಿ ಕೊಂಡು ಹೋಗಲು ಸಾಧ್ಯವಾಗಿರುತ್ತದೆ. ನಿಧಿಯಿಂದ ಭಾರತಕ್ಕೆ ಬಹಳ ಪ್ರಯೋಜನವಾಗಿರುತ್ತದೆ.

B. ವಿಶ್ವ ಬ್ಯಾಂಕ್
ಅಥವಾ
ಪುನರ್ನಿರ್ಮಾಣ ಮತ್ತು ಅಭಿವೃದ್ಧಿಯ ಅಂತರರಾಷ್ಟ್ರೀಯ ಬ್ಯಾಂಕ್
(World Bank OR International Bank for Reconstruction and Development - IBRD)

1944ರ ಬ್ರೆಟ್ಟನ್ ವುಡ್ಸ್ ಸಮಾವೇಶದಲ್ಲಿ ಕೈಗೊಂಡ ನಿರ್ಣಯದ ಅನುಸಾರವಾಗಿ ಇನ್ನೊಂದು ಅಂತರರಾಷ್ಟ್ರೀಯ ಹಣಕಾಸಿನ ಸಂಸ್ಥೆಯಾದ ಪುನರ್ನಿರ್ಮಾಣ ಮತ್ತು ಅಭಿವೃದ್ಧಿಯ ಅಂತರರಾಷ್ಟ್ರೀಯ ಬ್ಯಾಂಕು ಡಿಸೆಂಬರ್ 1944ರಲ್ಲಿ ಅಸ್ತಿತ್ವಕ್ಕೆ ಬಂದಿತು. ಆದರೆ ಅದು ಜೂನ್ 1946ರಲ್ಲಿ ತನ್ನ ಕಾರ್ಯಾರಂಭ ಮಾಡಿತು. ಎರಡನೆಯ ಮಹಾಯುದ್ಧದಿಂದ ನಾಶವಾಗಿದ್ದ ಆರ್ಥಿಕತೆಗಳ ಪುನರ್ನಿರ್ಮಾಣ ಮತ್ತು ಅವುಗಳ ಅಭಿವೃದ್ಧಿಗೆ ದೀರ್ಘಾವಧಿಯ ನೆರವನ್ನು ಒದಗಿಸುವ ಧ್ಯೇಯದಿಂದ ಈ ಸಂಸ್ಥೆಯು ಸ್ಥಾಪನೆಗೊಂಡಿತು. ಇದನ್ನು ಸಂಕ್ಷಿಪ್ತವಾಗಿ ವಿಶ್ವ ಬ್ಯಾಂಕು (World Bank) ಎಂದು ಕರೆಯಲಾಗುತ್ತದೆ.

ವಿಶ್ವ ಬ್ಯಾಂಕು ನಿಜವಾದ ಅರ್ಥದಲ್ಲಿ ಒಂದು ಬ್ಯಾಂಕೇ ಅಲ್ಲ ಎಂದು ಹೇಳಬಹುದು. ಏಕೆಂದರೆ, ಯಾವುದೇ ಒಬ್ಬ ವ್ಯಕ್ತಿಯು ಇದರಲ್ಲಿ ಖಾತೆಯನ್ನು ತೆರೆಯುವುದಿಲ್ಲ ಮತ್ತು ಸಾಲಗಳನ್ನು ಪಡೆಯುವುದಿಲ್ಲ. ಆದರೆ ಬ್ಯಾಂಕು ಅಭಿವೃದ್ಧಿಶೀಲ ಹಾಗೂ ಸಂಕ್ರಮಣ ಸ್ಥಿತಿಯ ದೇಶಗಳಲ್ಲಿ ಬಡತನ ನಿವಾರಣೆಗಾಗಿ ಆ ದೇಶಗಳ ಸರ್ಕಾರಗಳಿಗೆ ಮತ್ತು ಖಾಸಗಿ ವಲಯಗಳಿಗೆ ಸಾಲಗಳನ್ನು, ಅನುದಾನವನ್ನು ಮತ್ತು ತಾಂತ್ರಿಕ ಸಲಹೆಗಳನ್ನು ಒದಗಿಸುತ್ತದೆ.

ವಿಶ್ವ ಬ್ಯಾಂಕು ಪ್ರಾರಂಭದಲ್ಲಿ ಎರಡನೆಯ ಮಹಾಯುದ್ಧದಿಂದ ನಾಶಹೊಂದಿದ ಯೂರೋಪಿನ ಮಿತ್ರಿತರ ರಾಷ್ಟ್ರಗಳ ಪುನರ್ನಿರ್ಮಾಣಕ್ಕೆ ನೆರವು ನೀಡುವ ಉದ್ದೇಶದಿಂದ ಸ್ಥಾಪನೆಯಾದರೂ ಸಹ, ಬಡತನ ನಿವಾರಣೆಯು ಇಂದು ಅದರ ಧ್ಯೇಯವಾಗಿರುತ್ತದೆ. ಅದು ಕೃಷಿ, ವ್ಯಾಪಾರ, ಆರೋಗ್ಯ, ಶಿಕ್ಷಣ, ಇಂಧನ ಮತ್ತು ಗಣಿಗಾರಿಕೆಯಂತಹ ಹಲವು

ಚಟುವಟಿಕೆಗಳಿಗೆ ಪ್ರತಿವರ್ಷ ಸುಮಾರು 24 ಶತಕೋಟಿ ಡಾಲರುಗಳ ನೆರವನ್ನು ಸದಸ್ಯದೇಶಗಳಿಗೆ ಒದಗಿಸುತ್ತಿದೆ.

ಧ್ಯೇಯೋದ್ದೇಶಗಳು (ಕಾರ್ಯಗಳು)
[Objectives (Functions)]

ವಿಶ್ವ ಬ್ಯಾಂಕಿನ ಪ್ರಮುಖ ಧ್ಯೇಯೋದ್ದೇಶಗಳು ಕೆಳಕಂಡಂತಿವೆ.

1. **ಆರ್ಥಿಕ ವ್ಯವಸ್ಥೆಗಳ ಪುನರ್‌ರಚನೆ** (Recontruction of Economies): ಎರಡನೆಯ ಮಹಾಯುದ್ಧದಿಂದ ದುರವಸ್ಥೆಗೀಡಾದ ಅಥವಾ ನಾಶವಾದ ರಾಷ್ಟ್ರಗಳ ಆರ್ಥಿಕ ವ್ಯವಸ್ಥೆಯನ್ನು ಪುನರ್‌ರಚಿಸಲು ನೆರವನ್ನು ಒದಗಿಸುವುದು.
2. **ಸದಸ್ಯ ರಾಷ್ಟ್ರಗಳ ದೀರ್ಘಾವಧಿಯ ಅಭಿವೃದ್ಧಿಗೆ ನೆರವು ಒದಗಿಸುವುದು** (Assistance for Long-term Development of Member Countries): ಸದಸ್ಯ ರಾಷ್ಟ್ರಗಳ ದೀರ್ಘಾವಧಿಯ ಅಭಿವೃದ್ಧಿ ಸಾಧನೆಗೆ ಹಣಕಾಸಿನ ನೆರವನ್ನು ಒದಗಿಸುವುದು ವಿಶ್ವಬ್ಯಾಂಕಿನ ಮತ್ತೊಂದು ಧ್ಯೇಯೋದ್ದೇಶವಾಗಿದೆ.
3. **ಉತ್ಪಾದಕ ಉದ್ದೇಶಗಳಿಗೆ ಹೂಡಿಕೆಯನ್ನು ಹೆಚ್ಚಿಸುವುದು** (Increasing Investment for Productive Purposes) : ಉತ್ಪಾದಕ ಉದ್ದೇಶಗಳಿಗೆ ಬಂಡವಾಳದ ಹೂಡಿಕೆಯನ್ನು ಹೆಚ್ಚಿಸಲು ಅನುಕೂಲಕರ ವಾತಾವರಣ ನಿರ್ಮಿಸುವ ಮೂಲಕ ಸದಸ್ಯ ರಾಷ್ಟ್ರಗಳಲ್ಲಿ ಆದಾಯ ಮತ್ತು ಜೀವನ ಮಟ್ಟವನ್ನು ವೃದ್ಧಿಸುವುದು.
4. **ವಿದೇಶೀ ಖಾಸಗಿ ಹೂಡಿಕೆಯನ್ನು ಹೆಚ್ಚಿಸುವುದು** (Increasing Foreign Private Investment): ಜಾಮೀನಿನ ಮೂಲಕ ಖಾಸಗಿ ಹೂಡಿಕೆದಾರರಿಗೆ ಸಾಲ ದೊರಕಿಸಿಕೊಡುವ ಮತ್ತು ಖಾಸಗಿ ಹೂಡಿಕೆಗೆ ತನ್ನ ಸ್ವಂತ ಬಂಡವಾಳದ ಸಹಭಾಗಿತ್ವವನ್ನು ಒದಗಿಸುವ ಮುಖಾಂತರ ಜಗತ್ತಿನಾದ್ಯಂತ ವಿದೇಶೀ ಖಾಸಗಿ ಹೂಡಿಕೆಯನ್ನು ಹೆಚ್ಚಿಸುವುದು.
5. **ಅಂತರರಾಷ್ಟ್ರೀಯ ವ್ಯಾಪಾರದ ಸಮತೂಕದ ಪ್ರಗತಿಯನ್ನು ಸಾಧಿಸುವುದು** (Achieving Balanced Progress of International Trade): ಸದಸ್ಯ ರಾಷ್ಟ್ರಗಳ ಉತ್ಪಾದಕ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಲು ಅಂತರ ರಾಷ್ಟ್ರೀಯ ಹೂಡಿಕೆಗೆ ಪ್ರೋತ್ಸಾಹ ನೀಡುವುದಕ್ಕಾಗಿ ಅಂತರರಾಷ್ಟ್ರೀಯ ವ್ಯಾಪಾರದ ದೀರ್ಘಕಾಲೀನ ಸಮತೂಕದ ಪ್ರಗತಿಯನ್ನು ಸಾಧಿಸುವುದು ಹಾಗೂ ಸಂದಾಯ ಶಿಲ್ಕಿನ ಸಮತೋಲನವನ್ನು ಕಾಪಾಡುವುದು ಮತ್ತು ಆ ಮೂಲಕ

ಸದಸ್ಯ ರಾಷ್ಟ್ರಗಳಲ್ಲಿ ಉತ್ಪಾದಕತೆ ಮತ್ತು ಕಾರ್ಮಿಕರ ಜೀವನಮಟ್ಟವನ್ನು ಹೆಚ್ಚಿಸುವುದು.

ರಚನೆ
(Structure)

ವಿಶ್ವಬ್ಯಾಂಕಿನ ಆಡಳಿತದ ಉನ್ನತ ಸಂಸ್ಥೆಯು ಕಾರ್ಯಪಾಲರ ಮಂಡಳಿಯಾಗಿದೆ (Board of Governors). ಈ ಮಂಡಳಿಯಲ್ಲಿ ಪ್ರತಿಯೊಂದು ಸದಸ್ಯ ರಾಷ್ಟ್ರವೂ ಒಬ್ಬ ಪ್ರತಿನಿಧಿಯನ್ನು ಹೊಂದಿರುತ್ತದೆ. ಈ ಮಂಡಳಿಯು ವರ್ಷಕ್ಕೊಮ್ಮೆ ಸಭೆ ಸೇರುತ್ತದೆ. ಬ್ಯಾಂಕಿನ ದೈನಂದಿನ ಆಡಳಿತ ವ್ಯವಹಾರಗಳನ್ನು ನೋಡಿಕೊಳ್ಳಲು ಕಾರ್ಯನಿರ್ವಾಹಕ ನಿರ್ದೇಶಕರ ಮಂಡಳಿ (Board of Executive Directors) ಇದೆ. ಕಾರ್ಯಪಾಲಕರ ಮಂಡಳಿಯು ತನ್ನ ಅನೇಕ ಕಾರ್ಯಗಳನ್ನು ಕಾರ್ಯನಿರ್ವಾಹಕ ನಿರ್ದೇಶಕರ ಮಂಡಳಿಗೆ ನಿಯೋಜಿಸಿದೆ. ಈ ಮಂಡಳಿಯು ತಿಂಗಳಿಗೊಮ್ಮೆ ಸಭೆ ಸೇರುತ್ತದೆ. ಇದರಲ್ಲಿ 21 ಜನ ನಿರ್ದೇಶಕರಿದ್ದಾರೆ. ಇವರಲ್ಲಿ ಆರು ಜನರು ಖಾಯಂ ನಿರ್ದೇಶಕರು ಇರುತ್ತಾರೆ. ಅತಿ ಹೆಚ್ಚು ಪಂತಿಗೆ ನೀಡಿರುವ ಅಮೇರಿಕೆಯ ಸಂಯುಕ್ತ ಸಂಸ್ಥಾನ, ಇಂಗ್ಲೆಂಡ್, ಪಶ್ಚಿಮ ಜರ್ಮನಿ, ಫ್ರಾನ್ಸ್, ಜಪಾನ್ ಮತ್ತು ಭಾರತ ಈ ಆರು ರಾಷ್ಟ್ರಗಳು ಖಾಯಂ ನಿರ್ದೇಶಕರನ್ನು ನೇಮಿಸುತ್ತವೆ. ಉಳಿದ 15 ಜನ ನಿರ್ದೇಶಕರನ್ನು ಇತರ ಎಲ್ಲ ಸದಸ್ಯ ರಾಷ್ಟ್ರಗಳು ಎರಡು ವರ್ಷಗಳ ಅವಧಿಗೆ ಚುನಾಯಿಸುತ್ತವೆ. ಪ್ರತಿಯೊಂದು ಸದಸ್ಯ ರಾಷ್ಟ್ರವು ತನ್ನ ಪಂತಿಗೆಯ ಪ್ರಮಾಣಕ್ಕನುಗುಣವಾಗಿ ಮತವನ್ನು ಚಲಾಯಿಸುತ್ತದೆ. 1977ರಲ್ಲಿ ಬ್ಯಾಂಕಿನ ಸದಸ್ಯ ರಾಷ್ಟ್ರಗಳ ಸಂಖ್ಯೆ 132 ಆಗಿದ್ದಿತು. ನಂತರ ಅಕ್ಟೋಬರ್ 1980ರಲ್ಲಿ ಅದರ ಸಂಖ್ಯೆಯು 141ಕ್ಕೂ ಹಾಗೂ 1988ರಲ್ಲಿ 144ಕ್ಕೆ, 2000ರಲ್ಲಿ 182ಕ್ಕೆ ಮತ್ತು 2008ರಲ್ಲಿ 185ಕ್ಕೆ ಏರಿತು.

ನಿರ್ದೇಶಕರೆಲ್ಲರಿಂದ ಚುನಾಯಿತನಾದ ಒಬ್ಬ ಅಧ್ಯಕ್ಷನಿರುತ್ತಾನೆ. ಅಧ್ಯಕ್ಷನು ಬ್ಯಾಂಕಿನ ದೈನಂದಿನ ಕಾರ್ಯಕಲಾಪಗಳನ್ನು ನೋಡಿಕೊಳ್ಳುವುದೇ ಅಲ್ಲದೆ ಸಾಲ ನೀಡಿಕೆ ಹಾಗೂ ಬ್ಯಾಂಕಿನ ನೀತಿಯ ಕುರಿತು ಕಾರ್ಯನಿರ್ವಾಹಕ ನಿರ್ದೇಶಕರ ಮಂಡಳಿಗೆ ಸಲಹೆಗಳನ್ನು ನೀಡುವ ಜವಾಬ್ದಾರಿ ಹೊಂದಿರುತ್ತಾನೆ. ಅಧ್ಯಕ್ಷನಿಗೆ ನೆರವಾಗಲು ಬ್ಯಾಂಕಿನ ಅನೇಕ ಸಮಿತಿಗಳಿವೆ. ಸಾಲದ ವಿಚಾರಣೆಯ ಕಾರ್ಯವು ಈ ಸಮಿತಿಗೆ ಸೇರಿದೆ.

ಸಂಪನ್ಮೂಲಗಳು
(Resources)

ವಿಶ್ವಬ್ಯಾಂಕಿನ ಪ್ರಾರಂಭದ ಬಂಡವಾಳವು 1000 ಕೋಟಿ ಡಾಲರುಗಳಷ್ಟಿತ್ತು. ಪ್ರಸ್ತುತದಲ್ಲಿ ಇದು ಸುಮಾರು 26,000 ಕೋಟಿ ಡಾಲರುಗಳಷ್ಟಿದೆ. ಪ್ರತಿಯೊಂದು ಸದಸ್ಯ

ರಾಷ್ಟ್ರವೂ ತನ್ನ ಆರ್ಥಿಕ ಸಾಮರ್ಥ್ಯಕ್ಕನುಗುಣವಾಗಿ ವಂತಿಗೆಯನ್ನು ನೀಡಬೇಕಾಗಿದೆ. ಅಮೇರಿಕಾವು ಅತ್ಯಂತ ಹೆಚ್ಚಿನ ವಂತಿಗೆಯನ್ನು ಹೊಂದಿರುವ ರಾಷ್ಟ್ರವಾಗಿದೆ. ಭಾರತವು ಅತಿ ಹೆಚ್ಚು ವಂತಿಗೆ ಹೊಂದಿರುವ ಐದನೆಯ ರಾಷ್ಟ್ರವಾಗಿದೆ. ಇಂಗ್ಲೆಂಡ್, ಪಶ್ಚಿಮ ಜರ್ಮನಿ ಮತ್ತು ಫ್ರಾನ್ಸ್ ಕ್ರಮವಾಗಿ ಅತಿ ಹೆಚ್ಚು ವಂತಿಗೆ ಹೊಂದಿರುವ ಎರಡನೆಯ, ಮೂರನೆಯ ಮತ್ತು ನಾಲ್ಕನೆಯ ರಾಷ್ಟ್ರಗಳಾಗಿವೆ. ಪ್ರತಿಯೊಂದು ಸದಸ್ಯ ರಾಷ್ಟ್ರವು ತನ್ನ ವಂತಿಕೆಯ ಶೇಕಡ 2ರಷ್ಟನ್ನು ಚಿನ್ನ ಅಥವಾ ಅಮೇರಿಕಾದ ಡಾಲರಿನಲ್ಲಿ ಮತ್ತು ಶೇಕಡ 18ರಷ್ಟನ್ನು ಸ್ವದೇಶೀ ನಾಣ್ಯದಲ್ಲಿ ನೀಡಬೇಕು. ಉಳಿದ ಶೇಕಡ 80ರಷ್ಟನ್ನು ಸದಸ್ಯ ರಾಷ್ಟ್ರಗಳು ತಮ್ಮ ಬಳಿಯಲ್ಲಿಯೇ ಇರಿಸಿಕೊಂಡು, ಬ್ಯಾಂಕು ಅಪೇಕ್ಷಿಸಿದಾಗ ನೀಡಬೇಕಾಗಿದೆ. ವಂತಿಗೆಯ ಹಣ ಮತ್ತು ಬಂಡವಾಳ ಮಾರುಕಟ್ಟೆಯಲ್ಲಿ ಎತ್ತುವ ಸಾಲಗಳಿಂದ ದೊರೆಯುವ ಸಂಪನ್ಮೂಲಗಳನ್ನು ಬಳಸಿಕೊಂಡು ಬ್ಯಾಂಕು ಸದಸ್ಯ ರಾಷ್ಟ್ರಗಳಿಗೆ ಸಾಲಗಳನ್ನು ನೀಡುತ್ತದೆ. ಪ್ರಸ್ತುತದಲ್ಲಿ ಬ್ಯಾಂಕಿನ ಪ್ರಾಧಿಕೃತ ಬಂಡವಾಳವು 18,400 ಕೋಟಿ ಡಾಲರುಗಳಾಗಿರುತ್ತದೆ.

ಪಟ್ಟಿ 4.1

ವಿಶ್ವ ಬ್ಯಾಂಕಿನ ಸಂಪನ್ಮೂಲಗಳ ವಿವರ

1960ರಲ್ಲಿ ಹಾಗೂ 1992ರಲ್ಲಿ ಇದ್ದಂತೆ (ದಶಲಕ್ಷ ಡಾಲರುಗಳಲ್ಲಿ)

	1960ರಲ್ಲಿ	1992ರಲ್ಲಿ
ಒಟ್ಟು ಸದಸ್ಯ ದೇಶಗಳ ಸಂಖ್ಯೆ	68	144
ಒಟ್ಟು ಮಂಜೂರಾದ ಸಾಲಗಳ ಸಂಖ್ಯೆ	31	1160
ಒಟ್ಟು ಸಾಲಗಳ ಮೊತ್ತ	659	31600
ನೀಡಿದ ಸಾಲಗಳ ಒಟ್ಟು ಮೊತ್ತ	554	4815
ನಿವ್ವಳ ಆದಾಯ	59	680
ಒಟ್ಟು ಕಾಯ್ದಿಟ್ಟ ನಿಧಿ	506	4000
ಬ್ಯಾಂಕು ಎತ್ತಿದ ಸಾಲದ ಮೊತ್ತ	187	4120
ತೆತ್ತ ಬಂಡವಾಳ	19308	46000

ಸಾಲ ನೀಡುವಾಗ ಅನುಸರಿಸುವ ಮಾರ್ಗದರ್ಶಿ ತತ್ವಗಳು
(Guiding Principles Adopted in Lending)

ಈ ಕೆಳಗೆ ನಮೂದಿಸಿದ ಮಾರ್ಗದರ್ಶಿ ತತ್ವಗಳ ಆಧಾರದ ಮೇಲೆ ವಿಶ್ವ ಬ್ಯಾಂಕು ಸದಸ್ಯ ರಾಷ್ಟ್ರಗಳಿಗೆ ಸಾಲ ನೀಡುತ್ತದೆ.

1. ಮರುಪಾವತಿ ಸಾಮರ್ಥ್ಯದ ನಿರ್ಣಯ (Decision about Repayment Capacity): ಮೊಟ್ಟಮೊದಲಿಗೆ ಸಾಲ ಪಡೆಯುವ ರಾಷ್ಟ್ರದ ಮರುಪಾವತಿ ಸಾಮರ್ಥ್ಯವನ್ನು ಬ್ಯಾಂಕು ನಿರ್ಣಯ ಮಾಡುತ್ತದೆ. ಅದಕ್ಕಾಗಿ ಆ ರಾಷ್ಟ್ರದ ನೈಸರ್ಗಿಕ ಸಂಪನ್ಮೂಲಗಳು, ಯಂತ್ರೋಪಕರಣಗಳು ಮತ್ತು ಉತ್ಪಾದನಾ ಸಾಮರ್ಥ್ಯವನ್ನು ಅಂದಾಜು ಮಾಡುವುದರ ಜೊತೆಗೆ ಅದರ ಹಳೆಯ ಸಾಲದ ದಾಖಲೆಗಳನ್ನು ಪರಿಶೀಲಿಸುತ್ತದೆ.

2. ಹೆಚ್ಚು ಆದ್ಯತೆಯ ಯೋಜನೆಗಳಿಗೆ ಸಾಲಗಳು (Loans to More Prioritised Schemes): ಹೆಚ್ಚು ಆದ್ಯತೆ ಪಡೆದಿರುವ ಮತ್ತು ಆರ್ಥಿಕಾಭಿವೃದ್ಧಿಗೆ ನೆರವಾಗುವಂತಹ ನಿರ್ದಿಷ್ಟ ಯೋಜನೆಗಳಿಗೆ ಮಾತ್ರ ಬ್ಯಾಂಕು ಸಾಲ ನೀಡುತ್ತದೆ. ಅದಕ್ಕನುಗುಣವಾಗಿ ಬ್ಯಾಂಕಿನ ಹೆಚ್ಚಿನ ಸಾಲಗಳು ಕೃಷಿ ಮತ್ತು ನೀರಾವರಿ ಅಭಿವೃದ್ಧಿ, ವಿದ್ಯುಚ್ಛಕ್ತಿಯ ಉತ್ಪಾದನೆ ಮತ್ತು ಸಾಗಣೆ ಸೌಕರ್ಯಗಳ ಬೆಳವಣಿಗೆಗೆ ನೀಡಲ್ಪಟ್ಟಿವೆ.

3. ವಿದೇಶೀ ವಿನಿಮಯದಷ್ಟು ಮಾತ್ರ ಸಾಲ (Loan Only to the Extent of Foreign Exchange): ಯಾವುದೇ ಯೋಜನೆಯನ್ನು ಅನುಷ್ಠಾನಗೊಳಿಸಲು ಎಷ್ಟು ವಿದೇಶೀ ವಿನಿಮಯ ಬೇಕಾಗುತ್ತದೆಯೋ ಅಷ್ಟು ಮೊತ್ತದ ಹಣದ ಸಾಲವನ್ನು ಮಾತ್ರ ಬ್ಯಾಂಕು ಒದಗಿಸುತ್ತದೆ. ಯೋಜನೆಯ ಒಟ್ಟು ವೆಚ್ಚದಲ್ಲಿ ಉಳಿದ ಮೊತ್ತವನ್ನು ಸದಸ್ಯ ರಾಷ್ಟ್ರವು ಸ್ವದೇಶೀ ಸಂಪನ್ಮೂಲಗಳಲ್ಲಿ ಬಳಸಿಕೊಳ್ಳಬೇಕು.

4. ದೇಶ ಬಂಧಿತ ಸಾಲದ ನಿರ್ಬಂಧವಿರುವದಿಲ್ಲ (No Restriction of Country-tied Loan): ತನ್ನಿಂದ ಪಡೆದ ಸಾಲದಿಂದ ಸದಸ್ಯ ರಾಷ್ಟ್ರವು ಇಂತಹುದೇ ದೇಶದಿಂದ ಸರಕುಗಳನ್ನು ತರಿಸಿಕೊಳ್ಳಬೇಕೆಂದು ಬ್ಯಾಂಕು ನಿರ್ಬಂಧ ವಿಧಿಸುವುದಿಲ್ಲ. ಸಾಲ ಪಡೆದ ದೇಶವು ತನಗೆ ಇಷ್ಟಬಂದ ದೇಶದಿಂದ ಸಾಧ್ಯವಾದಷ್ಟು ಕಡಿಮೆ ಬೆಲೆಯಲ್ಲಿ ಹೆಚ್ಚು ತೃಪ್ತಿದಾಯಕವಾದ ಸರಕುಗಳನ್ನು ಮತ್ತು ಯಂತ್ರೋಪಕರಣಗಳನ್ನು ತರಿಸಿಕೊಳ್ಳಬಹುದು.

5. ನಿರಂತರ ಸಂಬಂಧ (Countinuous Relationship): ಸಾಲ ಪಡೆದ ರಾಷ್ಟ್ರದ ಆರ್ಥಿಕ ಮತ್ತು ಹಣಕಾಸಿನ ಅಭಿವೃದ್ಧಿಯನ್ನು ವೀಕ್ಷಿಸಲು ಮತ್ತು ಯೋಜನೆಯ ಪ್ರಗತಿಯನ್ನು ಪರೀಕ್ಷಿಸಲು ಸಾಲವನ್ನು ನೀಡಿದ ನಂತರ ಬ್ಯಾಂಕು ಸಾಲ ಪಡೆದ ರಾಷ್ಟ್ರದೊಡನೆ ನಿರಂತರ ಸಂಬಂಧ ಇರಿಸಿಕೊಳ್ಳುತ್ತದೆ.

6. ಉದ್ಯಮಶೀಲತೆಯ ಬೆಳವಣಿಗೆಗೆ ವಿಶೇಷ ಗಮನ (Special Attention to Growth of Entrepreneurship): ಸಾಲ ಪಡೆದ ರಾಷ್ಟ್ರಗಳ ಖಾಸಗಿ ವ್ಯಕ್ತಿಗಳು ಯೋಜನೆಗಳಿಗೆ ಸಾಲ ನೀಡಲು ಮತ್ತು ಉದ್ಯಮಶೀಲತೆಯನ್ನು ಬೆಳೆಸಿಕೊಳ್ಳುವಂತೆ ಮಾಡಲು ಬ್ಯಾಂಕು ವಿಶೇಷ ಗಮನ ವಹಿಸುತ್ತದೆ.

ಸಾಲ ನೀಡಿಕೆಯ ಹಂತಗಳು
(Stages of Sanctioning Loan)

ಬ್ಯಾಂಕಿನ ಸಾಲ ನೀಡಿಕೆ ಮತ್ತು ಅದರ ಆಡಳಿತದಲ್ಲಿ ಸಾಲ್ಕು ಹಂತಗಳಿರುತ್ತವೆ.

1. ಪ್ರಾಥಮಿಕ ತನಿಖೆ (Primary Enquiry): ಇದು ಪರಿಶೋಧಕ ಚರ್ಚೆಯ ಮತ್ತು ಪ್ರಾಥಮಿಕ ತನಿಖೆಯ ಹಂತವಾಗಿದೆ. ಈ ಹಂತದಲ್ಲಿ ಸಾಲ ಮರುಪಾವತಿಯ ಸಾಮರ್ಥ್ಯದ ಕುರಿತು ಬ್ಯಾಂಕಿನ ಅಧಿಕಾರಿಗಳು ಮತ್ತು ಸಾಲ ಪಡೆಯುವವರ ನಡುವೆ ಚರ್ಚೆಗಳು ನಡೆಯುತ್ತವೆ. ಸಾಲ ಪಡೆಯುವ ರಾಷ್ಟ್ರಕ್ಕೆ ಮರುಪಾವತಿ ಮಾಡುವ ಸಾಮರ್ಥ್ಯವಿದೆಯೇ ಇಲ್ಲವೆ ಎಂದು ಬ್ಯಾಂಕು ಆಳವಾಗಿ ಪರಿಶೋಧಿಸುತ್ತದೆ. ಆ ರಾಷ್ಟ್ರವು ಇದೇ ಪ್ರಥಮ ಬಾರಿಗೆ ಸಾಲ ಕೇಳುವುದಾದರೆ ಆ ರಾಷ್ಟ್ರದ ಸಂಪನ್ಮೂಲಗಳು, ಆರ್ಥಿಕ ಬೆಳವಣಿಗೆಯ ಹಂತ, ಸಂದಾಯ ಶಿಲ್ಕಿನ ಪರಿಸ್ಥಿತಿ ಮೊದಲಾದ ಸಂಗತಿಗಳ ಬಗ್ಗೆ ಅಧ್ಯಯನ ನಡೆಸಲು ಬ್ಯಾಂಕು ಒಂದು ನಿಯೋಗವನ್ನು ಕಳುಹಿಸುತ್ತದೆ. ಪಡೆದ ಸಾಲವನ್ನು ರಾಷ್ಟ್ರವು ಸರಿಯಾಗಿ ಉಪಯೋಗಿಸಿ ಕೊಳ್ಳಬಹುದೆ, ಇಲ್ಲವೇ ಮತ್ತು ಅದಕ್ಕೆ ಸಾಲ ಮರುಪಾವತಿಯ ಸಾಮರ್ಥ್ಯ ಇದೆಯೇ ಇಲ್ಲವೇ ಎಂಬ ಸಂಗತಿಗಳ ಕುರಿತು ನಿಯೋಗವು ನೀಡುವ ವರದಿಯನ್ನು ಆಧರಿಸಿ ಬ್ಯಾಂಕು ಸಾಲ ನೀಡಬಹುದು ಅಥವಾ ನೀಡದಿರಬಹುದು. ಮೊದಲೇ ಸಾಲವನ್ನು ಪಡೆದ ರಾಷ್ಟ್ರವಾಗಿದ್ದು ಅದರ ಎಲ್ಲಾ ಅಂಶಗಳ ಬಗ್ಗೆ ಬ್ಯಾಂಕಿನಲ್ಲಿ ಮಾಹಿತಿ ಇದ್ದರೆ ಪ್ರಸ್ತುತದಲ್ಲಿ ಅದರ ಇತ್ತೀಚಿನ ಆರ್ಥಿಕಾಭಿವೃದ್ಧಿಯನ್ನು ಮಾತ್ರ ಪರಿಶೀಲಿಸಲಾಗುವುದು.

2. ಪರಿಶೋಧನೆ (Investigation): ಪ್ರಾಥಮಿಕ ತನಿಖೆಯಲ್ಲಿ ನಿಯೋಗವು ತೃಪ್ತಿಹೊಂದಿದರೆ ನಂತರ ಎರಡನೆಯ ಹಂತವು ಪ್ರಾರಂಭವಾಗುತ್ತದೆ. ಯಾವ ಯೋಜನೆಯನ್ನು ಕಾರ್ಯಗತಗೊಳಿಸಲು ಸಾಲ ಕೇಳಲಾಗಿದೆಯೋ ಆ ನಿರ್ದಿಷ್ಟ ಯೋಜನೆಯ ತಾಂತ್ರಿಕ, ಹಣಕಾಸಿನ ಮತ್ತು ಆಡಳಿತದ ಸಂಗತಿಗಳನ್ನು ನಿಯೋಗವು ಪರಿಶೋಧಿಸುತ್ತದೆ. ಯೋಜನೆಯನ್ನು ಸರಿಯಾಗಿ ರೂಪಿಸಲಾಗಿದೆಯೇ ಇಲ್ಲವೇ, ಸ್ವದೇಶೀ ಬಂಡವಾಳವು ಅಗತ್ಯ ಪ್ರಮಾಣದಲ್ಲಿ ಒದಗುತ್ತದೆಯೇ ಇಲ್ಲವೇ ಎಂಬ ವಿಚಾರಗಳನ್ನು ಈ ಹಂತದಲ್ಲಿ ತನಿಖೆ ಮಾಡಲಾಗುತ್ತದೆ.

3. ಸಾಲದ ಷರತ್ತುಗಳ ನಿರ್ಧಾರ (Determination of Conditions of Loan): ಮೂರನೆಯ ಹಂತವು ಸಾಲದ ಷರತ್ತುಗಳ ನಿರ್ಧಾರಕ್ಕೆ ಸಂಬಂಧಿಸಿದೆ. ಸಾಲದ ಮೊತ್ತ, ಬಡ್ಡಿಯ ದರ, ಸಾಲ ನೀಡಿಕೆಗೆ ಪ್ರತಿಯಾಗಿ ಪಡೆಯಬೇಕಾದ ಜಾಮೀನು ಮತ್ತು ಭದ್ರತೆ, ಸಾಲದ ಅವಧಿ ಮುಂತಾದವುಗಳನ್ನು ಈ ಹಂತದಲ್ಲಿ ನಿರ್ಧರಿಸಲಾಗುತ್ತದೆ.

4. ಸಾಲದ ನಿರ್ವಹಣೆ (Management of Loan): ನಾಲ್ಕನೆಯ ಮತ್ತು ಕೊನೆಯ ಹಂತವು ಸಾಲದ ನಿರ್ವಹಣೆಗೆ ಸೇರಿದುದಾಗಿದೆ. ಸಾಲದ ಒಪ್ಪಂದದ ಪ್ರಕಾರ ಯಾವ

ಉದ್ದೇಶಕ್ಕಾಗಿ ಸಾಲ ಪಡೆಯಲಾಗಿದೆಯೋ ಆ ಉದ್ದೇಶಕ್ಕೆ ಸಾಲದ ಹಣವನ್ನು ಬಳಸಲಾಗುತ್ತಿದೆಯೇ ಇಲ್ಲವೇ ಎಂಬುದನ್ನು ಪರಿಶೋಧಿಸಲು ಬ್ಯಾಂಕಿನ ಪ್ರತಿನಿಧಿಗಳು ಸಾಲ ಪಡೆದ ರಾಷ್ಟ್ರಕ್ಕೆ ಭೇಟಿ ನೀಡುತ್ತಾರೆ ಮತ್ತು ಯೋಜನೆಯ ಪ್ರಗತಿಯ ಬಗ್ಗೆ ಸಾಲಗಾರ ರಾಷ್ಟ್ರದಿಂದ ಬ್ಯಾಂಕು ಆಗಾಗ್ಗೆ ವರದಿಗಳನ್ನು ತರಿಸಿಕೊಳ್ಳುತ್ತದೆ.

ಪಟ್ಟಿ 4.2

ವಿಶ್ವ ಬ್ಯಾಂಕಿನ ಅಭಿವೃದ್ಧಿ ಸಾಲ

(2006ರ ವರೆಗೆ ನೀಡಿದ ವಿವರ)	(ದಶಲಕ್ಷ ಡಾಲರುಗಳಲ್ಲಿ)
ಕೃಷಿ ಹಾಗೂ ನೀರಾವರಿ	14,700
ಕೈಗಾರಿಕೆಗಳು	8,900
ವಿದ್ಯುತ್ ಉತ್ಪಾದನೆ	14,670
ಸಾರಿಗೆ ಸಂಪರ್ಕಗಳು	19,100
ಟೆಲಿಕಮ್ಯುನಿಕೇಷನ್	18,600
ಯೋಜನೇತರ ಸಾಲ	8,300
ಜನಸಂಖ್ಯಾ ನಿಯಂತ್ರಣ	5600
ಶಿಕ್ಷಣ	5,850
ಪ್ರವಾಸೋದ್ಯಮ	2,100
ತಾಂತ್ರಿಕ ಸಹಾಯ	1,200
ನೀರಿನ ಪೂರೈಕೆ	5,100
ನಗರೀಕರಣ	3,840
ಇತರೆ	1,400
ಒಟ್ಟು ದಶಲಕ್ಷ ಡಾಲರುಗಳು	**1,09,360**

ವಿಶ್ವಬ್ಯಾಂಕಿನ ನವಪ್ರವರ್ತನೆಗಳು
(Initiatives of the World Bank)

ವಿಶ್ವ ಬ್ಯಾಂಕು ಇತ್ತೀಚೆಗೆ ಹಮ್ಮಿಕೊಂಡಿರುವ ಹೊಸ ಯೋಜನೆಗಳು ಕೆಳಗಿನಂತಿವೆ.

1. ಬಡತನ ಕಡಿಮೆ ಮಾಡುವಿಕೆಯ ಕಾರ್ಯತಂತ್ರಗಳು (Poverty Reduction Strategies): ಬಡತನವನ್ನು ತಗ್ಗಿಸುವ ಕಾರ್ಯತಂತ್ರಗಳಿಗಾಗಿಯೇ ಬ್ಯಾಂಕು ಜಗತ್ತಿನಲ್ಲಿ ಕಡುಬಡತನದಲ್ಲಿರುವ ದೇಶಗಳಿಗೆ ನೆರವನ್ನು ಒದಿಸುತ್ತದೆ. ಸಾಲ ಪಡೆಯುವ ದೇಶದ ಹಣಕಾಸಿನ ಮತ್ತು ಪರಿಸ್ಥಿತಿಯನ್ನು ವ್ಯಾಪಕವಾಗಿ ವಿಶ್ಲೇಷಿಸುವ ಮತ್ತು ಸ್ಥಳೀಯ ಗುಂಪುಗಳ ಅಭಿಪ್ರಾಯವನ್ನು ಸಂಗ್ರಹಿಸುವ ಮೂಲಕ ವಿಶ್ವಬ್ಯಾಂಕು ಆ ದೇಶದ

ಆವ್ಯತೆಗಳನ್ನು ಗುರುತಿಸಿ ಬಡತನ ನಿವಾರಣೆಗಾಗಿ ಸಾಲಗಳನ್ನು ಒದಗಿಸುತ್ತದೆ.

2. ಸ್ವಚ್ಛ ತಂತ್ರಜ್ಞಾನ ನಿಧಿ ನಿರ್ವಹಣೆ (Clean Technology Fund Management): ವಿಶ್ವ ಬ್ಯಾಂಕಿಗೆ ಸ್ವಚ್ಛ ತಂತ್ರಜ್ಞಾನ ನಿಧಿಯ ತಾತ್ಕಾಲಿಕ ನಿರ್ವಹಣೆಯ ಜವಾಬ್ದಾರಿಯನ್ನು ವಹಿಸಲಾಗಿರುತ್ತದೆ. ಪುನರುಜ್ಜೀವನಗೊಳಿಸಬಹುದಾದ ಇಂಧನ ಉತ್ಪಾದನೆಯನ್ನು ಸ್ಪರ್ಧಾತ್ಮಕವಾಗಿ, ಕಡಿಮೆ ವೆಚ್ಚದಲ್ಲಿ ಉತ್ಪಾದಿಸಲು ಒತ್ತು ನೀಡುವುದು ಈ ಯೋಜನೆಯ ಧ್ಯೇಯವಾಗಿರುತ್ತದೆ.

3. ಸ್ವಚ್ಛ ಗಾಳಿ ಆರಂಭಿಕತೆ (Clean Air Initiative): ನಗರಗಳಲ್ಲಿ ಗಾಳಿಯ ಗುಣಮಟ್ಟವನ್ನು ಸುಧಾರಿಸಲು ಉಪಕ್ರಮ ಮಾರ್ಗಗಳಿಗೆ ಬೆಂಬಲ ನೀಡಲು ಈ ಯೋಜನೆಯನ್ನು ಕಾರ್ಯಾಚರಣೆಗೆ ತರಲಾಗಿದೆ. ಜಗತ್ತಿನ ಕೆಲವು ಆಯ್ದ ಪ್ರದೇಶಗಳಲ್ಲಿ ಜ್ಞಾನವನ್ನು ಮತ್ತು ಅನುಭವವನ್ನು ಹಂಚಿಕೊಳ್ಳುವ ಮೂಲಕ ಮತ್ತು ಸಹಭಾಗಿತ್ವದ ಮುಖಾಂತರ ಇದನ್ನು ಸಾಧಿಸಲು ಉದ್ದೇಶಿಸಲಾಗಿದೆ. ವಿದ್ಯುಚ್ಚಾಲಿತ ವಾಹನಗಳನ್ನು ಪರಿಚಯಿಸುವಿಕೆಯನ್ನು ಇದು ಒಳಗೊಳ್ಳುತ್ತದೆ.

ಬ್ಯಾಂಕಿನ ಕಾರ್ಯಸಾಧನೆಗಳ ಮೌಲ್ಯಮಾಪನ
(Evaluation of World Bank's Achievements)

ಯುದ್ಧೋತ್ತರ ಪುನರ್ ನಿರ್ಮಾಣ ಮತ್ತು ಬಡದೇಶಗಳ ಅಭಿವೃದ್ಧಿಗೆ ಬ್ಯಾಂಕು ಸಲ್ಲಿಸಿರುವ ಸೇವೆ ಗಣನೀಯವಾದುದು. ಅದು ಹಲವಾರು ವಿಧದ ಯೋಜನೆಗಳಿಗೆ ಸಾಲ ನೀಡುತ್ತದೆ. ತನ್ನ ಸಂಪನ್ಮೂಲಗಳು ಕೊರತೆಯಿಂದಿರುವುದರಿಂದ ಮತ್ತು ಎಲ್ಲಾ ಯೋಜನೆಗಳಿಗೂ ಸಾಲ ನೀಡಲು ಸಾಧ್ಯವಾಗದೇ ಇರುವುದರಿಂದ ಬ್ಯಾಂಕು ಕೆಲವು ಅಂಗಸಂಸ್ಥೆಗಳನ್ನು ಸ್ಥಾಪಿಸಿದೆ. ಪ್ರತಿಯೊಂದು ಸದಸ್ಯ ರಾಷ್ಟ್ರವು ತನ್ನ ವಂತಿಗೆಯ ಶೇಕಡ20ರಷ್ಟನ್ನು ಬ್ಯಾಂಕಿನಿಂದ ಸಾಲ ಪಡೆಯಬಹುದಾಗಿದೆ. 2006ರ ವರೆಗೆ ಸುಮಾರು 1,85,000 ದಶಲಕ್ಷ ಡಾಲರುಗಳ ಮೊತ್ತದ 2530 ಸಾಲಗಳನ್ನು ಬ್ಯಾಂಕು ನೀಡಿದೆ. ಅಂತರರಾಷ್ಟ್ರೀಯ ಹಣಕಾಸಿನ ನಿಧಿಗಿಂತಲೂ ಬ್ಯಾಂಕು ಸ್ತುತ್ಯಾರ್ಹವಾದ ಕಾರ್ಯ ಸಾಧಿಸಿದೆ.

2020ರಿಂದ ತೀವ್ರವಾದ ಆರ್ಥಿಕ ದುಸ್ಥಿತಿಗೆ ಈಡಾಗಿದ್ದ ಶ್ರೀಲಂಕಾದ ಅರ್ಥವ್ಯವಸ್ಥೆಯ ಪುನರ್ನಿರ್ಮಾಣಕ್ಕಾಗಿ ವಿಶ್ವ ಬ್ಯಾಂಕು ಉದಾರವಾಗಿ ಹಣಕಾಸಿನ ನೆರವನ್ನು ಒದಗಿಸುತ್ತಲಿದೆ. ಶ್ರೀಲಂಕಾದ ಸುಧಾರಣಾ ಕಾರ್ಯಕ್ರಮದ ಬಗೆಗೆ ತೃಪ್ತಿಯನ್ನು ವ್ಯಕ್ತಪಡಿಸಿರುವ ಬ್ಯಾಂಕು ಡಿಸೆಂಬರ್ 20, 2023ರಂದು ಸಾಲದ ಎರಡನೆಯ ಭಾಗವಾಗಿ 250 ದಶಲಕ್ಷ ಡಾಲರ್‌ಗಳ ನೆರವನ್ನು ಬಿಡುಗಡೆ ಮಾಡಿತು. ಒಟ್ಟು 500 ದಶಲಕ್ಷ ಡಾಲರ್‌ಗಳ ನೆರವನ್ನು ಘೋಷಣೆ ಮಾಡಲಾಗಿತ್ತು ಮತ್ತು ಅದರಲ್ಲಿ ಮೊದಲ ಭಾಗವನ್ನು ಜೂನ್ 2023ರಲ್ಲಿ ಶ್ರೀಲಂಕಾಕ್ಕೆ ಬಿಡುಗಡೆ ಮಾಡಲಾಗಿತ್ತು. ಶ್ರೀಲಂಕಾ 46.9 ಶತಕೋಟಿ ಡಾಲರ್‌ಗಳ ಮೊತ್ತದ ವಿದೇಶಿ ಋಣಭಾರವನ್ನು ಹೊಂದಿರುತ್ತದೆ.

ಇಷ್ಟೆಲ್ಲಾ ಸಾಧನೆಗಳ ನಡುವೆಯೂ ಬ್ಯಾಂಕಿನ ಕಾರ್ಯವೈಖರಿಯು ಟೀಕೆಗಳಿಗೆ ಒಳಗಾಗಿದೆ.

1. ಸಂಪನ್ಮೂಲಗಳ ಕೊರತೆ (Scracity of Resources): ಅನಭಿವೃದ್ಧ ರಾಷ್ಟ್ರಗಳ ಬೇಡಿಕೆಗೆ ಹೋಲಿಸಿದಾಗ ಬ್ಯಾಂಕಿನ ಸಂಪನ್ಮೂಲಗಳು ಕೊರತೆಯಿಂದಿವೆ ಮತ್ತು ಈ ಕಾರಣದಿಂದ ಅದು ಉಪಯುಕ್ತವಾಗಿ ಸಾಲ ನೀಡಲು ಸಾಧ್ಯವಾಗಿಲ್ಲ. ಅದು ಯಾವ ಉದ್ದೇಶಗಳನ್ನಿಟ್ಟುಕೊಂಡು ಸ್ಥಾಪಿತವಾಯಿತೋ ಆ ಉದ್ದೇಶಗಳನ್ನು ಈಡೇರಿಸುವ ಸಾಮರ್ಥ್ಯವನ್ನೂ ಪಡೆದಿಲ್ಲ ಮತ್ತು ಅಂತಹ ಜವಾಬ್ದಾರಿಯನ್ನು ಹೊರುವ ಶಕ್ತಿಯೂ ಅದಕ್ಕಿಲ್ಲವೆಂಬ ಪ್ರಬಲವಾದ ಟೀಕೆಯಿದೆ. ಉದಾಹರಣೆಗೆ, 1982-83ರಲ್ಲಿ ಬ್ಯಾಂಕು 1,114 ಕೋಟಿ ಡಾಲರುಗಳ ಸಾಲ ನೀಡಿತು. ಇದು ಪ್ರಪಂಚದ ಬಡ ದೇಶಗಳಲ್ಲಿ ಒಂದಾದ ಭಾರತವು ತನ್ನ ಆರನೆಯ ಯೋಜನೆಯಲ್ಲಿ ಅಭಿವೃದ್ಧಿ ಕಾರ್ಯಗಳ ಮೇಲೆ ವಿನಿಯೋಗಿಸುವ ಒಟ್ಟು ಮೊತ್ತದ ಅರ್ಧದಷ್ಟಕ್ಕಿಂತಲೂ ಕಡಿಮೆಯದಾಗಿದೆ. ಬಡ ದೇಶಗಳ ಆರ್ಥಿಕ ಬಿಕ್ಕಟ್ಟಿನ ನಿವಾರಣೆಯಲ್ಲಿ ವಿಶ್ವಬ್ಯಾಂಕಿನ ಸಂಪೂರ್ಣ ವಿಫಲತೆಯು ಇಲ್ಲಿ ಸ್ಪಷ್ಟವಾಗಿ ಕಾಣುತ್ತದೆ.

2. ಅಧಿಕ ದರದ ಬಡ್ಡಿ (High Rate of Interest): ಸಾಲದ ಮೇಲೆ ಬ್ಯಾಂಕು ಶೇಕಡ8.2ರ ದರದ ಬಡ್ಡಿಯನ್ನು ವಿಧಿಸುತ್ತದೆ. ಇದು ಅತ್ಯಧಿಕ ದರವಾಗಿದೆ ಮತ್ತು ಬಹುತೇಕ ಅನಭಿವೃದ್ಧ ರಾಷ್ಟ್ರಗಳಿಗೆ ಇಷ್ಟು ಅಧಿಕ ದರದ ಬಡ್ಡಿಯನ್ನು ನೀಡಲು ಸಾಧ್ಯವಿಲ್ಲ ಎಂದು ಹೇಳಲಾಗಿದೆ. ಬಡ್ಡಿಯ ಜೊತೆಗೆ ಸೇವಾ ವೆಚ್ಚವನ್ನು ನೀಡಬೇಕಾಗಿರುವುದರಿಂದ ಸಾಲವು ಇನ್ನೂ ದುಬಾರಿ ಯಾಗುತ್ತದೆ.

3. ಕೆಲವು ರಾಷ್ಟ್ರಗಳಿಗೆ ಪಕ್ಷಪಾತ (Bias towards some Countries): ಅಮೇರಿಕಾ ಮತ್ತು ಯುರೋಪಿನ ರಾಷ್ಟ್ರಗಳಿಗೆ ಬ್ಯಾಂಕು ಪಕ್ಷಪಾತ ತೋರಿಸುತ್ತಿದೆ. ಆಫ್ರಿಕಾ ಮತ್ತು ಏಷ್ಯಾಖಂಡಗಳ ದೇಶಗಳಿಗೆ ಸರಿಯಾಗಿ ಸಾಲ ನೀಡುತ್ತಿಲ್ಲವೆಂಬ ಟೀಕೆಯು ಇದೆ. ಪ್ರಾರಂಭದಲ್ಲಿ ಬ್ಯಾಂಕು ಐರೋಪ್ಯ ರಾಷ್ಟ್ರಗಳಿಗೆ ಹೆಚ್ಚು ಸಾಲ ನೀಡಿದುದೇ ಈ ಟೀಕೆಗೆ ಕಾರಣವಾಗಿದೆ.

4. ಅನಭಿವೃದ್ಧ ರಾಷ್ಟ್ರಗಳಿಗೆ ಅನಾನುಕೂಲತೆ (Disadvantage to Underdeveloped Countries): ಬ್ಯಾಂಕಿನ ಸಾಲದ ನೀತಿಯು ಅನಭಿವೃದ್ಧ ರಾಷ್ಟ್ರಗಳಿಗೆ ಅನಾನುಕೂಲಕರವಾಗಿದೆಯೆಂದು ಟೀಕಿಸಲಾಗಿದೆ. ನಿರ್ದಿಷ್ಟವಾದ, ಅತ್ಯಂತ ತುರ್ತಾದ ಮತ್ತು ಉತ್ಪಾದಕವಾದ ಯೋಜನೆಗಳಿಗೆ ಮಾತ್ರ ಸಾಲ ನೀಡಬೇಕೆಂಬ ನಿಯಮವನ್ನು ಬ್ಯಾಂಕು ಪಾಲಿಸುತ್ತಿದೆ. ಆದರೆ ಯೋಜನೆಯ ಉತ್ಪಾದಕತೆ ಮತ್ತು ಅದರ ತುರ್ತು ಆವಶ್ಯಕತೆಯನ್ನು ತೋರಿಸುವುದು ಕಷ್ಟವಾಗಬಹುದು. ಅನಭಿವೃದ್ಧ ರಾಷ್ಟ್ರಗಳಿಗೆ ಅತ್ಯಗತ್ಯವಾದ ಶಿಕ್ಷಣ, ಸಾರ್ವಜನಿಕ ಆರೋಗ್ಯ, ವಸತಿ, ನೀರು ಪೂರೈಕೆ ಮೊದಲಾದ

ಕಾರ್ಯಗಳಿಗೆ ಬ್ಯಾಂಕು ನೆರವು ನೀಡುವುದಿಲ್ಲ. ಖಾಸಗಿ ಉದ್ಯಮಗಳಿಗೆ ವಿಶ್ವ ಬ್ಯಾಂಕು, ಸಾಲ ನೀಡುವಾಗ ಸಾಲಗಾರ ರಾಷ್ಟ್ರದ ಸರ್ಕಾರ ಅಥವಾ ಕೇಂದ್ರ ಬ್ಯಾಂಕಿನ ಜಾಮೀನನ್ನೂ ಅಪೇಕ್ಷಿಸುತ್ತದೆ. ಸಾಲವನ್ನು ತೆಗೆದುಕೊಳ್ಳಲು ಅನಭಿವೃದ್ಧ ರಾಷ್ಟ್ರಗಳಿಗೆ ಇದೊಂದು ದೊಡ್ಡ ಅಡಚಣೆಯಾಗಿದೆ. ಸಾಲ ಪಡೆದ ನಾಣ್ಯದಲ್ಲಿಯೇ ಸಾಲವನ್ನು ಮರುಪಾವತಿ ಮಾಡಬೇಕೆಂಬ ಬ್ಯಾಂಕಿನ ಪರತ್ತಿನಿಂದ ಅನಭಿವೃದ್ಧ ರಾಷ್ಟ್ರಗಳಿಗೆ ಬಹಳ ತೊಂದರೆಯಾಗಿದೆ.

5. ಅಭಿವೃದ್ಧಿಯ ವಿಕರೂಪದ ಪರಿಹಾರ (Uniform Remedy of Development): ವಿಶ್ವ ಬ್ಯಾಂಕು ವಿಭಿನ್ನ ದೇಶಗಳಿಗೆ ಮತ್ತು ಪ್ರದೇಶಗಳಿಗೆ ಭೇದವೆಣಿಸದ ರೀತಿಯಲ್ಲಿ ಅಭಿವೃದ್ಧಿ ನೆರವನ್ನು ಒದಗಿಸುತ್ತಿರುವುದರಿಂದ ಅದು ದಕ್ಷಿಣಗೋಳದ ದೇಶಗಳಿಗೆ, ಅಂದರೆ ಅಲ್ಪಾಭಿವೃದ್ಧ ದೇಶಗಳಿಗೆ, ಹೇಳಿಕೊಳ್ಳುವಷ್ಟು ಪ್ರಯೋಜನಕಾರಿಯಾಗಿರುವುದಿಲ್ಲ ಎಂದು ಕ್ಯಾಥೇರೀನ್ ಕಾಫೀಲ್ಡ್ ಟೀಕಿಸಿವ್ದಾರೆ. ಅವರ ಪ್ರಕಾರ, ದಕ್ಷಿಣದ ದೇಶಗಳಿಗೆ ಹೆಚ್ಚಿನ ರಿಯಾಯಿತಿ ದರದಲ್ಲಿ, ಸಕಾಲಿಕವಾಗಿ ಮತ್ತು ಅಭಿವೃದ್ಧಿಗೆ ಪೂರಕವಾದಂತಹ ನೆರವನ್ನು ಒದಗಿಸಬೇಕಾಗಿರುತ್ತದೆ.

6. ಅಸಮರ್ಪಕ ಆಡಳಿತ (Imprudent Governance): ವಿಶ್ವಬ್ಯಾಂಕಿನ ಆಡಳಿತವು ಸಮರ್ಪಕವಾಗಿ ನಿರ್ವಹಿಸಲ್ಪಡುತ್ತಿರುವುದಿಲ್ಲ ಎಂಬುದು ಅದರ ಮೇಲಿನ ಪ್ರಬಲ ಟೀಕೆಯಾಗಿದೆ. ಅದು 186 ದೇಶಗಳ ಸದಸ್ಯತ್ವವನ್ನು ಹೊಂದಿದ್ದರೂ ಸಹ, ಆರ್ಥಿಕವಾಗಿ ಶಕ್ತಿಶಾಲಿಯಾದ ಕೆಲವೇ ದೇಶಗಳ ಪ್ರಾಬಲ್ಯಕ್ಕೆ ಒಳಪಟ್ಟಿದೆ. ಈ ರಾಷ್ಟ್ರಗಳು ವಿಶ್ವಬ್ಯಾಂಕಿನ ನಾಯಕತ್ವವನ್ನು ಮತ್ತು ಹಿರಿಯ ಆಡಳಿತನಿರ್ವಾಹಕರನ್ನು ಆಯ್ಕೆ ಮಾಡುತ್ತವೆ. ಇದರಿಂದಾಗಿ ಈ ದೇಶಗಳ ಹಿತಾಸಕ್ತಿಗಳು ಸಹಜವಾಗಿ ಪ್ರಾಬಲ್ಯವನ್ನು ಸ್ಥಾಪಿಸಿವೆ.

7. ಮಾರುಕಟ್ಟೆ ಕಾರ್ಯನೀತಿಗಳು (Market Policies): ಸದಸ್ಯ ರಾಷ್ಟ್ರಗಳಲ್ಲಿ ಬಡತನವನ್ನು ಮಾರುಕಟ್ಟೆ ಕಾರ್ಯನೀತಿಗಳ ಅನುಷ್ಠಾನದ ಮುಖಾಂತರ ಶಮನಮಾಡಬಹುದೆಂದು ವಿಶ್ವಬ್ಯಾಂಕು ಭಾವಿಸಿದೆ. ಈ ದಿಸೆಯಲ್ಲಿ ಅದು ಸಾಲಗಾರ ರಾಷ್ಟ್ರಗಳ ಮತ್ತು ಖಾಸಗಿ ಬಂಡವಾಳ ಮಾರುಕಟ್ಟೆಗಳ ಹಂಗುಗಳನ್ನು ಹೇಗಾದರೂ ಈಡೇರಿಸಲು ಬದ್ಧವಾಗಿ, ರಾಜಕೀಯ ಪ್ರೇರಿತವಾಗಿ ಕಾರ್ಯನಿರ್ವಹಿಸುತ್ತಿದೆ ಎಂಬ ಆಪಾದನೆ ಇರುತ್ತದೆ. ಅಂದರೆ ಅದು ಫೆರವು ಮತ್ತು ತಾಂತ್ರಿಕ ಸಲಹೆ ನೀಡಿಕೆಯ ಒಂದು ಪ್ರಾಯೋಗಿಕ ಸಂಸ್ಥೆಯಾಗಿ ಕೆಲಸ ಮಾಡಲು ವಿಫಲಗೊಂಡಿದೆ.

ಉಪಸಂಹಾರ

ಈ ಟೀಕೆಗಳು ನಿಜವಾಗಿದ್ದರೂ ಸಹ ವಿಶ್ವಬ್ಯಾಂಕು ತನ್ನ ನಿಯಮಾವಳಿಗಳ ಪ್ರಕಾರ ಸಾಲ ನೀಡಬೇಕಾಗಿರುವುದರಿಂದ ಅದು ಅಸಹಾಯಕ ಪರಿಸ್ಥಿತಿಯಲ್ಲಿದೆ. ಸಾಧ್ಯವಾದಷ್ಟು ಉತ್ಪಾದಕ ಉದ್ದೇಶಗಳಿಗೆ ಮತ್ತು ಸರಿಯಾದ ಭರವಸೆಯ ಮೇಲೆ ಸಾಲ ಒದಗಿಸ ಬೇಕೆಂಬುದೇ ಅದರ ಧ್ಯೇಯವಾಗಿದೆ. ಆದಾಗ್ಯೂ ಇತ್ತೀಚಿನ ವರ್ಷಗಳಲ್ಲಿ ಅನಭಿವೃದ್ಧ

ರಾಷ್ಟ್ರಗಳಿಗೆ ನಿಜವಾಗಿ ಸಹಾಯಕಾರಿಯಾಗುವಂತಹ ಹಲವಾರು ವಿಧಗಳ ಯೋಜನೆಗಳಿಗೆ ವಿಶ್ವ ಬ್ಯಾಂಕು ಸಾಲವನ್ನು ಕೊಡುತ್ತಿದೆ.

ವಿಶ್ವ ಬ್ಯಾಂಕು ಮತ್ತು ಭಾರತ
(World Bank and India)

ವಿಶ್ವ ಬ್ಯಾಂಕನ್ನು ಸ್ಥಾಪಿಸಿದ ಸದಸ್ಯ ದೇಶಗಳಲ್ಲಿ ಭಾರತವೂ ಒಂದಾಗಿದೆ. ಭಾರತಕ್ಕೆ ಕಾರ್ಯಕಾರಿ ನಿರ್ದೇಶಕರ ಮಂಡಳಿಯಲ್ಲಿ ಖಾಯಂ ಪ್ರಾತಿನಿಧ್ಯವು ದೊರೆತಿರುತ್ತದೆ. ಭಾರತವು ಅತಿ ಹೆಚ್ಚು ಬಂಡವಾಳ ತೊಡಗಿಸಿದ ದೇಶಗಳಲ್ಲಿ ಐದನೆಯ ಸ್ಥಾನವನ್ನು ಪಡೆದಿದೆ. ಭಾರತದ ಆರ್ಥಿಕಾಭಿವೃದ್ಧಿಯಲ್ಲಿ ಬ್ಯಾಂಕು ಮೊದಲಿನಿಂದಲೇ ಬಹಳ ಆಸಕ್ತಿಯನ್ನು ತೋರಿಸುತ್ತ ಬಂದಿದೆ. ಭಾರತವು ವಿಶ್ವ ಬ್ಯಾಂಕಿನಿಂದ 2001ರ ಜೂನ್ ತಿಂಗಳವರೆಗೆ 41,000 ದಶಲಕ್ಷ ಡಾಲರುಗಳ ನೆರವನ್ನು ಪಡೆದುಕೊಂಡಿದೆ. ಭಾರತದ ರೈಲ್ವೆಗಳು ಸುಮಾರು 500 ದಶಲಕ್ಷ ಡಾಲರುಗಳಷ್ಟು ಅಧಿಕ ಪ್ರಮಾಣದಲ್ಲಿ ಸಾಲವನ್ನು ಪಡೆದುಕೊಂಡಿರುತ್ತವೆ. ಭಾರತವು ಕೃಷಿ ಮತ್ತು ನೀರಾವರಿಯ ಅಭಿವೃದ್ಧಿ, ವಿದ್ಯುಚ್ಛಕ್ತಿಯ ಉತ್ಪಾದನೆ, ವಾಯುಮಾರ್ಗದ ಸುಧಾರಣೆ, ಬಂದರುಗಳ ಅಭಿವೃದ್ಧಿ ಹಾಗೂ ಕೆಲವು ಮಹತ್ವದ ಕೈಗಾರಿಕೆಗಳ ಅಭಿವೃದ್ಧಿಗಾಗಿ ಅತ್ಯಧಿಕ ಪ್ರಮಾಣದಲ್ಲಿ ಸಾಲದ ನೆರವನ್ನು ಪಡೆದುಕೊಂಡಿದೆ. ವಿಶ್ವಬ್ಯಾಂಕು ಭಾರತದಲ್ಲಿ ಖಾಸಗಿ ಉದ್ಯಮಗಳಿಗೂ ನೆರವನ್ನು ನೀಡಿರುತ್ತದೆ. ವಿಶ್ವ ಬ್ಯಾಂಕು 60 ದಶಲಕ್ಷ ಡಾಲರುಗಳ ಸಾಲವನ್ನು ಭಾರತದ ಕೈಗಾರಿಕಾ ಉದ್ದರಿ ಮತ್ತು ಹೂಡಿಕೆಯ ನಿಗಮಕ್ಕೆ (Industrial Credit and Investment Corporation of India) ನೀಡಿ, ತನ್ಮೂಲಕ ವಿವಿಧ ಉದ್ದಿಮೆಗಳು ಅಭಿವೃದ್ಧಿ ಹೊಂದಲು ಅವಕಾಶ ಕಲ್ಪಿಸಿಕೊಟ್ಟಿರುತ್ತದೆ. ವಿಶ್ವಬ್ಯಾಂಕು ಕಲ್ಲಿದ್ದಲು ಮತ್ತು ಉಕ್ಕು ಉದ್ದಿಮೆಗಳ ಅಭಿವೃದ್ಧಿಗಾಗಿಯೂ ಸಾಲವನ್ನು ಕೊಟ್ಟಿ ರುತ್ತದೆ ಹಾಗೂ ಆಹಾರದ ಉತ್ಪಾದನೆಗಾಗಿ 52 ದಶಲಕ್ಷ ಡಾಲರ್ ಸಾಲ ನೀಡಿದೆ. ವಿಶ್ವ ಬ್ಯಾಂಕು ಭಾರತಕ್ಕೆ 1977-1978ರಲ್ಲಿ ಮೂರು ಪ್ರಮುಖ ರೀತಿಗಳ ಸಾಲಗಳನ್ನು ಕೊಟ್ಟಿತು. ಅವುಗಳು ಯಾವುವೆಂದರೆ: i) ದೂರಸಂಪರ್ಕ ಅಭಿವೃದ್ಧಿಗೆ 120 ದಶಲಕ್ಷ ಡಾಲರ್, ii) ಗುಜರಾತ್‌ನಲ್ಲಿನ ಮೀನುಗಾರಿಕೆ ಅಭಿವೃದ್ಧಿಗೆ 14 ದಶಲಕ್ಷ ಡಾಲರ್‌ಮತ್ತು iii) ಮುಂಬಯಿ ಸಾಗರತಳ ತೈಲ ಅಭಿವೃದ್ಧಿಗೆ 150 ದಶಲಕ್ಷ ಡಾಲರ್.

ವಿಶ್ವ ಬ್ಯಾಂಕು ಭಾರತದ ಪಂಚವಾರ್ಷಿಕ ಯೋಜನೆಗಳಲ್ಲಿಯೂ ಸಹ ವಿಶೇಷ ಆಸಕ್ತಿಯನ್ನು ತೋರಿಸಿರುತ್ತದೆ. ಭಾರತವು ಪಂಚವಾರ್ಷಿಕ ಯೋಜನೆಗಳನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಲು ಅನುಕೂಲವಾಗುವಂತೆ ಅದಕ್ಕೆ ಸಹಾಯ ಒದಗಿಸಲು "ಏಡ್ ಇಂಡಿಯಾ ಕ್ಲಬ್" ಎಂಬ ಒಂದು ಮಿತ್ರ ರಾಷ್ಟ್ರಗಳ ಸಂಘವನ್ನು ವಿಶ್ವ ಬ್ಯಾಂಕು ರಚಿಸಿತು. ವಿಶ್ವ ಬ್ಯಾಂಕ್ ಮತ್ತು ಅದರ ಅಂಗಸಂಸ್ಥೆಗಳಲ್ಲದೆ ಇತರ ಪ್ರಮುಖ 10 ದೇಶಗಳು ಈ

ಸಂಘದಲ್ಲಿ ಇರುತ್ತವೆ. ಅವೆಂದರೆ : 1. ಅಮೇರಿಕಾ 2. ಇಂಗ್ಲೆಂಡ್ 3. ಪಶ್ಚಿಮ ಜರ್ಮನಿ 4. ಫ್ರಾನ್ಸ್ 5. ಕೆನಡಾ 6. ಜಪಾನ್ 7. ಆಸ್ಟ್ರೇಯಾ 8. ಬೆಲ್ಜಿಯಂ 9. ಇಟಲಿ 10. ನೆದರ್ಲೆಂಡ್ಸ್. ಈ ಮಿತ್ರದೇಶಗಳ ಒಕ್ಕೂಟವು ಆಗಾಗ ಸಭೆ ಸೇರಿ, ಭಾರತದ ಆರ್ಥಿಕ ಪ್ರಗತಿಯ ಬಗೆಗೆ ವಿವರವಾಗಿ ಚರ್ಚಿಸಿ ಅವಕ್ಕೆ ಅಗತ್ಯವಿರುವ ವಿದೇಶೀ ವಿನಿಮಯದ ನೆರವನ್ನು ನೀಡುತ್ತದೆ. ಮೇಲಿನಂತೆ ಭಾರತದ ಆರ್ಥಿಕ ಅಭಿವೃದ್ಧಿಗೆ ವಿಶ್ವ ಬ್ಯಾಂಕು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ನೆರವನ್ನು ಒದಗಿಸುತ್ತಲಿದೆ.

C. ಅಂತರರಾಷ್ಟ್ರೀಯ ಅಭಿವೃದ್ಧಿ ಸಂಘ (ಕೂಟ)

(International Development Association - IDA)

ವಿಶ್ವ ಬ್ಯಾಂಕಿನ ಇನ್ನೊಂದು ಅಂಗಸಂಸ್ಥೆಯಾಗಿ ಅಂತರರಾಷ್ಟ್ರೀಯ ಅಭಿವೃದ್ಧಿ ಸಂಘವು 1960ರಲ್ಲಿ ಸ್ಥಾಪನೆಗೊಂಡಿತು. ಅನಭಿವೃದ್ಧ ರಾಷ್ಟ್ರಗಳಿಗೆ ನೆರವು ನೀಡುವ ಕಾರ್ಯದಲ್ಲಿ ವಿಶ್ವ ಬ್ಯಾಂಕಿಗೆ ಪೂರಕವಾಗಿ ಕೆಲಸ ನಿರ್ವಹಿಸುವ ಧ್ಯೇಯದಿಂದ ಇದನ್ನು ಸ್ಥಾಪಿಸಲಾಯಿತು. ಆರ್ಥಿಕವಾಗಿ ಉಪಯುಕ್ತವಾಗಿರುವ ಹಲವಾರು ಯೋಜನೆಗಳಿಗೆ ವಿಶ್ವಬ್ಯಾಂಕು ತನ್ನ ನೀತಿಗನುಗುಣವಾಗಿ ನೆರವು ನೀಡುವುದಿಲ್ಲ. ಉದಾಹರಣೆಗೆ, ಸಾಮಾಜಿಕ ಮೌಲ್ಯೋತ್ಪಾದಕ ಯೋಜನೆಗಳಾದ ರಸ್ತೆಗಳು ಮತ್ತು ಆಣೆಕಟ್ಟುಗಳ ನಿರ್ಮಾಣ, ನಗರಾಭಿವೃದ್ಧಿ, ಕೊಳೆಗೇರಿಗಳ ನಿರ್ಮೂಲನ, ಕುಡಿಯುವ ನೀರು ಪೂರೈಕೆ ಇತ್ಯಾದಿ. ಆದ್ದರಿಂದ ಅನಭಿವೃದ್ಧ ರಾಷ್ಟ್ರಗಳಲ್ಲಿ ಇಂತಹ ಯೋಜನೆಗಳನ್ನು ಕಾರ್ಯಗತಗೊಳಿಸಲು ಅತಿ ಕಡಿಮೆ ಬಡ್ಡಿ ದರದಲ್ಲಿ ದೀರ್ಘ ಮರುಪಾವತಿ ಅವಧಿಯನ್ನು ಹೊಂದಿರುವ ಮೃದು ಸಾಲಗಳನ್ನು (Soft Loans) ನೀಡಲು ಒಂದು ಸಂಸ್ಥೆಯ ಅವಶ್ಯಕತೆ ಒದಗಿ ಬಂದಿತು. ಆ ಮೇರೆಗೆ, ಅಂತರರಾಷ್ಟ್ರೀಯ ಅಭಿವೃದ್ಧಿ ಸಂಘವನ್ನು ಸ್ಥಾಪಿಸಲಾಯಿತು. ಇದರಲ್ಲಿ 120 ರಾಷ್ಟ್ರಗಳು ಸದಸ್ಯತ್ವ ಹೊಂದಿವೆ.

ಅಂತರರಾಷ್ಟ್ರೀಯ ಅಭಿವೃದ್ಧಿ ಸಂಘದ ಆಡಳಿತವನ್ನು ನೋಡಿಕೊಳ್ಳಲು ಒಂದು ಕಾರ್ಯಪಾಲಕ ಮಂಡಳಿ, ಒಂದು ಕಾರ್ಯನಿರ್ವಾಹಕ ನಿರ್ದೇಶಕರ ಮಂಡಳಿ ಮತ್ತು ಒಬ್ಬರು ಅಧ್ಯಕ್ಷರಿರುತ್ತಾರೆ. ಇವರೆಲ್ಲರೂ ವಿಶ್ವಬ್ಯಾಂಕಿನ ಅಧಿಕಾರ ವರ್ಗದಲ್ಲಿದ್ದು, ತಮ್ಮ ಅಧಿಕಾರ ಪ್ರಯುಕ್ತ ಅಂತರರಾಷ್ಟ್ರೀಯ ಅಭಿವೃದ್ಧಿ ಸಂಘದಲ್ಲಿ ಸೇವೆ ಸಲ್ಲಿಸುತ್ತಿರುತ್ತಾರೆ.

ಸಂಪನ್ಮೂಲಗಳು

(Resources)

ಸಂಘವು ಸದಸ್ಯ ರಾಷ್ಟ್ರಗಳಿಂದ ವಂತಿಗೆ ಪಡೆಯುತ್ತದೆ. ಇದರ ಪ್ರಾರಂಭದ ಬಂಡವಾಳ 100 ಕೋಟಿ ಡಾಲರುಗಳಾಗಿದ್ದಿತು. ಸಂಘಕ್ಕೆ ನೀಡುವ ವಂತಿಗೆಯು ಹೆಚ್ಚು ಕಡಿಮೆ ವಿಶ್ವಬ್ಯಾಂಕಿಗೆ ನೀಡುವ ವಂತಿಗೆಯ ಪ್ರಮಾಣದಷ್ಟೇ ಇರುತ್ತದೆ. ಅಮೇರಿಕಾ, ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ ಮತ್ತು ಕೆನಡಾ ಅತಿ ಹೆಚ್ಚು ವಂತಿಗೆಯನ್ನು ಹೊಂದಿರುವ ರಾಷ್ಟ್ರಗಳಾಗಿವೆ.

ವಂತಿಗೆಯನ್ನು ನೀಡುವ ಉದ್ದೇಶದಿಂದ ಸಂಘದ ಸದಸ್ಯ ರಾಷ್ಟ್ರಗಳನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ : ಒಂದನೇ ಗುಂಪಿನ ಸದಸ್ಯರು ಮತ್ತು ಎರಡನೇ ಗುಂಪಿನ ಸದಸ್ಯರು. ಅಭಿವೃದ್ಧಿ ಹೊಂದಿದ 21 ರಾಷ್ಟ್ರಗಳು ಒಂದನೇ ಗುಂಪಿನ ಸದಸ್ಯರುಗಳಾಗಿವೆ. ಈ ರಾಷ್ಟ್ರಗಳು ತಮ್ಮ ವಂತಿಗೆಯನ್ನು ಐದು ಸಮಾನ ಕಂತುಗಳಲ್ಲಿ ಚಿನ್ನ ಅಥವಾ ಸುಲಭ ಪರಿವರ್ತನೆಯ ನಾಣ್ಯಗಳಲ್ಲಿ ಪಾವತಿಸಬೇಕು. ಸಂಘದ ಶೇಕಡ 95.6ರಷ್ಟು ಸಂಪನ್ಮೂಲಗಳು ಒಂದನೇ ಗುಂಪಿನ ಸದಸ್ಯ ರಾಷ್ಟ್ರಗಳಿಂದ ಒದಗಿವೆ.

ಅಭಿವೃದ್ಧಿ ಹೊಂದುತ್ತಿರುವ 99 ರಾಷ್ಟ್ರಗಳು ಎರಡನೇ ಗುಂಪಿನ ಸದಸ್ಯರುಗಳಾಗಿವೆ. ಈ ರಾಷ್ಟ್ರಗಳು ತಮ್ಮ ವಂತಿಗೆಯ ಶೇಕಡ 90 ರಷ್ಟು ಚಿನ್ನ ಅಥವಾ ಸುಲಭ ಪರಿವರ್ತನೀಯ ನಾಣ್ಯಗಳಲ್ಲಿ ಮತ್ತು ಉಳಿದ ಶೇಕಡ 10ರಷ್ಟನ್ನು ತಮ್ಮ ಸ್ವದೇಶೀ ನಾಣ್ಯಗಳಲ್ಲಿ ನೀಡಬೇಕಾಗಿದೆ. ಸಂಘದ ಶೇಕಡ 4.4 ಸಂಪನ್ಮೂಲಗಳು ಈ ರಾಷ್ಟ್ರಗಳಿಂದ ಒದಗಿವೆ.

ಸಂಘದ ಸಾಲ ನೀಡಿಕೆಯ ಲಕ್ಷಣಗಳು

(Features of Lending by the Association)

ಅಂತರರಾಷ್ಟ್ರೀಯ ಸಂಘದ ಸಾಲ ನೀಡಿಕೆಯಲ್ಲಿ ಕೆಳಗೆ ನಮೂದಿಸಿದ ವಿಶಿಷ್ಟ ಲಕ್ಷಣಗಳು ಕಂಡುಬರುತ್ತವೆ.

1. ಸಂಘದ ಸಾಲವು ಬಡ್ಡಿಯಿಂದ ಹೊರತಾಗಿರುತ್ತದೆ. ಆಡಳಿತ ವೆಚ್ಚವನ್ನು ಭರಿಸುವುದಕ್ಕಾಗಿ ಸಾಲದ ಮೊತ್ತದ ಮೇಲೆ ವಾರ್ಷಿಕ ಕೇವಲ ಶೇಕಡ $^3/_4$ರಷ್ಟು ಸೇವಾ ವೆಚ್ಚವನ್ನು ವಸೂಲು ಮಾಡಲಾಗುತ್ತದೆ.
2. ಸಾಲದ ಮರುಪಾವತಿಯ ಅವಧಿಯು ಬಹಳ ದೀರ್ಘವಾಗಿರುತ್ತದೆ. ಅಂದರೆ ಸುಮಾರು 50 ವರ್ಷಗಳಿಗೆ ವ್ಯಾಪಿಸಿರುತ್ತದೆ.
3. ಸಾಲದ ಮರುಪಾವತಿಯು ಬಹಳ ಸಣ್ಣ ಪ್ರಮಾಣದಲ್ಲಿರುತ್ತದೆ. ಅದು ವಾರ್ಷಿಕ ಶೇಕಡ 1 ರಿಂದ 3ರಷ್ಟಿರುತ್ತದೆ.
4. ವಿಶ್ವ ಬ್ಯಾಂಕಿನಂತೆ ಸಂಘವು ಸಾಲದ ಮೇಲೆ ಜಾಮೀನು ಅಥವಾ ಭರವಸೆಯನ್ನು ಅಪೇಕ್ಷಿಸುವುದಿಲ್ಲ.
5. ಸದಸ್ಯ ರಾಷ್ಟ್ರಗಳು ಸಾಲ ಪಡೆದ ನಾಣ್ಯದಲ್ಲಿಯೇ ಸಾಲ ಮರುಪಾವತಿ ಮಾಡಬೇಕೆಂಬ ಬಲವಂತವಿರುವುದಿಲ್ಲ. ಸ್ವದೇಶೀ ನಾಣ್ಯದಲ್ಲಿಯೇ ಸಾಲ ತೀರಿಸಬಹುದಾಗಿರುತ್ತದೆ. ಈ ಎಲ್ಲಾ ಕಾರಣಗಳಿಂದಲೇ ಸಂಘದ ಸಾಲಗಳನ್ನು ಮೃದು ಸಾಲಗಳು ಎಂದು ಕರೆದಿರುವುದು.

2004ರ ಹೊತ್ತಿಗೆ ಸಂಘವು ಒಟ್ಟು ಸುಮಾರು 36,000 ದಶಲಕ್ಷ ಡಾಲರುಗಳ 2,870 ಸಾಲಗಳನ್ನು ನೀಡಿತ್ತು.

ಭಾರತ ಮತ್ತು ಅಂತರರಾಷ್ಟ್ರೀಯ ಅಭಿವೃದ್ಧಿ ಸಂಘ
(India and the IDA)

ಭಾರತವು ಅಂತರರಾಷ್ಟ್ರೀಯ ಅಭಿವೃದ್ಧಿ ಸಂಘದಿಂದ ಅತ್ಯಧಿಕ ನೆರವು ಪಡೆದ ರಾಷ್ಟ್ರವಾಗಿದೆ. ಸಾಲಗಳ ಸಂಖ್ಯೆ ಮತ್ತು ಸಾಲಗಳ ಮೊತ್ತ ಎರಡರಲ್ಲಿಯೂ ಅದು ಅತ್ಯಧಿಕ ಪ್ರಯೋಜನದಾರ ರಾಷ್ಟ್ರವಾಗಿದೆ. 2004 ರವರೆಗೆ ಭಾರತವು ಅಂತರ ರಾಷ್ಟ್ರೀಯ ಅಭಿವೃದ್ಧಿ ಸಂಘದಿಂದ ಒಟ್ಟು 20,000 ದಶಲಕ್ಷ ಡಾಲರುಗಳ ಮೌಲ್ಯದ 215 ಸಾಲಗಳನ್ನು ಪಡೆದಿದೆ. ಸಂಘವು ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣ, ನೀರಾವರಿಗಾಗಿ ಕೊಳವೆ ಬಾವಿಗಳನ್ನು ತೋಡುವಿಕೆ, ಚರಂಡಿ ವ್ಯವಸ್ಥೆ, ಜಲ ವಿದ್ಯುಚ್ಛಕ್ತಿಯ ಉತ್ಪಾದನೆ, ಗ್ರಾಮೀಣ ವಿದ್ಯುದೀಕರಣ, ಪ್ರವಾಹ ನಿಯಂತ್ರಣ ಮುಂತಾದ ಉದ್ದೇಶಗಳಿಗೆ ಭಾರತಕ್ಕೆ ಸಾಲಗಳನ್ನು ಒದಗಿಸಿದೆ. ಭಾರತದ ಆರ್ಥಿಕಾಭಿವೃದ್ಧಿಯಲ್ಲಿ ಸಂಘವು ಒದಗಿಸಿರುವ ಅಗಾಧ ಪ್ರಮಾಣದ ನೆರವು ಮಹತ್ವದ ಪಾತ್ರವನ್ನು ನಿರ್ವಹಿಸಿದೆ.

ಟೀಕೆಗಳು (Criticisms)

ಅನಭಿವೃದ್ಧ ದೇಶಗಳ ಆರ್ಥಿಕಾಭಿವೃದ್ಧಿಗೆ ಸಂಘವು ಗಮನಾರ್ಹವಾದ ಕೊಡುಗೆಯನ್ನು ನೀಡುತ್ತಿದ್ದರೂ ಸಹ ಅದರ ಕಾರ್ಯ ವಿಧಾನವು ಕೆಲವು ಟೀಕೆಗಳಿಗೆ ಒಳಗಾಗಿದೆ.

1. ಸಂಪನ್ಮೂಲಗಳ ಕೊರತೆ (Scarcity of Resources): ಅಂತರ ರಾಷ್ಟ್ರೀಯ ಅಭಿವೃದ್ಧಿ ಸಂಘವು 40 ಶತಕೋಟಿ ಡಾಲರುಗಳಷ್ಟು ಸಂಪನ್ಮೂಲಗಳನ್ನು ಮಾತ್ರ ಹೊಂದಿದ್ದು ಅನಭಿವೃದ್ಧ ದೇಶಗಳ ಸಾಲದ ಕೋರಿಕೆಗಳನ್ನು ಈಡೇರಿಸಲು ಸಾಕಾಗುವಷ್ಟಿಲ್ಲ ಎಂಬ ಟೀಕೆಗೆ ಅದು ಒಳಗಾಗಿದೆ.

2. ಪ್ರಶ್ನಾರ್ಹ ಮೃದು ಸಾಲ ವ್ಯವಸ್ಥೆ (Questionable Soft Loan System): ಅಂತರರಾಷ್ಟ್ರೀಯ ಅಭಿವೃದ್ಧಿ ಸಂಘವು ಮೃದು ಸಾಲಗಳನ್ನು, ಅಂದರೆ ಬಡ್ಡಿಯನ್ನು ಒಳಗೊಂಡಿರದ ಸಾಲಗಳನ್ನು, ಒದಗಿಸುತ್ತಿದೆ. ಆದರೆ ಇದು ಸರಿಯಾದ ವಿಧಾನವಲ್ಲ ಎಂದು ವಿಮರ್ಶಕರು ಅಭಿಪ್ರಾಯಪಟ್ಟಿದ್ದಾರೆ. ಬಡ್ಡಿಯಿಲ್ಲದೆ ಸಾಲವನ್ನು ಒದಗಿಸಿದಾಗ ಸಾಲವನ್ನು ಪಡೆಯುವ ದೇಶಗಳು ಅನಗತ್ಯವಾಗಿ, ಹಣದುಬ್ಬರಕಾರಿಯಾದ ಹೂಡಿಕೆಯನ್ನು ಕೈಗೊಳ್ಳುತ್ತವೆ ಎಂದು ಹೇಳಲಾಗಿದೆ.

D. ಅಂತರರಾಷ್ಟ್ರೀಯ ಹಣಕಾಸು ನಿಗಮ
(International Finance Corporation - IFC)

ವಿಶ್ವಬ್ಯಾಂಕಿನ ಅಂಗಸಂಸ್ಥೆಯಾಗಿ ಅಂತರರಾಷ್ಟ್ರೀಯ ಹಣಕಾಸು ನಿಗಮವು 1955ರಲ್ಲಿ ಸ್ಥಾಪನೆಗೊಂಡಿತು. ವಿಶ್ವಬ್ಯಾಂಕಿನ ಕಾರ್ಯವಿಧಾನದಲ್ಲಿ ಎರಡು ದೋಷಗಳಿದ್ದುದರಿಂದ ಈ ನಿಗಮದ ಸ್ಥಾಪನೆ ಆವಶ್ಯಕವೆನಿಸಿತು.

1. ಮೊದಲನೆಯದಾಗಿ, ವಿಶ್ವಬ್ಯಾಂಕು ಸರ್ಕಾರ ಗಳಿಗೆ ಅಥವಾ ಆ ಸರ್ಕಾರಗಳ ಜಾಮೀನಿನ ಮೇಲೆ ಮಾತ್ರ ಸಾಲ ನೀಡುತ್ತಿದ್ದಿತು. ಈ ನಿಯಮದಿಂದ ಖಾಸಗಿ ಹೂಡಿಕೆದಾರರಿಗೆ ಪ್ರೋತ್ಸಾಹ ಸಿಗುತ್ತಿರಲಿಲ್ಲ ಮತ್ತು ಅವರ ವ್ಯವಹಾರದಲ್ಲಿ ಸರ್ಕಾರದ ಹಸ್ತಕ್ಷೇಪ ನಡೆಯುವುದೆಂಬ ಭೀತಿ ಇದ್ದಿತು.

2. ಎರಡನೆಯದಾಗಿ, ವಿಶ್ವಬ್ಯಾಂಕು ಬಡ್ಡಿ ಆಧಾರಿತ ಸಾಲಗಳನ್ನು ನೀಡುತ್ತಿದ್ದಿತೇ ಹೊರತು ಹೂಡಿಕೆಗೆ ಆವಶ್ಯಕವಾದ ಸಮ ಬಂಡವಾಳವನ್ನು (Equity Capital) ಒದಗಿಸುತ್ತಿರಲಿಲ್ಲ. ಆದ್ದರಿಂದ ಅನಭಿವೃದ್ಧ ಸದಸ್ಯ ರಾಷ್ಟ್ರಗಳಲ್ಲಿ ಖಾಸಗಿ ಉದ್ಯಮಕ್ಕೆ ಸರ್ಕಾರದ ಜಾಮೀನಿಲ್ಲದೆ ಬಂಡವಾಳವನ್ನು ಒದಗಿಸಲು ಒಂದು ವಿಶೇಷ ಹಣಕಾಸು ಸಂಸ್ಥೆಯ ತುರ್ತು ಅಗತ್ಯವನ್ನು ಮನಗಾಣಲಾಯಿತು. ಇದರ ಫಲವೇ ಅಂತರರಾಷ್ಟ್ರೀಯ ಹಣಕಾಸು ನಿಗಮದ ಜನನ.

ಸಂಘಟನೆ (Organisation) : ನಿಗಮದ ಆಡಳಿತ ನಿರ್ವಹಣೆಗೆ ಒಂದು ಕಾರ್ಯಪಾಲರ ಮಂಡಳಿ ಮತ್ತು ಒಂದು ಕಾರ್ಯ ನಿರ್ವಾಹಕ ನಿರ್ದೇಶಕರ ಮಂಡಳಿ ಇವೆ. ವಿಶ್ವಬ್ಯಾಂಕಿನ ಕಾರ್ಯಪಾಲರೇ ನಿಗಮದ ಕಾರ್ಯಪಾಲರ ಮಂಡಳಿಯಲ್ಲಿರುತ್ತಾರೆ ಮತ್ತು ವಿಶ್ವಬ್ಯಾಂಕಿನ ಕಾರ್ಯನಿರ್ವಾಹಕ ನಿರ್ದೇಶಕರೇ ಈ ನಿಗಮದ ಕಾರ್ಯನಿರ್ವಾಹಕ ನಿರ್ದೇಶಕರ ಮಂಡಳಿಯಲ್ಲಿರುತ್ತಾರೆ. ನಿಗಮವು ಸ್ವಂತ ಅಧ್ಯಕ್ಷನನ್ನು ಹೊಂದಿದೆ. ನಿಗಮದ ದೈನಂದಿನ ಆಡಳಿತಕ್ಕೆ ಈತನೇ ಜವಾಬ್ದಾರ ನಾಗಿರುತ್ತಾನೆ. ನಿಗಮವು ವಿಶ್ವಬ್ಯಾಂಕಿನ ಅಂಗಸಂಸ್ಥೆಯಾಗಿದ್ದರೂ ಕೂಡ ಅದು ರಚನೆಯಲ್ಲಿ ಪ್ರತ್ಯೇಕವಾದ ಮತ್ತು ಸ್ವತಂತ್ರವಾದ ಸಂಸ್ಥೆಯಾಗಿದ್ದು ಪ್ರತ್ಯೇಕ ನಿಧಿಯನ್ನು ಹೊಂದಿದೆ.

ಸಂಪನ್ಮೂಲಗಳು (Resources): ನಿಗಮದ ಬಂಡವಾಳವು ಸುಮಾರು 11 ಕೋಟಿ ಡಾಲರುಗಳಾಗಿದೆ. ಪ್ರತಿಯೊಂದು ಸದಸ್ಯ ರಾಷ್ಟ್ರವು ವಿಶ್ವಬ್ಯಾಂಕಿಗೆ ಪ್ರಮಾಣಕ್ಕನುಗುಣವಾಗಿಯೇ ವಂತಿಗೆ ನೀಡಬೇಕಾಗಿದೆ. ಅಮೇರಿಕಾವು ಅತಿ ಹೆಚ್ಚು ವಂತಿಗೆಯನ್ನು ಹೊಂದಿರುವ ಪ್ರಥಮ ರಾಷ್ಟ್ರವಾಗಿದೆ (35 ದಶಲಕ್ಷ ಡಾಲರುಗಳು). ಭಾರತವು ಅತಿ ಹೆಚ್ಚು ವಂತಿಗೆಯನ್ನು ಹೊಂದಿರುವ ನಾಲ್ಕನೆಯ ರಾಷ್ಟ್ರವಾಗಿದೆ (4.4 ದಶಲಕ್ಷ ಡಾಲರುಗಳು).

ಧ್ಯೇಯೋದ್ದೇಶಗಳು
(Objectives)

ಖಾಸಗೀ ಕ್ಷೇತ್ರದಲ್ಲಿ ಉತ್ಪಾದಕ ಉದ್ಯಮಗಳನ್ನು ಬೆಳೆಸುವ ಮೂಲಕ ಸದಸ್ಯ ರಾಷ್ಟ್ರಗಳ ಆರ್ಥಿಕಾಭಿವೃದ್ಧಿಯನ್ನು ಸಾಧಿಸಬೇಕೆಂಬುದು ನಿಗಮದ ಪ್ರಮುಖ ಧ್ಯೇಯೋದ್ದೇಶವಾಗಿದೆ. ಇದನ್ನು ಈಡೇರಿಸಲು ಅದು ಮೂರು ವಿಧಾನಗಳನ್ನು ಅನುಸರಿಸುತ್ತದೆ.

1) ಸರ್ಕಾರದ ಜಾಮೀನನ್ನು ಪಡೆಯದೆ ನಿಗಮವು ಏಷಿಗಿ ಹೂಡಿಕೆದಾರರೊಡನೆ ಸಹಭಾಗಿತ್ವದಲ್ಲಿ ಏಷಿಗಿ ಉದ್ಯಮಗಳಲ್ಲಿ ಹೂಡಿಕೆ ಮಾಡುತ್ತದೆ.

2) ಹೂಡಿಕೆಯ ಅವಕಾಶಗಳನ್ನು ಸ್ವದೇಶೀ, ವಿದೇಶೀ ಮತ್ತು ಏಷಿಗಿ ಬಂಡವಾಳ ಮತ್ತು ನುರಿತ ಆಡಳಿತ ವ್ಯವಸ್ಥೆಯನ್ನು ಒಟ್ಟುಗೂಡಿಸಲು ತೀರುವೆ ಮನೆ (Clearing House) ಯಾಗಿ ಕೆಲಸ ಮಾಡುತ್ತದೆ.

3) ಸ್ವದೇಶೀ ಮತ್ತು ವಿದೇಶೀ ಏಷಿಗಿ ಬಂಡವಾಳದ ಹೂಡಿಕೆಯ ಹೆಚ್ಚಳಕ್ಕೆ ಪ್ರೋತ್ಸಾಹ ನೀಡುತ್ತದೆ.

ಕಾರ್ಯವಿಧಾನದ ಮಾರ್ಗದರ್ಶಿ ತತ್ವಗಳು
(Guiding Principles of Working)

ತನ್ನ ಕಾರ್ಯವಿಧಾನದಲ್ಲಿ ನಿಗಮವು ಮಾರ್ಗದರ್ಶಿ ತತ್ವಗಳನ್ನು ಆಧಾರವಾಗಿರಿಸಿಕೊಳ್ಳುತ್ತದೆ.

1) ಏಷಿಗಿ ಹೂಡಿಕೆದಾರರ ಜೊತೆಗೂಡಿ ನಿಗಮವು ಬಂಡವಾಳ ಹೂಡಿಕೆಯನ್ನು ಕೈಗೊಳ್ಳುತ್ತದೆ.

2) ಯಾವುದೇ ಉದ್ಯಮಕ್ಕೆ ಅಗತ್ಯವಾಗಿರುವ ಬಂಡವಾಳದಲ್ಲಿ ಅರ್ಧಕ್ಕಿಂತ ಹೆಚ್ಚಿನ ಪಾಲನ್ನು ನಿಗಮವು ಹೂಡುವುದಿಲ್ಲ. ಏಕೆಂದರೆ ಏಷಿಗಿ ಹೂಡಿಕೆಗೆ ಪೂರಕವಾಗಿ ಮಾತ್ರ ಹೂಡಿಕೆಯ ಬಂಡವಾಳವನ್ನು ಒದಗಿಸಬೇಕೆಂಬುದು ನಿಗಮದ ನೀತಿಯಾಗಿದೆ.

3) ನಿಗಮವು ಹೂಡಿಕೆ ಮಾಡುವ ಉದ್ಯಮವು ಕೈಗಾರಿಕೆಯ ಸ್ವರೂಪದ್ದಾಗಿರಬೇಕು. ಆ ಉದ್ಯಮವು ಆರ್ಥಿಕಾಭಿವೃದ್ಧಿಗೆ ಕೊಡುಗೆ ನೀಡುವಂತಿರಬೇಕು.

4) ಏಷಿಗಿ ಬಂಡವಾಳವು ಕೊರತೆಯಿಂದಿರುವ ಉದ್ಯಮಗಳಲ್ಲಿ ಮಾತ್ರ ನಿಗಮವು ಹೂಡಿಕೆ ಮಾಡುತ್ತದೆಯೇ ಹೊರತು ಪೂರ್ಣ ಬಂಡವಾಳವನ್ನು ಸಂಗ್ರಹಿಸಲು ಸಾಧ್ಯವಿರುವಂತಹ ಉದ್ಯಮಗಳಲ್ಲಿ ಅದು ಹೂಡಿಕೆ ಮಾಡುವುದಿಲ್ಲ.

5) ಹೂಡಿಕೆ ಬಂಡವಾಳದ ಮೇಲೆ ನಿಗಮವು ಸರ್ಕಾರದ ಜಾಮೀನನ್ನು ಸ್ವೀಕರಿಸುವುದಿಲ್ಲ, ಆಥವಾ ಹೂಡಿಕೆಯ ಮೇಲೆ ಸರ್ಕಾರ ವಮಜೂರಾತಿಯನ್ನು ಅಪೇಕ್ಷಿಸುವುದಿಲ್ಲ.

ಪ್ರಾರಂಭದಲ್ಲಿ ನಿಗಮದ ಕಾರ್ಯವಿಧಾನವು ಬಹಳ ಮಂದಗತಿಯಲ್ಲಿತ್ತು. ಇತ್ತೀಚಿನ ವರ್ಷಗಳಲ್ಲಿ ಇದು ಸುಧಾರಿಸಿದೆ. 2004ರ ವರೆಗೆ ನಿಗಮವು 85 ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿನ ಸುಮಾರು 700 ಉದ್ಯಮಗಳಲ್ಲಿ 8300 ದಶಲಕ್ಷ ಡಾಲರುಗಳ ಬಂಡವಾಳವನ್ನು ಹೂಡಿಕೆ ಮಾಡಿತ್ತು.

ಅಂತರ ರಾಷ್ಟ್ರೀಯ ಹಣಕಾಸು ನಿಗಮದ ಕಾರ್ಯನಿರ್ವಹಣೆ
(Working of the IFC)

ಅಂತರ ರಾಷ್ಟ್ರೀಯ ಹಣಕಾಸು ನಿಗಮವು ಪ್ರಾರಂಭದಲ್ಲಿ ಲ್ಯಾಟಿನ್ ಅಮೆರಿಕ ಮತ್ತು ಕೇಂದ್ರ ಅಮೆರಿಕದ ದೇಶಗಳಲ್ಲಿ ಮಾತ್ರ ತನ್ನ ಚಟುವಟಿಕೆಗಳನ್ನು ಕೇಂದ್ರೀಕರಿಸಿತ್ತು. ಆಗ ಅದರ ಚಟುವಟಿಕೆಗಳೂ ಸಹ ಮಂದಗತಿಯಲ್ಲಿದ್ದವು. ಆದರೆ ಇತ್ತೀಚಿನ ವರ್ಷಗಳಲ್ಲಿ ಅದು ತನ್ನ ಚಟುವಟಿಕೆಗಳನ್ನು ವಿಸ್ತಾರಗೊಳಿಸಿದೆ ಮತ್ತು ಚುರುಕುಗೊಳಿಸಿದೆ. ಏಷ್ಯಾ ಮತ್ತು ಆಫ್ರಿಕಾ ಖಂಡದ ದೇಶಗಳಿಗೂ ಸಹ ಅದು ತನ್ನ ಚಟುವಟಿಕೆಗಳನ್ನು ವಿಸ್ತರಿಸಿದೆ.

ಅಂತರ ರಾಷ್ಟ್ರೀಯ ಹಣಕಾಸು ನಿಗಮವು 2004 ರವರೆಗೆ ಸುಮಾರು 105 ಅಭಿವೃದ್ಧಿಶೀಲ ದೇಶಗಳಲ್ಲಿ ಸುಮಾರು 1100 ಉದ್ಯಮಗಳಲ್ಲಿ ಒಟ್ಟು ಇಪ್ಪತ್ತು ದಶಲಕ್ಷ ಡಾಲರುಗಳ ಮೌಲ್ಯದ ಹೂಡಿಕೆಯನ್ನು ಮಾಡಿದೆ. ಉಕ್ಕಿನ ಸ್ಥಾವರಗಳು, ರಾಸಾಯನಿಕ ಕೈಗಾರಿಕೆಗಳು, ಸ್ವಯಂಚಾಲಿತ ಸಾಮಗ್ರಿಗಳ ತಯಾರಿಕೆ, ಸಿಮೆಂಟ್ ಉತ್ಪಾದನೆ, ತಾಮ್ರ ಗಣಿಗಾರಿಕೆ, ಪ್ರವಾಸೋದ್ಯಮ ಅಭಿವೃದ್ಧಿ, ಮರದ ಸಾಮಾನುಗಳ ಸಂಸ್ಕರಣೆ ಮುಂತಾದ ಉದ್ಯಮಗಳಲ್ಲಿ ಅದು ಹೂಡಿಕೆಯನ್ನು ಕೈಗೊಂಡಿದೆ. ಅಲ್ಲದೆ ಅದು ವಿಶ್ವದಾದ್ಯಂತ ಅನೇಕ ದೇಶಗಳಲ್ಲಿ ಸುಮಾರು 20 ಅಭಿವೃದ್ಧಿ ಹಣಕಾಸಿನ ಸಂಸ್ಥೆಗಳಿಗೆ ಬಂಡವಾಳವನ್ನು ಒದಗಿಸಿದೆ.

ಮೌಲ್ಯೀಕರಣ
(Evaluation)

1. ಸಂಪನ್ಮೂಲಗಳ ಕೊರತೆ (Scarcity of Resources): ನಿಗಮದ ಕಾರ್ಯನಿರ್ವಹಣೆಯಲ್ಲಿ ಕೆಲವು ದೋಷಗಳನ್ನು ಗುರುತಿಸಲಾಗಿದೆ. ಅಂತರ ರಾಷ್ಟ್ರೀಯ ಹಣಕಾಸು ನಿಗಮವು ಸಾಕಷ್ಟು ಸಂಪನ್ಮೂಲಗಳನ್ನು ಹೊಂದಿರುವುದಿಲ್ಲ ಮತ್ತು ಅಭಿವೃದ್ಧಿಶೀಲ ದೇಶಗಳಲ್ಲಿ ಅದರ ಹೂಡಿಕೆಯ ಗಾತ್ರವು ಬಹಳ ಕಡಿಮೆ ಇದೆ ಎಂಬ ಟೀಕೆಗಳಿವೆ. ಆದರೆ ನಿಗಮವು ಖಿಸಾಗಿ ವಿದೇಶೀ ಬಂಡವಾಳವನ್ನು ಆಕರ್ಷಿಸಿ ಉತ್ಪಾದಕ ಚಟುವಟಿಕೆಗಳಲ್ಲಿ ಹೂಡಿಕೆಯಾಗುವಂತೆ ಮಾಡುತ್ತದೆಯೇ ಹೊರತು ತನ್ನ ಸ್ವಂತ ಸಂಪನ್ಮೂಲಗಳಿಂದ ಹೂಡಿಕೆಯನ್ನು ಕೈಗೊಳ್ಳುವ ಧ್ಯೇಯವನ್ನು ಹೊಂದಿರುವುದಿಲ್ಲ ಎಂಬ ಸಂಗತಿಯು ಗಮನಾರ್ಹವಾದುದು.

2. ಕಠಿಣ ಷರತ್ತುಗಳು (Stringent Conditions): ನಿಗಮವು ನೆರವನ್ನು ಒದಗಿಸುವಾಗ ವಿಧಿಸುವ ಕೆಲವು ಷರತ್ತುಗಳು ಏಷಿಗಿ ವಲಯದಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ಪೂರಕವಾಗಿಲ್ಲ ಎಂಬ ಆಪಾದನೆ ಇದೆ. ಸಾಲದ ಅಸಲಿನ ಮರುಪಾವತಿ ಮತ್ತು ಬಡ್ಡಿಯ ಪಾವತಿಯು ಅಮೆರಿಕದ ಡಾಲರುಗಳಲ್ಲಿಯೇ ಇರಬೇಕೆಂಬ ಷರತ್ತನ್ನು ನಿಗಮವು ವಿಧಿಸಿದೆ. ಅಮೆರಿಕದ ಡಾಲರ್ ಕಠಿಣ ನಾಣ್ಯವಾಗಿರುವುದರಿಂದ ಅದನ್ನು ಪಡೆಯುವುದು ಸುಲಭವಾಗಿರುವುದಿಲ್ಲ. ಹೀಗಾಗಿ ಅನೇಕ ದೇಶಗಳು ನಿಗಮದ ನೆರವಿನಿಂದ ನಂಚಿತವಾಗುತ್ತಿವೆ.

E. ಸುಂಕಗಳ ಮತ್ತು ವ್ಯಾಪಾರದ ಮೇಲಿನ ಸಾಮಾನ್ಯ ಒಪ್ಪಂದ
(General Agreement on Tariffs and Trade – GATT)

ಅಂತರರಾಷ್ಟ್ರೀಯ ವ್ಯಾಪಾರ ಕ್ಷೇತ್ರದಲ್ಲಿ ಒಂದು ನೀತಿಸಂಹಿತೆ ಮತ್ತು ನಿಯಮಾವಳಿಯನ್ನು ರಚಿಸಲು ಹಾಗೂ ವ್ಯಾಪಾರ ನಿರ್ಬಂಧಗಳನ್ನು ತಗ್ಗಿಸಲು ರಾಷ್ಟ್ರಗಳ ನಡುವೆ ಸಹಕಾರವನ್ನು ಹೆಚ್ಚಿಸಬೇಕೆಂಬ ಪ್ರಯತ್ನದ ಫಲವಾಗಿ 'ಸುಂಕಗಳ ಮತ್ತು ವ್ಯಾಪಾರದ ಮೇಲಿನ ಸಾಮಾನ್ಯ ಒಪ್ಪಂದ' ಜನ್ಮತಳೆಯಿತು. ಇದು ಸುಂಕಗಳ ಪ್ರಮಾಣವನ್ನು ಇಳಿಸುವ ಮೂಲಕ ವ್ಯಾಪಾರದ ಗಾತ್ರವನ್ನು ಹೆಚ್ಚಿಸಲು ವಿವಿಧ ರಾಷ್ಟ್ರಗಳ ನಡುವೆ ನಡೆದ ಒಡಂಬಡಿಕೆ ಎಂಬುದನ್ನು ಸ್ಥೂಲವಾಗಿ ಸೂಚಿಸುತ್ತದೆ. ಇದು ಮೂಲಭೂತವಾಗಿ ಒಂದು ವ್ಯಾಪಾರ ಒಪ್ಪಂದವಾಗಿದ್ದು ಅಕ್ಟೋಬರ್ 30, 1974ರಂದು 23 ದೇಶಗಳು ಇದಕ್ಕೆ ಸಹಿ ಮಾಡುವುದರೊಡನೆ ಅಸ್ತಿತ್ವಕ್ಕೆ ಬಂದಿತು. ಜನವರಿ 1, 1948ರಂದು ಇದು ಕಾರ್ಯಾಚರಣೆಯನ್ನು ಪ್ರಾರಂಭಿಸಿತು. ಇದರ ಕಾರ್ಯಾಲಯವು ಜಿನೀವಾದಲ್ಲಿದೆ.

ಒಟ್ಟಾರೆಯಾಗಿ ಹೇಳಬೇಕೆಂದರೆ, ಸುಂಕಗಳ ಮತ್ತು ವ್ಯಾಪಾರದ ಮೇಲಿನ ಸಾಮಾನ್ಯ ಒಪ್ಪಂದವು ಒಂದು ಸಂಸ್ಥೆಯಾಗಿ ಅಥವಾ ನ್ಯಾಯಾಲಯವಾಗಿ ಕಾರ್ಯನಿರ್ವಹಿಸುತ್ತಿಲ್ಲ. ಅದು ಸದಸ್ಯ ರಾಷ್ಟ್ರಗಳ ನಡುವೆ ನ್ಯಾಯಯುತವಾದ ಮತ್ತು ಮುಕ್ತವಾದ ಅಂತರರಾಷ್ಟ್ರೀಯ ವ್ಯಾಪಾರವನ್ನು ವೃದ್ಧಿಸಲು ಪ್ರಯತ್ನಿಸುತ್ತಿರುವ ಒಂದು ಬಹುರಾಷ್ಟ್ರೀಯ ಸಂಘಟನೆ ಮಾತ್ರ. ಸದಸ್ಯ ರಾಷ್ಟ್ರಗಳು ಸ್ವಪ್ರೇರಿತವಾಗಿ ಒಪ್ಪಿಕೊಂಡ ವ್ಯಾಪಾರದ ನೀತಿಸಂಹಿತೆಯನ್ನು ಎಷ್ಟರಮಟ್ಟಿಗೆ ಪಾಲಿಸುತ್ತಿವೆ ಎಂದು ವಿಮರ್ಶಿಸಲು ಒಂದು ವೇದಿಕೆಯಾಗಿ ಇದು ಕಾರ್ಯಮಗ್ನವಾಗಿದೆ. ಸುಂಕಗಳ ಮತ್ತು ವ್ಯಾಪಾರದ ಮೇಲಿನ ಸಾಮಾನ್ಯ ಒಪ್ಪಂದದ ನಿಯಮಗಳು ವ್ಯಾಪಾರ ವಿವಾದಗಳನ್ನು ಬಗೆಹರಿಸಲು ಸದಸ್ಯ ರಾಷ್ಟ್ರಗಳನ್ನು ಸಮಾಲೋಚನೆಗೆ ಕರೆಯಲು, ಕರಾರಿನ ನಿರ್ಬಂಧಗಳನ್ನು ಮನ್ನಾ ಮಾಡಲು ಮತ್ತು ಅಗತ್ಯಬಿದ್ದರೆ ಒಂದು ದೇಶವು ಬೇರೊಂದು ದೇಶದ ಮೇಲೆ ಸೇಡಿನ ಕ್ರಮಗಳನ್ನು ತೆಗೆದುಕೊಳ್ಳಲು ಅನುಮತಿ ನೀಡುವುದಕ್ಕೆ ಅವಕಾಶ ಮಾಡಿಕೊಟ್ಟಿವೆ. 1995ರಲ್ಲಿ ಶೇಕಡ 90ರಷ್ಟು ಅಂತರರಾಷ್ಟ್ರೀಯ ವ್ಯಾಪಾರವು ಈ ವೇದಿಕೆಯ ವ್ಯಾಪ್ತಿಗೆ ಒಳಪಟ್ಟಿತ್ತು.

ಧ್ಯೇಯೋದ್ದೇಶಗಳು
(Objectives)

ಸುಂಕಗಳ ಮತ್ತು ವ್ಯಾಪಾರದ ಮೇಲಿನ ಸಾಮಾನ್ಯ ಒಪ್ಪಂದವು ಈ ಕೆಳಗಿನ ಧ್ಯೇಯೋದ್ದೇಶಗಳ ಸಾಧನೆಗಾಗಿ ಅಸ್ತಿತ್ವಕ್ಕೆ ಬಂದಿತು.

1. ಸದಸ್ಯ ದೇಶಗಳ ನಡುವೆ ಪರಸ್ಪರತೆ ಮತ್ತು ಪಕ್ಷಪಾತ ರಹಿತ ತತ್ವಗಳ ಮೇಲೆ ವ್ಯಾಪಾರವನ್ನು ವೃದ್ಧಿಸುವುದು.

2. ಸ್ವದೇಶೀ ಉದ್ಯಮಕ್ಕೆ ವ್ಯಾಪಾರ ಸುಂಕದ ಮೂಲಕ ಮಾತ್ರ ರಕ್ಷಣೆಯನ್ನು ದೊರಕಿಸಿಕೊಡುವುದು.
3. ಬಹುಪಕ್ಷೀಯ ಸಮಾಲೋಚನೆಗಳ ಮುಖಾಂತರ ಸುಂಕಕ್ಕೆ ಸಂಬಂಧಿಸಿದ ಮತ್ತು ಇತರ ವ್ಯಾಪಾರ ನಿರ್ಬಂಧ ಕ್ರಮಗಳನ್ನು ಸಡಿಲಗೊಳಿಸುವುದು.

ಸುಂಕಗಳ ಮತ್ತು ವ್ಯಾಪಾರದ ಮೇಲಿನ ಸಾಮಾನ್ಯ ಒಪ್ಪಂದದ ನೀತಿಸಂಹಿತೆಯ ಪ್ರಕಾರ ಯಾವುದೊಂದು ಸದಸ್ಯ ದೇಶವು ಒಪ್ಪಂದಕ್ಕೆ ಸಂಬಂಧಿಸಿದ ಇತರ ದೇಶಗಳೊಡನೆ ಸಮಾಲೋಚನೆ ನಡೆಸದೆ ಸುಂಕದಲ್ಲಿ ಅಥವಾ ವಾಣಿಜ್ಯ ನೀತಿಯ ಯಾವುದೇ ಅಂಶದಲ್ಲಿ ಬದಲಾವಣೆಯನ್ನು ಮಾಡುವಂತಿರುವುದಿಲ್ಲ. ಅಲ್ಲದೆ ಸದಸ್ಯ ದೇಶಗಳು ಒಪ್ಪಂದದ ಚೌಕಟ್ಟಿನೊಳಗೆ ಬಹುಪಕ್ಷೀಯ ಸಮಾಲೋಚನೆಗಳ ಮುಖಾಂತರ ಸುಂಕಗಳನ್ನು ಹಾಗೂ ಅಂತರರಾಷ್ಟ್ರೀಯ ವ್ಯಾಪಾರದ ಇತರ ನಿರ್ಬಂಧಗಳನ್ನು ಕಡಿಮೆ ಮಾಡಲು ಕೆಲಸ ನಿರ್ವಹಿಸಬೇಕಾಗಿರುತ್ತದೆ.

ಈ ಧ್ಯೇಯೋದ್ದೇಶಗಳ ಸಾಧನೆಗಾಗಿ ಸುಂಕಗಳ ಮತ್ತು ವ್ಯಾಪಾರದ ಮೇಲಿನ ಸಾಮಾನ್ಯ ಒಪ್ಪಂದವು ಕೆಲವು ತತ್ವಗಳನ್ನು ಆಳವಡಿಸಿಕೊಂಡಿದೆ. ಆ ತತ್ವಗಳೆಂದರೆ :

1. ಭೇದ ತೋರದಿರುವಿಕೆ (Non-discrimination) : ಭೇದ ತೋರದಿರುವಿಕೆಯ ತತ್ವದ ಪ್ರಕಾರ ಸುಂಕಗಳ ಮತ್ತು ವ್ಯಾಪಾರದ ಮೇಲಿನ ಸಾಮಾನ್ಯ ಒಪ್ಪಂದದ ಯಾವುದೇ ಸದಸ್ಯ ದೇಶವು ಅಂತರರಾಷ್ಟ್ರೀಯ ವ್ಯಾಪಾರದ ನಿರ್ವಹಣೆಯಲ್ಲಿ ಇತರ ಸದಸ್ಯ ದೇಶಗಳಿಗೆ ಪಕ್ಷಪಾತವನ್ನು ತೋರುವಂತಿರುವುದಿಲ್ಲ. ಇದನ್ನು ಅನುಷ್ಠಾನಗೊಳಿಸಲು ಸದಸ್ಯ ದೇಶಗಳಿಗೆ ಎಲ್ಲಾ ಆಮದು ಮತ್ತು ರಫ್ತು ಸುಂಕಗಳಲ್ಲಿ 'ಅಧಿಕ ಅನುಗ್ರಹ ಪಡೆದ ರಾಷ್ಟ್ರ' (Most Favoured Nation)ದ ತತ್ವವನ್ನು ಅನುಸರಿಸುತ್ತವೆ. ಅಂದರೆ ಪ್ರತಿಯೊಂದು ದೇಶವನ್ನೂ ವ್ಯಾಪಾರದಲ್ಲಿ ಅಧಿಕ ಕೃಪೆಗೊಳಗಾದ ಅಥವಾ ಅನುಗ್ರಹ ಪಡೆದ ದೇಶವೆಂದು ಪರಿಗಣಿಸಲಾಗುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಸದಸ್ಯ ದೇಶವು ವ್ಯಾಪಾರದಲ್ಲಿ ಒಂದು ದೇಶಕ್ಕೆ ಕಡಿಮೆ ಕೃಪೆ ಹಾಗೂ ಬೇರೊಂದು ದೇಶಕ್ಕೆ ಹೆಚ್ಚಿನ ಕೃಪೆ ತೋರಿಸುವಂತಿರುವುದಿಲ್ಲ. ಅಧಿಕ ಅನುಗ್ರಹ ಪಡೆದ ರಾಷ್ಟ್ರದ ತತ್ವದ ಮೇರೆಗೆ ಒಂದು ದೇಶವು ಮತ್ತೊಂದು ದೇಶಕ್ಕೆ ನೀಡುವ ಸುಂಕ ರಿಯಾಯಿತಿಗಳನ್ನು ತನ್ನೊಡನೆ ವ್ಯಾಪಾರ ಸಂಬಂಧವನ್ನು ಹೊಂದಿರುವ ಉಳಿದ ಎಲ್ಲಾ ದೇಶಗಳಿಗೂ ವಿಸ್ತರಿಸಲಾಗುತ್ತದೆ. ಒಪ್ಪಂದಕ್ಕೊಳಪಟ್ಟ ದೇಶಗಳು ಹೊಸ ರಿಯಾಯಿತಿಗಳನ್ನು ಕೊಡುವುದನ್ನು ಇದು ನಿಷೇಧಿಸುತ್ತದೆ.

2. ಪರಿಮಾಣಾತ್ಮಕ ನಿಯಂತ್ರಣಗಳ ನಿಷೇಧ (Prohibition of Quantitative Restrictions): ಸದಸ್ಯ ರಾಷ್ಟ್ರಗಳ ನಡುವೆ ವ್ಯಾಪಾರದಲ್ಲಿ ಪರಿಮಾಣಾತ್ಮಕ ನಿರ್ಬಂಧಗಳಿರಬಾರದು ಎಂದು ಈ ತತ್ವವು ನಿಯಮಿಸಿದೆ. ಒಂದು ದೇಶವು ಇನ್ನೊಂದು ದೇಶದಿಂದ ಆಮದು ಮಾಡಿಕೊಳ್ಳುವ ಸರಕಿನ ಮೇಲೆ ದೇಯಾಂಶ (Quota) ನಿಯಂತ್ರಣವನ್ನು

ವಿಧಿಸಬಾರದು ಎಂದು ಇದರರ್ಥ. ಅಂದರೆ ಒಂದು ದೇಶವು ಇನ್ನೊಂದು ದೇಶದಿಂದ ಯಾವುದೊಂದು ಸರಕನ್ನು ಈ ಮೊದಲು ಎಷ್ಟು ಆಮದು ಮಾಡಿಕೊಳ್ಳುತ್ತಿತ್ತೋ ಅದನ್ನು ಒಮ್ಮೆಲೇ ನಿರ್ಬಂಧಿಸಿದರೆ ಅಥವಾ ಬಹಳವಾಗಿ ಕಡಿಮೆ ಮಾಡಿದರೆ ರಫ್ತು ಮಾಡುತ್ತಿರುವ ದೇಶಕ್ಕೆ ಅಪಾರವಾದ ವಿದೇಶೀ ವಿನಿಮಯ ನಷ್ಟವಾಗುತ್ತದೆ. ಆದ್ದರಿಂದ ಆಮದುಗಾರ ದೇಶವು ದೇಯಾಂಶಗಳನ್ನು ವಿಧಿಸಬಾರದು ಎಂಬ ತತ್ವವನ್ನು ಅಳವಡಿಸಲಾಗುತ್ತದೆ.

ಆದರೆ ಕೆಲವು ಸಂದರ್ಭಗಳಲ್ಲಿ ಅಭಿವೃದ್ಧಿಶೀಲ ದೇಶಗಳಿಗೆ ಹಾಗೂ ಪಾವತಿ ಶಿಲ್ಕಿನ ಬಿಕ್ಕಟ್ಟನ್ನು ಎದುರಿಸುತ್ತಿರುವ ದೇಶಗಳಿಗೆ ಪರಿಮಾಣಾತ್ಮಕ ನಿಯಂತ್ರಣಗಳ ನಿಷೇಧದಿಂದ ವಿನಾಯಿತಿ ಕೊಡಲಾಗುತ್ತದೆ. ಅಲ್ಲದೆ ವ್ಯವಸಾಯೋತ್ಪನ್ನಗಳು ಮತ್ತು ಮೀನು ಉತ್ಪನ್ನಗಳು ಸ್ವದೇಶದಲ್ಲಿ ಮಾರುಕಟ್ಟೆಯ ನಿಯಂತ್ರಣಗಳಿಗೆ ಒಳಪಟ್ಟಿದ್ದರೆ ಆ ವಸ್ತುಗಳ ಮೇಲೆ ಆಮದು ನಿಯಂತ್ರಣಗಳನ್ನು ಅನ್ವಯಿಸಲಾಗುವುದಿಲ್ಲ.

3. ಸಮಾಲೋಚನೆ (Consultation) : ಅಂತರರಾಷ್ಟ್ರೀಯ ವ್ಯಾಪಾರವನ್ನು ಕುರಿತಂತೆ ಸದಸ್ಯ ದೇಶಗಳ ನಡುವಿನ ಯಾವುದೇ ಭಿನ್ನಾಭಿಪ್ರಾಯವನ್ನು ನಿರಂತರ ಸಮಾಲೋಚನೆಯ ಮೂಲಕ ಬಗೆಹರಿಸಲಾಗುತ್ತದೆ. ಸುಂಕಗಳ ಮತ್ತು ವ್ಯಾಪಾರದ ಮೇಲಿನ ಸಾಮಾನ್ಯ ಒಪ್ಪಂದವು ಈ ಸಮಾಲೋಚನೆಗೆ ಒಂದು ವೇದಿಕೆಯಾಗಿ ಕೆಲಸ ನಿರ್ವಹಿಸುತ್ತದೆ.

4. ವಿವಾದಗಳ ತೀರ್ಮಾನ (Settlement of Disputes) : ಯಾವುದೇ ಸದಸ್ಯ ರಾಷ್ಟ್ರವು ಒಪ್ಪಂದದ ನಿಯಮಾವಳಿಗಳಿಗೆ ವಿರುದ್ಧವಾಗಿ ನಡೆದುಕೊಂಡರೆ ಅದರ ವಿರುದ್ಧ ಒಪ್ಪಂದಕ್ಕೊಳಪಟ್ಟ ಯಾವುದೇ ದೇಶವು ದೂರು ಸಲ್ಲಿಸಬಹುದಾಗಿರುತ್ತದೆ. ಇಂತಹ ವ್ಯಾಜ್ಯಗಳನ್ನು ಬಗೆಹರಿಸಲು ಸುಂಕಗಳ ಮತ್ತು ವ್ಯಾಪಾರದ ಮೇಲಿನ ಸಾಮಾನ್ಯ ಒಪ್ಪಂದವು ಮೂರು ಅಥವಾ ಐದು ಮಂದಿ ಸ್ವತಂತ್ರ ನ್ಯಾಯದರ್ಶಿಗಳನ್ನು ನೇಮಿಸಿಕೊಳ್ಳುತ್ತದೆ. ನ್ಯಾಯದರ್ಶಿಗಳ ಸಮಿತಿಯು ಮಾಡಿದ ಶಿಫಾರ್ಸುಗಳನ್ನು 'ಒಪ್ಪಂದ' ಸಮಿತಿಗೆ ಸಲ್ಲಿಸಲಾಗುತ್ತದೆ. ಸಮಿತಿಯು ಈ ಶಿಫಾರ್ಸುಗಳ ಮತ್ತು ಸಮಾಲೋಚನೆಯ ಮೂಲಕ ವಿವಾದಗಳನ್ನು ತೀರ್ಮಾನಿಸುತ್ತದೆ.

ವಿವಿಧ ಸುತ್ತುಗಳ ಸಮಾಲೋಚನೆ (ಸಂಧಾನ)ಗಳು

ಸುಂಕಗಳ ಮತ್ತು ವ್ಯಾಪಾರದ ಮೇಲಿನ ಸಾಮಾನ್ಯ ಒಪ್ಪಂದವು ಅಸ್ತಿತ್ವಕ್ಕೆ ಬಂದ ನಂತರ ಅಂದರೆ 1947ರಿಂದ ಅದು ಅಸ್ತಿತ್ವದಲ್ಲಿರುವವರೆಗೆ ಒಟ್ಟು ಎಂಟು ಸುತ್ತುಗಳ ಬಹುಪಕ್ಷೀಯ ವ್ಯಾಪಾರ ಸಮಾಲೋಚನೆಗಳು ನಡೆದಿವೆ. ಇವುಗಳು ನಡೆದ ಸ್ಥಳಗಳು ಮತ್ತು ವರ್ಷಗಳೆಂದರೆ:

1.	ಜಿನೀವಾ	(ಸ್ವಿಟ್ಜರ್ಲೆಂಡ್)	1947
2.	ಅಲೆಕಿ	(ಫ್ರಾನ್ಸ್)	1949
3.	ಟೋರ್ಕ್ವೇ	(ಇಂಗ್ಲೆಂಡ್)	1950-51

4.	ಜಿನೀವಾ	(ಸ್ವಿಟ್ಜರ್ಲೆಂಡ್)	1955-56
5.	ಜಿನೀವಾ	(ಸ್ವಿಟ್ಜರ್ಲೆಂಡ್)	1959-62
6.	ಜಿನೀವಾ	(ಸ್ವಿಟ್ಜರ್ಲೆಂಡ್)	1963-67
7.	ಟೋಕಿಯೋ	(ಜಪಾನ್)	1973-79
8.	ಪುಂಟ ಡೆಲ್ ಎಸ್ಟ್	(ಉರುಗ್ವೇ)	1986-91

ಇವುಗಳಲ್ಲಿ ಆರನೆಯ, ಏಳನೆಯ ಮತ್ತು ಎಂಟನೆಯ ಸಮಾವೇಶಗಳು ಸಮಕಾಲೀನ ಪರಿಸ್ಥಿತಿಯಲ್ಲಿ ಹೆಚ್ಚು ಔಚಿತ್ಯಪೂರ್ಣವಾಗಿವೆ. ಆದುದರಿಂದ ಅವುಗಳಿಗೆ ಅಧಿಕ ಮಹತ್ವ ನೀಡಲಾಗಿದೆ. ಜಿನೀವಾದಲ್ಲಿ ನಡೆದ ಆರನೆಯ ಸಮಾವೇಶವನ್ನು "ಕೆನಡಿ ಸುತ್ತು" (Kennedy Round) ಎಂತಲೂ, ಟೋಕಿಯೋದಲ್ಲಿ ನಡೆದ ಏಳನೆಯ ಸಮಾವೇಶವನ್ನು ಟೋಕಿಯೋ ಸುತ್ತು (Tokiyo Round) ಎಂತಲೂ, ಎಂಟನೆಯ ಸಮಾವೇಶವನ್ನು "ಉರುಗ್ವೇ ಸುತ್ತು" (Uruguay Round) ಎಂತಲೂ ಕರೆಯಲಾಗುತ್ತದೆ.

ವಿವಿಧ ಸುತ್ತುಗಳ ಸಂಧಾನಗಳನ್ನು ಸಾರರೂಪವಾಗಿ ಕೆಳಗಿನಂತೆ ವಿವರಿಸಲಾಗಿದೆ.

I. ಒಂದನೆಯ ಸುತ್ತಿನ ಸಂಧಾನಗಳು (First Round of Negotiations) : ಸುಂಕಗಳ ಮತ್ತು ವ್ಯಾಪಾರದ ಮೇಲಿನ ಸಾಮಾನ್ಯ ಒಪ್ಪಂದದ ಮೊದಲನೆಯ ಸುತ್ತಿನ ಸಂಧಾನಗಳು ಸ್ವಿಟ್ಜರ್ಲೆಂಡಿನ ಜಿನೀವಾದಲ್ಲಿ 1947ರಲ್ಲಿ ನಡೆದವು. ಈ ಮಾತುಕತೆಗಳಲ್ಲಿ 25 ಸದಸ್ಯ ದೇಶಗಳು ಭಾಗವಹಿಸಿದ್ದವು. ಈ ಸಮಾವೇಶದಲ್ಲಿ ಸುಂಕಗಳ ಮತ್ತು ವ್ಯಾಪಾರದ ಮೇಲಿನ ಸಾಮಾನ್ಯ ಒಪ್ಪಂದದ (ಗ್ಯಾಟ್) ಸಂಸ್ಥೆಯನ್ನು ಸ್ಥಾಪಿಸುವ ಬಗೆಗೆ ಚರ್ಚೆಗಳನ್ನು ನಡೆಸಿ ರೂಪುರೇಷೆಗಳನ್ನು ಸಿದ್ಧಪಡಿಸಲಾಯಿತು.

II. ಎರಡನೆಯ ಸುತ್ತಿನ ಸಂಧಾನಗಳು (Second Round of Negotiations): ಗ್ಯಾಟ್‌ನ ಎರಡನೆಯ ಸುತ್ತಿನ ಸಂಧಾನಗಳು ಫ್ರಾನ್ಸಿನ ಅಲೆಕಿ ಎಂಬಲ್ಲಿ 1949ರಲ್ಲಿ ನಡೆದವು. ಈ ಸಮಾವೇಶದಲ್ಲಿ 11 ಸದಸ್ಯ ದೇಶಗಳು ಮಾತ್ರ ಭಾಗವಹಿಸಿದ್ದವು. ಈ ಸುತ್ತಿನ ಸಂಧಾನಗಳಲ್ಲಿ ಗಮನಾರ್ಹ ವಾದ ವಿಷಯಗಳನ್ನು ಚರ್ಚಿಸಲಿಲ್ಲ ಮತ್ತು ತೀರ್ಮಾನಗಳನ್ನು ಕೈಗೊಳ್ಳಲಿಲ್ಲ. ಏಕೆಂದರೆ ಈ ಸಮಾವೇಶವು ನಡೆಯುವ ವೇಳೆಗೆ ಗ್ಯಾಟ್ ತನ್ನ ಕಾರ್ಯವನ್ನು ಪ್ರಾರಂಭಿಸಿ ಎರಡು ವರ್ಷಗಳು ಮಾತ್ರ ಆಗಿದ್ದುದರಿಂದ ಪ್ರಮುಖ ನಿರ್ಣಯಗಳನ್ನು ಕೈಗೊಳ್ಳುವಂತಹ ವಿಚಾರಗಳು ಇರಲಿಲ್ಲ.

III. ಮೂರನೆಯ ಸುತ್ತಿನ ಸಂಧಾನಗಳು (Third Round of Negotiations) : ಮೂರನೆಯ ಸುತ್ತಿನ ಮಾತುಕತೆಗಳು ಇಂಗ್ಲೆಂಡಿನ ಟೋರ್ಕ್ವೇ ಎಂಬಲ್ಲಿ 1950-51ರಲ್ಲಿ ಜರುಗಿದವು. ಈ ಸಂಧಾನಗಳನ್ನು ಕುರಿತ ಸಮಾವೇಶದಲ್ಲಿ 38 ಸದಸ್ಯ ದೇಶಗಳು ಭಾಗವಹಿಸಿದ್ದವು. ಸದಸ್ಯ ದೇಶಗಳ ನಡುವೆ ವ್ಯಾಪಾರದ ಬೆಳವಣಿಗೆಯನ್ನು ಕುರಿತ ವಿಷಯ

ಗಳನ್ನು ಈ ಸಮಾವೇಶದಲ್ಲಿ ಚರ್ಚಿಸಲಾಯಿತು.

IV. ನಾಲ್ಕನೆಯ ಸುತ್ತಿನ ಸಂಧಾನಗಳು (Fourth Round of Negotiations) : 'ಒಪ್ಪಂದ'ದ ನಾಲ್ಕನೆಯ ಸುತ್ತಿನ ಸಂಧಾನಗಳು ಸ್ವಿಟ್ಜರ್ಲೆಂಡಿನ ಜಿನೀವಾದಲ್ಲಿ 1955-56ರಲ್ಲಿ ನಡೆದವು. ಈ ಸಂಧಾನಗಳಲ್ಲಿ ಒಟ್ಟು 28 ಸದಸ್ಯ ದೇಶಗಳು ಪಾಲ್ಗೊಂಡಿದ್ದವು.

V. ಐದನೆಯ ಸುತ್ತಿನ ಸಂಧಾನಗಳು (Fifth Round of Negotiations) : ಗ್ಯಾಟ್‌ನ ಐದನೆಯ ಸಮಾವೇಶವು ಸ್ವಿಟ್ಜರ್ಲೆಂಡಿನ ಜಿನೀವಾದಲ್ಲಿ 1959-62ರಲ್ಲಿ ನಡೆಯಿತು. ಈ ಸುತ್ತಿನ ಸಂಧಾನಗಳಲ್ಲಿ 28 ಸದಸ್ಯ ದೇಶಗಳು ಭಾಗವಹಿಸಿದ್ದವು. ಸುಂಕಗಳ ಪ್ರಮಾಣವನ್ನು ಕಡಿಮೆ ಮಾಡುವ ಮುಖಾಂತರ ವ್ಯಾಪಾರದ ಗಾತ್ರವನ್ನು ವಿಸ್ತರಿಸಲು ಕೈಗೊಳ್ಳಬೇಕಾದ ಕ್ರಮಗಳನ್ನು ಕುರಿತಂತೆ ವ್ಯಾಪಕವಾಗಿ ಈ ಸಮಾವೇಶದಲ್ಲಿ ಚರ್ಚಿಸಲಾಯಿತು.

VI. ಕೆನಡಿ ಸುತ್ತಿನ ಸಂಧಾನಗಳು (Kennedy Round of Negotiations) : ಗ್ಯಾಟ್‌ನ ಆರನೆಯ ಸುತ್ತಿನ ಸಂಧಾನಗಳು ಸ್ವಿಟ್ಜರ್ಲೆಂಡಿನ ಜಿನೀವಾದಲ್ಲಿ 1963-67ರಲ್ಲಿ ನಡೆದವು. ಈ ಸಂಧಾನಗಳು **'ಕೆನಡಿ ಸುತ್ತಿನ ಮಾತುಕತೆಗಳು'** ಎಂದೇ ಪ್ರಸಿದ್ಧ. ಈ ಸಂಧಾನಗಳಲ್ಲಿ 65 ಸದಸ್ಯ ದೇಶಗಳು ಭಾಗವಹಿಸಿದ್ದವು. ಕೆನಡಿ ಸುತ್ತಿನ ಸಂಧಾನಗಳಿಗೆ ವಿಶೇಷವಾದ ಮಹತ್ವವಿದೆ.

1950ರಲ್ಲಿ ಜಾನ್. ಎಫ್. ಕೆನಡಿ ಅಮೇರಿಕಾದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಸಂದರ್ಭದಲ್ಲಿ ಆ ದೇಶದ ವಿದೇಶೀ ವ್ಯಾಪಾರ ಪರಿಸ್ಥಿತಿಯು ಉತ್ತಮವಾಗಿರಲಿಲ್ಲ. ರಫ್ತು ಸರಕುಗಳಿಗೆ ಸಾಕಷ್ಟು ಬೇಡಿಕೆ ಇಲ್ಲದಂತಹ ಸ್ಥಿತಿ ನೆಲೆಸಿತ್ತು. ಅಮೇರಿಕಾದ ಸುಂಕದ ದರಗಳು ಅಧಿಕವಾಗಿರುವುದೇ ಇದಕ್ಕೆ ಕಾರಣ ಎಂಬ ವಿಚಾರವು ಆಗ ತಿಳಿದುಬಂದಿತು. ನ್ಯೂನತೆಗಳನ್ನು ಸರಿಪಡಿಸಿ ವ್ಯಾಪಾರ ಪರಿಸ್ಥಿತಿಯನ್ನು ಉತ್ತಮಪಡಿಸುವ ಉದ್ದೇಶದಿಂದ ಕೆನಡಿ 1962ರ ಅಕ್ಟೋಬರ್ ತಿಂಗಳ ನಲ್ಲಿ **'ವ್ಯಾಪಾರ ವಿಸ್ತರಣ ಕಾಯಿದೆ'** (Trade Expansion Act) ಯನ್ನು ಜಾರಿಗೆ ತಂದರು. ಸುಂಕದ ದರಗಳನ್ನು ಶೇಕಡ 50ರ ವರೆಗೆ ಇಳಿಸಲು ಈ ಕಾಯಿದೆಯು ಅವಕಾಶ ಕಲ್ಪಿಸಿತು. ಸುಂಕಗಳ ಮತ್ತು ವ್ಯಾಪಾರದ ಮೇಲಿನ ಒಪ್ಪಂದದ ಸದಸ್ಯ ದೇಶಗಳು ಅಮೇರಿಕಾದ ಈ ಕಾಯಿದೆಯಿಂದ ಸ್ಫೂರ್ತಿ ಗೊಂಡವು. ಆರನೆಯ ಸುತ್ತಿನ ಸಂಧಾನಗಳಲ್ಲಿ ಸುಂಕದ ಕಡಿತವನ್ನೇ ಪ್ರಮುಖ ವಿಷಯವಾಗಿ ಇಟ್ಟುಕೊಂಡು ಚರ್ಚೆಯನ್ನು ಆರಂಭಿಸಲಾಯಿತು. ಆದುದರಿಂದ ಇದಕ್ಕೆ **'ಕೆನಡಿ ಸುತ್ತು'** ಎಂಬ ಹೆಸರು ಬಂದಿದೆ.

ಕೆನಡಿ ಸುತ್ತಿನ ಸಂಧಾನಗಳಲ್ಲಿ ಮುಖ್ಯವಾಗಿ ಎರಡು ವಿಷಯಗಳ ಬಗೆಗೆ ಒಪ್ಪಂದಕ್ಕೆ ಬರಲಾಯಿತು. ಅವುಗಳೆಂದರೆ :

(i) ಸುಂಕದ ದರಗಳನ್ನು ಶೇಕಡ 50ರಷ್ಟು ಕಡಿಮೆ ಮಾಡುವುದು.

(ii) ಕೈಗಾರಿಕಾ ಮತ್ತು ಬಂಡವಾಳ ಸರಕುಗಳ ವ್ಯಾಪಾರದ ವಿಸ್ತರಣೆಗೆ ಸೂಕ್ತ ಪ್ರೇರಣೆಗಳನ್ನು ಒದಗಿಸುವುದು.

ಈ ಒಪ್ಪಂದಕ್ಕೆ 1967 ಜೂನ್ ತಿಂಗಳಿನಲ್ಲಿ ಸದಸ್ಯ ದೇಶಗಳು ಸಹಿ ಹಾಕಿದವು.

ಕೆನಡಿ ಸುತ್ತಿನ ಸಂಧಾನಗಳು ಮೂಲಭೂತವಾಗಿ ಶ್ರೀಮಂತ ದೇಶಗಳಿಗೆ ಅನುಕೂಲಕರವಾಗಿದ್ದವು. ಅನಭಿವೃದ್ಧ ದೇಶಗಳಿಗೆ ಈ ಸಂಧಾನಗಳಿಂದ ಹೆಚ್ಚಿನ ಪ್ರಯೋಜನವಾಗಲಿಲ್ಲ. ಅಲ್ಪಾಭಿವೃದ್ಧ ದೇಶಗಳ ಪ್ರಧಾನ ಉತ್ಪನ್ನಗಳಾದ ಪ್ರಾಥಮಿಕ ಸರಕುಗಳ ವ್ಯಾಪಾರದ ವಿಸ್ತರಣೆಗೆ ಸಂಬಂಧಿಸಿದಂತೆ ಉತ್ತೇಜಕ ಕ್ರಮಗಳನ್ನು ಕೈಗೊಳ್ಳಲು 1964ರಲ್ಲಿ ಜರುಗಿದ ಗ್ಯಾಟ್‌ನ ಸದಸ್ಯ ದೇಶಗಳ ವಾಣಿಜ್ಯ ಸಚಿವರ ಸಮಾವೇಶದಲ್ಲಿ ಸಲಹೆ ನೀಡಲಾಗಿದ್ದರೂ ಸಹ ಅಂತಿಮವಾಗಿ ಈ ಕುರಿತಂತೆ ಯಾವುದೇ ನಿರ್ಣಯಗಳನ್ನು ತೆಗೆದುಕೊಳ್ಳಲಿಲ್ಲ.

VII. ಟೋಕಿಯೋ ಸುತ್ತಿನ ಸಂಧಾನಗಳು (Tokiyo Round of Negotiations) : ಒಪ್ಪಂದದ ಏಳನೆಯ ಸುತ್ತಿನ ಸಂಧಾನಗಳು ಜಪಾನಿನ ಟೋಕಿಯೋದಲ್ಲಿ 1973ರಿಂದ 1979ರ ವರೆಗೆ ನಡೆದವು. ಆದ್ದರಿಂದ ಇವುಗಳನ್ನು **'ಟೋಕಿಯೋ ಸುತ್ತಿನ ಸಂಧಾನಗಳು'** ಎಂದು ಕರೆಯಲಾಗಿದೆ. ಈ ಸಂಧಾನಗಳಲ್ಲಿ 102 ಸದಸ್ಯ ದೇಶಗಳು ಭಾಗವಹಿಸಿದ್ದವು.

ಟೋಕಿಯೋ ಸುತ್ತಿನ ಮಾತುಕತೆಗಳಲ್ಲಿ ಮುಖ್ಯವಾಗಿ ನಾಲ್ಕು ವಿಷಯಗಳ ಬಗೆಗೆ ಒಪ್ಪಂದಕ್ಕೆ ಬರಲಾಯಿತು. ಇವುಗಳೆಂದರೆ : (i) ಸುಂಕಗಳ ಕಡಿತ, (ii) ಸುಂಕೇತರ ನಿರ್ಬಂಧಗಳನ್ನು ನಿರ್ಮೂಲನ ಮಾಡುವಿಕೆ, (iii) ಹೈನು ಉತ್ಪನ್ನಗಳ ಒಪ್ಪಂದ, ಮತ್ತು (iv) ಆಯ್ದ ಕ್ಷೇತ್ರಗಳಲ್ಲಿ ವ್ಯಾಪಾರ ನಿರ್ಬಂಧಗಳ ಪರಸ್ಪರ ಸಡಿಲಿಕೆ.

1. ಸುಂಕಗಳ ಕಡಿತ (Reduction of Tariffs): ವ್ಯಾಪಾರ ವಿಸ್ತರಣೆ ದೃಷ್ಟಿಯಿಂದ ಸುಂಕಗಳ ದರಗಳನ್ನು ಕಡಿಮೆ ಮಾಡುವ ಅವಶ್ಯಕತೆಗಳನ್ನು ಟೋಕಿಯೋ ಸುತ್ತಿನ ಸಂಧಾನಗಳಲ್ಲಿ ಬಹಳ ವಿಸ್ತೃತವಾಗಿ ಚರ್ಚಿಸಲಾಯಿತು. ಈ ಬಗೆಗೆ ಹಿಂದಿನ ಸುತ್ತುಗಳ ಸಂಧಾನಗಳಲ್ಲಿ ಚರ್ಚೆ ನಡೆದಿದ್ದಿತ್ತಾದರೂ ಸಹ ಟೋಕಿಯೋ ಸುತ್ತಿನ ಸಂಧಾನಗಳಲ್ಲಿ ಆದಷ್ಟು ಪರಿಣಾಮಕಾರಿಯಾಗಿರಲಿಲ್ಲ. ಈ ಸಂಧಾನಗಳ ಫಲವಾಗಿ ಅಭಿವೃದ್ಧಿಹೊಂದಿದ ದೇಶಗಳು ತಾವು ಸರಕುಗಳ ಮೇಲೆ ವಿಧಿಸುತ್ತಿದ್ದ ಸುಂಕಗಳ $^1/_3$ ರಷ್ಟನ್ನು ಕಡಿತಗೊಳಿಸಲು ಒಪ್ಪಿಕೊಂಡವು. ಆದರೆ ಈ ಸುಂಕ ಕಡಿತಗಳು ಅಲ್ಪಾಭಿವೃದ್ಧ ದೇಶಗಳಿಗೆ ಬದಲಾಗಿ ಶ್ರೀಮಂತ ದೇಶಗಳಿಗೆ ಪ್ರಯೋಜನಕಾರಿಯಾಗಿರುತ್ತವೆ. ಏಕೆಂದರೆ ಶ್ರೀಮಂತ ದೇಶಗಳ ನಡುವಿನ ಯಂತ್ರ ಸಾಮಗ್ರಿಗಳು, ರಾಸಾಯನಿಕವಸ್ತುಗಳು, ಸಾರಿಗೆ ಉಪಕರಣಗಳು ಮತ್ತು ಮರದ ಉತ್ಪನ್ನಗಳ ರಫ್ತುಗಳಿಗೆ ಮಾತ್ರ ಅನ್ವಯಿಸುವಂತಹ ನಿಯಮವನ್ನು ಮಾಡಲಾಯಿತು.

2. ಸುಂಕೇತರ ನಿರ್ಬಂಧಗಳನ್ನು ನಿರ್ಮೂಲನ ಮಾಡುವಿಕೆ (Removal of Non-tariff Restrictions): ಆಡೆತಡೆಗಳಿಲ್ಲದೆ ವ್ಯಾಪಾರದ ಗಾತ್ರವನ್ನು ಹೆಚ್ಚಿಸುವ ದೃಷ್ಟಿಯಿಂದ ಸುಂಕೇತರ ನಿರ್ಬಂಧಗಳನ್ನು ನಿರ್ಮೂಲನ ಮಾಡುವ ಅವಶ್ಯಕತೆಯನ್ನು ಮನಗಾಣಲಾಯಿತು. ಟೋಕಿಯೋ ಸುತ್ತಿನ ಸಂಧಾನಗಳಲ್ಲಿ ಸುಂಕೇತರ ನಿರ್ಬಂಧಗಳ ನಿವಾರಣೆಗೆ ಸದಸ್ಯ ದೇಶಗಳು ಬದ್ಧವಾಗಿರುವಂತಹ ನಿಯಮಾವಳಿಗಳನ್ನು ರಚಿಸಲಾಯಿತು.

3. ಹೈನು ಉತ್ಪನ್ನಗಳ ಒಪ್ಪಂದ (Agreement on Dairy Products): ಹೈನು ಉತ್ಪನ್ನಗಳ ವ್ಯಾಪಾರ ವೃದ್ಧಿಗೆ ಸಂಬಂಧಿಸಿ ದಂತೆ ಟೋಕಿಯೋ ಸುತ್ತಿನ ಮಾತುಕತೆಗಳಲ್ಲಿ ಪರಿಣಾಮಕಾರಿಯಾದ ತೀರ್ಮಾನಗಳನ್ನು ತೆಗೆದುಕೊಳ್ಳಲಾಯಿತು. ಒಂದು 'ಅಂತರ ರಾಷ್ಟ್ರೀಯ ಹೈನು ಉತ್ಪನ್ನಗಳ ಸಮಿತಿ' (International Dairy Products Council) ಯನ್ನು ಸ್ಥಾಪಿಸುವ ನಿರ್ಣಯವನ್ನು ಈ ಸಮಾವೇಶದಲ್ಲಿ ಸದಸ್ಯ ದೇಶಗಳು ಕೈಗೊಂಡವು. ಹೈನು ಉದ್ಯಮದ ಎಲ್ಲಾ ಉತ್ಪನ್ನಗಳ ವ್ಯಾಪಾರಕ್ಕೆ ಸಂಬಂಧಿಸಿದಂತೆ ವ್ಯಾಪಕವಾದ ಒಪ್ಪಂದಕ್ಕೆ ಬರಲಾಯಿತು.

4. ಆಯ್ದ ಕ್ಷೇತ್ರಗಳಲ್ಲಿ ವ್ಯಾಪಾರ ನಿರ್ಬಂಧಗಳ ಪರಸ್ಪರ ಸಡಿಲಿಕೆ (Mutual Relaxation of Trade Restrictions in Selected Areas): ಸದಸ್ಯ ದೇಶಗಳು ವ್ಯಾಪಾರ ನಿರ್ಬಂಧಗಳನ್ನು ಕಡಿಮೆ ಮಾಡಿದರೆ ವ್ಯಾಪಾರದ ವಿಸ್ತರಣೆಗೆ ಅವಕಾಶವಾಗುತ್ತದೆಂದು ಪ್ರಬಲವಾಗಿ ನಂಬಿ ಈ ಪರಿತಾಂತೆ ಒಪ್ಪಂದಕ್ಕೆ ಬರಲಾಯಿತು. ಕೆಲವು ಆಯ್ದ ಕ್ಷೇತ್ರಗಳಲ್ಲಿ ವ್ಯಾಪಾರ ನಿರ್ಬಂಧಗಳನ್ನು ಸಡಿಲಿಸಲು ಸದಸ್ಯ ರಾಷ್ಟ್ರಗಳು ಒಪ್ಪಿಕೊಂಡವು.

VIII. ಉರುಗ್ವೇ ಸುತ್ತಿನ ಸಂಧಾನಗಳು (ಡಂಕೆಲ್ ಪ್ರಸ್ತಾವನೆಗಳು) (Uruguay Round of Negotiations – Dunkel Proposals) : ಉರುಗ್ವೇ ದೇಶದ ರಾಜಧಾನಿಯಾದ ಪುಂಟ ಡೆಲ್ ಎಸ್ಟ್ ನಗರದಲ್ಲಿ ಸುಂಕಗಳ ಮತ್ತು ವ್ಯಾಪಾರದ ಮೇಲಿನ ಸಾಮಾನ್ಯ ಒಪ್ಪಂದದ (ಗ್ಯಾಟ್) ಸದಸ್ಯ ರಾಷ್ಟ್ರಗಳ ವಾಣಿಜ್ಯ ಮಂತ್ರಿಗಳ ಪ್ರಾಸ್ತಾವಿಕ ಸಮಾವೇಶವು 1986ನೇ ಸೆಪ್ಟೆಂಬರ್ 20 ರಂದು ಜರುಗಿತು. ಇದರೊಂದಿಗೆ ಗ್ಯಾಟ್‌ನ ಎಂಟನೇ ಸುತ್ತಿನ ಸಂಧಾನಗಳು ಪ್ರಾರಂಭವಾದವು. ಇದು ಉರುಗ್ವೇ ಸುತ್ತಿನ ಸಂಧಾನಗಳು ಎಂತಲೇ ಪ್ರಸಿದ್ಧಿಯಾಗಿದೆ. ಈ ಸಂಧಾನಗಳು 1986ರಿಂದ 1991ರ ವರೆಗೆ ನಡೆದವು. ಇದರಲ್ಲಿ 115 ಸದಸ್ಯ ದೇಶಗಳು ಪಾಲ್ಗೊಂಡಿದ್ದವು.

ಸುಂಕಗಳ ಮತ್ತು ವ್ಯಾಪಾರದ ಮೇಲಿನ ಸಾಮಾನ್ಯ ಒಪ್ಪಂದದ (ಗ್ಯಾಟ್) ಉರುಗ್ವೇ ಸುತ್ತಿನ ಸಂಧಾನಗಳು ಮುಂದುವರೆದಿದ್ದಾಗ ಸದಸ್ಯ ದೇಶಗಳ ನಡುವೆ ಬಿಕ್ಕಟ್ಟು ಕಾಣಿಸಿಕೊಂಡಿತು. ಯಾವ ವಿಷಯಗಳನ್ನು ಅಳವಡಿಸಿಕೊಳ್ಳಬೇಕು ಮತ್ತು ಯಾವ ವಿಷಯಗಳನ್ನು ಕೈಬಿಡಬೇಕು ಎಂಬ ಸಂಗತಿಯ ಬಗೆಗೆ ವಾದ ವಿವಾದಗಳು ನಡೆದೇ ಇದ್ದಾಗ ಗ್ಯಾಟ್‌ನ ಮಹಾ ನಿರ್ದೇಶಕರಾದ ಆರ್ಥರ್ ಡಂಕೆಲ್‌ರವರು 1991ರ ಡಿಸೆಂಬರ್ ತಿಂಗಳಿನಲ್ಲಿ

ಒಂದು ಸವಿಸ್ತಾರವಾದ ಕ್ರಿಯಾ ಯೋಜನೆಯನ್ನು ಮಂಡಿಸಿದರು. 436 ಪುಟಗಳನ್ನು ಒಳಗೊಂಡಿರುವ ಬೃಹತ್ ಸಂಪುಟದ ಈ ಕ್ರಿಯಾ ಯೋಜನೆಯು ಅನೇಕ ಪ್ರಸ್ತಾವನೆಗಳನ್ನು ಮುಂದಿಟ್ಟಿದೆ. ಈ ಕ್ರಿಯಾ ಯೋಜನೆಯು **'ಡಂಕೆಲ್ ಪ್ರಸ್ತಾವನೆಗಳು'** ಎಂದೇ ಪ್ರಸಿದ್ಧಿಯಾಗಿವೆ. ಈ ಪ್ರಸ್ತಾವನೆಗಳಲ್ಲಿ ಸದಸ್ಯ ರಾಷ್ಟ್ರಗಳಿಗೆ ಸ್ವೀಕಾರಾರ್ಹವಾದಂತಹ ಮತ್ತು ಅವು ಸಮ್ಮತಿಸಿದ ವಿಷಯಗಳು ಸೇರಿವೆ. ಆ ಪ್ರಕಾರ, ಡಂಕೆಲ್ ಪ್ರಸ್ತಾವನೆಗಳು ಎಂದರೆ ಯಾವುದೇ ಹೊಸ ಸಿದ್ಧಾಂತ ಅಥವಾ ತತ್ವವಲ್ಲ. ಬದಲಾಗಿ ಅವು ಆರ್ಥರ್ ಡಂಕೆಲ್‌ರವರು ಉರುಗ್ವೇ ಸುತ್ತಿನ ಸಂಧಾನಗಳ ಸಮಯದಲ್ಲಿ ಪ್ರಸ್ತುತಪಡಿಸಿದ ಕ್ರಿಯಾ ಯೋಜನೆಯಲ್ಲಿ ಅಡಕವಾಗಿರುವ ವಿಷಯಗಳು.

ಉರುಗ್ವೇ ಸುತ್ತಿನ ಸಂಧಾನಗಳಲ್ಲಿ ಪ್ರಾರಂಭದಲ್ಲಿ 15 ಮುಖ್ಯ ವಿಷಯಗಳನ್ನು ಸೇರಿಸ ಲಾಗಿದ್ದಿತು. ಆದರೆ ಕೊನೆಯಲ್ಲಿ ಅವುಗಳನ್ನು ಪರಿಷ್ಕರಿಸಿ ಕೇವಲ ಏಳು ವಿಷಯಗಳಾಗಿ ಪುನರ್ ರೂಪಿಸಲಾಯಿತು. ಈ ವಿಷಯಗಳೆಂದರೆ : ಕೃಷಿ, ಜವಳಿ ಉದ್ಯಮ, ಸೇವೆಗಳಲ್ಲಿನ ವ್ಯಾಪಾರ ಸಂಬಂಧಿ ಒಪ್ಪಂದಗಳು, ವ್ಯಾಪಾರಕ್ಕೆ ಸಂಬಂಧಿಸಿದ ಬೌದ್ಧಿಕ ಆಸ್ತಿ ಹಕ್ಕುಗಳು, ವ್ಯಾಪಾರಸಂಬಂಧಿ ಬಂಡವಾಳ ಹೂಡಿಕೆ ಕ್ರಮಗಳು, ವ್ಯಾಜ್ಯ ಪರಿಹಾರ ಕ್ರಮಗಳು ಮತ್ತು ಮಾರುಕಟ್ಟೆ ಲಭ್ಯತೆಯ ವಿಷಯಗಳು.

F. ವಿಶ್ವ ವ್ಯಾಪಾರ ಸಂಘಟನೆ
(World Trade Organisation - WTO)

ವಿಶ್ವ ಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಸಮಿತಿಯ ಆಶ್ರಯದಲ್ಲಿ 1946ರಲ್ಲಿ ಹವಾನಾದಲ್ಲಿ ಜರುಗಿದ ಸಮಾವೇಶದಲ್ಲಿ ಅಂತರರಾಷ್ಟ್ರೀಯ ವ್ಯಾಪಾರ ಸಂಸ್ಥೆ (International Trade Organisation)ಯನ್ನು ಸ್ಥಾಪಿಸಬೇಕೆಂಬ ನಿರ್ಧಾರಕ್ಕೆ ಬರಲಾಗಿತ್ತು. 53 ದೇಶಗಳು ಈ ಸಮಾವೇಶ ದಲ್ಲಿ ಹೊರಹೊಮ್ಮಿದ ನಿರ್ಧಾರವನ್ನು ಒಪ್ಪಿಕೊಂಡು ಒಪ್ಪಂದಕ್ಕೆ ಸಹಿ ಹಾಕಿದ್ದವು. ಆದರೆ ಅಮೇರಿಕಾ ಈ ಸಂಸ್ಥೆಯ ಸ್ಥಾಪನೆಗೆ ವಿರೋಧ ವ್ಯಕ್ತಪಡಿಸಿತು. ಪರಿಣಾಮವಾಗಿ ಅಂತರರಾಷ್ಟ್ರೀಯ ವ್ಯಾಪಾರ ಸಂಸ್ಥೆಯು ಅಸ್ತಿತ್ವಕ್ಕೆ ಬರಲೇ ಇಲ್ಲ.

ಸುಂಕಗಳ ಮತ್ತು ವ್ಯಾಪಾರದ ಮೇಲಿನ ಸಾಮಾನ್ಯ ಒಪ್ಪಂದದ (ಗ್ಯಾಟ್) ಎಂಟನೆಯ ಸುತ್ತಿನ, ಅಂದರೆ ಉರುಗ್ವೇ ಸುತ್ತಿನ ಸಂಧಾನಗಳ ಅಂತಿಮ ಹಂತದಲ್ಲಿ, ಸಂಧಾನಗಳಿಂದ ಒಡಮೂಡಿದ ಒಪ್ಪಂದದ ಅಂಶಗಳನ್ನು ಕಾರ್ಯರೂಪಕ್ಕೆ ತರಲು ವ್ಯಾಪಕ ಕಾರ್ಯಕ್ಷೇತ್ರದ ಸಂಸ್ಥೆಯೊಂದನ್ನುಸ್ಥಾಪಿಸಬೇಕೆಂಬ ಪ್ರಸ್ತಾವನೆಯನ್ನು ಅಭಿವೃದ್ಧಿ ಹೊಂದಿದ ದೇಶಗಳು ಮುಂದಿಟ್ಟವು. ಅಭಿವೃದ್ಧಿಶೀಲ ದೇಶಗಳು ಈ ಪ್ರಸ್ತಾವನೆಯನ್ನು ವಿರೋಧಿಸಿದರೂ ಸಹ ಅವುಗಳ ನಿಲುವಿಗೆ ಮಾನ್ಯತೆ ದೊರೆಯಲಿಲ್ಲ. ಈ ಹಿಂದೆ ಸ್ಥಾಪಿತವಾಗದೆ ನೆನೆಗುದಿಗೆ

ಬಿದ್ದಿದ್ದ ಅಂತರ ರಾಷ್ಟ್ರೀಯ ವ್ಯಾಪಾರ ಸಂಸ್ಥೆಯ ಬದಲು ವಿಶ್ವ ವ್ಯಾಪಾರ ಸಂಸ್ಥೆ ಎಂಬ ಹೆಸರಿನ ಸಂಘಟನೆಯನ್ನು ಸ್ಥಾಪಿಸಬೇಕೆಂಬ ನಿರ್ಧಾರವನ್ನು ಶ್ರೀಮಂತ ದೇಶಗಳು ಬಡ ದೇಶಗಳ ಮೇಲೆ ಹೇರಿದವು. ಪರಿಣಾಮವಾಗಿ ವಿಶ್ವ ವ್ಯಾಪಾರ ಸಂಸ್ಥೆಯು 1995 ರ ಏಪ್ರಿಲ್ 1ರಂದು ಅಸ್ತಿತ್ವಕ್ಕೆ ಬಂದಿತು. ಈ ಸಂಸ್ಥೆಯನ್ನು ಸ್ಥಾಪಿಸಬೇಕೆಂಬ ಕರಡು ಪತ್ರಕ್ಕೆ 124 ದೇಶಗಳು ಸಹಿ ಹಾಕಿದವು. ಮಾರ್ಚ್ 2001 ರಲ್ಲಿ 139 ದೇಶಗಳು ವಿಶ್ವ ವ್ಯಾಪಾರ ಸಂಸ್ಥೆಯ ಸದಸ್ಯತ್ವವನ್ನು ಪಡೆದಿದ್ದವು. 2017 ರಲ್ಲಿದ್ದಂತೆ 164 ರಾಷ್ಟ್ರಗಳು ವಿಶ್ವ ವ್ಯಾಪಾರ ಸಂಸ್ಥೆಯ ಸದಸ್ಯತ್ವವನ್ನು ಪಡೆದಿರುತ್ತವೆ. ಇನ್ನೂ ಹೆಚ್ಚಿನ ಸಂಖ್ಯೆಯ ದೇಶಗಳು ಈ ಸಂಸ್ಥೆಯ ಸದಸ್ಯತ್ವವನ್ನು ಪಡೆದುಕೊಳ್ಳಬಹುದೆಂದು ನಿರೀಕ್ಷಿಸಲಾಗಿದೆ.

ಜಾಗತಿಕ ಅರ್ಥವ್ಯವಸ್ಥೆಯಲ್ಲಿ ವ್ಯಾಪಾರಕ್ಕೆ ಸಂಬಂಧಿಸಿದ ವಿಷಯಗಳ ಮೇಲುಸ್ತುವಾರಿ ನೋಡಿಕೊಳ್ಳಲು ಒಂದು ಶಾಶ್ವತ ಸಂಸ್ಥೆಯಾಗಿ ವಿಶ್ವ ವ್ಯಾಪಾರ ಸಂಘಟನೆಯು ಅಸ್ತಿತ್ವಕ್ಕೆ ಬಂದಂತಾಗಿದೆ. ಇದು ಬ್ರೆಟ್ಟನ್‌ವುಡ್ಸ್ ಸಹೋದರಿಯರಾದ ಅಂತರರಾಷ್ಟ್ರೀಯ ಹಣ ನಿಧಿ ಮತ್ತು ವಿಶ್ವಬ್ಯಾಂಕಿನ ಮಾದರಿಯಲ್ಲಿ ಕೆಲಸ ನಿರ್ವಹಿಸುತ್ತದೆ. ಗ್ಯಾಟ್‌ನ ಬದಲಿಗೆ ವಿಶ್ವ ವ್ಯಾಪಾರ ಸಂಘಟನೆಯು ಅಸ್ತಿತ್ವಕ್ಕೆ ಬಂದಿದ್ದು ಇನ್ನು ಮುಂದೆ ಗ್ಯಾಟ್ ಕಾರ್ಯ ನಿರ್ವಹಿಸುವುದಿಲ್ಲ.

ಧ್ಯೇಯೋದ್ದೇಶಗಳು
(Objectives)

ಈ ಕೆಳಗಿನ ಧ್ಯೇಯೋದ್ದೇಶಗಳನ್ನು ಹೊತ್ತು ವಿಶ್ವ ವ್ಯಾಪಾರ ಸಂಸ್ಥೆಯು ಅಸ್ತಿತ್ವಕ್ಕೆ ಬಂದಿದೆ:

1. ವ್ಯಾಪಾರ ನಿರ್ವಹಣೆಗೊಂದು ಸಾಂಸ್ಥಿಕ ವ್ಯವಸ್ಥೆ (An Institutional Frame-work for Trade): ಸದಸ್ಯ ರಾಷ್ಟ್ರಗಳ ನಡುವೆ ವ್ಯಾಪಾರ ಸಂಬಂಧಗಳ ನಿರ್ವಹಣೆಗೆ ಸರ್ವಸಮ್ಮತ ವಾದ ಸಾಂಸ್ಥಿಕ ವ್ಯವಸ್ಥೆಯನ್ನು ಒದಗಿಸುವುದು.

2. ಗ್ಯಾಟ್‌ಗೆ ಸಾಂಸ್ಥಿಕ ಆಶ್ರಯ (Institutional Resort for GATT): ಗ್ಯಾಟ್‌ಗೆ ಒಂದು ಸಾಂಸ್ಥಿಕ ಆಶ್ರಯವನ್ನು ಒದಗಿಸುವುದು. ಏಕೆಂದರೆ ಗ್ಯಾಟ್ ಅಸ್ತಿತ್ವಕ್ಕೆ ಬಂದ ಸುಮಾರು 45 ವರ್ಷಗಳ ನಂತರವೂ ಅದರ ಸಂಧಾನಗಳು, ಫಲಿತಾಂಶಗಳು ಮತ್ತು ಒಮ್ಮತದ ಅಭಿಪ್ರಾಯಗಳನ್ನು ಕಾರ್ಯರೂಪಕ್ಕೆ ತರಲು ಯಾವುದೇ ಒಂದು ಸಂಸ್ಥೆ ಇರಲಿಲ್ಲ. ಈ ಕೊರತೆಯನ್ನು ತುಂಬುವುದು ವಿಶ್ವ ವ್ಯಾಪಾರ ಸಂಸ್ಥೆಯ ಉದ್ದೇಶವಾಗಿದೆ.

3. ಸಂಧಾನಗಳ ಉಸ್ತುವಾರಿ (Monitoring of Negotiations): ಉರುಗ್ವೇ ಸುತ್ತಿನ ಗ್ಯಾಟ್‌ನ ಮಾತುಕತೆಗಳಿಂದ ಒಡಮೂಡಿದ ಅಂಶಗಳನ್ನು ಪ್ರತಿಯೊಂದು ಸದಸ್ಯ ರಾಷ್ಟ್ರವೂ ಒಪ್ಪಿಕೊಳ್ಳುವಂತೆ ಕಡ್ಡಾಯಗೊಳಿಸುವುದು ವಿಶ್ವ ವ್ಯಾಪಾರ ಸಂಸ್ಥೆಯ ಮತ್ತೊಂದು ಉದ್ದೇಶವಾಗಿದೆ. ಈ ಸಂಧಾನಗಳು ಕಾರ್ಯಗತಗೊಳ್ಳುವ ವಿಧಾನವನ್ನು ಅದು ಉಸ್ತುವಾರಿ

ಮಾಡುತ್ತದೆ. ಸರಕುಗಳು, ಸೇವೆಗಳು, ಬೌದ್ಧಿಕ ಆಸ್ತಿ ಮುಂತಾದವುಗಳಿಗೆ ಸಂಬಂಧಿಸಿದ ಎಲ್ಲಾ ಒಪ್ಪಂದಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿ ಅದರ ಮೇಲಿದೆ. ವ್ಯಾಜ್ಯ ಪರಿಹಾರದ ವ್ಯವಸ್ಥೆಯ ಮೇಲ್ವಿಚಾರಣೆಯನ್ನು ಸಹ ಇದು ನೋಡಿಕೊಳ್ಳುತ್ತದೆ.

4. ವ್ಯಾಪಾರ ವ್ಯವಸ್ಥೆಗೆ ಉನ್ನತ ಸ್ವರೂಪ ಪದ್ಧತಿಯ ವಿಕಾಸ (Provision of Better Structure for Trade System): ಅಂತರರಾಷ್ಟ್ರೀಯ ವ್ಯಾಪಾರ ವ್ಯವಸ್ಥೆಗೆ ಉನ್ನತವಾದ ಸ್ವರೂಪ ಮತ್ತು ಅಂತಸ್ತನ್ನು ಕರುಣಿಸುವುದು ಇದರ ಇನ್ನೊಂದು ಧ್ಯೇಯೋದ್ದೇಶವಾಗಿದೆ. ಸಚಿವ ಮಟ್ಟದ ಸಮ್ಮೇಳನಗಳನ್ನು ಆಗಿಂದಾಗ್ಗೆ ಏರ್ಪಡಿಸುವ ಮೂಲಕ ಸೂಕ್ತ ಚರ್ಚೆಗಳಿಗೆ ಅವಕಾಶ ಕಲ್ಪಿಸಿ ಒಪ್ಪಂದದ ನಿಯಮಗಳನ್ನು ಉತ್ತಮವಾಗಿ ಅನುಷ್ಠಾನಗೊಳಿಸುವ ಮತ್ತು ಅಂತರರಾಷ್ಟ್ರೀಯ ವ್ಯಾಪಾರದ ಶಾಸನಬದ್ಧ ಆಧಾರಗಳನ್ನು ಬಲಗೊಳಿಸುವ ಮುಖಾಂತರ ಇದನ್ನು ಸಾಧಿಸಲು ಉದ್ದೇಶಿಸಲಾಗಿದೆ.

5. ನ್ಯಾಯ ಸಮ್ಮತ ಬಹುಪಕ್ಷೀಯ ವ್ಯಾಪಾರ ಪದ್ಧತಿಯ ವಿಕಾಸ (Evolution of Fair Multilateral Trade): ಪ್ರಪಂಚದಲ್ಲಿ ತೆರೆದ, ನ್ಯಾಯಸಮ್ಮತವಾದ ಮತ್ತು ಭೇದವೆಣಿಸದ ಬಹುಪಕ್ಷೀಯ ವ್ಯಾಪಾರ ಪದ್ಧತಿಯನ್ನು ವಿಕಾಸಗೊಳಿಸುವುದು. ವಿಶ್ವವ್ಯಾಪಾರ ಸಂಸ್ಥೆಯು ಸ್ಪರ್ಧಾತ್ಮಕ ದಕ್ಷತೆ ಮತ್ತು ಮಿತವ್ಯಯಕ್ಕೆ ಪ್ರಾಶಸ್ತ್ಯ ನೀಡುತ್ತದೆ. ಡೇವಿಡ್ ರಿಕಾರ್ಡೊ ಪ್ರತಿಪಾದಿಸಿರುವ ಸಾಪೇಕ್ಷ ಅನುಕೂಲತೆಯ ತತ್ವವು ನ್ಯಾಯಸಮ್ಮತ ವ್ಯಾಪಾರದ ಪರಿಕಲ್ಪನೆಗೆ ಮಾರ್ಗದರ್ಶಿಯಾಗಿದೆ.

6. ಪರಿಸರ ಸಂಬಂಧಿ ವಿಷಯಗಳಿಗೆ ಪ್ರಾಶಸ್ತ್ಯ (Emphasis on Environmental Issues): ವಿಶ್ವ ವ್ಯಾಪಾರದಲ್ಲಿ ಪರಿಸರ ಸಂಬಂಧಿ ವಿಷಯಗಳಿಗೆ ಪ್ರಾಶಸ್ತ್ಯ ನೀಡುವುದು ಈ ಸಂಸ್ಥೆಯ ಮತ್ತೊಂದು ಧ್ಯೇಯೋದ್ದೇಶವಾಗಿದೆ. ಉದಾಹರಣೆಗೆ, ತಳಿಶಾಸ್ತ್ರದ ಆಧಾರದಲ್ಲಿ (Genetically) ಪರಿವರ್ತಿತವಾದ ಆಹಾರವನ್ನು ವ್ಯಾಪಾರಕ್ಕೆ ಒಳಪಡಿಸುವುದು ಅದರ ಗುರಿಯಾಗಿದೆ.

ಕಾರ್ಯಗಳು
(Functions)

ವಿಶ್ವವ್ಯಾಪಾರ ಸಂಸ್ಥೆಯು ನಿರ್ವಹಿಸಬೇಕಾದ ಕಾರ್ಯಗಳು ಕೆಳಗಿನಂತಿವೆ.

1. ಬಹುಪಕ್ಷೀಯ ಒಪ್ಪಂದಗಳ ಅನುಷ್ಠಾನ (Implementation of Multilateral Agreements): ಗ್ಯಾಟ್‌ನ ಅಂತಿಮ ಕಾಯಿದೆಯಲ್ಲಿ ಸೇರ್ಪಡೆಯಾಗಿರುವ ಎಲ್ಲಾ ಬಹುಪಕ್ಷೀಯ ಒಪ್ಪಂದಗಳ ಅನುಷ್ಠಾನ, ಕಾರ್ಯಾಚರಣೆ ಮತ್ತು ಆಡಳಿತವನ್ನು ನೋಡಿಕೊಳ್ಳುವುದು. ವ್ಯಾಪಾರ ವಿಧಾನದಲ್ಲಿ ಉದ್ಭವಿಸುವ ವ್ಯಾಜ್ಯಗಳ ಪರಿಹಾರಗಳಿಗೆ ಸಂಬಂಧಿಸಿದ ನಿಯಮಗಳನ್ನು ಮತ್ತು ಕ್ರಮಗಳನ್ನು ಕಾರ್ಯಗತಗೊಳಿಸುವುದು ಸಹ ಈ ಕರ್ತವ್ಯದಲ್ಲಿ ಸೇರಿದೆ.

2. ಸಮನ್ವಯ (Co-ordination): ವಿಶ್ವ ಆರ್ಥಿಕ ನೀತಿ ನಿರೂಪಣೆಯಲ್ಲಿ ಹೆಚ್ಚಿನ ಸಾಮರಸ್ಯವನ್ನು ತರಲು ಅಂತರರಾಷ್ಟ್ರೀಯ ಹಣ ನಿಧಿ, ವಿಶ್ವ ಬ್ಯಾಂಕು ಮತ್ತು ಅದಕ್ಕೆ ಹೊಂದಿಕೊಂಡಿರುವ ಸಂಸ್ಥೆಗಳ ಜೊತೆ ಸಹಕರಿಸಿ ಕೆಲಸ ನಿರ್ವಹಿಸುವುದು ಅದರ ಇನ್ನೊಂದು ಕಾರ್ಯವಾಗಿದೆ.

ವ್ಯಾಪಾರದ ಆಡಳಿತಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ವಿಶ್ವ ವ್ಯಾಪಾರ ಸಂಸ್ಥೆಯು ವ್ಯಾಪಕ ಕಾರ್ಯಕ್ಷೇತ್ರವನ್ನು ಹೊಂದಿದೆ. ಅದನ್ನು "ಒಪ್ಪಂದಗಳ ಒಪ್ಪಂದ" (Treaty of Treaties) ಎಂದು ಕರೆಯಲಾಗಿದೆ. ಏಕೆಂದರೆ ಯಾವುದೇ ಒಂದು ದೇಶವು ವಿಶ್ವವ್ಯಾಪಾರ ಸಂಸ್ಥೆಯ ಸದಸ್ಯತ್ವವನ್ನು ಪಡೆಯಬೇಕಾದರೆ, ಈ ಸಂಸ್ಥೆಯು ಒಳಗೊಳ್ಳುವ ಎಲ್ಲಾ ಒಪ್ಪಂದಗಳು ಮತ್ತು ತೀರ್ಮಾನಗಳನ್ನು ಆ ದೇಶವು ಒಪ್ಪಿಕೊಳ್ಳಲೇಬೇಕಿರುತ್ತದೆ. ಸದಸ್ಯತ್ವವನ್ನು ಬಯಸುವ ದೇಶವು ಯಾವುದೇ ಒಂದು ಒಪ್ಪಂದ ಅಥವಾ ತೀರ್ಮಾನಕ್ಕೆ ಬದ್ಧವಾಗಿರುವುದಿಲ್ಲವೆಂದು ಹೇಳಲು ಬರುವುದಿಲ್ಲ. ಒಪ್ಪಂದಗಳ ಮತ್ತು ತೀರ್ಮಾನಗಳ ಪೂರ್ಣಕಂತೆಯನ್ನು (Package) ಒಟ್ಟಾಗಿ ಸದಸ್ಯತ್ವ ಬಯಸುವ ದೇಶಕ್ಕೆ ನೀಡಲಾಗುತ್ತದೆ. ಆ ದೇಶವು ಅದನ್ನು ಒಟ್ಟಾಗಿ ಸ್ವೀಕರಿಸಬಹುದು ಅಥವಾ ಒಟ್ಟಾಗಿ ತಿರಸ್ಕರಿಸಬಹುದು. ಅಂತರರಾಷ್ಟ್ರೀಯ ಕಾನೂನಿನ ಇತಿಹಾಸದಲ್ಲಿಯೇ ಇದು ನಿಜವಾಗಿಯೂ ಅಪೂರ್ವವಾದುದು.

ಪ್ರಮುಖ ವಿಷಯಗಳ ಮೇಲೆ ನಿರ್ಣಯಗಳನ್ನು ಕೈಗೊಳ್ಳುವಾಗ ಕನಿಷ್ಠ ಮತದ (ಓಟಿನ) ಕೋರಿಕೆಯಲ್ಲಿಯೂ ಸಹ ಗಮನಾರ್ಹ ಬದಲಾವಣೆಗಳನ್ನು ತರಲಾಗಿದೆ. ಗ್ಯಾಟ್‌ನಂತೆಯೇ ವಿಶ್ವ ವ್ಯಾಪಾರ ಸಂಸ್ಥೆಯೂ ಸಹ ಒಮ್ಮತದ ಮೂಲಕ ನಿರ್ಧಾರಗಳನ್ನು ತಲುಪುವ ವಿಧಾನವನ್ನು ಹೊಂದಿದೆ. ಆದರೆ ಎಲ್ಲಿ ಒಮ್ಮತವು ಮೂಡುವುದಿಲ್ಲವೋ ಅಂತಹ ಸಂದರ್ಭದಲ್ಲಿ 'ಒಬ್ಬ ಸದಸ್ಯ ಒಂದು ಮತ' (One Member One Vote) ಎಂಬ ತತ್ವದ ಆಧಾರದಲ್ಲಿ ಮತದಾನದ ಮುಖಾಂತರ ವಿಷಯದ ಮೇಲೆ ನಿರ್ಧಾರಕ್ಕೆ ಬರಲಾಗುತ್ತದೆ. ಸಚಿವ ಮಟ್ಟದ ಸಮ್ಮೇಳನಗಳ ಮತ್ತು ಸಾಮಾನ್ಯ ಸಮಿತಿಯ ತೀರ್ಮಾನಗಳನ್ನು ಬಹುಮತದ ಮೇಲೆ ಘೋಷಿಸಲಾಗುತ್ತದೆ. ಆದರೆ ಬಹುಮುಖ್ಯವಾದ ವಿಷಯಗಳಲ್ಲಿ ತೀರ್ಮಾನಗಳನ್ನು ಕೈಗೊಳ್ಳಲು ಹೆಚ್ಚಿನ ಬಹುಮತವು ಆವಶ್ಯಕವಿರುತ್ತದೆ.

ಸದಸ್ಯ ರಾಷ್ಟ್ರಗಳ ಮೇಲೆ ಹೊಸ ಹಂಗುಗಳನ್ನು ವಿಧಿಸುವಂತಹ ನೂತನ ಒಪ್ಪಂದಗಳನ್ನು ಮೂರನೇ ಎರಡರಷ್ಟು ಬಹುಮತದ ನಿರ್ಣಯಗಳಿಂದ ಸೇರಿಸಲು ವಿಶ್ವವ್ಯಾಪಾರ ಸಂಸ್ಥೆಯ ಮೇಲಿನ ಒಪ್ಪಂದವು ಅವಕಾಶ ಮಾಡಿಕೊಟ್ಟಿದೆ. ಇಂತಹ ತೀರ್ಮಾನವನ್ನು ಒಪ್ಪಿಕೊಳ್ಳಲು ನಿರಾಕರಿಸುವ ಸದಸ್ಯ ದೇಶವನ್ನು ನಾಲ್ಕನೇ ಮೂರರಷ್ಟು ಬಹುಮತದ ಮೂಲಕ ಸಂಸ್ಥೆಯಿಂದ ಉಚ್ಚಾಟಿಸಬಹುದು. ಯಾವುದೇ ಸದಸ್ಯ ದೇಶವು ತನ್ನ ಆಂತರಿಕ ಶಾಸನವನ್ನು ವಿಶ್ವ ವ್ಯಾಪಾರ ಸಂಸ್ಥೆಯ ಒಪ್ಪಂದಗಳಿಗೆ ಅನುಗುಣವಾಗಿರುವಂತೆ ರೂಪಿಸಲು

ತಪ್ಪಿದರೆ ಅಂತಹ ಸಂದರ್ಭಗಳಲ್ಲಿಯೂ ಮೂರನೇ ಎರಡರಷ್ಟು ಬಹುಮತದಿಂದ ಆ ದೇಶವನ್ನು ಸಂಸ್ಥೆಯಿಂದ ಹೊರಹಾಕಲು ಅವಕಾಶವಿದೆ.

ಉಪಸಂಹಾರ

ಡಂಕೆಲ್ ಪ್ರಸ್ತಾವನೆಗಳಿಂದೊಡಗೂಡಿದ ಉರುಗ್ವೇ ಸುತ್ತಿನ ಸಂಧಾನಗಳಿಂದ ಅಭಿವೃದ್ಧಿಶೀಲ ದೇಶಗಳ ಹಿತಾಸಕ್ತಿಗಳ ಮೇಲೆ ಮಾರಕವಾದ ಪರಿಣಾಮಗಳು ಸಂಭವಿಸಿವೆ. ವಿಶ್ವವ್ಯಾಪಾರ ಸಂಸ್ಥೆಯ ಸ್ಥಾಪನೆಯೊಂದಿಗೆ ಈ ಮಾರಕ ಪರಿಣಾಮಗಳು ಇನ್ನೂ ಉಲ್ಬಣಗೊಂಡಿವೆ ಎಂದರೆ ತಪ್ಪಾಗುವುದಿಲ್ಲ. ಗ್ಯಾಟ್ ಚೌಕಟ್ಟಿನಲ್ಲಿ ಇನ್ನೊಂದು ವ್ಯಾಪಕ ಕಾರ್ಯಕ್ಷೇತ್ರದ ವ್ಯಾಪಾರ ಸಂಸ್ಥೆಯ ಸ್ಥಾಪನೆಯನ್ನು ಅಭಿವೃದ್ಧಿಶೀಲ ದೇಶಗಳು ಮೊದಲಿನಿಂದಲೂ ವಿರೋಧಿಸಿದ್ದವು. ಈಗ ಅಸ್ತಿತ್ವದಲ್ಲಿರುವ ವ್ಯಾಪಾರ ಮತ್ತು ಅಭಿವೃದ್ಧಿಯ ಮೇಲಿನ ವಿಶ್ವಸಂಸ್ಥೆಯ ಸಮ್ಮೇಳನವನ್ನೇ (UNCTAD) ಅಂತರರಾಷ್ಟ್ರೀಯ ವ್ಯಾಪಾರ ಸಂಸ್ಥೆಯನ್ನಾಗಿ ಪರಿವರ್ತಿಸಬೇಕೆಂಬುದು ಆ ದೇಶಗಳ ಬಯಕೆಯಾಗಿದ್ದಿತು. ಆದರೆ ವಿಶ್ವ ವ್ಯಾಪಾರ ಸಂಸ್ಥೆಯ ಸ್ಥಾಪನೆಯೊಂದಿಗೆ ಅಭಿವೃದ್ಧಿಹೊಂದಿದ ದೇಶಗಳು ಮತ್ತೊಮ್ಮೆ ಮೇಲುಗೈ ಸಾಧಿಸಿದಂತಾಗಿದೆ. ಆದಾಗ್ಯೂ ಈ ಸಂಸ್ಥೆಯು ಅಂತರರಾಷ್ಟ್ರೀಯ ಹಣ ನಿಧಿ ಮತ್ತು ವಿಶ್ವ ಬ್ಯಾಂಕಿನೊಡನೆ ಪೂರ್ಣ ಸಹಕಾರದಿಂದ ಕೆಲಸ ನಿರ್ವಹಿಸಿದರೆ ಅಭಿವೃದ್ಧಿಶೀಲ ದೇಶಗಳಿಗೆ ಆಗುತ್ತಿರುವ ಅನ್ಯಾಯವನ್ನು ಸ್ವಲ್ಪ ಮಟ್ಟಿಗಾದರೂ ಸರಿಪಡಿಸಲು ಸಾಧ್ಯವಿರುತ್ತದೆ.

ವಿಶ್ವ ವ್ಯಾಪಾರ ಸಂಘಟನೆಯ ಸಂರಚನೆ
(Structure of the WTO)

ವಿಶ್ವ ವ್ಯಾಪಾರ ಸಂಘಟನೆಯು ನಾಲ್ಕು ಹಂತಗಳ ಸಂರಚನೆಯನ್ನು ಹೊಂದಿದೆ.

1. ಸಚಿವ ಸಮ್ಮೇಳನ (Ministerial Conference): ಸಚಿವ ಸಮ್ಮೇಳನವು ವಿಶ್ವ ವ್ಯಾಪಾರ ಸಂಘಟನೆಯ ಪ್ರಧಾನ ಸಂಸ್ಥೆಯಾಗಿದೆ. ಇದು ಎಲ್ಲಾ ಸದಸ್ಯ ದೇಶಗಳ ಪ್ರತಿನಿಧಿಗಳನ್ನು ಒಳಗೊಂಡಿರುತ್ತದೆ. ಇದು ಪ್ರತಿ ಎರಡು ವರ್ಷಗಳಲ್ಲಿ ಒಂದು ಸಾರಿಯಾದರೂ ಸಭೆ ಸೇರುತ್ತದೆ. ಇದು ವಿಶ್ವ ವ್ಯಾಪಾರ ಸಂಘಟನೆಯ ಎಲ್ಲಾ ಕಾರ್ಯಗಳನ್ನು ನೆರವೇರಿಸುತ್ತದೆ ಮತ್ತು ಅದಕ್ಕೆ ಸಂಬಂಧಿಸಿದ ಕ್ರಮಗಳನ್ನು ತೆಗೆದುಕೊಳ್ಳುತ್ತದೆ. ಬಹುಪಕ್ಷೀಯ ವ್ಯಾಪಾರ ಒಪ್ಪಂದಗಳ ಆಶ್ರಯದಲ್ಲಿ ಯಾವುದೇ ವಿಷಯದ ಮೇಲೆ ನಿರ್ಣಯಗಳನ್ನು ತೆಗೆದುಕೊಳ್ಳಲು ಅದು ಸಮರ್ಥವಾಗಿರುತ್ತದೆ. ಆ ಪ್ರಕಾರ, ಸಚಿವ ಸಮ್ಮೇಳನವು ವಿಶ್ವ ವ್ಯಾಪಾರ ಸಂಘಟನೆಯ ಅತ್ಯುನ್ನತ ಸಂಸ್ಥೆಯಾಗಿರುತ್ತದೆ.

2. ಸಾಮಾನ್ಯ ಮಂಡಳಿ (General Council) : ಸಾಮಾನ್ಯ ಮಂಡಳಿಯು ವಿಶ್ವ ವ್ಯಾಪಾರ ಸಂಘಟನೆಯ ಎಲ್ಲಾ ಸದಸ್ಯ ದೇಶಗಳ ಪ್ರತಿನಿಧಿಗಳನ್ನು ಒಳಗೊಂಡಿರುತ್ತವೆ. ಇದು ವಿಶ್ವ ವ್ಯಾಪಾರ ಸಂಘಟನೆಯ ಕಾರ್ಯನಿರ್ವಾಹಕ ಅಂಗವಾಗಿದೆ. ಇದು

ಕ್ರಮಬದ್ಧವಾಗಿ ಆಗಿಂದಾಗ್ಗೆ ಸಂಘಟನೆಯ ಒಪ್ಪಂದವ ಕಾರ್ಯಾಚರಣೆಯನ್ನು ಮತ್ತು ಸಚಿವ ಸಮ್ಮೇಳನದ ನಿರ್ಣಯಗಳನ್ನು ಮೇಲ್ವಿಚಾರಣೆ ಮಾಡುತ್ತದೆ. ಅದು ವಿವಾದ ಇತ್ಯರ್ಥಗಳ ಅಂಗ (Dispute Settlement Body) ಮತ್ತು ವ್ಯಾಪಾರ ನೀತಿ ಧೋರಣಾ ಪುನರ್ವಿಮರ್ಶಾ ಮಂಡಳಿ (Trade Policy Review Body) ಯಾಗಿಯೂ ಕಾರ್ಯ ನಿರ್ವಹಿಸುತ್ತದೆ. ಈ ಎರಡೂ ಸಂಸ್ಥೆಗಳಿಗೆ ಪ್ರತ್ಯೇಕ ಅಧ್ಯಕ್ಷರಿರುತ್ತಾರೆ. ಸಾಮಾನ್ಯ ಮಂಡಳಿಯು ಜಿನಿವಾದಲ್ಲಿ ನರಾಸರಿಯಾಗಿ ತಿಂಗಳಲ್ಲಿ ಒಂದು ಸಾರಿ ಸಭೆ ನಡೆಸುತ್ತದೆ.

3. ಸಲಹಾ ಮಂಡಳಿಗಳು (Councils): ವಿಶ್ವ ವ್ಯಾಪಾರ ಸಂಘಟನೆಯು ಮೂರು ಪ್ರತ್ಯೇಕ ಸಲಹಾ ಮಂಡಳಿಗಳನ್ನು ಹೊಂದಿದೆ.

i) ಸರಕುಗಳ ವ್ಯಾಪಾರದ ಮೇಲಿನ ಸಲಹಾ ಮಂಡಳಿ (Council for Trade in Goods): ಈ ಸಲಹಾ ಮಂಡಳಿಯು ಸರಕುಗಳಲ್ಲಿನ ವ್ಯಾಪಾರಕ್ಕೆ ಸಂಬಂಧಪಟ್ಟಂತೆ ಎಲ್ಲಾ ಒಪ್ಪಂದಗಳ ಅನುಷ್ಠಾನ ಮತ್ತು ಕಾರ್ಯಾಚರಣೆಯನ್ನು ಇದು ಪರಿಶೀಲಿಸುತ್ತದೆ.

ii) ಸೇವೆಗಳಲ್ಲಿನ ವ್ಯಾಪಾರದ ಮೇಲಿನ ಸಲಹಾ ಮಂಡಳಿ (Council for Trade in Services): ಸೇವೆಗಳಲ್ಲಿನ ವ್ಯಾಪಾರಕ್ಕೆ ಸಂಬಂಧಪಟ್ಟ ಎಲ್ಲಾ ಒಪ್ಪಂದಗಳ ಅನುಷ್ಠಾನ ಮತ್ತು ಕಾರ್ಯಾಚರಣೆಯನ್ನು ಇದು ಮೇಲ್ವಿಚಾರಣೆ ಮಾಡುತ್ತದೆ.

iii) ಬೌದ್ಧಿಕ ಆಸ್ತಿಯ ಹಕ್ಕುಗಳ ವ್ಯಾಪಾರಕ್ಕೆ ಸಂಬಂಧಿಸಿದ ಸಲಹಾ ಮಂಡಳಿ (Council for Trade-Related Aspects of Intellectual Property Rights): ಬೌದ್ಧಿಕ ಆಸ್ತಿ ಹಕ್ಕುಗಳು ವ್ಯಾಪಾರಕ್ಕೆ ಸಂಬಂಧಪಟ್ಟ ವಿಷಯಗಳ ಕಾರ್ಯಾಚರಣೆ ಮತ್ತು ಅನುಷ್ಠಾನದ ಮೇಲ್ವಿಚಾರಣೆಯನ್ನು ಇದು ನೋಡಿಕೊಳ್ಳುತ್ತದೆ.

ಈ ಸಲಹಾ ಮಂಡಳಿಗಳು ತಮ್ಮ ಸಹಾಯಕ ಸಂಸ್ಥೆಗಳನ್ನು ಹೊಂದಿವೆ. ಈ ಸಲಹಾ ಮಂಡಳಿಗಳು ಮತ್ತು ಅವುಗಳ ಸಹಾಯಕ ಸಂಸ್ಥೆಗಳು ತಮ್ಮ ಕಾರ್ಯಗಳನ್ನು ನಿರ್ವಹಿಸಲು ಅಗತ್ಯವೆನಿಸಿದಾಗ ಸಭೆಗಳನ್ನು ನಡೆಸುತ್ತವೆ.

4. ಸಮಿತಿಗಳು ಮತ್ತು ನಿರ್ವಹಣಾ ಅಂಗ ಸಂಸ್ಥೆಗಳು (Committees and Management Bodies): ಇದು ವಿಶ್ವ ವ್ಯಾಪಾರ ಸಂಘಟನೆಯ ಸಂರಚನೆಯಲ್ಲಿ ನಾಲ್ಕನೆಯ ಹಂತದ್ದಾಗಿರುತ್ತದೆ. ಇದು ವಿಭಿನ್ನ ವಿಧಗಳ ಸಮಿತಿಗಳನ್ನು ಮತ್ತು ನಿರ್ವಹಣ ಅಂಗಸಂಸ್ಥೆಗಳನ್ನು ಒಳಗೊಂಡಿರುತ್ತದೆ. ಸಾಮಾನ್ಯ ಮಂಡಳಿಯು ಈ ಸಮಿತಿಗಳಿಗೆ ಮತ್ತು ಅಂಗಸಂಸ್ಥೆಗಳಿಗೆ ಕರ್ತವ್ಯಗಳನ್ನು ಮತ್ತು ಜವಾಬ್ದಾರಿಗಳನ್ನು ನೀಡುತ್ತದೆ.

ಈ ಸಮಿತಿಗಳು ಮತ್ತು ನಿರ್ವಹಣಾ ಅಂಗಸಂಸ್ಥೆಗಳು ಕೆಳಗಿನಂತಿವೆ.

i) ವ್ಯಾಪಾರ ಮತ್ತು ಅಭಿವೃದ್ಧಿ ಮೇಲಿನ ಸಮಿತಿ (Committee on Trade and Development): ಈ ಸಮಿತಿಯು ವ್ಯಾಪಾರ ಮತ್ತು ಅಭಿವೃದ್ಧಿಗೆ ಸಂಬಂಧಪಟ್ಟ

ವಿಷಯಗಳನ್ನು ನೋಡಿಕೊಳ್ಳುತ್ತದೆ. ಇದು ಅಭಿವೃದ್ಧಿಶೀಲ ದೇಶಗಳ, ಅದರಲ್ಲಿಯೂ ನಿರ್ದಿಷ್ಟವಾಗಿ ಅತ್ಯಲ್ಪ ಅಭಿವೃದ್ಧಿ ಹೊಂದಿದ ದೇಶಗಳ ಸಮಸ್ಯೆಗಳಿಗೆ ಗಮನ ನೀಡುತ್ತದೆ.

ii) **ಪಾವತಿ ಶಿಲ್ಕಿನ ನಿರ್ಬಂಧಗಳ ಮೇಲಿನ ಸಮಿತಿ (Committee on Balance of Payments Restrictions):** ಪಾವತಿ ಶಿಲ್ಕಿನ ಬಿಕ್ಕಟ್ಟನ್ನು ಅನುಭವಿಸುತ್ತಿರುವ ದೇಶಗಳು ತಮ್ಮ ಪಾವತಿ ಶಿಲ್ಕನ್ನು ಅನುಕೂಲಕರವಾಗಿ ಪರಿವರ್ತಿಸಲು ಅನೇಕ ರೀತಿಗಳಲ್ಲಿ ವ್ಯಾಪಾರ ನಿರ್ಬಂಧಗಳನ್ನು ಕೈಗೊಳ್ಳುತ್ತವೆ. ಇದರಿಂದಾಗಿ ಅಂತರರಾಷ್ಟ್ರೀಯ ವ್ಯಾಪಾರದ ಮೇಲೆ ಪ್ರತಿಕೂಲ ಪರಿಣಾಮ ಗಳಾಗುತ್ತವೆ. ವ್ಯಾಪಾರ ನಿರ್ಬಂಧದ ಕ್ರಮಗಳನ್ನು ಆಶ್ರಯಿಸುವ ಸದಸ್ಯ ರಾಷ್ಟ್ರಗಳ ನಡುವೆ ಸಮಾಲೋಚನೆಗಳನ್ನು ಏರ್ಪಡಿಸುವ ಮುಖಾಂತರ ಈ ಸಮಿತಿಯು ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನಿಸುತ್ತದೆ.

iii) **ಆಯವ್ಯಯ, ಹಣಕಾಸು ಮತ್ತು ಆಡಳಿತದ ಮೇಲಿನ ಸಮಿತಿ (Committee on Budget, Finance and Administration):** ವಿಶ್ವ ವ್ಯಾಪಾರ ಸಂಘಟನೆಯ ಆಯವ್ಯಯ, ಹಣಕಾಸು ಮತ್ತು ಆಡಳಿತದ ವಿಷಯಗಳನ್ನು ಇದು ಪರಿಶೀಲಿಸುತ್ತದೆ.

iv) **ನಿರ್ವಹಣಾ ಅಂಗ ಸಂಸ್ಥೆಗಳು (Management Bodies):** ಬಹುಪಕ್ಷೀಯ ಒಪ್ಪಂದಗಳನ್ನು ಕಾರ್ಯಗತಗೊಳಿಸುವುದು ಈ ಅಂಗಸಂಸ್ಥೆಗಳ ಕಾರ್ಯವಾಗಿರುತ್ತದೆ. ಹೈನು ಉತ್ಪನ್ನ, ಸರ್ಕಾರಿ ಸಂಗ್ರಹ, ನಾಗರಿಕ ವಿಮಾನಯಾನ ಇತ್ಯಾದಿ ವಿಷಯಗಳನ್ನು ಈ ಅಂಗಸಂಸ್ಥೆಗಳು ನೋಡಿಕೊಳ್ಳುತ್ತವೆ.

ಸಾಮಾನ್ಯ ಮಂಡಳಿಯು ಈ ಸಮಿತಿಗಳಿಗೆ ಮತ್ತು ಅಂಗಸಂಸ್ಥೆಗಳಿಗೆ ಕರ್ತವ್ಯಗಳನ್ನು ಮತ್ತು ಹೆಚ್ಚುವರಿ ಕಾರ್ಯಗಳನ್ನು ವಹಿಸುತ್ತದೆ.

ವಿಶ್ವ ವ್ಯಾಪಾರ ಸಂಘಟನೆಯ ಒಪ್ಪಂದ
(WTO Agreement)

ವಿಶ್ವ ವ್ಯಾಪಾರ ಸಂಘಟನೆಯನ್ನು ಸ್ಥಾಪಿಸಲು ಮಾಡಿಕೊಳ್ಳಲಾದ ಒಪ್ಪಂದವು ಹಲವು ಸಂಗತಿಗಳನ್ನು ಒಳಗೊಂಡಿದೆ. ಇವೆಲ್ಲವೂ ಉರುಗ್ವೇ ಸುತ್ತಿನ ಬಹುಪಕ್ಷೀಯ ವ್ಯಾಪಾರ ಸಮಾಲೋಚನೆಗಳ ಫಲಿತಾಂಶಗಳಾಗಿವೆ. ಇವುಗಳನ್ನು ಮುಂದಿನಂತೆ ವಿವರಿಸಬಹುದು.

i. ಸರಕುಗಳ ವ್ಯಾಪಾರದಲ್ಲಿ ಬಹುಪಕ್ಷೀಯ ಒಪ್ಪಂದಗಳು.

ii. ಸೇವೆಗಳ ವ್ಯಾಪಾರದಲ್ಲಿ ಸಾಮಾನ್ಯ ಒಪ್ಪಂದ.

iii. ಬೌದ್ಧಿಕ ಆಸ್ತಿ ಹಕ್ಕುಗಳ ವಿಷಯಗಳಿಗೆ ಸಂಬಂಧಪಟ್ಟ ವ್ಯಾಪಾರದ ಮೇಲಿನ ಒಪ್ಪಂದ.

iv. ವಿವಾದಗಳ ಇತ್ಯರ್ಥದ ಕ್ರಮವನ್ನು ಮತ್ತು ನಿಯಮಗಳನ್ನು ತಿಳಿಯಪಡಿಸುವಿಕೆ.

v. ಬಹುರಾಷ್ಟ್ರೀಯ ವ್ಯಾಪಾರ ಒಪ್ಪಂದಗಳು.

vi. ವ್ಯಾಪಾರ ನೀತಿ ಪುನರ್ವಿಮರ್ಶಾ ವ್ಯವಸ್ಥೆ.

I. ಸರಕುಗಳ ವ್ಯಾಪಾರದಲ್ಲಿ ಬಹುಪಕ್ಷೀಯ ಒಪ್ಪಂದಗಳು
(Multilateral Agreements on Trade in Goods)

ಈ ಒಪ್ಪಂದವು ಬಹಳ ವ್ಯಾಪಕವಾದುದಾಗಿದ್ದು ಅನೇಕ ವಿಷಯಗಳನ್ನು ಒಳಗೊಳ್ಳುತ್ತದೆ.

ಪಾವತಿಶಿಲ್ಕನ್ನು ಉತ್ತಮಪಡಿಸಿಕೊಳ್ಳುವ ಸಲುವಾಗಿ ವ್ಯಾಪಾರ ನಿರ್ಬಂಧಗಳನ್ನು ವಿಧಿಸುವ ಸದಸ್ಯ ದೇಶಗಳು ಕನಿಷ್ಠ ಅನಾನುಕೂಲವಾಗುವ ರೀತಿಯಲ್ಲಿ ಅದನ್ನು ಮಾಡ ಬೇಕಾಗಿರುತ್ತದೆ.

ಕೃಷಿ ವಲಯಕ್ಕೆ ಸಂಬಂಧಿಸಿದಂತೆ ಗೊಬ್ಬರ, ನೀರು, ವಿದ್ಯುಚ್ಛಕ್ತಿ, ಬೀಜಗಳು ಮೊದಲಾದ ಹೂಡುವಳಿಗಳ ಮೇಲಿನ ಸ್ವದೇಶಿ ಸಹಾಯಧನಗಳನ್ನು ಮತ್ತು ರಫ್ತು ಸಹಾಯ ಧನಗಳನ್ನು ಕಡಿಮೆ ಮಾಡಬೇಕಾಗಿರುತ್ತದೆ.

ಜವಳಿ ಮತ್ತು ಉಡುಪು (Textiles and Clothing) ಗಳಿಗೆ ಎಲ್ಲಾ ಸದಸ್ಯ ದೇಶಗಳು ಮಾರುಕಟ್ಟೆ ಪ್ರವೇಶಾಧಿಕಾರವನ್ನು ಉತ್ತಮಪಡಿಸಬೇಕು. ಸುಂಕಗಳ ಮತ್ತು ವ್ಯಾಪಾರದ ಮೇಲಿನ ಸಾಮಾನ್ಯ ಒಪ್ಪಂದದ ನಿಯಮಗಳನ್ನು ಪಾಲಿಸಬೇಕು, ಆಮದುಗಳ ಮೇಲೆ ನಿರ್ಬಂಧಗಳನ್ನು ವಿಧಿಸಬಾರದು ಮತ್ತು ನ್ಯಾಯಬದ್ಧವಾದ ವ್ಯಾಪಾರದ ಷರತ್ತುಗಳನ್ನು ಅಭಿವೃದ್ಧಿಪಡಿಸಬೇಕು ಎಂದು ಹೇಳಲಾಗಿದೆ.

ಹೂಡಿಕೆಯ ಕ್ರಮಗಳ ವ್ಯಾಪಾರ ಸಂಬಂಧಿ ವಿಷಯಗಳ ಮೇಲಿನ ಒಪ್ಪಂದದ (Agreement on Trade Related Aspects of Investment Measures) ಪ್ರಕಾರ ಸದಸ್ಯ ರಾಷ್ಟ್ರಗಳು ಹೂಡಿಕೆಯ ವಲಯದಲ್ಲಿ ಯಾವುದೇ ನಿರ್ಬಂಧಗಳನ್ನು ವಿಧಿಸಬಾರದು ಮತ್ತು ವಿದೇಶೀ ಹೂಡಿಕೆಯ ಕಂಪನಿಗಳನ್ನು ಸ್ವದೇಶೀ ಕಂಪನಿಗಳಿಗೆ ಸಮಾನವಾಗಿ ನೋಡಿಕೊಳ್ಳಬೇಕು.

ಸದಸ್ಯ ದೇಶವೊಂದು ಸುರಿ ಮಾರಾಟ (Dumping) ಕ್ರಮದ ಮೂಲಕ ಇತರ ದೇಶಗಳಲ್ಲಿ ಅಗ್ಗದ ಬೆಲೆಯಲ್ಲಿ ರಾಶಿಗಟ್ಟಲೆಯಾಗಿ ಸರಕುಗಳನ್ನು ಮಾರಾಟ ಮಾಡಲು ಪ್ರಾರಂಭಿಸಿದರೆ, ಆಮದುಗಾರ ದೇಶವು ತನ್ನ ಸ್ವದೇಶೀ ಕೈಗಾರಿಕೆಯು ನಾಶವಾಗುವುದನ್ನು ತಪ್ಪಿಸಲು ಸುರಿ ಮಾರಾಟ ವಿರೋಧಿ ಕ್ರಮಗಳನ್ನು (Anti-Dumping Measures) ಅನುಸರಿಸಲು ಒಪ್ಪಂದದಲ್ಲಿ ಅವಕಾಶ ಕಲ್ಪಿಸಲಾಗಿದೆ.

II. ಸೇವೆಗಳಲ್ಲಿನ ವ್ಯಾಪಾರದ ಮೇಲಿನ ಸಾಮಾನ್ಯ ಒಪ್ಪಂದ
(General Agreement on Trade in Services)

ಈ ಒಪ್ಪಂದವು ಅಂತರರಾಷ್ಟ್ರೀಯವಾಗಿ ವ್ಯಾಪಾರಕ್ಕೆ ಒಳಪಡುವ ಎಲ್ಲಾ ಸೇವೆಗಳನ್ನು ಒಳಗೊಳ್ಳುತ್ತದೆ.

ವಿದೇಶೀ ಸೇವೆಗಳನ್ನು ಮತ್ತು ಸೇವೆಗಳ ಪೂರೈಕೆದಾರರನ್ನು ಸ್ವದೇಶೀ ಸೇವೆಗಳಿಗೆ ಮತ್ತು ಸೇವೆಗಳ ಪೂರೈಕೆದಾರರಿಗೆ ಸರಿಸಮನಾಗಿ ಪರಿಗಣಿಸಬೇಕು.

ಈ ಒಪ್ಪಂದವು ವ್ಯಕ್ತಿಗತ ವಲಯಗಳಿಗೆ ಸಂಬಂಧಿಸಿದಂತೆ ವಿಶೇಷ ಷರತ್ತುಗಳನ್ನು ಒಳಗೊಂಡಿದೆ.

ಸ್ವಾಭಾವಿಕ ಜನರ ಚಲನೆಗೆ ಸಂಬಂಧಿಸಿದಂತೆ, ಸೇವೆಯನ್ನು ಒದಗಿಸುವ ಉದ್ದೇಶದಿಂದ ಜನರ ತಾತ್ಕಾಲಿಕ ನೆಲೆಸುವಿಕೆಗೆ (Temporary Stay of People) ಅನ್ವಯಿಸುವಂತಹ ನಿರ್ದಿಷ್ಟ ಕಟ್ಟುಪಾಡುಗಳನ್ನು ಸಮಾಲೋಚಿಸಲು ಸರ್ಕಾರಗಳಿಗೆ ಅಧಿಕಾರ ನೀಡಲಾಗಿರುತ್ತದೆ.

ಹಣಕಾಸಿನ ವಲಯದಲ್ಲಿ ಹೂಡಿಕೆದಾರರ ಮತ್ತು ಠೇವಣಿದಾರರ ಹಿತಾಸಕ್ತಿಗಳನ್ನು ರಕ್ಷಿಸಲು ಸರ್ಕಾರಗಳು ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಅಧಿಕಾರ ನೀಡಲಾಗಿರುತ್ತದೆ. ಹಣಕಾಸಿನ ವ್ಯವಸ್ಥೆಯಲ್ಲಿ ಸ್ಥಿಮಿತತೆಯನ್ನು ತರಬೇಕೆಂಬುದು ಇದರ ಗುರಿಯಾಗಿರುತ್ತದೆ.

ದೂರಸಂಪರ್ಕ ವಲಯದಲ್ಲಿ ಸದಸ್ಯ ದೇಶವು ದೂರಸಂಪರ್ಕಗಳ ಸಾರಿಗೆ ಜಾಲವನ್ನು ಮತ್ತು ಸೇವೆಗಳನ್ನು ಸ್ಥಾಪಿಸಲು, ನಿರ್ಮಿಸಲು, ವಶಪಡಿಸಿಕೊಳ್ಳಲು, ಗುತ್ತಿಗೆಯ ಮೇಲೆ ನೀಡಲು, ಕಾರ್ಯಾಚರಣೆ ಮಾಡಲು ಅಥವಾ ಪೂರೈಕೆ ಮಾಡಲು ಒಪ್ಪಂದವು ಅವಕಾಶವನ್ನು ಕಲ್ಪಿಸಿದೆ. ಸದಸ್ಯ ದೇಶವು ಈ ಜಾಲಗಳು ಮತ್ತು ಸೇವೆಗಳು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಬೇಕೆಂದು ಹೇಳಲಾಗಿದೆ.

ಸೇವೆಗಳಲ್ಲಿನ ವ್ಯಾಪಾರದ ಮೇಲಿನ ಸಾಮಾನ್ಯ ಒಪ್ಪಂದವು ವಿಮಾನಗಳ ದುರಸ್ತಿ ಮತ್ತು ನಿರ್ವಹಣೆಯ ಸೇವೆಗಳು, ವಿಮಾನಯಾನ ಸೇವೆಗಳ ಮಾರಾಟ ಮತ್ತು ಸೇವೆಗಳ ಗಣಕೀಕೃತ ಮೀಸಲಾತಿಗಳಿಗೂ ಸಹ ಅನ್ವಯಿಸುತ್ತದೆ.

III. ಬೌದ್ಧಿಕ ಆಸ್ತಿ ಹಕ್ಕುಗಳ ವ್ಯಾಪಾರ ಸಂಬಂಧಿ ವಿಷಯಗಳ ಮೇಲಿನ ಒಪ್ಪಂದ
(Agreement on Trade-Related Aspects of Intellectual Property Rights)

ಬೌದ್ಧಿಕ ಆಸ್ತಿ ಹಕ್ಕುಗಳ ವ್ಯಾಪಾರ ಸಂಬಂಧಿ ವಿಷಯಗಳ ಮೇಲಿನ ಒಪ್ಪಂದವು ಏಳು ವರ್ಗಗಳ ಬೌದ್ಧಿಕ ಆಸ್ತಿಯನ್ನು ಒಳಗೊಳ್ಳುತ್ತದೆ. ಅವುಗಳು ಯಾವುವೆಂದರೆ:

i. ಗ್ರಂಥಸ್ವಾಮ್ಯ ಮತ್ತು ಸಂಬಂಧಪಟ್ಟ ಹಕ್ಕುಗಳು,

ii. ವ್ಯಾಪಾರ ಚಿಹ್ನೆಗಳು,

iii. ಭೌಗೋಳಿಕ ಸಂಕೇತಗಳು,

iv. ಕೈಗಾರಿಕಾ ವಿನ್ಯಾಸಗಳು,

v. ಸೂಕ್ಷ್ಮ ಜೀವಾಣುಗಳು ಮತ್ತು ಸಸ್ಯ ವೈವಿಧ್ಯಗಳನ್ನೊಳಗೊಂಡ ಸನ್ನದುಗಳು,

vi. ಸಂಯೋಜಿತ ಪರ್ಯಟನೆ, ಮತ್ತು

vii. ವ್ಯಾಪಾರ ಗೋಪ್ಯತೆಗಳು.

1. ಗ್ರಂಥಸ್ವಾಮ್ಯ ಮತ್ತು ಸಂಬಂಧಪಟ್ಟ ಹಕ್ಕುಗಳು (Copyright and Related Rights): ಸಂಬಂಧಪಟ್ಟ ದೇಶಗಳು ಕಲಾತ್ಮಕ ಮತ್ತು ಸಾಹಿತ್ಯಿಕ ಕೆಲಸಗಳಿಗೆ ರಕ್ಷಣೆಯನ್ನು ಪಡೆದುಕೊಳ್ಳಲು ಬೆರ್ನ್ ಒಪ್ಪಂದವನ್ನು (Berne Convention) ಪಾಲಿಸಬೇಕಾಗಿರುತ್ತದೆ. ಗಣಕ ಕಾರ್ಯಕ್ರಮಗಳೂ (Computer programmes) ಸಹ ಸಾಹಿತ್ಯಿಕ ಕೆಲಸಗಳ ವ್ಯಾಪ್ತಿಯೊಳಗೆ ಬರುತ್ತದೆ. ಗಣಕ ಕಾರ್ಯಕ್ರಮಗಳ ಕರ್ತೃಗಳು, ಧ್ವನಿ ಲೇಖನವನ್ನು ನಿರ್ವಹಿಸುವವರು (Performers on Phonogram), ಧ್ವನಿಲೇಖನಗಳಲ್ಲಿ ದಾಖಲಿಸುವವರು ಮತ್ತು ಸುದ್ದಿ ಪ್ರಸಾರ ಸಂಘಟನೆಗಳು (Broadcasting Organisations) ಸಾರ್ವಜನಿಕರಿಗೆ ತಮ್ಮ ಕೆಲಸಗಳನ್ನು ಮಾಡಿಕೊಡುವಾಗ ವಾಣಿಜ್ಯಿಕ ಬಾಡಿಗೆಯನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಚಲನಚಿತ್ರಗಳಿಗೂ ಈ ಹಕ್ಕು ಅನ್ವಯಿಸುತ್ತದೆ. ಧ್ವನಿಲೇಖನ ನಿರ್ವಾಹಕರಿಗೆ ಮತ್ತು ಉತ್ಪಾದಕರಿಗೆ ಕನಿಷ್ಠ 50 ವರ್ಷಗಳ ಮತ್ತು ಸುದ್ದಿ ಪ್ರಸಾರ ಸಂಘಟನೆಗಳಿಗೆ ಕನಿಷ್ಠ 20 ವರ್ಷಗಳ ರಕ್ಷಣೆಯನ್ನು ಒದಗಿಸಲಾಗಿದೆ.

2. ವ್ಯಾಪಾರ ಚಿಹ್ನೆಗಳು (Trade Marks): ಒಂದು ಉದ್ಯಮ ಸಂಸ್ಥೆಯ ಸರಕುಗಳನ್ನು ಮತ್ತು ಸೇವೆಗಳನ್ನು ಇತರ ಉದ್ಯಮ ಸಂಸ್ಥೆಗಳ ಸರಕುಗಳಿಂದ ಮತ್ತು ಸೇವೆಗಳಿಂದ ಪ್ರತ್ಯೇಕಿಸಿ ಗುರುತಿಸಲು ಸಾಧ್ಯವಾಗಿಸುವಂತಹ ಯಾವುದೇ ಚಿಹ್ನೆ ಅಥವಾ ಚಿಹ್ನೆಗಳ ಗುಂಪನ್ನು 'ವ್ಯಾಪಾರ ಚಿಹ್ನೆ' ಎಂದು ಕರೆಯಲಾಗುತ್ತದೆ. ಇಂತಹ ಚಿಹ್ನೆಗಳು, ಹೆಸರುಗಳು, ಪತ್ರಗಳು, ಅಂಕಿಗಳು ಮತ್ತು ಬಣ್ಣಗಳ ಸಂಯೋಜನೆಗಳು ವ್ಯಾಪಾರ ಚಿಹ್ನೆಗಳೆಂದು ನೋಂದಾಯಿಸಲ್ಪಡಲು ಅರ್ಹತೆ ಪಡೆದಿರುತ್ತವೆ. ಈ ವ್ಯಾಪಾರ ಚಿಹ್ನೆಗಳನ್ನು ಹೊಂದಿರುವ ಮಾಲೀಕನು, ತನ್ನ ಅನುಮತಿ ಇಲ್ಲದೆ ಸರಕುಗಳ ಮತ್ತು ಸೇವೆಗಳ ಮೇಲೆ ಇತರೆ ವ್ಯಕ್ತಿಗಳು ಈ ಚಿಹ್ನೆಗಳನ್ನು ಬಳಸುವುದನ್ನು ತಡೆಗಟ್ಟಲು ಅವಕಾಶವಿರುತ್ತದೆ. ವ್ಯಾಪಾರ ಚಿಹ್ನೆಯ ಪ್ರಾರಂಭಿಕ ನೋಂದಣಿ ಮತ್ತು ನೋಂದಣಿಯ ಪ್ರತಿ ನವೀಕರಣವು ಕನಿಷ್ಠ ಏಳು ವರ್ಷಗಳಿಗೆ ಕಡಿಮೆ ಇಲ್ಲದಷ್ಟು ಅವಧಿಗೆ ವ್ಯಾಪಿಸಿರುತ್ತದೆ.

3. ಭೌಗೋಳಿಕ ಸಂಕೇತಗಳು (Geographical Indications): ಸದಸ್ಯ ದೇಶವೊಂದರ ಪ್ರದೇಶದಲ್ಲಿ ಅಥವಾ ಸ್ಥಳದಲ್ಲಿ ಉತ್ಪಾದನೆಯಾಗುವ ಸರಕಿನ ಗುರುತು ಅಥವಾ ಚಹರೆಗೆ (Identity) 'ಭೌಗೋಳಿಕ ಸಂಕೇತ' ಎಂದು ಹೆಸರು. ಉತ್ಪಾದನೆಯಾದ ಸರಕಿನ ಗುಣಮಟ್ಟ ಅಥವಾ ಕೀರ್ತಿಯು ಆ ಪ್ರದೇಶ ಅಥವಾ ಸ್ಥಳದಿಂದ ಬಂದಿರುತ್ತದೆ. ಈ ರೀತಿಯ ಭೌಗೋಳಿಕ ಸಂಕೇತಗಳನ್ನು ಯಾವುದೇ ಸದಸ್ಯ ದೇಶವು ನ್ಯಾಯಸಮ್ಮತವಲ್ಲದ

ಪೈಪೋಟಿಗಾಗಿ ಬಳಸಿಕೊಳ್ಳಬಾರದು. ಹಾಗೆ ಬಳಸಿಕೊಂಡರೆ ಸಂಕೇತವನ್ನು ದುರುಪಯೋಗಪಡಿಸಿಕೊಂಡಂತಾಗುತ್ತದೆ.

4. ಕೈಗಾರಿಕಾ ವಿನ್ಯಾಸಗಳು (Industrial Designs): ಕೆಲವು ಕೈಗಾರಿಕಾ ಉತ್ಪನ್ನಗಳಿಗೆ ವಿಶೇಷ ರಕ್ಷಣೆಯನ್ನು ನೀಡಲಾಗಿರುತ್ತದೆ. ಇವುಗಳನ್ನು **'ರಕ್ಷಿತ ವಿನ್ಯಾಸಗಳು'** (Protected Designs) ಎಂದು ಕರೆಯಲಾಗುತ್ತದೆ. ಬೇರೆಯವರು ಉತ್ಪನ್ನಗಳನ್ನು ತಯಾರಿಸುವುದನ್ನು, ಮಾರಾಟ ಮಾಡುವುದನ್ನು ಮತ್ತು ಆಮದು ಮಾಡಿಕೊಳ್ಳುವುದನ್ನು ತಡೆಯಲು ರಕ್ಷಿತ ವಿನ್ಯಾಸಗಳ ಮಾಲೀಕರಿಗೆ ಅವಕಾಶವಿರುತ್ತದೆ. ಈ ರೀತಿಯ ರಕ್ಷಣೆಯ ಅವಧಿಯು ಕನಿಷ್ಠ 10 ವರ್ಷಗಳ ಅವಧಿಗೆ ಲಭ್ಯವಿರುತ್ತದೆ.

5. ಸ್ವಾಮ್ಯದ ಸನ್ನದು (Patent): ತಂತ್ರಜ್ಞಾನದ ಎಲ್ಲಾ ಕ್ಷೇತ್ರಗಳಲ್ಲಿ ಹೊಸ ಉತ್ಪನ್ನಗಳನ್ನು ಅಥವಾ ಉತ್ಪಾದನ ಪ್ರಕ್ರಿಯೆಗಳನ್ನು ಒಳಗೊಂಡ ಆವಿಷ್ಕಾರಗಳಿಗೆ ಸ್ವಾಮ್ಯದ ಸನ್ನದನ್ನು ನೀಡಲಾಗುತ್ತದೆ. ಆದರೆ ಈ ಉತ್ಪನ್ನಗಳು ಮತ್ತು ಉತ್ಪಾದನ ಪ್ರಕ್ರಿಯೆಗಳು ಹೊಸದಾಗಿರಬೇಕು, ನೂತನ ಆವಿಷ್ಕಾರ ರೂಪದಲ್ಲಿರಬೇಕು ಮತ್ತು ಕೈಗಾರಿಕಾ ಪ್ರಯೋಗಶೀಲತೆಯನ್ನು ಪಡೆದಿರಬೇಕು. ಸ್ವಾಮ್ಯದ ಸನ್ನದಿನ ಮಾಲೀಕರು ಇದನ್ನು ಬೇರೆಯವರಿಗೆ ವಹಿಸಲು ಅಥವಾ ವರ್ಗಾಯಿಸಲು ಅಧಿಕಾರವನ್ನು ಹೊಂದಿರುತ್ತಾರೆ. ಹೀಗೆ ಮಾಡಿಕೊಳ್ಳಲಾಗುವ ಒಪ್ಪಂದವು 20 ವರ್ಷಗಳ ಅವಧಿಗೆ ಸನ್ನದಿಗೆ ರಕ್ಷಣೆಯನ್ನು ನೀಡುವ ಅವಕಾಶವನ್ನು ಒಳಗೊಂಡಿದೆ.

6. ಅನುಕಲಿತ ಮಂಡಲಗಳು (Integrated Circuits): ಹಲವಾರು ಘಟಕಗಳಿರುವ ವಿದ್ಯುನ್ಮಂಡಲದ ಬದಲು ಉಪಯೋಗಿಸಬಹುದಾದ ಯುಕ್ತ ಪದಾರ್ಥದ ಬಿಲ್ಲೆಗೆ 'ಅನುಕಲಿತ ಮಂಡಲ' ಅಥವಾ 'ಅನುಕಲಿತ ಸರ್ಕೀಟು' ಎಂದು ಹೆಸರು. ಈ ಮಂಡಲಗಳ ಭೂ ವಿನ್ಯಾಸಗಳಿಗೆ (Layout-designs) ಅಥವಾ ಸ್ಥಳಾಕೃತಿಗಳಿಗೆ (Topographies) ಬೌದ್ಧಿಕ ಆಸ್ತಿ ಹಕ್ಕುಗಳ ವ್ಯಾಪಾರದ ಒಪ್ಪಂದದಲ್ಲಿ 10 ವರ್ಷಗಳ ಅವಧಿಗೆ ರಕ್ಷಣೆಯನ್ನು ನೀಡಲಾಗಿರುತ್ತದೆ. ಆದರೆ ಸ್ಥಳಾಕೃತಿಯ ನಿರ್ಮಾಣದ 15 ವರ್ಷಗಳ ನಂತರ ಈ ರಕ್ಷಣೆಯು ರದ್ದಾಗುತ್ತದೆ.

7. ವ್ಯಾಪಾರ ಗೋಪ್ಯತೆಗಳು (Trade Secrets): ವಾಣಿಜ್ಯ ಮೌಲ್ಯವನ್ನು ಹೊಂದಿರುವ ವ್ಯಾಪಾರ ಗೋಪ್ಯತೆಗಳಿಗೆ ಮತ್ತು ಸಹಜ ಕೌಶಲಕ್ಕೆ (Know-how) ವಿಶ್ವಾಸ ದ್ರೋಹವಾಗಬಾರದೆಂಬ ಕಾರಣದಿಂದ ರಕ್ಷಣೆಯನ್ನು ಒದಗಿಸಲಾಗಿರುತ್ತದೆ. ಉದಾಹರಣೆಗೆ, ಔಷಧೋಪಕರಣಗಳ ಅಥವಾ ಕೃಷಿ ಸಂಬಂಧಿ ರಾಸಾಯನಿಕಗಳ ಮಾರಾಟಕ್ಕೆ ಅನುಮೋದನೆಯನ್ನು ಪಡೆಯಲು ಸಲ್ಲಿಸಲಾದ ಪರೀಕ್ಷಾ ದತ್ತಾಂಶಗಳಿಗೆ (Test Data) ಅಕ್ರಮ ವಾಣಿಜ್ಯ ಉಪಯೋಗದ ವಿರುದ್ಧ ರಕ್ಷಣೆಯನ್ನು ಒಗಿಸಲಾಗುತ್ತದೆ.

8. ಸರ್ಕಾರಗಳ ನಡುವೆ ಸಮಾಲೋಚನೆಗಳು (Consultations between Governments): ಬೌದ್ಧಿಕ ಆಸ್ತಿ ಹಕ್ಕುಗಳಿಗೆ ಸಂಬಂಧಿಸಿದ ಒಪ್ಪಂದದ ಪರವಾನಿಗೆಗಳಲ್ಲಿ

ಪೈಪೋಟಿ ವಿರೋಧಿಯಾದ ಪ್ರಯೋಗಗಳ ಮೇಲೆ ನಿಯಂತ್ರಣಗಳನ್ನು ವಿಧಿಸಲಾಗುತ್ತದೆ. ಅಂದರೆ ಬೌದ್ಧಿಕ ಆಸ್ತಿ ಹಕ್ಕುಗಳು ದುರುಪಯೋಗವಾಗದಂತೆ ರಕ್ಷಿಸಲು ಸರ್ಕಾರಗಳ ನಡುವೆ ಸಮಾಲೋಚನೆಗಳಿಗೆ ಇದು ಅವಕಾಶವನ್ನು ಕಲ್ಪಿಸಿದೆ.

ಬೌದ್ಧಿಕ ಆಸ್ತಿ ಹಕ್ಕುಗಳನ್ನು ಕಾರ್ಯಗತಗೊಳಿಸಲು ಶಾಸನವನ್ನು ಮತ್ತು ಸೂಕ್ತ ಪ್ರಯೋಗಗಳನ್ನು ವಿಕಾಸಗೊಳಿಸಲು ಅಭಿವೃದ್ಧಿ ಹೊಂದಿವ ದೇಶಗಳಿಗೆ ಒಂದು ವರ್ಷದ ಸಂಕ್ರಮಣ ಅವಧಿಯನ್ನು (Transition Period) ನೀಡಲಾಗಿದೆ. ಅಭಿವೃದ್ಧಿಶೀಲ ದೇಶಗಳು, ಹಿಂದಿನ ಪೂರ್ವ ಯೂರೋಪಿನ ದೇಶಗಳು ಮತ್ತು ಸೋವಿಯತ್ ರಷ್ಯಾಕ್ಕೆ ಐದು ವರ್ಷಗಳ ಸಂಕ್ರಮಣ ಅವಧಿಯನ್ನು ನೀಡಲಾಗಿರುತ್ತದೆ. ಅತ್ಯಲ್ಪ ಅಭಿವೃದ್ಧಿ ಹೊಂದಿವ ದೇಶಗಳಿಗೆ ಈ ಅವಧಿಯು 11 ವರ್ಷಗಳಾಗಿರುತ್ತದೆ. ಉತ್ಪನ್ನ ಸ್ವಾಮ್ಯ ಸನ್ನದನ್ನು ನೀಡದ ಅಭಿವೃದ್ಧಿಶೀಲ ದೇಶಗಳಿಗೆ 10 ವರ್ಷಗಳ ಅವಧಿಯನ್ನು ನೀಡಲಾಗಿರುತ್ತದೆ.

IV. ವಿವಾದ ಇತ್ಯರ್ಥ ವ್ಯವಸ್ಥೆ (Dispute Settlement System)

ಸದಸ್ಯ ರಾಷ್ಟ್ರಗಳು ತಮ್ಮ ನಡುವಿನ ವಿವಾದಗಳನ್ನು ಇತ್ಯರ್ಥಪಡಿಸಿಕೊಳ್ಳಲು ಸಮಾಲೋಚನೆಗಳ ಮಾರ್ಗವನ್ನು ಅನುಸರಿಸಬೇಕಾಗಿರುತ್ತದೆ. ಇದಕ್ಕಾಗಿ ಅವು ನಿಯಮಗಳನ್ನು ಹಾಗೂ ವಿಧಾನಗಳನ್ನು ಅರ್ಥಮಾಡಿಕೊಂಡು ಪಾಲಿಸಬೇಕಾಗಿರುತ್ತದೆ. ವಿವಾದ ಇತ್ಯರ್ಥ ಮಂಡಲಿಯೊಂದನ್ನು ರಚಿಸಲು ಒಪ್ಪಂದದಲ್ಲಿ ಅವಕಾಶ ಕಲ್ಪಿಸಿಕೊಳ್ಳಲಾಗಿರುತ್ತದೆ.

V. ಬಹು ಪಕ್ಷೀಯ ವ್ಯಾಪಾರ ಒಪ್ಪಂದಗಳು (Purilateral Agreements)

ಬಹುಪಕ್ಷೀಯ ವ್ಯಾಪಾರ ಒಪ್ಪಂದಗಳು ನಾಗರೀಕ ವಿಮಾನಗಳ ವ್ಯಾಪಾರ, ಸರ್ಕಾರಿ ಸಂಗ್ರಹದ ಮೇಲಿನ ಒಪ್ಪಂದ, ಅಂತರರಾಷ್ಟ್ರೀಯ ಹೈನು ಒಪ್ಪಂದ ಮತ್ತು ಅಂತರರಾಷ್ಟ್ರೀಯ ದನದ ಮಾಂಸದ ಬಗೆಗಿನ ಒಪ್ಪಂದಗಳನ್ನು ಒಳಗೊಂಡಿರುತ್ತವೆ. ಬಹುಪಕ್ಷೀಯ ವ್ಯಾಪಾರದ ಮೊದಲನೆಯ ಒಪ್ಪಂದವನ್ನು ಜಿನಿವಾದಲ್ಲಿ ಏಪ್ರಿಲ್ 1979 ರಲ್ಲಿ ಮಾಡಿಕೊಳ್ಳಲಾಯಿತು. ನಂತರ ಇದನ್ನು ಸ್ವಲ್ಪ ಬದಲಾವಣೆ ಮಾಡಲಾಯಿತು ಮತ್ತು ತಿದ್ದುಪಡಿಗೆ ಒಳಪಡಿಸಲಾಯಿತು. ಏಪ್ರಿಲ್ 15, 1994 ರಂದು ಮುರ್ರಾಕೇಶ್‌ನಲ್ಲಿ ಮೂರು ಒಪ್ಪಂದಗಳನ್ನು ಮಾಡಿಕೊಳ್ಳಲಾಯಿತು.

VI. ವ್ಯಾಪಾರ ನೀತಿ ಧೋರಣೆಯ ಪುನರ್ವಿಮರ್ಶಾ ವ್ಯವಸ್ಥೆ
(Trade Policy Review Mechanism)

ಬಹುಪಕ್ಷೀಯ ವ್ಯಾಪಾರ ವ್ಯವಸ್ಥೆಯ ಸುಗಮ ಕಾರ್ಯಾಚರಣೆಯ ದೃಷ್ಟಿಯಿಂದ ಈ ಒಪ್ಪಂದದ ಆಶ್ರಯದಲ್ಲಿರುವ ವ್ಯಾಪಾರ ನೀತಿ ಧೋರಣೆಗಳನ್ನು ಮತ್ತು ಪ್ರಯೋಗಗಳನ್ನು ಪುನರ್ವಿಮರ್ಶೆ ಮಾಡುವ ಧ್ಯೇಯವನ್ನು ಇದು ಹೊಂದಿರುತ್ತದೆ. ಈ ಉದ್ದೇಶದಿಂದ ವ್ಯಾಪಾರ ನೀತಿ ಧೋರಣಾ ಪುನರ್ವಿಮರ್ಶಾ ಮಂಡಳಿಯನ್ನು (Trade Policy Review Board) ರಚಿಸಲಾಗಿರುತ್ತದೆ. ಸಂಪೂರ್ಣ ಪಾರದರ್ಶಕತೆಯನ್ನು ಸಾಧಿಸುವ ಉದ್ದೇಶಕ್ಕಾಗಿ ಪ್ರತಿಯೊಂದು ಸದಸ್ಯ ರಾಷ್ಟ್ರವು ತಾನು ಅನುಸರಿಸುತ್ತಿರುವ ವ್ಯಾಪಾರ ನೀತಿ ಧೋರಣೆ ಮತ್ತು ಪ್ರಯೋಗಗಳ ಬಗೆಗೆ ಈ ಮಂಡಳಿಗೆ ನಿಯತಕಾಲಿಕವಾಗಿ ವರದಿಯನ್ನು ಸಲ್ಲಿಸಬೇಕಾಗಿರುತ್ತದೆ. ಬಹುಪಕ್ಷೀಯ ವ್ಯಾಪಾರ ವ್ಯವಸ್ಥೆಯ ಮೇಲೆ ಪ್ರಭಾವ ಬೀರುವಂತಹ ಅಂತರರಾಷ್ಟ್ರೀಯ ವ್ಯಾಪಾರ ಪರಿಸರದಲ್ಲಿನ ಬೆಳವಣಿಗೆಗಳನ್ನು ಕುರಿತು ಈ ಮಂಡಳಿಯು ವಾರ್ಷಿಕ ಸ್ಥೂಲ ಸಮೀಕ್ಷೆ (Annual Overview) ಯನ್ನು ಕೈಗೊಳ್ಳುತ್ತದೆ.

ವಿಶ್ವ ವ್ಯಾಪಾರ ಸಂಘಟನೆಯಲ್ಲಿ ವಿವಾದಗಳ ಇತ್ಯರ್ಥ
(Disputes Settlement in WTO)

ವಿವಾದಗಳನ್ನು ಇತ್ಯರ್ಥಪಡಿಸುವಿಕೆಗೆ ವಿಶ್ವವ್ಯಾಪಾರ ಸಂಘಟನೆಯಲ್ಲಿ ಮಹತ್ವದ ಸ್ಥಾನವನ್ನು ನೀಡಲಾಗಿದೆ. ಜಾಗತಿಕ ಅರ್ಥವ್ಯವಸ್ಥೆಯಲ್ಲಿ ಸ್ಥಿರತೆಯನ್ನು ತರಲು ಇದು ಅತ್ಯಂತ ಮುಖ್ಯವಾದ ಸಂಗತಿ ಎಂದು ಪರಿಗಣಿಸಲಾಗಿರುತ್ತದೆ. ಸದಸ್ಯ ದೇಶಗಳ ನಡುವೆ ಉದ್ಭವಿಸಬಹುದಾದ ವಿವಾದಗಳನ್ನು ಬಗೆಹರಿಸುವ ಉದ್ದೇಶದಿಂದಲೇ 'ವಿವಾದ ಇತ್ಯರ್ಥ ಮಂಡಳಿ' (Disputes Settlement Body) ಯನ್ನು ರಚಿಸಲಾಗಿರುತ್ತದೆ.

ಸದಸ್ಯ ದೇಶಗಳು ವ್ಯಾಪಾರದಲ್ಲಿ ಮತ್ತು ಅಂತರರಾಷ್ಟ್ರೀಯ ಆರ್ಥಿಕ ವ್ಯವಹಾರಗಳಲ್ಲಿ ಒಪ್ಪಂದದ ನಿಯಮಗಳನ್ನು ಪಾಲಿಸದಿದ್ದಾಗ ಮತ್ತು ಒಪ್ಪಂದದ ಅಂಶಗಳಿಗೆ ವಿರುದ್ಧವಾಗಿ ನಡೆದುಕೊಂಡಾಗ ವಿವಾದಗಳು ಸೃಷ್ಟಿಯಾಗುತ್ತವೆ. ವಿಶ್ವ ವ್ಯಾಪಾರ ಸಂಘಟನೆಯ ಒಪ್ಪಂದದ ಪ್ರಕಾರ ಸದಸ್ಯ ದೇಶಗಳು ತಮ್ಮೊಳಗಿನ ವಿವಾದಗಳನ್ನು ಇತ್ಯರ್ಥಪಡಿಸಿಕೊಳ್ಳಲು ಬಹುಪಕ್ಷೀಯ ವ್ಯವಸ್ಥೆಯನ್ನು ಒಪ್ಪಿಕೊಂಡಿರುತ್ತವೆ. ವಿವಾದಗಳ ಸುಗಮ ಇತ್ಯರ್ಥದಿಂದಾಗಿ ಸಂಘಟನೆಯ ಕಾರ್ಯಗಳು ಸುಲಲಿತವಾಗಿ ನಡೆಯುತ್ತವೆ ಎಂದು ನಂಬಲಾಗಿದೆ.

ವಿವಾದ ಇತ್ಯರ್ಥ ಮಂಡಳಿ
(Disputes Settlement Board)

ವಿವಾದ ಇತ್ಯರ್ಥ ಮಂಡಳಿಯು ವಿಶ್ವ ವ್ಯಾಪಾರ ಸಂಘಟನೆಯ ಎಲ್ಲಾ ರಾಷ್ಟ್ರಗಳನ್ನು ಒಳಗೊಂಡಿರುತ್ತದೆ. ವಿವಾದಗಳ ಇತ್ಯರ್ಥದ ಸಂಪೂರ್ಣ ಪ್ರಕ್ರಿಯೆಯಲ್ಲಿ ಮೇಲ್ವಿಚಾರಣೆಯನ್ನು ಈ ಮಂಡಳಿಯು ಮಾಡುತ್ತದೆ. ಈ ಮಂಡಳಿಯ ಅಧಿಕಾರಗಳು ಬಹಳ ವ್ಯಾಪಕವಾಗಿವೆ. ಅವುಗಳನ್ನು ಕೆಳಗಿನಂತೆ ನಮೂದಿಸಬಹುದು.

i) ತಂಡಗಳ ಪಟ್ಟಿಯನ್ನು ರಚಿಸುವುದು.
ii) ತಂಡದ ಮತ್ತು ಮೇಲ್ಮನವಿ ಮಂಡಳಿಯ ವರದಿಗಳನ್ನು ಗಮನಕ್ಕೆ ತೆಗೆದುಕೊಳ್ಳುವುದು.

iii) ನಿರ್ಣಯಗಳ ಮತ್ತು ಶಿಫಾರಸ್ಸುಗಳ ಅನುಷ್ಠಾನದ ಮೇಲೆ ಮೇಲ್ವಿಚಾರಣೆಯನ್ನು ನಡೆಸುವುದು.

iv) ಒಪ್ಪಂದದ ಆಶ್ರಯದಲ್ಲಿರುವ ಹಂಗುಗಳನ್ನು ತಾತ್ಕಾಲಿಕವಾಗಿ ತಡೆಹಿಡಿಯಲು ಅನುಮೋದನೆ ನೀಡುವುದು.

ವಿವಾದ ಇತ್ಯರ್ಥ ತಿಳಿವಳಿಕೆ
(Disputes Settlement Understanding)

ವಿಶ್ವವ್ಯಾಪಾರ ಸಂಘಟನೆಯ ಸದಸ್ಯ ದೇಶಗಳು ತಮ್ಮ ನಡುವಿನ ವಿವಾದಗಳ ಇತ್ಯರ್ಥಕ್ಕೆ ಸೂಕ್ತ ನಿಯಮಗಳನ್ನು ಮತ್ತು ವಿಧಾನಗಳನ್ನು ಅನುಸರಿಸಲು 1994 ರಲ್ಲಿ ಒಪ್ಪಿಗೆ ನೀಡಿವೆ. ಇದನ್ನು 'ವಿವಾದಗಳ ಇತ್ಯರ್ಥ ತಿಳಿವಳಿಕೆ' ಎಂಬ ಹೆಸರಿನಿಂದ ಕರೆಯಲಾಗುತ್ತದೆ. ಸದಸ್ಯ ರಾಷ್ಟ್ರಗಳು ತಮ್ಮ ನಡುವೆ ಸಮಾಲೋಚನೆಯನ್ನು ನಡೆಸುವಿಕೆಯು ವಿವಾದಗಳ ಇತ್ಯರ್ಥದಲ್ಲಿ ಮೊದಲನೆಯ ಹಂತವಾಗಿರುತ್ತದೆ. ಸಮಾಲೋಚನೆಯು ವಿಫಲಗೊಂಡರೆ, ಎರಡೂ ಪಕ್ಷಗಳು ಒಪ್ಪಿಕೊಂಡರೆ, ವಿಶ್ವವ್ಯಾಪಾರ ಸಂಘಟನೆಯ ಮಹಾ ನಿರ್ದೇಶಕರು ತಮ್ಮ ಅಧಿಕಾರವನ್ನು ಉಪಯೋಗಿಸಿ, ಸಂಧಾನವನ್ನು ಮಾಡಿಸಲು ಮಧ್ಯಪ್ರವೇಶಿಸಬಹುದು.

ವಿವಾದಗಳ ಇತ್ಯರ್ಥದ ಕ್ರಮ
(Procedure of Disputes Settlement)

ವಿಶ್ವ ವ್ಯಾಪಾರ ಸಂಘಟನೆಯ ಒಪ್ಪಂದದ ಯಾವುದೇ ಅಂಶವನ್ನು ಸದಸ್ಯ ದೇಶವು ಪಾಲಿಸಿಲ್ಲ ಹಾಗೂ ಅದಕ್ಕೆ ವಿರುದ್ಧವಾಗಿ ನಡೆದುಕೊಂಡಿದೆ ಎಂದಾದರೆ ಸದಸ್ಯ ದೇಶಗಳು ಸಮಾಲೋಚನೆಯನ್ನು ನಡೆಸಲು ತಿಳಿಸಲಾಗುತ್ತದೆ. ವಿವಾದವನ್ನು ಇತ್ಯರ್ಥಪಡಿಸಿಕೊಳ್ಳಲು 60 ದಿವಸಗಳ ಸಮಯಾವಕಾಶವನ್ನು ನೀಡಲಾಗಿರುತ್ತದೆ. ಈ ಅವಧಿಯಲ್ಲಿ ವಿವಾದವನ್ನು ಇತ್ಯರ್ಥಪಡಿಸಿಕೊಳ್ಳಲು ಸಾಧ್ಯವಾಗದಿದ್ದರೆ ಪಿಠ್ಯಾದಿ (ದೂರನ್ನು ಹೇಳುವ) ದೇಶವು ಇತ್ಯರ್ಥಕ್ಕೆ ತಂಡವನ್ನು ರಚಿಸಲು ಕೇಳಿಕೊಳ್ಳಬಹುದು. ವಿವಾದ ಇತ್ಯರ್ಥ ತಂಡವು ಸಾಮಾನ್ಯವಾಗಿ ಮೂರು ಸದಸ್ಯರನ್ನು ಒಳಗೊಂಡಿರುತ್ತದೆ. ತಂಡವು ಹೊರತರುವ ವರದಿಯನ್ನು ಮೊದಲು ಸದಸ್ಯ ದೇಶಗಳಿಗೆ ಒದಗಿಸಲಾಗುತ್ತದೆ. ನಂತರ ಎರಡು ವಾರಗಳಲ್ಲಿ ವರದಿಯ ಪ್ರತಿಯನ್ನು ಎಲ್ಲಾ ಸದಸ್ಯ ದೇಶಗಳಿಗೆ ಕೊಡಲಾಗುತ್ತದೆ.

ವಿಶ್ವವ್ಯಾಪಾರ ಸಂಘಟನೆಯಲ್ಲಿ ಸ್ಥಾಯಿ ಮೇಲ್ಮನವಿ ಮಂಡಳಿ (Standing Appellate Body) ಅಸ್ತಿತ್ವದಲ್ಲಿದೆ. ಸ್ಥಾಯಿ ಮೇಲ್ಮನವಿ ಮಂಡಳಿಯು ಏಳು ಮಂದಿ ಖಾಯಂ ಸದಸ್ಯರನ್ನು ಹೊಂದಿರುತ್ತದೆ. ವಿವಾದಕ್ಕೆ ಸಿಲುಕಿರುವ ದೇಶವು ತಂಡದ ತೀರ್ಪಿನ ವಿರುದ್ಧ ಈ ಮೇಲ್ಮನವಿ ಮಂಡಳಿಗೆ ಮನವಿಯನ್ನು ಸಲ್ಲಿಸಬಹುದು. ಈ ಮಂಡಳಿಯು ವಿವಾದದ ಬಗೆಗೆ ತಂಡದ ನಿರ್ಣಯಗಳನ್ನು ಒಪ್ಪಿಕೊಳ್ಳಬಹುದು, ಸ್ವಲ್ಪ ಪರಿಷ್ಕರಣೆ

ಮಾಡಬಹುದು, ಅಥವಾ ಒಪ್ಪಿಕೊಳ್ಳದೆ ಹಿಂದಿರುಗಿಸಬಹುದು. ಮೇಲ್ಮನವಿ ಮಂಡಳಿಯು ನೀಡಿದ ವರದಿಯ ಬಗೆಗೆ ಸದಸ್ಯ ರಾಷ್ಟ್ರಗಳು ತಮ್ಮ ಅಭಿಪ್ರಾಯಗಳನ್ನು ಹೇಳಲು ಅವಕಾಶವಿರುತ್ತದೆ. ಆದರೆ ಈ ಮಂಡಳಿಯ ವರದಿಯನ್ನು ವಿವಾದ ಇತ್ಯರ್ಥ ಮಂಡಳಿಯು ಅಂಗೀಕರಿಸಬೇಕಾಗಿರುತ್ತದೆ. ಅಲ್ಲದೆ ಸಂಬಂಧಪಟ್ಟ ದೇಶಗಳು ಈ ವರದಿಯನ್ನು ಷರತ್ತುರಹಿತವಾಗಿ ಒಪ್ಪಿಕೊಳ್ಳಬೇಕಾಗಿರುತ್ತದೆ.

ವಿವಾದಗಳ ಇತ್ಯರ್ಥ ಕ್ರಮವು ಕೆಳಗಿನಂತೆ ಅವಧಿಯನ್ನು ಒಳಗೊಂಡಿರುತ್ತದೆ.

i) ಸಮಾಲೋಚನೆ ಮತ್ತು ಮಧ್ಯಸ್ಥಿಕೆ	60 ದಿವಸಗಳು
ii) ತಂಡ ರಚನೆ	45 ದಿವಸಗಳು
iii) ತಂಡದ ಅಂತಿಮ ವರದಿಯನ್ನು ಪಕ್ಷಕಾರ ದೇಶಗಳಿಗೆ ನೀಡುವಿಕೆ	6 ತಿಂಗಳುಗಳು
iv) ತಂಡದ ಅಂತಿಮ ವರದಿಯನ್ನು ಎಲ್ಲಾ ಸದಸ್ಯ ದೇಶಗಳಿಗೆ ಒದಗಿಸುವಿಕೆ	3 ವಾರಗಳು
v) ವಿವಾದ ಇತ್ಯರ್ಥ ಮಂಡಳಿಯಿಂದ ವರದಿಯ ಅಳವಡಿಕೆ	60 ದಿವಸಗಳು
ಮೇಲ್ಮನವಿ ಇಲ್ಲದಿದ್ದಲ್ಲಿ ತಗಲುವ ಒಟ್ಟು ಅವಧಿ	1 ವರ್ಷ
vi) ಮೇಲ್ಮನವಿ	60 ರಿಂದ 90 ದಿವಸಗಳು
vii) ವಿವಾದ ಇತ್ಯರ್ಥ ಮಂಡಳಿಯಿಂದ ವರದಿ ಅಳವಡಿಕೆ	30 ದಿವಸಗಳು

ಮೇಲ್ಮನವಿ ಇದ್ದಲ್ಲಿ ಒಟ್ಟು ಅವಧಿ 1 ವರ್ಷ ಮೂರು ತಿಂಗಳುಗಳು ಅಥವಾ ನಾಲ್ಕು ತಿಂಗಳುಗಳು.

ವಿವಾದಗಳ ಇತ್ಯರ್ಥದ ಲಕ್ಷಣಗಳು
(Features of Disputes Settlement)

ವಿಶ್ವ ವ್ಯಾಪಾರ ಸಂಘಟನೆಯ ವಿವಾದಗಳ ಇತ್ಯರ್ಥದ ಲಕ್ಷಣಗಳು ಕೆಳಗಿನಂತಿವೆ.

1. ವಿವಾದಗಳ ಇತ್ಯರ್ಥ ಕ್ರಮವು ಸ್ಪಷ್ಟವಾಗಿ ವ್ಯಾಖ್ಯಾನಿಸಲಾದ ಹಂತಗಳನ್ನು ಒಳಗೊಂಡಿರುತ್ತದೆ.
2. ವಿವಾದಗಳ ಇತ್ಯರ್ಥಕ್ಕೆ ಪ್ರತಿ ಹಂತದಲ್ಲಿಯೂ ಸಾಕಷ್ಟು ಸಮಯಾವಕಾಶವನ್ನು ಒದಗಿಸಲಾಗಿರುತ್ತದೆ.
3. ವಿಶ್ವ ವ್ಯಾಪಾರ ಸಂಘಟನೆಯ ಪರಿಣಾಮಕಾರಿಯಾದ ಕಾರ್ಯನಿರ್ವಹಣೆಯ ದೃಷ್ಟಿಯಿಂದ ಚುರುಕಾದ ಇತ್ಯರ್ಥ ಕ್ರಮಕ್ಕೆ ಪ್ರಾಶಸ್ತ್ಯ ನೀಡಲಾಗಿರುತ್ತದೆ.

4. ವಿವಾದಗಳನ್ನು ಇತ್ಯರ್ಥಪಡಿಸಲು ಅದು ಕ್ರಮಗಳನ್ನು ಮತ್ತು ವೇಳಾಪಟ್ಟಿಯನ್ನು ನಿಗದಿಪಡಿಸಿದೆ.
5. ಮೇಲ್ಮನವಿ ಇದ್ದಲ್ಲಿ ವಿವಾದದ ಇತ್ಯರ್ಥಕ್ಕೆ ಸಾಧಾರಣ ಅವಧಿಯು 15 ಅಥವಾ 16 ತಿಂಗಳುಗಳಾಗಿದ್ದರೂ ಸಹ, ಪ್ರಕರಣವು ತುಂಬಾ ತುರ್ತಾದುದೆಂದು ಪರಿಗಣಿತವಾದರೆ, ಅದನ್ನು ಸಾಧಾರಣ ಅವಧಿಗಿಂತ ಮೂರು ತಿಂಗಳು ಮುಂಚಿತವಾಗಿಯೇ ಬಗೆಹರಿಸಲು ಪ್ರಯತ್ನಿಸಲಾಗುತ್ತದೆ.
6. ವಿವಾದ ಇತ್ಯರ್ಥ ನಿರ್ಣಯದಲ್ಲಿ ಸೋಲನ್ನು ಅನುಭವಿಸಿದ ದೇಶವು ಆ ನಿರ್ಣಯ ಜಾರಿಯನ್ನು ತಡೆಗಟ್ಟುವಂತಿರುವುದಿಲ್ಲ.

ವಿಶ್ವ ವ್ಯಾಪಾರ ಸಂಘಟನೆಯ ಸಚಿವ ಸಮ್ಮೇಳನಗಳು
(Ministerial Conferences of WTO)

ವಿಶ್ವ ವ್ಯಾಪಾರ ಸಂಘಟನೆಯಲ್ಲಿ ಇದುವರೆಗೆ ನಡೆದಿರುವ ಸಚಿವ ಸಮ್ಮೇಳನಗಳು ಮುಂದಿನಂತಿವೆ.

A. ಮೊದಲನೆಯ ಸಚಿವ ಸಮ್ಮೇಳನ (First Ministerial Conference)

ವಿಶ್ವ ವ್ಯಾಪಾರ ಸಂಘಟನೆಯ ಮೊದಲನೆಯ ಸಚಿವ ಸಮ್ಮೇಳನವು ಡಿಸೆಂಬರ್ 1996 ರಲ್ಲಿ ಸಿಂಗಾಪುರದಲ್ಲಿ ಜರುಗಿತು. ಈ ಸಮ್ಮೇಳನದಲ್ಲಿ 128 ಸದಸ್ಯ ರಾಷ್ಟ್ರಗಳು ಭಾಗವಹಿಸಿದ್ದವು. ಈ ಸಮ್ಮೇಳನದಲ್ಲಿ ನಡೆದ ಪ್ರಮುಖ ಚರ್ಚೆಗಳು ಕೆಳಗಿನಂತಿವೆ.

1. ಶ್ರಮದ ಮಾನದಂಡಗಳನ್ನು (Labour Standards) ಬಲಗೊಳಿಸುವುದು.
2. ವಿವಾದಗಳ ಇತ್ಯರ್ಥ ವ್ಯವಸ್ಥೆಯನ್ನೂ ಪರಿಣಾಮಕಾರಿತ್ವವನ್ನು ಮತ್ತು ವಿಶ್ವಾಸಾರ್ಹತೆಯನ್ನು ಹೆಚ್ಚಿಸುವುದು.
3. ಅಲ್ಪಾಭಿವೃದ್ಧಿ ದೇಶಗಳಿಗೆ ಸಹಾಯವನ್ನು ಒದಗಿಸುವ ಉದ್ದೇಶದಿಂದ ವಿಶ್ವಸಂಸ್ಥೆಯ ವ್ಯಾಪಾರ ಮತ್ತು ಅಭಿವೃದ್ಧಿ ಮೇಲಿನ ಸಮ್ಮೇಳನ (UNCTAD), ನೆರವು ನೀಡುವ ಸಂಸ್ಥೆಗಳು ಮತ್ತಿತರ ಸಂಘಟನೆಗಳೊಡನೆ ಸಭೆಗಳನ್ನು ಏರ್ಪಡಿಸುವುದು.
4. ಮೂಲಭೂತ ದೂರಸಂಪರ್ಕಗಳಿಗೆ ಸಂಬಂಧಪಟ್ಟ ಸಮಾಲೋಚನೆಗಳನ್ನು ಫೆಬ್ರವರಿ 1997ರ ಒಳಗೆ ಪೂರ್ಣಗೊಳಿಸುವುದು.
5. ವ್ಯಾಪಾರ ಮತ್ತು ಹೂಡಿಕೆಯ ನಡುವಿನ ಸಂಬಂಧವನ್ನು ಪರಿಶೀಲಿಸಲು ಕಾರ್ಯಕಾರಿ ತಂಡವನ್ನು ರಚಿಸುವುದು.
6. ಸರ್ಕಾರದ ಸಂಗ್ರಹ ವಿಧಾನದಲ್ಲಿ (Government Procurement) ಪಾರದರ್ಶಕತೆಯ ಮೇಲೆ ಅಧ್ಯಯನವನ್ನು ನಡೆಸಲು ಕಾರ್ಯಕಾರಿ ತಂಡವೊಂದನ್ನು ನೇಮಿಸುವುದು.

B. ಎರಡನೆಯ ಸಚಿವ ಸಮ್ಮೇಳನ (Second Ministerial Conference)

ವಿಶ್ವ ವ್ಯಾಪಾರ ಸಂಘಟನೆಯ ಎರಡನೆಯ ಸಚಿವ ಸಮ್ಮೇಳನವನ್ನು ಮೇ, 1988 ರಲ್ಲಿ ಜಿನಿವಾದಲ್ಲಿ ನಡೆಸಲಾಯಿತು. ಈ ಸಮ್ಮೇಳನದಲ್ಲಿ 132 ಸದಸ್ಯ ರಾಷ್ಟ್ರಗಳು ಭಾಗವಹಿಸಿದ್ದವು. ಇದರಲ್ಲಿ ಕೈಗೊಳ್ಳಲಾದ ಪ್ರಮುಖ ನಿರ್ಣಯಗಳು ಕೆಳಗಿನಂತಿವೆ.

1. ಅಸ್ತಿತ್ವದಲ್ಲಿರುವ ಬಹುಪಕ್ಷೀಯ ಒಪ್ಪಂದಗಳನ್ನು ಪೂರ್ಣವಾಗಿ ಮತ್ತು ಪ್ರಾಮಾಣಿಕವಾಗಿ ಕಾರ್ಯಗತಗೊಳಿಸಲು ವ್ಯವಸ್ಥೆಯೊಂದನ್ನು ಸ್ಥಾಪಿಸುವುದು.
2. ವ್ಯಾಪಾರದಲ್ಲಿ ರಕ್ಷಣಾತ್ಮಕ ಕ್ರಮಗಳನ್ನು ತಿರಸ್ಕರಿಸುವುದು ಮತ್ತು ಮುಕ್ತವಾದ ಹಾಗೂ ಪಾರದರ್ಶಕವಾದ ನಿಯಮವನ್ನು ಆಧರಿಸಿದ ವ್ಯಾಪಾರ ಪದ್ಧತಿಯನ್ನು ಅಂಗೀಕರಿಸುವುದು.
3. ಬಹುಪಕ್ಷೀಯ ವ್ಯಾಪಾರ ಪದ್ಧತಿಯ ಪ್ರಯೋಜನಗಳು ತೃತೀಯ ವಿಶ್ವದ ರಾಷ್ಟ್ರಗಳ ಬೆಳೆಯುತ್ತಿರುವ ಆವಶ್ಯಕತೆಗಳಿಗೆ ತಲುಪುವಂತೆ ಮಾಡುವುದು.
4. ಸಂಪೂರ್ಣ ವಿಶ್ವದಲ್ಲಿ ವ್ಯಾಪಾರದ ವಿಸ್ತರಣೆಗೆ, ಉದ್ಯೋಗಾವಕಾಶಗಳ ಸೃಷ್ಟಿಗೆ ಮತ್ತು ಜೀವನಮಟ್ಟಗಳನ್ನು ಉತ್ತಮಪಡಿಸುವಿಕೆಗೆ ಈ ಸಮ್ಮೇನಗಳ ಮುಖಾಂತರ ಶ್ರಮಿಸುವುದು.

C. ಮೂರನೆಯ ಸಚಿವ ಸಮ್ಮೇಳನ (Third Ministerial Conference)

ಈ ಸಮ್ಮೇಳನವು ಅಮೆರಿಕ ಸಂಯುಕ್ತ ಸಂಸ್ಥಾನಗಳ ವಾಷಿಂಗ್‌ಟನ್ನಿನ ಸಿಯಾಟಲ್‌ನಲ್ಲಿ ಡಿಸೆಂಬರ್ 1999 ರಲ್ಲಿ ಜರುಗಿತು. 135 ಸದಸ್ಯ ರಾಷ್ಟ್ರಗಳು ಇದರಲ್ಲಿ ಭಾಗವಹಿಸಿದ್ದವು. ಆದರೆ ಈ ಸಮ್ಮೇಳನವು ಯಶಸ್ವಿಯುತವಾಗಿ ನಡೆಯಲಿಲ್ಲ ಮತ್ತು ಕಟುವಾದ ಟೀಕೆಗಳಿಗೆ ಒಳಗಾಯಿತು. ಸಮಾಲೋಚನೆಗಳಲ್ಲಿ ಶ್ರೀಮಂತ ದೇಶಗಳು ಬಡ ದೇಶಗಳ ಮೇಲೆ ತಮ್ಮ ಅಭಿಪ್ರಾಯಗಳನ್ನು ಹೇರುತ್ತಿವೆ ಎಂದು ಅಭಿವೃದ್ಧಿಶೀಲ ದೇಶಗಳು ಆಪಾದಿಸಿದವು. ಅಲ್ಲದೆ ಸಮಾಲೋಚನೆಗಳಲ್ಲಿ ಪಾರದರ್ಶಕತೆಯ ಕೊರತೆ ಇರುತ್ತದೆಂದು. ಅಭಿವೃದ್ಧಿಶೀಲ ದೇಶಗಳು ಪ್ರತಿಭಟಿಸಿದವು. ವಿಶ್ವ ವ್ಯಾಪಾರ ಸಂಘಟನೆಯು (WTO) 'ತಪ್ಪು ವ್ಯಾಪಾರ ಸಂಘಟನೆ' (Wrong Trade Organisation) ಯಾಗಿದೆ ಎಂದು ಅದನ್ನು ಹೀಯಾಳಿಸಲಾಯಿತು. ಶ್ರೀಮಂತ ದೇಶಗಳ ಪ್ರಯೋಜನಕ್ಕಾಗಿ ಇದು ಅಭಿವೃದ್ಧಿಶೀಲ ದೇಶಗಳನ್ನು ಶೋಷಣೆಗೆ ಈಡುಮಾಡಿದೆ ಎಂಬ ಕಾರಣಕ್ಕಾಗಿ ಈ ಹೆಸರನ್ನು ನೀಡಲಾಯಿತು. ಏಷಿಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕದ ದೇಶಗಳಿಗೆ ಈ ಸಂಘಟನೆಯಿಂದ ಯಾವುದೇ ಅನುಕೂಲತೆಗಳು ಲಭಿಸುತ್ತಿರುವುದಿಲ್ಲ ಎಂದು ಟೀಕಿಸಲಾಯಿತು. ಅಭಿವೃದ್ಧಿ ಹೊಂದಿದ ದೇಶಗಳೂ ಸಹ ಮೊಂಡುವಾದಗಳನ್ನೇ ಮಂಡಿಸಿದವು.

ಈ ಸಮ್ಮೇಳನವು ವಿಫಲಗೊಳ್ಳಲು ಪ್ರಮುಖ ಕಾರಣಗಳು ಕೆಳಗಿನಂತಿವೆ.

1. ಕೃಷಿಯನ್ನು ಉದಾರೀಕರಣಗೊಳಿಸಲು ಯೂರೋಪಿನ ಒಕ್ಕೂಟವು ತೀವ್ರ

ವಿರೋಧವನ್ನು ವ್ಯಕ್ತಪಡಿಸಿತು. ಯುರೋಪಿನ ಒಕ್ಕೂಟವು ತನ್ನ ರೈತರಿಗೆ ನೀಡುತ್ತಿದ್ದ ಭಾರೀ ಪ್ರಮಾಣದ ರಫ್ತು ಸಹಾಯಧನವನ್ನು ತಗ್ಗಿಸಲು ನಿರಾಕರಿಸಿತು.

2. ಅಭಿವೃದ್ಧಿಶೀಲ ದೇಶಗಳು ಅಗ್ಗದ ಬೆಲೆಯಲ್ಲಿ ಶ್ರಮವನ್ನು ಪಡೆದುಕೊಳ್ಳುವ ಅನುಕೂಲತೆ ಇರುವುದರಿಂದ ಆ ದೇಶಗಳಿಗೆ ರಿಯಾಯಿತಿಯನ್ನುತೋರಿಸ ಬಾರದೆಂದು ವಾದಿಸಲಾಯಿತು.
3. ಶ್ರಮದ ಮಾನದಂಡಗಳ ಸೇರ್ಪಡೆಗೆ ಅಮೆರಿಕ ವಿರೋಧವನ್ನು ವ್ಯಕ್ತಪಡಿಸಿತು.

D. ನಾಲ್ಕನೆಯ ಸಚಿವ ಸಮ್ಮೇಳನ (Fourth Ministerial Conference)

ಈ ಸಮ್ಮೇಳನವು ನವೆಂಬರ್ 2001 ರಲ್ಲಿ ಕತಾರ್‌ನ ದೋಹಾದಲ್ಲಿ ಜರುಗಿತು. ಇದನ್ನು 'ದೋಹಾ ಘೋಷಣೆ' (Doha Declaration) ಎಂಬ ಹೆಸರಿನಿಂದಲೇ ಕರೆಯಲಾಗಿದೆ. ಈ ಸಮ್ಮೇಳನದಲ್ಲಿ 142 ಸದಸ್ಯ ದೇಶಗಳು ಭಾಗವಹಿಸಿದ್ದವು. ಈ ಸಮ್ಮೇಳನವು ಮೂರು ಪ್ರಮುಖ ನಿರ್ಣಯಗಳನ್ನು ಅಳವಡಿಸಿಕೊಂಡಿತು. ಅವುಗಳೆಂದರೆ:

1. ವಿಶ್ವ ವ್ಯಾಪಾರ ಸಂಘಟನೆಯ ಒಂದು ಹೊಸ ಸುತ್ತಿನ ಸಮಾಲೋಚನೆಗೆ ಕಾರ್ಯಸೂಚಿ.
2. ಅಭಿವೃದ್ಧಿಶೀಲ ದೇಶಗಳ ಸುಮಾರು 40 ಅನುಷ್ಠಾನ ಯೋಗ್ಯ ಯೋಜನೆಗಳು.
3. ಸ್ವಾಮ್ಯ ಸನ್ನದುಗಳು ಮತ್ತು ಸಾರ್ವಜನಿಕ ಆರೋಗ್ಯಕ್ಕೆ ಸಂಬಂಧಿಸಿದ ರಾಜಕೀಯ ಹೇಳಿಕೆ.

ಸಾಧನೆಗಳು
(Achievements)

ದೋಹಾ ಸಚಿವ ಸಮ್ಮೇಳನವು ತನ್ನದೇ ಆದ ಖ್ಯಾತಿಯನ್ನು ಹೊಂದಿದೆ. ಏಕೆಂದರೆ ಇದು ಅಭಿವೃದ್ಧಿಶೀಲ ದೇಶಗಳಿಗೆ ಸಂಬಂಧಪಟ್ಟ ಅನೇಕ ವಿಷಯಗಳ ಮೇಲಿನ ಚರ್ಚೆಗೆ ಅವಕಾಶವನ್ನು ಒದಗಿಸಿತು. ಅಲ್ಲದೆ ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿಶೀಲ ದೇಶಗಳ ಹಿತಾಸಕ್ತಿಗಳ ಘರ್ಷಣೆಯು ಇದರಲ್ಲಿ ಬಹಿರಂಗಗೊಂಡಿತು. ಇನ್ನೊಂದು ಹೊಸ ಸುತ್ತಿನ ವ್ಯಾಪಾರ ಸಮಾಲೋಚನೆಗಳನ್ನು ಕೂಡಲೇ ಪ್ರಾರಂಭಿಸಬೇಕೆಂದು ಅಭಿವೃದ್ಧಿಶೀಲ ದೇಶಗಳು ಒತ್ತಾಯಿಸಿದವು. ಏಳು ಅಂಶಗಳನ್ನು ಒಳಗೊಂಡ ಪಟ್ಟಿಯನ್ನೂ ಸಹ ಅಲ್ಲಿ ಬಿಡುಗಡೆ ಮಾಡಲಾಯಿತು. ಈ ವಿಷಯಗಳು ಯಾವುವೆಂದರೆ, ಹೂಡಿಕೆ, ಸ್ಪರ್ಧಾನೀತಿ ಧೋರಣೆ, ವ್ಯಾಪಾರ ಸೌಲಭ್ಯಗಳು, ಸರ್ಕಾರಿ ಸಂಗ್ರಹಣೆಯಲ್ಲಿ ಪಾರದರ್ಶಕತೆ, ಪರಿಸರ, ಕೃಷಿ ಮತ್ತು ಬೌದ್ಧಿಕ ಆಸ್ತಿ ಹಕ್ಕುಗಳ ವ್ಯಾಪಾರ ಸಂಬಂಧಿ ವಿಷಯಗಳು. ಈ ವಿಷಯಗಳನ್ನು 1996 ರಲ್ಲಿ ಸಿಂಗಾಪುರದಲ್ಲಿ ಜರುಗಿದ ಸಚಿವ ಸಮ್ಮೇಳನದಲ್ಲಿ ಆಗಲೇ ಪ್ರಸ್ತಾಪಿಸಲಾಗಿದ್ದರಿಂದ ಇವುಗಳನ್ನು 'ಸಿಂಗಾಪುರ ವಿವಾದಾಂಶಗಳು' (Singapore Issues) ಎಂದು ಕರೆಯಲಾಗಿದೆ.

ಹೊಸ ಸುತ್ತಿನ ಸಮಾಲೋಚನೆಗಳು ಪ್ರಾರಂಭವಾಗುವ ಮೊದಲೇ ಅನುಷ್ಠಾನದ ವಿವಾದಾಂಶಗಳು ತೀರ್ಮಾನವಾಗಬೇಕೆಂದು ಅಭಿವೃದ್ಧಿಶೀಲ ದೇಶಗಳು ಪಟ್ಟು ಹಿಡಿದವು.

ದೋಹಾ ಸುತ್ತಿನ ಸಮಾಲೋಚನೆಯು ವ್ಯಾಪಾರ ಕ್ಷೇತ್ರದಲ್ಲಿ ಹೊಸ ಉದಾರೀಕರಣ ಮಾತುಕತೆಗಳಿಗೆ ಅವಕಾಶ ಕಲ್ಪಿಸಿತು. ಇದನ್ನು 'ದೋಹಾ ಅಭಿವೃದ್ಧಿ ಕಾರ್ಯಸೂಚಿ' (Doha Development Agenda) ಎಂದು ಕರೆಯಲಾಯಿತು.

ಅಭಿವೃದ್ಧಿಶೀಲ ದೇಶಗಳಿಗೆ ಸಂಬಂಧಿಸಿದಂತೆ ಈ ಸುತ್ತಿನ ಮಾತುಕತೆಯು ಒಂದು ಮಹತ್ವದ ಸಾಧನೆಗೆ ನಾಂದಿಯಾಯಿತು. ಬೌದ್ಧಿಕ ಆಸ್ತಿ ಹಕ್ಕುಗಳಿಗೆ ಸಂಬಂಧಿಸಿದ ವ್ಯಾಪಾರ ಮತ್ತು ಸಾರ್ವಜನಿಕ ಆರೋಗ್ಯ ವಿಷಯಗಳಲ್ಲಿ ರಾಷ್ಟ್ರೀಯ ತುರ್ತು ಪರಿಸ್ಥಿತಿ ಇರುವಾಗ ಸ್ವಾಮ್ಯ ಸನ್ನದನ್ನು ತೆಗೆದುಹಾಕಲು ಅವಕಾಶ ಕಲ್ಪಿಸಲಾಯಿತು. ಆ ಪ್ರಕಾರ, ಮಲೇರಿಯಾ, ಕ್ಷಯ, ಏಡ್ಸ್ ಮೊದಲಾದ ಸಾಂಕ್ರಾಮಿಕ ರೋಗಗಳಿಂದ ಅಭಿವೃದ್ಧಿಶೀಲ ದೇಶಗಳು ಜರ್ಜರಿತವಾಗಿದ್ದಲ್ಲಿ ಅವು ಸ್ವಾಮ್ಯ ಸನ್ನದು ಕಾನೂನನ್ನು ಅನುಸರಿಸಬೇಕಾಗಿರುವುದಿಲ್ಲ. ರಾಷ್ಟ್ರೀಯ ತುರ್ತು ಪರಿಸ್ಥಿತಿ ಎಂದರೆ ಏನೆಂದು ವ್ಯಾಖ್ಯಾನಿಸಲು ಪ್ರತಿಯೊಂದು ದೇಶಕ್ಕೂ ಸ್ವಾತಂತ್ರ್ಯ ನೀಡಲಾಯಿತು.

ದೋಹಾ ಸುತ್ತಿನ ಮಾತುಕತೆಗಳಲ್ಲಿ ಭಾರತವು ಮಹತ್ವದ ಪಾತ್ರವನ್ನು ನಿರ್ವಹಿಸಿತು. ಒಂದು ರೀತಿಯಲ್ಲಿ ಹೇಳುವುದಾದರೆ, ಅದು ಇತರ ಅಭಿವೃದ್ಧಿಶೀಲ ದೇಶಗಳಿಗೆ ನಾಯಕತ್ವವನ್ನು ಒದಗಿಸಿತು. ಅಭಿವೃದ್ಧಿ ಹೊಂದಿದ ದೇಶಗಳು ಎಂದಿನಂತೆ ಈ ಸುತ್ತಿನ ಸಮಾಲೋಚನೆಗಳಲ್ಲಿಯೂ ಮೇಲುಗೈ ಸಾಧಿಸಿದರೂ ಸಹ ಭಾರತ ಮತ್ತಿತರ ಅಭಿವೃದ್ಧಿಶೀಲ ದೇಶಗಳ ಧೈರ್ಯಯುತವಾದ ಮತ್ತು ನಿರ್ಣಾಯಕ ಪಾತ್ರದಿಂದ ಈ ಮಾತುಕತೆಗಳು ವಿಶ್ವ ವ್ಯಾಪಾರ ಸಂಘಟನೆಯಲ್ಲಿ ಜರುಗಬೇಕಾದ ಕೆಲಸಗಳ ಬಗೆಗೆ ಹೊಸ ದಿಕ್ಕನ್ನು ತೋರಿಸಿದವು. ಬೌದ್ಧಿಕ ಆಸ್ತಿ ಹಕ್ಕುಗಳ ವ್ಯಾಪಾರ ಒಪ್ಪಂದವು ಚಾಲ್ತಿಯಲ್ಲಿರುವಾಗಲೂ ಸಾರ್ವಜನಿಕ ಆರೋಗ್ಯ ರಕ್ಷಣೆಗಾಗಿ ಸರ್ಕಾರಗಳು ಕ್ರಮಗಳನ್ನು ಅನುಸರಿಸಬಹುದೆಂದು ತೀರ್ಮಾನಿಸಲಾಯಿತು. ಇದು ಭಾರತದ ಹೋರಾಟಕ್ಕೆ ಸಂದ ಜಯವಾಗಿತ್ತು.

V. ಐದನೆಯ ಸಚಿವ ಸಮ್ಮೇಳನ
(Fifth Ministerial Conference)

ಈ ಸಮ್ಮೇಳನವನ್ನು ಸೆಪ್ಟೆಂಬರ್ 2003 ರಲ್ಲಿ ಮೆಕ್ಸಿಕೋದ ಕ್ಯಾನ್‌ಕನ್‌ನಲ್ಲಿ ನಡೆಸಲಾಯಿತು. ಈ ಸಮ್ಮೇಳನದಲ್ಲಿ 146 ಸದಸ್ಯ ರಾಷ್ಟ್ರಗಳು ಭಾಗವಹಿಸಿದ್ದವು. ಈ ಸಮ್ಮೇಳನದಲ್ಲಿ ಚರ್ಚೆಗೆ ಒಳಪಟ್ಟ ಮತ್ತು ನಿರ್ಣಯಗೊಂಡ ವಿಷಯಗಳು ಕೆಳಗಿನಂತಿವೆ.

1. ಕೃಷಿ ಸಹಾಯಧನಗಳು (Agricultural Subsidies): ಅಮೆರಿಕ ಮತ್ತು ಐರೋಪ್ಯ ಒಕ್ಕೂಟದ ದೇಶಗಳು ಅತ್ಯಧಿಕ ಕೃಷಿ ಸಹಾಯಧನಗಳನ್ನು ನೀಡುತ್ತಿರುವುದರಿಂದ ಆ ದೇಶಗಳ ಕೃಷಿ ಉತ್ಪನ್ನಗಳು ಜಾಗತಿಕ ಮಾರುಕಟ್ಟೆಯಲ್ಲಿ ಅಭಿವೃದ್ಧಿಶೀಲ ದೇಶಗಳ ಕೃಷಿ ಉತ್ಪನ್ನಗಳಿಗಿಂತ ಅಗ್ಗದ ಬೆಲೆಯಲ್ಲಿ ದೊರೆಯುತ್ತವೆ. ಆದ್ದರಿಂದ ಜಾಗತಿಕ ಮಾರುಕಟ್ಟೆಯಲ್ಲಿ ಅಭಿವೃದ್ಧಿಶೀಲ ದೇಶಗಳು ತಮ್ಮ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಲು ಹಾಗೂ ಅಮೆರಿಕ ಮತ್ತು ಐರೋಪ್ಯ ಒಕ್ಕೂಟದೊಡನೆ ಸ್ಪರ್ಧಿಸಲು

ಅಸಾಧ್ಯವಾಗುತ್ತಿದೆ. ಈ ಕಾರಣದಿಂದಾಗಿ ಆ ದೇಶಗಳು ಕೃಷಿ ಸಹಾಯಧನಗಳನ್ನು ಗಣನೀಯವಾಗಿ ಕಡಿಮೆ ಮಾಡಬೇಕೆಂದು ಅಭಿವೃದ್ಧಿಶೀಲ ದೇಶಗಳು ವಾದಿಸಿದವು. ಆದರೆ ಅಭಿವೃದ್ಧಿ ಹೊಂದಿದ ದೇಶಗಳು ಇದಕ್ಕೆ ಕಿವಿಗೊಡಲಿಲ್ಲ. ಪರಿಣಾಮವಾಗಿ, ಈ ವಿಷಯದಲ್ಲಿ ಯಾವುದೇ ನಿರ್ಣಯವು ರೂಪುಗೊಳ್ಳಲಿಲ್ಲ.

2. ಸಿಂಗಾಪುರ ಸಮ್ಮೇಳನ ವಿವಾದಾಂಶಗಳು (Singapore Issues): ಸಿಂಗಾಪುರದಲ್ಲಿ ಜರುಗಿದ್ದ ಸಮ್ಮೇಳನದಲ್ಲಿ ಚರ್ಚೆಯಾಗಿದ್ದ ವಿವಾದಾಂಶಗಳನ್ನು, ಅಂದರೆ ವಿದೇಶೀ ಹೂಡಿಕೆ, ದೇಶೀಯ ಪೈಪೋಟಿ ನೀತಿ, ಸರ್ಕಾರಿ ಸಂಗ್ರಹಣೆಯಲ್ಲಿ ಪಾರದರ್ಶಕತೆ, ನಿರ್ಬಂಧರಹಿತ ವ್ಯಾಪಾರ ಮೊದಲಾದ ವಿಷಯಗಳನ್ನು ಕಾರ್ಯಗತಗೊಳಿಸಲು ಅಭಿವೃದ್ಧಿ ಹೊಂದಿದ ದೇಶಗಳು ಒತ್ತಡವನ್ನು ಹೇರಿದವು. ಆದರೆ ಅಭಿವೃದ್ಧಿಶೀಲ ದೇಶಗಳು ಈ ಪ್ರಸ್ತಾವನೆಯನ್ನು ಪ್ರಬಲವಾಗಿ ವಿರೋಧಿಸಿದ್ದರಿಂದ ಯಾವುದೇ ನಿರ್ಣಯವನ್ನು ಕೈಗೊಳ್ಳಲು ಸಾಧ್ಯವಾಗಲಿಲ್ಲ.

3. ವಿದೇಶೀ ಕಂಪನಿಗಳ ಸ್ಥಾನ (The Status of Foreign Companies): ವಿದೇಶೀ ಕಂಪನಿಗಳನ್ನು ಸ್ವದೇಶೀ ಕಂಪನಿಗಳಿಗೆ ಸಮಾನಾಗಿ ಪರಿಗಣಿಸಬೇಕೆಂದು ಅಮೆರಿಕ ಮತ್ತು ಐರೋಪ್ಯ ಒಕ್ಕೂಟ ಒತ್ತಾಯಿಸಿದವು. ಆದರೆ ಅಭಿವೃದ್ಧಿಶೀಲ ದೇಶಗಳು ಈ ಪ್ರಸ್ತಾವನೆಯನ್ನು ಒಪ್ಪಲಿಲ್ಲ.

ಈ ಹಿನ್ನೆಲೆಯಲ್ಲಿ ಕ್ಯಾನ್‌ಕನ್ ಸಮ್ಮೇಳನವು ವಿಫಲಗೊಂಡಿತು. ಇದರಲ್ಲಿ ಚರ್ಚೆಗೆ ಬಂದ ವಿಷಯಗಳನ್ನು ಅಭಿವೃದ್ಧಿಶೀಲ ದೇಶಗಳು ಒಟ್ಟಾಗಿ ಪ್ರಬಲವಾಗಿ ವಿರೋಧಿಸಿದ್ದರಿಂದ ಯಾವುದೇ ಸ್ಪಷ್ಟ ನಿರ್ಣಯಗಳು ಒಡಮೂಡಲಿಲ್ಲ.

ಆದಾಗ್ಯೂ ಕ್ಯಾನ್‌ಕನ್ ಸಮ್ಮೇಳನವು ಅಭಿವೃದ್ಧಿಶೀಲ ದೇಶಗಳ ಐಕ್ಯತೆಗೆ ದಾರಿಮಾಡಿ ಕೊಟ್ಟಿತು. ಸಿಂಗಾಪುರ ಸಮ್ಮೇಳನದ ವಿವಾದಾಂಶಗಳನ್ನು ವಿರೋಧಿಸಿದ್ದ ರಾಷ್ಟ್ರಗಳು ಜಿ - 15 (Group of 15) ರಾಷ್ಟ್ರಗಳಾಗಿ ರೂಪುಗೊಂಡವು. ಶ್ರೀಮಂತ ದೇಶಗಳ ವಿರುದ್ಧ ಮುಂದೆ ನಿರ್ಣಾಯಕ ರೀತಿಯಲ್ಲಿ ಹೋರಾಟವನ್ನು ನಡೆಸಲು ಇವು ಸಜ್ಜಾದವು.

VI. ಆರನೆಯ ಸಚಿವ ಸಮ್ಮೇಳನ
(Sixth Ministerial Conference)

ವಿಶ್ವವ್ಯಾಪಾರ ಸಂಘಟನೆಯ ಆರನೆಯ ಸಮ್ಮೇಳನವು ಹಾಂಗ್‌ಕಾಂಗ್‌ನಲ್ಲಿ ಡಿಸೆಂಬರ್ 2005 ರಲ್ಲಿ ಜರುಗಿತು. ಈ ಸಮ್ಮೇಳನದ ಫಲಶ್ರುತಿಗಳು ಮತ್ತು ಕೈಗೊಳ್ಳಲಾದ ನಿರ್ಣಯಗಳು ಮುಂದಿನಂತಿವೆ.

1. ಕೃಷಿ ವಿಷಯಗಳು (Agricultural Aspects): ಕೃಷಿಗೆ ಸಂಬಂಧಿಸಿದಂತೆ ಮೂರು ವಿಷಯಗಳಲ್ಲಿ ನಿರ್ಣಯವನ್ನು ಕೈಗೊಳ್ಳಲಾಯಿತು.

i. **ದೇಶೀಯ ಬೆಂಬಲ (Domestic Support):** ವ್ಯಾಪಾರವನ್ನು ವಿಕೃತಗೊಳಿಸುವಂತಹ ಸಹಾಯಧನಗಳನ್ನು ಕಡಿತಗೊಳಿಸಲು ಅಭಿವೃದ್ಧಿ ಹೊಂದಿದ ದೇಶಗಳು ಒಪ್ಪಿಕೊಂಡವು. ಹೆಚ್ಚಿನ ದೇಶೀಯ ಬೆಂಬಲವನ್ನು ನೀಡುತ್ತಿದ್ದ ದೇಶಗಳು ಸಹಾಯಧನಗಳ ಪ್ರಮಾಣವನ್ನು ಹೆಚ್ಚಾಗಿ ಕಡಿತಗೊಳಿಸಬೇಕಾಯಿತು.

ii. **ರಫ್ತು ಸಹಾಯಧನಗಳು (Export Subsidies):** ಅಭಿವೃದ್ಧಿ ಹೊಂದಿದ ದೇಶಗಳು ಬಹುತೇಕ ಸಹಾಯಧನಗಳನ್ನು 2010ರ ವೇಳೆಗೆ ರದ್ದುಪಡಿಸಲು ಮತ್ತು 2013ರ ವೇಳೆಗೆ ಎಲ್ಲಾ ಸಹಾಯಧನಗಳನ್ನು ನಿಲ್ಲಿಸಲು ಒಪ್ಪಿಕೊಂಡವು.

iii. **ಮಾರುಕಟ್ಟೆ ಪ್ರವೇಶಾಧಿಕಾರ (Market Access):** ಅಭಿವೃದ್ಧಿಶೀಲ ದೇಶಗಳ ಕೃಷಿ ಉತ್ಪನ್ನಗಳಿಗೆ ಹೆಚ್ಚಿನ ಪ್ರಮಾಣದ ಮಾರುಕಟ್ಟೆ ಪ್ರವೇಶಾಧಿಕಾರವನ್ನು ನೀಡಲು ಅಭಿವೃದ್ಧಿ ಹೊಂದಿದ ದೇಶಗಳು ಸಮ್ಮತಿಸಿದವು.

2. ಕೃಷಿಯೇತರ ಮಾರುಕಟ್ಟೆ ಪ್ರವೇಶಾಧಿಕಾರ (Non-agricultural Market Access): ಜಾಗತಿಕ ಮಾರುಕಟ್ಟೆಗೆ ಅಭಿವೃದ್ಧಿಶೀಲ ದೇಶಗಳಿಗೆ ಪ್ರವೇಶಾಧಿಕಾರವನ್ನು ಒದಗಿಸುವ ದೃಷ್ಟಿಯಿಂದ ಅಭಿವೃದ್ಧಿ ಹೊಂದಿದ ದೇಶಗಳು ಕೆಲವು ಸುಂಕಗಳನ್ನು ಕಡಿಮೆ ಮಾಡಲು ಮತ್ತು ಕೆಲವು ಸುಂಕಗಳನ್ನು ತೊಡೆದುಹಾಕಲು ಒಪ್ಪಿದವು. ಅಭಿವೃದ್ಧಿಶೀಲ ದೇಶಗಳ ಹಿತಾಸಕ್ತಿಗಳನ್ನು ಸಂಪೂರ್ಣವಾಗಿ ಗಮನಿಸುವುದಾಗಿ ಅಭಿವೃದ್ಧಿ ಹೊಂದಿದ ದೇಶಗಳು ಭರವಸೆ ನೀಡಿದವು.

ಒಂದು ವಿಶೇಷ ಹಾಗೂ ಭೇದಕಾರಕ ಕ್ರಮದ ಖಂಡವನ್ನು (Clause) ಅಳವಡಿಸಿಕೊಳ್ಳಲಾಗಿರುತ್ತದೆ. ಕೆಲವು ಸೂಕ್ಷ್ಮ ಸರಕುಗಳಿಗೆ ಸುಂಕ ಕಡಿತದಲ್ಲಿ ನಮ್ಯತೆಯ ನೀತಿಯನ್ನು ಅನುಸರಿಸಲು ಇದು ಅವಕಾಶ ಕಲ್ಪಿಸಿದೆ.

3. ಸೇವೆಗಳು (Services): ಸೇವೆಗಳಿಗೆ ಸಂಬಂಧಿಸಿದಂತೆ ಸಮಾಲೋಚನೆ ಗಳನ್ನು ತೀವ್ರಗೊಳಿಸಲು ಹಾಗೂ ಚುರುಕುಗೊಳಿಸಲು ಅಭಿವೃದ್ಧಿ ಹೊಂದಿದ ದೇಶಗಳು ಬದ್ಧವಾಗಿವೆ. ಇದರಿಂದಾಗಿ ಭಾರತವೂ ಸೇರಿದಂತೆ ಅಭಿವೃದ್ಧಿಶೀಲ ದೇಶಗಳಿಗೆ ವೃತ್ತಿ ಸಂಬಂಧಿ ಚಲನೆಯು ಸುಲಭವಾಗುತ್ತದೆ ಎಂದು ಭಾವಿಸಲಾಗಿದೆ.

4. ವ್ಯಾಪಾರವನ್ನು ಸರಾಗಗೊಳಿಸುವಿಕೆ (Trade Facilitation): ವ್ಯಾಪಾರ ಕ್ಷೇತ್ರದಲ್ಲಿ ದೇಶಗಳ ನಡುವೆ ಇರುವ ಘರ್ಷಣೆಗಳನ್ನು ಪರಸ್ಪರ ವಿವಾರಿಸಿಕೊಳ್ಳಲು ಮತ್ತು ನಿರಂತರ ಸಮಾಲೋಚನೆಗಳನ್ನು ಪ್ರೋತ್ಸಾಹಿಸಲು ನಿರ್ಣಯಿಸಲಾಯಿತು.

5. ಅಭಿವೃದ್ಧಿ (Development): ಅತ್ಯಲ್ಪ ಅಭಿವೃದ್ಧಿ ಹೊಂದಿದ ದೇಶಗಳ ಶೇಕಡ 97 ರಷ್ಟು ರಫ್ತುಗಳಿಗೆ 2008 ರಿಂದ ಸುಂಕ ಮತ್ತು ಹಾಗೂ ದೇಯಾಂಶ ಮುಕ್ತ ಪ್ರವೇಶಾಧಿಕಾರದ ಭರವಸೆ ನೀಡಲಾಯಿತು.

ಈ ಸಮ್ಮೇಳನವು ಹೆಚ್ಚಿನ ಪ್ರಗತಿಯನ್ನೇನೂ ಸಾಧಿಸಲಿಲ್ಲ. ಆದರೆ ಅಭಿವೃದ್ಧಿಶೀಲ ಮತ್ತು ಅತ್ಯಲ್ಪ ಅಭಿವೃದ್ಧಿ ಹೊಂದಿದ ದೇಶಗಳಿಗೆ ಕೆಲವು ಭರವಸೆಗಳನ್ನು ಒದಗಿಸಲು ಅದು ಸಫಲವಾಯಿತು. ಅಲ್ಲದೆ ಈ ದೇಶಗಳು ತಮ್ಮೊಳಗಿನ ಭಿನ್ನಾಭಿಪ್ರಾಯಗಳನ್ನು ನಿವಾರಿಸಿಕೊಂಡು ಒಂದುಗೂಡಲು ಸಾಧ್ಯವಾಯಿತು.

ಏಳನೆಯ ಸಚಿವ ಸಮ್ಮೇಳನ
(Seventh Ministerial Conference)

ವಿಶ್ವ ವ್ಯಾಪಾರ ಸಂಘಟನೆಯ ಏಳನೆಯ ಸಚಿವ ಸಮ್ಮೇಳನವು ಸ್ವಿಟ್ಜರ್ಲೆಂಡಿನ ಜನಿವಾದಲ್ಲಿ 2009ರ ನವೆಂಬರ್ 30 ರಿಂದ ಡಿಸೆಂಬರ್ 2 ರವರೆಗೆ ಜರುಗಿತು. 2005 ರಲ್ಲಿ ಹಾಂಗ್‌ಕಾಂಗ್ ನಲ್ಲಿ ನಡೆದ ಸಮಾವೇಶದ ನಂತರ, ಅಂದರೆ ನಾಲ್ಕು ವರ್ಷಗಳ ದೀರ್ಘ ಅವಧಿಯ ನಂತರ, ಈ ಸಮಾವೇಶವು ಸಂಘಟನೆಗೊಂಡಿತು.

2008 ರ ಮಧ್ಯ ಭಾಗದಲ್ಲಿ ಪ್ರಾರಂಭವಾದ ಜಾಗತಿಕ ಹಣಕಾಸಿನ ಬಿಕ್ಕಟ್ಟು ಈ ಸಮಾವೇಶದ ಮೇಲೆ ತನ್ನ ಛಾಯೆಯನ್ನು ಚೆಲ್ಲಿತು. ಈ ಬಿಕ್ಕಟ್ಟು ಒಟ್ಟಾರೆ ಜಾಗತಿಕ ಅರ್ಥವ್ಯವಸ್ಥೆಯ ಮೇಲೆ ಬೀರಿದ ಪರಿಣಾಮಗಳನ್ನು ಈ ಸಮಾವೇಶದಲ್ಲಿ ಚರ್ಚಿಸಲಾಯಿತು.

ಅಲ್ಪಾಭಿವೃದ್ಧ ದೇಶಗಳು (Less developed Counntries) ವಿಶ್ವ ವ್ಯಾಪಾರ ಸಂಘಟನೆಯೊಳಗೆ ಹೆಚ್ಚಿನ ಸಂಖ್ಯೆಯಲ್ಲಿ ಸೇರ್ಪಡೆಯಾಗುತ್ತಿರುವುದನ್ನು ವಿಶೇಷವಾಗಿ ಪ್ರಸ್ತಾಪಿಸ ಲಾಯಿತು. ಸಂಘಟನೆಯ ಪ್ರಾರಂಭದಲ್ಲಿ ಅಂದರೆ 1995 ರಲ್ಲಿ ಕೇವಲ ಮೂರು ಅಲ್ಪಾಭಿವೃದ್ಧ ದೇಶಗಳು ಸದಸ್ಯರಾಗಿದ್ದರೆ, ಈಗ ಅವುಗಳ ಸಂಖ್ಯೆ 12ಕ್ಕೆ ಏರಿದೆ. ಸಂಘಟನೆಯು ಅಲ್ಪಾಭಿವೃದ್ಧ ದೇಶಗಳು ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ಒತ್ತು ನೀಡಬೇಕೆಂದು ತೀರ್ಮಾನಿಸಲಾಯಿತು.

ಅಭಿವೃದ್ಧಿಶೀಲ ದೇಶಗಳ ಮುಂದಿರುವ ಸವಾಲುಗಳು, ಕೃಷಿ ಸಂಬಂಧಿ ವಿಷಯಗಳು, ಪರಿಸರ ವಿನಾಶ ಮೊದಲಾದುವು ಈ ಸಮ್ಮೇಳನದಲ್ಲಿ ವಿಶೇಷವಾಗಿ ಚರ್ಚಿತವಾದವು. ಎಂದಿನಂತೆ ಶ್ರೀಮಂತ ದೇಶಗಳು ಹಟದ ನಿಲುವನ್ನೇ ತಳೆದವು.

2017ನೇ ಇಸವಿಯ ಡಿಸೆಂಬರ್ 10 ರಿಂದ 13ರ ವರೆಗೆ ಬ್ರೆಝಿಲ್‌ನ ಬೆನೋಸ್ ಏರ್ಸ್‌ನಲ್ಲಿ ಇತ್ತೀಚಿನ ಸಚಿವ ಸಮ್ಮೇಳನವನ್ನು ನಡೆಸಲಾಯಿತು. ವಿಶ್ವ ವ್ಯಾಪಾರ ಸಂಸ್ಥೆಯಲ್ಲಿ ನಿರ್ಧಾರ ಕೈಗೊಳ್ಳುವಿಕೆಯಲ್ಲಿ ಅತ್ಯುತ್ತಮ ಅಂಗವಾಗಿರುವ ಸಚಿವ ಸಮ್ಮೇಳನದಲ್ಲಿ 164 ಸದಸ್ಯ ರಾಷ್ಟ್ರಗಳು ಆಹಾರ ಭದ್ರತೆಯ ಮತ್ತು ಬಹುಪಕ್ಷೀಯ ವ್ಯಾಪಾರ ಸಮಾಲೋಚನೆಗಳಲ್ಲಿ ಅಭಿವೃದ್ಧಿಯ ಕೇಂದ್ರೀಕರಣ ವಿಷಯಗಳ ಬಗೆಗೆ ಒಮ್ಮತಕ್ಕೆ ಬರಲು ವಿಫಲಗೊಂಡವು. ಆಹಾರ ಭದ್ರತೆಯು ಅಭಿವೃದ್ಧಿಶೀಲ ದೇಶಗಳ ಹಕ್ಕು ಆಗಿರುತ್ತದೆ.

ಆದಾಗ್ಯೂ, 2019ರ ವೇಳೆಗೆ ಮೀನುಗಾರಿಕಾ ಸಹಾಯಧನಗಳಲ್ಲಿ ಕೆಲವನ್ನು ರದ್ದುಪಡಿಸುವ ಕುರಿತು ಈ ಸಮ್ಮೇಳನದಲ್ಲಿ ಆಶ್ವಾಸನೆಯನ್ನು ಪಡೆದುಕೊಳ್ಳಲಾಯಿತು.

ಸಮ್ಮೇಳನದಲ್ಲಿ ನಡೆದ ಭಾವೋದ್ರೇಕದ ಚರ್ಚೆಗಳಲ್ಲಿ ಭಾರತ ಮತ್ತು ಚೀನಾ ಸೇರಿದಂತೆ ಒಂದು ನೂರು ಅಭಿವೃದ್ಧಿಶೀಲ ದೇಶಗಳ ಆಹಾರ ಭದ್ರತಾ ಕಾರ್ಯಕ್ರಮಗಳ ಅನುಷ್ಠಾನದ ಕೋರಿಕೆಗೆ ಅಮೆರಿಕ ಸ್ವಲ್ಪವೂ ಸ್ಪಂದಿಸಲಿಲ್ಲ ಮತ್ತು ಆ ಚರ್ಚೆಗಳಿಗೇ ತಡೆಯೊಡ್ಡಿತು.

ಉಪಸಂಹಾರ

ಡಂಕೆಲ್ ಪ್ರಸ್ತಾವನೆಗಳಿಂದೊಡಗೂಡಿದ ಉರುಗ್ವೇ ಸುತ್ತಿನ ಸಂಧಾನಗಳಿಂದ ಅಭಿವೃದ್ಧಿಶೀಲ ದೇಶಗಳ ಹಿತಾಸಕ್ತಿಗಳ ಮೇಲೆ ಮಾರಕವಾದ ಪರಿಣಾಮಗಳು ಸಂಭವಿಸಿವೆ. ವಿಶ್ವವ್ಯಾಪಾರ ಸಂಸ್ಥೆಯ ಸ್ಥಾಪನೆಯೊಂದಿಗೆ ಈ ಮಾರಕ ಪರಿಣಾಮಗಳು ಇನ್ನೂ ಉಲ್ಬಣಗೊಂಡಿವೆ ಎಂದರೆ ತಪ್ಪಾಗುವುದಿಲ್ಲ. ಗ್ಯಾಟ್ ಚೌಕಟ್ಟಿನಲ್ಲಿ ಇನ್ನೊಂದು ವ್ಯಾಪಕ ಕಾರ್ಯಕ್ಷೇತ್ರದ ವ್ಯಾಪಾರ ಸಂಸ್ಥೆಯ ಸ್ಥಾಪನೆಯನ್ನು ಅಭಿವೃದ್ಧಿಶೀಲ ದೇಶಗಳು ಮೊದಲಿನಿಂದಲೂ ವಿರೋಧಿಸಿದ್ದವು. ಈಗ ಅಸ್ತಿತ್ವದಲ್ಲಿರುವ ವ್ಯಾಪಾರ ಮತ್ತು ಅಭಿವೃದ್ಧಿಯ ಮೇಲಿನ ವಿಶ್ವಸಂಸ್ಥೆಯ ಸಮ್ಮೇಳನವನ್ನೇ (UNCTAD) ಅಂತರರಾಷ್ಟ್ರೀಯ ವ್ಯಾಪಾರ ಸಂಸ್ಥೆಯನ್ನಾಗಿ ಪರಿವರ್ತಿಸಬೇಕೆಂಬುದು ಆ ದೇಶಗಳ ಬಯಕೆಯಾಗಿದ್ದಿತು. ಆದರೆ ವಿಶ್ವ ವ್ಯಾಪಾರ ಸಂಸ್ಥೆಯ ಸ್ಥಾಪನೆಯೊಂದಿಗೆ ಅಭಿವೃದ್ಧಿಹೊಂದಿದ ದೇಶಗಳು ಮತ್ತೊಮ್ಮೆ ಮೇಲುಗೈ ಸಾಧಿಸಿದಂತಾಗಿದೆ. ಆದಾಗ್ಯೂ ಈ ಸಂಸ್ಥೆಯು ಅಂತರರಾಷ್ಟ್ರೀಯ ಹಣ ನಿಧಿ ಮತ್ತು ವಿಶ್ವ ಬ್ಯಾಂಕಿನೊಡನೆ ಪೂರ್ಣ ಸಹಕಾರದಿಂದ ಕೆಲಸ ನಿರ್ವಹಿಸಿದರೆ ಅಭಿವೃದ್ಧಿಶೀಲ ದೇಶಗಳಿಗೆ ಆಗುತ್ತಿರುವ ಅನ್ಯಾಯವನ್ನು ಸ್ವಲ್ಪ ಮಟ್ಟಿಗಾದರೂ ಸರಿಪಡಿಸಲು ಸಾಧ್ಯವಿರುತ್ತದೆ.

ವಿಶ್ವ ವ್ಯಾಪಾರ ಸಂಘಟನೆಯಲ್ಲಿ ವಿವಾದಗಳ ಸಂಖ್ಯೆಯು ಗಣನೀಯವಾಗಿ ಹೆಚ್ಚುತ್ತಲಿದೆ. 1995ರಿಂದ 2015ರ ವರೆಗೆ ಎರಡು ದಶಕಗಳ ಅವಧಿಯಲ್ಲಿ ಒಟ್ಟು 500 ವ್ಯಾಪಾರ ವಿವಾದಗಳು ವಿಶ್ವವ್ಯಾಪಾರ ಸಂಘಟನೆಗೆ ಸಲ್ಲಿಕೆಯಾಗಿರುತ್ತವೆ. ಇದರಲ್ಲಿ ಅಮೆರಿಕ ಅತಿ ದೊಡ್ಡ ದೂರುದಾರ ದೇಶವಾಗಿರುತ್ತದೆ ಮತ್ತು ದೂರುಗಳಿಗೆ ಉತ್ತರಿಸಬೇಕಾದ ಪ್ರತಿವಾದಿ (Respondent) ದೇಶವೂ ಆಗಿರುತ್ತದೆ. ಇದಕ್ಕೆ ವಿರುದ್ಧವಾಗಿ, ಸುಂಕಗಳ ಮತ್ತು ವ್ಯಾಪಾರದ ಮೇಲಿನ ಸಾಮಾನ್ಯ ಒಪ್ಪಂದಕ್ಕೆ (GATT) ಅದರ ಅಸ್ತಿತ್ವದ 47 ವರ್ಷಗಳ ಅವಧಿಯಲ್ಲಿ 300 ವಿವಾದಗಳು ಮಾತ್ರ ಸಲ್ಲಿಕೆಯಾಗಿದ್ದವು.

ವಿಶ್ವ ವ್ಯಾಪಾರ ಸಂಘಟನೆಯನ್ನು ಹಲವು ಸದಸ್ಯ ರಾಷ್ಟ್ರಗಳು ಬಹಳ ಗಂಭೀರವಾಗಿ ಪರಿಗಣಿಸದಿರುವುದು ಕಂಡುಬರುತ್ತದೆ. ಅನಭಿವೃದ್ಧ ಮತ್ತು ಅಭಿವೃದ್ಧಿಶೀಲ ದೇಶಗಳಿಗೆ ನ್ಯಾಯವನ್ನು ಒದಗಿಸಲು ಆ ಸಂಸ್ಥೆಯಿಂದ ಸಾಧ್ಯವಾಗಿರುವುದಿಲ್ಲ ಎಂಬುದು ಪ್ರಮುಖ

ಆಪಾದನೆಯಾಗಿರುತ್ತದೆ. ಅದೊಂದು ಅತ್ಯಂತ ದುರ್ಬಲ ಸಂಸ್ಥೆ ಎಂಬ ಕಳಂಕಕ್ಕೂ ಪಾತ್ರವಾಗುತ್ತಿದೆ ಎಂಬ ಹೇಳಿಕೆಗಳು ಮೂಡಿಬರುತ್ತಿವೆ.

G. ವಿಶ್ವವ್ಯಾಪಾರ ಸಂಘಟನೆ ಮತ್ತು ಅಭಿವೃದ್ಧಿಶೀಲ ದೇಶಗಳು (World Trade Organisation and Developing Countries)

ವಿಶ್ವವ್ಯಾಪಾರ ಸಂಸ್ಥೆಯ ಸ್ಥಾಪನೆ ಮತ್ತು ಅದು ಒಳಗೊಂಡಿರುವ ಒಪ್ಪಂದಗಳು ಅಭಿವೃದ್ಧಿಶೀಲ ದೇಶಗಳ ಮೇಲೆ ಪೂರಕವಾದ ಅಥವಾ ಮಾರಕವಾದ ಪರಿಣಾಮಗಳನ್ನು ಬೀರುತ್ತವೆ ಎಂಬುದು ಬಹಳ ವ್ಯಾಪಕವಾಗಿ ಚರ್ಚಿತವಾಗುತ್ತಿರುವ ವಿಷಯವಾಗಿದೆ. ಪೂರಕವಾದ ಪರಿಣಾಮಗಳಿಗಿಂತ ಮಾರಕವಾದ ಪರಿಣಾಮಗಳೇ ಹೆಚ್ಚಾಗಿರುತ್ತವೆ ಹಾಗೂ ಈ ಕಾರಣದಿಂದ ಅಭಿವೃದ್ಧಿಶೀಲ ದೇಶಗಳ ಅರ್ಥವ್ಯವಸ್ಥೆಗಳು ಇನ್ನೂ ಹೆಚ್ಚಿನ ಬಿಕ್ಕಟ್ಟನ್ನು ಎದುರಿಸಬೇಕಾಗುತ್ತದೆ ಎಂಬ ಸಂಗತಿಗೆ ವ್ಯಾಪಕವಾದ ಚಾಲನೆ ದೊರೆತಿದೆ. ಭಾರತದಂತಹ ಅಭಿವೃದ್ಧಿಶೀಲ ದೇಶಗಳು ವಿಶ್ವ ವ್ಯಾಪಾರ ಸಂಸ್ಥೆಯ ಒಪ್ಪಂದದಿಂದ ಗಳಿಸುವುದಕ್ಕಿಂತ ಕಳೆದುಕೊಳ್ಳುವುದೇ ಹೆಚ್ಚು ಎಂತಲೂ ಪಾದಿಸಲಾಗುತ್ತಿದೆ.

ಭಾರತದ ಸಂದರ್ಭದಲ್ಲಿ ಹೇಳುವುದಾದರೆ, 1991ರಿಂದ ಜಾರಿಯಲ್ಲಿರುವ ಹೊಸ ಆರ್ಥಿಕ ನೀತಿ ಅಥವಾ ಆರ್ಥಿಕ ಸುಧಾರಣೆಗಳು ಮತ್ತು ವಿಶ್ವವ್ಯಾಪಾರ ಸಂಸ್ಥೆಯ ಒಪ್ಪಂದ ಬಹುತೇಕವಾಗಿ ಒಟ್ಟಿಗೆ ಘಟಿಸಿವೆ. ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ದಿಂದೊಡಗೂಡಿದ ಆರ್ಥಿಕ ಸುಧಾರಣೆಗಳು ಉದ್ಯೋಗರಹಿತ ಪ್ರಗತಿಗೆ, ಬಡತನಕ್ಕೆ ಮತ್ತು ಆರ್ಥಿಕ ಅಸಮತೆಗಳ ಹೆಚ್ಚಳಕ್ಕೆ ಕಾರಣವಾಗಿವೆ ಎಂಬ ವಾದವು ಬಲಿಷ್ಠವಾಗಿ ಬೆಳೆಯತೊಡಗಿದೆ. ವಿಶ್ವವ್ಯಾಪಾರ ಸಂಸ್ಥೆಯ ಒಪ್ಪಂದದಿಂದಾಗಿ ಭಾರತದ ಅರ್ಥವ್ಯವಸ್ಥೆಯು ಜಗತ್ತಿನ ವಿಭಿನ್ನ ದೇಶಗಳ ಅರ್ಥವ್ಯವಸ್ಥೆಗಳಿಗೆ ಮುಕ್ತವಾಗಿ ತೆರೆದುಕೊಂಡಿದ್ದು, ಅಭಿವೃದ್ಧಿ ಹೊಂದಿದ ದೇಶಗಳ ಸ್ಪರ್ಧೆಯ ನಡುವೆ ನಲುಗಿ ಹೋಗುತ್ತಿದೆ ಎಂಬುದು ಬಹುತೇಕವಾಗಿ ವಾಸ್ತವದ ಸಂಗತಿಯಾಗಿದೆ.

ವಿಶ್ವವ್ಯಾಪಾರ ಸಂಸ್ಥೆಯು ಅಭಿವೃದ್ಧಿಶೀಲ ಅರ್ಥವ್ಯವಸ್ಥೆಗಳ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಬೀರುತ್ತಿದೆ ಎಂಬುದಕ್ಕೆ ಉಲ್ಲೇಖಿಸಲಾಗುತ್ತಿರುವ ಅತಿ ಮುಖ್ಯವಾದ ಕಾರಣಗಳು ಕೆಳಗಿನಂತಿವೆ.

1. ವಿದೇಶಗಳಿಂದ ಸರಕುಗಳನ್ನು ನಿರ್ಬಂಧರಹಿತವಾಗಿ ಆಮದುಮಾಡಿಕೊಳ್ಳಬೇಕಾಗಿರುವುದರಿಂದ ಈ ದೇಶಗಳಲ್ಲಿ ಉತ್ಪಾದನೆಯ ಹೆಚ್ಚಳಕ್ಕೆ ಮತ್ತು ರಫ್ತುಗಳ ವೃದ್ಧಿಗೆ ಪ್ರಯತ್ನಗಳನ್ನು ನಡೆಸಲು ಸಾಧ್ಯವಾಗುವುದಿಲ್ಲ. ಆಮದು ದೇಯಾಂಶಗಳನ್ನು ವಿಧಿಸದೆ ವಿದೇಶೀ ವ್ಯಾಪಾರದಲ್ಲಿ ತೊಡಗಬೇಕಾಗಿರುವುದರಿಂದ ಆಮದುಗಳನ್ನು ನಿರ್ಬಂಧಿಸಲು ಸಾಧ್ಯವಿರುವುದಿಲ್ಲ. ಈ ದೇಶಗಳ ಮಾರುಕಟ್ಟೆಯಲ್ಲಿ ವಿದೇಶಿ ವಸ್ತುಗಳ ಬಾಹುಳ್ಯವು ಉತ್ಪಾದನೆ, ಹೂಡಿಕೆ, ಉದ್ಯೋಗ, ರಫ್ತು ಮೊದಲಾದ ಎಲ್ಲ ಸಂಗತಿಗಳ ಮೇಲೆಯೂ ಪ್ರತಿಕೂಲ ಪರಿಣಾಮಗಳನ್ನು ಬೀರುತ್ತದೆ.

2. ಸಹಾಯಧನಗಳನ್ನು ಕಡಿತಗೊಳಿಸಬೇಕೆಂಬ ಷರತ್ತು ವಿಭಿನ್ನ ವಲಯಗಳಲ್ಲಿ ಉತ್ಪಾದನೆಯನ್ನು ನಿರ್ಬಂಧಿಸುತ್ತದೆ. ಅದರಲ್ಲಿಯೂ ಕೃಷಿ ವಲಯವು ವಿಪರೀತವಾದ ಪ್ರತಿಕೂಲ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ.

3. ಬಹುರಾಷ್ಟ್ರೀಯ ನಿಗಮಗಳು ಅಭಿವೃದ್ಧಿಶೀಲ ಈ ದೇಶಗಳ ಕೃಷಿ ವಲಯವನ್ನು ಪ್ರವೇಶಿಸಲು ಅವಕಾಶ ವಿರುವುದರಿಂದ ವಿದೇಶೀಯರು ಈ ದೇಶಗಳ ಕೃಷಿ ವ್ಯವಸ್ಥೆಯಲ್ಲಿ ಏಕಸ್ವಾಮ್ಯವನ್ನು ಸ್ಥಾಪಿಸುವರು. ಇದರಿಂದಾಗಿ ಈ ದೇಶಗಳ ಸಾಂಪ್ರದಾಯಿಕ ಕೃಷಿ ರಚನೆಯು ಬುಡ ಮೇಲಾಗುತ್ತದೆ.

4. ವಿಶ್ವವ್ಯಾಪಾರ ಸಂಸ್ಥೆಯು ಜಗತ್ತಿನ ವಿವಿಧ ದೇಶಗಳನ್ನು ಅಸಾಮಾನ್ಯ ವ್ಯಾಪಾರ ಸಂಗಾತಿಗಳನ್ನಾಗಿ ಮಾಡಿದೆ. ಅನಭಿವೃದ್ಧ ಮತ್ತು ಅಭಿವೃದ್ಧಿಶೀಲ ದೇಶಗಳು ಅಭಿವೃದ್ಧಿ ಹೊಂದಿದ ದೇಶಗಳೊಡನೆ ಯಾವುದೇ ರೀತಿಯಲ್ಲಿಯೂ ಸ್ಪರ್ಧಿಸಲು ಸಾಧ್ಯವಿರುವುದಿಲ್ಲ. ಈ ದೇಶಗಳ ಉತ್ಪಾದಕರಿಗೆ ಮತ್ತು ರಫ್ತುದಾರರಿಗೆ **'ಸಮಾನ ವ್ಯವಹಾರದ ರಂಗ'**ವು (Level-playing Field) ಲಭ್ಯವಿಲ್ಲದಿರುವುದರಿಂದ ಅಭಿವೃದ್ಧಿಶೀಲ ದೇಶಗಳ ಅರ್ಥವ್ಯವಸ್ಥೆಯು ಸಹಿಸಲಸಾಧ್ಯ ವಾದ ತೊಂದರೆಯನ್ನು ಅನುಭವಿಸಬೇಕಾಗುತ್ತದೆ.

ಭಾರತದ ಮಾರುಕಟ್ಟೆಗಳನ್ನು ಆಮದುಗಳಿಗೆ ತೆರೆದಿಡುವ ಕಾರ್ಯವು ಸುಮಾರು ಒಂದು ದಶಕದ ಹಿಂದೆಯೇ ಪ್ರಾರಂಭವಾಯಿತು. ಮಾರ್ಚ್ 1996ರ ವೇಳೆಗೆ 6,161 ವಸ್ತುಗಳನ್ನು ಮುಕ್ತವಾಗಿ ಆಮದು ಮಾಡಿಕೊಳ್ಳಬೇಕಾದ ಹಂಗು ಭಾರತದ ಮೇಲಿತ್ತು. ಏಪ್ರಿಲ್ 1, 2001 ರಿಂದ ವಿಶ್ವವ್ಯಾಪಾರ ಸಂಸ್ಥೆಯ ಷರತ್ತುಗಳು ಇನ್ನೂ ಜಟಿಲಗೊಂಡಿವೆ ಮತ್ತು ನಿರ್ಬಂಧರಹಿತ ವ್ಯಾಪಾರಕ್ಕೆ ಇನ್ನೂ ಹೆಚ್ಚಿನ ಒತ್ತು ನೀಡಲಾಗಿದೆ. ಆಗ ಇನ್ನೂ ಸುಮಾರು 1,600 ವಸ್ತುಗಳು ನಿರ್ಬಂಧರಹಿತ ಆಮದುಗಳ ಪಟ್ಟಿಗೆ ಸೇರ್ಪಡೆಯಾದವು.

ವಿಶ್ವವ್ಯಾಪಾರ ಸಂಸ್ಥೆಯ ಒಪ್ಪಂದವು ಸ್ಪರ್ಧೆಯ ಹೆಚ್ಚಳಕ್ಕೆ ಅತ್ಯುತ್ತಮ ಅವಕಾಶವನ್ನು ಒದಗಿಸುವ ಮೂಲಕ ಭಾರತದಂತಹ ಅಭಿವೃದ್ಧಿಶೀಲ ದೇಶಗಳಲ್ಲಿ ಉದ್ಯಮ, ಉತ್ಪಾದನೆ, ಉದ್ಯೋಗ ಮತ್ತು ಹೂಡಿಕೆಯ ವಿಸ್ತರಣೆಗೆ ಸುವರ್ಣಾವಕಾಶವನ್ನು ಒದಗಿಸಿದೆ ಎಂಬ ವಾದಗಳಿಗೂ ಕೊರತೆ ಇಲ್ಲ. ಆದರೆ ಸಮಾನ ವ್ಯವಹಾರದ ರಂಗವು ವಿರ್ಪಡುವವರೆಗೆ ಇದು ಅಸಮಾನರ ನಡುವಿನ ವ್ಯಾಪಾರವಾಗಿರುವುದರಿಂದ ಅಭಿವೃದ್ಧಿಶೀಲ ದೇಶಗಳಿಗೆ ಪ್ರತಿಕೂಲ ಪರಿಣಾಮಗಳೇ ಹೆಚ್ಚು ಎಂಬುದರಲ್ಲಿ ಸಂದೇಹವಿರುವುದಿಲ್ಲ. ಏಕೆಂದರೆ ಅಭಿವೃದ್ಧಿಶೀಲ ದೇಶಗಳ ಮಾರುಕಟ್ಟೆಯಲ್ಲಿ ವಿದೇಶಿ ಸರಕುಗಳಿಗೆ ಹೆಚ್ಚಿನ ಬೇಡಿಕೆ ಬರಬಹುದೇ ಹೊರತು ಅಭಿವೃದ್ಧಿಶೀಲ ದೇಶಗಳ ಸರಕುಗಳು ಸ್ಪರ್ಧಿಸಲಾರವು. ಸುಂಕೇತರ ನಿರ್ಬಂಧಗಳನ್ನು ಸಡಿಲಗೊಳಿಸಬೇಕಾಗಿರು ವುದರಿಂದ ಅಥವಾ ಪೂರ್ಣವಾಗಿ ತೆಗೆದುಹಾಕಬೇಕಾಗಿರುವುದರಿಂದ ಆಮದು ಸರಕುಗಳು ಯಥೇಚ್ಛ ವಾಗಿ ಅಭಿವೃದ್ಧಿಶೀಲ ದೇಶಗಳೊಳಗೆ ಹರಿದು ಬರುತ್ತವೆ. ಆದರೆ ಸುಂಕಗಳನ್ನು ಹೆಚ್ಚಿನ ದರದಲ್ಲಿ ವಿಧಿಸುವ ಮೂಲಕ ಆಮದುಗಳನ್ನು ನಿರ್ಬಂಧಿಸಲು ಮತ್ತು ಸ್ವದೇಶಿ ಅರ್ಥವ್ಯವಸ್ಥೆಯ ಮೇಲಾಗುವ ಪ್ರತಿಕೂಲ ಪರಿಣಾಮಗಳನ್ನು ತಡೆಗಟ್ಟಲು ಪ್ರಯತ್ನಿಸಲಾಗುತ್ತಿದೆ ಎಂದು ಹೇಳಲಾಗುತ್ತಿದೆ.

ಸುಂಕಗಳ ಮೂಲಕದ ನಿರ್ಬಂಧವು ಆಮದುಗಳನ್ನು ನಿಯಂತ್ರಿಸಲು ಸುಂಕೇತರ ನಿರ್ಬಂಧಗಳಷ್ಟು ಪರಿಣಾಮಕಾರಿಯಾಗಲಾರವು. ಆ ಮಟ್ಟಿಗೆ ಭಾರತದ ಅರ್ಥವ್ಯವಸ್ಥೆಯು ಮಾರಕ ಪರಿಣಾಮಗಳನ್ನು ಎದುರಿಸಲೇಬೇಕಾದಂತಹ ಅನಿವಾರ್ಯ ಪರಿಸ್ಥಿತಿ ನೆಲೆಸಿದೆ.

ಆದರೆ ಭಾರತವೂ ಸೇರಿದಂತೆ ಸದಸ್ಯ ರಾಷ್ಟ್ರಗಳಲ್ಲಿ ಸ್ಪರ್ಧಾ ಮನೋಭಾವದ ಬೆಳವಣಿಗೆಗೆ ವಿಶ್ವ ವ್ಯಾಪಾರ ಸಂಘಟನೆಯು ನೀಡಿರುವ ಕೊಡುಗೆಯನ್ನು ಯಾರೂ ನಿರಾಕರಿಸುವಂತಿರುವುದಿಲ್ಲ. ವ್ಯಾಪಾರದಲ್ಲಿ ಉಳಿಯಬೇಕಾದರೆ ಸ್ಪರ್ಧೆಯನ್ನು ಎದುರಿಸಲೇಬೇಕಾದ ಪರಿಸ್ಥಿತಿ ಎಲ್ಲಾ ದೇಶಗಳಲ್ಲಿಯೂ ನೆಲೆಸಿದೆ. ಈ ಕಾರಣದಿಂದಾಗಿ ಭಾರತದಂತಹ ಅಭಿವೃದ್ಧಿಶೀಲ ದೇಶಗಳಲ್ಲಿದೇಶಗಳಲ್ಲಿ ಉತ್ಪಾದಕತೆ ಮತ್ತು ಉತ್ಪಾದನೆ ಹೆಚ್ಚಲು ಅವಕಾಶ ದೊರೆತಿದೆ. ಸಮಾನ ವ್ಯವಹಾರದ ರಂಗವು ಸಹಜವಾಗಿ ಅಭಿವೃದ್ಧಿಗೊಳ್ಳಲು ಇದರಿಂದ ಸಾಧ್ಯವಾಗುತ್ತಿದೆ.